ಕಾದಂಬರಿ ದರ್ಶನ

(ಅಭಿನಂದನ ಗ್ರಂಥ)



ಕಾದಂಬರಿ ದರ್ಶನ

(ಶ್ರೀ ಕೃಷ್ಣಮೂರ್ತಿ ಪುರಾಣಿಕ ಅಭಿನಂದನ ಗ್ರಂಥ)

ಸಂಪಾದಕರು :
ಶಂಕರ ಪಾಟೀಲ

ಶ್ರೀ ಕೃಷ್ಣಮೂರ್ತಿ ಪುರಾಣಿಕ ಸತ್ಕಾರ ಸಮಿತಿ
ಹುಬ್ಬಳ್ಳಿ–ಧಾರವಾಡ.

Kadambari Darshan: A Collection of informative essays in Kannada written by differant Writers, Edited by Shankar Patil. Published by Shri Krishnamurthy Puranik Satkar Samiti Hubli-Dharwar (1974) pages 296 + 8. Price Rs. 40/-

ಸಂಪಾದಕ ಸಲಹಾ ಸಮಿತಿ

ಡಾ. ಆರ್. ಸಿ. ಹಿರೇಮಠ.

ಡಾ. ರಾ. ಯ. ಧಾರವಾಡಕರ.

ಡಾ. ಹಾ. ಮಾ. ನಾಯಕ.

ಬೆಲೆ :

೪೦ ರೂಪಾಯಿಗಳು.

ಮುದ್ರಕರು :

ಶ್ರೀ ಎಮ್. ಎಚ್. ಬೆಳಗಾಂವಕರ

ಸಂಯುಕ್ತ ಕರ್ನಾಟಕ ಪ್ರೆಸ್ ಹುಬ್ಬಳ್ಳಿ

ಪರಿವಿಡಿ

ಕನ್ನಡ–ಕಾದಂಬರಿ

ಭಾರತೀಯ ಭಾಷೆಗಳಲ್ಲಿ ಕಾದಂಬರಿ

ಸಂಪಾದಕರ ನುಡಿ

ಶ್ರೀ ಕೃಷ್ಣಮೂರ್ತಿ ಪುರಾಣಿಕರನ್ನು ಅವರ ಅಪೂರ್ವ ಸಾಹಿತ್ಯಸೇವೆಗಾಗಿ ಷಷ್ಟ್ಯಬ್ದಿಯ ಸಂದರ್ಭದಲ್ಲಿ ಸತ್ಕರಿಸಬೇಕೆಂದು ರಚಿತವಾದ ಸಮಿತಿ ಒಂದು ಅಭಿನಂದನೆ ಗ್ರಂಥವನ್ನು ಅವರಿಗೆ ಅರ್ಪಿಸಲು ನಿರ್ಧರಿಸಿತು. ಸಮಿತಿಯ ಪರವಾಗಿ ಈ ಕಾರ್ಯವನ್ನು ನಾನು ನಿರ್ವಹಿಸತೊಡಗಿದೆ. ಪ್ರಧಾನ ಕಾರ್ಯದರ್ಶಿಯಾಗಿದ್ದ ನಾನು ಈ ಅಭಿನಂದನ ಗ್ರಂಥದ ಸುಳುವುಹೊಳವು ಹಾಕಿದ್ದೆ. ಈ ಗ್ರಂಥದ ಸಂಪಾದನೆಯ ಕಾರ್ಯವನ್ನು ನಿರ್ವಹಿಸಬೇಕಾಗಿ ಬಂದಾಗ ಈ ಯೋಜನೆಗೆ ಮೂರ್ತಸ್ವರೂಪವನ್ನು ನೀಡಿದೆನು. ಎರಡು ವರುಷಗಳ ಹಿಂದೆ ಈ ಕಾರ್ಯ ಪ್ರಾರಂಭವಾಯಿತು. ಈ ಗ್ರಂಥ ಸಾಮಾನ್ಯವಾಗಿ ಬರುವ ಅಭಿನಂದನ ಗ್ರಂಥ-ಗಳಿಗಿಂತ ಭಿನ್ನವಾಗಿರಬೇಕೆಂದು ನನ್ನ ವಿಚಾರವಾಗಿತ್ತು. ಶ್ರೀ ಕೃಷ್ಣಮೂರ್ತಿ ಪುರಾಣಿಕ ಅವರು ಕಾದಂಬರಿ ರಂಗಕ್ಕೆ ವಿಶೇಷವಾಗಿ ದೇಣಿಗೆ ಸಲ್ಲಿಸಿದವರು. ಈ ರಂಗದಲ್ಲಿಯ ಅವರ ಸೇವೆ ಅವಿಸ್ಮರಣೀಯವಾದುದು. ಅಂದಬಳಿಕ ಈ ರಂಗದ ಸಾದ್ಯಂತ ಚಾರಿತ್ರಿಕ ಅಂಶಗಳಿಂದ ಕೂಡಿದ ಗ್ರಂಥವನ್ನು ಅವರಿಗೆ ಅರ್ಪಿಸುವುದು ಉಚಿತವಾದುದು ಎಂದು ನನಗೆ ಅನಿಸಿತು. ಸಂಪಾದಕ ಸಲಹಾ ಸಮಿತಿಯ ನನ್ನ ಗುರುಗಳು ಮತ್ತು ಮಿತ್ರರು ಈ ವಿಚಾರವನ್ನು ಅನುಮೋದಿಸಿದರು. ಈ ದಿಸೆಯಲ್ಲಿ ನಾನು ಕಾರ್ಯಪ್ರವೃತ್ತನಾದೆ.

ಕನ್ನಡದಲ್ಲಿ, ಭಾರತೀಯ ಭಾಷೆಗಳಲ್ಲಿ ಹಾಗೂ ವಿದೇಶಿ ಭಾಷೆಗಳಲ್ಲಿ ಕಾದಂಬರಿ ಬೆಳೆದುಬಂದ ಬಗೆಯನ್ನು ನಿರೂಪಿಸುವ ಮೂರು ಭಾಗಗಳನ್ನೂ, ಶ್ರೀ ಪುರಾಣಿಕರ ಜೀವನ ಚರಿತ್ರೆಯ ಒಂದು ಭಾಗವನ್ನು ಈ ಗ್ರಂಥದಲ್ಲಿ ಸೇರಿಸಬೇಕೆಂದು ನಿರ್ಧರಿಸಿ-ಕೊಂಡೆ. ಆಯಾ ಭಾಷೆಗಳಲ್ಲಿ ಈ ವಿಷಯದಲ್ಲಿ ಸಮರ್ಥವಾಗಿ ಬರೆಯಬಲ್ಲ ಲೇಖಕರನ್ನು ನನ್ನ ಮಿತ್ರರು ಹುಡುಕಿಕೊಟ್ಟರು. ಹೀಗಾಗಿ ಈ ಕೆಲಸವೂ ಸುಲಭ ವಾಯಿತು. ಆದರೆ ಸಕಾಲದಲ್ಲಿ ಲೇಖನಗಳನ್ನು ದೊರಕಿಸುವುದು ಮಾತ್ರ ಪ್ರಯಾ-ಸದ್ದಾಯಿತು. ತುಂಬ ದಿನಗಳವರೆಗೆ ಕಾಯಬೇಕಾಯಿತು. ಆದರೂ ಜಪಾನಿ ಭಾಷೆಯಲ್ಲಿ ಲೇಖನ ಲಭ್ಯವಾಗಲೇ ಇಲ್ಲ. ಪಂಜಾಬಿ ಭಾಷೆಯಲ್ಲಿ ಬೇರೊಬ್ಬ ಲೇಖಕರನ್ನು ಆರಿಸಿಕೊಳ್ಳಬೇಕಾಯಿತು. ಓಡಿಸಿ ಕಾದಂಬರಿಯ ಲೇಖಕರಿಂದ ಪತ್ರವೂ ಬರಲಿಲ್ಲ. ಹೀಗೆ ವಿಲಂಬವಾದರೂ, ಒಂದೆರಡು ಭಾಷೆಗಳ ಲೇಖನಗಳು ಲಭ್ಯವಾಗದೇ ಹೋದರೂ ಮೂಲತಃ ನಾನು ಕಲ್ಪಿಸಿಕೊಂಡ ಈ ಗ್ರಂಥದ ಗುರಿಯನ್ನು ಬಹುಮಟ್ಟಿಗೆ ಸಾಧಿಸಲು ಸಾಧ್ಯವಾದುದು ನಿಜವಾಗಿಯೂ ಸಂತೋಷದ ಸಂಗತಿ. ಇಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿ ಕಳಕಳಿಯ ಮತ್ತು ಪ್ರಾಮಾಣಿಕ ಪ್ರಯತ್ನವಿರುವದನ್ನು ಸ್ಪಷ್ಟವಾಗಿ ಕಾಣಬಹುದು.

ಪ್ರತಿಯೊಂದು ಲೇಖನವೂ ಆಯಾ ಭಾಷೆಗಳಲ್ಲಿ ಕಾದಂಬರಿ ಪ್ರಾರಂಭವಾದ ಬಗೆ, ಬೆಳೆದುಬಂದ ರೀತಿ, ಕಥಾವಸ್ತು, ತಂತ್ರ, ಪಾತ್ರಪರಿಪೋಷಣೆ, ಸಮಕಾಲಿನತ್ವದ ಪ್ರಜ್ಞೆ, ನವ್ಯತೆ ಹೀಗೆ ವಿವಿಧ ಅಂಶಗಳನ್ನು ಗುರುತಿಸುತ್ತದೆ. ಕನ್ನಡ ಕಾದಂಬರಿ ರಂಗದಲ್ಲಿ "ಅಂದು" ಮತ್ತು "ಇಂದು" ಹೀಗೆ ಎರಡು ಲೇಖನಗಳಿವೆ. ಈ ಎರಡರ ಮಧ್ಯ ರೇಷೆಯನ್ನು ಎಳೆವುದು ನಿಜವಾಗಿಯೂ ಸೂಕ್ಷ್ಮವಾದ ಕೆಲಸ. ಅದನ್ನು ಇಬ್ಬರು ಸಮರ್ಥ ಕನ್ನಡ ಲೇಖಕರು ಶ್ರೀ ಎನ್ಕೆ ಮತ್ತು ಡಾ. ತಿಪ್ಪೇರುದ್ರಸ್ವಾಮಿ ಬಹು ನವಿರಾದ ರೀತಿಯಲ್ಲಿ ನೆರವೇರಿಸಿದ್ದಾರೆ. 'ಮುಂದು' ಎಂಬ ಇನ್ನೊಂದು ಲೇಖನವನ್ನು ಈ ಭಾಗದಲ್ಲಿ ಸೇರಿಸಬೇಕೆಂದು ನಾನು ಹವಣಿಸಿದೆ. ಭವಿತವ್ಯದಲ್ಲಿ ಕನ್ನಡ ಕಾದಂಬರಿ ಯಾವ ರೂಪವನ್ನು ತಳೆಯಬಹುದು? ಅದರ ಕಥಾವಸ್ತು ಎಂಥದಿರಬಹುದು? ಕಥನತಂತ್ರ, ಪಾತ್ರಪರಿಪೋಷಣ ಯಾವ ಸ್ವರೂಪವನ್ನು ತಳೆಯುಬಹುದು? ನವ್ಯತೆ ಅದರಲ್ಲಿ ಎಷ್ಟರಮಟ್ಟಿಗೆ ಹಣಿಕೆ ಹಾಕಬಹುದು? ಅದರ ಹರವು ಯಾವ ರೀತಿಯಾಗಬಹುದು? ಈ ಮೊದಲಾದ ಪ್ರಶ್ನೆಗಳನ್ನು ಈ ಲೇಖನದಲ್ಲಿ ಚರ್ಚಿಸಬೇಕು ಎಂಬುದು ನನ್ನ ಉದ್ದೇಶವಾಗಿದ್ದಿತು. ಇಂಥ ಒಂದು ಲೇಖನ ಈ ಗ್ರಂಥವ ಯಥಾರ್ಥತೆಯನ್ನು ಹೆಚ್ಚಿಸುವದೆಂದು ನಾನು ಎಣಿಸಿದ್ದೆ. ಆದರೆ ನನ್ನ ಈ ಎಣಿಕೆ ಈಡೇರಲಿಲ್ಲ. ಕಾದಂಬರಿಯ ಭಾವೀ ರೂಪವನ್ನು ಚರ್ಚಿಸಲು ನಮ್ಮ ಲೇಖಕರು ಅದೇಕೋ ಮುಂದೆ ಬರಲಿಲ್ಲ. ಹೀಗಾಗಿ ನನ್ನ ಮಟ್ಟಿಗೆ ಅದೊಂದು ಕೊರತೆಯನ್ನು ಈ ಗ್ರಂಥ ಅನಿವಾರ್ಯವಾಗಿ ಪಡೆದು ನಿಂತಿದೆ.

ಕೊನೆಯ ಭಾಗದಲ್ಲಿ ಶ್ರೀ ಕೃಷ್ಣಮೂರ್ತಿ ಪುರಾಣಿಕರ ಜೀವನ ಚರಿತ್ರೆಯನ್ನು ನಾನೇ ಬರೆದೆ. ಅದನ್ನು ಹೊಸ ಬಗೆಯಾಗಿ ರೂಪಿಸಲು ಯತ್ನಿಸಿರುವೆ. ಶ್ರೀ ಪುರಾಣಿಕರ ಗಂಡುಮಕ್ಕಳು, ಹೆಣ್ಣುಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಅವರ ಬಂಧುಬಾಂಧವರು, ಪುರಾಣಿಕರ ಪತ್ನಿ ಮತ್ತು ಅವರ ಅತ್ತೆ ಇವರನ್ನು ಕಂಡ ಬಗೆ, ಪುರಾಣಿಕರ ಜೀವನ ಮತ್ತು ವ್ಯಕ್ತಿತ್ವ ರೂಪನದಲ್ಲಿ ಅವರು ನಿರ್ವಹಿಸಿದ ಪಾತ್ರಗಳು ಇವನ್ನು ಅವರವರ ಬಾಯಿಂದ ಇಲ್ಲಿ ಹೇಳಿಸುವ ಯತ್ನವನ್ನು ಮಾಡಿದ್ದೇನೆ. ಪುರಾಣಿಕರ ತಂದೆತಾಯಿಗಳು ಅವರ ಮೇಲೆ ಬೀರಿದ ಪ್ರಭಾವವನ್ನು ಚಿತ್ರಿಸುವ ಯತ್ನವೂ ಇಲ್ಲಿದೆ. ಅವರ ಜೀವನದ ಸಮಗ್ರ ಚಿತ್ರಣ ಇಲ್ಲಿ ದೊರೆಯುವಂತೆ ನಾನು ಪ್ರಯತ್ನ ಮಾಡಿದ್ದೇನೆ. ನನ್ನ ಈ ಕಾರ್ಯದಲ್ಲಿ ಅವರೆಲ್ಲರೂ ಸಂದರ್ಶನವನ್ನು ನೀಡಿ ತುಂಬ ಸಹಾಯ ಸಹಕಾರವನ್ನು ನೀಡಿದರು.

ಈ ಅಭಿನಂದನ ಗ್ರಂಥದ ಈ ಬಗೆಯ ಯೋಜನೆ ಮೂರ್ತಸ್ವರೂಪ ಹೊಂದಿ ಬೆಳಕಿಗೆ ಬರಲು ಕಾರಣರಾದವರು, ಈ ಗ್ರಂಥದಲ್ಲಿ ವಿವರಣಾತ್ಮಕ ಪ್ರಬಂಧ ಲೇಖನಗಳನ್ನು ಬರೆದ ವಿವಿಧ ಭಾಷೆಗಳಲ್ಲಿಯ ವಿದ್ವಾಂಸರು. ಆಯಾ ಭಾಷೆಗಳಲ್ಲಿ ಕಾದಂಬರಿಗಳು ಬೆಳೆದುಬಂದ ಭಾಗವನ್ನು ಅವರು ಸೋದಾಹರಣವಾಗಿ ಇಲ್ಲಿ ಚಿತ್ರಿಸಿರುವಾಗ ತಮ್ಮ ಅಧ್ಯಯನಶೀಲತೆಯನ್ನು ಎತ್ತಿತೋರಿಸಿರುವರು. ಕನ್ನಡದಲ್ಲಿ

ಮಾತ್ರವಲ್ಲ, ಅಖಿಲ ಭಾರತ ಮಟ್ಟದಲ್ಲಿ ಇಂಥದೊಂದು ಸಾಂದರ್ಭಿಕ ಗ್ರಂಥ ಇದು ಮೊದಲನೆಯದಾಗಿ ರೂಪುಗೊಳ್ಳಲು ಅವರ ಈ ಅಧ್ಯಯನಪೂರ್ಣವಾದ ಪ್ರಬಂಧಗಳು ಮುಖ್ಯವಾಗಿ ಕಾರಣ ಎಂದು ನಾನು ಮನಃಪೂರ್ವಕವಾಗಿ ಹೇಳುತ್ತಿದ್ದೇನೆ. ಅವರ ಸಹಾಯ-ಸಹಕಾರವಿಲ್ಲದೇ ಈ ಗ್ರಂಥ ಇಷ್ಟೊಂದು ಪರಿಪೂರ್ಣ ರೀತಿಯಲ್ಲಿ (ಇನ್ನೂ ಅನೇಕ ಲೋಪದೋಷಗಳು ಇಲ್ಲಿರುವದನ್ನು ಬಲ್ಲೆ. ಆದರೂ ಮೊದಲ ಯತ್ನವಾಗಿ ರೂಪಗೊಂಡಿರುವ ಇದು ಆ ಮಟ್ಟಿಗೆ ಪರಿಪೂರ್ಣವಾಗಿದೆ-ಯೆಂದು ನನ್ನ ನಂಬಿಗೆ) ರೂಪುಗೊಳ್ಳುವುದು ಕಷ್ಟಸಾಧ್ಯವಾಗಿತ್ತು. ಅಂತೆಯೇ ನಾನು ಅವರಿಗೆ ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆಯೇ ಸರಿ. ಇಂಗ್ಲೀಷಿನಲ್ಲಿ ಬರೆದುಬಂದ ಹಲವು ಪ್ರಬಂಧಗಳನ್ನು ನನ್ನ ಸಹೋದ್ಯೋಗಿಗಳೂ ಮಿತ್ರರೂ ಕನ್ನಡದಲ್ಲಿ ಅನುವಾದಿಸಿಕೊಟ್ಟು ಉಪಕರಿಸಿದ್ದಾರೆ. ಅವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ನನ್ನ ಹಿರಿಯ ಸಹೋದ್ಯೋಗಿಗಳು ಶ್ರೀ ಮಾಧವ ಮಹಿಷಿ; ಶ್ರೀ ಪ್ರಲ್ಹಾದ ಪಂಢರಿ ಈ ಗ್ರಂಥದ ಮುದ್ರಣ ಸಮಯದಲ್ಲಿ ಕರಡಚ್ಚು ತಿದ್ದುವಲ್ಲಿ ಪರಿಶ್ರಮವಹಿಸಿದ್ದಾರೆ. ಅವರನ್ನು ಕೃತಜ್ಞತೆಯಿಂದ ನಾನಿಲ್ಲಿ ನೆನೆ-ಯುತ್ತೇನೆ. ನನ್ನ ಮಿತ್ರರಾದ ಶ್ರೀ ಕೆ. ಬಿ. ಕುಲಕರ್ಣಿಯವರು ಸುಂದರವಾದ ಮುಖಚಿತ್ರ ಒದಗಿಸಿದರು. ಸಂಯುಕ್ತ ಕರ್ನಾಟಕದ ಮುದ್ರಣ ವಿಭಾಗದ ವ್ಯವಸ್ಥಾಪಕ ಶ್ರೀ ಎಂ. ಎಚ್. ಬೆಳಗಾಂವಕರ ಮತ್ತು ಅವರ ಸಿಬ್ಬಂದಿಯವರು ಅವಿರತವಾಗಿ ಪರಿಶ್ರಮಿಸಿ ಇದರ ಮುದ್ರಣ ಕಾರ್ಯವನ್ನು ಪೂರೈಸಿಕೊಟ್ಟರು. ಇನ್ನೂ ಅನೇಕ ಮಿತ್ರರು ನಾನಾ ರೀತಿಯಲ್ಲಿ ನೆರವಾಗಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು. ಸತ್ಕಾರ ಸಮಿತಿಯವರು ಸಂಪಾದನ ಕಾರ್ಯವನ್ನು ನನಗೆ ವಹಿಸಿದ್ದಕ್ಕಾಗಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯಮಿತ್ರರಿಗೂ ಇಲ್ಲಿ ಕೃತಜ್ಞತೆ-ಗಳನ್ನು ಅರ್ಪಿಸುವೆ.

ಇಂಥ ಅಭಿನಂದನ ಗ್ರಂಥದ ಸಂಪಾದಕೀಯ ಕೆಲಸ ನಿಜವಾಗಿ ಹೊಸ ಅನುಭವವನ್ನು ನೀಡುವಂಥದು. ಅದು ನನಗೆ ಸಂತೋಷದ ಕೆಲಸ. ಈ ಕೆಲಸದಲ್ಲಿ ಬಂದ ತೊಂದರೆಗಳನ್ನು ನಾನು ಸಂತೋಷದಿಂದ ಎದುರಿಸಿದ್ದೇನೆ- ಶ್ರೀ ಕೃಷ್ಣಮೂರ್ತಿ ಪುರಾಣಿಕರು ನನ್ನ ಹಿರಿಯ ಮಿತ್ರರು; ಅದಕ್ಕಿಂತ ಹೆಚ್ಚಾಗಿ ಹಿರಿಯಣ್ಣನಂತೆ ನಡೆದುಕೊಂಡವರು. ಅವರ ಸತ್ಕಾರ ಸಮಾರಂಭದ ಸಂದರ್ಭದಲ್ಲಿ ಅರ್ಪಿಸುವ ಈ ಅಪೂರ್ವ ಅಭಿನಂದನ ಗ್ರಂಥದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಸಮಾಧಾನ ನನ್ನದು. ಕಾದಂಬರಿ ರಂಗದ ಹರವು-ವಿಸ್ತಾರಗಳನ್ನು ತಿಳಿಸುವ ಈ ಸಾಂದರ್ಭಿಕ ಗ್ರಂಥವನ್ನು ಕನ್ನಡ ಓದುಗರು ವಿಶ್ವಾಸದಿಂದ ಬರಮಾಡಿ-ಕೊಳ್ಳುವರೆಂದು ನಾನು ನಂಬಿದ್ದೇನೆ.

ಹುಬ್ಬಳ್ಳಿ
೫-೯-೧೯೭೪

ಶಂಕರ ಪಾಟೀಲ

೧

ಕನ್ನಡ ಕಾದಂಬರಿ

ಕಾದಂಬರಿ - ಅಂದು

— ಎನ್ಕೆ

ಅಂದಿನ ಕಾದಂಬರಿಯ ಕಾಲವೇ ಕಾಲ. ಲೋಕಪ್ರಿಯತೆಯೇ ಲೋಕಪ್ರಿಯತೆ! ಜನ 'ಸದ್ಬೋಧಚಂದ್ರಿಕೆ'ಯ ಆಗಮನಕ್ಕಾಗಿ ಕಾಯುತ್ತಿದ್ದರು. 'ಸದ್ಬೋಧಚಂದ್ರಿಕೆ' ಗಳಗನಾಥರು ಅಗಡಿಯ ಆನಂದವನದಿಂದ ಹೊರಡಿಸುತ್ತಿದ್ದ ಪತ್ರಿಕೆ. 'ಸದ್ಬೋಧಚಂದ್ರಿಕೆ' ಯಲ್ಲಿ ಗಳಗನಾಥರ ಕಾದಂಬರಿಗಳು ಧಾರಾವಾಹಿಯಾಗಿ ಬರುತ್ತಿದ್ದವು; ಎಂದ ಮೇಲೆ ಕೇಳಬೇಕೆ? ಪತ್ರಿಕೆಗೆ ಏಳು ಸಾವಿರ ಚಂದಾದಾರರು! ಪತ್ರಿಕೆಯ ಪ್ರಭಾವ ಎಷ್ಟಿರಬೇಡ! ಗಳಗನಾಥರ ಕಾದಂಬರಿಗಳು ಯುವಕರಿಗೂ ಮುದುಕರಿಗೂ ಮಕ್ಕಳಿಗೂ ಹೆಣ್ಣುಮಕ್ಕಳಿಗೂ ಸ್ವಾರಸ್ಯಕರವೆನಿಸುತ್ತಿದ್ದವು. ರಜಪೂತರ ಕಥೆಯೆ ಇರಲಿ, ಮರಾಠರ ಕಥೆಯೆ ಇರಲಿ, ಕರ್ನಾಟಕದ ಇತಿಹಾಸವೇ ಇರಲಿ, ಗಳಗನಾಥರ ಗಲಗಿನ ಒಂದು ಕೈವಾಡವೇ ಕೈವಾಡ, ಒಂದು ಮೋಹಕತೆಯೇ ಮೋಹಕತೆ; ಸಾಮಾನ್ಯ ವಾಚಕರನ್ನು ಲೋಹ ಚುಂಬಕದಂತೆ ಹಿಡಿದುಬಿಡುತ್ತಿತ್ತು. ಇವರ ಕಾದಂಬರಿಗಳು ಎಲ್ಲ ಪ್ರಕಾರದ ವಾಚಕರಿಗೂ ಗ್ರಾಹ್ಯವೆನಿಸುತ್ತಿದ್ದವು. ಒಮ್ಮೆ ಕಾದಂಬರಿಯನ್ನು ಓದುವದಕ್ಕೆಂದು ಎತ್ತಿಕೊಂಡರೆ ಕೆಳಗಿಳಿಸಲಿಕ್ಕೆ ಮನಸ್ಸೇ ಬಾರದು.

ನನಗಿನ್ನೂ ನೆನಪಿದೆ. ಆಗ ನಾನಿನ್ನೂ ಇಂಗ್ಲೀಷ್ ಒಂದನೇ ಇಯತ್ತೆ ವಿದ್ಯಾರ್ಥಿ. ಮಳೆಗಾಲದ ಒಂದು ಸಂಜೆ. ಹೊರಗೆ ಮಳೆ ಒಳಗೆ ಚಳಿ. ಬಿಸಿಬಿಸಿಯಾದ ಖಾದ್ಯ ಪೇಯಗಳನ್ನು ಸೇವಿಸಿ ನಮ್ಮ ಮನೆಗೆ ಬಂದಿದ್ದ ನಮ್ಮ ಋಣಾನುಬಂಧಿ ತಮ್ಮಣ್ಣ ಮಾಸ್ತರರ ಕಾದಂಬರಿ ವಾಚನಕ್ಕೆ ಕಿವಿಗೊಡುತ್ತ ನಾವೆಲ್ಲ ಕುಳಿತುಕೊಂಡಿದ್ದೆವು. ವಾಚನದಲ್ಲಿ ತನ್ಮಯರಾದ ತಮ್ಮಣ್ಣ ಮಾಸ್ತರರ ಆ ಹಾವಭಾವ! ಆ ಕಣ್ಣು ಹೊರಳಿಸುವಿಕೆ! ಮುಖದ ಮೇಲಿನ ಆ ಖುಷಿ! ಏನು ಸ್ವಾರಸ್ಯ! ಕಥಾನಾಯಿಕೆ ಇಬ್ಬರು ಯವನರ ಕೈಗೆ ಸಿಕ್ಕಿಬೀಳುತ್ತಾಳೆ. ಪಾರಾಗುವ ಬಗೆ? ಹಂಚಿಕೆ ಹಾಕುತ್ತಾಳೆ. ಉಭಯತರ ಶೌರ್ಯ ಸೌಂದರ್ಯಗಳನ್ನು ವರ್ಣಿಸುತ್ತಾಳೆ. ಉಭಯತರನ್ನೂ ಮೆಚ್ಚಿಸುತ್ತಾಳೆ. ಉಭಯತರೂ ಹುಚ್ಚಾಗಿ ಹೋಗುತ್ತಾರೆ. ಆ ಕ್ಷಣದಲ್ಲಿ ಆ ಧೂರ್ತ ರಜಪೂತರಮಣಿ ಒಂದು ನೋಟ ಬೀರುತ್ತಾಳೆ. ಎಂಥ ಮಾರ್ಮಿಕವಾದ ನೋಟ! ಆ ಮೋಹ ಮುಗ್ಧ ಯವನಯುವಕರಲ್ಲಿ ಪ್ರತಿಯೊಬ್ಬ ಆ ತರುಣಿ ತನ್ನನ್ನೇ ನೋಡಿ ಆ ನೋಟ

ಬೀರಿದಳು ಎಂದು ಭ್ರಮಿಸುತ್ತಾರೆ. ಆ ತರುಣಿಯ ಪ್ರಣಯ ನೋಟ ಯಾರಿಗಾಗಿ? ನಿರ್ಣಯ ಕೊಡುವವರು ಯಾರು? ತಮ್ಮ ತಮ್ಮೊಳಗೆ ಬಡಿದಾಟ, ಗುದ್ದಾಟ ಪ್ರಾರಂಭ. ಈ ಸಂದರ್ಭ ಸಾಧಿಸಿ ಚಂಚಲ ನೇತ್ರದ ಆ ಚಾಣಾಕ್ಷ ರಮಣಿ ಅಲ್ಲಿಂದ ಕಾಲ್ದೆಗೆಯುತ್ತಾಳೆ. ಕಣ್ಮರೆಯಾಗಿ ಹೋಗುತ್ತಾಳೆ, ಕ್ಷಣಾರ್ಧದಲ್ಲಿ. ಮುಂದೇನಾಯಿತು? ಈ ಮುಂದೇನಾಯಿತೆಂಬುದೇ ಗಳಗನಾಥರ ಕಥಾನಿರೂಪಣೆಯ ರಹಸ್ಯ. ಅಂದಿನ ಗಳಗನಾಥರ ಕಾದಂಬರಿಯ ಕಾಲವೇ ಕಾಲ.

ಇನ್ನೂ ಒಂದು ಸಂದರ್ಭ. ಕನ್ನಡಿಗರ ಕರ್ಮಕಥೆ. ವಿಜಯನಗರದ ಅಳಿಯ ರಾಮರಾಜನ ಪ್ರಣಯದಿಂದ ವಂಚಿತಳಾದ ಬಸುರಿ ಮೆಹರ್ಜಾನ ಪ್ರತಿಜ್ಞೆ ಮಾಡುತ್ತಾಳೆ. ಧಾರೆಗಂಗಳಲ್ಲಿ ರೋಷಾಯುಧವ ಮಸೆದು ತನ್ನ ಹಾದರದ ಹೊಟ್ಟೆಯಿಂದ ಹುಟ್ಟುವ ಮಗನಿಂದಲೇ ರಾಜನ ತಲೆಯನ್ನು ತರಿಸುವೆನು ಎಂದು. ಅಭಿಮಾನದ ಅಬಲೆಯ ಛಲ ಇದು. ಮುಂದೆ ಮೆಹರ್ಜಾನಳ ಹೊಟ್ಟೆಯಿಂದ ಹುಟ್ಟಿದ ಮಗ ರಣಮಸ್ತಖಾನ ವಿಜಾಪುರದ ಆದಿಲಶಾಹಿಯಲ್ಲಿ ನಿಯುಕ್ತನಾಗುತ್ತಾನೆ. ಬಾದಶಹನಿಂದ ವಕೀಲನೆಂದು ದೌತ್ಯ ವಹಿಸಿ ತಾಯಿಯೊಂದಿಗೆ ವಿಜಯನಗರಕ್ಕೆ ಬರುತ್ತಾನೆ. ಪ್ರಸಂಗಗಳು ಒಂದರ ಮೇಲೊಂದು ಹೆಣೆದುಕೊಂಡು ಯುದ್ಧ ಬಲಿಯುತ್ತದೆ. ಕಾಳಗದ ಹೊಗೆ ಹಾಯುತ್ತದೆ. ರಣಮಸ್ತಖಾನನು ರಾಮರಾಜನೊಡನೆ ಮುಖಾಮುಖಿಯಾಗಿ ಕದನ ಮಾಡುವ ಪ್ರಸಂಗ ಬರುತ್ತದೆ. ನಡೆದ ಕದನದಲ್ಲಿ ಮಗ ತಂದೆಯನ್ನು ಸೆರೆ ಹಿಡಿಯುತ್ತಾನೆ. ಆತನ ರುಂಡವನ್ನು ಕತ್ತರಿಸಿ ವಸ್ತ್ರದಲ್ಲಿ ಕಟ್ಟಿಕೊಂಡು ಬಂದು ತಾಯಿಯ ಅಡಿದಾವರೆಯಲ್ಲಿ ಚಲ್ಲುತ್ತಾನೆ. ಆದರೆ ಅದೇ ರಾಮರಾಜ ತನ್ನ ಅಕ್ರಮ ತಂದೆ ಎಂದು ತಿಳಿದಾಗ ಎಲ್ಲವೂ ಮಿಂಚಿ ಹೋಗಿರುತ್ತದೆ! ಮೆಹರ್ಜಾನ ಆ ರುಂಡವನ್ನು ಕೈಯಲ್ಲಿ ಹಿಡಿದುಕೊಂಡು ಹುಕ್ಕರ್ಣಿಯಲ್ಲಿಯೇ ಜಲಸಮಾಧಿ ಹೊಂದುತ್ತಾಳೆ. ರಾಮರಾಜನ ಹತ್ಯಾಕಾಂಡವು ವಿಜಯನಗರದಲ್ಲಿ ಅರಾಜಕತೆಯನ್ನುಂಟುಮಾಡುತ್ತದೆ. ಮುಸಲ್ಮಾನರು ರಾಜಧಾನಿಯನ್ನು ಪ್ರವೇಶಿಸಿ ವಿಗ್ರಹಗಳನ್ನು ಗುಡಿಗುಂಡಾರಗಳನ್ನು ನಾಶಮಾಡುತ್ತಾರೆ. ವಿಜಯನಗರದ ಸಂಪತ್ತು ಮಣ್ಣಿನಲ್ಲಿ ಮಣ್ಣಾಗಿ ಹೋಗುತ್ತದೆ. "ಅರಸರೇನು ದರಿದ್ರರೇನು ಕರ್ಮದ ಫಲವನ್ನು ಭೋಗಿಸಿಯೇ ತೀರಬೇಕು," ಎಂದು ಕಥೆ ಮುಕ್ತಾಯವಾಗುತ್ತದೆ. ಕಥೆ ಮುಕ್ತಾಯವಾದ ಮೇಲೆ ಮನಸ್ಸಿಗೆ ಚುರುಚುರು ಹುರುಹುರು! ಕಥೆಯನ್ನು ಮತ್ತೊಮ್ಮೆ ಓದಬೇಕು ಎನಿಸುವದು. ಇದು ಗಳಗನಾಥರ ಕಾದಂಬರಿಯ ರಹಸ್ಯ. ಕನ್ನಡ ಕಾದಂಬರಿ ಪ್ರಪಂಚಕ್ಕೆ "ಗಲಗನಾಥ"ರೆನಿಸಿ ಏಕೈಕ ಲೇಖಕರಾಗಿ ಗುಣದಲ್ಲಿ ಗಾತ್ರದಲ್ಲಿ ಮಹತ್ವಪೂರ್ಣವಾದ ಕಾಣಿಕೆಯನ್ನು ಸಲ್ಲಿಸಿದವರು ವೆಂ. ತಿ. ಗಳಗನಾಥರು ನಿಜ; ಮೂಲ ಸ್ಫೂರ್ತಿ ಕಾದಂಬರಿಕಾರ ಹರಿನಾರಾಯಣ ಆಪ್ಟೆ. ಆದರೆ ಆ ಮೂಲವನ್ನು ಅಮೂಲಾಗ್ರವಾಗಿ ತಮ್ಮದನ್ನಾಗಿ ಮಾಡಿಕೊಂಡು ತಮ್ಮದೇ ಆದ ಶೈಲಿಯಲ್ಲಿ ಕನ್ನಡಕ್ಕೆ ಒಗ್ಗುವಂತಹ

ಬಳಕೆಯ ಬೆಡಗು ನುಡಿಯಲ್ಲಿ ಅದನ್ನು ಪರಿವರ್ತಿಸಿ ರೂಪಾಂತರಿಸಿ ಹಿಗ್ಗಿಸಿ ಕುಗ್ಗಿಸಿ ರಸವತ್ತಾಗಿಸಿ ರುಚಿವತ್ತಾಗಿಸಿ ಕನ್ನಡ ವಾಚಕರ ಕೈಗೆ ನೀಡುತ್ತಿದ್ದರು. ಈ ಅನುವಾದ ರೂಪಾಂತರಗಳ ಬಗ್ಗೆ ಅವು ತಮ್ಮ ಸ್ವಂತ ವಸ್ತುವಲ್ಲ ಎಂಬ ಪ್ರತ್ಯಯ ಪ್ರಜ್ಞೆ ಅವರಿಗೆ ಇದ್ದೇ ಇತ್ತು. ಅಂತೆಯೇ ಮುಂದೆ ಕೆಲವು ಸ್ವತಂತ್ರ ಗ್ರಂಥಗಳನ್ನು ರಚಿಸಲು ಉಜ್ಜುಗಿಸಿದರು. ಹಾಗೆ ನೋಡಿದರೆ 'ಪ್ರಬುದ್ಧ ಪದ್ಮನಯನೆ' ಅವರ ಪ್ರಥಮ ಹಾಗೂ ಸ್ವತಂತ್ರ ಕೃತಿ. ಅದೇ ಮೇರೆಗೆ 'ಮಾಧವ ಕರುಣಾವಿಲಾಸ' ಅವರ ಕೊನೆಯ ಹಾಗೂ ಸ್ವತಂತ್ರ ಕಾದಂಬರಿ ಕೃತಿ. 'ಪ್ರಬುದ್ಧ ಪದ್ಮನಯನೆ'ಯಲ್ಲಿ ಗಳಗನಾಥರು ಹೇಳುತ್ತಾರೆ: "ಕಥಾಸಂವಿಧಾನವು ನನ್ನ ಸ್ವಂತ ಕಲ್ಪನೆಯದಿದ್ದು ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟವೆ. ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ಎಂಜಲವು ಬಹುತರವಾಗಿ ದೊರೆಯಲಾರವು." ಕಾದಂಬರಿಕಾರನ ಪ್ರಾಮಾಣಿಕತೆ ಇದರಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಗಳಗನಾಥರು ಸ್ವತಂತ್ರ ಕಾದಂಬರಿಗಳನ್ನು ರಚಿಸುವ ಕಲ್ಪನೆ ಪ್ರತಿಭೆಗಳನ್ನು ಪಡೆದಿರುವಾಗ ಮರಾಠಿ ಅನುವಾದಗಳಿಗೆ ಯಾಕೆ ಕೈಹಾಕಿದರು? ಕನ್ನಡಿಗರಿಗೆ ಇನ್ನೂ ಹೆಚ್ಚಿನ ಸರಸ ಸಾಹಿತ್ಯವನ್ನು ಒದಗಿಸಬೇಕು ಎಂಬ ಅಭಿಲಾಷೆಯಿಂದ ಕನ್ನಡಿಗರು ಆಪ್ಟೆಯವರ ಮರಾಠಿ ಸಾಹಿತ್ಯದ ಸವಿಯನ್ನು ಸವಿಯಬೇಕು ಎಂಬ ಸದಿಚ್ಛೆ ಬಲವಾಗಿ ರಜಪೂತ ಮರಾಠಾ ಇತಿಹಾಸಗಳ ಮರಾಠಿ ಕಾದಂಬರಿಗಳನ್ನು ಕನ್ನಡಿಸಿದರು. ಅವು ಸ್ವಂತ ಕಾದಂಬರಿಗಳೇ ಎನ್ನುವ ಹಾಗೆ ರೂಪಾಂತರಿಸಿದರು. ಆ ಕಾಲಕ್ಕೆ ಸಾಹಿತ್ಯ ಕಲೆಗಳಲ್ಲಿ ರಸಾಸ್ವಾದನೆಯಲ್ಲಿ ಭಾಷೆಯ ಗೋಡೆಗಳು ಅಡ್ಡ ಬರುತ್ತಿರಲಿಲ್ಲ. ಉತ್ತರ ಕರ್ನಾಟಕದಲ್ಲಿ ಗಳಗನಾಥರು ಹರಿ ನಾರಾಯಣ ಆಪ್ಟೆ ಅವರನ್ನು ಕನ್ನಡಿಸಿದಂತೆ ಮೈಸೂರ ಕರ್ನಾಟಕದಲ್ಲಿ ಬಿ. ವೆಂಕಟಾಚಾರ್ಯರು ಮೂಲ ಬಂಗಾಲಿಯ ಬಂಕಿಮಚಂದ್ರರ ಕಾದಂಬರಿಗಳನ್ನು ಕನ್ನಡಿಗರಿಗೆ ನೀಡಿದರು. ಐವತ್ತು ವರ್ಷಗಳ ಕೆಳಗಿನ ಅಂದಿನ ಕಾದಂಬರಿಯ ಸ್ವರೂಪ ಈ ಮಾದರಿಯದಾಗಿತ್ತು. ಇದು ಬಂಗಾಲಿ, ಇದು ಮರಾಠಿ ಎಂಬ ಭಾವನೆಗಿಂತ ಇದು ಉತ್ತಮವಾದ ಕಾದಂಬರಿ ಎಂತಲೇ ಇದು ಆಸ್ವಾದ್ಯ ಎಂಬ ವಿಶಾಲ ಮನೋಭಾವನೆ ಆಗಿನ ಕನ್ನಡ ವಾಚಕರದಾಗಿದ್ದಿರಬೇಕು. ಆದರೆ ಐವತ್ತು ವರ್ಷಗಳ ಹಿಂದಿನ ಕನ್ನಡ ಕಾದಂಬರಿ ಸಾಹಿತ್ಯದ ಉಗಮ ಭಾಷಾಂತರದಿಂದ ಎಂಬುದನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ಅಂದಿನದು ಭಾಷಾಂತರ ಯುಗ. ಆಗ ಗಳಗನಾಥರು ಕಾದಂಬರಿಗಳನ್ನು ಚಕ್ಕಡಿಯ ಮೇಲೆ ಹೇರಿಸಿಕೊಂಡು ಕನ್ನಡಿಗರ ಮನೆಮನೆಗಳಿಗೆ ಅಂಡಲೆದು ಕನ್ನಡಿಗರಲ್ಲಿ ಕಾದಂಬರಿಯ ಅಭಿರುಚಿಯನ್ನು ಬಿತ್ತಿ ಬೆಳೆದರು. ಗಳಗನಾಥರ ಕಾದಂಬರಿಗಳು ಕನ್ನಡಿಗರ ಮನೆಮನೆಗಳಲ್ಲಿ ಗಣೇಶನ ಮಾಡಗಳನ್ನು ಅಲಂಕರಿಸಿದವು. ಇಂದಿಗೂ ನರೆಗೂದಲಿನ ಹಿರಿಯರು ಗಳಗನಾಥರು ತಮ್ಮ ಸಾಲ ತೀರಿಸುವ ಗ್ರಂಥಗಳನ್ನು ಮನೆಮನೆಗೆ ಹೋಗಿ ಮಾರಾಟ

ಮಾಡುತ್ತಿದ್ದ ಸಂಗತಿಯನ್ನು ಸ್ಮರಿಸಿಕೊಳ್ಳುತ್ತಾರೆ. ಸಾಲ ತೀರಿಸುವದಕ್ಕಾಗಿ ಹೊರಡಿಸಿದ ಪ್ರಕಟನೆಗಳು ಮತ್ತಷ್ಟು ಸಾಲಕ್ಕೆ ಕಾರಣವಾದವು ಎಂದೂ ಜನ ವ್ಯಂಗ್ಯ ನಗೆ ಬೀರಿ ಹೇಳುತ್ತಾರೆ. 'ಮಾಧವ ಕರುಣಾವಿಲಾಸ'ದ ಮುನ್ನುಡಿಯಲ್ಲಿ ಗ್ರಂಥಕರ್ತರು ಬರೆಯುತ್ತಾರೆ: "ಪ್ರಿಯ ವಾಚಕರೆ, ಮಹಾತ್ಮರಾದ ಶ್ರೀ ಮಾಧವಾಚಾರ್ಯರು ತಮ್ಮ ತಪಃಪ್ರಭಾವದಿಂದ ಸುವರ್ಣ ವೃಷ್ಟಿಗರೆಸಿದರು. ಅಂಥ ತಪಸ್ವಿಗಳ ತಪಸ್ಸಿಗೆ ಪ್ರಸನ್ನರಾಗಿ ಕನ್ನಡಿಗರು ನೀವು ಸುವರ್ಣವೃಷ್ಟಿ ಗರೆಯುವವರು. ಇಂಥ ತಪಃಪ್ರಿಯರಾದ ನಿಮ್ಮಿಬ್ಬರ ಪ್ರಭಾವವನ್ನು ನಂಬಿ ನನಗಾಗಿರುವ ಹನ್ನೆರಡು ಸಹಸ್ರ ರೂಪಾಯಿ ಸಾಲವನ್ನು ತೀರಿಸಿ ಸ್ವತಂತ್ರನಾಗಿ ಪುನಃ ಸದ್ಗುರು ಮಾಸಪತ್ರಿಕೆಯನ್ನು ಹೊಸ ಪದ್ಧತಿಯ ಸಂಸ್ಕೃತ ಪಾಠಶಾಲೆ ಯನ್ನು ಶ್ರೀ ಶೇಷ ಸದ್ಗುರುವಿನ ಕೃಪೆಯಿಂದ ಆರಂಭಿಸಬೇಕೆಂದು ಹವಣಿಸುತ್ತಿರುವ ಗಳಗನಾಥನು ನಾನು." ಸುಮಾರು ಐವತ್ತು ವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಸೇವಕನೊಬ್ಬ ಸಾಕಷ್ಟು ಲೋಕಪ್ರಿಯತೆಯನ್ನು ಗಳಿಸಿದರೂ ತನ್ನ ಹನ್ನೆರಡು ಸಾವಿರ ರೂಪಾಯಿ ಸಾಲ ಪರಿಹಾರಕ್ಕಾಗಿ ವಾಚಕನೆಂಬ ಮಾಧವಾಚಾರ್ಯನ ಕರುಣೆಯನ್ನು ಕೋರಬೇಕಾದ ಪ್ರಸಂಗ ಮನೋರಂಜಕವಾದ ಸಂಗತಿ ಅಲ್ಲವೆ? ಇದು ಕೂಡ ಅಂದಿನ ಕಾದಂಬರಿ ಪ್ರಕಾಶನದ ಒಂದು ಲಕ್ಷಣ ಎನ್ನಬೇಕು. ಇಷ್ಟು ಸಾಲದಿಂದ ಸಾವಿರಾರು ಕನ್ನಡಿಗರ ನಾಲಿಗೆಯ ಮೇಲೆ ಗಳಗನಾಥರು ನಲಿಯಾಗಿ ನಿಂತುದು ಯಥಾಯೋಗ್ಯವೇ ಎಂದು ಎನಿಸದಿರದು. 'ಪ್ರಬುದ್ಧ ಪದ್ಮನಯನೆ' 'ಕಮಲಕುಮಾರಿ' 'ನೇತಾಜಿ ಪಾಲಕರ' ಈ ಮೊದಲಾದ ಕಾದಂಬರಿಗಳಿಗೆ ಮನಸೋತ ಮುಗ್ಧ ತರುಣರಿಗೆ ಎಷ್ಟೋ ಜನ ಹೆಣ್ಣು ಕೊಡುವದಕ್ಕೂ ಹಿಂದೆ ಮುಂದೆ ನೋಡುತ್ತಿದ್ದರೆಂದು ವಿಮರ್ಶಕರೊಬ್ಬರು ವಿನೋದ ಮಾಡಿದ್ದುಂಟು. ಆಗಿನ ಕಾಲಕ್ಕೆ ಹಿರಿಯರ ಕಣ್ಣು ತಪ್ಪಿಸಿ ಕಾದಂಬರಿಗಳನ್ನು ಓದಿ ಆನಂದಿಸಿದ ಅಂದಿನ ತರುಣರೆಂದರೆ ಇಂದಿನ ಎಪ್ಪತ್ತರ ವೃದ್ಧರು. ಗಳಗನಾಥರ ಕಾದಂಬರಿ-ಗಳೆಂದರೆ ಗುಂಗು ಹಿಡಿಸುವ ಮಾದಕ ಗುಳಿಗೆಗಳಾಗಿದ್ದವು ಎಂದು ಆ ಹಳೆಯ ತರುಣರು ಹೇಳುತ್ತಾರೆ.

೧೯೧೩ ರಲ್ಲಿ ಅವರು ರಚಿಸಿದ 'ಕುಮುದಿನಿ' ಗಳಗನಾಥರ ಸ್ವತಂತ್ರ ಕಾದಂಬರಿ. ಎಚ್ಚಮನಾಯಕನ ಕಲಿತನವನ್ನು ಸ್ವಾಮಿನಿಷ್ಠೆಯನ್ನು ನಾಡ ಭಕ್ತಿಯನ್ನು ಮನಕರಗುವಂತೆ ಚಿತ್ರಿಸುತ್ತದೆ. ವಿಜಯನಗರದ ತರುವಾಯ ಅವರ ವಂಶಜರು ಚಂದ್ರಗಿರಿಯಲ್ಲಿ ಆಳತೊಡಗಿದಾಗ ಆ ಪುಟ್ಟ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಎಚ್ಚಮನಾಯಕನು ನಡೆಸಿದ ಸಾಹಸಕ್ಕೆ ಕಾದಂಬರಿಕಾರರು 'ಬಾಲಕ್ಕೆ ಬಡಿದಾಟ' ಎಂಬ ಇನ್ನೊಂದು ಶೀರ್ಷಿಕೆಯನ್ನು ಕೊಟ್ಟಿದ್ದಾರೆ. ಎಚ್ಚಮನಾಯಕನ ತ್ಯಾಗ ನಿಷ್ಠೆಗಳನ್ನು ಚಿತ್ರಿಸುತ್ತ ಸತ್ಯಮೇವ ಜಯತೆ ಎಂಬ ತತ್ವವನ್ನು ಕಾದಂಬರಿಕಾರರು ಧ್ವನಿಸುತ್ತಾರೆ. ಇದರೊಂದಿಗೆ ಭಾರತದ ಬಗ್ಗೆ

ಒಂದು ಭವಿಷ್ಯವಾಣಿಯನ್ನೂ ನುಡಿಯುತ್ತಾರೆ. ''ಕೇವಲ ಸ್ವಾರ್ಥದ ಆಸೆಯಿಂದ ಬಡಿದಾಡಹತ್ತಿ ರಸಾತಳಕ್ಕೆ ಇಳಿಯಹತ್ತಿರುವ ಈ ಭರತಭೂಮಿಯ ಉದ್ಧಾರವು ಇಂಥ ನಿರರ್ಥಕ ಬೋಧನೆಗಳನ್ನು ಕೇಳುವದರಿಂದ ಆಗುವದಿಲ್ಲ. ಈ ಪುಣ್ಯ ಭೂಮಿಯನ್ನು ಉದ್ಧರಿಸುವದಕ್ಕಾಗಿ ಆಂಗ್ಲಭೂಮಿಯಿಂದ ಯೋಗ್ಯರಾದ ಗುರುಗಳು ಬಂದು ಸರಾಸರಿ ಇನ್ನೂರು ವರ್ಷಗಳ ಮೇಲೆ ಭಾರತಭೂಮಿಯ ಅಧಿಪತ್ಯವನ್ನು ಸಂಪಾದಿಸುವರು,'' ಎಂದು ಮೊದಲಾದ ಋಷೀಶ್ವರನ ಮಾತಿನಲ್ಲಿ ಕಾದಂಬರಿಕಾರರು ಭವಿಷ್ಯವಾಣಿಯನ್ನು ನುಡಿಸಿದ್ದಾರೆ. ಐತಿಹಾಸಿಕ ಎಂಬ ಕಾದಂಬರಿಯಲ್ಲಿ ಇಂತಹ ಭವಿಷ್ಯ ಕಥನಕ್ಕೂ ಇಂಬು ದೊರೆತಿರುವದು ಒಂದು ವಿಶೇಷ, ಇದೂ ಅಂದಿನ ಕಾದಂಬರಿಯ ಒಂದು ವಿಶೇಷ ಲಕ್ಷಣವೆಂದು ಹೇಳಬೇಕು. 'ಮಾಧವ ಕರುಣಾವಿಲಾಸ'ದಲ್ಲಿ ಮಧ್ಯೆ ಮಧ್ಯೆ ಬರುವ ಧರ್ಮವಿವೇಚನೆ ತಾತ್ವಿಕ ಉಪದೇಶ ನೈತಿಕ, ವೈಚಾರಿಕ, ಚಿಂತನಮಂಥನಗಳು ವಾಚಕರನ್ನು ಕಥನ ಪ್ರವಾಸದಿಂದ ಒಂದಿಷ್ಟು ನಿಲ್ಲಿಸಿ ಅವರೊಡನೆ ಒಂದೆಡೆಗೆ ತಂಗಿ ಈ ಬಗೆಯ ವಿಷಯಾಂತರ ಚರ್ಚೆ ನಡೆಸುವದು ಇದೂ ಒಂದು ಅಂದಿನ ಕಾದಂಬರಿಯ ವೈಶಿಷ್ಟ್ಯವೇ ಆಗಿದ್ದಿತು.

'ಮಾಧವ ಕರುಣಾವಿಲಾಸ'ವು ಗಳಗನಾಥರ ಸ್ವತಂತ್ರ ಸಾಹಿತ್ಯ ಎಂದು ಹೇಳಿದೆ ಅಲ್ಲವೇ? ಹಾಗೆಂದುಕೊಂಡೇ ಕಾದಂಬರಿಕಾರ ತಾನೇನು ಅನುವಾದಕನಲ್ಲ ತನಗೆ ಬೇಕಾದುದನ್ನು ಬೇಕಾದಷ್ಟು ಬೇಕಾದ ಹಾಗೆ ಬರೆಯುವ ಸ್ವಾತಂತ್ರ್ಯವಿದೆ ಎಂದುಕೊಂಡು ಕಾದಂಬರಿಯನ್ನು ಉಪನ್ಯಾಸ ಸಾಧನವನ್ನಾಗಿ ಮಾಡಿದಂತಿದೆ. (ಹಿಂದಿಯಲ್ಲಿ ಕಾದಂಬರಿಗೆ ಉಪನ್ಯಾಸವೆಂದೇ ಹೆಸರು) 'ಮಾಧವ ಕರುಣಾವಿಲಾಸ'ಕ್ಕೆ ತಾತ್ವಿಕ ಮತ್ತು ಆಧ್ಯಾತ್ಮಕ ವಿವೇಚನೆಯೇ ಮೂಲ ತಳಹದಿ. ಬಂದ ಪ್ರಸಂಗಕ್ಕೆ ಎದೆಗೊಟ್ಟು ಸತ್ವವನ್ನು ಕಾಯ್ದುಕೊಂಡು ಧರ್ಮತೇಜಸ್ಸಿನಿಂದ ಪ್ರಕಾಶಿಸುತ್ತಲಿರುವದೇ ಸನಾತನ ವೈದಿಕಧರ್ಮದ ಅಸ್ತಿತ್ವದ ಲಕ್ಷಣ. ಈ ಸನಾತನ ಧರ್ಮದ ಪುನರುತ್ಥಾನವಾಗಿದೆ 'ಮಾಧವ ಕರುಣಾವಿಲಾಸ.' ಕನ್ನಡ ಸ್ವತಂತ್ರ ಐತಿಹಾಸಿಕ ಕಾದಂಬರಿಗೆ ಅವಶ್ಯವಾಗಿ ಬೇಕಾದ ಅಭ್ಯಾಸದ ಸಂಶೋಧನ ಸಾಮಗ್ರಿಯನ್ನೆಲ್ಲ ಲೇಖಕರು ಇದರಲ್ಲಿ ಅಳವಡಿಸಿದ್ದಾರೆ. ಇದರೊಂದಿಗೆ ತಮ್ಮ ಅಧ್ಯಾತ್ಮಸಾಧನೆಯ ಪ್ರತಿಭಾಚಕ್ಷುವಿನಿಂದಲೂ ಕಂಡುಕೊಂಡ ಸಂಗತಿ ಸನ್ನಿವೇಶಗಳನ್ನು ಈ ಕಾದಂಬರಿಯಲ್ಲಿ ಹೆಣೆದಿದ್ದಾರೆ. ಮಾಧವಾಚಾರ್ಯರ ಪಾತ್ರ ಸೃಷ್ಟಿಯಲ್ಲಿ ತಮ್ಮದೇ ಆದ ಒಂದು ದೃಷ್ಟಿಯನ್ನು ಮೂಡಿಸಿದ್ದಾರೆ. ಗಳಗನಾಥರ ಮೇರೆಗೆ ಮಾಧವಾಚಾರ್ಯರು ಗೃಹಸ್ಥಾಶ್ರಮಿ. ಮಾಯಣ ಶ್ರೀಮತಿಯವರಿಂದ ಮಾಧವಾಚಾರ್ಯ ಸಾಯಣ ಭೋಗನಾಥ ಎಂಬ ತೇಜಸ್ವಿ ಮಕ್ಕಳು ಜನಿಸುವರು. ಮಾಧವಾಚಾರ್ಯರು ಬೆಳೆದು ದೊಡ್ಡವರಾದ ಮೇಲೆ ಗೃಹಸ್ಥಾಶ್ರಮಿಯಾದರು. ಅವರ ಅರ್ಧಾಂಗಿ ನೈತಿಹೊತ್ರಿ. ವಸಿಷ್ಠ ಅರುಂಧತಿಯರಂತೆ ಈ ದಂಪತಿಗಳು

ಅನ್ಯೋನ್ಯರಾಗಿದ್ದರು. ಮಾಧವಾಚಾರ್ಯರು ತಮ್ಮ ಗುರು ವಿಷ್ಣುಶರ್ಮರ ಅನುಗ್ರಹ ಆದೇಶಗಳನ್ನು ಪಡೆದು ಭುವನೇಶ್ವರಿಯನ್ನು ಮೆಚ್ಚಿಸಿ ಯವ ಯಮಸದೃಶ ವಿನಾಶದಿಂದ ದಕ್ಷಿಣದ ಸಂಸ್ಕೃತಿಯನ್ನು ಧರ್ಮವನ್ನು ಕಾಪ ಎತ್ತಿಹಿಡಿಯುವುದಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡರು. ಪಂಡಿತ ಬ್ರಾಹ್ಮ ರಾಗಿ ಓದಿದ, ರಚಿಸಿದ ಗ್ರಂಥಗಳನ್ನೆಲ್ಲ ಕಟ್ಟಿಟ್ಟು ಕಲಿಯಾಗಿ ಶಸ್ತ್ರಧಾರಿಯ ರಾಜಕೀಯ ರಂಗಕ್ಕೆ ಧುಮುಕಿದರು ಇವರ ರಾಜಕೀಯ ರಂಗ ಪಾತ್ರದ ಧರ್ಮ ಕ್ಷೇತ್ರವಾಗಿತ್ತಲ್ಲದೇ ಕುರುಕ್ಷೇತ್ರವಾಗಿರಲಿಲ್ಲ. ರಾಜ್ಯಲಾಲಸೆ ಇವರನ್ನು ಕಾ ಲಿಲ್ಲ. ಹುಕ್ಕ ಬುಕ್ಕರೆಂಬ ಸೋದರರನ್ನು ಸಜ್ಜುಗೊಳಿಸಿ ಅವರಿಂದಲೇ ಈ ಮಹಾ ಸಾಮ್ರಾಜ್ಯವನ್ನು ಕಟ್ಟುವ ಮಹಾತ್ಕಾರ್ಯವನ್ನು ಕೈಕೊಂಡರು. ಕಾದಂಬರಿ ಉದ್ದಕ್ಕೂ ನಿರೂಪಿತವಾಗಿರುವುದು ಧರ್ಮ ಮತ್ತು ದೇಶಸೇವೆ ಇಂತಹ ಗಂಭೀ ವಿಷಯಕ್ಕೆ ಬೇಕಾಗುವ ಮಾನಸಿಕ ಹಿನ್ನೆಲೆ ಪ್ರತಿಭೆ ಪಾಂಡಿತ್ಯಗಳು ಗಳಗನಾಥ ರಲ್ಲಿದ್ದವು.

'ಕುಮುದಿನಿ'ಯಿಂದ 'ಮಾಧವ ಕರುಣಾವಿಲಾಸ'ದ ವರೆಗೆ ಕಾದಂಬರಿ ರಚ ಬೆಳವಣಿಗೆಯ ರೀತಿಯಲ್ಲಿ ಒಂದು ವಿಕಾಸಕ್ರಮವನ್ನು ಗುರುತಿಸಬಹುದಾಗಿದೆ ಪ್ರಾರಂಭದಲ್ಲಿಯೇ ಬರುವ ವರ್ಷಾಕಾಲದ ವರ್ಣನೆ ಮುಂದೆ ಮಾಧವಾಚಾರ್ಯ ಕರೆಯಿಸುವ ಸುವರ್ಣವೃಷ್ಟಿಗೆ ಒಂದು ಸಾಂಕೇತಿಕ ಹಿನ್ನೆಲೆಯಾಗಿ ಬರುವುದ ಬಹು ಮನೋಜ್ಞವಾಗಿದೆ. ವರ್ಣನೆಗಳು ಗಳಗನಾಥರ ಹೆಚ್ಚುಗಾರಿಕೆಯ ಹೆಗ್ಗುರುತುಗಳಾಗಿವೆ. ಪ್ರಕೃತಿವರ್ಣನೆ ಸ್ತ್ರೀಸೌಂದರ್ಯ ವರ್ಣನೆ ವೀ ನಾಯಕನ ಕಾರ್ಯ ಸಾಹಸಗಳ ವರ್ಣನೆ ಬಂದಾಗಲೆಲ್ಲ ಗಳಗನಾಥರದು ಎತ್ತಿ ಕೈ. 'ಮಾಧವ ಕರುಣಾವಿಲಾಸ' ದಲ್ಲಿ ಪ್ರಾರಂಭಕ್ಕೆ ಬರುವ ಆ ಕೃಷ್ಣಪಕ್ಷ ರಾತ್ರಿ ನಾಲ್ಕು ತಾಸು ಮೀರಿದ ಸಮಯದ ವರ್ಣನೆ, ಅದೇ ಕಾಲಕ್ಕೆ ಹೊರ ಕಟ್ಟಿ ಹರಿಯುತ್ತಿರುವ ಮಳೆ, ಅದರಲ್ಲಿ ಕೆಲವೇ ಶ್ರೀಮಂತರ ನೆಮ್ಮದಿ, ಸೋರುವ ಮಾಳಿಗೆಯನ್ನು ಮುಚ್ಚುವ ಬಡವರ ಹೋರಾಟ ಇವೆಲ್ಲ ವಾಸ್ತವಪೂರ್ಣವಾಗಿವೆ ಹೃದ್ಯವಾಗಿವೆ.

'ಮಾಧವ ಕರುಣಾವಿಲಾಸ' ಕಾದಂಬರಿಯಿಂದ ಗಳಗನಾಥರು ಕನ್ನಡಿಗರಿಗೆ ಕನ್ನಡ ಸರಸ್ವತಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ವಾಚಕರನ್ನು ದ್ದೇಶಿಸಿ ನೀಡುವ ವರ್ಣನಾತ್ಮಕ ಉಪನ್ಯಾಸದ ಭಾಗಗಳನ್ನು ಬಿಟ್ಟರೆ ಕಥೆಯ ಕುತೂಹಲಿಕೆ ಪಾತ್ರಪರಿಪೋಷಣೆ ರಸಾವಿಷ್ಕಾರ ಸಂಭಾಷಣೆ ವರ್ಣನೆ ಹೃದಯಂ ಗಮ ಶೈಲಿ ಈ ಅಂಶಗಳಿಂದಾಗಿ ಈ ಐತಿಹಾಸಿಕ ಕಾದಂಬರಿ ಕನ್ನಡ ಕಾದಂಬರಿ ಪ್ರಪಂಚದಲ್ಲಿ ಒಂದು ದೊಡ್ಡ ಮೈಲುಗಲ್ಲಾಗಿ ನಿಲ್ಲುತ್ತದೆ. ಪ್ರಕರಣದಿಂದ ಪ್ರಕರಣಕ್ಕೆ ಮುಂದೇನಾಯಿತು ಮುಂದೇನಾಯಿತು ಎಂದು ಓದುಗನು ಕಥೆಯ ಜಾಡು ಹಿಡಿದು ಓಡುವಂತಾಗಿದೆ.

ಗಳಗನಾಥರು ಸುಮಾರು ಇಪ್ಪತ್ನಾಲ್ಕು ಕಾದಂಬರಿಗಳನ್ನು ಕನ್ನಡ ವಾಚಕನ ಉಡಿಯಲ್ಲಿ ನೀಡಿದ್ದಾರೆ. ಅವರ ಕಾದಂಬರಿ ರಚನೆ ಪ್ರಥಮ ಬಾರಿ ಪ್ರಕಟಗೊಂಡುದು ಹದಿನೆಂಟನೂರಾತೊಂಬತ್ತೊಂದರಲ್ಲಿ. ಅದು ಧಾರವಾಡದ ವಿದ್ಯಾವರ್ಧಕ ಸಂಘದಿಂದ ಹೊರಡುತ್ತಿದ್ದ 'ವಾಗ್ಭೂಷಣ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತು. ಮುಂದೆ ನಾಲ್ವತ್ತು ವರ್ಷಗಳ ವರೆಗೆ ಗಳಗನಾಥರ ಕಾದಂಬರಿ ವಾಹಿನಿ ಸತತವಾಗಿ ಪ್ರವಹಿಸಿತು. ಗಳಗನಾಥರ 'ಸತ್ವಸಾರ' ಎಂಬ ಕಾದಂಬರಿ ಮೇವಾಡದ ಪ್ರತಾಪಸಿಂಹನ ಕಥೆಯಾಗಿದೆ. ಅಕಬರನ ಬಲಾತ್ಕಾರಕ್ಕೆ ತಲೆ ಬಾಗದೆ ಪ್ರತಿಭಟಿಸಿ ನಿಂತು ಹೋರಾಡಿದ ಸ್ವಾಭಿಮಾನಿಯಾದ ಪ್ರತಾಪಶಾಲಿಯಾದ ಪ್ರತಾಪಸಿಂಹನ ಪಾತ್ರನಿರೂಪಣೆ ಕಾದಂಬರಿಯಲ್ಲಿ ಮನೋಜ್ಞವಾಗಿ ಬಂದಿದೆ.

ಗಳಗನಾಥರಿಗಿಂತ ಪೂರ್ವದಲ್ಲಿಯೇ ಕನ್ನಡ ಕಾದಂಬರಿ ತಲೆ ಎತ್ತಿತ್ತು ಎಂಬುದನ್ನು ಮರೆಯುವಂತಿಲ್ಲ. "ಚರಿತ್ರೆಯ ದೃಷ್ಟಿಯಿಂದ ಕನ್ನಡ ಕಾದಂಬರಿ ಯುಗದ ಆರಂಭದ ಕೃತಿಗಳೆಂದು ಯಾದವ ಕಟ್ಟಿಗನ 'ಕಲಾವತೀಪರಿಣಯ' (ಸುಮಾರು ೧೮೧೫), ಕೆಂಪುನಾರಾಯಣನ 'ಮುದ್ರಾಮಂಜೂಷ' (೧೮೩೪) ಎಂಬ ಸ್ವತಂತ್ರ ಕೃತಿಗಳನ್ನು, 'ರಾಬಿನ್‌ಸನ್ ಕ್ರೂಸೊ' (೧೮೫೭), ತುರಮರಿಯವರ 'ಬಾಣ ಕಾದಂಬರಿ' (೧೮೭೫) ಮತ್ತು ಬಿ. ವೆಂಕಟಾಚಾರ್ಯರ 'ದುರ್ಗೇಶನಂದಿನಿ' ಎಂಬ ಅನುವಾದಗಳನ್ನು ಗಣಿಸುತ್ತೇವೆ. ಅನಂತರ ವೆಂಕಟಾಚಾರ್ಯರ ಇತರ ಕಾದಂಬರಿಗಳು, ತೆಲುಗಿನ ವೀರೇಶ ಲಿಂಗಂಪಂತಲು ಅವರ ಅನುವಾದ ಕೃತಿಗಳು; ದ.ಕ. ಜಿಲ್ಲೆಯಿಂದ ಸ್ವತಂತ್ರ ಸಾಮಾಜಿಕ ಕೃತಿಗಳು ಹೊರಬಂದಿದ್ದವು", ಎಂದು ಶ್ರೀನಿವಾಸ ಹಾವನೂರ ಅವರು 'ಗಳಗನಾಥ ಮಾಸ್ತರರು' ಎಂಬ ಗ್ರಂಥದಲ್ಲಿ ಅಭಿಪ್ರಾಯಪಟ್ಟಿದ್ದಾರೆ (ಪುಟ ೮೫). ದಕ್ಷಿಣ ಕನ್ನಡ ಜಿಲ್ಲೆಯ ಕಾದಂಬರಿಕಾರರೆಂದರೆ 'ರೋಹಿಣಿ' (೧೮೯೫) ಎಂಬ ಕಾದಂಬರಿಯನ್ನು ಬರೆದ ಗುಲ್ವಾಡಿ ಅಣ್ಣಾರಾಯರು. ಅದೇ ವರ್ಷವೇ 'ಇಂದಿರಾಬಾಯಿ' ಎಂಬ ಶೀರ್ಷಿಕೆಯಲ್ಲಿ ಸಾಮಾಜಿಕ ಕಾದಂಬರಿಯೊಂದನ್ನು ಪ್ರಕಟಿಸಿದ ಗುಲ್ವಾಡಿ ವೆಂಕಟರಾಯರು, ಹತ್ತೊಂಬತ್ತುನೂರಾಐದರಲ್ಲಿ 'ವಾಗ್ದೇವಿ' ಎಂಬ ಹೆಸರುಳ್ಳ ಸಾಮಾಜಿಕ ವಿಡಂಬನೆಯೊಂದನ್ನು ಕಾದಂಬರಿ ರೂಪದಲ್ಲಿ ನೀಡಿದ ಬೋಳಾರ ಬಾಬೂರಾಯರು ಇವರೇ ಮೊದಲಾದವರು. ಹತ್ತೊಂಬತ್ತುನೂರಾಹದಿನೈದರಲ್ಲಿ ಪ್ರಕಟವಾದ 'ಮಾಡಿದ್ದುಣ್ಣೋ ಮಹಾರಾಯಾ' ಎಂಬ ಎಮ್. ಎಸ್. ಪುಟ್ಟಣ್ಣ ನವರ ಕಾದಂಬರಿ ಸ್ವತಂತ್ರವಾದ ಸಮಕಾಲಿನ ಸಾಮಾಜಿಕ ಪ್ರಜ್ಞೆಯುಳ್ಳದ್ದಾಗಿದೆ. ಆದರೆ ಗಳಗನಾಥರಷ್ಟು ಗಾತ್ರದಲ್ಲಿ ಹಿರಿದಾದ ಕಾದಂಬರಿ ಸಾಹಿತ್ಯವನ್ನು ನೀಡಗಿಸಿದವರು ಅಂದಿನ ಕಾಲಕ್ಕೆ ಇನ್ನಾರೂ ಇರಲಿಲ್ಲವೆಂದೇ ಹೇಳಬೇಕು. ಅಂತೆಯೇ ಐವತ್ತು ವರ್ಷಗಳ ಹಿಂದಿನ ಕಾದಂಬರಿಯುಗದ ನಾಯಕರು ಗಳಗ-

ನಾಥರು. ಅವರ ತರುವಾಯ ಬಿ. ವೆಂಕಟಾಚಾರ್ಯರ ಹೆಸರನ್ನು ಎತ್ತಿಕೊಳ್ಳಬೇಕು. ಅನಂತರ ಗಳಗನಾಥರ ಜಾಡನ್ನೇ ಹಿಡಿದು ನಡೆದ ಕೆರೂರು ವಾಸುದೇವಾಚಾರ್ಯರು, ಬೂದಿಹಾಳಮಠ, ಹೊನ್ನಾಪುರಮಠ ಈ ಹೆಸರುಗಳನ್ನು ಎಣಿಸಬೇಕಾಗುತ್ತದೆ. ವಾಚಕರೊಂದಿಗೆ ನಡೆಸುವ ಸರಸವಾದ ಆತ್ಮೀಯ ಹರಟೆ ವಾಸುದೇವಾಚಾರ್ಯರನ್ನು ಆಕರ್ಷಿಸಿದಂತಿದೆ. ಗಳಗನಾಥರ ಒಂದೊಂದು ಸಂಧಿ ಶೀರ್ಷಿಕೆಗಳು ಕೂಡ ಅರ್ಥವತ್ತಾಗಿವೆ. ಈ ಪದ್ಧತಿಯನ್ನು ಮಾತ್ರ ವಾಸುದೇವಾಚಾರ್ಯರು ಗಳಗನಾಥರಿಂದ ಎತ್ತಿಕೊಂಡಂತಿಲ್ಲ. ಗಳಗನಾಥರು ವಾಚಕರೊಂದಿಗೆ ಬೆರೆಯುತ್ತಿದ್ದ ಅನ್ಯೋನ್ಯತಾಭಾವ, ವಾಚಕರಿಗೆ ನೀಡುತ್ತಿದ್ದ ಗೌರವ ಭಾವಗಳು ಅನ್ಯಾದೃಶವಾಗಿದ್ದವು. ವಾಚಕರು ಕಾದಂಬರಿಕಾರ ಒಂದುಗೂಡಿದ್ದರಿಂದಲೇ ಪರಸ್ಪರರಲ್ಲಿ ಪ್ರೇಮ ಆದರಗಳು ಬೆಳೆದವು. "ನಾನು ಶಬರಿಯು, ವಾಚಕರು ಶ್ರೀರಾಮರು", ಎಂದು ವಾಚಕನನ್ನು ದೇವತ್ವದ ಮಟ್ಟಕ್ಕೆ ಮುಟ್ಟಿಸಿದ ಗಳಗನಾಥರ ಗರಿಮೆ ಗೌರವ ಬಹಳ ದೊಡ್ಡ ಗುಣ. "ಈಗ ನೀವು ಪ್ರಕಟಿಸಿದ ಕಾದಂಬರಿ ಹಿಂದಿನ ಎಲ್ಲ ಕಾದಂಬರಿಗಳಿಗಿಂತ ಸವಿ," ಎಂದು ವಾಚಕರು ನೀಡುತ್ತಿದ್ದ ಉತ್ತೇಜನದಿಂದ ಗಳಗನಾಥರು ಸ್ಫೂರ್ತಿ ಪಡೆಯುತ್ತಿದ್ದರು. ಗಳಗನಾಥರು ಕನ್ನಡದ ಗದ್ಯರೂಪಿ ಕುಮಾರವ್ಯಾಸ ಎಂದು ಹೇಳಬೇಕು. ಜನರಾಡುವ ದಿನಬಳಕೆಯ ದೇಶಿಯ ಸೊಗಸನ್ನೇ ತನ್ನ ಕಾವ್ಯದ ಸ್ವತ್ತನ್ನಾಗಿ ಮಾಡಿಕೊಂಡ ಕುಮಾರವ್ಯಾಸನಂತೆ ಗಳಗನಾಥರು ಕನ್ನಡಿಗರ ಮನಮಾತನ್ನೇ ತಮ್ಮ ಕಾದಂಬರಿಗೆ ಅಳವಡಿಸಿಕೊಂಡಿದ್ದಾರೆ. ಅಂತೆಯೇ ಗಳಗನಾಥರ ಬೃಹತ್ ಕಾದಂಬರಿ ಸಾಹಿತ್ಯ ಕುಮಾರವ್ಯಾಸನ ಗದುಗಿನ ಗಂಡು ಭಾರತದ ಮಹಾಕಾವ್ಯವನ್ನು ನೆನಪಿಗೆ ತರುತ್ತದೆ. ಇಂತಹ ಸತ್ವಪೂರ್ಣ ಶಕ್ತಿಪೂರ್ಣ ಸಾಹಿತ್ಯ ಗಳಗನಾಥರದೇ ಒಂದು ವೈಶಿಷ್ಟ್ಯ.

ಕನ್ನಡ ಕಾದಂಬರಿ ಪ್ರಪಂಚದ ಹುಟ್ಟು ಯಾವಾಗ? ಎಲ್ಲಿ? ಯಾರಿಂದ? ಹೇಗೆ? ಎಂಬೆಲ್ಲ ಪ್ರಶ್ನೆಗಳು ಬರುತ್ತವೆ. ಗಳಗನಾಥರಲ್ಲಿ ಪರಾಕಾಷ್ಠೆಯನ್ನು ಪಡೆದ ಕನ್ನಡ ಕಾದಂಬರಿ ಪ್ರಪಂಚದ ಉಗಮವು ಚಿಕ್ಕದು ಅಸ್ಪಷ್ಟವು ಎಂದೇ ಹೇಳಬೇಕು. ಉತ್ತರ ಕರ್ನಾಟಕದ ಮಟ್ಟಿಗೆ ನಿಜವಾದ ಅರ್ಥದಲ್ಲಿ ಗಳಗನಾಥರೇ ಕನ್ನಡ ಕಾದಂಬರಿಯ ಜನಕರೆಂದು ಹೇಳಬೇಕು. ಉಡುಪಿಯ ನಂದಳಿಕೆ ಲಕ್ಷ್ಮೀನಾರಾಯಣಪ್ಪ (ಮುದ್ದಣ) ಒಂದು ಕಾದಂಬರಿಯನ್ನು ಅರ್ಧಮರ್ಧ ಬರೆದಿದ್ದನೆಂದು ಪ್ರತೀತಿ. ಕೆಂಪುನಾರಾಯಣನ 'ಮುದ್ರಾಮಂಜೂಷ'ದ ಕಥನರೀತಿ ಒಂದು ಬಗೆಯಿಂದ ಮೇಲ್ಪಂಕ್ತಿಯಾಯಿತೆನ್ನಬಹುದು. ಕನ್ನಡ ಗದ್ಯವನ್ನು ಕೆಂಪುನಾರಾಯಣ ಹದಗೊಳಿಸಿದ. "ಹಳೆಗನ್ನಡದ ಭಾಷೆಯ ಬಿರಿ ಕ್ರಮೇಣ ಸಡಿಲಾಗುತ್ತ ಸರಳತೆ ಹಾಗೂ ಹೃದಯಂಗಮತೆಯ ಕಡೆಗೆ ತಿರುಗುವದನ್ನು ಮೊಟ್ಟಮೊದಲಿಗೆ 'ಮುದ್ರಾಮಂಜೂಷ'ದಲ್ಲಿ ಕಾಣುತ್ತೇವೆ," ಎಂದು ಕೀರ್ತಿನಾಥ

ಕುರ್ತಕೋಟಿ ಅವರು ತಮ್ಮ ಕಾದಂಬರಿ ಇತಿಹಾಸ ಪ್ರಬಂಧದಲ್ಲಿ ಹೇಳಿದ್ದಾರೆ. ('ನಡೆದು ಬಂದ ದಾರಿ', ಸಂಪುಟ ೨, ಪುಟ ೧೨೮೧.)

ಕನ್ನಡ ಕಾದಂಬರಿಗೆ ಕಾದಂಬರಿ ಎಂಬ ಹೆಸರು ಬರುವದಕ್ಕೆ ಬಾಣನ ಕಾದಂಬರಿಯೇ ಕಾರಣ. ತುರಮುರಿಯವರ 'ಕನ್ನಡ ಕಾದಂಬರಿ'ಯು ಗದ್ಯ ಮುಂದಿನ ಕಾದಂಬರಿಗಳಿಗೆ ಮಾರ್ಗದರ್ಶಿಯಾಯಿತು, ಕಾದಂಬರಿ ಶೈಲಿಗೆ ಒಂದು ಮಾದರಿ ಯೆನಿಸಿತು.

ಸ್ವತಂತ್ರ ಸಾಮಾಜಿಕ ಕಾದಂಬರಿಗೆ ಉಗಮಸ್ಥಾನ ದಕ್ಷಿಣ ಕನ್ನಡ ಜಿಲ್ಲೆಯೇ ಎನ್ನಬೇಕು. 'ರೋಹಿಣಿ', 'ಇಂದಿರಾಬಾಯಿ', 'ವಾಗ್ದೇವಿ' ಎಂಬ ಕಾದಂಬರಿ ಗಳು ಈ ಮಾತಿಗೆ ಸಾಕ್ಷಿ ನುಡಿಯುತ್ತವೆ. ೨೫೦ ಪುಟಗಳ ಸಾಮಾಜಿಕ ಕಾದಂಬರಿ ಯಾದ 'ಇಂದಿರಾಬಾಯಿ' ಅಥವಾ 'ಸದ್ಧರ್ಮವಿಜಯ'ವು ಸಮಕಾಲೀನ ಸಾರಸ್ವತಸಮಾಜದ ಜೀವನಚಿತ್ರಣವಾಗಿದೆ. ತಮ್ಮ ಕಾಲದಲ್ಲಿ ನಡೆದ ಘಟನೆ ಗಳನ್ನೇ ಗುಲ್ವಾಡಿ ವೆಂಕಟರಾಯರು ಈ ಕಾದಂಬರಿಯಲ್ಲಿ ಹೆಣೆದಿದ್ದಾರೆ.

ಬೋಳಾರ ಬಾಬೂರಾಯರ 'ವಾಗ್ದೇವಿ'ಯು ಇಂಥದೇ ನಡೆದ ಸಂಗತಿ ಗಳನ್ನು ಆಧರಿಸಿದ ಸಮಕಾಲೀನಪ್ರಜ್ಞೆಯ ಒಂದು ವಿಶಿಷ್ಟ ಸಮಾಜದ ವಿಡಂಬನೆ ಯಾಗಿದೆ. ಕುಮುದಪುರದ ಶ್ರೀಪಾದಂಗಳಾದ ಚಂಚಲನೇತ್ರರು ಒಂದು ದಿನ ಅಲ್ಲಿಯ ಕಾಳಿಕಾ ನದಿಯ ತೀರದಲ್ಲಿ ಸಂಧ್ಯಾವಂದನೆ ಮಾಡುತ್ತಿರುವಾಗ ಅದೇ ತೀರದ ಇನ್ನೊಂದೆಡೆಯಲ್ಲಿ ಸ್ನಾನ ಮಾಡುತ್ತಿದ್ದ ರೂಪಸಿ ವಾಗ್ದೇವಿ ಕಂಗೊಳಿಸು- ತ್ತಾಳೆ. ಸಾಕ್ಷಾತ್ ಅಜನ ರಾಣಿಯೇ ಆಕೆ. ಶ್ರೀಪಾದಂಗಳ ಪೂರ್ವಾಶ್ರಮದಲ್ಲಿ ಅವರ ಅಣ್ಣನಿಗೆ ಈಕೆ ನಾದಿನಿ. ಬಡ ಬ್ರಾಹ್ಮಣನ ಕೈ ಹಿಡಿದು ಬದುಕಿನ ಹೋರಾಟದಲ್ಲಿ ಸೋತು ಬೆಂದವಳು. ಮದುವೆಯಾಗಿದ್ದರೂ ಮಕ್ಕಳಾಗಿರಲಿಲ್ಲ. ಚಂಚಲನೇತ್ರರು ಇವಳ ಚೆಲುವಿಗೆ ಚಂಚಲಚಿತ್ತರಾಗುತ್ತಾರೆ. ಆಕೆಯನ್ನು ಹೇಗಾದರೂ ಮಾಡಿ ಪಡೆಯಬೇಕೆಂದು ಹೊಂಚು ಹಾಕುತ್ತಾರೆ. ವೆಂಕಟಪತಿ ಶ್ರೀಪಾದಂಗಳ ಪಾರುಪತ್ಯ ಗಾರ. ಈ ಪಾರುಪತ್ಯಗಾರನ ಮುತುವರ್ಜಿಯಿಂದ ಬಡವರಾದ ವಾಗ್ದೇವಿಯ ತಂದೆತಾಯಿಗಳು, ಆಕೆಯ ಮುಗ್ಧ ಪತಿಯು ಮಠದಲ್ಲಿ ಆಶ್ರಯ ಪಡೆದು ಇರುತ್ತಾರೆ. ವಾಗ್ದೇವಿಯ ತಂದೆಗೂ ಗಂಡನಿಗೂ ಮಠದಲ್ಲಿ ಅವರವರ ಯೋಗ್ಯತಾನುಸಾರವಾಗಿ ಸೇವಾಕೈಂಕರ್ಯ ದೊರೆಯುತ್ತದೆ. ಶ್ರೀಪಾದಂಗಳ ರಸಿಕತೆಯನ್ನು ತಣಿಸಲು ಅವರ ಸೇವೆಗೆ ಅಣಿಯಾಗುವ ಸಂದರ್ಭವನ್ನು ಸಾಧಿಸಿ ಆಕೆ ಪಟ್ಟು ಹಿಡಿದು ಸ್ವಾಮಿಗಳಿಂದ ವಚನ ತೆಗೆದುಕೊಳ್ಳುತ್ತಾಳೆ. ತನ್ನ ಗರ್ಭದಲ್ಲಿ ಪುತ್ರನು ಜನಿಸಿದರೆ ಆ ಮಗುವೇ ಮುಂದಿನ ಸಂನ್ಯಾಸ ಪಟ್ಟಕ್ಕೆ ಬಾಧ್ಯಸ್ಥನಾಗಬೇಕು. ವಾಗ್ದೇವಿಯ ಸಮಾಗಮ ವೊಂದೇ ಗುರಿಯಾಗಿದ್ದರಿಂದ ಅವರು ಅನಿವಾರ್ಯವಾಗಿ ಈ ಕರಾರಿಗೆ ಒಪ್ಪಿಕೊಳ್ಳ ಬೇಕಾಗುತ್ತದೆ. ಅಂತು ಕಡು ಬಡವಂ ಕಡವರನೆಡಹಿದಂತೆ ವಾಗ್ದೇವಿ ಭಾಗ್ಯವನ್ನೇ ಎಡವಿ ಸಂನ್ಯಾಸಿಯ ಮಠವನ್ನು ಪ್ರವೇಶಿಸಿದಂತಾಗುತ್ತದೆ. ಮಠದಲ್ಲಿ ಸಂಸ್ಕೃತ ಪಾಠ

ಹೇಳುತ್ತಿದ್ದ ವೇದವ್ಯಾಸನ ವೃತ್ತಿಗೆ ಈ ಹೊಸಬರ ಆಗಮನದಿಂದ ಅರ್ಧಚಂದ್ರ ಒದಗುತ್ತದೆ. ವೇದವ್ಯಾಸ ಪ್ರತೀಕಾರದ ಸೇಡಿನಿಂದಲೇ ಹೊರಬೀಳುತ್ತಾನೆ. ಊರಲ್ಲೆಲ್ಲ ಕುಜುಕುಜು ಗುಜುಗುಜು. ಈ ಮಠಕ್ಕೆ ಹೊಂದಿಕೊಂಡ ಇತರ ನಾಲ್ಕು ಮಠದವರಿಗೂ ಈ ವಿಷವಾರ್ತೆ ಮುಟ್ಟುತ್ತದೆ. ಆದರೆ ಅವರೆಲ್ಲರೂ ಚಂಚಲನೇತ್ರರ ಕುಲದವರೆ. ಅವರ ಸಹಾನುಭೂತಿ ಶ್ರೀಪಾದಂಗಳ ಎಡೆಗೆ. ವಾಗ್ದೇವಿ ಹೊತ್ತು ಬಂದಂತೆ ಸಿಕ್ಕವರ ಕಾಲು ಹಿಡಿದು ಸಿಕ್ಕಸಿಕ್ಕವರನ್ನು ಅಂತರಂಗವಾಗಿ ಒಲಿಸಿಕೊಂಡು ತನ್ನ ವಾಕ್ಚಾತುರ್ಯದಿಂದ ಸೌಂದರ್ಯದ ಸಮ್ಮೋಹನಾಸ್ತ್ರದಿಂದ ಎಲ್ಲ ಪ್ರತಿಸ್ಪರ್ಧಿಗಳನ್ನೂ ಜಯಿಸಿಬಿಡುತ್ತಾಳೆ. ಬರಬರುತ್ತ ಚಂಚಲನೇತ್ರರಿಗೆ ವಾತಾವರಣವು ವಿರುದ್ಧವಾಗಿ ವಿಷಮವಾಗಿ ಪರಿಣಮಿಸುತ್ತದೆ. ವಾಗ್ದೇವಿಯ ಉದರದಲ್ಲಿ ಗಂಡು ಮಗುವೊಂದು ಜನಿಸುತ್ತದೆ. ಮಗು ದೊಡ್ಡದಾಗುತ್ತದೆ. ಉಪನಯನ ಸಮಾರಂಭ ವಿಜೃಂಭಣೆಯಿಂದ ಜರುಗುತ್ತದೆ. ಬಂದ ವಿಘ್ನಗಳನ್ನೆಲ್ಲಾ ವಾಗ್ದೇವಿ ಹೇಗೊ ಸಾವರಿಸಿಕೊಂಡು ನಡೆಯುತ್ತಾಳೆ. ಚಂಚಲನೇತ್ರರನ್ನು ವಾರ್ಧಕ್ಯವು ಆವರಿಸುತ್ತದೆ. ತನ್ನ ಮಗನನ್ನು ಮುಂದಿನ ಶ್ರೀಪಾದ ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಆಗ್ರಹ ತೊಡುತ್ತಾಳೆ. ಚಂಚಲನೇತ್ರರಿಗೆ ಸುತ್ತುಮುತ್ತಲಿನವರ ಭಯ, ಸಮಾಜದ ಭಯ. ನಿರಾಶೆ ಹೊಂದಿದ ವಾಗ್ದೇವಿ ಮಠದಿಂದ ದೂರವಾಗಿರುತ್ತಾಳೆ. ಕೊನೆಗೆ ಪಾರುಪತ್ಯಗಾರ ವೆಂಕಟಪತಿಯ ಮಧ್ಯಸ್ತಿಕೆಯಿಂದಾಗಿ ಶ್ರೀಪಾದಂಗಳು ತಮ್ಮಿಂದ ವಾಗ್ದೇವಿಯಲ್ಲಿ ಜನಿಸಿದ ಸೂರ್ಯನಾರಾಯಣನಿಗೆ ಪಟ್ಟಗಟ್ಟುತ್ತಾರೆ. ಇನ್ನೇನು ಸ್ವರ್ಗಕ್ಕೆ ಮೂರೇ ಗೇಣು ಎನ್ನುವಷ್ಟರಲ್ಲಿ ವಾಗ್ದೇವಿಗೆ ಮತ್ತೊಂದು ಆಪತ್ತು ಕಾದಿತ್ತು. ಆಕೆಯ ಸುತ್ತುಮುತ್ತಲೂ ಒಂದು ಅನಿಷ್ಟ ವಾತಾವರಣ ಪರಿಸರವೇ ಪಸರಿಸಿತ್ತು. ವಾಗ್ದೇವಿಯಂತೆ ಆಕೆಯ ತಂಗಿ ಶೃಂಗಾರಿಯೂ ಜಾಣೆಯಾಗಿ ಮನಬಂದ ರೀತಿಯಲ್ಲಿ ಸ್ವಾರ್ಥಳಾಗಿ ಸ್ವಸುಖಲೋಲುಪಳಾಗಿ ಬದುಕು ಮಾಡತೊಡಗಿದಳು. ದೊಡ್ಡವನಾಗಿ ಬೆಳೆದಂತೆ ಸೂರ್ಯನಾರಾಯಣನಿಗೆ ತಾಯಿಯ, ಚಿಕ್ಕಮ್ಮನ ಅವ್ಯಾಪಾರದ ಅರಿವು ಆಗತೊಡಗಿತು. ಪಟ್ಟಕ್ಕೆ ಬಂದ ಸೂರ್ಯನಾರಾಯಣನಿಗೆ ತಿಳಿಯದಂತೆಯೇ ಮಠದ ಸಂಪತ್ತೆಲ್ಲವೂ ದುಷ್ಟರ ಕೈವಶವಾಗತೊಡಗಿತ್ತು. ಈ ಪರಿಸ್ಥಿತಿಯಲ್ಲಿ ಸೂರ್ಯನಾರಾಯಣನು ಒಬ್ಬ ಶೂದ್ರಳ ಮೋಹಕ್ಕೆ ಬಿದ್ದು ಹೇಳದೇಕೇಳದೇ ಪಲಾಯನ ಹೇಳುತ್ತಾನೆ. ವಾಗ್ದೇವಿಗೆ ಬಾಳು ವ್ಯರ್ಥವೆನಿಸಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಅಣಿಯಾಗುತ್ತಾಳೆ. ಇನ್ನೇನು ಜಲಸಮಾಧಿ ಹೊಂದಬೇಕು, ಅಷ್ಟರಲ್ಲಿ ಒಬ್ಬ ಯುವಕನು ಬಂದು ಆಕೆಯನ್ನು ಉದ್ಧರಿಸುತ್ತಾನೆ. ಆತನೇ ಸೂರ್ಯನಾರಾಯಣ.

ಇದು ಆ ಸ್ವತಂತ್ರ ಸಾಮಾಜಿಕ ಕಾದಂಬರಿ. ಕಥೆಯ ತುಂಬೆಲ್ಲ ಅವ್ಯಾಪಾರ ಅನೀತಿ ಭ್ರಷ್ಟಾಚಾರ ಇವೇ ತಾಂಡವವಾಡಿವೆ. ಮಠದ ಸಂನ್ಯಾಸಿಗಳ ಅನೀತಿಯನ್ನು ಇಷ್ಟೊಂದು ಧೈರ್ಯವಾಗಿ ಬಯಲಿಗೆಳೆದ ಬೋಳಾರರ ಪ್ರಗತಿಶೀಲತೆಯನ್ನು ಮೆಚ್ಚ

ಬೇಕಾಷ್ಟೆ. ಈ ಕಾದಂಬರಿ ಪ್ರಾದೇಶಿಕ ಬಳಕೆಯ ಭಾಷೆ ದೇಶೀಯ ಶೈಲಿಯ ಸೊಗಸು ಇವುಗಳಿಂದಾಗಿ ಆಪ್ಯಾಯಕರವೆನಿಸುತ್ತದೆ. ಅಲ್ಲಲ್ಲಿ ಗ್ರಾಂಪಿಯ ಮಾತುಗಳು ಮಿಂಚುತ್ತವೆ. ಈ ಕಾದಂಬರಿ ತನ್ನದೇ ಆದ ಗುಣಾವಗುಣಗಳಿಂದ ವೈಶಿಷ್ಟ್ಯಪೂರ್ಣ ವಾಗಿದೆ. ಬೇಕಾದಂತಹ ಅಶ್ಲೀಲಕ್ಕೆ ಅಸ್ಪದವಿದ್ದರೂ ಕಾದಂಬರಿಕಾರರು ಕೀಳು ಅಭಿರುಚಿಯನ್ನು ಎಲ್ಲಿಯೂ ತೋರಗೊಟ್ಟಿಲ್ಲ. ಅವರ ಕಣ್ಣ ಮುಂದಿರುವದು ಶಿಷ್ಟಸಮಾಜದ ಅಸಡ್ಡೆಯನ್ನು ಬಯಲಿಗೆಳೆಯುವದು. ನೇರವಾದ ವಿಡಂಬನೆ, ನೇರವಾದ ವ್ಯಂಗ್ಯ, ನೇರವಾದ ಶೈಲಿ; ಶೈಲಿಯಲ್ಲಿ ರಸವಂತಿಕೆ ಮಾತ್ರ ಕಡಿಮೆ.

ಕನ್ನಡ ಕಾದಂಬರಿಗೆ ವ್ಯವಸ್ಥಿತ ಸ್ಥಾನಮಾನಗಳನ್ನು ಕಲ್ಪಿಸಿ ಕೊಟ್ಟವ ರೆಂದರೆ ಗಳಗನಾಥರು ಮತ್ತು ಅವರ ಸಮಜೋಡಿಯಾಗಿ ಬಿ. ವೆಂಕಟಚಾರ್ಯರು. ಉಭಯತರಿಗೂ ಮೂಲ ಹರಿ ನಾರಾಯಣ ಆಪ್ಟೆ ಮತ್ತು ಬಂಕಿಮಚಂದ್ರರು. ಆಪ್ಟೆಯವರು ಮರಾಠಿ ಕಾದಂಬರಿ ಪ್ರಪಂಚದಲ್ಲಿ ಮಾಡಿದ ಸೇವೆಯನ್ನೇ ಬಂಕಿಮ-ಚಂದ್ರರು ಬಂಗಾಲಿಯಲ್ಲಿ ಮಾಡಿದರು. ಆ ಕಾಲಕ್ಕೆ ಇಂಗ್ಲೀಷಿನ ಸರ್ ವಾಲ್ಟರ್ ಸ್ಕಾಟನ ಐತಿಹಾಸಿಕ ಕಾದಂಬರಿಗಳು ನಮ್ಮಲ್ಲಿ ಲೋಕಪ್ರಿಯವಾಗಿದ್ದವು. ಅಪ್ಟೆ ಮತ್ತು ಬಂಕಿಮರಿಗೆ ಸ್ಕಾಟನ ಕಾದಂಬರಿಗಳು ಮಾದರಿಯಾಗಿದ್ದವು. "ಬಂಗಾಲ ಹಾಗೂ ಮಹಾರಾಷ್ಟ್ರಗಳಲ್ಲಿ ತಮ್ಮ ಮನ್ವಂತರವನ್ನು ಪ್ರಾರಂಭಿಸಿದ ಈ ಇಬ್ಬರು ಕಾದಂಬರಿಕಾರರು ಕನ್ನಡ ಕಾದಂಬರಿಗೂ ಪ್ರವರ್ತಕರಾದರು. ಆದ್ದರಿಂದ ಈ ಇಬ್ಬರ ಕೃತಿಗಳಲ್ಲಿ ಆಯಾ ಪ್ರಾಂತಗಳಲ್ಲಿ ಪ್ರಚುರವಾಗಿದ್ದ ಲೇಖನ ಶೈಲಿ ಒಳನುಗ್ಗಿದ್ದರೆ ಆಶ್ಚರ್ಯವೇನಲ್ಲ. ವೆಂಕಟಾಚಾರ್ಯರು ಸರಳವಾದ ಕನ್ನಡವನ್ನೇ ಉಪಯೋಗಿಸಿದರು. ಆದರೂ ಅವರ ಸಂಸ್ಕೃತಭೂಯಿಷ್ಟವಾದ ಭಾಷೆಗೆ ವಂಗಭಾಷೆಯಲ್ಲಿ ಆಗಿನ ಕಾಲಕ್ಕೆ ರೂಢವಾಗಿದ್ದ ಒಂದು ಕೃತ್ರಿಮವಾದ ಕೋಮಲತೆ ಇದೆ. 'ಆನಂದಮಠ', 'ವಿಷವೃಕ್ಷ' ಮೊದಲಾದ ಕಾದಂಬರಿಗಳ ಲ್ಲಿಯ ಪ್ರಕೃತಿವರ್ಣನೆ ಹಾಗೂ ಸ್ತ್ರೀವರ್ಣನೆಗಳು ಸಂಪ್ರದಾಯಬದ್ಧವಾಗಿ ಕೇವಲ ಶಬ್ದಪ್ರೌಢಿಮೆಯಿಂದಲೇ ಶೋಭಾಯಮಾನವಾಗಿವೆ. ಆದರೆ ಕುತೂಹಲ ಜನಕವಾದ ಕಥೆಯ ವಿಸ್ತಾರ ಸನ್ನಿವೇಶಗಳ ಚಮತ್ಕೃತಿ ಈ ಕಾದಂಬರಿಗಳ ಒಳ್ಳೆಯ ಲಕ್ಷಣಗಳಾಗಿವೆ. 'ದೇವಿ ಚೌಧುರಾಣಿ'ಯಂಥ ಕೃತಿಗಳು ಸ್ವತಂತ್ರ-ವೆನ್ನುವಷ್ಟು ಜೀವಂತವಾಗಿವೆ. ಆದರೆ ಸಂಭಾಷಣೆ ವಾತಾವರಣ ಇವುಗಳಲ್ಲಿಯ ವಿದೇಶಿಯತೆಯ ಪ್ರಭಾವ ಎಲ್ಲ ಕಾದಂಬರಿಗಳಲ್ಲಿಯೂ ಅನುಭವಕ್ಕೆ ಬರುತ್ತದೆ. ಕಥಾನಕದ ಹೊಸತನ ಇತಿಹಾಸದ ಅದ್ಭುತರಮ್ಯತೆ ಗದ್ಯಕ್ಕೆ ಸಹಜವಾಗಿರುವ ಆತ್ಮೀಯತೆ ಇವು ಜನರ ಮನಸ್ಸನ್ನು ಸೂರೆಗೊಂಡದ್ದರಿಂದ ಈ ಕೊರತೆಗಳು ಆಗಿನ ಕಾಲಕ್ಕೆ ಈಗಿನಷ್ಟು ಪ್ರಮುಖವಾಗಿ ಕಂಡುಬಂದಿರಲಿಕ್ಕಿಲ್ಲ," ಎಂದು ಕೀರ್ತಿನಾಥ ಕುರ್ತಕೋಟಿಯವರು ಉಲ್ಲೇಖಿಸಿದ್ದಾರೆ. ('ನಡೆದು ಬಂದ ದಾರಿ', ಸಂಪುಟ ೨, ಪುಟ ೧೨೮೨.)

‘ಆನಂದಮಠ’ವು ಸಂನ್ಯಾಸಿಗಳ ಸ್ವಾತಂತ್ರ್ಯಸಂಗ್ರಾಮವನ್ನು ಚಿತ್ರಿಸುತ್ತದೆ. ಈ ಕಾದಂಬರಿಯ ಪ್ರಭಾವದಿಂದಲೇ ಮಹರ್ಷಿ ಅರವಿಂದರು ತಮ್ಮ ‘ಕಮಲ’ ಮತ್ತು ‘ಖಡ್ಗ’ ಎಂಬ ಕ್ರಾಂತಿಕಾರಿ ಚಳುವಳಿಯನ್ನು ಪ್ರಾರಂಭಿಸಿದರಂತೆ. ರಾಜಕಾರಣಿಯು ಸಂನ್ಯಾಸಿಯಂತೆ ತ್ಯಾಗಿಯಾಗಿರಬೇಕು ಎಂದು ಅರವಿಂದರು ನುಡಿದ ಮಾತು ಎಂದೆಂದಿಗೂ ಮನನೀಯವಾದುದು. ಬಂಕಿಮಚಂದ್ರರ ವಂದೇಮಾತರಂ ಗೀತವು ಇದೇ ಕಾದಂಬರಿಯಲ್ಲಿ ಮೊದಲು ಕಾಣಿಸಿಕೊಂಡು ಆಮೇಲೆ ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ರಾಷ್ಟ್ರಗೀತೆಯ ಉನ್ನತಿಯನ್ನು ಮುಟ್ಟಿತು. ಇಂಗ್ಲೀಷ್ ಚರಿತ್ರಕಾರರು ‘ಆನಂದಮಠ’ ಕಾದಂಬರಿಯನ್ನು ಸಂನ್ಯಾಸಿಗಳ ದಂಗೆ ಎಂದು ಕರೆದಿದ್ದಾರೆ. ಸಂನ್ಯಾಸಿಗಳೆಂದರೆ ಬಂಕಿಮರಿಗೆ ಬಹಳ ಗೌರವವಿತ್ತು. ‘ದೇವಿ ಚೌಧುರಾಣಿ’ ವಿಶೇಷ ಲೋಕಪ್ರಿಯತೆಯನ್ನು ಗಳಿಸಿದ ಇನ್ನೊಂದು ಐತಿಹಾಸಿಕ ಕಾದಂಬರಿ. ಬಿ. ವೆಂಕಟಾಚಾರ್ಯರು ಇದನ್ನು ಕನ್ನಡಕ್ಕೆ ಭಾಷಾಂತರಿಸಿದಾಗ ಆಗಿನ ಶಾಲೆಕಾಲೇಜುಗಳ ಯುವಕರು ಮುಗ್ಧರಾಗಿ ಇದನ್ನು ಓದುತ್ತಿದ್ದರಂತೆ.

ಗಳಗನಾಥರಂತೆ ವೆಂಕಟಾಚಾರ್ಯರು ಮೂಲಸಾಹಿತ್ಯದೊಂದಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ತೆಗೆದುಕೊಂಡಿಲ್ಲ. ಅದೇ ಅವರ ಅನುವಾದದ ಗುಣದೋಷವೆನ್ನಬಹುದು. ಇದರಿಂದಾಗಿ ಹಲವೆಡೆಗಳಲ್ಲಿ ಮೂಲದ ಶೈಲಿ ಕನ್ನಡದಕ್ಕೆ ಬಂದಾಗ ಒಂದಿಷ್ಟು ನೀರಸವೂ ನಿಕೃಷ್ಟವೂ ಆದಂತೆ ತೋರುತ್ತದೆ. ‘ಕಪಾಲಕುಂಡಲ’ ಶುದ್ಧ ಸಾಮಾಜಿಕವೂ ಅಲ್ಲದ, ಐತಿಹಾಸಿಕವೂ ಅಲ್ಲದ ಆಧ್ಯಾತ್ಮಿಕವೂ ಅಲ್ಲದ ಒಂದು ಅತಿರಂಜಿತ ಮನೋರಂಜನೆ. ಇದರಲ್ಲಿ ಕಥೆಯ ಸ್ವಾರಸ್ಯವೇ ನಮ್ಮನ್ನು ಕುತೂಹಲದಿಂದ ಕೊಂಡೊಯ್ಯುತ್ತದೆ. ಕಪಾಲಕುಂಡಲೆ ನವಕುಮಾರನೆಂಬ ತರುಣನನ್ನು ಪ್ರೇಮಿಸಿ ಅದುವರೆಗೂ ತನ್ನನ್ನು ಬಂಧಿಸಿದ್ದ ಕಾಪಾಲಿಕನ ಅಂಕೆಯಿಂದ ದೂರವಾಗಲು ಪ್ರಯತ್ನಪಟ್ಟಿದ್ದೆಲ್ಲ ಅಂತಿಮದಲ್ಲಿ ವ್ಯರ್ಥವಾಗಿ ಪ್ರಣಯಿಗಳು ದುರಂತ ಮರಣವನ್ನು ಅಪ್ಪುತ್ತಾರೆ. ವೆಂಕಟಾಚಾರ್ಯರು ಈ ಕಥೆಯನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ವೆಂಕಟಾಚಾರ್ಯರರು ಗಳಗನಾಥರಂತೆ ವಾಚಕರೊಂದಿಗೆ ಯಾವ ಸಲುಗೆಯನ್ನೂ ಬೆಳೆಸಲು ಬರುವದಿಲ್ಲ. ಬಿ. ವೆಂಕಟಾಚಾರ್ಯರು ಬಂಕಿಮರ ಕಾದಂಬರಿಗಳಂತೆ ನಸಿಲಾಲ ವಂದ್ಯೋಪಾಧ್ಯಾಯರ ಕಾದಂಬರಿಗಳನ್ನೂ ಅನುವಾದಿಸಿದ್ದಾರೆ. ಈ ದೆಸೆಯಲ್ಲಿ ‘ಅಮೃತ ಪುಲಿನ’ ಎಂಬ ಐತಿಹಾಸಿಕ ಕಾದಂಬರಿ ಸುಂದರವಾದ ತಂತ್ರದಿಂದ ಕೂಡಿದೆ. ಅದಕ್ಕೆ ಮನೋಹರವಾದ ವರ್ಣನಾತ್ಮಕ ಭಾಷಾಶೈಲಿಯ ಬೆಡಗೂ ಕೂಡಿ ಕಾದಂಬರಿ ಹೆಚ್ಚು ಸ್ವಾರಸ್ಯವಾಗಿದೆ. ಮೇವಾಡದ ಪ್ರತಾಪಸಿಂಹನ ವೀರತ್ಯಾಗದ ಕಥೆ ಇಲ್ಲಿ ನಿರೂಪಿತವಾಗಿದೆ. ಹುಡುಗ ಹುಡಗಿಯರಿಬ್ಬರು (ಅಜೇಯ ಮತ್ತು ಹಿರಣೆ) ತಂತಮ್ಮ ನವಿಲಿಗಾಗಿ ಚರ್ಚಿಸುವ ಸಂಭಾಷಣೆಯ ಉಪಕ್ರಮಣಿಕೆ ಸ್ವಾರಸ್ಯಕರವಾಗಿದೆ. “ಈಗ್ಗೆ ಮುನ್ನೂರ ವರ್ಷಕ್ಕೆ ಹಿಂದೆ ಬೇಸಿಗೆ ಕಾಲದಲ್ಲೊಂದು

ದಿನ ಸೂರ್ಯದೇವನು ಅರಾವಳಿಗಿರಿಯ ಪಾರ್ಶ್ವದಲ್ಲಿ ಅಸ್ತನಾಗುತ್ತಿದ್ದನು" ಎಂದು ಸುಂದರ ಸಂಧ್ಯಾವರ್ಣನೆಯೊಂದಿಗೆ ಆರಂಭವಾಗುವ ಕಾದಂಬರಿ ಅಷ್ಟೇ ಕಾವ್ಯ-ಮಯವಾಗಿ ಮುಕ್ತಾಯವಾಗುತ್ತದೆ. "ಆ ಪೂರ್ಣಾನದಿಯು ಈಗಲೂ ಅದೇ ಸ್ಥಳದಲ್ಲಿ ಹಾಗೇ ಅಮೃತೋಚ್ಛ್ವಾಸದಿಂದ ಸರಸವಾಡುತ್ತದೆ. ಈಗಲೂ ಅದರ ತರಂಗಭಂಗದಲ್ಲಿ ಹಾಗೆ ಅಮೃತ ರಾಸಿಯು ಉಕ್ಕುತ್ತದೆ.....ಈಗ (ಮುನ್ನೂರು ವರ್ಷಗಳ ನಂತರ, ಆ ಗಿರಿದುರ್ಗವೂ ಇಲ್ಲ, ಆ ಪರ್ಣಕುಟೀರವೂ ಇಲ್ಲ. ಅಲ್ಲಿ ಈಗ ದೊಡ್ಡದೊಂದು ಗ್ರಾಮವಿದೆ. ಅದರ ಹೆಸರು ಅಮೃತಪುಲಿನ.) ಎಂದು 'ಅಡವಿಯ ಹುಡುಗಿ' ಸಾಮಾಜಿಕ ಕಥೆಯಾದರೂ ಅದ್ಭುತರಮ್ಯತೆಯಿಂದ ಕೂಡಿದೆ. ಒಬ್ಬ ಶ್ರೀಮಂತ ಅಧಿಕಾರಿಯ ಮಗಳು ಇನ್ನೂ ಮಗುವಿದ್ದಾಗಲೇ ಪ್ರವಾಸದಲ್ಲಿ ತಪ್ಪಿಸಿಕೊಂಡು ದರೋಡೆಖೋರರ ಪಾಲಾಗಿ ಮುಂದೆ ಅತ್ಯಂತ ಸಾಹಸಮಯ ಪರಿಸ್ಥಿತಿಯನ್ನೆದುರಿಸಿ ತನ್ನ ಹಡೆದ ಮನೆಯನ್ನು ಸೇರುತ್ತಾಳೆ. ಇದರಲ್ಲಿ ವೆಂಕ-ಟಾಚಾರ್ಯರ ಶೈಲಿಯ ಲಾಲಿತ್ಯ, ಕೆಚ್ಚು ಎರಡೂ ಸ್ಫುಟವಾಗಿ ಮೂಡಿವೆ.

ವಾಸ್ತವಪೂರ್ಣ ಕನ್ನಡ ಸ್ವತಂತ್ರ ಸಾಮಾಜಿಕ ಕಾದಂಬರಿಗಳೆಂದರೆ ಬೋಳಾರ ಬಾಬೂರಾಯರ 'ವಾಗ್ದೇವಿ', ಎಮ್. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯಾ' ಮತ್ತು 'ಮುಸುಕು ತೆಗೆಯೇ ಮಾಯಾಂಗನೆ.' ಕೆರೂರ ವಾಸುದೇವಾಚಾರ್ಯರ 'ಇಂದಿರೆ' ಇದೇ ಸಾಲಿಗೆ ಸೇರುತ್ತದೆ. 'ಮುಸುಕು ತೆಗೆಯೇ ಮಾಯಾಂಗನೆ' ಒಂದು ನಡೆದ ಸಂಗತಿ. ಅದನ್ನು ತಮ್ಮ ಸೋದರಮಾವ ನಿಂದ ಕೇಳಿ ಕಾದಂಬರಿಯಾಗಿ ನಿರ್ಮಿಸಿದೆನೆಂದು ಕಾದಂಬರಿಕಾರರು ಮುನ್ನುಡಿ ಯಲ್ಲಿ ಹೇಳುತ್ತಾರೆ. ಇದು ಐತಿಹಾಸಿಕ ಹಿನ್ನೆಲೆಯ ಸ್ವಲ್ಪ ಪತ್ತೇದಾರಿ ಸ್ವಲ್ಪ ಸಾಮಾಜಿಕ ವಾತಾವರಣಗಳ ಸಂಮಿಶ್ರಣವಾಗಿದೆ.

ವಾಸುದೇವಾಚಾರ್ಯರ 'ಇಂದಿರೆ' ಪ್ರಕಟವಾದಾಗ (೧೯೧೦) ಬಹುಜನರ ಮನಸ್ಸನ್ನು ಸೆಳೆದಿತ್ತು. ಇದೊಂದು ಸುಂದರವಾದ ಸಾಮಾಜಿಕ ಚಿತ್ರಣ. ಇಲ್ಲಿಯ ಪಾತ್ರಗಳು ಜೀವಂತವಾಗಿವೆ. ಸಮಾಜದಲ್ಲಿ ನಾವು ನೋಡಬಹುದಂಥ ವ್ಯಕ್ತಿಗಳು ಮದ್ದೂರ ನಟೇಶ, ಬಾಷ್ಕಳಪಂತರಂಥ ವ್ಯಕ್ತಿಗಳು ವಿಶೇಷ ಮನೋರಂಜಕ ರೆನಿಸುತ್ತಾರೆ. ಕಾದಂಬರಿಯಲ್ಲಿ ಶೃಂಗಾರ ಹಾಸ್ಯ ವಿಡಂಬನೆಗಳು ಹೊನಲಾಗಿ ಸೂಸಿವೆ. ಅಲ್ಲಲ್ಲಿ ಸುಂದರವಾದ ಪ್ರಕೃತಿವರ್ಣನೆ ಕಾದಂಬರಿಗೆ ಒಳ್ಳೆಯ ಕಳೆಯನ್ನು ತಂದಿದೆ. ವಾಸುದೇವಾಚಾರ್ಯರ ಶೈಲಿ ಕನ್ನಡದ ಕಂಪು ಕೆಚ್ಚುಗಳನ್ನೊಳ-ಗೊಂಡಿದೆ. ಲಾಲಿತ್ಯ ಬಿಗುಹು ಎರಡೂ ಅವರ ಶೈಲಿಯ ವೈಶಿಷ್ಟ್ಯಗಳು. ವಾಸು-ದೇವಾಚಾರ್ಯರು 'ಯದು ಮಹಾರಾಜ', 'ಔರಂಗಜೇಬ'ಗಳಂತಹ ಸುಂದರ ಐತಿಹಾಸಿಕ ಕಾದಂಬರಿಗಳನ್ನೂ ಬರೆದಿದ್ದಾರೆ. ಈ ಎರಡೂ ಕಾದಂಬರಿಗಳಲ್ಲಿ ಅಭಿ-ವ್ಯಕ್ತವಾದ ಇವರ ಐತಿಹಾಸಿಕ ಪ್ರಜ್ಞೆ ಪ್ರಶಂಸನೀಯವಾದದ್ದು. ಶಹಾಜಹಾನ ಬಾದಶಹನಿಂದ ಸಿಂಹಾಸನವನ್ನು ಆಕ್ರಮಿಸಿಕೊಳ್ಳಲು ಬಂಧುದ್ರೋಹ ಬಗೆದು

ಕುಟಿಲ ಕಾರಸ್ಥಾನವನ್ನು ಹೂಡಿ ಹೊಂಚು ಸಂಚುಗಳಿಂದ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಔರಂಗಜೇಬನ ಪಾತ್ರ ಅತ್ಯಂತ ಮಾರ್ಮಿಕವಾಗಿ ಮೂಡಿ ಬಂದಿದೆ. 'ಔರಂಗಜೇಬ' ಕಾದಂಬರಿ ವಾಸುದೇವಾಚಾರ್ಯರ ಕಲ್ಪನಾಶಕ್ತಿ ಪ್ರತಿಭಾ ಶಕ್ತಿಗಳಿಗೆ ನಿದರ್ಶನವಾಗಿದೆ. ಇದರಲ್ಲಿ ಬಾದಶಹನ ಅರಮನೆ ಅಂತಃಪುರಗಳ ವರ್ಣನೆ ದರ್ಬಾರಿನಲ್ಲಿ ಕೆಳಗಿನವರು ಮೇಲಿನವರನ್ನು ಸಂಬೋಧಿಸುವ ರೀತಿ ರಾಜಸಭೆಯ ವರ್ಣನೆ ಇವೆಲ್ಲ ಯುಕ್ತವಾಗಿ ಬಂದಿವೆ. ಬಾದಶಹನ ದರ್ಬಾರಿನಲ್ಲಿ ಪ್ಯಾರಾಜಾನಳ ನೃತ್ಯ ಗಾಯನಗಳ ವರ್ಣನೆಯಂತೂ ಮನೋಹರವಾಗಿದೆ. "ರೂಪಸಂಪನ್ನೆಯಾದ ಆ ನವತರುಣಿಯು ಮಂಜುಳವಾದ ಸ್ವರ ತೆಗೆದು 'ಆಯಿರೆ ಸಬ ಗೋಕುಲನ ಬನ ಬನ' ಎಂದು ಹಾಡುತ್ತ ಬಹು ಲಲಿತವಾದ ಪದ ವಿನ್ಯಾಸದೊಂದಿಗೆ ನರ್ತನ ಮಾಡಿದಳು. ಆ ಆಯತೇಕ್ಷಣೆಯು ಭಾವವನ್ನು ವ್ಯಕ್ತಪಡಿಸುವಾಗ ಕಟಾಕ್ಷಕ್ಷೇಪದಿಂದ ಸುತ್ತಲೂ ನೋಡುತ್ತಿರುವ ಸಮಯದಲ್ಲಿ ನೆರೆದವರಲ್ಲಿ ಪ್ರತಿಯೊಬ್ಬನು ಆ ಮೋಹಿನಿಯು ತನ್ನನ್ನೇ ಉದ್ದೇಶಿಸಿ ನೋಡುತ್ತಿರುವಳೆಂದು ನಂಬಿ ಹುಚ್ಚು ಹಿಡಿದವನಂತೆ ಅವಳ ಮುಖವನ್ನು ಹುಳು ಹುಳು ನೋಡುತ್ತಿದ್ದನು." ಎಂದು ಈ ನೃತ್ಯಗೀತದ ವರ್ಣನೆಗೆ ಮೊದಲಾಗುತ್ತದೆ. ಕೆಲವೊಂದು ಪ್ರಕರಣಗಳನ್ನು ವೇದಾಂತಿಕ ವಾಕ್ಯಗಳಿಂದ ಪ್ರಾರಂಭಿಸಿ ಅಯಾ ಕಥಾಸಂದರ್ಭದ ರಹಸ್ಯವನ್ನು ಸೂಚಿಸುವ ರೀತಿ ಮಾರ್ಮಿಕವಾಗಿದೆ. ಇಲ್ಲಿ ಶೈಲಿಯ ಗಾಂಭೀರ್ಯವು ಓದುಗರ ಮನಸ್ಸಿನ ಮೇಲೆ ಒಂದು ಬಗೆಯ ಉದಾತ್ತ ಪರಿಣಾಮವನ್ನುಂಟುಮಾಡುತ್ತದೆ. ಮಾದರಿಗಾಗಿ – "ಕಾಲಗತಿಯೆಂಬ ಮಹಾ ನದಿಯ ತೀವ್ರವಾದ ಪ್ರವಾಹವು ಏಕಪ್ರಕಾರವಾಗಿ ಹರಿಯುತ್ತಿರಲು ಅದರ ತೆರೆ-ಗಳೊಡನೆ ತೇಲಿಬರುತ್ತಿರುವ ಸುಖದುಃಖಗಳೆಂಬ ತೆಪ್ಪಗಳು ಮನುಷ್ಯನ ಕಣ್ಣಿಗೆ ಹೃದ್ಯವಾಗಲಿ, ವ್ಯಸನಕರವಾಗಲಿ ಕಾಣುತ್ತಿದ್ದರೂ ಅವುಗಳು ನಮ್ಮನ್ನು ಬಿಟ್ಟು ಪ್ರವಾಹದೊಡನೆ ಮುಂದಕ್ಕೆ ಹರಿದುಹೋದ ಹಾಗೆ ಅವುಗಳ ಸ್ವರೂಪವೂ ಅಸ್ಪಷ್ಟವಾಗಿ ಕಾಣುತ್ತ ಕಡೆಗೆ ಕಣ್ಮರೆಯಾಗಿ ಹೋಗುವದುಂಟು" ಅಥವಾ "ಜಗತ್ತಿನಲ್ಲಿ ಮನುಷ್ಯನು ಉಚ್ಚನೀಚವಾದ ಸ್ಥಿತಿಯಲ್ಲಿರುವದು ಅನೇಕಾಂಶ ಗಳಲ್ಲಿ ದೈವಾಧೀನವಾದ ಸಂಗತಿಯಾಗಿದ್ದರೂ ಸುಖಿಯೂ ಮಾನ್ಯನೂ ಆಗಿರುವು ದಾದರೂ ಅನೇಕ ಅಂಶಗಳಲ್ಲಿ ಅವನ ಸ್ವಾಧೀನವಾದ ಮಾತು ಎಂದು ಹೇಳ-ಬಹುದು" ಎಂಬ ವಿಚಾರವಿವೇಚನೆಯನ್ನಾಗಲಿ ಅವಲೋಕಿಸಬಹುದು.

ದೈವಶಕ್ತಿ; ಮನುಷ್ಯಯತ್ನ, ಮಾನವಸ್ವಭಾವದ ವೈವಿಧ್ಯಗಳನ್ನು ಕಾದಂಬರಿಕಾರರು ಸೂಕ್ಷ್ಮವಾಗಿ ವಿವೇಚಿಸುತ್ತಾರೆ. ಹೀಗೆ ವಿವೇಚಿಸುವಾಗ ಗಳಗ-ನಾಥರಂತೆ ಕೆರೂರ ಅವರೂ ತಮ್ಮ ವಾಚಕರೊಂದಿಗೆ ಒಂದಾಗಿ ಕಥೆಯನ್ನೂ ಪಾತ್ರಗಳನ್ನೂ ಕುರಿತು ವಿಮರ್ಶಿಸುತ್ತ, ಮತ್ತೆ ಮುಂದೆ ಸಾಗುತ್ತಾರೆ. ಸರದಾರ-ನೊಬ್ಬನು ಔರಂಗಜೇಬನ ಸನ್ನಿಧಾನಕ್ಕೆ ಬಂದು ಬಹು ವಿನೀತನಾಗಿ ಪ್ರಣಾಮ

ಮಾಡಿ ಅವನ ಪಾದಪೀಠದ ಬಳಿಯಲ್ಲಿ ಒಂದು ಪತ್ರವನ್ನಿರಿಸುತ್ತಾನೆ. ಆಗ "ಆ ಪತ್ರದಲ್ಲಿರುವ ಸಂತೋಷಜನಕವಾದ ಸಂಗತಿ ಯಾವದು ಎಂದು ವಾಚಕರು ಬಹು ಕುತೂಹಲಯುಕ್ತರಾಗಿ ನಮ್ಮನ್ನು ಕೇಳಬಹುದು. ಪತ್ರವೇ ನಮ್ಮ ಬಳಿಯ-ಲ್ಲಿರಲು ಬಾಯಿಮಾತಿನಿಂದೇಕೆ ಹೇಳೋಣ? ವಾಚಕರೆ! ನೀವೇ ಈ ಪತ್ರವನ್ನು ಓದಿಕೊಳ್ಳಿರಿ; ಆ ಪತ್ರವೆಂದರೆ ದೊಡ್ಡದೊಂದು ಗ್ರಂಥವೇ ಆಗಿರುವುದು," ಎಂದು ವಾಚಕರೊಂದಿಗೆ ಪೂರ್ವಪೀಠಿಕೆ ಹಾಕಿದ ಮೇಲೆ 'ಹುಜೂರ್'— ಎಂದು ಪತ್ರಕ್ಕೆ ಮೊದಲಾಗುತ್ತದೆ.

ಕುತುಬಶಾಹೀ ರಾಜ್ಯದ ಭಾಗಾನಗರದೊಳಗೆ ಹೊಕ್ಕ ಔರಂಗಜೇಬನು ಆ ವಿಲಾಸಪುರಿಯನ್ನು ಮನಬಂದಂತೆ ಹಾಳು ಮಾಡತೊಡಗಿದಾಗ, ಅರಮನೆಯು ಉರಿದು ಹೋಗಿ ರಾಜವಿಲಾಸೋಚಿತೆಯರಾದ ಅಂತಃಪುರದ ನಾರಿಯರು ಉದ್ಯಾನದ ಗಿಡಗಂಟಿಗಳ ಮರೆಯಲ್ಲಿ ಹುದುಗಿಕೊಂಡು ಗದಗದನೆ ನಡುಗಹತ್ತಿದರಂತೆ. ಈ ಹಾವಳಿ ಲೂಟಿಗಳ ವರ್ಣನೆ ಈ ರೀತಿಯಾದ ವ್ಯಂಗ್ಯ ಪರಮಾವಧಿಯನ್ನು ಮುಟ್ಟುತ್ತದೆ :

"ಸುವಾಸಿನಿಯರ ಮಂಗಲಸೂತ್ರಗಳನ್ನು ಕೂಡ ಬಲಾತ್ಕಾರದಿಂದ ಹರಿದುಕೊಂಡರು. ದೇವರಪೆಟ್ಟಿಗೆ ಪುಸ್ತಕಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿ-ರುವದನ್ನು ಕಂಡು ಸುಶೀಲರಾದ ಬ್ರಾಹ್ಮಣರು ವ್ಯಸನಪಟ್ಟರು. 'ಅಯ್ಯೋ! ನಮ್ಮಪ್ಪಗಳಿರಾ, ವ್ರತದ ಉಪ್ಪಿನಕಾಯಿಗಳನ್ನು ದಯಮಾಡಿ ಮುಟ್ಟಬೇಡಿರಿ ಕಂಡಿರಾ!' ಎಂದು ವಿಧವೆಯರು ಬಹುಪರಿಯಾಗಿ ಹೇಳಿಕೊಂಡರೂ ಆ ಮಾತು ಲೆಕ್ಕಿಸದೇ ಗಡಿಗೆಗಳನ್ನು ಮುಟ್ಟಿ ಒಡೆದು ಹೋದರು."

ಇದು ಕೆರೂರ ವಾಸುದೇವಾಚಾರ್ಯರ ವಿನೋದಪ್ರಜ್ಞೆ. ಮೊಗಲರ ಕಾಲಕ್ಕೂ ಬ್ರಾಹ್ಮಣ ವಿಧವೆಯರು ವ್ರತದ ಉಪ್ಪಿನಕಾಯಿಗಳನ್ನು ತಯಾರಿಸಿ ಕೊಂಡು ಬರುತ್ತಿದ್ದರೆಂಬುದು ಈ ಯವನರ ಲೂಟಿಯ ವರ್ಣನೆಯಲ್ಲಿ ಒಂದಷ್ಟು ವಿಚಿತ್ರವಾಗಿ ತೋರುತ್ತದೆ.

ಬಸವಾರ್ಯ ಬೂದಪ್ಪ ಬೂದಿಹಾಳಮಠ ಅವರು ಈ ಶತಮಾನದ ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಕಾದಂಬರಿಗಳ ಮುಖ್ಯವಸ್ತು ಪ್ರಣಯ. ಇದರ ಹಿನ್ನೆಲೆಯಾಗಿ ಅಂದಿನ ಸಾಮಾಜಿಕ ರೀತಿನೀತಿಗಳ ವಿಷಯ ಲಂಪಟತನ, ಶಿಕ್ಷಣ ಸುಧಾರಣೆ, ದಾಂಪತ್ಯದ ಸರಸವಿರಸ ಇವೆಲ್ಲವುಗಳೂ ಚಿತ್ರಿತವಾಗಿವೆ. ಕೆರೂರ ವಾಸುದೇವಾಚಾರ್ಯರ ಮೆಚ್ಚು ಮೊನಚು ವ್ಯಂಗ್ಯ ವಿಡಂಬನೆಗಳು ಮಾತ್ರ ಇಲ್ಲಿ ಲುಪ್ತವಾದಂತೆ ಕಾಣುತ್ತವೆ. ಆದರೂ ಕಾದಂಬರಿಗೆ ಒಂದು ಗುರಿ ಇದೆ, ಒಂದು ತಂತ್ರವಿದೆ, ಒಂದು ಉತ್ತಮ ಶೈಲಿ ಇದೆ. ಅಲ್ಲಲ್ಲಿ ಭಾಷೆಯ ಬಿಗುಡು ಒಂದಿಷ್ಟು ಗ್ರಾಮ್ಯಕ್ಕೆ ಶಿಥಿಲಿಸಿದಂತೆ ತೋರುತ್ತದೆ. ಪ್ರೊ. ಶಿ. ಶಿ. ಬಸವನಾಳರು ಮುನ್ನುಡಿಯಲ್ಲಿ ಈ ಕಾದಂಬರಿಯನ್ನು ಕುರಿತು ಹೀಗೆ ಹೇಳುತ್ತಾರೆ;

“ಉಪನ್ಯಾಸವು ಸಾಮಾಜಿಕವಾಗಿದ್ದು ಸಂವಿಧಾನಕೌಶಲ್ಯವನ್ನು ಚೆನ್ನಾಗಿ ತೋರ್ಪಡಿಸುತ್ತದೆ. ಭಾಷೆಯು ಸರಳವಾಗಿಯೂ ಸರಸವಾಗಿಯೂ ಇದೆ. ನಾಯಕ ನಾಯಿಕೆಯರ ಹಾಗೂ ಇತರ ಪಾತ್ರಗಳ ಚಿತ್ರಗಳು ಚಿತ್ತಾಕರ್ಷಕ-ವಾಗಿಯೇ ಇವೆ. ಅಲ್ಲಲ್ಲಿ ಸಂದರ್ಭಾನುಸಾರ ನೀತಿಪರ ನುಡಿಗಳು ವಾಚಕರ ಸೌಕರ್ಯಕ್ಕಾಗಿ ಸ್ಫುಟಾಕ್ಷರಗಳಲ್ಲಿ ಕಂಗೊಳಿಸುತ್ತವೆ,” ಎಂದು ಹೇಳಿ ಮನೋರಂಜಕ ವಾದ ಕಾದಂಬರಿಗಳಲ್ಲಿ ಇಂತಹ ನೀತಿಪರ ಉಪದೇಶಗಳ ಸ್ಥಾನವೇನು ? ಯುಕ್ತಾ-ಯುಕ್ತತೆಯೇನು ? ಎಂಬ ಬಗ್ಗೆ ಸೂಕ್ಷ್ಮವಾಗಿ ಹೇಳುತ್ತಾರೆ. “ಕಥೆ ಮತ್ತು ಕಾದಂಬರಿಗಳಲ್ಲಿ ನೀತಿಪರ ಉಪದೇಶಗಳನ್ನು ಸ್ಪಷ್ಟವಾದ ರೀತಿಯಿಂದ ವಾಚಕರಿಗೆ ಅರುಹುವದಕ್ಕಿಂತ ವ್ಯಂಗ್ಯ ಮರ್ಯಾದೆಯಲ್ಲಿ ಪಾತ್ರಗಳ ನಡೆನುಡಿಗಳ ಮೂಲಕ ಓದುಗರಿಗೆ ದೃಗ್ಗೋಚರವಾಗುವಂತೆ ರಚಿಸುವದು ಹೆಚ್ಚು ಶ್ರೇಯಸ್ಕರ ಎಂಬ ತತ್ವವು ಇತ್ತೀಚೆಗೆ ಅಂಗೀಕೃತವಾಗಿದೆಯೇನೋ ನಿಜ. ನವೀನ ಸಂಸ್ಕೃತಿಯಲ್ಲಿ ಮುಂದುವರಿದವರಿಗೆ ಒಪ್ಪುವ ಈ ತತ್ವವು ಹಿಂದುಳಿದ ಕನ್ನಡಿಗರಿಗೆ ಇನ್ನೂ ಕೆಲವು ದಿನಗಳ ವರೆಗೆ ಅನ್ವಯಿಸಲಾರದು. ಅಂತೆಯೇ ಗ್ರಂಥಕರ್ತರು ಕನ್ನಡಿಗರ ಸದ್ಯಸ್ಥಿತಿಗೆ ಬೇಕಾದ ನೈತಿಕ ವಿಷಯಗಳನ್ನು ಕಂಠೋಕ್ತವಾಗಿಯೆ ಹೇಳುವ ಪ್ರಯಾಸಪಟ್ಟಿದ್ದಾರೆ.” ೫೦ ವರ್ಷಗಳ ಹಿಂದಿನ ಕಾದಂಬರಿಯ ತಂತ್ರ, ಧೋರಣೆ, ರೀತಿಗಳ ಮೇಲಿದು ಬೆಳಕು ಚಲ್ಲುತ್ತದೆ. ಬೂದಿಹಾಳಮಠ ಅವರು ಹಲವಾರು ಗಾದೆ ಮಾತುಗಳನ್ನು ಬಳಸಿಕೊಂಡು ತಮ್ಮ ಬೋಧಪರ ಶೈಲಿಗೆ ಒಂದು ತೂಕವನ್ನು ತಂದಿದ್ದಾರೆ.

ಗಳಗನಾಥರ ಗರಡಿಯಲ್ಲಿಯೇ ಪಳಗಿದ ಧೀ. ಪ. ಕಾಳೆಯವರು ಅನೇಕ ಕಾದಂಬರಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹುಸಂಖ್ಯಾಕ ಕಾದಂಬರಿಗಳು ಪತ್ತೇದಾರಿಯಾಗಿವೆ. ಶ್ರೀ ಬೂದಿಹಾಳಮಠ ಅವರು ಕೆಲವು ಪೌರಾಣಿಕ ಕಥೆಗಳನ್ನು ಆಧರಿಸಿ ಕಾದಂಬರಿಗಳನ್ನು ರಚಿಸಿರುವಂತೆ ಕಾಳೆಯವರೂ ಪೌರಾಣಿಕ ಹಿನ್ನೆಲೆಯ ಕಾದಂಬರಿಗಳನ್ನೂ ನೀಡಿದ್ದಾರೆ.

‘ಅಪರಾಧಿಗಳು ಯಾರು?’ ಎಂಬ ಪೌರಾಣಿಕ ಕಥೆ, ದೇವಗುರುಪುತ್ರನಾದ ಕಚನು ದೈತ್ಯಗುರು ಶುಕ್ರಾಚಾರ್ಯನಿಂದ ಸಂಜೀವಿನೀವಿದ್ಯೆಯನ್ನು ಅಪಹರಿಸಲು ದೈತ್ಯಗುರುವಿನ ಕುವರಿ ದೇವಯಾನಿಯೊಡನೆ ಪ್ರೇಮನಾಟಕವನ್ನು ಹೂಡಿದ ಕಥೆ. ಅದರೊಂದಿಗೆ ಯಯಾತಿಯ ವೃತ್ತಾಂತವೂ ನಿರೂಪಿತವಾಗಿದೆ. ಪೌರಾಣಿಕ ವಸ್ತುವನ್ನು ಕಾದಂಬರಿಗೆ ಅಳವಡಿಸಿದ ರೀತಿ ಮನೋರಂಜಕವಾಗಿದೆ. ಈ ಕಥೆಯ ಶೀರ್ಷಿಕೆಯಿಂದ ಇದೂ ಒಂದು ಪತ್ತೇದಾರಿ ಕಥೆ ಇದ್ದಿರಬೇಕು ಎಂದು ಎನಿಸಬಹುದು. ಎಲ್ಲ ಆಗುಹೋಗುಗಳು ನಡೆಯುವದು ದೈವಸಂಕಲ್ಪದ ಮೇರೆಗೆ ಎಂದು ಸೂಚಿಸಿ “ಪ್ರಸ್ತುತವನ್ನು ಹಿಂದುಸ್ತಾನದ ರಾಜಕಾರಣದಲ್ಲಿ ಏನಾಗಬೇಕಾಗಿತ್ತೋ, ಏನಾಗ ಬೇಕಾಗಿದೆಯೋ ಅದು ಯಾರ ಪ್ರಯತ್ನಗಳಿಂದಲೂ ಬದಲಾವಣೆಯಾಗಿಲ್ಲ;

ಆಗುವುದೂ ಇಲ್ಲ. ಆದರೂ ನಡೆಯುವ ಘಟನೆಗಳ ಬಗ್ಗೆ ಇಂಥವರು ಹೀಗೆ ತಪ್ಪು ಮಾಡಿದ್ದರಿಂದ ಹೀಗಾಯಿತು, ಹಾಗೆ ಮಾಡಿದ್ದರೆ ಹಾಗಾಗುತ್ತಿತ್ತು ಎಂದು ದಿನಾಲು ನಾವೆಲ್ಲರೂ ಮಾತನಾಡುತ್ತಿಲ್ಲವೆ? ಅವರಂತೆಯೆ ಈ ಅಪರಾಧಿಗಳು ಯಾರು? ಎಂಬುದಾಗಿದೆ" ಎಂದು ಕಾದಂಬರಿಕಾರರು ತಮ್ಮ ಮುನ್ನುಡಿಯಲ್ಲಿ ವಿವರಣೆ ನೀಡಿದ್ದಾರೆ. ಈ ವಿವರಣೆ ಯಾಕೋ ಮನಗಾಣಿಸುವಂತಹದಾಗಿಲ್ಲ.

ಆದರೂ ಕಥಾನಿರೂಪಣೆಯ ದೃಷ್ಟಿಯಿಂದ ಇದು ಓದುವದಕ್ಕೆ ಯೋಗ್ಯವಾದ ಕಾದಂಬರಿಯಾಗಿದೆ. ನಡುನಡುವೆ ಸ್ವಾರಸ್ಯಕರವಾದ ವರ್ಣನೆಗಳು, ಸಂಭಾಷಣೆಗಳು ಸುಂದರವಾಗಿ ಹೆಣೆದುಕೊಂಡು ಕಾದಂಬರಿಯ ಮೌಲ್ಯವನ್ನು ಹೆಚ್ಚಿಸಿವೆ. ಸರಳ, ನೇರವಾದ ನಿರೂಪಣಶೈಲಿ ಮಾರ್ಮಿಕವಾಗಿ ಬಂದಿದೆ.

ಶ್ರೀ ಭೀ. ಪ. ಕಾಳೆಯವರು ಹೆಸರು ಪಡೆದುದು ಪತ್ತೇದಾರಿ ಕಾದಂಬರಿಕಾರರೆಂದು. ಕನ್ನಡದಲ್ಲಿ ಪತ್ತೇದಾರಿ ಕಾದಂಬರಿಗಳಿಗೆ ಮುಖ್ಯ ಪ್ರೇರಕರು ಭೀ. ಪ. ಕಾಳೆಯವರು ಎಂದು ಹೇಳಬಹುದು. ಬಿ. ವೆಂಕಟಾಚಾರ್ಯರು ಬಂಕಿಮರಿಂದ ಅನುವಾದಿಸಿದ ಕಥೆಗಳಾಗಲಿ, ಗಳಗನಾಥರ ಅನುವಾದಗಳಲ್ಲಿ-ಯಾಗಲಿ ಪತ್ತೇದಾರಿ ಕಾದಂಬರಿಯ ಅಂಶವಿದ್ದೇ ಇದೆ ಎಂತಲೆ ಮುಂದೇನಾಯಿತು? ಎಂಬ ಕುತೂಹಲ ಕುದುರುತ್ತ ಹೋಗುತ್ತದೆ. ಆದರೆ ಸ್ವತಂತ್ರವಾಗಿ, ಸ್ವಂತ ಕಲ್ಪನೆಯಿಂದ ಕುತೂಹಲಕಾರಿಯಾದ ಪತ್ತೇದಾರಿ ಕಾದಂಬರಿ ಪ್ರಯೋಗಿಸಿದ ಶ್ರೇಯಸ್ಸು ಕಾಳೆಯವರದು. ಮರಾಠಿ, ಇಂಗ್ಲೀಷ್ ಕಾದಂಬರಿಗಳಿಂದ ಇವರು ಸ್ಫೂರ್ತಿ ಪಡೆದಿರಬಹುದು. ಆದರೆ ಕನ್ನಡಕ್ಕೆ ಆರ್ಥರ್ ಕಾನನ್ ಡೈಲನ ಬುದ್ಧಿವಂತಿಕೆಯ ಮಟ್ಟವಿಲ್ಲದಿದ್ದರೂ ಶರ್ಲಾಕ್ ಹೋಮ್ಸರ ಸಾಹಿತ್ಯ-ವನ್ನು ಒದಗಿಸಿದ ಹೆಚ್ಚುಗಾರಿಕೆ ಇವರದಾಗಿದೆ. ಗಳಗನಾಥರ ತರುವಾಯ ಅನೇಕ ಮರಾಠಾ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳನ್ನು ಕಾಳೆಯವರು ರಚಿಸಿದ್ದಾರೆ. ಈ ಐತಿಹಾಸಿಕ ಕಾದಂಬರಿಗಳು ಇಪ್ಪತ್ತೈದಕ್ಕೂ ಮೇಲ್ಪಟ್ಟಿವೆ. ಹಲವಾರು ಗ್ರಂಥಗಳು ಪುನರಾವೃತ್ತಿಯನ್ನು ಕಂಡಿವೆ. ಶಿವಾಜಿ, ನೇತಾಜಿ ಇವರ ಸಾಹಸಗಳನ್ನು ಬಣ್ಣಿಸುವ ಕಾದಂಬರಿಗಳು ರೋಮಾಂಚಕಾರಿಯಾಗಿವೆ. ಕಾಳೆಯವರು ಗಳಗನಾಥರ ತರುವಾಯ ಶೇಷಾಚಲ ಗ್ರಂಥಮಾಲೆಯನ್ನು ನಡೆಸಿಕೊಂಡು ಬಂದರು. ಧಾರವಾಡದ ಮದಿಹಾಳದಲ್ಲಿಯೇ ಇದ್ದುಕೊಂಡು ಈ ಪ್ರಕಾಶನಕಾರ್ಯವನ್ನು ಹಲವಾರು ವರ್ಷ ಮುಂದುವರೆಸಿಕೊಂಡು ಹೋದರು. ಭೀ. ಪ. ಕಾಳೆಯವರು ಗಳಗನಾಥರ ಛಾಯಾನುವರ್ತಿಗಳು. ಗಳಗನಾಥರಿಗಿಂತ ಹೆಚ್ಚಿನ ಸಂಖ್ಯೆಯ ಕಾದಂಬರಿಗಳನ್ನು ನಿರ್ಮಿಸಿದ ಶ್ರೇಯಸ್ಸು ಇವರದು. ಆದರೆ ಒಂದೊಂದು ಕಾದಂಬರಿ ಗಾತ್ರದಲ್ಲಿಯೇ ಆಗಲಿ, ಪಾತ್ರದಲ್ಲಿಯೇ ಆಗಲಿ ಗಳಗನಾಥರ ಮಟ್ಟಕ್ಕೆ ಏರುವದಿಲ್ಲ.

'ಘಾತುಕ ಶಿತಿಕಂಠ' ಎಂಬ ಒಂದು ಪತ್ತೇದಾರಿ ಕಾದಂಬರಿ ಒಬ್ಬ ತಮಿಳು ದೇಶದ ವಂಚಕನ ಕಥೆಯನ್ನು ನಿರೂಪಿಸುತ್ತದೆ. "ಮೂಡಣ ಗಡಿಯ ಹಾರುವರ

ಒಬ್ಬ ಚೆಲುವ ಹುಡುಗನು ಹರಕು, ಮುರುಕು ಮೈಸೂರು ಕನ್ನಡ ಭಾಷೆಯಲ್ಲಿ ಮಾತನಾಡುತ್ತ ಉತ್ತರ ಕರ್ನಾಟಕದ ಒಂದು ಮನೆತನದವರನ್ನು ಹೇಗೆ ವಂಚಿಸಿದ" ಎಂಬ ಪ್ರಣಯದ ಪತ್ತೇದಾರಿ ಕಥೆ ಇಲ್ಲಿ ನಿರೂಪಿಸಲ್ಪಟ್ಟಿದೆ. "ನಮ್ಮೂರು ದೊಡ್ಡದಲ್ಲ, ಸಾಮಾನ್ಯವಾದ ಗ್ರಾಮ, ಆದರೂ ಇಲ್ಲಿ ವೈದಿಕರು ಲೌಕಿಕರು, ಪಾರಮಾರ್ಥಿಕರು ಭಟ್ಟಂ ಭಟ್ಟರು, ಸೆಟ್ಟಿ - ಸಾಹುಕಾರ, ಅಂಗಡಿಕಾರ, ನೇಕಾರ, ಬಡಿಗೇರ, ಕಮ್ಮಾರ ಮುಂತಾದ ಹದಿನೆಂಟು ಜಾತಿಯವರೂ ಕಸುಬಿನವರೂ ಇದ್ದು ಒಕ್ಕಿ ಒರಗಿನಿಂದ ಬಾಳುವೆ ಮಾಡುತ್ತಿದ್ದರು............ ಅವರಲ್ಲಿ ಹಲಕೆಲವರು ವಿದ್ಯಾರ್ಥಿಗಳು ಸ್ವೇಚ್ಛೆಯಿಂದ ಉಂಡುಟ್ಟು ಹಾಗಿ ಕೆಲವರು ನಮ್ಮೂರ ವೈದಿಕರಲ್ಲಿ ಯಾಜ್ಞಿಕ ಕಾವ್ಯಗಳನ್ನು ಓದುತ್ತಿದ್ದರು; ಕೆಲವರು ಇಂಗ್ಲೀಷ್ ಶಾಲೆಗೆ ಹೋಗುತ್ತಿದ್ದರು; ಬೇರೆ ಕೆಲವರು ಕನ್ನಡ ತರಗತಿಗಳಲ್ಲಿ ಓದುತ್ತಿದ್ದರು. ಬ್ರಾಹ್ಮಣರಂತೆ ನಮ್ಮೂರ ಬ್ರಾಹ್ಮಣೇತರರಲ್ಲಿಯೂ ಧರ್ಮಾತ್ಮರಿಗೂ ವಿದ್ಯಾವ್ಯಾಸಂಗಗಳಿಗೂ ಕೊರತೆ ಇರಲಿಲ್ಲ," ಎಂದು ಪ್ರಾರಂಭವಾದ ಊರ ವರ್ಣನೆ ಹಾಸ್ಯಪೂರ್ಣವಾಗಿದೆ. 'ನಿವೇದನ'ದಲ್ಲಿ ಗ್ರಂಥಕರ್ತರೇ ಇದೊಂದು 'ಆಗಿ ಹೋದ ಸಂಗತಿ'ಯ ಕಥೆ ಎಂದು ಹೇಳಿಬಿಟ್ಟು, "ಇದರಲ್ಲಿಯ ಸಂಗತಿಗಳೆಲ್ಲವೂ ನಿಜವೆ, ಆದರೆ ಆ ವ್ಯಕ್ತಿಗಳ ಹೆಸರಿನಿಂದಲೆ ಇದನ್ನು ಬರೆಯುವದು ಸರಿಯಲ್ಲೆಂದು ಎಷ್ಟೋ ಜನ ನನ್ನ ಸ್ನೇಹಿತರು ನನಗೆ ಆಗ್ರಹಪೂರ್ವಕವಾಗಿ ಹೇಳಿದ್ದರಿಂದ ನಾನು ಆ ನಡೆದ ಸಂಗತಿಯನ್ನೇ ಬೇರೆ ಹೆಸರುಗಳಿಂದ ಬರೆದು ಪ್ರಕಟಿಸಿರುತ್ತೇನೆ," ಎಂದು ನುಡಿದಿದ್ದಾರೆ. ನೈಜ ಘಟನೆಯೊಂದನ್ನು ಕಾಲ್ಪನಿಕ ಕಥೆಯಾಗಿ ಒಂದು ಪತ್ತೇದಾರಿ ಕಾದಂಬರಿಯಾಗಿ ರಚಿಸಿದ ಸ್ವಂತಿಕೆ ಭೀ. ಪ. ಕಾಳೆಯವರದು.

ಕನ್ನಡದಲ್ಲಿ ಹಾಸ್ಯರಸಪ್ರಧಾನವಾದ ಉತ್ತಮ ಸಾಹಿತ್ಯ ಒಂದು ದೊಡ್ಡ ಕೊರತೆ. ಅದರಲ್ಲೂ ಹಾಸ್ಯರಸದ ಕಾದಂಬರಿಗಳಂತೂ ತೀರ ವಿರಳ: ಇಲ್ಲವೇ ಇಲ್ಲವೆಂದರೂ ಸಲ್ಲುವದು. ಕನ್ನಡಕ್ಕೆ ಒಬ್ಬ ಪಿ. ಜಿ. ವೋಡ್‌ಹೌಸ್ ಇನ್ನೂ ಹುಟ್ಟಿಬಂದಿಲ್ಲ. ಇಂತಹವರಲ್ಲಿ ಮುದ್ದಣ ಕವಿಯ ಸಮಕಾಲೀನರಾಗಿದ್ದ ಹುರುಳಿ ಭೀಮರಾಯರು ಒಂದು ವಿನೋದಪರ, ವಿಡಂಬನಾತ್ಮಕ ಕಾದಂಬರಿಯನ್ನು ಕನ್ನಡಿಗರಿಗೆ ನೀಡಿರುವ ಸಂಗತಿ ಬಹುಜನ ವಾಚಕರಿಗೆ ಗೊತ್ತಿಲ್ಲದೆ ಇರಬಹುದು. ಹುರುಳಿಯವರ 'ಮುರುಕು ಡಂಬೂಕು' (ಬಂದೂಕು ಶಬ್ದವನ್ನು ತಿರುವು ಮುರುವು ಮಾಡಿದ್ದು) ಎಂಬ ಕಾದಂಬರಿ ತನ್ನದೇ ಆದ ಒಂದು ವಿನೋದತಂತ್ರವನ್ನು ಅನುಸರಿಸಿದೆ. ಕಥಾನಾಯಕ ತನ್ನ ದಿನಚರಿಯನ್ನು ಓದುಗರ ಮುಂದೆ ಇಡುತ್ತಾನೆ. ತನ್ನ ನೂರಾಏಳನೆಯ ವರ್ಷದಲ್ಲಿ! ಬಾಯಲ್ಲಿ ತಂಬಾಕು ಜಗಿಯುತ್ತ ಬಂದವರಿಗೆಲ್ಲ ತನ್ನ ಹಳೆಯ ಕಥೆಯನ್ನು ಹೇಳುವದೆಂದರೆ ಕಥಾನಾಯಕನಿಗೆ ತುಂಬ ಹುರುಪು. ಓಣಿಯೊಳಗಿನ ಮಕ್ಕಳು ಈ ಕಥೆಗಾರನಿಗೆ ತಾಂಬೂಲದ ರಸಗವಳ ತಯಾರಿಸಿಕೊಂಡು ಬಂದು ಕಥೆ ಹೇಳಲು ಬಿನ್ನವಿಸು

ವರಂತೆ. ಹೀಗೆ ಸುಂದರ ಪೀಠಿಕೆಯನ್ನು ಹಾಕಿ ತನ್ನ ಜನ್ಮದಾರಭ್ಯ ದಿನಚರಿಗೆ ಮೊದಲು ಮಾಡುತ್ತಾರೆ. ಅದುವೇ ಒಂದು ಸುಂದರ ವಿಡಂಬನೆಯಾಗಿ ಅರಳುತ್ತದೆ. "ನನ್ನ ತಾಯಿ ನನ್ನನ್ನು ಹೆತ್ತಾಗ, ನಾನು ಹುಟ್ಟಿದೆನೆಂಬುದು ನನಗೇ ಗೊತ್ತಿರಲಿಲ್ಲ" ಎಂದು ಆರಂಭಿಸುತ್ತ ಜೋಯಿಸರ ಮುಂದೆ ತನ್ನ ತಂದೆ ತಾಯಿಗಳು ತಮ್ಮ ನೆನಪಿನ ಮೇಲೆ ಜಾತಕ ಬರೆಯಿಸಿದ ಸ್ವಾರಸ್ಯಕರವಾದ ಕಥೆಯನ್ನು ಹೇಳುತ್ತಾರೆ. ಯಾವದೋ ಅಮವಾಸ್ಯೆ ರಾತ್ರಿ ಗ್ರಹಣ ಹಿಡಿದಾಗ ಮಗು ಹುಟ್ಟಿದಂತೆ ನೆನಪು ಎಂದು ತಾಯಿ ಹೇಳುತ್ತಾಳೆ. "ಅಮವಾಸ್ಯೆ ರಾತ್ರಿ ಚಂದ್ರನೆಲ್ಲಿ ಬರಬೇಕೆ ?" ಎಂದು ತಂದೆ ಹಾಸ್ಯ ಮಾಡುತ್ತಾನೆ. ಹೀಗೆ ಲೀಲಾಜಾಲವಾಗಿ ಕಥೆ ಕೊನರುತ್ತ ತಮ್ಮ ಗ್ರಾಮದ ಐಗಳ ಬೈಗಳು, ವಿದ್ಯಾಭ್ಯಾಸ ಮಿತ್ರರು, ಹಿರಿಯರು, ಊರವರು ಎಲ್ಲ ಪ್ರಮುಖ ವ್ಯಕ್ತಿಗಳ ಪರಿಚಯ ಮಾಡುತ್ತದೆ. ತಾನು ಕನ್ನಡ ಸಾಹಿತ್ಯದ ಬಗ್ಗೆ ಮಾಡಿದ ಭಾಷಣ ಮುಂತಾದ ಎಲ್ಲ ವಿಷಯಗಳೂ ದಿನಚರಿಯ ರೂಪದಲ್ಲಿ ಚಿತ್ರಿತವಾಗುತ್ತವೆ. ಕೊನೆಗೆ ತನ್ನ 'ಇಂದಿನ ಸಂಸಾರ', 'ಮಗನ ಸಂಸಾರ', ಅವರ ಹೆಂಡತಿ ತನ್ನ ಮೊಮ್ಮಗನಿಗೆ ತನ್ನ ಹೆಸರನ್ನೇ ಇಟ್ಟ ಸಂಗತಿ ಎಲ್ಲ ಹೇಳಿ ತನ್ನ ಅಜ್ಜಿಯ ನೆನಪು, ಅಜ್ಜಿಯ ಆಶೀರ್ವಾದದಿಂದ ಕಥೆ ಮುಗಿಸುತ್ತಾರೆ. ತನಗೆ ಎಣ್ಣೆ ಹಚ್ಚಿ ಬಿಸಿನೀರಿನ ಅಭ್ಯಂಗ ಮಾಡಿಸುವಾಗ ಅಜ್ಜಿ ಹರಸುತ್ತಿದ್ದಳಂತೆ, "ಬೆಟ್ಟದಂತೆ ಬಲ್ಲಿದನಾಗು, ಕಲ್ಲು ಕಂಬದಂತೆ ವಜ್ರಕಾಯನಾಗು, ದೊರೆಯ ಖಜಾನೆಯಂತೆ ಭಾಗ್ಯವಂತನಾಗು...." ಎಂದೆಲ್ಲ. "ಕಾಗೆಯ ಮರಿಯಂತೆ ಚಿರಂಜೀವಿಯಾಗು," ಎಂಬ ಅಜ್ಜಿಯ ಹರಕೆಯ ಮಂತ್ರ ಮಾತ್ರ ಅಕ್ಷರಶಃ ಸತ್ಯವಾಯಿತಂತೆ. "ನಾನು ಸಾಯುವ ವರೆಗೂ, ಬದುಕಿರುತ್ತೇನೆ. ಅಥವಾ ಬದುಕಿರುವಷ್ಟು ಕಾಲ ಸಾಯುವದಿಲ್ಲ" ಎಂದು ಕಾದಂಬರಿಯು ಮುಕ್ತಾಯವಾಗುತ್ತದೆ.

'ಕಾದಂಬರಿ-ಅಂದು' ಎಂದರೆ ಎಲ್ಲಿಗೆ ಮುಗಿಸೋಣ? ಕನ್ನಡ ಕಾದಂಬರಿಯ ಪ್ರಾರಂಭದೆಸೆಯ ಕೊನೆಯೆಂದು ಇವರಿಂದ ಅರ್ಥ ಮಾಡಿಕೊಳ್ಳಬಹುದು. ಇದೇ ಇಸ್ವಿಯ ವರೆಗೆ ಎಂದು ಹೇಳುವುದು ಕಠಿಣ. ಆಧುನಿಕ ಕನ್ನಡ ಕಥೆ ಶ್ರೀನಿವಾಸರಿಂದ ಆರಂಭ. ಅದೇ ಮೇರೆಗೆ 'ಸುಬ್ಬಣ್ಣ' ಒಂದು ನೀಳ್ಗತೆ ಎಂದರೂ ಸರಿ, ಒಂದು ಚಿಕ್ಕಕಾದಂಬರಿ ಅಂದರೂ ಸರಿ. ಗಾತ್ರದ ದೃಷ್ಟಿಯಿಂದ ಮಾತ್ರ ಚಿಕ್ಕಕಾದಂಬರಿಯೆಂದರೂ ಅದು ತೋರುವ ಜೀವನದರ್ಶನ ಬೀರುವ ಜೀವನಸಂದೇಶ ಯಾವ ಬೃಹತ್ಕಾದಂಬರಿಗಿಂತಲೂ ಪ್ರಭಾವದಲ್ಲಿ ಕಿರಿಯದಾಗಲಾರದು. ಸುಬ್ಬಣ್ಣನಂಥ ಒಬ್ಬ ಕಲಾವಿದನ ಜೀವನವನ್ನು ಇಂತಹ ಒಂದು ಅನುಭವದ ಪಾಕದಲ್ಲಿ ಅದ್ದಿ ತೆಗೆದ ಪಾತ್ರ ನಮ್ಮ ಕಾದಂಬರಿ ಪ್ರಪಂಚದಲ್ಲೇ ಕಡಿಮೆ, ಇಲ್ಲವೆ ಇಲ್ಲವೆನ್ನಲೂಬಹುದು. ಒಂದು ಹೀಚುಗಾಯಿ ಜೀವನದ ಅಡಿಗೆ ಹಾಕಿ ಹೇಗೆ ಅದು ಪಕ್ವಗೊಂಡಿತು ಎಂದು ತೋರಿಸುತ್ತದೆ, 'ಸುಬ್ಬಣ್ಣ'. ಇದು ಮಾಸ್ತಿಯವರು ಕನ್ನಡ ಸಾಹಿತ್ಯ

ಪ್ರಪಂಚಕ್ಕಷ್ಟೇ ಅಲ್ಲ. ಭಾರತೀಯ ಸಾಹಿತ್ಯ ಪ್ರಪಂಚಕ್ಕೆ, ಬಹುಶಃ ಪ್ರಪಂಚದ ಸಾಹಿತ್ಯ ಪ್ರಪಂಚಕ್ಕೆ ನೀಡಿದ ಅತ್ಯಮೋಘವಾದ ಒಂದು ಪಾತ್ರದ ಕಾಣಿಕೆ.

ಆನಂದಕಂದರ 'ಸುದರ್ಶನ'ದೊಂದಿಗೆ ಆಧುನಿಕ ಸಾಮಾಜಿಕ ಕಾದಂಬರಿಯ ಪ್ರಾರಂಭ ಎಂದು ಹೇಳಬಹುದಾಗಿದೆ. ದೇವುಡು ಅವರ 'ಅಂತರಂಗ' ಎಂಬ ಮನೋವೈಜ್ಞಾನಿಕ ಕಾದಂಬರಿಯೂ ಸುಮಸುಮಾರಾಗಿ ಇದೇ ಹೊತ್ತಿಗೆ ಹೊರಬಂದಿತು.

'ಕಾದಂಬರಿ–ಅಂದರೆ' ಎಂದು ಹೇಳಿದಾಗ ಸ್ವತಂತ್ರ ಸಾಮಾಜಿಕ ಕಾದಂಬರಿಯನ್ನು ಅನುಲಕ್ಷಿಸಿದರೆ ಗುಲ್ವಾಡಿ ಜೋಶಾರ, ಎಂ. ಎಸ್. ಪುಟ್ಟಣ್ಣ, ಕೆರೂರ ವಾಸುದೇವಾಚಾರ್ಯ ಈ ಹೆಸರುಗಳು ಕಣ್ಮುಂದೆ ಬರುತ್ತವೆ. ಐತಿಹಾಸಿಕ ಕಾದಂಬರಿ ಎಂದೊಡನೆ, ಅನುವಾದನೆಯಾಗಲಿ ಸ್ವತಂತ್ರವೇ ಆಗಲಿ, ಗಳಗನಾಥರಿಗೆ ಅಗ್ರತಾಂಬೂಲ. ಆಮೇಲೆ ಬಿ. ವೆಂಕಟಾಚಾರ್ಯರು.

ಕನ್ನಡ ಕಾದಂಬರಿ - ಇಂದು

—ಡಾ. ಎಚ್. ತಿಪ್ಪೇರುದ್ರಸ್ವಾಮಿ

ಕನ್ನಡದಲ್ಲಿ ಇಂದು ಕಾದಂಬರಿ ಸಮೃದ್ಧವಾಗಿ ಬೆಳೆಯುತ್ತಿರುವ ಸಾಹಿತ್ಯ ಪ್ರಕಾರ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ನಮ್ಮಲ್ಲಿ ತಲೆದೋರಿದ ಈ ವಿಭಾಗ ಬಹುಬೇಗನೆ ಜನಪ್ರಿಯವಾಗಿ ವಿಶಿಷ್ಟಸ್ಥಾನವನ್ನು ಸಾಹಿತ್ಯಪ್ರಪಂಚದಲ್ಲಿ ನಿರ್ಮಿಸಿಕೊಂಡಿತು. ಮನಸ್ಸನ್ನು ಸೆರೆಹಿಡಿಯುವ ಆಕರ್ಷಕ ಕಥಾಶರೀರದ ಜೊತೆಗೆ ಈ ಮಾಧ್ಯಮಕ್ಕಿರುವ ಶಕ್ತಿ ಸಾಧ್ಯತೆಗಳೂ ಇದಕ್ಕೆ ಕಾರಣ. ದಿನದಿನಕ್ಕೆ ಜಟಿಲವಾಗುತ್ತಿರುವ, ಸಂಕೀರ್ಣಗೊಳ್ಳುತ್ತಿರುವ, ಹೊಸ ಹೊಸ ಸಮಸ್ಯೆಗಳನ್ನೊಡ್ಡುತ್ತಿರುವ ಇಂದಿನ ವೈಜ್ಞಾನಿಕ ಮತ್ತು ತಾಂತ್ರಿಕ ಜಗತ್ತಿನ ಬಹುಮುಖ ಜೀವನದ ಎಲ್ಲ ಪದರುಗಳನ್ನೂ ಒಳಹೊಕ್ಕು ನೋಡಬಲ್ಲ, ನುಡಿಯಬಲ್ಲ, ಶಕ್ತಿಶಾಲಿಯಾದ ಸಾಹಿತ್ಯಮಾಧ್ಯಮವಾಗಿ ಇದು ಬೆಳೆಯುತ್ತಿದೆ. ಆದ್ದರಿಂದಲೇ ಇಂದು ಇಂಗ್ಲೆಂಡ್, ಅಮೇರಿಕಾ, ರಷ್ಯಾ, ಫ್ರಾನ್ಸ್ ಮೊದಲಾದ ಎಲ್ಲೆಡೆಗಳಲ್ಲಿಯೂ ಪ್ರತಿಭಾವಂತ ಸಾಹಿತಿಗಳು ತಮ್ಮ ಅನುಭವವಾಹಕವನ್ನಾಗಿ 'ಕಾದಂಬರಿ'ಯನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಇನ್ನುಮುಂದೆ ಮಹಾಕಾವ್ಯಗಳ ಸತ್ವ ಬಹುಶಃ ಈ ಮೂಲಕವೇ ಆವಿರ್ಭವಿಸಬೇಕಾಗುತ್ತದೆ ಎನ್ನಬಹುದು.

ತಲೆ ಕೊಡಹಿ ಮೇಲೆದ್ದು ಮುನ್ನಡೆಯುತ್ತಿರುವ ರಷ್ಯದಲ್ಲಿ ಬಂದಿರುವ ಕಾದಂಬರಿಗಳನ್ನು ನೋಡಿದರೆ, ಅಮೇರಿಕಾದಲ್ಲಿ ನಡೆದಿರುವ, ನಡೆಯುತ್ತಿರುವ ಕಾದಂಬರಿ ಪ್ರಯೋಗಗಳನ್ನು ಗಮನಿಸಿದರೆ, ಅಂತೆಯೇ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶಗಳ ಸಾಹಿತ್ಯದತ್ತ ದೃಷ್ಟಿಯನ್ನು ಹರಿಸಿದರೆ ಈ ಮಾತಿನ ಅರ್ಥ ನಮಗಾಗುತ್ತದೆ. ಆಯಾ ದೇಶದ ಪರಿಸ್ಥಿತಿ ಪರಿಸರಗಳಿಗೆ ಅನುಗುಣವಾಗಿ ಅಲ್ಲಿನ ಸಾಹಿತಿಗಳಿಗೆ ಕಾದಂಬರಿ ಪ್ರಕಾರದ ಸಾಧ್ಯತೆಗಳನ್ನು ಅದ್ಭುತವಾಗಿ ಬಳಸಿಕೊಂಡಿದ್ದಾರೆ. ಬಹುಶಃ ಅದು ತನ್ನ ಪ್ರಯೋಗದ ತುತ್ತತುದಿಯನ್ನು ಮುಟ್ಟಿ ಈಗ ಇಳಿಮುಖವಾಗುತ್ತಿದೆಯೋ ಎನ್ನುವಷ್ಟರ ಮಟ್ಟಿಗೆ ಬೆಳಸಿಕೊಂಡಿದ್ದಾರೆ. ಇನ್ನು ಮೇಲೆ ಕಾದಂಬರಿ ಅಳಿಯುತ್ತಿರುವ ಕಲೆ, ಅಂದರೆ 'Novel is a dying art' ಎಂದು ಹೇಳುವವರೆಗೂ ಇದು ಬೆಳೆದಿದೆ. 'War and Peace' ನಂತಹ ಕೃತಿಗಳನ್ನು ಕಂಡ ಈ ಸಾಹಿತ್ಯ ಪ್ರಕಾರ ವಿಲಿಯಂ ಫಾಕ್‌ನರನ 'The Sound and the Fury', ಜೇಮ್ಸ್ ಜಾಯ್ಸನ 'The Ulysis', ಕಾಮೂನ 'Flake' ಮೊದಲಾದ ಕೃತಿಗಳ

ವರೆಗೂ ತನ್ನ ಪ್ರಯೋಗಶೀಲತೆಯನ್ನು ರೂಢಿಸಿಕೊಂಡಿವೆ. ಈ ಪ್ರಯೋಗಶೀಲತೆಯ ಅವಸರದಲ್ಲಿ ಕಾದಂಬರಿಯ ಮೂಲ ಸೂತ್ರ ಮತ್ತು ಸತ್ವಗಳು ಅಳಿದುಹೋಗಬಹುದೆಂಬ ಭಯ ಒಮ್ಮೊಮ್ಮೆ ತಲೆದೋರಿದರೆ ಆಶ್ಚರ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಕನ್ನಡ ಕಾದಂಬರಿಗಳ ಕಡೆಗೆ ನಾವು ದೃಷ್ಟಿ ಹರಿಸಬೇಕಾಗುತ್ತದೆ. ಇಂದು ಕನ್ನಡ ಕಾದಂಬರಿಗಳು ಗಣನೀಯವಾದ ಸಂಖ್ಯೆಯಲ್ಲಿ ಹೊರಬರುತ್ತಿವೆ. ಇಂಗ್ಲೆಂಡಿನಲ್ಲಿ ಪ್ರತಿ ವರ್ಷವೂ ಕೊನೆಯ ಪಕ್ಷ ನಾಲ್ಕು ಸಾವಿರ ಕಾದಂಬರಿಗಳು ಹೊರಬರುತ್ತವೆಯಂತೆ! ಅದಕ್ಕೆ ನಾವು ಹೋಲಿಸಿಕೊಳ್ಳದೆ ನಮ್ಮ ಪರಿಸರದ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಕಾದಂಬರಿಯ ಬೆಳೆ ತಕ್ಕಮಟ್ಟಿಗೆ ಹುಲುಸಾಗಿಯೇ ಇದೆ, ಸಂಖ್ಯೆಯ ದೃಷ್ಟಿಯಿಂದ. ಆದರೆ ಗುಣದ ದೃಷ್ಟಿಯಿಂದ ನೋಡಿದಾಗ ನಮಗೆ ಅನ್ನಿಸುವುದೇನು? ಇದನ್ನು ನೋಡುವುದಕ್ಕೆ ಮುನ್ನ ನಮ್ಮ ಕಾದಂಬರಿ ಹುಟ್ಟಿ ಬೆಳೆದುಬಂದ ಜಾಡನ್ನು ಒಂದೆರಡು ಮಾತುಗಳಲ್ಲಿ ನೋಡುವುದು ಅವಶ್ಯಕ.

ಕಾದಂಬರಿ ನಮಗೆ ಬಂದದ್ದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲಾದರೂ ಕನ್ನಡಕ್ಕೆ ಅದು ಪ್ರವೇಶಿಸಿದ್ದು ಮುಖ್ಯವಾಗಿ ಬಂಗಾಳಿ ಮತ್ತು ಮರಾಠಿಗಳ ಮೂಲಕ. ಇವು ಅನುವಾದಿತ ಇಲ್ಲವೇ ಐತಿಹಾಸಿಕ ಕೃತಿಗಳು. ಇದರ ಜೊತೆಗೆ ಸಾಮಾಜಿಕ ವಸ್ತುಗಳನ್ನು ಆರಿಸಿಕೊಂಡು ಕಾದಂಬರಿಗಳನ್ನು ಬರೆಯುವ ಪ್ರಯತ್ನ ನಡೆಯದೆ ಇರಲಿಲ್ಲ. ಈ ಎಲ್ಲ ಪ್ರಯತ್ನಗಳ ಫಲವಾಗಿ ಕನ್ನಡದಲ್ಲಿ ಕಾದಂಬರಿ ಬೇರೂರಿತು. ಈ ವೇಳೆಗೆ ಆಂಗ್ಲ ಸಾಹಿತ್ಯದ ಪ್ರಭಾವ ಹೆಚ್ಚು ನಿಕಟವಾದಂತೆ ಹೊಸ ಹೊಸ ಸಾಹಿತ್ಯ ಪ್ರಕಾರಗಳೂ ಕನ್ನಡದಲ್ಲಿ ಬೆಳೆಯತೊಡಗಿದ್ದುವು. ಕನ್ನಡ ಕಾವ್ಯಗಳಲ್ಲಿ ಒಂದು ಹೊಸ ಯುಗ ಪ್ರಾರಂಭವಾಯಿತು. ಬಿ. ಎಂ. ಶ್ರೀ ಅವರ ನೇತೃತ್ವದಲ್ಲಿ ಪ್ರಾರಂಭವಾದ ನವೋದಯ ಕುವೆಂಪು, ಬೇಂದ್ರೆ ಮೊದಲಾದ ಕವಿಗಳಿಂದ ಭಾವಗೀತೆಗಳ ಮಹಾಪೂರಕ್ಕೆ ಕಾರಣವಾಯಿತು. ಇನ್ನೊಂದು ಕಡೆ ಮಾಸ್ತಿಯವರು ಸಣ್ಣ ಕಥೆಗಳಿಗೆ ಅಸ್ತಿಭಾರವನ್ನು ಹಾಕಿದುದಲ್ಲದೆ ಕಟ್ಟಡವನ್ನೂ ನಿರ್ಮಿಸಿ ಅನೇಕ ಕಥೆಗಾರರನ್ನು ಪ್ರಚೋದಿಸಿದರು. ಕೈಲಾಸಂ ಅವರಿಂದ ಒಂದು ಹೊಸ ತಿರುವನ್ನು ಪಡೆದ ನಾಟಕಕ್ಷೇತ್ರ ಅನೇಕರನ್ನು ಆಕರ್ಷಿಸಿತು. ಪ್ರಬಂಧ ಮೊದಲಾದ ಇತರ ಪ್ರಕಾರಗಳೂ ಉಗಮಗೊಂಡವು. ಇವುಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾಗಿ ಪರಿಣಮಿಸಿದುದೆಂದರೆ ಕಾದಂಬರಿ ವಿಭಾಗ.

ಈ ಶತಮಾನದ ಮೂರು ನಾಲ್ಕನೇ ದಶಕಗಳ ವೇಳೆಗೆ ಭರತಖಂಡದ ರಾಜಕೀಯ ಸಾಮಾಜಿಕ ರಂಗಗಳಲ್ಲಿ ತಲೆದೋರುತ್ತಿದ್ದ ಜಾಗ್ರತಿ ಒಂದು ಪ್ರಮುಖ ಘಟ್ಟವನ್ನು ಮುಟ್ಟಿತ್ತು. ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ನಮ್ಮ ಸ್ವಾತಂತ್ರ್ಯ ಹೋರಾಟದ ಗುರಿ ಮತ್ತು ಮಾರ್ಗಗಳು ನಿಶ್ಚಿತವಾಗಿದ್ದುವು. ಅದರ ಹಿನ್ನೆಲೆಯಲ್ಲಿ ಸಾಮಾಜಿಕ ಬದಲಾವಣೆಯ ಆಂತರಂಗಿಕ ಘರ್ಷಣೆಯೂ ನಡೆಯುತ್ತಾ

ಹಳೆಯ ಮೌಲ್ಯಗಳು ಏರುಪೇರಾಗುತ್ತಿದ್ದುವು. ಹೊಸ ಸಮಾಜದ ಹುಟ್ಟಿನ ಪ್ರಸವ ವೇದನೆಯನ್ನು ಭಾರತ ಅನುಭವಿಸುತ್ತಿತ್ತು. ೧೯೪೭ ರಲ್ಲಿ ರಾಜಕೀಯ ಸ್ವಾತಂತ್ರ್ಯ-ವನ್ನು ಪಡೆಯಿತು. ಅದರ ಜೊತೆಯಲ್ಲಿ ಅಂತರಂಗದ ಬಹಿರಂಗದ ನೂರಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವೆಲ್ಲವನ್ನೂ ಎದುರಿಸಿ ವಿಚ್ಛಿದ್ರಕಾರಕ ಶಕ್ತಿಗಳ ಮಧ್ಯದಲ್ಲಿಯೂ ಅಖಂಡತೆಯನ್ನು ರೂಪಿಸಿಕೊಂಡು ಮುನ್ನಡೆಯತೊಡ-ಗಿತು. ಇದನ್ನು ನಮ್ಮ ಕಾದಂಬರಿಗಳು ಪ್ರತಿಬಿಂಬಿಸಲು ತೊಡಗಿದುದು ಸಹಜ-ವಾಗಿಯೇ ಇದೆ.

ಬದಲಾಗುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ತೆರೆದ ಕಣ್ಣಿಂದ ನೋಡ ಬಲ್ಲವರಾಗಿದ್ದ ಕಾರಂತರು 'ವಿಚಿತ್ರಕೂಟ', 'ಭೂತ', 'ಕನ್ಯಾಬಲಿ', 'ಸರಸಮ್ಮನ ಸಮಾಧಿ'ಗಳನ್ನು ದಾಟಿಕೊಂಡು 'ಚೋಮನ ದುಡಿ', 'ಮುಗಿದ ಯುದ್ಧ', 'ಔದಾರ್ಯದ ಉರುಳಲ್ಲಿ' 'ಮರಳಿ ಮಣ್ಣಿಗೆ'ಗಳಂತಹ ಕೃತಿಗಳನ್ನು ಕನ್ನಡಕ್ಕೆ ಕೊಡುತ್ತಿದ್ದರು. ಆ ಪ್ರಾರಂಭದ ದೆಸೆಯಿಂದ ಇಂದಿನವರೆಗೂ ಒಂದಾದ ಮೇಲೊಂದರಂತೆ ಕನ್ನಡಕ್ಕೆ ಕಾದಂಬರಿಗಳನ್ನು ಕೊಡುತ್ತಿರುವ ಸತ್ತ್ವಶಾಲಿಯಾದ ಲೇಖಕರಾಗಿ ಇವರು ಉಳಿದು ಬಂದಿದ್ದಾರೆ. 'ಕರುಳಿನ ಕರೆ', 'ಸ್ವಪ್ನದ ಹೊಳೆ', 'ಚಿಗುರಿದ ಕನಸು', 'ಕುಡಿಯರ ಕೂಸು', 'ಸಮೀಕ್ಷೆ', 'ಅಳಿದ ಮೇಲೆ', 'ಒಂಟಿ-ದನಿ', 'ಮೂಕಜ್ಜಿಯ ಕನಸುಗಳು', ಈ ಮೊದಲಾದ ಅನೇಕ ಕೃತಿಗಳಿಂದ ಅವರು ಕಾದಂಬರಿ ಪ್ರಪಂಚದಲ್ಲಿ ಒಂದು ದೊಡ್ಡ ಪ್ರಾಂತವನ್ನೇ ನಿರ್ಮಿಸಿದ್ದಾರೆ. ಆಳವಾದ ಜೀವನ ಶ್ರದ್ಧೆ, ಬಹುಮುಖವಾದ ಅನುಭವ ಶ್ರೀಮಂತಿಕೆ, ಮತ್ತು ಸ್ವತಂತ್ರ ವಿಚಾರ ದೃಷ್ಟಿಗಳು ಅವರ ಅನೇಕ ಕೃತಿಗಳಲ್ಲಿ ಕಂಡುಬರುತ್ತವೆ.

ತಮ್ಮ ಒಂದೇ ಕೃತಿಯಿಂದ ಕುವೆಂಪು ಅವರು ಪ್ರಮುಖವಾದ ಘಟ್ಟ ಒಂದನ್ನು ನಿರ್ಮಿಸಿದ್ದರು. ಈಚೆಗೆ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ'ಯ ನಂತರ ಬಹುಕಾಲದ ಮೇಲೆ ಬಂದ 'ಮಲೆಗಳಲ್ಲಿ ಮದುಮಗಳು' ಆ ಸ್ಥಾನವನ್ನು ಇನ್ನೂ ವಿಶಿಷ್ಟವನ್ನಾಗಿಸಿದೆ. ಅಂತೆಯೇ ರಾವ್ ಬಹಾದ್ದೂರರ 'ಗ್ರಾಮಾಯಣ' ನಮ್ಮ ಸಾಮಾಜಿಕ ವ್ಯವಸ್ಥೆ ಮತ್ತು ಹಳ್ಳಿಗಳ ಸಮಸ್ಯೆಯ ಕಡೆಗೆ ಸಮರ್ಥವಾದ ತೋರ್ ಬೆರಳನ್ನು ಚಾಚಿದೆ ಈಚೆಗೆ ಅವರಿಂದ ಇನ್ನೂ ಅನೇಕ ಕಾದಂಬರಿಗಳು ಬಂದಿವೆ, ಬರುತ್ತಿವೆ.

ಕನ್ನಡ ಕಾದಂಬರಿಗಳ ಬೆಳವಣಿಗೆಯ ಹಾದಿಯನ್ನು ಗುರುತಿಸುವಾಗ ಪ್ರಗತಿ-ಶೀಲ ಆಂದೋಳನವನ್ನು ಮರೆಯುವಂತಿಲ್ಲ. ಇದಕ್ಕೆ ನೇತಾರರಾಗಿ ನಿಂತವರು ಅ. ನ. ಕೃಷ್ಣರಾಯರು. 'ಸಂಧ್ಯಾರಾಗ'ದಿಂದ ಕಾದಂಬರಿ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಅ. ನ. ಕೃ. ಎರಡು ಮೂರು ದಶಕಗಳ ಕಾಲ ಸಮೃದ್ಧವಾಗಿ ಕಾದಂಬರಿ ಗಳನ್ನು ಬರೆದು ಹಾಕಿದರು. ನೂರಕ್ಕೂ ಮೀರಿ ಅವುಗಳ ಸಂಖ್ಯೆ ಬೆಳೆಯಿತು. ಅವುಗಳನ್ನು ಕುರಿತು ಒಂದು ಮಾತನ್ನು ಮೊದಲು ಹೇಳಬೇಕು: ಆಕರ್ಷಕವಾದ

ಶೈಲಿಯಿಂದ ಕೂಡಿದ ಅವರ ಕೃತಿಗಳು ಓದುವ ಚಟವನ್ನು ಜನರಲ್ಲಿ ಬೆಳೆಸಿದುವು; ಆದರಿಂದ ಅತ್ಯಂತ ಜನಪ್ರಿಯ ಲೇಖಕರಾಗಿ ಪರಿಣಮಿಸಿದರು ಅ.ನ.ಕೃ. ಆದರೆ ಜನಪ್ರಿಯತೆಯೇ ಸಫಲತೆಯ ಒರೆಗಲ್ಲಲ್ಲವೆಂದು ಭಾವಿಸುವ ವಿಚಾರವಂತ ದೃಷ್ಟಿಗೆ ಇವರ ಕೃತಿಗಳಲ್ಲಿ ಬಹುಪಾಲು ವಿಫಲಗೊಂಡಂತೆ ಅನಿಸುತ್ತದೆ. ಕಾದಂಬರಿ ಏನನ್ನು ಸಾಧಿಸಬಹುದು, ಮತ್ತು ಏನನ್ನು ಸಾಧಿಸಬೇಕು ಎಂಬ ವಿಚಾರದಲ್ಲಿ ಅವರಿಗೆ ಸ್ಪಷ್ಟವಾದ ಕೆಲವು ಅಭಿಪ್ರಾಯಗಳಿದ್ದುವೆಂಬುದನ್ನವರು ತಮ್ಮ ಕೆಲವು ಕೃತಿಗಳಿಗೆ ಬರೆದಿರುವ ಪೀಠಿಕೆಯ ಮಾತುಗಳಲ್ಲಿ ಕಾಣಬಹುದು. ಆದರೆ ಅವರ ಆಶಯ, ಕೃತಿಯಾಗಿ ರೂಪುಗೊಳ್ಳುವುದರಲ್ಲಿ ಸಫಲವಾಗಲಿಲ್ಲವೆನ್ನುವುದು ದುರ-ದೃಷ್ಟಕರ. 'ಸಂಧ್ಯಾರಾಗ', 'ಮಂಗಳಸೂತ್ರ', 'ಕಣ್ಣೀರು' – ಇಂತಹ ಕೆಲವನ್ನು ಬಿಟ್ಟರೆ ಉಳಿದುವು ಸಂಖ್ಯೆಯನ್ನು ಹೆಚ್ಚಿಸಿದುವೇ ಹೊರತು ಗುಣವನ್ನು ಬೆಳೆಸಲಿಲ್ಲ. ಸಾಮಾಜಿಕ ಸಮಸ್ಯೆಗಳನ್ನು ಅವರು ಅನೇಕ ಕೃತಿಗಳಲ್ಲಿ ಎತ್ತಿಕೊಂಡಿದ್ದಾರೆ. ಆದರೆ ಸಮಸ್ಯೆಯ ವೈಚಾರಿಕ ವಿಶ್ಲೇಷಣೆ, ಕಲಾತ್ಮಕವಾದ ಅಭಿವ್ಯಕ್ತಿಗಳಿಗೆ ಬದಲಾಗಿ ಅತಿ ಆದರ್ಶದ ಭಾವುಕತೆ ಇಲ್ಲವೇ ವಾಸ್ತವಭ್ರಾಂತಿಯ ಉದ್ರಿಕ್ತ ಚಿತ್ರಗಳಲ್ಲಿ ಪರ್ಯವಸಾನಗೊಂಡಿತು. ವೇಶ್ಯಾಸಮಸ್ಯೆಯನ್ನು ಕುರಿತು ಅವರ ಕಾದಂಬರಿಗಳನ್ನು ಇಲ್ಲಿ ಉದಾಹರಿಸಬಹುದು.

ಈ ಸಂದರ್ಭದಲ್ಲಿ ಪ್ರಮುಖವಾಗಿ ಹೆಸರಿಸಬೇಕಾದ ಕೆಲವು ಹೆಸರುಗಳೆಂದರೆ ಬಸವರಾಜ ಕಟ್ಟೀಮನಿ, ತ. ರಾ. ಸುಬ್ಬರಾಯ, ನಿರಂಜನ ಮೊದಲಾದವರು. ಇವರಲ್ಲಿ ಒಬ್ಬೊಬ್ಬರೂ ವೈಯಕ್ತಿಕ ವೈಶಿಷ್ಟ್ಯವನ್ನು ಉಳಿಸಿಕೊಂಡು ಈ ಕ್ಷೇತ್ರದಲ್ಲಿ ಗಟ್ಟಿಯಾದುದನ್ನು ಸಾಧಿಸಿದವರು. ಇವರ ಬರವಣಿಗೆಗಳಿಂದ ಕಾದಂಬರಿ ವೈವಿಧ್ಯ-ವನ್ನು ಪಡೆಯಿತು; ಭಾಷೆ ಹದಗೊಂಡಿತು; ಸರಳತೆಯಲ್ಲಿ ಸೌಂದರ್ಯವನ್ನು ಸಾಧಿಸಿತು. ತಮ್ಮ ಅನುಭವಕ್ಕೆ ನಿಲುಕುವುದನ್ನು ಪ್ರಾಮಾಣಿಕವಾಗಿ ಕಲಾತ್ಮಕ ಸೌಂದರ್ಯದಿಂದ ಅವರು ಹೇಳಿದ ಕೆಲವು ಸಂದರ್ಭಗಳಲ್ಲಿ ಔನ್ನತ್ಯವನ್ನೂ ಪಡೆಯಿತು. ಅವರ ಕೃತಿಗಳ ವಿಮರ್ಶೆ ಇಲ್ಲಿ ಪ್ರಸ್ತುತವಲ್ಲ. ಸಮೃದ್ಧವಾಗಿರುವ ಆ ಸಂಖ್ಯೆಯಲ್ಲಿ ಒಂದೆರಡನ್ನು ಮಾತ್ರ ಹೆಸರಿಸಬಹುದಾದರೆ, ಕಟ್ಟೀಮನಿಯವರ 'ಮೋಹದ ಬಲೆಯಲ್ಲಿ', ಮತ್ತು 'ಜ್ವಾಲಾಮುಖಿಯ ಮೇಲೆ' – ಇವುಗಳಲ್ಲಿ ಒಂದು, ಧರ್ಮದ ಸುತ್ತಲೂ ನೆಯ್ದುಕೊಂಡು ಅದನ್ನು ಸೆರೆಹಾಕಿರುವ ಬಲವತ್ತರವಾದ ಬಲೆಯನ್ನು ಬಯಲಿಗೆಳೆದರೆ, ಇನ್ನೊಂದು, ಸಮಾಜದ ಆಂತರ್ಯದಲ್ಲಿ ಕುದಿಯುತ್ತಿರುವ ಲಾವಾರಸವನ್ನು ತುಳುಕಿಸಿ ತೋರುತ್ತದೆ. ತ.ರಾ.ಸು. ಅವರ 'ಚಂದವಳ್ಳಿ ತೋಟ', 'ಹಂಸಗೀತೆ', 'ಚಂದನದ ಗೊಂಬೆ' ಇತ್ಯಾದಿಗಳನ್ನು ನಿರಂಜನರ 'ಅಭಯಾಶ್ರಮ', 'ಚಿರಸ್ಮರಣೆ' ಮೊದಲಾದುವನ್ನು ಸ್ಮರಿಸಿಕೊಳ್ಳಬಹುದು.

ಅನಂತರ ಬಂದ ಅನೇಕ ತರುಣ ಬರಹಗಾರರ ಮೇಲೆ ಈ ಕಾದಂಬರಿಕಾರರ ಪ್ರಭಾವ ಒಂದಲ್ಲ ಒಂದು ರೀತಿಯಲ್ಲಿ ಕಂಡುಬರುತ್ತದೆ. ಬಹುಶಃ ಅ. ನ. ಕೃ.

ಅವರ ಲೈಂಗಿಕ ವರ್ಣನೆಗಳಿಂದ ಪ್ರೇರಿತರಾಗಿ ಅದನ್ನು ವಾಸ್ತವ ಚಿತ್ರಣದ ಪ್ರಗತಿಶೀಲತೆಯಲ್ಲಿ ದಿಟ್ಟ ಹೆಜ್ಜೆಯೆಂದು ಭಾವಿಸಿ ಅದನ್ನು ಇನ್ನೂ ಮುಂದು ವರಿದ ಲೈಂಗಿಕ ಕಾದಂಬರಿಗಳ ಒಂದು ವರ್ಗವೇ ಹುಟ್ಟಿಕೊಂಡಿತು; ಕಲೆಯ ಸಮಾಧಿಯ ಮೇಲೆ ವಿಷದ ಬಳ್ಳಿಯನ್ನು ಹಬ್ಬಿಸಿತು. ಆದರೆ ಇನ್ನೊಂದು ಕಡೆಯಲ್ಲಿ ಕಾದಂಬರಿಗಳ ಸಾಧ್ಯತೆಯನ್ನು ಕಲಾತ್ಮಕವಾಗಿ ಅಳವಡಿಸಿಕೊಳ್ಳುವ ಪ್ರಯತ್ನಕ್ಕೂ ಇದು ಪ್ರೇರಣೆ ನೀಡಿತು. ತ್ರಿವೇಣಿಯವರಂತಹ ಕಾದಂಬರಿಕಾರರಲ್ಲಿ ಇದನ್ನು ನೋಡಬಹುದು. ತಮ್ಮ ಕಾದಂಬರಿಗಳಿಂದ ಇವರು ಕನ್ನಡದ ಮಹಿಳಾ ಲೇಖಕ ರಲ್ಲಿ ಅಗ್ರಗಣ್ಯರಾಗಿ ಪರಿಣಮಿಸಿದರು. ಇವರ 'ಬೆಕ್ಕಿನ ಕಣ್ಣು', 'ಶರಪಂಜರ', 'ಹಣ್ಣೆಲೆ ಚಿಗುರಿದಾಗ', 'ಬೆಳ್ಳಿಮೋಡ' ಇತ್ಯಾದಿ ಕೃತಿಗಳು ಪ್ರಸಿದ್ಧವಾದುವು. ಇದಕ್ಕಿಂತ ಹೆಚ್ಚಿನದನ್ನು ಅವರಿಂದ ಕನ್ನಡಲೋಕ ನಿರೀಕ್ಷಿಸುತ್ತಿರುವ ವೇಳೆ ಯಲ್ಲಿಯೇ ಅವರು ಕಣ್ಮರೆಯಾದರು. ಎಂ. ಕೆ. ಇಂದಿರಾ, ವಾಣಿ, ಜಯಲಕ್ಷ್ಮಿ, ಅನುಪಮಾ ನಿರಂಜನ, ಆರ್ಯಾಂಬ ಪಟ್ಟಾಭಿ, ಗೀತಾ ಕುಲಕರ್ಣಿ, ಸರೋಜಾ ರಾವ್ ಮೊದಲಾದ ಅನೇಕ ಕಾದಂಬರಿಕಾರ್ತಿಯರು ಇಂದು ಕೃತಿರಚನೆಯಲ್ಲಿ ತೊಡಗಿದ್ದಾರೆ.

ಕನ್ನಡ ಕಾದಂಬರಿ ಪ್ರಪಂಚದಲ್ಲಿ ಸಂಖ್ಯೆಯಿಂದ ಮಾತ್ರವಲ್ಲದೆ ತಮ್ಮದೇ ಆದ ಮನೋಧರ್ಮದಿಂದ ವಿಶಿಷ್ಟತೆಯನ್ನು ಸಾಧಿಸಿರುವವರು ಕೃಷ್ಣಮೂರ್ತಿ ಪುರಾಣಿಕ ಅವರು. 'ಹಾಲು ಕೆನೆ' ಕಾದಂಬರಿಯ ಅರಿಕೆಯಲ್ಲಿ ಅವರು ಹೇಳಿರುವ ಒಂದು ಮಾತು ಹೀಗಿದೆ: "ನೋಡಿದ ಕಣ್ಣು ಕಥೆ ಬರೆಯುತ್ತದೆ; ನೋಡುವ ಕಣ್ಣು ಅನುಭವಿಸುತ್ತದೆ. ದರ್ಶನದ ದೃಷ್ಟಿಯನ್ನು ಪಡೆದ ಕಣ್ಣು ಸಮಾಜದ ಜೀವನಾಡಿಗಳನ್ನು ಸ್ಪಂದನಮಾಡುತ್ತದೆ. ಈ ಮೂರು ಕಣ್ಣುಗಳಲ್ಲಿ ಮುಪ್ಪುರಿ ಗೊಂಡ ಲೇಖಕನಿಗೆ ಮುಕ್ಕಣ್ಣನ ಕೃಪೆಯಾದಾಗ ಮೂರನೇ ಕಣ್ಣು ತೆರೆಯುತ್ತದೆ- ಜಗತ್ತಿಗೆ ಈ ಕಣ್ಣ ಬೆಳಕೇ ಕಲ್ಯಾಣ.ಹೀಗೆ ಮುಕ್ಕಣ್ಣನ ಕೃಪೆಯಾದಾಗ ಮೂರನೇ ಕಣ್ಣನ್ನು ತಮ್ಮ ಕಾದಂಬರಿಗಳಿಗೆ ತಂದುಕೊಡುವುದು ಅವರ ಪ್ರಯತ್ನ." ತೆರೆದ ಕಣ್ಣು ಮನ ಹೃದಯಗಳಿಂದ ಜನರೊಡನೆ ಬೆರೆತು ತುಂಬು ಜೀವನವನ್ನು ಬಾಳಿದ ಪುರಾಣಿಕರ ಕಾದಂಬರಿಗಳಲ್ಲಿ ಸದಭಿರುಚಿಯಿದೆ, ಸದಾಶಯವಿದೆ, ಸಂತ್ ಸಂಕಲ್ಪವಿದೆ. ಬಹುಶಃ ಈ ಮುಪ್ಪುರಿಯ ಹೆಚ್ಚಿನ ಬಿಗಿತದಿಂದಲೋ ಏನೋ ಅವರ ಕಾದಂಬರಿಗಳು ಒಮ್ಮೊಮ್ಮೆ ಅತಿ ಆದರ್ಶದ ಅವಾಸ್ತವ ಲೋಕಕ್ಕೆ ಕಾಲಿಡುತ್ತವೆ ಎನಿಸುತ್ತದೆ. ಇವರ ಕೃತಿಗಳ ಮುಖ್ಯ ಗುಣ, ಜೀವನದ ಸಾಮಾನ್ಯ ಘಟನೆಗಳನ್ನು ರೋಚಕವಾಗುವಂತೆ ಹೇಳುವ ಶಕ್ತಿ ಇವರ ಕಾದಂಬರಿಗಳಲ್ಲಿ ಅನೇಕವು ಓದಲು ಹಿಡಿದರೆ ಬೇಸರವಿಲ್ಲದಂತೆ ಕೊನೆಯವರೆಗೂ ಸರಸವಾಗಿ ಓದಿಸಿ ಕೊಳ್ಳುತ್ತವೆ. ಆದರೆ ಅದು ಮನಸ್ಸನ್ನು ಉದ್ರೇಕಿಸುವ, ಪ್ರಕ್ಷುಬ್ಧಗೊಳಿಸುವ ರಂಜಕತೆಯಲ್ಲ, ಉನ್ಮೀಲನಗೊಳಿಸುವ ರುಚಿರ ರಮ್ಯತೆ. ತಮ್ಮ ಒಂದು ಪರಿಮಿತ

ವಲಯದಲ್ಲಿ ಜೀವನದ ಒಟ್ಟು ನೋಟವನ್ನು ಪಡೆಯುವ ಸಂತೃಪ್ತಿ ಅವುಗಳಲ್ಲಿದೆ. ಜೀವನದ ಒಳಿತು ಕೆಡಕುಗಳಲ್ಲಿ ಓರೆಕೋರೆಗಳಲ್ಲಿ, ಅರಕೆ ಅತೃಪ್ತಿಗಳಲ್ಲಿಯೂ ಒಂದು ಸಾಮರಸ್ಯದ ಸೂತ್ರವನ್ನು ಕಂಡು ಮುನ್ನಡೆಯುವ ಜೀವನಶ್ರದ್ಧೆ ಮಿಡಿ-ಯುತ್ತಿದೆ. ಅವರು ಚಿತ್ರಿಸುವುದು ಹೆಚ್ಚಾಗಿ ಸಮತೋಲನದಿಂದ ಮೂಡಿಬಂದ ಸಮನ್ವಯ ದೃಷ್ಟಿಯ ಮಧ್ಯಮವರ್ಗದ ಪಾತ್ರಗಳನ್ನು. 'ತಂಪು ನೆಳಲು' ಕಾದಂಬರಿಯ ಅರಿಕೆಯಲ್ಲಿ ಹೀಗೆ ಹೇಳಿದ್ದಾರೆ: "ಜೀವನವೊಂದು ಸಹನೆ ತಾಳ್ಮೆಗಳ ಸರಪಣಿ. ಈ ಸರಪಣಿ ಬಿಗಿಯಾದಷ್ಟೂ ಜೀವನಕ್ಕೆ ಉದ್ಧಾರ; ಸಡಿಲ-ವಾದರೆ ಜೀವನವೂ ಹೆಡೆಮುರಿ ಬಗ್ಗುವುದು." ಈ ಮಾತನ್ನು ತಿಳಿದು ಸಂಸಾರ-ವನ್ನು ನಡೆಸಬೇಕೆಂಬುದನ್ನು ಅವರ ಪಾತ್ರಗಳು ಸಾಧಿಸಿ ತೋರಿಸುತ್ತವೆ. 'ಹಬ್ಬಿದ ಬಳ್ಳಿ'. 'ಹಾಲು ಕೆನೆ', 'ವಸಂತಲಕ್ಷ್ಮಿ', 'ಮನೆ ತುಂಬಿದ ಹೆಣ್ಣು', ಇತ್ಯಾದಿ ಅನೇಕ ಕಾದಂಬರಿಗಳನ್ನು ಗಮನಿಸಬಹುದಾಗಿದೆ.

ನಮ್ಮ ಕಾದಂಬರಿಗಳ ಪ್ರಾರಂಭದ ದೆಸೆಯಲ್ಲಿ ಕಂಡುಬರುವ ಅನುವಾದಗಳು ಮತ್ತು ಐತಿಹಾಸಿಕ ಕೃತಿಗಳು–ಇವೆರಡೂ ಮುಂದೆಯು ಜೊತೆ ಜೊತೆಯಲ್ಲಿಯೇ ಬೆಳೆದುಬಂದವು. ಇಂಗ್ಲಿಷ್, ರಷ್ಯನ್, ಫ್ರೆಂಚ್ ಮತ್ತು ಇತರ ಭಾರತೀಯ ಭಾಷೆಗಳಲ್ಲಿರುವ ಅನೇಕ ಕಾದಂಬರಿಗಳು ಕನ್ನಡದಲ್ಲಿ ಭಾಷಾಂತರಗೊಂಡಿವೆ. 'ಹಮ್ಮು-ಬಿಮ್ಮು', 'ಪುನರುತ್ಥಾನ' 'ಬಾಳ್ವೆಯೇ ಬೆಳಕು', 'ಉಗ್ರಪರೀಕ್ಷೆ', 'ನೊಂದ ಜೀವಿ' 'ಮಹಾತ್ಯಾಗ' 'ರುದ್ರಮದೇವಿ' 'ಮೃಗನಯನೆ', 'ಗೋದಾನ' 'ಕೆಂಪು ಮೀನ'–ಹೀಗೆ ಈ ಸಂಖ್ಯೆಯನ್ನು ಬೆಳೆಸುತ್ತಾ ಹೋಗಬಹುದು. ಇಂತಹ ಕೃತಿಗಳಿಂದ ಕನ್ನಡ ಕಾದಂಬರಿ ಕ್ಷೇತ್ರ ಶ್ರೀಮಂತವಾಗಿದೆ.

ಐತಿಹಾಸಿಕ ಕಾದಂಬರಿಗಳದೂ ಒಂದು ದೊಡ್ಡ ಪರಂಪರೆ ಬೆಳೆದುಬಂದಿದೆ. ವೀರಕೇಸರಿ ಸೀತಾರಾಮಶಾಸ್ತ್ರಿಗಳನ್ನು ಇಲ್ಲಿ ಮೊದಲು ಸ್ಮರಿಸಿಕೊಳ್ಳಬೇಕು. ಬಿ. ಪುಟ್ಟಸ್ವಾಮಯ್ಯ, ಆನಂದಕಂದ, ಅ.ನ.ಕೃ., ತ.ರಾ.ಸು., ಕಟ್ಟೀಮನಿ, ಶ್ರೀನಿವಾಸರಾವ್ ಕೊರ್‍ಟಿ, ಮಾಸ್ತಿ ಮೊದಲಾದವರು ಇದನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ಪೌರಾಣಿಕ ಕಾದಂಬರಿಗಳ ಒಂದು ಹೊಸ ಜಾಡನ್ನು ತುಳಿದವರು ದೇವುಡು ನರಸಿಂಹಶಾಸ್ತ್ರಿಗಳು. ಅವರ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ'ಗಳು ಈ ಮಾರ್ಗದಲ್ಲಿ ನಡೆದ ಕೃತಿಗಳು. ಈಚೆಗೆ ಪ್ರಕಟವಾದ ಜನಾರ್ದನ ಗುರ್ಕಾರ್ ಅವರ 'ಚೂಡಾಲ'ವೂ ಈ ಮಾದರಿಯಲ್ಲಿ ಬಂದ ಸಮರ್ಥ ಕೃತಿ. ಇದಲ್ಲದೆ ಐತಿಹಾಸಿಕ ಹಿನ್ನೆಲೆಯನ್ನೊಳಗೊಂಡು ಪ್ರಮುಖವಾಗಿ ಆಧ್ಯಾತ್ಮಿಕ ಸ್ತರದಲ್ಲಿ ನಡೆಯುವ ಕಾದಂಬರಿಗಳ ಒಂದು ಬಗೆಯನ್ನೂ ಗುರುತಿಸಬೇಕಾಗುತ್ತದೆ. 'ಪರಿಪೂರ್ಣದೆಡೆಗೆ', 'ಕದಳಿಯ ಕರ್ಪೂರ' ಮತ್ತು 'ಜ್ಯೋತಿ ಬೆಳಗುತಿದೆ' ಈ ಮಾದರಿಯ ಕೃತಿ-ಗಳನ್ನು ಉಲ್ಲೇಖಿಸಬಹುದು, ಇದಕ್ಕೆ ಉದಾಹರಣೆಯಾಗಿ.

ಕನ್ನಡ ಕಾದಂಬರಿಗಳತ್ತ ದೃಷ್ಟಿ ಹರಿಸಿದಾಗ ಇನ್ನು ಕೆಲವು ದೊಡ್ಡ ಹೆಸರು-

ಗಳು ನಮ್ಮ ಮುಂದೆ ನಿಲ್ಲುತ್ತವೆ. ಉದಾಹರಣೆಗೆ ಚದುರಂಗ, ಕೆ. ವಿ. ಅಯ್ಯರ್, ಇನಾಂದಾರ್, ರಂ. ಶ್ರೀ ಮುಗಳಿ, ಶ್ರೀರಂಗ, ವ್ಯಾಸರಾಯ ಬಲ್ಲಾಳ, ಎಸ್. ಅನಂತನಾರಾಯಣ, ಶಂಕರ ಮೊಕಾಶಿ, ಯಶವಂತ ಚಿತ್ತಾಲ, ಎಸ್. ಎಲ್. ಭೈರಪ್ಪ ಇವರಲ್ಲಿ ಕೆಲವರು ಕೊಟ್ಟ ಕೃತಿಗಳ ಸಂಖ್ಯೆ ಹೆಚ್ಚಿಲ್ಲವಾದರೂ ಅವು ಮಹತ್ವದವು. ಚದುರಂಗರ 'ಸರ್ವಮಂಗಳಾ', 'ಉಯ್ಯಾಲೆ', ಅಯ್ಯರ್ ಅವರ 'ರೂಪದರ್ಶಿ', 'ಶಾಂತಲಾ', ಮುಗಳಿಯವರ 'ಬಾಳುರಿ', 'ಅನ್ನ' ಇನಾಂದಾರರ 'ಶಾಪ', 'ಕನಸಿನ ಮನೆ', ಶ್ರೀರಂಗರ 'ವಿಶ್ವಾಮಿತ್ರಸೃಷ್ಟಿ' 'ಪುರುಷಾರ್ಥ', ವ್ಯಾಸರಾಯ ಬಲ್ಲಾಳರ 'ಅನುರಕ್ತೆ', 'ಹೇಮಂತಗಾನ', ಎಸ್. ಅನಂತನಾರಾಯಣರ 'ಅತ್ತಿಗೆ', ಮೊಕಾಶಿಯವರ 'ಗಂಗವ್ವ–ಗಂಗಾ ಮಾಯಿ', ಚಿತ್ತಾಲರ 'ಮೂರು ದಾರಿ' ಹೀಗೆ ಹೇಳುತ್ತಾ ಹೋಗಬಹುದು. 'ವಂಶವೃಕ್ಷ' ಖ್ಯಾತಿಯ ಭೈರಪ್ಪನವರಂತೂ ಜನಪ್ರಿಯ ಕಾದಂಬರಿಕಾರರಾಗಿ-ದ್ದಾರೆ. ಅವರ 'ಗೃಹಭಂಗ', 'ನಾಯಿ ನೆರಳು' ಇತ್ಯಾದಿ ಕೃತಿಗಳು ಓದುಗರ ಗಮನ ಸೆಳೆದಿವೆ.

ನಮ್ಮ ಇಂದಿನ ಕಾದಂಬರಿಗಳನ್ನೆಲ್ಲಾ ಒಟ್ಟಾಗಿ ನೋಡಿದಾಗ ಅನ್ನಿಸುವು ದೆಂದರೆ ಅವುಗಳಲ್ಲಿ ವೈವಿಧ್ಯ ಕಡಿಮೆ ಎಂದು. ಸ್ವಲ್ಪ ಹೆಚ್ಚು ಕಡಮೆ ಮಧ್ಯಮ ವರ್ಗದ ಜೀವನವನ್ನು ಮಧ್ಯಮಾರ್ಗದಲ್ಲಿ ಚಿತ್ರಿಸುವ ಮಧ್ಯಮದರ್ಜೆಯ ಕಾದಂಬರಿ ಗಳೇ ಹೆಚ್ಚು. ಅದು ಹಳ್ಳಿಯ ಜೀವನವಾಗಲಿ, ನಗರ ನಾಗರಿಕತೆಯ ಚಿತ್ರಣ ವಾಗಲಿ ಎಲ್ಲಿಯೂ ತೀವ್ರವಾದ ಸಂವೇದನೆಯ ಮಿಡಿತ ಅಷ್ಟಾಗಿ ಕಾಣುವುದಿಲ್ಲ. ವಿಶೇಷವಾದ ಏರುಪೇರುಗಳಿಂದ ಕೂಡಿದ ವಿಪರೀತ ಜೀವನದ ಹೋರಾಟವೂ ನಮ್ಮಲ್ಲಿ ಕಡಮೆ. ಬಹುಶಃ ಕರ್ನಾಟಕದ ವಾತಾವರಣವೇ ಇದಕ್ಕೆ ಕಾರಣ ಎನ್ನಬಹುದು. ಇತರ ಭಾಗಗಳಿಗೆ ಹೋಲಿಸಿದರೆ ಪ್ರಕೃತಿ ಇಲ್ಲಿ ಕರುಣಾಮಯಿ. ಭೀಕರ ಪ್ರವಾಹ ಚಂಡಮಾರುತಗಳ ಹಾವಳಿಗಳಾಗಲಿ ಕ್ಷಾಮಡಾಮರಗಳಾಗಲಿ, ತಲೆ ಸಿಡಿಯುವ ಬಿಸಿಲಾಗಲಿ ಹೆಪ್ಪುಗಟ್ಟುವ ಚಳಿಯಾಗಲಿ ಇಲ್ಲಿಲ್ಲ. ಈ ಸಮ-ಧಾತುವಾದ ವಾತಾವರಣವನ್ನೇ ಜನಜೀವನವೂ ಪ್ರತಿಬಿಂಬಿಸಿದೆ. ಗಡಿನಾಡಿಗೆ ಬೀಳುವ ಯುದ್ಧದ ಏಟುಗಳನ್ನೂ ಕೊಲೆ ಸುಲಿಗೆ ದರೋಡೆಗಳನ್ನೂ, ನಿರಾಶ್ರಿತರ ಸಮಸ್ಯೆಗಳನ್ನೂ ಕರ್ನಾಟಕ ಕಂಡರಿಯದು. ಪತ್ರಿಕೆಗಳಲ್ಲಿ ಓದಿಯೇ ನಾವದನ್ನು ತಿಳಿಯಬೇಕು; ಆ ಪರಿಸ್ಥಿತಿಯನ್ನು ಊಹಿಸಿಕೊಳ್ಳಬೇಕು. ಅದರ ರುದ್ರಚಿತ್ರ-ಗಳನ್ನು ಬಂಗಾಳ ಮೊದಲಾದುವುಗಳಲ್ಲಿ ಕಾಣುವಂತೆ ಕರ್ನಾಟಕ ಪ್ರತ್ಯಕ್ಷವಾಗಿ ಕಾಣಲಾರದು. ಈ ಹಿನ್ನೆಲೆ ನಮ್ಮ ಲೇಖಕರ ಅನುಭವವನ್ನು ಸಹಜವಾಗಿಯೆ ಸೀಮಿತಗೊಳಿಸುತ್ತದೆ.

ಹೀಗೆಂದ ಮಾತ್ರಕ್ಕೆ ವೈವಿಧ್ಯವಾಗಲಿ ಸಮಸ್ಯೆಗಳಾಗಲಿ ಏರುಪೇರುಗಳಾ-ಗಲಿ ಇಲ್ಲವೆಂದಲ್ಲ. ಹಾಗೆ ನೋಡಿದರೆ ಇಡೀ ಭಾರತವೇ ಇಲ್ಲಿದೆ, ಅದರ ಸಂಕ್ಷಿಪ್ತ

ರೂಪದಲ್ಲಿ. ಸಮಧಾತು ಪ್ರಮಾಣದಲ್ಲಿ. ಮಳೆ ಸುರಿಯುವುದರಲ್ಲಿ ಉತ್ತರದ ಚಿರಾಪುಂಜಿಗೆ ಮಾತ್ರ ಎರಡನೆಯದಾದ ಆಗುಂಬೆ ಒಂದು ಕಡೆ ಇದ್ದರೆ, ಇನ್ನೊಂದು ಕಡೆ ಬಿಸಿಲು ಸುರಿಯುವ ಬಳ್ಳಾರಿ ಇದೆ. ಕರಾವಳಿ ಪ್ರದೇಶವಿರುವಂತೆ ಎತ್ತರವಾದ ಬಯಲು ಸೀಮೆ; ವಿವಿಧ ಜನಾಂಗಗಳೂ ಆಚಾರ ವ್ಯವಹಾರಗಳೂ ಸಂಸ್ಕೃತಿಯ ವೈವಿಧ್ಯಗಳೂ ಇವೆ. ನಾಗರಿಕತೆಯ ಸೋಂಕಿಲ್ಲದ ಹಳ್ಳಿಗಳಿವೆ; ತಾಂತ್ರಿಕ ಜಟಿಲತೆಯಿಂದ ಸಂಕೀರ್ಣಗೊಂಡ ನಗರಗಳಿವೆ. ಇದೆಲ್ಲದರ ಕಡೆಗೆ ನಮ್ಮ ಕಾದಂಬರಿಕಾರರು ತೆರೆದ ಕಣ್ಣಿಂದ ನೋಡಬೇಕಾಗುತ್ತದೆ. ತಮ್ಮ ಸುತ್ತ ಇರುವ ಸಾಧ್ಯತೆಗಳೆಲ್ಲವನ್ನೂ ಬಳಸಿಕೊಳ್ಳುವ ಉತ್ಕಟ ಸಂವೇದನಶೀಲತೆ ಮತ್ತು ವಿಚಾರ ಪರತೆ ಲೇಖಕರಿಗೆ ಆವಶ್ಯಕ. ಹಾಗೆ ಬಹುಮುಖಿ ಜೀವನದರ್ಶನವನ್ನು ಕಂಡು ಕಾಣಿಸುವ ಸತ್ತ್ವಶಾಲೀ ಕಾದಂಬರಿಗಳು ಈಗ ಸಾಕಷ್ಟು ಪ್ರಮಾಣದಲ್ಲಿ ಬರುತ್ತಿಲ್ಲ ಎಂಬ ಅತೃಪ್ತಿ ನಮ್ಮ ಕಾದಂಬರಿಗಳನ್ನು ಒಟ್ಟಾಗಿ ನೋಡಿದಾಗ ಉಂಟಾಗುತ್ತದೆ.

ಕಾರಂತರಂತೆ ಹೊಸ ಹೊಸ ಅನುಭವಗಳ ಬೆನ್ನು ಹತ್ತಿ ಕಾದಂಬರಿಯ ಪರಿಧಿಯನ್ನು ವಿಸ್ತರಿಸಿದವರು ವಿರಳ. ಅವರ 'ಚೋಮನ ದುಡಿ'ಯಲ್ಲಿ ಒಂದು ಜೀವನವನ್ನು ಕಂಡರೆ 'ಕುಡಿಯರ ಕೂಸು' ಇನ್ನೊಂದು ಜನಾಂಗದ ಆಶಯ ಆಶೋತ್ತರ, ಬದುಕು ಬವಣೆಗಳನ್ನು ಚಿತ್ರಿಸುತ್ತಿದೆ. ಆದರೆ ಅವರ ಅನುಭವಕ್ಕೂ ಒಂದು ಮಿತಿಯುಂಟು. ಕಡಲತಡಿಯ ಭಾರ್ಗವರೆಂದು ಪ್ರಸಿದ್ಧರಾದ ಅವರು ಕಡಲ ಮಕ್ಕಳ ಜೀವನಕಥೆಯನ್ನು ಅಷ್ಟಾಗಿ ಗಮನಿಸದಿರುವುದು ಆಶ್ಚರ್ಯಕರ. ದಿನದಿನವೂ ಜೀವನವನ್ನು ಪಣವಿಟ್ಟು ಸಮುದ್ರದ ಅಲೆಗಳ ಮೇಲೆ ಏರಿಳಿಯುತ್ತಾ ಬಲೆ ಬೀಸುವ ಮೀನುಗಾರರ ಸಾಹಸದ ರೋಮಾಂಚಕಾರಿಯಾದ ಜೀವನವನ್ನು ಅವರ ಲೇಖನಿ ಚಿತ್ರಿಸಿಲ್ಲ. ಮಲಿಯಾಳದ 'ಚೆಮ್ಮೀನ್' ಕಾದಂಬರಿಯಂತಹ ಕೃತಿ ಕನ್ನಡದಲ್ಲಿ ಬರಲು ಸಾಧ್ಯವಾಗಿಲ್ಲ. ಈಚೆಗೆ ಬಂದ ವಿಶುಕುಮಾರರ 'ಕರಾವಳಿ' ಇಂತಹ ಒಂದು ಸ್ತುತ್ಯ ಪ್ರಯತ್ನ. ಅಂತೆಯೇ ಭಾರತೀಸುತರ 'ಗಿರಿಕನ್ನಿಕೆ' ಮತ್ತು ಇತರ ಕೆಲವು ಕಾದಂಬರಿಗಳು ಗಿರಿಜನರಲ್ಲಿ ಒಂದು ವರ್ಗದವರಾದ ಪಣಿಯರ ಜೀವನವನ್ನು ಪರಿಣಾಮಕಾರಿಯಾಗಿ ಮೂಡಿಸುತ್ತವೆ.

ಹೀಗೆ ಪ್ರಾದೇಶಿಕವಾದ ಸೊಗಡಿನಿಂದ ಕೂಡಿದ ಕಾದಂಬರಿಗಳು ಕನ್ನಡದಲ್ಲಿ ಮೊದಲಿನಿಂದಲೂ ಬಂದಿವೆ; ಕೆಲವು ಮಹತ್ವದ ಸ್ಥಾನವನ್ನು ಪಡೆದಿವೆ. ಮಿರ್ಜಿ ಅಣ್ಣಾರಾಯರ 'ನಿಸರ್ಗ' ಇದಕ್ಕೆ ಒಳ್ಳೆಯ ಉದಾಹರಣೆ. ಕುವೆಂಪುರವರ ಎರಡು ಕಾದಂಬರಿಗಳು, ಕಾರಂತರ ಕೆಲವು ಕಾದಂಬರಿಗಳು, ಆಯಾ ಭಾಗದ ಜೀವನವನ್ನು ದಟ್ಟವಾಗಿ ಕಣ್ಣಿಗೆ ಕಟ್ಟುತ್ತವೆ. ಗೋಕಾಕರ 'ಸಮರಸವೇ ಜೀವನ' ಬೃಹತ್ಕಾದಂಬರಿಯನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಇದು ಸುಮಾರು ಇಪ್ಪತ್ತು ವರ್ಷಗಳ ಕಾಲ ಭಾಗಭಾಗವಾಗಿ ಬೆಳೆಯುತ್ತ ಬಂದ ಕೃತಿ. ಅದರ

ಗುಣದೋಷಗಳೆಲ್ಲವೂ ಈ ಕೃತಿಯಲ್ಲಿ ಕಂಡುಬರುತ್ತವೆ. ಜೀವನದ ಬಹಿರಂಗ ಪರಿಸರದ ಹಿನ್ನೆಲೆಯಲ್ಲಿ ಅಂತರಂಗದ ವಿಶ್ಲೇಷಣೆಯನ್ನು ಕಾದಂಬರಿ ಕೈಕೊಂಡಿದೆ.

ಜೀವನದ ಎಲ್ಲ ಮುಖಗಳನ್ನೂ ಕಂಡು ಚಿತ್ರಿಸುವುದು ಒಬ್ಬ ವ್ಯಕ್ತಿಗಾಗಲೀ ಒಂದು ಕೃತಿಗಾಗಲೀ ಸಾಧ್ಯವಿಲ್ಲ. ನೂರಾರು ಕಣ್ಣುಗಳಿಂದ ಕೈಗಳಿಂದ ಆಗಬೇಕಾದ ಕೆಲಸ ಅದು. ಕನ್ನಡ ಕಾದಂಬರಿಯ ವೈವಿಧ್ಯ, ಆಳ ಅಗಲ, ಎತ್ತರ ಬಿತ್ತರಗಳು ಬೆಳೆಯಬೇಕಾದರೆ ಕನ್ನಡ ಲೇಖಕ ಬೆಳೆಯಬೇಕು; ಜೀವನದ ವಿವಿಧ ರಂಗಗಳಲ್ಲಿ ಬೆಳೆದವರು ಕಾದಂಬರಿಗೆ ಇಳಿಯಬೇಕು. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಗೊ, ನಗರಜೀವನದ ಸುಖಜೀವಿಗಳಿಗೊ ಕಾದಂಬರಿ ಮೀಸಲಾದರೆ ಅಷ್ಟರ ಮಟ್ಟಿಗೆ ಅನುಭವದ ಪರಿಮಿತಿಯನ್ನು ಅದು ಪಡೆಯುತ್ತದೆ.

ಸಾಮಾಜಿಕ ಅನುಭವದ ಶ್ರೀಮಂತಿಕೆ; ಜೊತೆಗೆ ಆಂತರಿಕ ಚಿಂತನ ಶೀಲತೆಯಿಂದ ಮೂಡಿದ ವೈಚಾರಿಕತೆ ಮತ್ತು ಅದನ್ನು ಕಲಾತ್ಮಕವಾಗಿ ನಿರೂಪಿಸುವ ಸಾಮರ್ಥ್ಯ ಈ ಮೂರು ಅಂಶಗಳು ಲೇಖಕನ ಯಶಸ್ಸನ್ನು ನಿರ್ಧರಿಸುತ್ತವೆ. ಇವುಗಳನ್ನು ಬೆಳೆಸಿಕೊಳ್ಳದ ಲೇಖಕ ಸತ್ತ್ವಶಾಲಿಯಾದ ಕೃತಿಗಳನ್ನು ಕೊಡುವುದು ಸಾಧ್ಯವಿಲ್ಲ. ಈ ಮಾತು ಕಾದಂಬರಿಗೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ನೇರವಾದ ಜೀವನವೇ ಅದರ ಮೂಲಸಾಮಗ್ರಿ. ಪಾತ್ರ ಸನ್ನಿವೇಶ ಸಂವಿಧಾನ ಭಾಷೆ ಮೊದಲಾದುವೆಲ್ಲಾ ಇದನ್ನು ಅವಲಂಬಿಸಿ ಬೆಳೆಯುತ್ತವೆ- ಇಂದು ಅತಿ ಸ್ವತಂತ್ರವಾದ ಪ್ರಯೋಗಶೀಲತೆಯ ತಳಹದಿಯ ಮೇಲೆ ನಿಂತಿರುವ ಪಾಶ್ಚಾತ್ಯ ಕಾದಂಬರಿಗಳೂ ಈ ಮೂಲಸೂತ್ರವನ್ನು ಕಡೆಗಣಿಸುವಂತಿಲ್ಲ. ಬದಲಾಗುತ್ತಿರುವ ಜೀವನಮೌಲ್ಯಗಳ ವೈಚಾರಿಕ ವಿಶ್ಲೇಷಣೆ ವಿವೇಚನೆಗಳನ್ನು ಸಾಹಿತಿ ಕೈಕೊಳ್ಳುತ್ತಾನೆ. ಆದರೆ ಅದು ಉಪದೇಶಾತ್ಮಕವಾಗಿ ಬಾರದೆ ಕಲಾತ್ಮಕವಾದ ನಿಲುವಿನಲ್ಲಿ ನಿಂತು ಹೊಸ ಬೆಳಕನ್ನು ಬೀರಬೇಕಾಗುತ್ತದೆ. ವಿಲಿಯಂ ಫಾಕ್‌ನರ್, ಹೆನ್ರಿ ಜೇಮ್ಸ್, ಹೆಮಿಂಗ್‌ವೇ, ಕಾಮು, ಸಾರ್ತ್ರೆ ಮತ್ತು ಇನ್ನೂ ಇತ್ತೀಚಿನ ಬರಹಗಾರರಲ್ಲಿ ಕೂಡ ಈ ದೃಷ್ಟಿಯನ್ನು ಕಾಣಬಹುದು. ನೋಬೆಲ್ ಪಾರಿತೋಷಕವನ್ನು ಸ್ವೀಕರಿಸಿದ ಸಮಾರಂಭದಲ್ಲಿ ಆಲ್ಬರ್ಟ್ ಕಾಮು ಹೇಳಿದ ಈ ಮಾತುಗಳನ್ನು ಇಲ್ಲಿ ಗಮನಿಸಬಹುದು:

"To me Art is not a solitary delight. It is a means of stirring the greatest number of men by providing them with a privileged image of our common joys and woes. Hence it forces the artist not to isolate himself; it subjects him to the humblest and most universal truth.[೧]

---

೧. Albert Camus: *Resistance, Rebellion and Death.*

ಕಲಾವಿದ ಜೀವನದಿಂದ ತನ್ನನ್ನು ಬೇರ್ಪಡಿಸಿಕೊಂಡು ನಿಲ್ಲುವುದಿಲ್ಲ; ಜೀವನದ ಮೂಲ ಸತ್ಯದ ಅನ್ವೇಷಣೆಗೆ ಕಲೆಯನ್ನು ಸಾಧನವನ್ನಾಗಿ ಮಾಡಿಕೊಳ್ಳುತ್ತಾನೆ. ಅದಕ್ಕೆ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ. ಸಾಹಿತ್ಯದ ಯಾವುದೇ ಪ್ರಯೋಗಶೀಲತೆ ಈ ಹಿನ್ನೆಲೆಯಲ್ಲಿ ನಡೆಯಬೇಕಾಗುತ್ತದೆ.

ಆಧುನಿಕ ಪಾಶ್ಚಾತ್ಯ ಕಾದಂಬರಿಗಳಲ್ಲಿ ಕಂಡುಬರುವ ಪ್ರಯೋಗಗಳು ಆ ಮಾಧ್ಯಮದ ಕಲಾಸಾಧ್ಯತೆಯಲ್ಲಿ ಹಲವಾರು ಹಂತಗಳನ್ನು ನಿರ್ಮಿಸಿವೆ. ಪಾತ್ರ ರಚನೆ, ಸಂವಿಧಾನನಿರ್ಮಾಣ, ಜೀವನದ ಹಿನ್ನೆಲೆಯ ನಿರೂಪಣೆ, ಶೈಲಿ ಈ ಮೊದಲಾದ ಎಲ್ಲ ಅಂಗಗಳಲ್ಲಿಯೂ ಇದು ವ್ಯಕ್ತವಾಗುತ್ತದೆ. ಸ್ಕಾಟ್, ಡಿಕನ್ಸ್, ಹಾರ್ಡಿ, ಅಂತೆಯೇ ಟಾಲ್‌ಸ್ಟಾಯ್, ಡೋಸ್ಟೋವ್‌ಸ್ಕಿ, ಬಾಲ್ಜಾಕ್, ಸ್ಟೆಂಡಾಲ್-ಈ ಮೊದಲಾದ ಕಾದಂಬರಿಕಾರರಲ್ಲಿ ಕಂಡುಬರುವ ಪಾತ್ರಚಿತ್ರಣ, ಪರಿಸರನಿರ್ಮಾಣ, ಜೀವನದೃಷ್ಟಿಗಳು ಆಧುನಿಕ ಕಾದಬರಿಗಳಲ್ಲಿ ಅಪರಿಚಿತವಾಗಿ ನಿಲ್ಲುತ್ತವೆ. ಜೆ. ಡಿ. ಸಾಲಿಂಜರ (J. D. Salinger)ನ 'The Catcher in the Rhy'; ಜೇಮ್ಸ್‌ನ 'Golden Bowl', ಫಾಕ್‌ನರನ 'The Sound and the Fury', ಜೀನ್‌ಪಾಲ್ ಸಾರ್ತ್ರೆಯ 'The Age of Reason', 'The Reprieve', 'The Trouble Sleep', ಈ ಕಾದಂಬರಿತ್ರಯಗಳು - ಈ ಮೊದಲಾದ ಕಾದಂಬರಿಗಳನ್ನು ಓದುವಾಗ ಈ ಪ್ರಯೋಗಶೀಲತೆಯ ಪ್ರಭಾವ ಮನವಟ್ಟಾಗುತ್ತದೆ.

ಇಂದು ಕನ್ನಡ ಕಾದಂಬರಿಗಳ ಸಂಖ್ಯೆ ಬೆಳೆಯುತ್ತಿದ್ದರೂ ಈ ಮಟ್ಟದ ಪ್ರಯೋಗಶೀಲತೆ ಅವುಗಳಲ್ಲಿ ಕಂಡುಬರುವದಿಲ್ಲ. ಹಾಗೆ ನೋಡಿದರೆ ಕನ್ನಡ ಕಾವ್ಯ ಕ್ಷೇತ್ರದಲ್ಲಿ ನಡೆದಿರುವಷ್ಟು ಕೆಲಸ ಕಾದಂಬರಿಗಳಲ್ಲಿ ನಡೆದಿಲ್ಲವೆಂದೇ ಹೇಳಬೇಕು. ಇದೊಂದು ಸುಲಭವಾಗಿ ಬರೆಯಬಲ್ಲ ಸಾಹಿತ್ಯ ಪ್ರಕಾರವೆಂದು ನಮ್ಮ ತರುಣ ಬರಹಗಾರರನೇಕರು ಭಾವಿಸಿರುವಂತಿದೆ. ಇನ್ನು ಕೆಲವರಿಗೆ ಇದು ತಮ್ಮ ವಿಚಿತ್ರ ಕಲ್ಪನೆಗಳಿಗೆ, ಇಲ್ಲವೇ ಅರೆಬೆಂದ ಅನುಭವಗಳಿಗೆ ಅಥವಾ ಆತುರದ ಅಭಿಪ್ರಾಯಗಳಿಗೆ ಬೆನ್ನು ಕೊಡುವ ಹುಚ್ಚು ಕುದುರೆಯಾಗಿದೆ. ಅಗ ಈಗ ಅಲ್ಲೊಮ್ಮೆ ಇಲ್ಲೊಮ್ಮೆ ಗಮನಾರ್ಹ ಕೃತಿ ಬರುವುದನ್ನು ಬಿಟ್ಟರೆ ಉಳಿದ ಬಹುಸಂಖ್ಯೆಯ ಕೃತಿಗಳಿಗೆ ಈ ಮಾತು ಅನ್ವಯಿಸುತ್ತದೆ. ಇಂದು ಬರುತ್ತಿರುವ ಕನ್ನಡ ಕಾದಂಬರಿಗಳಲ್ಲಿದರ ಒಂದು ಸಮೀಕ್ಷೆ ಮಾಡುವ ಅಗತ್ಯವಿದೆ. ಅದು ಸ್ವಲ್ಪ ಮಟ್ಟಿಗೆ ಕಷ್ಟಸಾಧ್ಯವಾದರೂ ಕುತೂಹಲಕಾರಿಯಾದ ಕಾರ್ಯ; ಮುಂದಿನ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವಾದದ್ದು ಕೂಡ ಹೌದು.

ನಮ್ಮ ಕೆಲವು ದೊಡ್ಡ ಕಾದಂಬರಿಕಾರರು ಈಗಲೂ ಬರೆಯುತ್ತಿದ್ದಾರೆ; ಕಾರಂತ, ರಾವ್‌ಬಹಾದ್ದೂರ್, ಇನಾಂದಾರ್, ಪುರಾಣಿಕ ಮೊದಲಾದವರು. ಈಗಾಗಲೇ ತಮ್ಮ ವೈಶಿಷ್ಟ್ಯವನ್ನು ಸಾಧಿಸಿಕೊಂಡಿರುವ ಅವರು ತಮ್ಮ ಮಟ್ಟವನ್ನು ಉಳಿಸಿಕೊಂಡಿದ್ದಾರೆ. ಅದಕ್ಕೆ ಭಿನ್ನವಾದ ಪ್ರಯೋಗಶೀಲತೆಯನ್ನು

ಅಷ್ಟಾಗಿ ಅವರಿಂದ ನಿರೀಕ್ಷಿಸಲಾಗದು. ಹಾಗೆ ನೋಡಿದರೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', ಅವರ ಮೊದಲ ಕಾದಂಬರಿಗಿಂತ ಭಿನ್ನಮಾರ್ಗದಲ್ಲಿ ನಡೆದು ಚಕಿತಗೊಳಿಸಿತು. ಕಟ್ಟೀಮನಿ, ತ.ರಾ.ಸು., ನಿರಂಜನಾದಿಗಳಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸುವುದು ಅಸಂಭವವಲ್ಲ. ಆದರೆ ಅವರಿಂದ ಇತ್ತೀಚಿಗೆ ಹೇಳಿಕೊಳ್ಳುವಂತಹುದೇನೂ ಬರುತ್ತಿಲ್ಲ.

ಇನ್ನು ಈಗಿನ ತರುಣ ಪೀಳಿಗೆಯ ಪ್ರತಿಭಾವಂತರು ಕಾದಂಬರಿಗಿಂತ ಹೆಚ್ಚಾಗಿ ಕಾವ್ಯದ ಕಡೆ ಆಕರ್ಷಿತರಾಗಿರುವಂತೆ ತೋರುತ್ತಿದೆ. ಅಲ್ಲಿ ಕೆಲ ಮಟ್ಟಿಗೆ ಗಟ್ಟಿಯಾದ ಪ್ರಯೋಗಗಳು ನಡೆಯುತ್ತಿವೆ. ಆದರೆ ಕಾದಂಬರಿ ಅಷ್ಟು ಪುಷ್ಟವಾಗಿ ಬೆಳೆಯುತ್ತಿಲ್ಲವೆಂದು ಹೇಳಬೇಕಾಗಿದೆ. ನಾಲ್ಕು ಸಿನಿಮಾಗಳನ್ನು ನೋಡಿ ಎರಡು ಕಾದಂಬರಿಗಳನ್ನು ಬರೆದುಬಿಡಬಹುದೆನ್ನುವ ಭಾವನೆಯುಳ್ಳವರಿಗೆ ಬದಲಾಗಿ ಮಾನವಸ್ವಭಾವದ ಬಹುಮುಖ ಪರಿಚಯವನ್ನೂ ಸಂಕೀರ್ಣತೆಯನ್ನೂ ಬದಲಾಗುತ್ತಿರುವ ಜನಜೀವನದ ಒಳಹೊರಗುಗಳನ್ನೂ ಕಂಡು ಕಂಡರಿಸುವ ಶಕ್ತಿಯನ್ನು ಕರಗತಗೊಳಿಸಿಕೊಳ್ಳಲು ತುಡಿಯುತ್ತಿರುವ ಕಾದಂಬರಿಕಾರರು ಬರಬೇಕಾಗಿದೆ. ಈಗ ಬರುತ್ತಿರುವ ಕಾದಂಬರಿಗಳಲ್ಲಿ ಬಹುಪಾಲು ಕಾಲಹಾರಕ, ಹೆಚ್ಚೆಂದರೆ ಅಲಂಕಾರಿಕ ಸಾಮಗ್ರಿಗಳಾಗಿವೆಯೇ ಹೊರತು ಜೀವನದತ್ತ ಗಂಭೀರ ದೃಷ್ಟಿಯನ್ನು ತಿರುಗಿಸಿ ಹೊಸ ಚೈತನ್ಯವನ್ನುಕ್ಕಿಸುವ ಪ್ರಭಾವಶಾಲೀ ಕೃತಿಗಳಾಗಿಲ್ಲ, ಈಚೆಗೆ ಬಂದ ಕೆಲವು ಕಾದಂಬರಿಗಳಿಗೆ ಅವಾಸ್ತವ ಮಹತ್ವ ಸಿಕ್ಕಿದುದಕ್ಕೆ ಬಹುಶಃ ಈ ಹಿನ್ನೆಲೆ ಕಾರಣವಾಗಿರಬೇಕೆನ್ನಿಸುತ್ತಿದೆ. ಉದಾಹರಣೆಗೆ 'ಸಂಸ್ಕಾರ' ಮತ್ತು ಇತ್ತೀಚಿನ 'ಬಿರುಕು' ಕಾದಂಬರಿಗಳನ್ನು ಸ್ಮರಿಸಿಕೊಳ್ಳಬಹುದು.

'ಸಂಸ್ಕಾರ' ಬಹುಮುಖ್ಯವಾದ ಉದ್ದೇಶವೊಂದನ್ನು ಮುಂದಿಟ್ಟುಕೊಂಡು ಹೊರಟಿದೆ ಎಂಬ ವಿಚಾರದಲ್ಲಿ ಸಂದೇಹವಿಲ್ಲ. ಆದರೆ ಆ ಉದ್ದೇಶವನ್ನು ಕಾದಂಬರಿ ಹೇಗೆ, ಎಷ್ಟರ ಮಟ್ಟಿಗೆ ಸಾಧಿಸಿದೆಯೆಂಬುದು ಗಮನಾರ್ಹವಾದ ಸಂಗತಿ. ಮೊಟ್ಟ ಮೊದಲನೆಯದಾಗಿ, ಕಾದಂಬರಿಯ ತಳವೇ ಭದ್ರವಿಲ್ಲ ಎನಿಸುತ್ತದೆ. ಏಕೆಂದರೆ, ಇದರ ಕೇಂದ್ರಪ್ರಜ್ಞೆಯಾದ ಪ್ರಮುಖಪಾತ್ರದ ನಡೆನುಡಿಗಳೆಲ್ಲವೂ ಕಾದಂಬರಿಕಾರರ ಪೂರ್ವನಿರ್ಧಾರಿತ ತತ್ತ್ವಗಳಿಂದ ನಿಯಂತ್ರಿತವಾಗಿವೆ. ಪ್ರಾಣೇಶಾಚಾರ್ಯರು ಕಾದಂಬರಿಕಾರರ ಕೈಯ ಸೂತ್ರಗಳಿಗೆ ತಕ್ಕಂತೆ ತಾಳಹಾಕುತ್ತಾರೆ, ಕುಣಿಯುತ್ತಾರೆ, ಮಣಿಯುತ್ತಾರೆ. ಆ ಪಾತ್ರದ ಅನಿವಾರ್ಯವಾದ ಆವಶ್ಯಕತೆಯಾಗಿ ಅವರು ಬೆಳೆದಂತೆ ತೋರುವುದಿಲ್ಲ. ಅನುಚಿತ ಆತುರದಿಂದ ಆತನನ್ನು ಅತ್ತ ತಳ್ಳಿದಂತೆ ಅನಿಸುತ್ತದೆ. ಇದಕ್ಕೊಂದು ಸಾಂಕೇತಿಕ ಅರ್ಥವನ್ನು ಕೊಡಲು ಪ್ರಯತ್ನಿಸುವುದಂತೂ ಇನ್ನೂ ವ್ಯರ್ಥ. "ಅಮವಾಸೆ ಕತ್ತಲಲ್ಲಿ ಚಂದ್ರಿ ಸುಲಿದುಕೊಟ್ಟ ಹಣ್ಣನ್ನು ತಿಂದು ಅವಳ ಜೊತೆ ಮಲಗುವದು ಸಾಂಕೇತಿಕವಾಗಿದೆ," ಎಂದು ಹೇಳುತ್ತಾ ಎಂ. ಜಿ. ಕೃಷ್ಣ-

ಮೂರ್ತಿ ಅವರು ಮುಂದುವರಿದು ಹೀಗೆ ಹೇಳಿದ್ದಾರೆ:[೧]

"ಪ್ರಾಣೇಶಾಚಾರ್ಯರು ವಹಿಸುವ ಪಾತ್ರ ಸಾಧಾರಣವಾಗಿ ಗಂಡು ವಹಿಸುವ ಪಾತ್ರವಲ್ಲ. ಪ್ರಾಣೇಶಾಚಾರ್ಯರಿಗೆ ಬಾಳೆಯಹಣ್ಣನ್ನು ತಿನ್ನಿಸಿ ಅವನನ್ನು ತಬ್ಬಿಕೊಂಡು ಮಲಗುವ ಚಂದ್ರಿ ತಾಯಿಯ ಪ್ರತೀಕ ಕೂಡ ಆಗುತ್ತಾಳೆ. ಜೊತೆಗೇ ಪ್ರಾಣೇಶಾಚಾರ್ಯರಿಗೆ ಹೆಚ್ಚು ಪರಿಚಯವಿಲ್ಲದ ನಿಸರ್ಗದತ್ತ ಅವರನ್ನು ತಿರುಗಿಸುವ ದೇವತೆ ಕೂಡಾ ಆಗುತ್ತಾಳೆ."

ಇದರೊಟ್ಟಿಗೆ ಪಾಶ್ಚಾತ್ಯ ವಿಮರ್ಶಕರೊಬ್ಬರ ಹೇಳಿದ ಮಾತನ್ನು ನೆನೆಯಬೇಕು.

"Symbolism becomes questionable when themes concerning modern man and his dilemma in a world full of facts and problems are represented in novels composed in the technique of all dominating symbolism."[೨]

ಆಧುನಿಕ ಮಾನವನ ಪರಿಸರ ಮತ್ತು ಆತ ಎದುರಿಸಬೇಕಾಗಿರುವ ಇಕ್ಕಟ್ಟಿನ ಪ್ರಸಂಗಗಳನ್ನು ನೇರವಾಗಿ ಚಿತ್ರಿಸಬೇಕಾಗಿರುವ ಸಮಯದಲ್ಲಿ ಸಾಂಕೇತಿಕತೆಯ ಸುಳಿಯೊಳಗಿಂದ ಜಾರಿಕೊಂಡರೆ ಅಂತಹ ಸಾಂಕೇತಿಕತೆಯ ಔಚಿತ್ಯವನ್ನೇ ಪ್ರಶ್ನಿಸಬೇಕಾಗುತ್ತದೆ. ಯು. ಆರ್. ಅನಂತಮೂರ್ತಿಯವರ ಈ ಕಾದಂಬರಿಯಲ್ಲಿ ಉದುರಿಬೀಳುತ್ತಿರುವ ಪ್ಲೇಗ್ ಇಲಿಗಳನ್ನು ಇಂದಿನ ಮೃತ ಮೌಲ್ಯಗಳ ಸಂಕೇತವನ್ನುವುದಾಗಲೀ, ಎಂ. ಜಿ. ಕೆ. ಅವರು ಹೇಳುವಂತೆ ಚಂದ್ರಿಯನ್ನು ಪ್ರಾಣೇಶಾಚಾರ್ಯರು ಕೂಡಿದುದರಲ್ಲಿ ಕಾಣುವ ಸಾಂಕೇತಿಕತೆಯಾಗಲೀ ವಾಸ್ತವತೆಯಿಂದ ನುಣಿಚಿಕೊಳ್ಳುವುದರ ಸಂಕೇತವಾಗುತ್ತವೆ.

ಈ ಕೃತಿಯನ್ನು ಕುರಿತು ಮೊದಲು ಪ್ರಕಟವಾದ ತಮ್ಮ ವಿಮರ್ಶೆಯ ಮೇಲೆ ಬಂದ ಆಕ್ಷೇಪಣೆಗಳಿಗೆ ಎಂ.ಜಿ.ಕೆ. ಅವರು ಉತ್ತರ ಕೊಡುತ್ತ ಒಂದು ಮಾತು ಹೇಳಿದ್ದಾರೆ: "....ಒಂದು ಕೃತಿ ಜಯ ಗಳಿಸಿದೆ ಎಂದಾಗ ಅದಕ್ಕೆ ಶ್ರೇಷ್ಠತೆಯನ್ನು ಆರೋಪಿಸಿದಂತಾಗುವುದಿಲ್ಲ....ಮುಖ್ಯ ಕೃತಿ, ಉತ್ಕೃಷ್ಟ ಕೃತಿ ಆಗಿರಲೇಬೇಕಾಗಿಲ್ಲ." ಅಂದರೆ, ಅವರ ಅಭಿಪ್ರಾಯದಲ್ಲಿ 'ಸಂಸ್ಕಾರ' ಜಯ ಗಳಿಸಿದೆ ಮತ್ತು ಅದು ಮುಖ್ಯ ಕೃತಿ. ಆದರೆ ಅದು ಉತ್ಕೃಷ್ಟ ಕೃತಿ ಆಗಿರಲೇಬೇಕಾಗಿಲ್ಲ. ಬಂಕೇಶರ 'ಬಿರುಕು' ಕಾದಂಬರಿಯ ಬಗ್ಗೆ ಬರೆಯುತ್ತಾ ಅವರೇ ಹೀಗೆ ಹೇಳಿದ್ದಾರೆ:

"ಬಸವರಾಜು ಶಾಂತಳನ್ನು ಒಪ್ಪಿಕೊಳ್ಳುವುದರಲ್ಲಿ ತೋರುವ ಸಾಂಕೇತಿಕತೆಯ ಅಸ್ಪಷ್ಟತೆಯಿಂದಾಗಿ ಬಿರುಕಿನ ಕೊನೆ ಸೋಲುತ್ತದೆ....ಕಾದಂಬರಿ ಸೋತಿದೆ ಎಂದು ಒಪ್ಪಿಕೊಂಡರೂ 'ಬಿರುಕು' ಮುಖ್ಯ ಕಾದಂಬರಿ."[೩]

---

೧. ಎಂ. ಜಿ. ಕೃಷ್ಣಮೂರ್ತಿ: ಆಧುನಿಕ ಭಾರತೀಯ ಸಾಹಿತ್ಯ.

೨. Editors: Kumar and Mc Kean: Critical Approaches to Fiction.

೩. ಎಂ. ಜಿ. ಕೃಷ್ಣಮೂರ್ತಿ: ಆಧುನಿಕ ಭಾರತೀಯ ಸಾಹಿತ್ಯ.

'ಸಂಸ್ಕಾರ' ಜಯ ಗಳಿಸಿ ಮುಖ್ಯ ಕೃತಿಯಾಯಿತು. 'ಬಿರುಕು' ಸೋತರೂ ಮುಖ್ಯ ಕೃತಿಯೆನಿಸಿತು. ಗೆಲುವು, ಸೋಲು ಮುಖ್ಯ. ಈ ಮಾತುಗಳಲ್ಲಿ ಬಹುಶಃ ಆ ಕಾದಂಬರಿಗಳಲ್ಲಿರುವ ತೊಡಕೇ ಇಲ್ಲಿಯೂ ಇರುವಂತೆ ತೋರುತ್ತದೆ. ಅವರು ಹೇಳುವ ಒಂದು ಮಾತಂತೂ ನಿಜ. "ಮುಖ್ಯ ಕೃತಿ, ಉತ್ಕೃಷ್ಟ ಕೃತಿ ಆಗಿರಲೇ ಬೇಕಾಗಿಲ್ಲ." ಯಾವ ಕೃತಿಯನ್ನೂ ವಿಶ್ಲೇಷಿಸಿ ವಿಮರ್ಶೆ ಮಾಡುವುದು ಈ ಲೇಖನದ ಉದ್ದೇಶವಲ್ಲದುದರಿಂದ ಅದಕ್ಕೆ ತೊಡಗದೆ ಮೇಲಿನ ಮಾತು ಈ ಎರಡು ಕಾದಂಬರಿಗಳಿಗೂ ಅನ್ವಯಿಸುತ್ತದೆ ಎಂದು ಮಾತ್ರ ಹೇಳಬಹುದು.

ಒಟ್ಟನಲ್ಲಿ ಇಂದು ಕನ್ನಡ ಕಾದಂಬರಿಗಳನ್ನೆಲ್ಲಾ ಒಟ್ಟಾಗಿ ಗಮನಿಸಿ ಹೇಳುವುದಾದರೆ, ಇದುವರೆಗೆ ಆಗಿರುವ ಪ್ರಯೋಗಗಳಿಂದ ಬೆಳವಣಿಗೆಗಳಿಂದ ಪುಷ್ಟಿಯನ್ನು ಪಡೆದು ಇನ್ನೂ ಮುಂದೆ ನಡೆಯಲು ಅವಕಾಶಗಳು ವಿಪುಲವಾಗಿವೆ. ಇಂದಿನ ನಮ್ಮ ಸಾಮಾಜಿಕ ಸನ್ನಿವೇಶಗಳು ಕಾದಂಬರಿಯ ಸಾಧನೆಗಳಿಗೆ ಶಕ್ತಿಯುತವಾದ ಸಾಮಗ್ರಿಯನ್ನು ಒದಗಿಸಬಲ್ಲುವು. ಸ್ವಾತಂತ್ರ್ಯೋತ್ತರ ಭಾರತ ಅನೇಕ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸಬೇಕಾಯಿತು. ನಾವು ಸ್ವಾತಂತ್ರ್ಯವನ್ನು ಪಡೆದು ಇಪ್ಪತ್ತೈದು ವರ್ಷಗಳು ಸಂದಿವೆ. ಈ ಅವಧಿಯಲ್ಲಿ ನಮ್ಮ ಸಾಧನೆಗಳೇನು? ಸಿದ್ಧತೆಗಳೇನು? ವಿಫಲತೆಗಳೇನು? ಆರ್ಥಿಕ ಸಾಮಾಜಿಕ ಧಾರ್ಮಿಕ ಏರುಪೇರುಗಳನ್ನು ಹೇಗೆ ಎದುರಿಸುತ್ತಿದ್ದೇವೆ? ಜೀವನದ ಎಲ್ಲ ರಂಗಗಳಲ್ಲಿಯೂ ನಮ್ಮ ನಡೆ ನುಡಿಗಳಲ್ಲಿ ಕಾಣುವ ಬಿರುಕು ನಮ್ಮನ್ನು ಹೇಗೆ ಇರುಕಿಸುತ್ತಿದೆ?– ಈ ಮೊದಲಾದವುಗಳ ಕಡೆ ನಮ್ಮ ದೃಷ್ಟಿ ಹರಿಯುತ್ತಿದೆ. ಇಲ್ಲಿ ಸಮತೋಲನದ ಪೂರ್ಣ ದೃಷ್ಟಿಯನ್ನು ಸಾಹಿತಿ ಬೆಳಸಿ ಕೊಳ್ಳುವುದು ಅಗತ್ಯ. ಇಲ್ಲವಾದರೆ ಕುಹಕಿಗಳೊ ಸಿನಿಕರೊ ಅಥವಾ ಭಾವುಕರೋ ಭಟ್ಟಂಗಿಗಳೊ ಆಗಿ ಪರಿಣಮಿಸಬಹು. ಸಾಹಿತಿ ಈ ಎರಡೂ ಅಲ್ಲದ ಗಟ್ಟಿ ನೆಲದ ಮೇಲೆ ನಿಲ್ಲಬೇಕಾಗುತ್ತದೆ. ಸನಾತನವಾದ ಮಹಾರಾಷ್ಟ್ರವೊಂದು ಮೈ ಕೊಡವಿಕೊಂಡು ಮೇಲೇಳುವಾಗ ಸಿಡಿಯಬಹುದಾದ ಸಮಸ್ಯೆಗಳೆಲ್ಲವನ್ನೂ ಬರಹಗಾರ ಜಾಗತಿಕ ಹಿನ್ನೆಲೆಯಲ್ಲಿ ನಿಂತು ನೋಡಬೇಕು. ಪರಂಪರೆಯ ಪ್ರಜ್ಞೆಯನ್ನು ಸರಿಯಾದ ರೀತಿಯಲ್ಲಿ ಅರಗಿಸಿಕೊಂಡು ಬೆಳೆಯಬೇಕು.

ಇಂದು ಕನ್ನಡ ಕಾದಂಬರಿ ಪ್ರಯೋಗಶೀಲವಾಗಬೇಕು ಎಂಬ ಮಾತು ನಿಜ. ಆದರೆ ಆ ಪ್ರಯೋಗ, ದಟ್ಟವಾದ ಅನುಭವದಿಂದ ಪ್ರೇರಿತವಾಗಿ ವಸ್ತು-ವಿನ್ಯಾಸದ ಅನಿವಾರ್ಯ ಅಂಗವಾಗಿ ಮೂಡಿರಬೇಕು. ಅವು ಇನ್ನೊಂದರ ಅನುಕರಣೆಗೆ ತೊಡಿಗಿಸಿದ ಕೋಡಂಗಿಯ ವೇಷವಾಗಬಾರದು; ಹೊರಗಡೆಯ ಗಾಳಿ ಬೆಳಕು-ಗಳನ್ನು ಪಡೆದು ನಮ್ಮ ನೆಲದಲ್ಲಿ ಬೇರು ಬಿಟ್ಟು ಬೆಳೆದು ಬಂದ ಕಲಾಕೃತಿಗಳಾಗಬೇಕು. ಅದಕ್ಕೆ ನಮ್ಮ ನೆಲ ಸಾಕಷ್ಟು ಸಮೃದ್ಧವಾಗಿದೆ. ಬೀಜರೂಪವಾದ ಸಂಕಲ್ಪಶಕ್ತಿ ಕಲಾವಿದನಲ್ಲಿ ಮಿಂಚಿದರೆ ಆ ಪ್ರತಿಭೆಗೆ ನೀರು ಗೊಬ್ಬರಗಳನ್ನಿತ್ತು

ಬೆಳೆಸುವ ಪರಿಸರಗಳೂ ಸಾಧನೆಗಳೂ ನಮ್ಮ ನೆಲದಲ್ಲಿಯೇ ಇವೆ. ಅದರ ಜೊತೆಗೆ ಹೊರಗಿನ ಗಾಳಿ ಬೆಳಕುಗಳು ಸ್ವತಂತ್ರವಾಗಿ ಬೀಸಲು ಬೀರಲು ಅವಕಾಶವಿದೆ. ಹೀಗಿರುವಾಗ ಹೊರಗಿನ ಕುಂಡಗಳನ್ನು ಆಮದು ಮಾಡಿಕೊಳ್ಳುವ ಅಗತ್ಯವಿಲ್ಲ. ಅವು ಹೆಚ್ಚೆಂದರೆ ಅಲಂಕಾರ ಸಾಮಗ್ರಿ ಆಗಬಲ್ಲುವೇ ಹೊರತು ನೆರಳನ್ನು ನೀಡುವ ವೃಕ್ಷವಾಗಲಾರವು; ಫಲಗಳನ್ನು ಕೊಡುವ ತರುಗಳಾಗಲಾರವು. ನಮ್ಮ ಕಾದಂಬರಿಗಳು ತಾವು ನಿಂತ ನೆಲದ ಮೇಲೆ ಬೇರೂರಿ ಗಟ್ಟಿಯಾಗಿ ಬೆಳೆದರೆ ಹಲವು ದಿಕ್ಕಿಗೆ ತಮ್ಮ ಕೊಂಬೆಗಳನ್ನು ಚಾಚಲು ಸಮರ್ಥವಾಗುತ್ತವೆ. ಅದಕ್ಕಾಗಿ ನಮ್ಮ ಕಾದಂಬರಿಕಾರರ ಸಾಧನೆ ಬೆಳೆಯಬೇಕು. ಅವರ ದೃಷ್ಟಿ ಸೂಕ್ಷ್ಮಗ್ರಾಹಿಯಾಗಬೇಕು ; ಅದು ತನ್ನ ಸುತ್ತಮುತ್ತಲೂ ನೋಡಬೇಕು ; ಆಳಕ್ಕೂ ಇಳಿಯಬೇಕು, ಎತ್ತರವನ್ನು ಅಳೆಯಬೇಕು; ಅದು ದಿಗಂತವ್ಯಾಪಿಯಾಗಬೇಕು, ಅಂತೆಯೇ ಅಂತರ್ಮುಖಿಯಾಗಬೇಕು. ಒಟ್ಟಿನಲ್ಲಿ ಕಾದಂಬರಿಕಾರರ ಜೀವನ ದೊಡ್ಡದಾದಂತೆ ಕನ್ನಡ ಕಾದಂಬರಿಗಳ ಸತ್ತ್ವವೂ ದೊಡ್ಡದಾಗುತ್ತದೆ.

೨

ಭಾರತೀಯ ಭಾಷೆಗಳಲ್ಲಿ ಕಾದಂಬರಿ

ತಮಿಳು ಕಾದಂಬರಿ

— ಬಿ. ಆರ್. ಶಂಕರ್

ತಮಿಳಿನಲ್ಲಿ ಬಂದ ಕೃತಿಗಳಲ್ಲಿ ಪ್ರಾಚೀನವಾದುದು ಇಳಂಗೊಂ ಏಡಿಗಳ್ ಕೃತ, 'ಶಿಲಪ್ಪದಿಕಾರಂ'. ಪದ್ಯಬಂಧದಲ್ಲಿರುವ ಈ ಕೃತಿ ಒಂದು ಕಾದಂಬರಿಯ ಕಥಾವಸ್ತುವನ್ನು ಪಡೆದುಕೊಂಡಿದೆ. ಹಲವು ಶತಮಾನಗಳು ಸಂದಿದ್ದರೂ ಇಂದಿಗೂ ನೂತನ ಕೃತಿಯಾಗಿಯೇ ಅದು ರಾರಾಜಿಸುತ್ತಿದೆ. ಉದಾಹರಣೆಗೆ ಈಗ ವೇ. ವೇಣುಗೋಪಾಲನ್ 'ಶಿಲಪ್ಪದಿಕಾರಂ' ಆಧಾರದಿಂದ ಒಂದು ಕಾದಂಬರಿಯನ್ನು ರಚಿಸಿದ್ದಾರೆ. ಸಂಪ್ರದಾಯಬದ್ಧನಾಗಿ ಬಂದ ತಮಿಳು ಸಾಹಿತಿ ತನ್ನ ಹಿರಿಯರ ಮೇಲ್ಪಂಕ್ತಿಯನ್ನು ಇನ್ನೂ ಬಿಟ್ಟುಕೊಟ್ಟಿಲ್ಲ ಎಂಬ ಅಂಶ ಇದರಿಂದ ವ್ಯಕ್ತವಾಗದಿರದು. 'ಶಿಲಪ್ಪದಿಕಾರಂ' ನಲ್ಲಿ ಬರುವ ಕನ್ನಗಿ, ಕೋವಲನ್, ಮಾಧವಿ ಈ ವ್ಯಕ್ತಿಚಿತ್ರಗಳು ಎಂದಿಗೂ ನಿಲ್ಲುವ ಜೀವಂತ ಪಾತ್ರಗಳು.

'ಶಿಲಪ್ಪದಿಕಾರಂ' ಬಳಿಕದ ಕೃತಿಯೆಂದರೆ ಕಂಬನ್ ವಿರಚಿತ 'ರಾಮಾಯಣ' ಗ್ರಂಥ. ವಿದ್ವಾಂಸರ ಅಭಿಪ್ರಾಯದಂತೆ ಅದಕ್ಕೆ ಸರಿದೊರೆಯಾದ ಇನ್ನೊಂದು ಕೃತಿ ತಮಿಳಿನಲ್ಲಿ ಇನ್ನೂ ಬಂದಿಲ್ಲ.

ಈ ಎರಡು ಕೃತಿಗಳೂ ಕಾವ್ಯಪ್ರಕಾರಗಳು. ಹಾಗಾದರೆ ಕಾದಂಬರಿಯ ಹುಟ್ಟು ಯಾವಾಗ, ಯಾರಿಂದ ಆಯಿತು?

ಸವೀನಮ್, ನಾವೆಲ್, ನೆಡುಂಕದೈ, ತೊಡರ್‌ಗದೈ ಎಂದು ಅನೇಕ ಹೆಸರುಗಳಿಂದ ಕರೆಸಿಕೊಳ್ಳುವ ಕಾದಂಬರಿಯ ಪ್ರಕಾರಕ್ಕೆ ಓನಾಮ ಹಾಡಿದವರು ಇಟಲಿಯ ಜೆಸುಯಿಟ್ ಪಾದರಿಯಾದ ಫಾದರ್ ಕಾನ್‌ಸ್ಟಂಟೈನ್ ಚಿಶ್ಚಿ. ವೀರ ಮಾಮುನಿವರ್ ಎಂಬ ತಮಿಳು ಹೆಸರಿನಲ್ಲಿ 'ಗುರು ಪರಮಾರ್ಥಂ' ಎಂಬ ಒಂದು ಕೃತಿಯನ್ನವರು ರಚಿಸಿದರು. ಮೊದಲ ಪ್ರಯತ್ನ ಇದಾದರೂ ವೇದನಾಯಗಂ ಪಿಳ್ಳೆಯವರ 'ಪ್ರತಾಪ ಮುದಲಿಯಾರ್ ಚರಿತ್ರಂ' ಮೊದಲ ತಮಿಳು ಕಾದಂಬರಿ ಎಂದು ಪರಿಗಣಿತವಾಯಿತು. ತಾವು ಕಂಡು–ಕೇಳಿದ ಒಂದು ಕಥೆಯ ಆಧಾರದಿಂದ ಬರೆದುದು. ಶ್ರೇಷ್ಠವಲ್ಲದಿದ್ದರೂ ಮೊದಲ ಪ್ರಯತ್ನವಾದುದರಿಂದ ಈ ಕೃತಿಗೆ ಮಹತ್ವ ಬರುತ್ತದೆ. ರಾಜಮ್ ಅಯ್ಯರ್ ವಿರಚಿತ 'ಕಮಲಾಂಬಾಳ್ ಚರಿತ್ರಂ', ಮಾಧವಯ್ಯನವರ 'ಪದ್ಮಾವತಿ ಚರಿತ್ರಂ' ಇವು ಕ್ರಮವಾಗಿ ಎರಡು ಮತ್ತು ಮೂರನೇ ಕಾದಂಬರಿಗಳು.

೧೯೬೧ ರಲ್ಲಿ ಶತಸಂವತ್ಸರದ ದಿನಾಚರಣೆಯನ್ನು ತಮಿಳುನಾಡಿನ ವಿವಿಧ ಭಾಗಗಳಲ್ಲಿ ಲೇಖಕ ರಾಜಮ್ ಅಯ್ಯರ್ ಅವರಿಗಾಗಿ ಆಚರಿಸಲಾಯಿತು. ತಮ್ಮ ಇಪ್ಪತ್ತೆಂಟರ ಹರೆಯದಲ್ಲಿ ಇಹಲೋಕವನ್ನು ತ್ಯಜಿಸಿದ ಅವರು 'ಕಮಲಾಂಬಾಳ್ ಚರಿತ್ರ'ದಂಥ ಲೋಕೋತ್ತರ ಕೃತಿಯನ್ನು ರಚಿಸಿದರು. ಎಲ್ಲ ವರ್ಗದ ಜನ-ರಿಂದಲೂ ಶ್ರೇಷ್ಠಕೃತಿ, ಎಂದು ಮನ್ನಣೆಗೆ ಪಾತ್ರವಾದ ಈ ಕಾದಂಬರಿಯಲ್ಲಿ ತಮಿಳುನಾಡಿಗೇ ಕೀರ್ತಿ ತರುವ ಪಾತ್ರಗಳಾದ ಮುತ್ತುಸ್ವಾಮಿ ಮತ್ತು ಕಮ-ಲಾಂಬನ ಚಿತ್ರಗಳನ್ನು ಕಾಣಬಹುದು. ಈ ಪಾತ್ರಗಳಲ್ಲಿ ಚತುರ್ವಿಧ ಪುರುಷಾರ್ಥ-ಗಳನ್ನೂ ದಶವಿಧ ಧರ್ಮಗಳನ್ನೂ ಅರಿಯಬಹುದು. ಈ ವ್ಯಕ್ತಿಗಳ ಪ್ರಶಾಂತವಾದ ಜೀವನ ನೌಕೆ ಬೀಸಿದ ಬಿರುಗಾಳಿಯಿಂದ ಪುಡಿಪುಡಿಯಾಯಿತು. ಹರಟೆಮಲ್ಲಿಯರ ಮನೆ ಮುರುಕತನದ ಪರಿಣಾಮವಾಗಿ ಹೊತ್ತಿಕೊಂಡ ಕಿಡಿಯಿಂದ ಈ ದಂಪತಿಗಳು ಪಟ್ಟ ಕಷ್ಟನಷ್ಟಗಳು ಹೇಳಲಾರದಷ್ಟು. ಇದರ ಜೊತೆಗೆ ಆ ಕಾಲದ ತಮಿಳು ಪಂಡಿತರ ಶೋಚನೀಯ ಪರಿಸ್ಥಿತಿಯ ನೈಜ ಚಿತ್ರಗಳನ್ನೂ ಆಗ ಎಲ್ಲೆಲ್ಲೂ ಮೆರೆಯುತ್ತಿದ್ದ ಕಳ್ಳಕಾಕರ ಪ್ರತಾಪ ಸಾಹಸಗಳನ್ನೂ ಈ ಕೃತಿಯಲ್ಲಿ ಕಾಣಬಹುದು. ಸಂಸಾರದಲ್ಲಿ ವೈರಾಗ್ಯ ಮೂಡಿ ವೇದಾಂತಿಯಾಗುವ ಮುತ್ತುಸ್ವಾಮಿಯಲ್ಲಿ ಸಾಕ್ಷಾತ್ ರಾಜಮ್ ಅಯ್ಯರೇ ಕಾಣಿಸುತ್ತಾರೆ ಎಂಬುದು ಅಯ್ಯರ ಜೀವನದಿಂದ ಅರಿಯಲು ಸಾಧ್ಯ.

ಪಂಡಿತ ನಟೇಶಶಾಸ್ತ್ರಿಯವರ 'ಅನಾದೈ ಕುಳಂದೈಗಳ್' ತಮಿಳಿನಲ್ಲಿ ಬಂದ ನಾಲ್ಕನೆಯ ಕಾದಂಬರಿ. ಕುಲೀನ ಮನೆತನದಲ್ಲಿ ಜನಿಸಿದರೂ ಕುಟಿಲ ಮತಿಗಳ ಕಾರಸ್ಥಾನದಿಂದ ಪಿಪಂಚನೆಗೊಳಗಾಗಿ ಅನಾಥರಾಗಿ ಬೆಳೆದು, ಸ್ವ-ಸಾಮರ್ಥ್ಯದಿಂದ ಬೆಳೆದು ಓದಿ, ಕೊನೆಗೆ ಹೆತ್ತವರನ್ನು ಆ ಹೆಣ್ಣುಮಕ್ಕಳು ಸೇರಿ ಕೊಳ್ಳುತ್ತಾರೆ. ಪ್ರಾರಂಭದಲ್ಲಿ ನಡೆಯುವ ಕೊಲೆಯ ರಹಸ್ಯ ಕೊನೆಯವರೆಗೆ ಉಳಿದು ಅಂತ್ಯದಲ್ಲಿ ಬಟ್ಟಬಯಲಾಗುತ್ತದೆ. ಮೊದಲಿಂದ ಕೊನೆಯವರೆಗೆ ಕುತೂ-ಹಲಭರಿತವಾಗಿ ಸಾಗುವ ಈ ಕೃತಿ ರಚನೆಯಾಗಿ ಸುಮಾರು ಏಳು ದಶಕಗಳು ಸಂದಿದ್ದರೂ ಇಂದಿಗೂ ನೂತನವಾಗಿದೆ.

ಸುಬ್ರಹ್ಮಣ್ಯ ಭಾರತಿಯವರ ಕವಿತೆಗಳು, ವಿ. ಕಲ್ಯಾಣಸುಂದರಂ ಅವರ ಗದ್ಯ ಗ್ರಂಥಗಳು ತಮಿಳು ಸಾಹಿತ್ಯರಂಗದಲ್ಲಿ ಒಂದು ಹೊಸ ತಿರುವನ್ನು ಉಂಟು ಮಾಡಿದವು. ಅವು ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶಿಯಾಗಿ ನಿಂತವು. ಒಂದು ರೀತಿಯಲ್ಲಿ ನೋಡಿದರೆ ಅನಂತರದ ಬರೆಹಗಾರರೆಲ್ಲ ಈ ಇಬ್ಬರು ಮಹನೀ ಯರ ಮೇಲ್ಪಂಕ್ತಿಯಲ್ಲಿ ಬೆಳೆದವರು ಎಂದರೆ ತಪ್ಪಾಗುವುದಿಲ್ಲ.

ವಿ. ಕ. ಅವರ ಬಳಿ ಶಿಷ್ಯರಾಗಿದ್ದು, ಗುರುವಿನ ಜ್ಞಾನವನ್ನು ಮೈಗೂಡಿಸಿ ಕೊಂಡವರೆಂದರೆ ರಾ. ಕೃಷ್ಣಮೂರ್ತಿ (ಕಲ್ಕಿ). ತಮಿಳು ಕಾದಂಬರಿ ಪ್ರಕಾರದಲ್ಲಿ ಹೊಸತನವನ್ನು ತಂದುಕೊಟ್ಟರಿವರು. ಅಂದಿನ ಜನಜೀವನದಲ್ಲಿ ಮನೆ ಮಾಡಿ ಕೊಂಡಿದ್ದ ರಾಷ್ಟ್ರೀಯಪ್ರಜ್ಞೆಯನ್ನು ಪ್ರಚೋದಿಸುವಂತೆ ಇವರ 'ತ್ಯಾಗಭೂಮಿ',

'ಮಗುಡಪತಿ', 'ಅಲ್ಲೈಓಪ್ಪೈ', 'ಸೋಲ್ಲೈಮಲ್ಲೈ', 'ಇಳವರಸಿ' ಮೊದಲಾದ ಕೃತಿಗಳು ರಚಿತವಾದವು. ಕಲ್ಕಿಯವರದು ಸುಲಭವಾದ ಶೈಲಿ. ಅವರ ಕೃತಿಗಳೆಲ್ಲ ಉನ್ನತ ವಾದವು ಎನ್ನಲಾಗದಿದ್ದರೂ ಕೆಲವಾದರೂ ಶ್ರೇಷ್ಠಕೃತಿಗಳೆಂದು ಮಾನ್ಯವಾಗಿವೆ.

ಪ್ರಾರಂಭದಲ್ಲಿ ಸಾಮಾಜಿಕ ಕಾದಂಬರಿಗಳನ್ನೆ ಬರೆಯುತ್ತಿದ್ದ ಕಲ್ಕಿ ಸ್ವಾತಂತ್ರ್ಯಾನಂತರ ತಮ್ಮ ಗಮನವನ್ನು ಐತಿಹಾಸಿಕ ಕಾದಂಬರಿಗಳ ಕಡೆಗೆ ಹರಿಸಿದರು. ಆಗ ಒಂದಾದಮೇಲೊಂದರಂತೆ ಅವರ ಮೇರುಕೃತಿಗಳಾದ 'ಶಿವಕಾಮಿಯಿನ್ ಶಪಥಂ', 'ಪಾರ್ತಿಬನ್‌ತನವು', 'ಪೊನ್ನಿಯಿನ್ ಶೆಲ್ವನ್' ಪ್ರಕಟವಾದವು. ಐತಿಹಾಸಿಕ ಕೃತಿಗಳನ್ನು ಹೇಗೆ ರಚಿಸಬೇಕು ಎಂದು ತಿಳಿಯಲು ಅವರ ಕೃತಿಗಳನ್ನೋದಬೇಕು.

ಕಲ್ಕಿಯವರ ಹಾದಿಯನ್ನು ತುಳಿದು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ ಇತರ ಲೇಖಕರೆಂದರೆ ಶಾಂಡಿಲ್ಯನ್, ಅ. ಕು. ರಾಮನಾಥನ್, ನಾ. ಪಾರ್ಥ ಸಾರಥಿ, ಮೋ. ವಿ. ಮಣಿಸೇಕರನ್, ಕೌಶಿಕನ್ ವೆ. ವೇಣುಗೋಪಾಲನ್, ಜೆಗಸಿರ್ಪ್ಪಿಯನ್ ಮತ್ತು ಅಖಿಲನ್ ಮೊದಲಾದವರು.

ಸ್ವಾತಂತ್ರ್ಯಪೂರ್ವಕ್ಕಿಂತ ಸ್ವಾತಂತ್ರ್ಯಾನಂತರ ಬಂದ ಕೃತಿಗಳೆಲ್ಲ ವೈವಿಧ್ಯ-ಮಯವಾದುವು.

'ಭಾರತ ಬಿಟ್ಟು ಹೊರಡಿ' ಚಳವಳಿ ಪ್ರಾರಂಭವಾಗುತ್ತಲೂ ಅಂದಿನ ಬಹು ಪಾಲು ಬರಹಗಾರರೆಲ್ಲ ಆಗಿನ ಸರಕಾರದ ಅವಕೃಪೆಗೆ ಪಾತ್ರರಾದರು; ತತ್ಫಲವಾಗಿ ಸೆರೆಮನೆ ಸೇರಿದರು. ಈ ವೇಳೆಯಲ್ಲಿ ಹೊಸ ಪಂಥದ ಲೇಖಕವರ್ಗ ಕಾಣಿಸಿ-ಕೊಂಡಿತು. ಇವರು 'ಆತ್ಮಗೌರವದ ಚಳವಳಿ'ಯನ್ನು ಪ್ರಾರಂಭಿಸಿ ತಾವು ರಚಿಸಿಡ ಕೃತಿಗಳಲ್ಲಿ ಪ್ರಗತಿಶೀಲತೆಯನ್ನು ಸಾರಿದರು. ಆಮೇಲೆ 'ದ್ರಾವಿಡಕಳಗಂ' ಸ್ಥಾಪಿ-ಸಿದರಲ್ಲದೆ ತಮ್ಮದೇ ಆದ ಕೆಚ್ಚಿನ ಶೈಲಿಯಲ್ಲಿ ನವ್ಯ ಕಾದಂಬರಿಗಳನ್ನು ರಚಿಸಿದರು. ಈ ನಾಯಕರ ಕೃತಿಗಳನ್ನು ಓದಿದ ಜನ ಇದರತ್ತ ನೋಡಿದರು; ಆಮೇಲೆ ಇವರ ಅನುಯಾಯಿಗಳಾದರು. ಹೀಗೆ ತಮ್ಮ ಕಾದಂಬರಿಗಳಿಂದ ಲೇಖನಗಳಿಂದ, ಭಾಷಣ ಗಳಿಂದ ಸಾಮಾನ್ಯ ಜನರ ಗಮನವನ್ನು ತಮ್ಮಕಡೆಗೆ ಸೆಳೆದವರೆಂದರೆ ಸಿ. ಎನ್. ಅಣ್ಣಾದೊರೆ, ಎಂ. ಕರುಣಾನಿಧಿ. ಅಣ್ಣಾ ಅವರ 'ರಂಗೋನ್ ರಾಧಾ', 'ಪಾರ್ವತಿ'. ಬಿ.ಎ. ಮತ್ತು ಮು.ಕ. ಅವರ 'ಪಿಳ್ಳೆಕೆಳವ್ಯೈ' ಕಾದಂಬರಿಗಳು ತುಂಬ ಜನಪ್ರಿಯ-ವಾದವು. ಇವರಿಗೆ ಚಲನಚಿತ್ರಮಾಧ್ಯಮವೂ ದೊರಕಿದ್ದರಿಂದ ಇವರ ಪಕ್ಷದ ಕೀರ್ತಿ ಸರ್ವವ್ಯಾಪಿಯಾಯಿತು. ಅಂದಿನ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಬದುಕಿನ ಏರುಪೇರುಗಳು ಇವರ ಕೃತಿಗಳಲ್ಲಿ ಪ್ರಕಟಗೊಂಡವು. ಜೊತೆಗೆ ಇವರ ನಿರ್ಭೀತ ಭಾಷೆ ಮತ್ತು ಶೈಲಿಗಳು ಜನರನ್ನು ಬಹುವಾಗಿ ಆಕರ್ಷಿಸಿದವು. ಒಂದು ಮಾತು ನಿಜ. ಸಾಮಾಜಿಕ ಪರಿವರ್ತನೆಯ ನೆಪದಲ್ಲಿ ಇವರು ಭಾಷಾಂಧತೆಯ ವಿಷಬೀಜವನ್ನು ಬಿತ್ತಿ ಬೆಳೆದರು; ತಾವು ಧರಿಸಿದ ವೇಷದಿಂದ ಖ್ಯಾತನಾಮರಾದರು.

ಪಂಡಿತವರ್ಗದ ಜನರಲ್ಲಿ ವಿ. ಕ. ಅವರ ಹಾದಿಯನ್ನು ತುಳಿಯಬಲ್ಲ ಸಾಮರ್ಥ್ಯ ಕಾಣಬರಲಿಲ್ಲ. ಅವರು ಪ್ರಾಚೀನ ಪರಂಪರೆಯಲ್ಲಿ ಬಂದುದೇ ಶ್ರೇಷ್ಠವೆಂದು 'ಶಿಲಪ್ಪದಿಕಾರಂ', 'ಕಂಬ ರಾಮಾಯಣಮ್' ಮತ್ತು 'ಪೆರಿಯಪುರಾಣಂ'-ಈ ಗ್ರಂಥಗಳನ್ನು ಗದ್ಯದಲ್ಲಿ ಬರೆದು ಪ್ರಕಟಿಸುತ್ತ ತೃಪ್ತರಾದರು. ಇಷ್ಟಲ್ಲದೆ ಸೃಜನ ಶೀಲತೆ ಇವರಲ್ಲಿ ಕಂಡುಬರಲಿಲ್ಲ. ಈ ಸನ್ನಿವೇಶದಲ್ಲಿ ಡಾ. ಮು. ವರದರಾಜನ್, ಪುದುಮೈಪಿತ್ತನ್, ವ. ರಾ. ಮೊದಲಾದವರು ಕಾದಂಬರಿ ರಚನೆಗೆ ಕೈಹಾಕಿದರು. ಮು. ವ. ಅವರ 'ಕಳ್ಳೋ ಕಾವಿಯವೆ, 'ಕರಿಪ್ಪುಂಡು', ಸ.ರಾ. ಅವರ 'ಸುಂದರಿ'- ಈ ಕೃತಿಗಳೆಲ್ಲ ಆಗ ಹೊರಬಂದವು. ಮು. ವ. ಅವರು ಸ್ವತಃ ವಿದ್ವಾಂಸರು ಪ್ರಾಚೀನತೆ ಹಾಗೂ ಆಧುನಿಕ ಜೀವನಗಳ ನಡುವೆ ಸೇತುವೆಯಂತೆ ನಿಂತು ರಚಿಸಿದ ಇವರ ಕೃತಿಗಳು ವಿದ್ಯಾವಂತ ತರುಣರನ್ನು ಆಕರ್ಷಿಸಿದವು. ಭಾವನಾತ್ಮಕವಾದ, ಆದರೆ ಸುಲಭ ಶೈಲಿಯಲ್ಲಿ ಮು. ವ. ಅವರ ಕೃತಿಗಳು ಪ್ರಕಟವಾಗಿವೆ.

ಯಾವುದೇ ಸೀಮಿತ ಪ್ರಯೋಗವನ್ನೂ ನಡೆಸದೆ ಕಾದಂಬರಿಯ ಶೈಲಿಯಲ್ಲಿ ಹೊಸತನವನ್ನು ತಂದುಕೊಟ್ಟವರೆಂದರೆ ಅಖಿಲನ್. ಅವರ ಬಹುಪಾಲು ಕೃತಿಗಳು ಮುಂದಿನ ಲೇಖಕರಿಗೆ ಮಾರ್ಗದರ್ಶಿಯಾಗಿವೆ. ಅವರ 'ಪೆಣ್'ನಲ್ಲಿ ಸ್ವಾತಂತ್ರ್ಯಆಂದೋಲನದ ವಸ್ತುವನ್ನು ಕಾಣಬಹುದು. ಜೊತೆಗೆ ಅದರಲ್ಲಿ ಬರುವ ಕೌಸಲ್ಯ, ಸಂತಾನಂ, ಸುಭದ್ರ ಇವರೆಲ್ಲರ ತ್ಯಾಗಮನೋಭಾವ ಕಾದಂಬರಿಯಲ್ಲಿ ಸೊಗಸಾಗಿ ಮೂಡಿದೆ. ಅದರೊಡನೆ ಅಂದಿನ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಕುಡಿತದ ದುಶ್ಚಟವನ್ನು ತಪ್ಪಿಸಲು ನಡೆಸಿದ ಪ್ರಾಮಾಣಿಕ ಪ್ರಯತ್ನದ ವಿವರಗಳಿವೆ. ಅವರ ಇನ್ನೊಂದು ಜನಪ್ರಿಯ ಕೃತಿಯೆಂದರೆ 'ಸಿನೇಗಿದಿ'.

ಅಖಿಲನ್‌ರ ಪ್ರಾರಂಭಿಕ ಕೃತಿಗಳಲ್ಲಿ ಜನರಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯ-ದಾಹದ ವಿವಿಧ ಚಿತ್ರಗಳು ಮೂಡಿಬಂದಿದ್ದರೆ ಅನಂತರದ ಕೃತಿಗಳಲ್ಲಿ ಜೀವನದ ವಿವಿಧ ವಿಚಾರಗಳತ್ತ ಅವರು ಗಮನ ಹರಿಸಿದ್ದಾರೆ, 'ನೆಂಜಿನ್ ಅಲೈಗಳ್'ನಲ್ಲಿ ಐ. ಎನ್.ಎ. ಹೋರಾಟದ ಚಿತ್ರವನ್ನು ಕೊಟ್ಟರೆ 'ವಾಳ್ವು ಎಂಗೆ' ಕೃತಿಯಲ್ಲಿ ಜಾತಿಗಳ ಬಗೆಗೆ ವಿವೇಚಿಸುತ್ತಾರೆ. ಕೃಷಿಕ ಸಮಾಜ ಯಾಂತ್ರೀಕೃತವಾಗುವ ಚಿತ್ರ 'ಪುದು ವಾಳ್ವು'ವಿನಲ್ಲಿ ಮೂಡಿಬಂದರೆ ಹಣದಿಂದ ಏನನ್ನೂ ಸಾಧಿಸಬಹುದು ಎಂದು ಇಂದ್ರಲೋಕದ ವೈಭವಜೀವನವನ್ನೆ ನಡೆಸಿದ ತಿರುಮೂರ್ತಿಯಂಥವರು ಪಾಮರ ಜನರನ್ನು ಹೇಗೆ ಹಿಂಡಿ ಹಿಪ್ಪೆಕಾಯಿ ಮಾಡಲು ಹೊರಟರು ಎಂಬುದು 'ಪೊನ್ ಮಲರ್'ನಲ್ಲಿ ಚಿತ್ರಿತವಾಗಿದೆ. 'ಚಿತ್ತರ ಪಾವೈ', 'ಪಾವೈ ವಿಳಕ್ಕು', 'ವೇಂಗೈ-ಯಿನ್ ಮೈಂದನ್' ಅವರ ಇನ್ನಿತರ ಕೃತಿಗಳು. ಕೊನೆಯದು ಸಾಹಿತ್ಯ ಅಕಾಡಮಿ ಪುರಸ್ಕೃತ ಕೃತಿ. ಅವರ ಈಚಿನ ಕೃತಿ 'ಎಂಗೇ ಪೋಗಿರೋಂ' ಸ್ವಾತಂತ್ರ್ಯಾನಂತರದ ಸಮಾಜ ಯಾವ ಗತಿಯಲ್ಲಿ ಸಾಗುತ್ತಿದೆ ಎಂಬ ವಿಚಾರ-ವನ್ನು ವಿವೇಚಿಸುತ್ತದೆ.

ಇದನ್ನು ನಾ. ಪಾರ್ಥಸಾರಥಿಯವರ 'ಸಮುದಾಯ ವೀದಿ'ಯಿಂದ ಉದಾಹರಿಸಿದೆ—

"....ನೀನು ಏನು ಬರೆದರೂ ನಿನಗೆ ಹೆಸರು ಬರುವ ಹಾಗೆ ಮಾಡುವುದು ನನ್ನ ಹೊಣೆ" ಎಂದ ಗೋಪಾಲ.

"ಹಾಗಾದರೆ?........ಅದರ ಅರ್ಥ?"

"ನಟಶೇಖರ ಗೋಪಾಲ ಅಭಿನಯಿಸುವ ನವರಸ ನಾಟಕ ಅಂತ ಒಂದು ಸಾಲು ಪ್ರಚಾರ ಮಾಡಿದರೆ ಸಾಕು! ತಾನಾಗಿ ಹೌಸ್‌ಫುಲ್ ಆಗುತ್ತೆ."

"ಅಂದರೆ ಬರೆದವನು ಯಾವನಾಗಿದ್ದರೂ ನಿನ್ನ ಹೆಸರಿಂದ ನಾಟಕಕ್ಕೆ ಹೆಸರು ಬರುತ್ತೆ ಅಂತೀಯಾ?"

"ಇನ್ನೇನು? ಬಿಟ್ಟೇನೆ?"

"ಹಾಗಾದರೆ ನನ್ನಕೈಲಿ ಬರೆಯೂಕೆ ಆಗುಲ್ಲ!" ಮುತ್ತುಕುಮಾರನ ಧ್ವನಿಯಲ್ಲಿ ನಿರ್ಧಾರವಿತ್ತು.

"ಯಾಕೆ? ಏನು?"

"ನಿನ್ನ ಲೇಬಲ್‌ನಲ್ಲಿ ಅಯೋಗ್ಯವಾದ ಸರಕನ್ನು ಅಮೋಘವಾಗಿ ಮಾರಬಹುದು ಅಂತಿ ನೀನು! ನಾನು ಒಳ್ಳೆಯ ಸರಕನ್ನು ಅಯೋಗ್ಯವಾದ ಲೇಬಲಿನಡಿಯಲ್ಲಿ ಮಾರಲು ಇಚ್ಛಿಸುವುದಿಲ್ಲ."

ಗೋಪಾಲನಿಗೆ ಮುಖದ ಮೇಲೆ ರಾಚಿದಂತಾಯಿತು. ಇನ್ನೊಬ್ಬ ಹಾಗೆ ನುಡಿದಿದ್ದರೆ ಕೆನ್ನೆಗೆ ಬಿಗಿದು 'ಗೆಟ್ ಔಟ್' ಎಂದು ಕೂಗಿರುತ್ತಿದ್ದ. ಆದರೆ ಮುತ್ತುಕುಮಾರನ ಮುಂದೆ ತಗ್ಗಿಬಗ್ಗಿ ನಡೆವ ಒಬ್ಬಳು ಗಂಡನೆದುರು ಹೆದರುವ ಹೆಂಡತಿಯಂತೆ ಇದ್ದ ಅವನು. ಸುದೈವಕ್ಕೆ ಮುತ್ತುಕುಮಾರನೇ ಗೆಲುಮುಖದಿಂದ ಮಾತಾಡಿದ:

"ಚಿಂತೆ ಬೇಡ ಗೋಪಾಲ್! ನಿನ್ನ ಅಹಂಕಾರದ ಆಳವನ್ನು ನೋಡಬಯಸಿದೆ, ಅಷ್ಟೆ. ನಾನು ನಾಟಕ ಬರೀತೀನಿ. ಆದರೆ ಅದು ನೀನು ಅಭಿನಯಿಸುವ ನಾಟಕ ಅನ್ನುವುದಕ್ಕಿಂತ ನಾನು ಬರೆದ ನಾಟಕ ಅನ್ನುವುದನ್ನೆ ನೆನಪು ಮಾಡಿಕೊಡುತ್ತಿರುತ್ತಿದೆ."

ನಾ. ಪಾರ್ಥಸಾರಥಿ ಇನ್ನೊಬ್ಬ ಜನಪ್ರಿಯ ಕಾದಂಬರಿಕಾರರು. ತಮ್ಮ ಐತಿಹಾಸಿಕ ಹಾಗೂ ಸಾಮಾಜಿಕ ಕೃತಿಗಳಿಂದ ಇವರು ಪರಿಚಿತರು, ಅಲ್ಲದೆ ಕವಿಗಳು. ಅವರ 'ಕುರಿಂಜಿ ಮಲರ್' ಮತ್ತು 'ಸಮುದಾಯ ವೀದಿ' ಎರಡೂ ಶ್ರೇಷ್ಠ ಕೃತಿಗಳು. ಎರಡನೆಯ ಕೃತಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿದೆ. ಆಧುನಿಕ ಬದುಕು ಅವಸರವಸರದಲ್ಲೆ ನಡೆಯಬೇಕಾಗಿದೆ. ಒಂದು ಕೊಂಡಿ ಕಿತ್ತು ಹೋದರೂ ಎಲ್ಲ ಏರುಪೇರಾಗುತ್ತದೆ. ಪಟ್ಟಣವಾಸದಲ್ಲಿ ತುಂಬಿತುಳುಕುತ್ತಿರುವ ನಾಗರಿಕತೆಯ ನಡುವೆ ಜೀವಿಸುವವರು ಎಷ್ಟರ ಮಟ್ಟಿಗೆ ಅದರಲ್ಲೆ ಮುಳುಗಿ

ಹೋಗಿದ್ದಾರೆ ಎಂಬುದನ್ನು ಸಹಜವಾದ ಚಿತ್ರಗಳ ಮೂಲಕ ಪಾರ್ಥಸಾರಥಿಯವರು ತಮ್ಮ ಕೃತಿಯಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಅದರ ಜೊತೆಗೆ ಜೀವನದ ರಹಸ್ಯವನ್ನು ಹೇಳಿದ್ದಾರೆ.

×

ಮಾಧವಿ ಮತ್ತು ಮುತ್ತುಕುಮಾರ ಸತಿ-ಪತಿಯರು....ಅಂದು ರಾತ್ರಿ ಅವನು ಅವಳ ಬಳಿಗೆ ಬಂದ.

"ನೋಡಿದಿರಾ! ಎಲ್ಲ ಸೇರ್ಕೊಂಡು ಪಿತೂರಿ ನಡೆಸಿ ಒಂದೇ ಒಂದು ಮಂಚವನ್ನು ಮಾತ್ರ ಹಾಕಿದ್ದಾರೆ," ಎಂದಳು ಮಾಧವಿ.

ಅವನು ನಕ್ಕ. ಅವಳು ಅವನ ಬಳಿಗೆ ಬಂದಳು. ಅವಳನ್ನು ತನ್ನತ್ತ ಸೆಳೆದುಕೊಂಡು ಅವನು ಕೂರಿಸಿಕೊಂಡ.

"ಮಾಧವಿ! ಸಮಾಜದ ನೇರ ಹಾದಿಗಳಲ್ಲಿ ಎಲ್ಲಿ ಬೇಕಾದರೂ ಅಂಜಿಕೆಯಿಲ್ಲದೆ ಓಡಾಡಬೇಕಾದರೆ ಹೀಗೆ ರಕ್ಷಣೆ ಇರುವ ಒಂದು ಮಂಚದಿಂದಲೇ ಕೆಳಗಿಳಿದು ನಡೆಯಬಹುದು ಎಂಬ ವಿಚಾರ ಹತ್ತು ಸಾವಿರ ತಲೆಮಾರುಗಳ ಹಿಂದೆಯೇ ನಿರ್ಧಾರವಾದ ವಿಚಾರ. ಸಮಾಜದ ದಾರಿಗಳಲ್ಲಿ ಇನ್ನೂ ರಾವಣರು ಓಡಾಡುತ್ತಲೇ ಇದ್ದಾರೆ."

ಈ ಮಾತು ಎಷ್ಟು ಸತ್ಯ?

"ಅಬ್ದುಲ್ಲಾನ ಹೇಳ್ತಾ ಇದೀರಾ?"

"ಅಬ್ದುಲ್ಲಾ, ಗೋಪಾಲ್ ಎಲ್ಲರೂ! ಒಬ್ಬರೊಡನೊಬ್ಬರು ಸ್ಪರ್ಧಿಸುತ್ತಿದ್ದಾರೆ!"

ಅವಳು ಜವಾಬು ಕೊಡದೆ ಅವನ ಎದೆಗೆ ತಲೆಯಾನಿಸಿದಳು.

—ಈ ಒಂದೆರಡು ಉದಾಹರಣೆಗಳಿಂದ ಕಾದಂಬರಿಯ ಬಗ್ಗೆ ತಿಳಿಯಬಹುದು.

ಕಲ್ಕಿಯವರ ಹಾದಿಯನ್ನು ತುಳಿದ ಸಾಂಡಿಲ್ಯನ್ ಹಲವಾರು ಐತಿಹಾಸಿಕ ಕೃತಿಗಳನ್ನು ರಚಿಸಿದರು. ಅದರ 'ಮಲೈವಾಸಲ್', 'ಕನ್ನಿಮಾಡಂ', 'ಕಡಲ್‌ಪುರಾ', 'ಜಲದೀಪಮ್' ಈ-ಕೃತಿಗಳೆಲ್ಲ ಜನಪ್ರಿಯವಾದವು. ಅವರ ಆಳವಾದ ಅಧ್ಯಯನ ಕೃತಿಗಳಲ್ಲಿ ಕಾಣಬರುತ್ತದೆ.

ಒಂದೇ ಜಾಡಿನಲ್ಲಿ ಹರಿಯುವ ನೀರು ಕೆಲವೊಮ್ಮೆ ತನ್ನ ಪಾತ್ರವನ್ನು ಬದಲಾಯಿಸಿಕೊಳ್ಳುವಂತೇ ಅಪೂರ್ವ ಕಥಾವಸ್ತುವನ್ನು ಪಡೆದ ಕೃತಿಗಳು ಪ್ರಕಟವಾಗುತ್ತವೆ. ಹೀಗೆ ಬಂದ ಕೃತಿಯೆಂದರೆ ವಿ. ಜಾನಕೀರಾಮನ್‌ರ 'ಅಮ್ಮಾ ವಂದಾಳ್'. ಇದನ್ನು ವಿಶಿಷ್ಟ ಕೃತಿ ಎಂದು ಹೆಸರಿಸಬಹುದು. ಪಾತ್ರರಚನೆ, ಕಥಾವಸ್ತು, ಸಂಭಾಷಣೆಗಳ ಮೂಲಕವೇ ಕಾದಂಬರಿಯನ್ನು ಮುಂದುವರಿಸುವ ಜಾಣ್ಮೆ, ಅಲ್ಲದೆ ಕಥಾಪಾತ್ರಗಳು ತಮ್ಮ ಹೃದಯದ ಅನಿಸಿಕೆಗಳನ್ನು ಪ್ರಕಟಿಸಲಾಗದೆ ಪಡುವ ಅವಸ್ಥೆ ಇವೆಲ್ಲ ನೈಜವಾಗಿ ಮೂಡಿರುವುದರಿಂದ ಇದನ್ನು ವಿಶಿಷ್ಟ

ಕೃತಿಯೆಂದೇ ಕರೆಯಲು ಅನುಮಾನವಿಲ್ಲ.

ವೇದಾಧ್ಯಯನಪಾರಂಗತರಾದ ತಂದೆ ದಂಡಪಾಣಿ. ಗಂಭೀರ ನಿಲುವಿನ, ಆಕರ್ಷಕ ರೂಪದ ಅವರ ಮಡದಿ ಅಲಂಕಾರತ್ತಮ್ಮ. ಈ ದಂಪತಿಗಳ ಐದಾರು ಮಂದಿ ಮಕ್ಕಳು—ಇದು ಸಂಸಾರ.

ಮೂರನೇ ಮಗು ಅಪ್ಪು ತನ್ನ ಎಂಟನೇ ವಯಸ್ಸಿನಲ್ಲಿ ಮುನ್ನೂರು ಮೈಲಾಚಿನ ಗ್ರಾಮಕ್ಕೆ ವೇದಾಧ್ಯಯನಕ್ಕೆ ಹೋಗುತ್ತಾನೆ. ಇವನೇ ಕಥಾನಾಯಕ. ಹದಿನಾಲ್ಕು ವರ್ಷಗಳಾದ ಮೇಲೆ ಅಪ್ಪು ತನ್ನ ಊರಿಗೆ ಹಿಂತಿರುಗುತ್ತಾನೆ. ಬರುವಾಗ ತಾನು ಕಲಿತ ಶಾಲೆಯನ್ನು ಅಗಲಲಾರದೆ, ವಿಧವೆ ಇಂದುವನ್ನು ಬಿಟ್ಟುಬರಲಾರದೆ ಬರುತ್ತಾನೆ. ಬಂದ ಸ್ಥಳದಲ್ಲಿ ಕುಟುಂಬದ ಮಿತ್ರನಾದ ಶಿವಸು ಮತ್ತು ತನ್ನ ತಾಯಿಯ ನಡುವೆ ಹಲವು ವರ್ಷಗಳಿಂದ ಅನೈತಿಕ ಸಂಬಂಧವಿದೆ ಎಂಬ ವಿಚಾರ ಥಟ್ಟನೆ ತಲೆ ಚಾಚುತ್ತದೆ. ಅದನ್ನು ತಿಳಿದ ಅಪ್ಪು ಬೆಂಕಿಯಲ್ಲಿ ಬಿದ್ದ ಹುಳದಂತೆ, ಮುಳ್ಳಿನ ಮೇಲೆ ಹರವಿದ ಬಟ್ಟೆಯಂತೆ ಪರಿತಪಿಸುತ್ತಾನೆ. ಪಾಠಶಾಲೆಯ ಅತ್ತೆಗೆ ಮೈ ಹುಷಾರಿಲ್ಲ ಎಂಬ ನೆಪವನ್ನು ಮುಂದೆ ಮಾಡಿ ತಾನಿದ್ದ ಗ್ರಾಮಕ್ಕೆ ವಾಪಸಾಗುತ್ತಾನೆ. ತನ್ನ ಊರನ್ನು ಮರೆತು ಅಲ್ಲಿ ಇದ್ದು-ಬಿಡುತ್ತಾನೆ. ಒಂದಾನೊಂದು ದಿನ ಇದ್ದಕ್ಕಿದ್ದಂತೆಯೇ ಅವನ ತಾಯಿ ಅವನನ್ನು ಹುಡುಕಿಕೊಂಡು ಬರುತ್ತಾಳೆ. ಬಂದ ಕಡೆ ಇಂದುವನ್ನು ನೋಡಿದ ಅವಳಿಗೆ 'ಹಾವಿನ ಕಾಲು ಹಾವಿಗೆ ಗೊತ್ತು' ಎನ್ನುವಂತೆ ಇಂದುವಿನ ಮತ್ತು ತನ್ನ ಮಗನ ನಡುವೆ ಇದ್ದ, ಇರಬಹುದಾದ ಸಂಬಂಧ ಗೊತ್ತಾಗುತ್ತದೆ.

"ನೀನು ಋಷಿಯಾಗಿಬಿಟ್ಟೆ; ನಿನ್ನ ಕಾಲಿಗೆ ಬಿದ್ದು ಎಲ್ಲವನ್ನೂ ಕಳೆದು ಕೊಳ್ಳೋಣ ಅಂತ ಬಂದೆ.... ನೀನೂ ನಿನ್ನ ತಾಯಿಯ ಮಗನಾಗಿಯೇ ಇದ್ದಿಯೆ!" ಎನ್ನುವ ಅಲಂಕಾರತ್ತಮ್ಮ ತನ್ನ ಪಾಪಕರ್ಮಗಳನ್ನು ನೀಗಿಕೊಳ್ಳಲು ಕಾಶಿಗೆ ಹೊರಟುಹೋಗುತ್ತಾಳೆ.

'ಅಮ್ಮಾ ವಂದಾಳ್' ಕಾದಂಬರಿಯ ಕುರಿತು ಲೇಖಕರ ಅಭಿಪ್ರಾಯ ವೇನು ?

"ಹೀಗೆ ನಡೆಯಬಹುದೆ, ನಡೆಯಬಾರದೆ ಎಂಬುದನ್ನು ವಿಮರ್ಶಕರು ಹೇಳುತ್ತಾರೆ. ವಿಮರ್ಶಕರ ಬಗ್ಗೆ ನಾನು ಯಾವಾಗಲೂ ಚಿಂತಿಸಿದವನೇ ಅಲ್ಲ. ಎರಡು, ಮೂರು ಅಳತೆಗೋಲುಗಳನ್ನು ಹಿಡಿದು ಕೃತಿಕಾರನ ಅನುಭವವನ್ನು ಅಳಿಯಹೊರಡುವ ಮೂರ್ಖ ವಿಮರ್ಶಕ. ಅವನು ಟೀಕೆಗೆ ರಕ್ಷಣೆ ನೀಡುವುದು ಸಂಪ್ರದಾಯಶೀಲತೆ. ಕಲೆ ಮತ್ತು ಶಾಂತಿಯ ಬಗ್ಗೆ ಓದುಗ ಬಲ್ಲ. ಅದು ಮತ್ತು ಲೋಕದ ವಸ್ತುಸ್ಥಿತಿ ಒಂದೆ ಎಂದು ಗೊಂದಲದಲ್ಲಿ ಬೀಳಬಾರದು !"

ಜೆಗಸಿರ್ಪಿಯನ್ ತಮ್ಮ ಸಾಮಾಜಿಕ, ಐತಿಹಾಸಿಕ ಮತ್ತು ಪತ್ತೇದಾರಿ ಕಾದಂಬರಿಗಳಿಂದ ಜನಪ್ರಿಯರಾಗಿದ್ದಾರೆ. ಅವರ 'ಜೀವಗೀತಂ' ಒಂದು ಶ್ರೇಷ್ಠ.

ಕೃತಿ. ಮದರಾಸಿನ ಗುಡಿಸಲು ನಿವಾಸಿಗಳ ಸುತ್ತ ಹೆಣೆದ ಚೊಕ್ಕ ಕೃತಿ. ನಚ್ಚಿ, ಮರುದಮುತ್ತು, ವೇದಾ, ಶಟೀಶ ಈ ಪಾತ್ರಗಳೆಲ್ಲ ಒಂದೊಂದು ದೃಷ್ಟಿ-ಕೋನದಲ್ಲಿ ವಿಶಿಷ್ಟವಾದವು. ಯಾರಿಗೂ ಹೆದರದ, ಏತಕ್ಕೂ ಹೇಸದ ನಚ್ಚಿ ತುಂಬ ಧೈರ್ಯಶಾಲಿ ಸಾಮರ್ಥ್ಯಶಾಲಿ., ಚುನಾವಣೆಯಲ್ಲಿ ಸೋತ ರಾಜಕಾರಣಿ ಮರುದ-ಮುತ್ತುವಿನ ಹಸ್ತಕ. ವಿರೋಧಿ ಪಕ್ಷದ ಭಾಷಣ ನಡೆಯುವಾಗ ಚಪ್ಪಲಿಗಳ ಸುರಿಮಳೆಯಾಗಿ ಗೊಂದಲ ಮಾಡಬೇಕೆ? ಆ ಕೆಲಸವನ್ನು ಸಾಧಿಸಲು ನಚ್ಚಿ ಸಿದ್ಧ. ಆವನದು ಪ್ರಚಂಡ ವ್ಯಕ್ತಿತ್ವ. ಒಬ್ಬ ಆಂಗ್ಲೋ--ಇಂಡಿಯನ್ ಮನೆಯಲ್ಲಿ ನೌಕರಿ-ಗಿದ್ದ ಅವನ ತಾಯಿ ಒಬ್ಬ ಆಫ್ರಿಕನ್ ಸಿಪಾಯಿಯ ಸಂಪರ್ಕ ಪಡೆದುದರಿಂದ ಹುಟ್ಟಿದವನು ಈ ನಚ್ಚಿ. ಪಂಬಯ್ಯ ಎಂಬ ಪೈಲ್ವಾನನ ರಕ್ಷಣೆಯಲ್ಲಿ ಬೆಳೆದವನು. ಒಮ್ಮೆ ರೈಲ್ವೇ ನಿಲ್ದಾಣದಲ್ಲಿ ನಿಂತಿದ್ದ ನಚ್ಚಿಯ ಕೈಗೆ ಒಬ್ಬ ಹೆಣ್ಣು ಬೆತ್ತದ ಬುಟ್ಟಿಯೊಂದನ್ನು ಹಿಡಿದಿರಲು ಕೊಟ್ಟು ರೈಲು ಹತ್ತಿ ಹೊರಟುಹೋಗುತ್ತಾಳೆ. ಬಹಳ ಸಮಯಾನಂತರ ನೋಡಿದಾಗ ಬುಟ್ಟಿಯಲ್ಲಿ ಮೂರು ತಿಂಗಳ ಹೆಣ್ಣು ಕೂಸು ಇರುವುದು ಗೊತ್ತಾಗುತ್ತದೆ. ನಚ್ಚಿ ಆ ಕೂಸನ್ನು ಅಲ್ಲೇ ಬಿಟ್ಟುಬಂದನೆ? ಆವನ ಹೃದಯ ಎಂಥದೆಂಬುದನ್ನು ನಾವಿಲ್ಲೇ ಕಾಣುವುದು. ಆ ಕೂಸನ್ನು ಮನೆಗೆ ತಂದು, ಸ್ವಂತ ತಂಗಿಯಂತೆ ಬೆಳೆಸಿ, ಓದಿಸಿ ಮುಂದೆ ತರುತ್ತಾನೆ........

ಇಡೀ ಕಾದಂಬರಿಯಲ್ಲಿ ನಚ್ಚಿಯ ಪಾತ್ರ ಹರಡಿಕೊಂಡಿದೆ. ಅವನ ಮೂಲಕ ಸಮಾಜದ ವಿವಿಧ ಮುಖಗಳು ಪರಿಚಯವಾಗುತ್ತವೆ.

ಆರ್. ಚೂಡಾಮಣಿಯವರ 'ಮಂಗೈ ಬಿ. ಎ' ಒಂದು ಕಿರು ಕಾದಂಬರಿ. ಮಂಗೈ ಎನಿಸಿಕೊಳ್ಳುವ ಮಂಗಮ್ಮಾಳ್ ಬಡತನದಲ್ಲಿ ಬಂದ ರೋಗಿಷ್ಟ ಹೆಣ್ಣು. ಓದಬೇಕು ಎಂಬ ಅಸುರೀ ಆಸೆ. ದಿನದಿನವೂ ಕಾಲೇಜಿಗೆ ಹೋಗಿಬರಬೇಕು. ಒಂದು ದಿನ ಹೋಗಿ ಬಂದರೆ ಮಾರನೇ ದಿನ ಮತ್ತೆ ಹೋಗಲು ಆಕೆಯ ಆರೋಗ್ಯ ಎಡೆಗೊಡುವುದಿಲ್ಲ. ಆದರಿಂದ ತನ್ನ ಒಂದು ದಿನದ ಪಾಠ ಎಲ್ಲಿ ತಪ್ಪುತ್ತದೋ ಎಂದು ಇಡೀ ರಾತ್ರಿಯನ್ನು ಪಾರ್ಕಿನ ಬೆಂಚಿನ ಮೇಲೆ ಕಳೆದು ಮಾರನೇ ದಿನ ಕಾಲೇಜಿಗೆ ಹೋಗುವ ಆ ಹೆಣ್ಣಿನ ಕಲಿಕೆಯ ಹುಚ್ಚನ್ನು ಏನನ್ನುವುದು? ಅವಳ ಜೀವನದ ಉತ್ಕರ್ಷಕ್ಕೆ ಕಾರಣಳಾದವಳು ಟೀಚರ್ ಸುಮಿತ್ರ. ಈ ಎರಡು ಪಾತ್ರಗಳು ಕಣ್ಣಿಗೆ ಕಟ್ಟುತ್ತವೆ.

ಚೂಡಾಮಣಿಯವರ ಕೃತಿಗಳಲ್ಲಿ ಮಾನಸಿಕ ತುಮುಲಗಳ, ಅಂತರಾಳದ ಅನಿಸಿಕೆಗಳ ಯಥಾವತ್ತಾದ ಹೃದಯಂಗಮ ಚಿತ್ರಣವಿದೆ. ಸಾಮಾಜಿಕ ಮೌಲ್ಯಗಳನ್ನು ವಿಶ್ಲೇಷಿಸುವುದರಲ್ಲಿ ಹೆಸರಾದವರವರು. ಉದಾಹರಣೆಗೆ ಅವರ ಇನ್ನೊಂದು ಕೃತಿಯಾದ 'ಮಗಳ ಕೈಗಳು' ಕಾದಂಬರಿಯನ್ನು ನೋಡಬಹುದು. ತಂದೆ ಮಗಳ ನಡುವೆ ಅಡ್ಡಬಂದ ಅಂತಸ್ತು ಅಂತರಾಳದ ಹೋರಾಟದಲ್ಲಿ ಮಥನಗೊಂಡು ಕೊನೆಗೆ ಒಂದೇ ಆಗಿ ನಿಲ್ಲುವ ಮನೋಜ್ಞ ಚಿತ್ರ ಅದರಲ್ಲಿದೆ.

ಲಕ್ಷ್ಮೀ ಸುಬ್ರಹ್ಮಣ್ಯಂ ಅವರು 'ನಾರ್ವರು ಮಣಿನೇರಂ'ನಲ್ಲಿ ಪತ್ನಿಯನ್ನು ಹೆರಿಗೆಗೆ ಆಸ್ಪತ್ರೆಗೆ ಸೇರಿಸಿರುವ ಪತಿ ಆಕೆಯ ಹೆರಿಗೆಯ ವಿಚಾರದಲ್ಲಿ ಆತಂಕಗೊಂಡಿದ್ದಾನೆ. ನಲವತ್ತು ತಾಸುಗಳ ಅವಧಿಯಲ್ಲಿ ಅವನ ಹೃದಯ ನಾನಾ ವಿಧವಾದ ಭಾವನೆಗಳಲ್ಲಿ ಅದ್ದಿ ಅದ್ದಿ ಏಳುತ್ತದೆ. ಹಿಂದಿನ–ಇಂದಿನ–ಮುಂದಿನ ವಿಚಾರಗಳನ್ನೆಲ್ಲ ಚಿಂತಿಸುತ್ತಾನೆ. ಕೆಲವೊಮ್ಮೆ ಹೃದಯಸ್ಪರ್ಶಿಯಾದ ಚಿತ್ರದ ಸ್ಮರಣೆಯಾಗಿ ಅವನ ಹೃದಯ ಉಲ್ಲಸಿತವಾಗುತ್ತದೆ. ಇನ್ನೊಮ್ಮೆ ಏನೋ, ಎಂತೋ ಎಂದು ತಹತಹ ಪಡುವಾಗ ಬೆಂಕಿಯಲ್ಲಿ ಬಿದ್ದವನಂತೆ ಆಗುತ್ತಾನೆ. ಅವನೊಡನೆ ಓದುಗನೂ ಸಹಭಾಗಿಯಾಗಿ ಮುಂದೇನು ಎಂದು ತುದಿಗಾಲ ಮೇಲೆ ನಿಲ್ಲುವಂತೆ ಈ ಕಾದಂಬರಿ ಓದಿಸಿಕೊಂಡುಹೋಗುತ್ತದೆ.

೧೯೫೭ ರಲ್ಲಿ ತ. ನಾ. ಕುಮಾರಸ್ವಾಮಿಯವರ 'ಕಾನಲ್ ನೀರ್' ಪ್ರಕಟವಾಯಿತು. ಆಗ ಓದುಗರು ಹುಬ್ಬೇರಿಸಿದ್ದರು. ಬಾಲ ವಿಧವೆಯೊಬ್ಬಳು ಸಮಾಜದ ಕಟ್ಟುಪಾಡುಗಳನ್ನು ಹರಿದೊಗೆದು ತನ್ನ ಪ್ರೇಮಿಯೊಡನೆ ಹೊರಟುಬಿಡುತ್ತಾಳೆ. ಅವಳು ಅನುಭವಿಸುವ ಕಷ್ಟಪರಂಪರೆಗಳು, ಚಲನಚಿತ್ರರಂಗದ ತೆರೆಮರೆಯಲ್ಲಿ ನಡೆಯುವ ಚಿತ್ರವಿಚಿತ್ರಗಳು ಈ ಕೃತಿಯಲ್ಲಿ ನೈಜವಾಗಿ ಮೂಡಿಬಂದಿವೆ. ಸುರಮಾ, ರಂಗವಲ್ಲಿ, ನಟರಾಜ, ಬಾಲು, ಫಿಲೋಮಿನಾ ಈ ಪಾತ್ರಗಳಾವವೂ ಕಾಲ್ಪನಿಕವಲ್ಲ. ಸುರಮಾಳ ದಡ್ಡತನ, ನಟರಾಜನ ಅಸ್ಥಿರ ಬುದ್ಧಿ, ರಂಗವಲ್ಲಿಯ ಕುಟಿಲತನ, ಫಿಲೋಮಿನಾಳ ಜೀವನಾಸಕ್ತಿ ಈ ನಾಲ್ಕು ಕೋನಗಳ ನಡುವೆ ಕಥೆಯ ಹೂರಣವಿದೆ. ಜೀವನದಲ್ಲಿ ಎದುರಾಗುವ ವ್ಯಕ್ತಿಗಳೆಲ್ಲ ಒಳ್ಳೆಯವರಾಗಿರಲು ಸಾಧ್ಯವಿಲ್ಲ. ಅಂಥ ವ್ಯಕ್ತಿಗಳನ್ನು ಕಾದಂಬರಿಯಲ್ಲಿ ಚಿತ್ರಿಸುವಾಗ ಅವರ ನಡವಳಿಕೆ ಅಸಭ್ಯವಾಗಿರಬಹುದು. ಅಂದಾಕ್ಷಣ ಅಂಥ ವ್ಯಕ್ತಿಗಳಿಗೆ ಕಾದಂಬರಿಯಲ್ಲಿ ಸ್ಥಾನವೇ ಇಲ್ಲ ಎಂದು ಹೇಗೆ ಹೇಳಲು ಸಾಧ್ಯ? ಅವರಿಗೂ ಜೀವನದಲ್ಲಿ ಸುಖಾಪೇಕ್ಷೆಯಿದೆ. ಒಂದು ವ್ಯತ್ಯಾಸವೆಂದರೆ ಅವರು ತಮ್ಮ ದಾರಿಯಲ್ಲಿ ತಮಗೆ ಬೇಕಾದುದನ್ನು ಪಡೆದುಕೊಳ್ಳುತ್ತಾರೆ. ಸೋಲು ಎದುರಾದಾಗ ಅವರು ಹಿಂತೆಗೆಯುವುದಿಲ್ಲ. ಅದರ ವಿರುದ್ಧ ಸೆಟೆದು ನಿಂತು ಹೋರಾಟ ನಡೆಸಿ ನಿರ್ನಾಮವಾಗುತ್ತಾರೆ. ಇಂಥ ಪಾತ್ರಗಳನ್ನು ಒಬ್ಬ ಕಾದಂಬರಿಕಾರ ಹೇಗೆ ಕೈಬಿಡಬಲ್ಲ? ಈ ಹಿನ್ನೆಲೆಯಲ್ಲಿ 'ಕಾನಲ್ ನೀರ್' ಸೃಷ್ಟಿಯಾದುದರಿಂದ ಓದುಗರ ಮನ್ನಣೆಗೆ ಪಾತ್ರವಾಯಿತು.

ತಮಿಳಿನಲ್ಲಿ ಕಾದಂಬರಿಯ ಪ್ರಕಾರ ತುಂಬ ಜನಪ್ರಿಯವಾಗಲು ಕಾರಣ ಪತ್ರಿಕೆಗಳು. 'ತೊಡರ್ ಕತೈ' ಎಂಬ ಶೀರ್ಷಿಕೆಯಲ್ಲಿ ಬಹಳ ಹಿಂದಿನಿಂದಲೂ ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗುತ್ತಿವೆ. ತಮಿಳು ಪತ್ರಿಕೆಗಳಲ್ಲಿ ಧಾರಾವಾಹಿ ಕಾದಂಬರಿಯಿಲ್ಲದ ಪತ್ರಿಕೆ ವಿರಳ. ಇಂದಿಗೂ ಸುಮಾರು ಐವತ್ತು ಕಾದಂಬರಿಗಳು ದಿನ, ವಾರ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಜೊತೆಗೆ ಸಾವಿರದಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಬಹುಮಾನ ಕೊಟ್ಟು ಕಾದಂಬರಿ

ಸ್ಪರ್ಧೆಗಳನ್ನು ನಡೆಸುತ್ತವೆ. ಹೀಗೆ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಕೃತಿಗಾರರೆಂದರೆ ಅಖಿಲನ್, ಅನುತ್ತಮಾ, ಅಂಜೈ, ಆರ್. ಚೂಡಾಮಣಿ, ರಾಜಮ್ ಕೃಷ್ಣನ್, ಲಕ್ಷ್ಮೀ ಸುಬ್ರಹ್ಮಣ್ಯಂ, ಉಮಾ ಚಂದ್ರನ್, ಪಿ. ವಿ. ಆರ್, ರ. ಸು. ನಲ್ಲಪೆರುಮಾಳ್, ಜೆಗಸಿರ್ಪಿಯನ್, ನಾ. ಪಾರ್ಥಸಾರಥಿ ಮೊದಲಾದ ಕೆಲವರು. ಇವರಲ್ಲದೆ ತಮಿಳಿನಲ್ಲಿ ಹೆಸರಾಂತ ಕೃತಿಕಾರರೆಂದು ಮನ್ನಣೆ ಪಡೆದ ಇನ್ನಿತರರೆಂದರೆ ಬಿ. ಎಸ್. ರಾಮಯ್ಯ, ಪ್ರಮಿಲನ್, ಕ. ನಾ. ಸು., ಸಾವಿ, ವಿಂದನ್, ಮಣಿಯನ್, ರಾ. ಕಿ. ರಂಗರಾಜನ್, ಜ. ರಾ. ಸುಂದರೇಶನ್, ಕೇ. ಜಯಲಕ್ಷ್ಮಿ, ಮಹರ್ಷಿ, ಪ. ಸಾ. ನಾಗರಾಜನ್, ಮಾಯಾವಿ, ಪುನೀತನ್ ಎಸ್. ವಿ. ವಿ., ಗೋಮತಿ ಸ್ವಾಮಿನಾಥನ್, ಪಿ. ಎಂ. ಕಣ್ಣನ್, ಕಲ್ಪನಾ, ಬಿಲಹರಿ, ಸುಬ್ಬಯ್ಯ, ಸೋಮು, ಶಂಕರರಾಮ್, ಲಕ್ಷ್ಮಿ, ಪ. ನಾ. ಸೇನಾಪತಿ, ಕಾ. ಶ್ರೀ. ಶ್ರೀ., ಶಿವಶಂಕರಿ, ಕೋಮಗಳ್, ಎಸ್. ರಂಗನಾಯ್ಕಿ, ವಿಮಲಾರಮಣಿ ಮೊದಲಾದವರು.

ಮಾಯಾವಿಯ ಕಾದಂಬರಿಗಳು ತುಂಬ ಜನಪ್ರಿಯವಾದವು. ಮುಂಬಯಿಯಲ್ಲಿ ಹಲವು ವರ್ಷಗಳ ಕಾಲ ನೆಲೆಸಿದ್ದ ಅವರು ತಮ್ಮ ಕೃತಿಗಳಲ್ಲಿ ಅಲ್ಲಿಯ ಪರಿಸರವನ್ನು, ಅಲ್ಲಿಯ ಜನಜೀವನವನ್ನು ಚಿತ್ರಿಸಿದ ಹಲವು ಕೃತಿಗಳು ಪ್ರಕಟವಾಗಿವೆ. ಅವರ 'ಅಲೈಕಡಲ್' ಒಂದು ನವ್ಯ ಪ್ರಯೋಗ. ಮುಂದೇನು ಮುಂದೇನು ಎಂದು ಓದುಗ ಹಾತೊರೆಯುವಂತೆ ಚಿತ್ರಿಸುವುದರಲ್ಲಿ ನಿಸ್ಸೀಮರಿವರು. ಸುಲಭವಾದ ಶೈಲಿ, ಹೃದಯಂಗಮವಾದ ವಸ್ತು, ಅಪೂರ್ವವಾದ ಆದರೆ ನೈಜ ಕಥಾಚಿತ್ರಗಳು, ಅನಿರೀಕ್ಷಿತವಾದ ತಿರುವುಗಳು ಇವರ ಕೃತಿಗಳಲ್ಲಿ ಕಾಣಬರುವಾದ ಕೆಲವು ವಿಶಿಷ್ಟಗುಣಗಳು. 'ಭೂಕಂಪಂ', 'ಎತ್ತನೈಕೋಟಿ ಇನ್ಬಂ', 'ಅನ್ಬಿನ್ ಇಲಿ', 'ಮೂಡುಪನಿ', 'ಗ್ರಹಣಂ', ಈ ಕೃತಿಗಳಲ್ಲಿ ಮಹಾರಾಷ್ಟ್ರ, ಗುಜರಾತು ಹಾಗೂ ಕೊಂಕಣಗಳ ಪರಿಸರವನ್ನು ಕಾಣಬಹುದು. ಮುಂಬಯಿಯನ್ನು ಕಾಣದವರು ಮಾಯಾವಿಯ ಕಾದಂಬರಿಗಳಿಂದ ಅಲ್ಲಿನ ಬೀದಿ ಬೀದಿಯ ಪರಿಚಯವನ್ನು ಮಾಡಿಕೊಳ್ಳಬಲ್ಲರು. "ಮಾಯಾವಿಯ ಕಾದಂಬರಿಯೆಂದರೆ ಎಲ್ಲಿ ಹೇಗೆ ಯಾವಾಗ ಕಥೆಯ ಜಾಡು ತಿರುಗುತ್ತದೆ ಎಂದು ಊಹಿಸುವುದು ಕಷ್ಟ. ಹೆಸರಿಗೆ ಅನ್ವರ್ಥವಾಗಿ ಅವರ ಕೃತಿಗಳು ತನ್ನ ಲೋಕಕ್ಕೆ ಸೆಳೆದೊಯ್ಯುತ್ತವೆ." 'ಕಲೈಮಗಳ್' ಪತ್ರಿಕೆಯ ಸಂಪಾದಕರು ನೀಡಿರುವ ಈ 'ಪ್ರಶಸ್ತಿ ಅವರ ಬಗ್ಗೆ ಬಹಳ ಹೇಳುತ್ತದೆ.' ಕೃಷ್ಣಾ ಅವರ 'ಕನಕ ವಿಲಾಸಂ' ಸಾಂಸಾರಿಕ ಜೀವನದ ಹಿನ್ನೆಲೆಯಲ್ಲಿ ರಚಿತವಾದ ಕೃತಿ. ಸರಳವಾದ ಶೈಲಿ, ಹೃದಯವನ್ನು ತಣಿಸುವ ಕಥಾವಸ್ತು, ಉನ್ನತ ಪಾತ್ರಸೃಷ್ಟಿ ಇವುಗಳಿಂದ ಈ ಕೃತಿ ಜನಮನ್ನಣೆ ಪಡೆಯಿತು. ಸಂಸಾರಗಳಲ್ಲಿ ಹೆಣ್ಣಿನಿಂದ ಉದ್ಭವವಾಗುವ ಕೆಡಕುಗಳನ್ನು ಒಬ್ಬ ಬರೆಹಗಾರ್ತಿ ಆದೂ ದೇವಕಿಯ ಬಾಯಿಂದ ಹೇಳಿಸಿರುವುದು ಮನೋಜ್ಞವಾಗಿದೆ. ಎಲ್ಲ ಸ್ತ್ರೀಯರೂ ಶಕುಂತಲೆಯಂತಿದ್ದರೆ ಸಂಸಾರ

ಸ್ವರ್ಗವಾಗುತ್ತದೆ ಎನ್ನುವ ಸಂದೇಶವನ್ನು ಈ ಕೃತಿ ಬೀರುತ್ತದೆ. ಯೋಗ್ಯ-ಅಯೋಗ್ಯ ವ್ಯಕ್ತಿಗಳ ನಡುವಣ ವ್ಯತ್ಯಾಸವನ್ನು ಈ ಮಾತುಗಳಲ್ಲಿ ಚಿತ್ರಿಸಿರುವದನ್ನು ಗಮನಿಸಬಹುದು.

"ಜಾಯಿಕಾಯಿಗಿಂತ ಅಳಲೆಕಾಯಿ ಆರೋಗ್ಯಕರವಾದುದು ನಿಜ. ಅಂದಾಕ್ಷಣ ಜಾಯಿಕಾಯಿ, ಜಾಯಿಪತ್ರೆ ಇವುಗಳ ಜೊತೆಯಲ್ಲಿ ತಾಂಬೂಲದ ತಟ್ಟೆಯಲ್ಲಿ ಅಳಲೆಕಾಯಿಗೆ ಸ್ಥಾನವಿದೆಯೆ ?"

ತಮಿಳು ಬರೆಹಗಾರರಲ್ಲಿ ಅದರಲ್ಲೂ ಮಹಿಳೆಯರಲ್ಲಿ ವೈ. ಮು. ಕೋದೈ-ನಾಯಕಿ ಅಮ್ಮಾಳ್ ಮತ್ತು ಲಕ್ಷ್ಮಿಯವರಿಗೆ ಪ್ರತ್ಯೇಕ ಸ್ಥಾನಗಳಿವೆ. ತಮ್ಮ ಪತಿಗೃಹಕ್ಕೆ ಬಂದಾಗ ವೈ. ಮು. ಕೋ. ಅವರಿಗೆ ತಮಿಳಿನ ಓನಾಮವೂ ಗೊತ್ತಿರ-ಲಿಲ್ಲ. ಪತಿಯಿಂದ ಕ್ರಮವಾಗಿ ತಮಿಳನ್ನು ಕಲಿತುದಲ್ಲದೆ ನೂರಾ-ಇಪ್ಪತ್ತೈದು ಕಾದಂಬರಿಗಳನ್ನು ಅವರು ರಚಿಸಿದರು. ಅವರ ಕೃತಿಗಳನ್ನು ಓದುಗರು ಆಸಕ್ತಿ-ಯಿಂದ ಓದುತ್ತಿದ್ದರು. ಜನಜೀವನದಲ್ಲಿ, ತಮ್ಮ ಸಂಸಾರದಲ್ಲಿ ಕಂಡ ವಸ್ತುಗಳನ್ನೇ ಕಾದಂಬರಿಗೆ ಆರಿಸಿಕೊಳ್ಳುತ್ತಿದ್ದುದರಿಂದ ಅವರ ಕೃತಿಗಳಲ್ಲಿ ಸಹಜತೆಯನ್ನು ಕಾಣಬಹುದು.

ಲಕ್ಷ್ಮಿಯವರ ಕಾದಂಬರಿ ಧಾರಾವಾಹಿಯಾಗಿ ಪ್ರಕಟವಾಗುವುದೆಂದರೆ ಅವರ ಓದುಗರೇ ಪ್ರತ್ಯೇಕವಾಗಿದ್ದರು; ಇದ್ದಾರೆ. ಸದ್ಯ ದಕ್ಷಿಣ ಆಫ್ರಿಕಾ-ದಲ್ಲಿರುವ ಡಾ. ತ್ರಿಪುರಸುಂದರಿ(ಲಕ್ಷ್ಮಿ) 'ಪೆಣ್ ಮನವ್', 'ಮಿಥಿಲಾ ವಿಲಾಸ್', 'ಕಾಂಚನೈಯಿನ್ ಕನವು', 'ನಾಯಕರ್ ಮಕ್ಕಳ್', 'ಸೂರ್ಯಕಾಂತಂ', 'ವೀರ ದೇವನ್ ಕೋಟ್ಟೈ' ಮೊದಲಾದ ಜನಪ್ರಿಯ ಕೃತಿಗಳನ್ನು ರಚಿಸಿದ್ದಾರೆ. ಹೆಣ್ಣಿನ ಅಂತರಂಗವನ್ನು ಒಳಹೊಕ್ಕು ಚಿತ್ರಿಸುವುದರಲ್ಲಿ ಇವರದು ಎತ್ತಿದ ಕೈ.

ಜಯಕಾಂತನ್‌ರ ಕೃತಿಗಳೆಲ್ಲ ಜನಪ್ರಿಯವಾದವು. ಅವರ ಈಚಿನ ಕೃತಿ 'ಸಿಲ ನೇರಂಗಳಿಲ್ ಸಿಲ ಮನಿದರ್‌ಗಳ್' ತಾನು ಕೆಟ್ಟುಹೋದುದನ್ನು ಕಂಡು ತನಗಾಗಿ ತನ್ನ ತಂದೆ ಸಾಯುವ ವೇಳೆಯಲ್ಲಿ ಅತ್ತುಅತ್ತು ಗೋಳುಗರೆದು ಕಣ್ಣು ಮುಚ್ಚಿದುದನ್ನು ಆಗಾಗ ನೆನೆಯುವ ಪ್ರಭು ತನ್ನಂತೆ ತನ್ನ ಮಕ್ಕಳು ಕೆಟ್ಟು ತಾನು ತನ್ನ ತಂದೆಯಂತೆ ಅಳದಿರಲು ತನ್ನನ್ನು ತಾನು ಹದಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಈ ಮಾತಿನಿಂದ ಅವರ ಕಾದಂಬರಿಯ ಒಳತಿರುಳೆಲ್ಲ ಪ್ರಕಟವಾಗುತ್ತದೆ.

ದ. ಸಾ. ನಾಗರಾಜನ್‌ರ 'ನಾನ್ ಓರ್ ಇಂದಿಯನ್' ಕಾದಂಬರಿಯಲ್ಲಿ ಈ ದೇಶವನ್ನು ಶ್ರೀಮಂತವಾಗಿಸಬೇಕು ಎಂಬ ಉದಾತ್ತ ಧ್ಯೇಯದಿಂದ ಅಂತರಂಗ ಶುದ್ಧಿಯಿಂದ ಹಲವಾರು ಅಡೆತಡೆಗಳನ್ನು ಲೆಕ್ಕಿಸದೆ ಹೊರಟರೂ ದೇಶದ ಬಗ್ಗೆ ಲವಲೇಶವೂ ಪ್ರೇಮವಿಲ್ಲದ ಸ್ವಾರ್ಥಿಗಳು, ಅಯೋಗ್ಯರು ಅಂಥವರ ಕಾಲು ಹಿಡಿದೆಳೆದು ಕೆಳಗೆ ದೂಡುವ ಪರಿತಾಪಕರವಾದ ಚಿತ್ರವನ್ನು ಕಾಣಬಹುದು.

ಪೂವಣ್ಣನ್ (ವೇ. ದಾ. ಗೋಪಾಲಕೃಷ್ಣನ್) ಕಾಲೇಜು ಅಧ್ಯಾಪಕರು. ಇವರು ಮಕ್ಕಳಿಗಾಗಿ ಅನೇಕ ಕಾದಂಬರಿಗಳನ್ನು ಬರೆದರು. ಇವರ ಈಚಿನ ಕೃತಿ 'ಆಲಮ್ ವಿಳುದು'. ಇವರಲ್ಲದೆ ಮಕ್ಕಳಿಗಾಗಿ ಅನೇಕ ಅನೇಕ ಕಾದಂಬರಿಗಳನ್ನು ಬರೆದು ಪ್ರಸಿದ್ಧರಾದವರೆಂದರೆ ಅ. ಳ. ವಳ್ಳಿಯಪ್ಪ, ಕೆ. ರಾ. ರಾಜನ್, ಸಿ. ಸು. ದೈವಶಿಖಾಮಣಿ, ರಾಜಿ, ಜ್ಯೋತಿರ್ಲತಾ ಗಿರಿಜಾ, ಕೇ. ಜಯಲಕ್ಷ್ಮಿ, ನೀಲಮ್, ಆರ್.ವಿ. ಜನಾ, ಮೊದಲಾದವರು. ತಮಿಳು ಕಾದಂಬರಿಕಾರರಲ್ಲಿ ಎಲ್ಲ ವರ್ಗದ ಜನರ ಅನುಭವಗಳೂ ಸಿಗುತ್ತವೆ. ಪಾಮರನಿಂದ ಹಿಡಿದು ಮಂತ್ರಿ ಮಾನ್ಯರವರೆಗೆ, ಚಲನಚಿತ್ರ ನಟರಿಂದ ಹಿಡಿದು ನ್ಯಾಯಾಧೀಶರವರೆಗೆ ಸಮಾಜದಲ್ಲಿ ವಿವಿಧ ಅನುಭವಗಳನ್ನು ಪಡೆದವರ ಕಾದಂಬರಿಗಳಿವೆ. ಯುದ್ಧರಂಗದಲ್ಲಿ ಯೋಧರಾಗಿದ್ದವರು ಕಾದಂಬರಿಗಳನ್ನು ರಚಿಸಿದ್ದಾರೆ.

ಸುಜಾತ ಒಬ್ಬ ವೈಮಾನಿಕರು. ಅವರ 'ವಾನಮೆನ್ನುಂವೀದಿಯಿಲೆ' ಮತ್ತು 'ಜೇ' ಕೃತಿಗಳು ವಿಮಾನಾಪಹರಣಕಾರರ (ಹೈಜಾಕಿಂಗ್) ಕುರಿತು ಸ್ವಾರಸ್ಯವಾದ ಕಥೆಗಳನ್ನು ಹೇಳುತ್ತವೆ.

ಪ. ನಾ. ರಾಜು ಯೋಧರು ಅವರು ತಮ್ಮ ಅನುಭವಗಳನ್ನು ತಮ್ಮ ಕಾದಂಬರಿಗಳಲ್ಲಿ ಪ್ರಕಟಿಸಿದ್ದಾರೆ.

ಸುಪ್ರಸಿದ್ಧ ನಟ, ನಿರ್ದೇಶಕರಾಗಿದ್ದ ದಿ. ಜಾವರ್ ಸೀತಾರಾಮನ್ ತಮ್ಮ 'ಉಡಲ್ ಪೊರುಳ್ ಆನಂದಿ'ಯಲ್ಲಿ ಪರಕಾಯ ಪ್ರವೇಶದ ಕುರಿತು ಚಿತ್ರಿಸುತ್ತಾರೆ.

ಚೋ ಹಾಸ್ಯನಟರು. ಇವರ ಈಚಿನ ಕಾದಂಬರಿ 'ವಾಷಿಂಗ್ಟನಿಲ್ ನಲ್ಲತಂಬಿ.' ತಮ್ಮದೇ ಆದ ಹಾಸ್ಯ ಶೈಲಿ. ಆದರೆ ಚಿಂತನೆಗೆ ಅವಕಾಶಗಳಿರುತ್ತವೆ ಇವರ ಕೃತಿಗಳಲ್ಲಿ.

ಇನ್ನೊಬ್ಬ ನಟ-ನಿರ್ದೇಶಕ ಕೊತ್ತಮಂಗಲಂ ಸುಬ್ಬು ಅವರ ಕೃತಿ 'ತಿಲ್ಲಾನಾ ಮೋಹನಾಂಬಾಳ್'. ನಾಗಸ್ವರವಾದಕ ಮತ್ತು ಭರತನಾಟ್ಯ ನಿಪುಣೆ- ಇವರ ನಡುವಣ ಪ್ರೇಮಕ್ಕೆ ಸಂಬಂಧಿಸಿದ ಕೃತಿಯಾದರೂ ಆ ಎರಡು ಕಲೆಗಳನ್ನು ಪ್ರತ್ಯಕ್ಷವಾಗಿ ಅನುಭವಕ್ಕೆ ತರುತ್ತಾರೆ, ಕಾದಂಬರಿಕಾರರು.

ರಾಜಾಜಿಯವರ 'ವ್ಯಾಸರ್ ವಿರುಂದು', 'ರಾಮಾಯಣಂ' ಪ್ರಾಚೀನ ಕೃತಿಗಳಾದರೂ, ಕಾದಂಬರಿಯಂತೆ ಹೇಳಿರುವ ರೀತಿ ನೂತನವಾಗಿದೆ.

ದಿವಂಗತ ದೇವನ್ ಸಂಪಾದಕರು. ಅವರ ಸೂಚಿಸಿದ ಸಾಂಬುವಿನ ಪಾತ್ರ ಅಮರವಾದುದು. 'ತುತ್ತರಿಯುಂ ಸಾಂಬು' ಅದೆಷ್ಟು ಸಲ ನಾಟಕರಂಗವನ್ನು ಏರಿ ಜನರನ್ನು ರಂಜಿಸಿದ್ದಾನೋ ಲೆಕ್ಕ ಹಾಕಿದವರಾರು ? ಇವರ 'ಜಸ್ಟಿಸ್ ಜಗನ್ನಾಥನ್', 'ಸಿ.ಐ.ಡಿ. ಚಂದ್ರು', 'ರಾಜತ್ತಿನ್ ಮನೋರಥಂ', 'ಶ್ರೀಮಾನ್' 'ಸುದರ್ಶನಂ'ಇವೆಲ್ಲ ಸಾಮಾಜಿಕ ಹಾಸ್ಯಕೃತಿಗಳು. ಎಸ್. ವಿ. ವಿ. ಅವರ 'ವಾಳ್ಕೈಯೇ ವಾಳ್ಕೈ'ನಕ್ಕು ನಗಿಸುವ ಇನ್ನೊಂದು ಕಾದಂಬರಿ.

ತಮಿಳು ಕಾದಂಬರಿಗಳಲ್ಲಿ ಹಲವಾರು ಕೃತಿಗಳು ಚಲನಚಿತ್ರವಾಗಿವೆ. ಅವುಗಳಲ್ಲಿ ಕಲ್ಕಿಯವರ 'ತ್ಯಾಗಭೂಮಿ', 'ಕಳ್ವನಿನ್ ಕಾದಲಿ'; ಅಖಿಲನ್‌ರ; 'ಪಾವೈ ವಿಳಕ್ಕು' ಮತ್ತು 'ವಾಳ್ವವಿಂಗೆ'; ಪೂವಣ್ಣನ್‌ರ 'ಆಲಮ್ ವಿಳುದು' (ನಮ್ಮ ಮಕ್ಕಳು) ಸುಬ್ಬು ಅವರ 'ತಿಲ್ಲಾನಾ ಮೋಹನಾಂಬಾಳ್'; ವಡುವೂರರ ದಿಗಂಬರ ಸಾಮಿಯಾರ್- ರಂಗರಾಜು ಅವರ 'ಮೋಹನ ಸುಂದರಂ' ಮತ್ತು 'ರಾಜಾಂಬಾಳ್': ಜಯಕಾಂತನ್‌ರ 'ಉನ್ನೈಪೋಲ್ ಸಿರುವನ್' ಮತ್ತು 'ಅವನ್ ಏನ್ ಅಳುದಾನ್', ಅಣ್ಣಾ ಅವರ 'ರಂಗೋನ್ ರಾಧಾ', ಮು. ಕರುಣಾನಿಧಿಯವರ 'ವೆಳ್ಳಿಕೆಳಮೈ'; ಲಕ್ಷ್ಮಿಯವರ 'ಪೆಣ್ ಮನಮ್' (ಹಂರಾಹಿ) ಈ ಮೊದಲಾದ ಕಾದಂಬರಿಗಳು ಕನ್ನಡ, ತಮಿಳು ತೆಲುಗು ಮತ್ತು ಹಿಂದಿಗಳಲ್ಲಿ ಚಲನಚಿತ್ರವಾಗಿ ಬಂದಿವೆ.

ಒಟ್ಟನಲ್ಲಿ ತಮಿಳು ಕಾದಂಬರಿಗಳಲ್ಲಿ ಪ್ರಪಂಚದ ವಿವಿಧ ಭಾಗಗಳ, ಪರಿಸರಗಳ ಕಥಾವಸ್ತುವನ್ನೊಳಗೊಂಡ ವಿಶಿಷ್ಟ ಕೃತಿಗಳನ್ನು ಕಾಣಬಹುದು. ಈ ವೈಶಿಷ್ಟ್ಯ ಆಂಗ್ಲಭಾಷೆಯ ಬಳಿಕ ತಮಿಳಿನಲ್ಲಿ ಮಾತ್ರ ಕಾಣಲು ಸಾಧ್ಯ ಎಂದರೆ ಅತಿಶಯೋಕ್ತಿಯಲ್ಲವೇನೋ.

ತೆಲುಗು ಕಾದಂಬರಿ

ಲೇಖಕರು : —ಶಾರ್ವರಿ

ಕನ್ನಡಿಸಿದವರು : —ವಂಶಿ

ನೂರು ವರ್ಷಗಳ ಹಿಂದಕ್ಕೆ ದೃಷ್ಟಿಯೋಡಿಸಿದಾಗ, ತೆಲುಗಿನಲ್ಲಿ 'ಕಾದಂಬರಿ' ಪ್ರಕಾರವೇ ಇರಲಿಲ್ಲ. ನಮ್ಮ ಪ್ರಾಚೀನ ಸಾಹಿತ್ಯವೆಂದರೆ, 'ಕವಿತ್ವಯ', 'ಛಂದೋಬದ್ಧ', 'ಪ್ರಬಂಧ', 'ಪುರಾಣಗಳು', 'ನಾಟಕಗಳು', 'ಯಕ್ಷಗಾನ'— ಇವೇ ಅಂದಿನ ವಿವಿಧ ಪ್ರಾಕಾರಗಳು. ಕೆಲವು ಮೇಧಾವಿಗಳು ಇಂಗ್ಲಿಷಿನ ಕಾದಂಬರಿಗಳನ್ನೋದಿ ಜೀರ್ಣಿಸಿಕೊಂಡು, ಆ ಕಾಲದಲ್ಲಿ ಕಾದಂಬರಿಯ ಸೃಷ್ಟಿಗೆ ಕೈ ಹಾಕಿದರು. ಆಗ ಗ್ರಾಂಥಿಕ ಭಾಷೆಯಲ್ಲಿ ಕಾದಂಬರಿಯ ಸೃಷ್ಟಿಯಾಯಿತು. ಆ ಕಾದಂಬರಿಗಳ ಮೇಲೆ ಇಂಗ್ಲಿಷು ಕಾದಂಬರಿಗಳ ಪ್ರಭಾವ ಪೂರ್ತಿಯಾಗಿತ್ತು. ಒಂದು ವಿಧದಲ್ಲಿ ನೋಡಿದರೆ ಅವು ಅನುಕರಣೆಗಳೆಂದೇ ಹೇಳಬಹುದು.

ಅಂದೇ ಅಲ್ಲ, ಇಂದೂ ತೆಲುಗು ಕಾದಂಬರಿಗಳ ಮೇಲೆ ಆಂಗ್ಲ ಕಾದಂಬರಿಗಳ ಪ್ರಭಾವವಿದ್ದೇ ಇದೆ. ಅದನ್ನು ದೋಷವೆಂದು ಪರಿಗಣಿಸಲಾಗದು. ಬೇರೊಂದು ಸಾಹಿತ್ಯದ ಪ್ರಭಾವವಿಲ್ಲದೆ ಇನ್ನೊಂದು ಸಾಹಿತ್ಯದಲ್ಲಿ ರಚನೆಯಾಗದು. ಪ್ರತಿ-ಯೊಬ್ಬ ಲೇಖಕ ಲೇಖಕಿಯ ಮೇಲೆ ಯಾವುದಾದರೊಂದು ಬೇರೆ ಭಾಷೆಯ ಲೇಖಕನ ಪ್ರಭಾವವಿದ್ದೇ ಇರುತ್ತದೆ. ಉದಾಹರಣೆಗೆ ಷೇಕ್ಸ್‌ಪಿಯರನ ನಾಟಕದ ಕಥೆಗಳು ಅವನ ಸ್ವಂತ ಕಥೆಗಳಲ್ಲ. ಸಾಮಾನ್ಯವಾಗಿ ಯಾವುದಾದರೊಂದು ಪುಸ್ತಕ ವನ್ನೋದಿ, ಅದರಲ್ಲಿನ ಪಾತ್ರಗಳು ನಮ್ಮ ಸುತ್ತಮುತ್ತನವರಲ್ಲಿ ಕಂಡಾಗ ಆ ಕಥೆ ಯನ್ನು ನಮ್ಮ ವಾತಾವರಣಕ್ಕೆ ಅಳವಡಿಸಿಕೊಂಡು ರಚಿಸುತ್ತೇವೆ. ಹಾಗೆಂದ ಮಾತ್ರಕ್ಕೆ ಅದು ಅನುವಾದವಾಗಲಾರದು. ಯಾವ ಭಾಷೆಯೇ ಆಗಲೀ ಸಾಹಿತ್ಯ ಅಭಿವೃದ್ಧಿಯ ಹಂತವೇರುವುದೇ ಹಾಗೆ. ಹಾಗೆಂದರೆ ಸ್ವತಂತ್ರವಾಗಿ ಯೋಚಿಸಿ ಬರೆ ಯುವವರು ಇಲ್ಲವೆಂದಲ್ಲ. ಏನೇ ಆಗಲಿ, ಕಾದಂಬರಿ, ಕಥಾಸೃಷ್ಟಿಕರ್ತನ ಮೇಲೆ ಇತರ ಲೇಖಕರ, ಸಾಹಿತ್ಯದ ಪ್ರಭಾವವಿದ್ದೇ ಇರುತ್ತದೆಂಬುದು ನಿರ್ವಿವಾದಾಂಶ.

ಒಂದು ರೀತಿಯಲ್ಲಿ ನೋಡಿದರೆ ಸ್ವಾತಂತ್ರ್ಯಕ್ಕೂ ಕಾದಂಬರಿಯ ವಿಕಾ-ಸಕ್ಕೂ ಪರೋಕ್ಷವಾದ ಸಂಬಂಧವಿದೆ. ಅಂದಿನ ಸಮಾಜ ಸಂಸ್ಕರಣೆ ತೆಲುಗು ಕಾದಂಬರಿಯ ಬುನಾದಿಯಾಯಿತು. ಬಾಲಗಂಗಾಧರ ತಿಲಕ್, ರಾಜಾರಾಮ ಮೋಹನರಾಯ್ ರಂಥವರು ತಂದ ಸಾಮಾಜಿಕ ಕ್ರಾಂತಿ ಅರವಿಂದ, ರಮಣ-

ಮಹರ್ಷಿಗಳಂಥ ಅವಧೂತರ ಆಧ್ಯಾತ್ಮಿಕ ಚೈತನ್ಯ ಲೇಖಕರನ್ನು ಬದಲಾಯಿಸಿದವು. ಆಂಧ್ರದಲ್ಲಿ ಕಂದುಕೂರಿ ವಿರೇಶಲಿಂಗಂ ಪಂತುಲುರಂಥವರು, ಸಾಹಿತ್ಯ ವಿಕಾಸಕ್ಕೆ ಬಹಳ ಕಾರಣರಾದರು. ಅಂದಿನ ಸಾಮಾಜಿಕ ಕ್ರಾಂತಿಯೇ ಸಾಹಿತ್ಯ ಕ್ರಾಂತಿಯನ್ನು ತಂದಿತು. ಆದಾಗಲೇ ಕಾದಂಬರಿಯು ಉದಯವಾಗಿತ್ತು. ಆ ಕಾದಂಬರಿಗಳು ಇಂದು ನಿಲ್ಲಲಾರವು. "ರಾಜಶೇಖರ ಚರಿತ್ರೆ" "ಪ್ರಮದಾವನಂ" ನಂಥ ತೆಲುಗು ಕಾದಂಬರಿಗಳು ಇಂದು ಪ್ರಾಚೀನ ಸಾಹಿತ್ಯವೆನಿಸಿವೆ.

ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟ ಹರಿಜನ ಸಂಸ್ಕರಣಗಳ ಪ್ರಭಾವದಲ್ಲಿ ಹೊರಬಂದ ಕಾದಂಬರಿ 'ಮಾಲಪಲ್ಲಿ'–ಎಂಬುದನ್ನು ಉನ್ನತ ಲಕ್ಷ್ಮೀನಾರಾಯಣ ಪಂತುಲುರವರು, 'ನವ್ಯಕಾದಂಬರಿ'ಯ ರೂಪದಲ್ಲಿ ಬರೆದರು. ಎಲ್ಲ ಮತ ವರ್ಣಗಳು ಇರಬಾರದೆಂದೂ, ಹುಟ್ಟಿನಿಂದಲೇ ಯಾರೂ ಬ್ರಾಹ್ಮಣರಾಗಲಾರರೆಂದೂ, ಬ್ರಹ್ಮಜ್ಞಾನವನ್ನು ಕಾದಂಬರಿಯ ಮೂಲಕ ಸಾರಿದರು ಅವರು. ಆರ್ಷೇಯ ವಿಜ್ಞಾನವನ್ನು ಅಲಂಕಾರಪ್ರಾಯವಾಗಿ ಹೊರಗೆಡಹಿದ ಕಾದಂಬರಿ 'ಮಾಲಪಲ್ಲಿ'– ಅದು ಶಿಷ್ಟವ್ಯಾವಹಾರಿಕವಾದ ಗ್ರಾಂಥಿಕ ಭಾಷೆಯಲ್ಲಿದೆ. ತೆಲುಗು ಗ್ರಾಮ್ಯ ಜೀವನ ಸುಂದರವಾಗಿ ಪ್ರತಿಫಲಿಸಿದೆ. ನಮ್ಮ ವಿಜ್ಞಾನ, ವೇದಾಂತ, ತತ್ವ ಶಾಸ್ತ್ರಗಳು ಅದರಲ್ಲಿ ಹಾಸುಹೊಕ್ಕಾಗಿವೆ. ಅದನ್ನು ಮೀರಿಸುವಂಥ ಮತ್ತೊಂದು ಕಾದಂಬರಿ ಹೊರಬರಲಿಲ್ಲ.

ಇತ್ತೀಚೆಗೆ ಪ್ರಕಟಣೆಗೊಂಡ ಎಸ್. ಆರ್. ನಂದಿಯವರ 'ನೈಮಿಶಾರಣ್ಯಂ' 'ಮಾಲಪಲ್ಲಿ'ಯ ಅನುಕರಣೆಯಂತಿದೆ. ಹರಿಜನ ಯುವಕನೊಬ್ಬನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ಶ್ರೀ ನಂದಿಯವರು ಆ ಕಾದಂಬರಿಯ ಕಥೆಯನ್ನು ಮನಮುಟ್ಟುವಂತೆ ರಚಿಸಿದ್ದಾರೆ. ಇಂದಿನ ಸಮಾಜದಲ್ಲಿ ಬ್ರಾಹ್ಮಣೇತರ ತಾರತಮ್ಯ ಉಂಟುಮಾಡುತ್ತಿರುವ ಹಾವಳಿ ತರುತ್ತಿರುವ 'ಹಾನಿ'ಗಳನ್ನು ಬಣ್ಣಿಸಿದ್ದಾರೆ. ಗಾಂಧೀಜಿಯ 'ಹರಿಜನೋದ್ಧಾರ'ವು ವಿಫಲವೆನ್ನುವುದಕ್ಕೆ ಇದೊಂದು ನಿದರ್ಶನ. ಅಗ್ರವರ್ಣಗಳವರ ಅಸಹಿಷ್ಣುತೆ ದ್ವೇಷ, ಅಸೂಯೆ ಇವನ್ನು ಎತ್ತಿ ತೋರಿಸಿದ್ದಾರೆ. 'ಮಾಲಪಲ್ಲಿ'ಯ ಎತ್ತರಕ್ಕೆ 'ನೈಮಿಕಾರಣ್ಯಂ' ನಿಲ್ಲದಿದ್ದರೂ ಇಂದಿನ ಸಮಾಜದ ಪ್ರತಿಬಿಂಬ 'ನೈಮಿಶಾರಣ್ಯಂ' ತೆಲುಗಿನಲ್ಲಿ ಇತ್ತೀಚೆಗೆ ಹೊರಬಂದ ಪ್ರಯೋಗಾತ್ಮಕ, ಪ್ರಯೋಜನಾತ್ಮಕ ಕಾದಂಬರಿ ಆದಾಗಿದೆ.

ಕಳೆದ ಇಪ್ಪತ್ತೈದು ವರ್ಷಗಳಿಂದೀಚೆಗೆ ತೆಲುಗು ಕಾದಂಬರಿ ವಿಪುಲವಾಗಿ ವಿಕಾಸ ಹೊಂದಿದೆ. ಅಡವಿ ಬಾಪಿರಾಜುರವರ ಈ ಕಾದಂಬರಿ, ಕಾದಂಬರಿ ಮಹಾಪ್ರಸ್ಥಾನದಲ್ಲಿನ ಒಂದು ಮೈಲುಗಲ್ಲು. ಅವರ ಸಾಮಾಜಿಕ ಕಾದಂಬರಿ 'ನಾರಾಯಣರಾವು' ಒಂದು ಚೈತನ್ಯದ ಹಿರಿಮೆಯನ್ನೇ ಎಬ್ಬಿಸಿತು. ಯುವಲೇಖಕರ ಧಮನಿಗಳಲ್ಲಿ ಹೊಸರಕ್ತದ ಬಿಸಿಹೊನಲು ಹರಿಯುವಂತೆ ಮಾಡಿತು. ಬಾಪಿರಾಜುರವರ "ಹಿಮಬಿಂದು", "ಗಾನಗನ್ನಾರೆಡ್ಡಿ", "ತುಫಾನು", "ಕೋನಂಗಿ"

ಕಾದಂಬರಿಗಳು ಕ್ರಾಂತಿಕಾರಕವಾದವು. ಬಾಪಿರಾಜುರವರು ನಡೆದ ಹಾದಿಯಲ್ಲಿಯೇ ನಡೆದು, ಶ್ರೀ ತೆನ್ನೇಟಿ ಸೂರಿಯವರು "ಜಂಘೀಸ್ ಖಾನ್"ನನ್ನು ಸೃಷ್ಟಿಸಿದರು. ಈ ಕಾದಂಬರಿ ಅನೇಕ ತಲೆಮಾರುಗಳವರೆಗೂ ನಿಲ್ಲುವಂಥ ಕೃತಿ. ಆಂಗ್ಲ ಭಾಷೆಯೊಂದಿಗೆ ಸಂಪರ್ಕ ಹೊಂದಿ, ಪತ್ರಿಕಾ ವ್ಯವಸಾಯದೊಂದಿಗೆ ಸಂಬಂಧವಿರಿಸಿಕೊಂಡಿರುವವರು, ಅಡವಿ ಬಾಪಿರಾಜು ಮತ್ತು ತೆನ್ನೇಟಿ ಸೂರಿಯವರು. ಉತ್ತಮವಾದ ಕೃತಿಗಳನ್ನು ರಚಿಸಿದರು. ಇವರ ನವ್ಯಪ್ರಯೋಗದಿಂದಾಗಿ ತೆಲುಗು ಸಾಹಿತ್ಯದಲ್ಲಿ ಅಶ್ಲೀಲ ಸೇರಿ ಮೈಲಿಗೆಯಾಯ್ತೆಂದುಕೊಂಡು, ಮಡಿಯಾಗಿಯೇ ಇರಬೇಕೆಂದುಕೊಂಡು, ಲೇಖನಿಯನ್ನು ಹಿಡಿದು ಕಾದಂಬರಿಯ ವ್ಯವಸಾಯಕ್ಕಿಳಿದರು ಛಾಂದಸರು, ವಿಶ್ವನಾಥ ಸತ್ಯನಾರಾಯಣ, ನೋರಿ ನರಸಿಂಹಶಾಸ್ತ್ರಿ, ಶ್ರೀಪಾದ ಸುಬ್ರಹ್ಮಣ್ಯಶಾಸ್ತ್ರಿ ಮುಂತಾದವರು.

ಇವರ ಲೇಖನಗಳಲ್ಲಿನ ಪ್ರಧಾನಾಂಶ ಬ್ರಾಹ್ಮಣ ಪುನರುದ್ಧರಣ. ಕುಲಮತ ಭೇದಗಳು ಕೂಡದೆಂದು ಸರಕಾರ ಎಷ್ಟು ಪ್ರಯತ್ನಿಸಿದರೂ, ಇವರುಗಳು ವೈದಿಕ ಧರ್ಮವೇ ಹಿರಿದೆಂದು, ನಿರೂಪಿಸುವಂಥ ಕೃತಿಗಳನ್ನು ರಚಿಸುತ್ತಿದ್ದಾರೆ. ಬ್ರಾಹ್ಮಣರನ್ನು ದೂಷಿಸದೇ, ಬೀಳುಗೊಳಿಸದೇ ವಿಶ್ವನಾಥರವರು ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ಇವರ ಸಾಹಿತ್ಯವನ್ನು ಮೆಚ್ಚಿ ಕೇಂದ್ರ ಸಾಹಿತ್ಯ ಅಕೆಡೆಮಿಯವರು ಬಹುಮಾನ ನೀಡಿದರು. ಭಾರತೀಯ ಜ್ಞಾನಪೀಠದವರು ಅಂಬಾರಿ ಹತ್ತಿಸಿದರು. ಆಂಧ್ರ ವಿಶ್ವವಿದ್ಯಾಲಯದವರು 'ಕಲಾಪ್ರಪೂರ್ಣ' ಬಿರುದಿತ್ತರು. ಕೇಂದ್ರ ಸರಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು.

ಈ ಐವತ್ತು ವರ್ಷಗಳಿಂದೀಚೆಗೆ ತೆಲುಗಿನಲ್ಲಿ ಒಳ್ಳೆಯ ಕಾದಂಬರಿಗಳು ಹೊರಬಂದವು. ೧೯೩೨ ರ ನಂತರವೇ 'ಕಾದಂಬರಿ' ನಿಜವಾಗಿಯೂ ಕಾದಂಬರಿಯ ರೂಪತಳೆದುದು. ಇತರ ಭಾರತೀಯ ಭಾಷೆಗಳಲ್ಲೂ ಕಾದಂಬರಿ ಅಭಿವೃದ್ಧಿ ದೆಶೆಗೆ ಬಂದಿತು. ರವೀಂದ್ರನಾಥ ಠಾಕೂರ, ಶರತ್‌ಚಂದ್ರಚಟರ್ಜಿ, ಪ್ರೇಮ್‌ಚಂದ್‌ರವರ ಪ್ರಭಾವರಹಿತವಾದ ಸಾಹಿತ್ಯವೇ ಇಲ್ಲವೇನೋ!

ತೆಲಗು ಕಾದಂಬರಿಗೆ ಚೈತನ್ಯ ತುಂಬಿದವರು ಗುಡಿಪಾಟಿ ವೆಂಕಟಾಚಲಂರವರು. ಇಂದು ಅವರು 'ರಮಣನ' ಭಕ್ತರಾಗಿ ರಮಣಾಶ್ರಮದಲ್ಲಿದ್ದರೂ ಒಮ್ಮೆ 'ರಮಣಿಯ' ಭಕ್ತರಾಗಿದ್ದವರೇನೋ! ಸಮಾಜದಲ್ಲಿ ಹೆಣ್ಣಿಗಾಗುತ್ತಿರುವ ಅನ್ಯಾಯ ಅಕ್ರಮಗಳು, ಆಚಾರ ಸಂಪ್ರದಾಯಗಳ ಹೆಸರಿನಲ್ಲಿ ಹೆಣ್ಣು ಹೇಗೆ ನಲುಗುತ್ತಿದ್ದಾಳೆ, ಎಂಬುದನ್ನು ತೋರಿಸಿ, ಸ್ವೇಚ್ಛೆ, ಸ್ವಾತಂತ್ರ್ಯ ಬೇಕೆಂದು ಹೋರಾಡಿದವರು 'ಚಲಂ'. ಚಲಂ ಲೇಖಕರಾಗಿರದಿದ್ದರೆ, ಇಂದು ಆಂಧ್ರದಲ್ಲಿ ಇಷ್ಟೊಂದು ಮಂದಿ ಲೇಖಕರು ಮುಂದೆ ಬರುತ್ತಿರಲಿಲ್ಲ. ಚಲಂ ಲೇಖಕರ ಲೇಖಕರು. ಅವರ ಲೇಖನಗಳನ್ನು ಓದದ ಲೇಖಕ, ಚಲಂರವರನ್ನು ಅರ್ಥಮಾಡಿಕೊಳ್ಳಲಾರದ ಲೇಖಕ ಯಾರೂ ಇಲ್ಲ. ಚಲಂ ಎಬ್ಬಿಸಿದ್ದು ಒಂದು ಹೊಸತೆರೆ. ಅವರ ಧಾಟಿಗೆ ಛಾಂದಸರು ಎದುರುನಿಲ್ಲ

ಲಾರರು. ಅವರ ಲೇಖನದ ಕಥಾವಸ್ತು 'ಸ್ತ್ರೀ ಸ್ವಾತಂತ್ರ್ಯ' ಅದಕ್ಕೆ ಅನುಗುಣವಾಗಿ ಅವರು ಉಪಯೋಗಿಸುವ ಭಾಷೆಯೂ ಕೂಡ, ಹರಿತವಾದ ಅಲುಗಿನಂತೆ ಎದೆಗಿಳಿಯುತ್ತದೆ. ಅದರಿಂದಲೇ ಅವರ ಪ್ರತಿಯೊಂದು ಲೇಖನವು ಇಂದಿಗೂ ಎಂದಿಗೂ, ಸಜೀವವಾಗಿದೆ. ತೆಲುಗು ಕಾದಂಬರಿ ಕ್ಷೇತ್ರದಲ್ಲಿ ಚಲಂರವರ 'ಮೈದಾನಂ', 'ಅಮಿನಾ', 'ಬ್ರಾಹ್ಮಣೀಕಂ' ಚಿರಕಾಲ ನಿಲ್ಲುವಂಥವು. ಇವು ಎಲ್ಲ ಲೇಖಕ ಲೇಖಕಿಯರಿಗೆ ದಾರಿದೀಪಗಳು.

ಚಲಂರವರ ಕಾಲದವರೇ ಇನ್ನೂ ಅನೇಕ ಲೇಖಕರಿದ್ದಾರೆ. ಅವರಲ್ಲಿ ಪ್ರಮುಖರಾದವರು, 'ಕೊಡವಟಿಗಂಟಿ ಕುಟುಂಬರಾವ್', 'ಧನಿಕೊಂಡ ಹನುಮಂತರಾವ್', 'ಗೋಪೀಚಂದ್', 'ಜಿ. ವಿ. ಕೃಷ್ಣರಾವು, ಮತ್ತು 'ಬುಚ್ಚಿ ಬಾಬು' ರವರು. ಕುಟುಂಬರಾವ್ ಕೌಟುಂಬಿಕ ಕಥೆಗಳನ್ನು ಸರಳವಾಗಿ ನಡೆಸುವುದರಲ್ಲಿ ಖ್ಯಾತರು. ಹೊಸದಾಗಿ ಕಥೆ ಬರೆಯುವವರು ಕುಟುಂಬರಾವ್ ಅವರ ಕಥೆಗಳನ್ನು ಓದದೇ ಇರುವುದಿಲ್ಲ. ಇವರ ಕಾದಂಬರಿಗಳು ತಾವೇ ಓದಿಸಿಕೊಂಡು ಹೋಗುತ್ತವೆ. ಇವರು 'ಕಮ್ಯುನಿಸಂ'ನ ಮುಸುಕಿನಲ್ಲಿ ಕಥೆ ಕಾದಂಬರಿಗಳನ್ನು ರಚಿಸಿದ್ದಾರೆ.

ಧನಿಕೊಂಡ ಹನುಮಂತರಾಯರು ಮನೋಧರ್ಮ ಸಂಬಂಧವಾದ ಕಾದಂಬರಿಗಳನ್ನು ಬರೆಯುತ್ತಾರೆ. ಇವರ ಮೇಲೆ 'ಹ್ಯಾನ್‌ಲಾಕ್ ಎಲ್ಲಿಸ್', 'ಫ್ರಾಯ್ಡ್'ರ ಪ್ರಭಾವ ಜಾಸ್ತಿಯಾಗಿದೆ. 'ಮಗುವ ಮನಸು', 'ಗುಡ್ಡಿವಾಡು', 'ಜಗದೇಕ ಸುಂದರಿ ಕ್ಲಿಯೋಪಾತ್ರ', 'ದೂತಿಕಾ ವಿಜಯಂ'—ಉತ್ತಮ ಕಾದಂಬರಿಗಳು.

ಜಿ. ವಿ. ಕೃಷ್ಣರಾಯರ 'ಕೀಲುಬೊಮ್ಮಲು', ಬುಚ್ಚಿಬಾಬುರವರ 'ಜವರುಕು ಮಿಗಿಲೇದಿ ಉತ್ತಮ ಕಾದಂಬರಿಗಳು. ಓದುಗರ ಕಪಾಟಿನಲ್ಲಿ ಮೇಲಂತಸ್ತಿನಲ್ಲಿರುವಂಥವು. ಇವರನ್ನೆಲ್ಲಾ ಮೀರಿಸಿದವರು 'ಗೋಪೀಚಂದ್'—ಹರಿತವಾದ ಲೇಖನಿ–ಅತಿ ಧೈರ್ಯ, ಬಹುಮುಖ ಪ್ರಜ್ಞಾಶಾಲಿ. ಕಥೆ, ಕಾದಂಬರಿ, ಪ್ರಬಂಧಗಳು ಅವರ ಕಾಲದಲ್ಲಿ ಹೊಸ ಚೈತನ್ಯ ರೂಪ ತಳೆದುವು. ಗೋಪೀಚಂದ್‌ರವರ 'ಪಂಡಿತ ಪರಮೇಶ್ವರಶಾಸ್ತ್ರಿ ವೀಲುನಾಮ' ಕೇಂದ್ರ ಸಾಹಿತ್ಯ ಅಕೆಡೆಮಿಯಿಂದ ಬಹುಮಾನ ಪಡೆದ ಏಕೈಕ ತೆಲುಗು ಕಾದಂಬರಿ. ಹೆಚ್ಚು ಕಡಿಮೆ, ಅವರ ಆತ್ಮಕಥೆಯೇ ಎನ್ನಬಹುದು. ಗೋಪೀಚಂದ್‌ರವರ ಲೇಖನಗಳಲ್ಲಿ ಲೇಖಕನ ಆವೇದನೆ, ಮಾನವನಲ್ಲಿನ ಅದರ ಪ್ರತಿಬಿಂಬವನ್ನು ಕಾಣಬಹುದು. ಆ ಕಾದಂಬರಿಯ ಉಗಮದ ಪೂರಕ ಅರವಿಂದರ ದಿವ್ಯಜೀವನ ಸಿದ್ಧಾಂತ. ಅರವಿಂದರ ಯೋಗತತ್ವವನ್ನು ಪ್ರಚಾರಮಾಡಿದಂಥ ಏಕೈಕ ಕಾದಂಬರಿ, "ಪಂಡಿತ ಪರಮೇಶ್ವರಶಾಸ್ತ್ರಿ ವೀಲುನಾಮ". ಗೋಪೀಚಂದ್‌ರವರ ಇತರ ಲೇಖನಗಳಲ್ಲಿ, "ಅಸಮರ್ಥನಿ ಜೀವನಯಾತ್ರೆ", "ಮೆರುಪುಲ ಮರಕಲು" ಪ್ರಸಿದ್ಧವಾದುವು. ಅವರ ಕಾದಂಬರಿಗಳೆಲ್ಲ ನಿಜಜೀವನದ ಪ್ರತಿಬಿಂಬಗಳು.

ತೆಲುಗು ವಾರಪತ್ರಿಕೆಗಳಿಂದಾಗಿ, ತೆಲುಗು ಕಾದಂಬರಿಗಳ ಬೆಳವಣಿಗೆ

ವಿಸ್ತ್ರರೂಪ ತಳೆಯಿತು. ಆಂಧ್ರಪತ್ರಿಕೆ, ಅತ್ತ "ವಿಶ್ವನಾಥ", "ನೋರಿ"ರವರಂಥ ಸನಾತನಿಗಳ ಕಾದಂಬರಿಗಳನ್ನೂ, ಇತ್ತ, "ಪ್ರೋತುಕೂಟಿ", "ಶಾರದ"ರಂಥ ಆಧುನಿಕ ಲೇಖಕರ ಕಾದಂಬರಿಗಳನ್ನು ಪ್ರಕಟಿಸಿ ಸನಾತನ, ನವೀನಗಳ ನಡುವೆ ಸೇತುಬಂಧನ ಮಾಡಿತು. ಜೊತೆಯಲ್ಲಿಯೇ ಬುಚ್ಚಿಬಾಬುರವರ "ಜವರುಕು ಮಿಗಿಲೇದಿ"—ಕಾದಂಬರಿಯನ್ನು ನವೋದಯ ಪತ್ರಿಕೆ ಪ್ರಕಟಿಸಿತು. ತೆಲುಗು ಸ್ವತಂತ್ರ ಪತ್ರಿಕೆಯು, ಜಿ. ವಿ. ಕೃಷ್ಣರಾಯರ, 'ಕಾಲುಬೊಮ್ಮಲು', ಶ್ರೀದೇವಿಯವರ, 'ಕಾಲಾತೀತ ವ್ಯಕ್ತುಲು' ಕಾದಂಬರಿಗಳನ್ನು ಪ್ರಕಟಿಸಿ ತೆಲುಗು ಕಾದಂಬರಿಗಳಿಗೊಂದು ಸ್ಥಾನ ಕಲ್ಪಿಸಿದುವು. ಅವು ತೆಲುಗು ಕಾದಂಬರಿಕಾರರಿಗೆ ಮಾರ್ಗದರ್ಶಿಗಳಾಗಿವೆ.

ನಂತರ ೧೯೫೨ ರಿಂದ "ಆಂಧ್ರಪ್ರಭ" ವಾರಪತ್ರಿಕೆ ರಂಗಕ್ಕಿಳಿಯಿತು. ಇಂದು ಅಸಂಖ್ಯಾತವಾಗಿ ಬರುತ್ತಿರುವ ಲೇಖಕ, ಲೇಖಕಿಯರನ್ನು, ಅವರ ಲೇಖನಗಳನ್ನೂ ಪ್ರೋತ್ಸಾಹಿಸುತ್ತಿದೆ. ತೆಲುಗು ಲೇಖಕಿಯರು ಅನೇಕ ಮಂದಿ 'ಆಂಧ್ರಪ್ರಭ'ದ ಕೃಪಾಪ್ರೋತ್ಸಾಹಿತ ಪುತ್ರಿಯರು. ಪತ್ರಿಕೆ, ಪ್ರಭ, ಪ್ರತಿವರ್ಷ ಕಾದಂಬರಿಯ ಸ್ಪರ್ಧೆ ನಡೆಸುತ್ತಿವೆ. ಆಕರ್ಷಕ ಬಹುಮಾನಗಳನ್ನಿತ್ತು ಅನೇಕ ಮಂದಿ ಹೊಸಬರನ್ನು ಹುರಿದುಂಬಿಸಿ ರಂಗಕ್ಕಿಳಿಸುತ್ತಿವೆ. ಈಗ 'ಆಂಧ್ರಪತ್ರಿಕೆ' ಸ್ಪರ್ಧೆ ನಿರ್ವಹಿಸಲು ಅಶಕ್ತವಾದರೂ, 'ಆಂಧ್ರಜ್ಯೋತಿ' ಸಿದ್ಧವಾಗುತ್ತಿದೆ. ಇಂದು ಒಂದು ಹೊಸ ಕಾದಂಬರಿ ಬೇಕೆನಿಸಿದರಾಗಲೀ, ಅಥವಾ ಹೊಸ ಲೇಖಕ, ಲೇಖಕಿ ಬೇಕೆನಿಸಿದರೆ 'ಆಂಧ್ರಪ್ರಭ'ದ ಪುಟ ತಿರುವಿಹಾಕಿದರೆ ಸಾಕು.

ವಂಗ ಲೇಖಕ ಶರತ್‌ರವರ ಪ್ರಭಾವ ತೆಲುಗು ಲೇಖಕರ ಮೇಲಿರುವಷ್ಟು ಮತ್ತಾವ ಭಾಷೆಯ ಲೇಖಕರ ಮೇಲೂ ಇಲ್ಲವೆನ್ನಬಹುದು. ಕಾದಂಬರಿ ಬರೆಯುವವರು ಶರತ್‌ರನ್ನು ಓದಬೇಕು. ಶರತ್‌ರನ್ನು ಅನುಸರಿಸಿ ಲೇಖನ ಸಾಗಿಸಿದವರು, ಕೊಮ್ಮೂರಿ ವೇಣುಗೋಪಾಲರಾವ್. ಇವರ "ಪೆಂಕುಟಿಲ್ಲು"ವಿನಿಂದ "ಹಾರತಿ"ಯವರೆಗೂ ಬಂದ ಕಾದಂಬರಿಗಳೆಲ್ಲದರಲ್ಲೂ ಶರತ್‌ರವರ ಪ್ರಭಾವ ಹಾಸುಹೊಕ್ಕಾಗಿದೆ. ಇವರು ಸ್ವತಂತ್ರವಾಗಿ ಬರೆದದ್ದು "ಹೌಸ್ ಸರ್ಜನ್". ಇದರಲ್ಲಿ ಲೇಖಕರ ಸ್ವಾನುಭವವಿದೆ. ಅದೊಂದು ವಿಶೇಷ ಪ್ರಯೋಗ. ಯಾವುದಾದರೂ ಲೇಖಕ ಅಥವಾ ಲೇಖಕಿ ತನ್ನ ಅನುಭವದ ವಿಷಯಗಳನ್ನೂ ಆಧರಿಸಿಕೊಂಡು, ಪರಿಚಿತ ಪಾತ್ರಗಳನ್ನು ಅಳವಡಿಸಿಕೊಂಡು ಕಾದಂಬರಿಯ ರಚನೆಗೆ ಕೈಹಾಕಿದರೆ ಆ ಕಾದಂಬರಿ ವಿಜಯವಂತವಾಗಲೇಬೇಕು. ಪ್ರತಿ ಲೇಖಕ ಅಂಥದು ಒಂದೆರಡನ್ನಾದರೂ ಬರೆಯುತ್ತಾನೆ.

ಲೇಖಕಿಯರ ರಂಗಪ್ರವೇಶ ಕಾದಂಬರಿ ಕ್ಷೇತ್ರದಲ್ಲಿಯೇ ಒಂದು ಕ್ರಾಂತಿ ಎನ್ನಬಹುದು. ಅಂಥವರಲ್ಲಿ ಅಗ್ರತಾಂಬೂಲಕ್ಕೆ ತಕ್ಕವರು, ಮುಪ್ಪಾಳ ರಂಗನಾಯಕಮ್ಮ. ಅವರ 'ಪಲ್ಲೆಟೂರು', "ಕೃಷ್ಣವೇಣಿ" ಓದುಗರನ್ನು

ತಲೆತೂಗಿಸಿದವು. ಅದೇ ಸರಣಿಯಲ್ಲಿ ಹೊರಬಂದ "ಬಲಿಪೀಠ*", "ಸ್ತ್ರೀ*", "ರಚಯಿತ್ರಿ*", "ಪೇರಮೇಡಳು*" ಓದುಗರ ವಿಶೇಷ ಆದರಣೆ ಗಳಿಸಿದುವು. ಕೊನೆಯ ನಾಲ್ಕು ಕಾದಂಬರಿಗಳೂ ಕನ್ನಡಕ್ಕೆ ಅನುವಾದವಾಗಿವೆ. ಇದೇ ಲೇಖಿಕೆಯ "ಅಂಧಕಾರಲೋ ಆಡದಿ" —(ಮಾಮಾ— ದಿ ವಿಚ್)ವ್ಯಭಿಚಾರದ ಬಗೆಗಿನ ಕೌತುಕಪೂರ್ಣ ಕಾದಂಬರಿ. ಇಂಥವರನ್ನು ಪುರುಷ ಲೇಖಕರು ಬರೆಯಲು ಬಹಳವಾಗಿ ಹಿಂಜರಿಯುತ್ತಾರೇನೋ !

ಕೋಡೂರಿ ಕೌಸಲ್ಯಾದೇವಿಯ "ಚಕ್ರಭ್ರಮಣಂ*" ನಿಂದ ತೆಲುಗು ಲೇಖಕಿಯರು ಪುಟಿದೆದ್ದರೆನ್ನಬಹುದು. ಇವರ ಕಾದಂಬರಿಗಳೆಲ್ಲಾ ಚಲನಚಿತ್ರದ ದೃಷ್ಟಿಯಿಂದಲೇ ಬರೆದಿರುವಂತಿವೆ. ಇವರೊಂದಿಗೇ ರಂಗಕ್ಕಿಳಿದವರು, ತೆನ್ನೇಟಿ ಹೇಮಲತ, ಯದ್ದನಪೂಡಿ ಸುಲೋಚನಾರಾಣಿ.

ಲತರವರ ಕಾದಂಬರಿಗಳು ಯುವಜನಾಂಗದವರಲ್ಲಿ ಉತ್ಸಾಹ, ಉದ್ರೇಕಗಳನ್ನೂ ಉದ್ದೀಪನಗೊಳಿಸುವಂಥವು. ಇವರ ಕಾದಂಬರಿಗಳಲ್ಲಿನ ಸ್ವೇಚ್ಛಾ ಪ್ರಣಯ ಯುವಕ ಯುವತಿಯರಿಗೆ ಬಲು ಮೆಚ್ಚು. ಆದರೆ ಸುಲೋಚನಾರಾಣಿಯವರ ಕಾದಂಬರಿಗಳಿಗಿರುವಂಥ ಅಧಿಕ ಬೇಡಿಕೆ ಮತ್ತಾರ ಕಾದಂಬರಿಗಳಿಗೂ ಇಲ್ಲ. ಓದುಗರಿಗೆ ಏನು ಬೇಕೆಂಬುದು ಈಕೆಗೆ ಚೆನ್ನಾಗಿ ಗೊತ್ತು. ಅವರ ಕಾದಂಬರಿಗಳೆಲ್ಲಾ 'ಸಿನಿಮಾಟಿಕ್' ಆಗೇ ನಡೆಯುತ್ತವೆ. ಆದ್ದರಿಂದಲೇ ಅವರು ಬರೆದ ಕಾದಂಬರಿಗಳೆಲ್ಲಾ ಚಲನಚಿತ್ರಗಳೇ !

ವಿಶೃಂಖಲ ಶೃಂಗಾರವನ್ನು ಚಿತ್ರಿಸುವುದರಲ್ಲಿ ಲತರವರಿಗೆ ಸರಿದೂಗುವವರು ಯಾರೂ ಇಲ್ಲ. ಇವರ ಕಾದಂಬರಿಗಳಲ್ಲಿ 'ಮೋಹನ ವಂಶಿ' ಅತ್ಯಂತ ಖ್ಯಾತವಾದುದು. ಇದೂ ಕನ್ನಡಕ್ಕೆ ಅನುವಾದಗೊಂಡಿದೆ. ಇತ್ತೀಚೆಗೆ ಕಾದಂಬರಿಯ ಕೃಷಿಗೆ ಕೈಹಾಕಿರುವವರು ಮಾಲತೀ ಚಿಂದೂರ್ ಮತ್ತು ಸಿ. ಆನಂದ ರಾಮಂ. ;ವಾಸಿರೆಡ್ಡಿ ಸೀತಾದೇವಿಯವರ 'ಮಮತ', 'ಮಟ್ಟಿಬೊಮ್ಮಲು' ಗ್ರಾಮೀಣದ ಹಿನ್ನೆಲೆಯಲ್ಲಿನ ಕಾದಂಬರಿಗಳು. ಬೀನಾದೇವಿ ಎಂಬ ಲೇಖಕಿಗೆ ಬಹಳ ಪ್ರಚಾರವಿದ್ದರೂ ಅವರು ಬರೆದ 'ಹ್ಯಾಂಗ್ ಮಿಕ್ಸಿಕ' ಕಾದಂಬರಿ ಆಯುಶಸ್ವಿಯೆನಿಸಿದೆ.

ಹೊಸದಾಗಿ ಬರೆಯುತ್ತಿರುವ ತೆಲುಗು ಲೇಖಕಿಯರ ಮೇಲೆ ಶರತ್‌ರ ಪ್ರಭಾವಕ್ಕಿಂತಲೂ, ಕನ್ನಡದ ಲೇಖಿಕೆ : ದಿ. ತ್ರಿವೇಣಿಯವರ ಪ್ರಭಾವ ಕಂಡು ಬರುತ್ತಿದೆ. ಮನಸ್ತತ್ವ ಪರಿಶೀಲನೆಯಲ್ಲಿ, ಚಿತ್ರಣದಲ್ಲಿ ಅನೇಕರು ತ್ರಿವೇಣಿಯವರನ್ನು ಅನುಸರಿಸುತ್ತಿದ್ದಾರೆ.

ತೆಲುಗಿನವರಿಗೆ ಪುರಾಣ, ಇತಿಹಾಸಗಳತ್ತ ಆಸಕ್ತಿ ಇಲ್ಲ. ಇತಿಹಾಸದ ಆಧಾರಗೊಂಡು ಬಂದ ಕಾದಂಬರಿಗಳು ಅತಿ ಕಡಿಮೆ. ಪಿಲಕಾ ಗಣಪು ಶಾಸ್ತ್ರಿಯವರ 'ವಿಶಾಲ ನೇತ್ರಾಲು'– (ಕನ್ನಡದಲ್ಲಿ 'ವಿಶಾಲನಯನ'*)–'ಕಾಶ್ಮೀರ

ಪಟ್ಟಮಹಿಷಿ', ಪಿ. ರಾಜಗೋಪಾಲನಾಯುಡುರವರ 'ರಾಮಾನುಜುನಿ ಪ್ರತಿಜ್ಞ', ತೆನ್ನೇಟಿ ಸೂರಿಯವರ 'ಚೆಂಘಿಸ್ ಖಾನ್', ಕಾಮರಿಯವರ 'ತೈಮೂರ್-ಖಾನ್', ಲತರವರ 'ಪೋತನ ವಂಶಿ', ಬಾಪಿರಾಜುರವರ 'ಗನ್ನರೆಡ್ಡಿ', ನೋರಿಯವರ 'ನಾರಾಯಣಭಟ್ಟು', 'ಕವಿದ್ವಯಂ' ಹೀಗೆ ಬೆರಳ ಮೇಲೆಣಿಸುವಷ್ಟು ಮಾತ್ರ.

'ಸೆಟೈರ್'-ಅಣಕ-ಎಂಬ ಹೆಸರು ಕೊಂಚ ಭಯವನ್ನುಂಟು ಮಾಡುತ್ತವೆ. ಅಣಕವೆಂದರೆ ಮತ್ತೊಬ್ಬರನ್ನು ಸೂಜಿಯಿಂದ ಚುಚ್ಚಿದಂತೆ ಎಂಬ ಭಾವನೆ ಇವೆ. ಗೋಪೀಚಂದ್‌ರವರು, 'ಮೇರುಪುಲ ಮರಕಲು' ಬರೆದರೆ ರಮಾದೇವಿಯವರು, 'ಎದಗೀ ಎದಗನಿ ಮನಸುಲು',* ಎಂಬ ಸೆಟೈರ್ ಬರೆದರು. ಮುಪ್ಪಾಳ ರಂಗನಾಯಕಮ್ಮನವರ- 'ಸ್ವೀಟ್ ಹೋಂ' (ಕನ್ನಡದಲ್ಲಿನ 'ಮಧುರಾಲಯ')ಗೆ ಬದಲಾಗಿ ಕಾರ್ಮಿಯವರ 'ಹಾರೂ ಹೋಂ'- ಪ್ರಸಿದ್ಧವಾದುವು. ಯಾಮಿನಿಯವರ 'ಸ್ವೀಟ್ ಹೋಂ-೩' ಸೆಟೈರ್‌ಗೋಸ್ಕರ ಬರೆದುದಾದರೂ, ಅನುಗುಣವಾಗಲಿಲ್ಲ.

ಹಾಸ್ಯರಸ ಪ್ರಧಾನವಾದ ಕಾದಂಬರಿಗಳು ತೆಲುಗಿನಲ್ಲಿ ಅತಿವಿರಳ. ಯಾವಾಗಲೋ ಮುಕ್ಕಪಾಟಿ ನರಸಿಂಹಂರವರು 'ಬ್ಯಾರಿಸ್ಟರ್ ಪಾರ್ವತೀಶಂ' ಬರೆದರು. ಇತ್ತೀಚೆಗೆ ಅದಕ್ಕೆ ಎರಡು ಮೂರನೆಯ ಭಾಗಗಳನ್ನು ಬರೆದರು. ಇವುಗಳಲ್ಲಿ ಹಾಸ್ಯ 'ವಿಕಾರ'ವಾಗಿದೆ. ಹಾಸ್ಯವೆನ್ನುವುದು ಹೂಮಾಲೆಯಲ್ಲಿನ ದಾರದಂತೆ ಕಥೆಯೊಂದಿಗೇ ಒಂದಾಗಿರಬೇಕು. ಇತ್ತೀಚೆಗೆ ಸಂಜೂರಿ ವಿಠಲ್ ಉತ್ತಮ ಕಾದಂಬರಿ 'ಸೀತಾಪತಿ' ಎಂಬುದನ್ನು ಬರೆದರು (ಇದೀಗ ಕನ್ನಡದಲ್ಲಿ ಸಿದ್ಧವಾಗುತ್ತಿದೆ) ನವಲೀಪಿಕೆ ಕಮಲಾಮಣಿಯವರ 'ಜೀವತಂ', 'ಪಾರಿಜಾತಂ' ಕಾದಂಬರಿಗಳಲ್ಲಿ ಸರಳವಾದ ಹಾಸ್ಯವಿದೆ.

ಪಮಳಾ ಸೋಮೇಶ್ವರರವರ "ಪಿಲ್ಲಲತೋ ಪ್ರೇಮಯಾತ್ರ" ಹಾಸ್ಯಮಯ ಕಾದಂಬರಿ. ಹಾಸ್ಯಬ್ರಹ್ಮ ಮುಳ್ಳಪೂಡಿ ವೆಂಕಟರಮಣರವರ "ಬುಡುಗು" ಮಕ್ಕಳಿಗೋಸ್ಕರ ಬರೆದ ಮೊದಲ ಕಾದಂಬರಿ.

ಇಂದು ತೆಲುಗು ಕಾದಂಬರಿ ಶಾಖೋಪಶಾಖೆಯಾಗಿ ಬೆಳೆಯುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳು ಬರುತ್ತಿರುವುದು ಮಾತ್ರವಲ್ಲ, ಉತ್ತಮ ಕಾದಂಬರಿಗಳು ಬರುತ್ತಿವೆ. ಶರತ್,ಪ್ರೇಮ್‌ಚಂದ್, ಠಾಕೂರರನ್ನು ಮೀರಿಸುವಂಥ ಕಾದಂಬರಿಗಾರರಿದ್ದಾರೆ. ಯಾರ ಮೇಲೆ ಯಾರ ಪ್ರಭಾವವಿದೆ ಎಂದು ಹೇಳಲಾಗುತ್ತಿಲ್ಲ. ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

ತೆಲುಗು ಕಾದಂಬರಿಗಳಲ್ಲಿ ಆಯ್ದುಕೊಂಡು ಅವುಗಳನ್ನು ಆಂಗ್ಲ ಭಾಷೆಗೆ ಅನುವಾದಿಸಿದರೆ, ಏನಿಲ್ಲವೆಂದರೂ ವರ್ಷಕ್ಕೆ ಹತ್ತು ಹನ್ನೆರಡು ಕಾದಂಬರಿಗಳಾದರೂ ಹೊರಬರುತ್ತವೆ. ಇಂಗ್ಲೀಷಿನಿಂದ ನಮಗೆ ಬರುತ್ತಿರುವ ಕಾದಂಬರಿಗಳಲ್ಲಿ ನೂರಕ್ಕೆ

ಒಂದು 'ಉತ್ತಮ'ವಾದುದು ದೊರೆಯುವುದು ಕಷ್ಟ. ಅಂಥದರಲ್ಲಿ ನಮ್ಮ ಭಾಷೆಗಳಿಂದ ವರ್ಷಕ್ಕೆ ಒಂದು ಹತ್ತು ಕಾದಂಬರಿಗಳನ್ನಾದರೂ ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿದರೆ ಎಷ್ಟೋ ಅನುಕೂಲ. ಹಾಗೇ ಎಲ್ಲ ಭಾರತೀಯ ಭಾಷೆಗಳಿಂದಲೂ 'ಆರಿಸಿ' ಲೆಖ್ಖ ಹಾಕಿದರೆ ಸುಮಾರು ನೂರು ಕಾದಂಬರಿಗಳಾದರೂ ಸಿಗುತ್ತವೆ.

ಇಂದು ತೆಲುಗಿನಲ್ಲಿ ಬರುತ್ತಿರುವ ಕಾದಂಬರಿಗಳೆಲ್ಲಾ ಮುಕ್ಕಾಲುಪಾಲು ಚಲನಚಿತ್ರವಾಗುತ್ತಿವೆ. ತೆಲಗು ಕಾದಂಬರಿಗಳ ಜನಾದರಣೆಗೆ ಅದೇ ಸಾಕ್ಷಿ.

ಶ್ರೀದೇವಿಯವರ 'ಕಾಲುತೀತವ್ಯಕ್ತುಲು' ಕಾದಂಬರಿ 'ಚದುವುರುನ್ನ ಅಮ್ಮಾಯಿಲು' ಆಗಿ ಚಿತ್ರವಾಯ್ತು. ತೆಲುಗು ತೆರೆ ಏರಿದ್ದು ಅದೇ ಮೊದಲ ಕಾದಂಬರಿ. ವಿಶ್ವನಾಥರವರ 'ಏಕವೀರ' ಚಿತ್ರವಾಯ್ತು. ಕೌಸಲ್ಯಾದೇವಿಯವರ 'ಚಕ್ರಭ್ರಮಣಂ' ಕಾದಂಬರಿಯಾಗಿ ಎಷ್ಟು ಆದರಣೆಗಳಿಸಿತೋ ಅಷ್ಟೇ, 'ಡಾಕ್ಟರ್ ಚಕ್ರವರ್ತಿ' ಚಿತ್ರವಾಗಿಯೂ ಆದರಣೆ ಗಳಿಸಿತು. ತೆಲುಗು ನಿರ್ಮಾಪಕರಲ್ಲಿ ಕಾದಂಬರಿಗಳತ್ತ ಆಸಕ್ತಿಯುಂಟು ಮಾಡಿದ ಕಾದಂಬರಿ— "ಚಕ್ರಭ್ರಮಣಂ".

ಕೌಸಲ್ಯಾದೇವಿಯವರ 'ಪ್ರೇಮನಗರ್' ಚಿತ್ರವಾಗಿ 'ದೇವದಾಸು'ವಿನಷ್ಟು ಖ್ಯಾತಿಗಳಿಸಿತು. ಕಾದಂಬರಿಯ ಲೇಖನದಿಂದ ಚಿತ್ರರಂಗವನ್ನು ಪ್ರವೇಶಿಸಿದವರಲ್ಲಿ ಮುದ್ದನಪೂಡಿ ಸುಲೋಚನಾರಾಣಿ ಮೊದಲಿಗರು. ಇವರ ಕಾದಂಬರಿಗಳೆಲ್ಲಾ ಚಿತ್ರಗಳೇ!

ಕಾವಿಲಿಪಾಟಿ ವಿಜಯಲಕ್ಷ್ಮಿಯವರ 'ವಿಭವಿನ್ಯಾಸಲು' ಕಾದಂಬರಿ 'ತಾಸೀಲ್ದಾರಿ ಅಮ್ಮಾಯಿ' ಆಗಿ ಚಿತ್ರವಾಗಿ ಓದುಗರ ಮತ್ತು ಪ್ರೇಕ್ಷಕರ ಆದರಣೆ ಅಭಿಮಾನವನ್ನು ಸೂರೆಗೊಂಡಿತು.

'ಸಿನಿಮಾಟಿಕ್' ಇರುವ ಲೇಖಕರಲ್ಲಿ ದ್ವಿವೇದುಲ ವಿಶಾಲಾಕ್ಷಿ ಒಬ್ಬರು. ಇವರ 'ವಾರಧಿ' (ಕನ್ನಡದ 'ಮನಸು ಕಂಡ ಕನಸು') 'ರೆಂಡು ಕುಟುಂಬಾಲ ಕಥೆ' ಎಂಬ ತೆಲುಗು ಚಿತ್ರವಾಯಿತು. ಬಲವತ್ತರವಾದ ಕಥೆ, ಜೀವಂತ ಪಾತ್ರಗಳ ಉತ್ತಮ ಕಥಾವಸ್ತು.

ಈಗ ಕಾದಂಬರಿ ರಚನೆಯಿಂದ ಚಿತ್ರಜಗತ್ತನ್ನು ಪ್ರವೇಶಿಸುತ್ತಿರುವವರು, ಮಾದಿರೆಡ್ಡಿ ಸುಲೋಚನ, ಯಲಮಂಚಲಿ ಝಾನ್ಸಿಲಕ್ಷ್ಮೀ, ವಾಸಿರೆಡ್ಡಿ ಸುಲೋಚನಾರಾಣಿ, ಸಿ. ಆನಂದಾರಾಮಂ, ಗೊಲ್ಲಪೂಡಿ ಮಾರುತಿರಾವು, ಕೊಮ್ಮೂರಿ ವೇಣುಗೋಪಾಲರಾವು, ಪೋಲಾಪ್ರಗಡ ಸತ್ಯನಾರಾಯಣ ಮೂರ್ತಿ, ತಮಿಲಿಶ ಜಾನಕಿ ಇವರೆಲ್ಲರ ಕಾದಂಬರಿಗಳೂ ಚಿತ್ರಣದ ಹಂತದಲ್ಲಿವೆ.

ಅನೇಕ ಕಾದಂಬರಿಗಳು ಕನ್ನಡವೇ ಅಲ್ಲದೆ ಇತರ ಭಾಷೆಗಳಿಗೂ ಅನುವಾದ ಗೊಳ್ಳುತ್ತಿವೆ. ತೆಲುಗು, ಕನ್ನಡ, ತಮಿಳು, ಮಲೆಯಾಳ ಭಾಷೆಗಳಲ್ಲಿನ ಉತ್ತಮ

ಕಾದಂಬರಿಗಳು ಹಿಂದಿಗೂ, ಇಂಗ್ಲಿಷಿಗೂ ಅನುವಾದವಾಗಬೇಕು. ಉದಾಹರಣೆಗೆ, ಅ.ನ.ಕೃ., ತ.ರಾ.ಸು., ತ್ರಿವೇಣಿಯವರಂಥ ಕಾದಂಬರಿಗಳು ಕೇವಲ ತೆಲುಗಿಗೆ ಮಾತ್ರವಲ್ಲ ಹಿಂದಿಗೂ, ಇಂಗ್ಲಿಷಿಗೂ ಅನುವಾದವಾಗಬೇಕು.

ಕನ್ನಡದ 'ತ್ರಿವೇಣಿ'ಯವರಿಗೆ ತೆಲುಗಿನವರಲ್ಲಿ ಒಂದು ಅಭಿಮಾನದ ಸ್ಥಾನವಿದೆ. ಹಾಗೆ ಒಳ್ಳೊಳ್ಳೆಯ ಕಾದಂಬರಿಗಳು ನೆರೆಹೊರೆಯ ಭಾಷೆಗಳಿಗೆ ಅನುವಾದಗಳಾದರೆ ಐಕ್ಯ ತಾನೇ ಸಾಧ್ಯವಾಗುತ್ತದೆ. ಆ ಒಂದು ಕಾರ್ಯವನ್ನು ರಾಜ್ಯ ಹಾಗೂ ಕೇಂದ್ರ ಸರಕಾರಗಳು, ಸಾಹಿತ್ಯ ಅಕೆಡೆಮಿಯವರು ಉತ್ತೇಜಿಸಲು ಮುಂದೆ ಬರಬೇಕು.

ಖಾಸಗೀ ಪ್ರಕಾಶನ ಸಂಸ್ಥೆಗಳವರು ಪ್ರಕಟಿಸುವ ಕೃತಿಗಳಿಗೆ ಓದುಗರೂ, ಸರಕಾರದ ಸಂಸ್ಥೆಗಳವರೂ ವಿಪುಲವಾದ ಉತ್ತೇಜನ, ಸಹಕಾರ ಕೊಟ್ಟರೆ ಸಾಹಿತ್ಯ ವಿಕಾಸಗೊಂಡು, ಸಂಸ್ಕೃತಿ ಪುರೋಗಮಿಸುತ್ತದೆ.

(* ಈ ಗುರುತಿನ ಕಾದಂಬರಿಗಳನ್ನು ಕನ್ನಡಿಸಿರುವವರು ಬೆಂಗಳೂರಿನ
ಯಂ. ಜಿ. ಭೀಮರಾವ್‌ರವರು)

ಮಲಯಾಳ ಕಾದಂಬರಿ

— ಬಿ. ಕೆ. ತಿಮ್ಮಪ್ಪ

ಕನ್ನಡದಲ್ಲಿ ನಾವು ಯಾವ ಸಾಹಿತ್ಯ ಪ್ರಕಾರವನ್ನು ಕಾದಂಬರಿ ಸಾಹಿತ್ಯ ಎಂದು ಕರೆಯುತ್ತೇವೆಯೋ ಅದೇ ವಿಭಾಗಕ್ಕೆ ಮಲಯಾಳದಲ್ಲಿ 'ಕಾದಂಬರಿ' ಎಂಬ ಹೆಸರಿಲ್ಲ. ಇಂಗ್ಲೀಷಿನ "ನೋವೆಲ್" ಶಬ್ದವನ್ನೇ ಬಳಸಿ ಮಲಯಾಳದಲ್ಲಿ ನೋವೆಲ್ ಸಾಹಿತ್ಯ ಎಂದು ಕರೆದಿದ್ದಾರೆ. ಆಧುನಿಕ ಮಲಯಾಳ ಗದ್ಯಸಾಹಿತ್ಯದಲ್ಲಿ ನೋವೆಲ್ ಸಾಹಿತ್ಯ ಸ್ಥಾಪಿಸಿಕೊಂಡಿರುವ ಸ್ಥಾನ ಅತ್ಯಂತ ಹಿರಿದಾದುದು. ಇದು ವರೆಗೆ ಪ್ರಕಾಶಗೊಂಡಿರುವ ಸುಮಾರು ಆರುಸಾವಿರ ಗದ್ಯಕೃತಿಗಳಲ್ಲಿ ಎರಡು ಸಾವಿರಕ್ಕಿಂತಲೂ ಹೆಚ್ಚು ಕಾದಂಬರಿಗಳೇ ಆಗಿರುವುದು ಈ ನೋವೆಲ್ ಸಾಹಿತ್ಯದ ಜನಪ್ರಿಯತೆಗೆ ಒಂದು ಪ್ರತ್ಯಕ್ಷ ನಿದರ್ಶನ.

ಕ್ರಿ. ಶ. ೧೮೮೭ ರಲ್ಲಿ ಪ್ರಕಟವಾದ ಅಪ್ಪು ನೆಡುಂ ಗಾಡಿ ಅವರ 'ಕುಂದಲತ' ಮಲಯಾಳದ ಮೊತ್ತಮೊದಲ ಕಾದಂಬರಿಯಾಗಿ ಜನ್ಮ ತಾಳಿತು. 'ಆಳ್ ಮಾರಾಟಂ', 'ಪುಲ್ಲೇಲಿ ಕುಂಜು' ಎನ್ನುವ ಕಾದಂಬರಿಗಳು 'ಕುಂದಲತ'ಕ್ಕಿಂತ ಮೊದಲಿನವು ಎಂದು ಹೇಳುವುದುಂಟು. ಆದರೆ ಆದ್ಯ ಸ್ಥಾನ ದೊರೆತಿರುವುದು 'ಕುಂದಲತೆ' ಗೇ. ಈ ಕಾದಂಬರಿ ಯಾವ ಗ್ರಂಥದ ನೇರವಾದ ಭಾಷಾಂತರವೂ ಅಲ್ಲ. ಕಥಾವಸ್ತುವಿನ ಅಂಶಗಳನ್ನು ಶೇಕ್ಸ್‌ಪಿಯರನ 'ಸಿಂಬೆಲಿನ್' ನಾಟಕದಿಂದ ಮತ್ತು ಸ್ಕಾಟನ 'ಇವಾನ್ ಹೋ' ಕೃತಿಯಿಂದ ಆಯ್ದುಕೊಂಡಿದ್ದರೂ ಘಟನೆ ಮತ್ತು ಸಂವಿಧಾನಗಳು ಅನಿರ್ದಿಷ್ಟ ದೇಶ ಮತ್ತು ಕಾಲಗಳಿಗೆ ಸಂಬಂಧಿಸಿದು-ವಾಗಿವೆ. ಅದರ ಕಥಾಪಾತ್ರಗಳಾಗಲೀ, ಪ್ರಾಸಂಗಿಕ ಕಥೆಗಳಾಗಲೀ ಅಥವಾ ಸಾಮಾಜಿಕ ಪರಿಸರಣಗಳಾಗಲೀ ಕೇರಳಕ್ಕೆ ಸಂಬಂಧಿಸಿದುವಲ್ಲ. ಕಾಲದ ದೃಷ್ಟಿ-ಯಿಂದ ಮಾತ್ರ ಹಳೆಯದೆಂದಲ್ಲ, ಆ ಕಾದಂಬರಿಯಲ್ಲಿ ಬರುವ ಕಥೆ ಮತ್ತು ಸನ್ನಿವೇಶಗಳು ಮತ್ತೂ ಹಳೆಯ ಕಾಲದವು.

೧೮೮೯ ರ ಡಿಸೆಂಬರ್ ತಿಂಗಳಲ್ಲಿ ಪ್ರಕಟಗೊಂಡ ವೈಯಾರತ್ತು ಚಂದು ಮೆನನ್ನರು ಬರೆದ 'ಇಂದುಲೇಖ' ಕೃತಿ ಎರಡನೆಯದು. ಹತ್ತೊಂಬತ್ತ-ನೆಯ ಶತಮಾನದ ಉತ್ತರಾರ್ಧದ ಕೇರಳದ ಸಾಮಾಜಿಕ ಪರಿಸರಣಗಳನ್ನೂ ಪಾತ್ರಗಳನ್ನೂ ಪ್ರಾಸಂಗಿಕ ಕಥೆಗಳನ್ನೂ ಒಳಗೊಂಡು ಮೂಡಿಬಂದ ಒಂದು ವಿಶಿಷ್ಟ ಕೃತಿ 'ಇಂದುಲೇಖ' ಕೇರಳದ ನಾಯರ್ ಸಮಾಜದೊಡನೆ ನಂಬೂ-

ರಿಗಳ ಸಂಬಂಧದಿಂದ ಉಂಟಾದ ಒಡಕುಗಳೂ ಇಂಗ್ಲಿಷ್ ವಿದ್ಯಾಭ್ಯಾಸದ ಪ್ರಭಾವದಿಂದ ಉಂಟಾದ ಹಳೆಯ ಸಂಪ್ರದಾಯದ ಮಾರ್ಪಾಡುಗಳೂ ಈ ಕಾದಂಬರಿಯಲ್ಲಿ ಪ್ರತಿಫಲನಗೊಂಡಿವೆ. ಹಳೆಯ ಜಹಗೀರುದಾರಿಕೆಗೆ ಅಂಟಿಕೊಂಡ ಮಾತೃಪ್ರಧಾನವಾದ ನಾಯರರ ದೊಡ್ಡ ಅವಿಭಕ್ತ ಕುಟುಂಬ ಪದ್ಧತಿ ಆಧುನಿಕ ಯುಗದೊಂದಿಗೆ ಸ್ಪರ್ಧಿಸಿ ಗೆಲ್ಲಲಾರದು ಎನ್ನುವುದನ್ನು ಕೂಡ ಈ ಕಾದಂಬರಿ ಸೂಚಿಸುತ್ತದೆ. ಜೇನ್ ಆಸ್ಟಿನಳ 'ಪ್ರೈಡ್ ಅಂಡ್ ಪ್ರೆಜುಡಿಸ್'ಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಇರುವ ಸ್ಥಾನ ಮಲಯಾಳದಲ್ಲಿ 'ಇಂದುಲೇಖ' ಕಾದಂಬರಿಗಿದೆ.

'ಇಂದುಲೇಖ' ಕಾದಂಬರಿಗೆ ಎರಡನೆಯ ಸ್ಥಾನ ಲಭಿಸಿದ್ದರೂ ಅದಕ್ಕಿಂತ ಮೊದಲೇ ಬರೆಯಲಾರಂಭಿಸಿದ್ದ ಕೃತಿ ಕೇರಳವರ್ಮ ವಲಿಯಕೋಯಿತ್ತಂಬುರಾನ್ ಅವರ 'ಅಕ್ಬರ್' ಎನ್ನುವ ಚಾರಿತ್ರಿಕ ಕಾದಂಬರಿ. ಆದರೆ ಇದು ಪ್ರಕಟವಾದದ್ದು 'ಇಂದುಲೇಖ' ಪ್ರಕಟವಾದ ಐದು ವರ್ಷಗಳ ನಂತರ. ೧೮೭೨ ರಲ್ಲಿ ಬ್ರೋವರ್ ಎಂಬಾತ ಡಚ್ ಭಾಷೆಯಲ್ಲಿ ಬರೆದ ಕೃತಿ, ೧೮೭೯ ರಲ್ಲಿ ಇಂಗ್ಲಿಷಿಗೆ ಭಾಷಾಂತರಗೊಂಡಿತು. ಆ ಕಾಲದಲ್ಲಿ ತಿರುವಾಂಕೂರಿನ ಅರಸರಾಗಿದ್ದ ವಿಶಾಖ ತಿರುನಾಳ್ ಮಹಾರಾಜರ ಅಪೇಕ್ಷೆಯ ಪ್ರಕಾರ, ಕೇರಳವರ್ಮ ವಲಿಯಕೋಯಿ ತಂಬುರಾನ್ ಅವರು ಈ ಕಾದಂಬರಿಯನ್ನು ಮಲಯಾಳಕ್ಕೆ ಭಾಷಾಂತರಿಸಿದರು. ಅಕ್ಬರನ ಆಳ್ವಿಕೆಯ ವಿಚಾರ ಇದರ ಕಥಾವಸ್ತು.

'ಇಂದುಲೇಖ'ದ ನಂತರ 'ಶಾರದಾ' ಎನ್ನುವ ಕಾದಂಬರಿ ಎರಡು ಭಾಗಗಳಾಗಿ ಹೊರಬಂದಿತು. ಮೊದಲನೆಯ ಭಾಗವನ್ನು ಚಂದು ಮೆನನ್ನರು ಬರೆದು ಮುಗಿಸಿದರು. ಎರಡನೆಯ ಭಾಗ ಅರ್ಧಕ್ಕೇ ನಿಂತಿತು. ಪಯ್ಯಂ ಪಿಳ್ಳಿಲ್ ಗೋಪಾಲ ಪಿಳ್ಳೆ, ಈ ಕಾದಂಬರಿಯನ್ನು ಪೂರ್ತಿಗೊಳಿಸಿದರು. ನ್ಯಾಯಾಧೀಶರಾಗಿದ್ದ ಚಂದು ಮೆನನ್, ಸ್ವಾನುಭವದ ಹಿನ್ನೆಲೆಯಲ್ಲಿ ನ್ಯಾಯಾಲಯದ ಸುತ್ತುಮುತ್ತ ಕಣ್ಣು ಹಾಯಿಸಿ ವಕೀಲರು, ವಾದಿ–ಪ್ರತಿವಾದಿಗಳು, ಸಾಕ್ಷಿಗಳು ಮುಂತಾದವರನ್ನು ಕಥಾಪಾತ್ರಗಳನ್ನಾಗಿರಿಸಿಕೊಂಡು ಬರೆದ ಕಾದಂಬರಿ 'ಶಾರದ.'

ಚಂದು ಮೆನನ್ನರ ನಂತರ ಕಾಣಿಸಿಕೊಂಡ ಮತ್ತೊಬ್ಬ ಖ್ಯಾತ ಕಾದಂಬರಿಕಾರರೆಂದರೆ ಸಿ. ವಿ. ರಾಮನ್ ಪಿಳ್ಳೆ. ಇಂಗ್ಲಿಷ್ ಸಾಹಿತ್ಯಕ್ಕೆ ಸ್ಕಾಟ್ ಇದ್ದಂತೆ ಫ್ರೆಂಚ್ ಸಾಹಿತ್ಯಕ್ಕೆ ವಿಕ್ಟರ್ ಹ್ಯೂಗೋ ಇದ್ದಂತೆ, ಮಲಯಾಳಕ್ಕೆ ಸಿ. ವಿ. ರಾಮನ್ ಪಿಳ್ಳೆ ಅವರು ಎಂಬುದು ಮಲಯಾಳ ಸಾಹಿತ್ಯ ಚರಿತ್ರಕಾರರು ಆಡಿರುವ ಮಾತು. ೧೮೯೧ ರಿಂದ ೧೯೨೦ ರ ಗಡುವಿನಲ್ಲಿ 'ಮಾರ್ತಾಂಡವರ್ಮ' ಎನ್ನುವ ಕಾದಂಬರಿ ಇವರಿಂದ ರಚಿತವಾಗಿ ಹೊರಬಂದಿತು. ವೇನಾಡನ್ನು ಆಳುತ್ತಿದ್ದ ಮಾರ್ತಾಂಡವರ್ಮ ಮಹಾರಾಜ ಈ ಕಾದಂಬರಿಯ ನಾಯಕ. ಇದರ ರಚನೆಯಲ್ಲಿ

ಸ್ಕಾಟನನ್ನು ಅನುಕರಿಸಿದ್ದಾರೆಂದು ಸಾಹಿತ್ಯ ಚರಿತ್ರಕಾರರು ಅಭಿಪ್ರಾಯಪಟ್ಟಿ-ದ್ದಾರೆ. ದಕ್ಷಿಣ ತಿರುವಾಂಕೂರಿನ ಗ್ರಾಮ್ಯ ಭಾಷೆಯಿಂದಲೂ ಕಾಲ್ಪನಿಕ ಹಿನ್ನೆಲೆಗಳಿಂದಲೂ ನವೀನ ಶೈಲಿಯಿಂದಲೂ ಕೂಡಿದ ಕೃತಿ 'ಮಾರ್ತಾಂಡವರ್ಮ'. ಈ ಕಾದಂಬರಿಯಲ್ಲಿ ಬರುವ ಸುಭದ್ರೆ ಒಂದು ಮರೆಯಲಾಗದ ಪಾತ್ರ. 'ಮಾರ್ತಾಂಡ-ವರ್ಮ' ಕಾದಂಬರಿಯ ಅನಂತರ ರಾಮನ್ ಪಿಳ್ಳೈಯವರು 'ರಾಮರಾಜ ಬಹ-ದ್ದೂರ್' ಮತ್ತು 'ಧರ್ಮರಾಜ' ಎನ್ನುವ ಎರಡು ಚಾರಿತ್ರಿಕ ಹಿನ್ನೆಲೆಯ ಕಾದಂಬರಿಗಳನ್ನು ಬರೆದರು. ಗಾತ್ರ ಮತ್ತು ಮಹತ್ವದಿಂದ ಕೂಡಿದ ಈ ಮೂರು ಕಾದಂಬರಿಗಳನ್ನು ಓದುಗರಿಗೆ ಸಮರ್ಪಿಸಿದ ರಾಮನ್ ಪಿಳ್ಳೈಯವರ ಈ ಕೃತಿಗಳಿಗೆ ಸಮಸಾಟಿಯಾಗಿ ಬೇರೆ ಕಾದಂಬರಿಗಳು ಮಲಯಾಳ ಸಾಹಿತ್ಯದಲ್ಲಿ ಹೊರಬಂದಿಲ್ಲ.

ಸಿ. ವಿ. ರಾಮನ್ ಪಿಳ್ಳೈಯವರ ನಂತರ ಬಂದ, ಚಾರಿತ್ರಿಕ ಕಾದಂಬರಿಗಳೆಂದರೆ ಕಪ್ಪನ್ ಕೃಷ್ಣ ಮೆನನ್ನರು ೧೯೩೩ ರಲ್ಲಿ ಬರೆದ 'ಕೇರಳವರ್ಮ ಪಳಶ್ಶಿರಾಜ' ಮತ್ತು ೧೯೪೭ ರಲ್ಲಿ ರಚಿತವಾದ 'ಚೇರಮಾನ್ ಪೆರುಮಾಳ್' ಕಾದಂಬರಿಗಳು. ಅಲ್ಲದೆ ಅಪ್ಪನ್ ತಂಬುರಾನ್ ಅವರ 'ಭೂತರಾಯರ್', ಟಿ. ರಾಮನ್ ನಂಬೀಶನ್ ಅವರ 'ಕೇರಳೇಶ್ವರನ್' ಕೆ. ಎಂ. ಪಣಿಕ್ಕರ್ ಅವರ 'ಪುಣರ್ ಕೋಟಿಮ ಸ್ವರೂಪಂ', 'ಪರಂಗಿ ಪಡಯಾಳಿ', 'ಕೇರಳಸಿಂಹ' ಅನಂತರ ಬಂದ ಚಾರಿತ್ರಿಕ ಕಾದಂಬರಿಗಳು. ಈ ಕಾದಂಬರಿಗಳಲ್ಲಿ 'ಕೇರಳೇಶ್ವರನ್' ಇಂದಿಗೂ ಮಹತ್ವವನ್ನುಳಿಸಿಕೊಂಡಿರುವ ಶ್ರೇಷ್ಠ ಕೃತಿ.

ಈ ಕಾದಂಬರಿಗಳ ನಂತರ ಮಲಯಾಳ ಸಾಹಿತ್ಯದಲ್ಲಿ ಸಾಮಾಜಿಕ, ರಾಜಕೀಯ, ಪತ್ತೇದಾರಿ ಹಾಗೂ ಭಾಷಾಂತರ ಕಾದಂಬರಿಗಳ ಸೃಷ್ಟಿಗೆ ಮೊದಲಾಯಿತು.

ಮೊತ್ತಮೊದಲ ರಾಜಕೀಯ ಕಾದಂಬರಿಗಳಾಗಿ ಕಂಡುಬರುವ 'ಉದಯಭಾನು', 'ಪಾರಪ್ಪುರ' ಎನ್ನುವ ಕೃತಿಗಳು ಸ್ವದೇಶಾಭಿಮಾನಿ ರಾಮಕೃಷ್ಣ ಪಿಳ್ಳೈಯವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಚಳವಳಿಯನ್ನು ಕುರಿತ ಕಾದಂ-ಬರಿಗಳು. 'ಲೇಮ್ ಎರಾಬಲೇ' ಎನ್ನುವ ಫ್ರೆಂಚ್ ಕಾದಂಬರಿಯನ್ನು 'ಪಾವಂಜಳ್' ಎನ್ನುವ ಶೀರ್ಷಿಕೆಯಲ್ಲಿ ಅನುವಾದಿಸಿ ಪಾಶ್ಚಾತ್ಯ ಸಾಹಿತ್ಯದ ಪರಿಚಯ ಮಾಡಿಸಿಕೊಟ್ಟ ನಾಲಪ್ಪಾಟ್ಟು ನಾರಾಯಣ ಮೆನನ್ ಅವರ ಕೃತಿಗೆ ಮಲಯಾಳ ಸಾಹಿತ್ಯದಲ್ಲಿ ಮಹತ್ವಪೂರ್ಣ ಸ್ಥಾನವಿದೆ.

ಪಾಶ್ಚಾತ್ಯ ಸಾಹಿತಿಗಳ ಪ್ರಭಾವಕ್ಕೊಳಗಾಗಿದ್ದರೂ ಕೇರಳ ಸಂಸ್ಕೃತಿಯ ಅಂತಸ್ಸತ್ವವನ್ನು ಉಳಿಸಿಕೊಂಡು ಶ್ರೇಷ್ಠ ಕಾದಂಬರಿಗಳನ್ನು ರಚಿಸಿದ ಪ್ರಮುಖ ಕಾದಂಬರಿಕಾರ ಪಿ. ಸಿ. ಕುಟ್ಟಿ ಕೃಷ್ಣನ್. ಈ ಕರ್ತೃವಿನ ಮೇಲೆ ವಿಕ್ಟರ್ ಹ್ಯೂಗೋ, ಟಾಲ್‌ಸ್ಟಾಯ್, ಡೋವ್‌ಸ್ಟೋವ್‌ಸ್ಕಿ ಮುಂತಾದ ಪಾಶ್ಚಾತ್ಯ ಸಾಹಿತಿಗಳ ಹೆಚ್ಚಿನ ಪ್ರಭಾವವುಂಟಾಗಿದೆ. 'ಉರೂಬ್' ಎನ್ನುವ ನಾಮಾಂಕಿತದಲ್ಲಿ

ಖ್ಯಾತಿ ಪಡೆದ ಕುಟ್ಟಿ ಕೃಷ್ಣನ್ ಅವರ ಕಾದಂಬರಿಗಳಲ್ಲಿ ಉತ್ತರ ಮಲಬಾರಿನ ಗ್ರಾಮ್ಯ ಜೀವನದ ಹೃದಯಸ್ಪಂದಿಯಾದ ಚಿತ್ರಗಳೂ ಜೊತೆಗೆ ಸಾಮಾಜಿಕ ಹಾಗೂ ರಾಜಕೀಯ ಪುನರ್ರಚನೆಯ ಪ್ರತಿಪಾದನೆಯೂ ಕಂಡುಬರುತ್ತದೆ 'ಸುಂದರಿಗಳೂ ಸುಂದರನ್ಮಾರೂ', 'ಮಿಂಡಾಪೆಣ್', 'ಉಮ್ಮಾಚ್ಚು', 'ಅಮೀನ', 'ಅಣಿಯರ', 'ಕರುವೇಲಕ್ಕುನ್ನು' ಮುಂತಾದ ಕೃತಿಗಳಲ್ಲೆಲ್ಲ ಗಾತ್ರದಲ್ಲಿ ಮಾತ್ರವಲ್ಲದೆ ಔನ್ನತ್ಯವನ್ನೂ ಹೊಂದಿರುವ ಕೃತಿಗಳು 'ಸುಂದರಿಗಳೂ ಸುಂದರನ್ಮಾರೂ' ಮತ್ತು 'ಮಿಂಡಾಪೆಣ್' ಉರೂಬ್ ಅವರಿಗೆ ಅಪಾರವಾದ ಕೀರ್ತಿಯನ್ನು ತಂದ ಕಾದಂಬರಿಗಳು.

ತಕಳಿ ಶಿವಶಂಕರ ಪಿಳ್ಳೈ: ವಿಶ್ವಸಾಹಿತಿಗಳ ಸಾಲಿನಲ್ಲಿ ಸ್ಥಾನವನ್ನು ಪಡೆದ ಪ್ರತಿಭಾವಂತ ಕೇರಳ ಸಾಹಿತಿ. ಕೇರಳೀಯರಲ್ಲಿ ಲೋಕಪ್ರಸಿದ್ಧಿ ದೊರೆತ ಮೊದಲನೆಯ ಕಾದಂಬರಿಕಾರರು ಇವರು. ೧೯೫೬ ರಲ್ಲಿ ಬರೆದ 'ಚೆಮ್ಮೀನ್' ಕಾದಂಬರಿ. ಇಂಗ್ಲಿಷ್, ರಷ್ಯನ್, ಜೆಕೋಸ್ಲೋವಾಕಿಯ ಮುಂತಾದ ಪಾಶ್ಚಾತ್ಯ ಭಾಷೆಗಳಿಗೂ ಮತ್ತು ಭಾರತದ ಇತರ ಭಾಷೆಗಳಿಗೂ ಭಾಷಾಂತರಗೊಂಡ ಕಾದಂಬರಿ. ಮಧ್ಯಕೇರಳದ (ಕುಟ್ಟನಾಡಿನ) ವ್ಯವಸಾಯಗಾರರ ಜೀವನದ, ನಿಟ್ಟುಸಿರಿನ ಬದುಕು ತಕಳಿ ಅವರ ಮತ್ತೊಂದು ಕೃತಿಯಾದ 'ರಂಡಿಡಂಗಳಿ'ಯಲ್ಲಿ ಚಿತ್ರಿತವಾಗಿದೆ. 'ಪಣಿಸ್ಪಡಿಗಳ್', 'ಆಕಾಶಂ', 'ಅನುಭವಙಳ್ ಪಾಳಿಚ್ಚ-ಗಳ್' ಜೀವಿತಂ ಸುಂದರ ಮಾಣ; ಪಕ್ಷೇ....' ಮುಂತಾದ ಕಾದಂಬರಿಗಳಲ್ಲೆಲ್ಲ ಬದುಕಿನ ಸಂಘರ್ಷ ಹಾಗು ಭಯಾನಕ ಸಮಸ್ಯೆಗಳೊಡನೆ ಹೋರಾಡುತ್ತ ಬದುಕುವುದು ಸೂಚಿತವಾಗಿದೆ. ಜೈಲಿನಲ್ಲಿ ಕೂಡಿಹಾಕಿದ ಇಬ್ಬರು ಸ್ತ್ರೀಯರ ಭಗ್ನ-ಪ್ರೇಮದ ದೈನ್ಯ ಚಿತ್ರಗಳನ್ನು ಯಥಾವತ್ತಾಗಿ ನೀಡಿರುವ ಅಪೂರ್ವ ಕೃತಿ 'ಜೀವಿತಂ ಸುಂದರ ಮಾಣ; ಪಕ್ಷೇ....' ಎನ್ನುವ ಕಿರುಕಾದಂಬರಿ.

ಕೇಶವ ದೇವ್ : ಹಳ್ಳಿಗಳ ಹಣೆಬರಹವನ್ನೂ ನಗರಗಳ ಗೊಂದಲಮಯ ಬದುಕನ್ನೂ ಸಜೀವವಾಗಿ ಪ್ರತಿಪಾದಿಸಬಲ್ಲ ಲೇಖಕರಲ್ಲಿ ತಕಳಿ ಮತ್ತು ಕೇಶವ ದೇವ್ ಅಗ್ರಗಣ್ಯರು. ಕೇಶವ ದೇವ್ ಅವರು ದೃಷ್ಟಿ ಹಾಯಿಸುವದು ಕೂಲಿ-ಕಾರರ ದೀನದಲಿತರ ಬದುಕನ್ನು ಬಿಂಬಿಸುವದರ ಕಡೆಗೆ. ಸ್ವಾನುಭವಸಂಪತ್ತಿನಿಂದ ಸೃಷ್ಟಿಗೊಂಡ ಕಲಾಕೃತಿಗಳು ಅವರ ಕಾದಂಬರಿಗಳು. ದಲಿತವರ್ಗದ ಉನ್ನತಿಗಾಗಿ, ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗಳ ಪರಿವರ್ತನೆಗಾಗಿ ಕೇಶವ ದೇವ್ ಅವರು ಕಥಾಪಾತ್ರಗಳ ಮೂಲಕ ಸಶಕ್ತವಾಗಿ ಪ್ರಯತ್ನಿಸಿದ್ದಾರೆ. ರಾಜ್ಯ ಪ್ರಶಸ್ತಿಯನ್ನು ಪಡೆದ 'ಅಯಲ್ ಕಾರ್' ಕಾದಂಬರಿಯನ್ನೂ 'ಭ್ರಾಂತಾಲಯಂ', 'ಕನ್ನಾಡಿ', 'ಸ್ವಪ್ನಂ', 'ಸುಖಿಕ್ಕಾನ್ ವೇಂಡಿ', 'ನಟಿ', 'ಎನಿಕ್ಕುಂ ಜೀವಿಕ್ಕಣಂ' ಇವೇ ಮೊದಲಾದ ಅನೇಕ ಕಾದಂಬರಿಗಳನ್ನು ರಚಿಸಿ ಮಲಯಾಳದ ಶ್ರೇಷ್ಠ

ಕಾದಂಬರಿಕಾರರೆನಿಸಿಕೊಂಡಿದ್ದಾರೆ. ವೇಶ್ಯೆಯರು, ಜಟಕಾ ಎಳೆಯುವರು, ಸೌದೆ ಒಡೆಯುವವರು, ಕೂಲಿ ಕೆಲಸ ಮಾಡುವವರು, ಮುಂತಾದ ದಲಿತ ಜನಾಂಗದ ಬದುಕನ್ನು ಸಹಾನುಭೂತಿಯಿಂದ ಕಂಡು ಆ ಸಮಾಜದ ದುಃಸ್ಥಿತಿಗೆ ಪರಿಹಾರ ಮಾರ್ಗವನ್ನು ಕಂಡುಹಿಡಿಯಲು ಓದುಗರಿಗೆ ಸೂಚನೆ ನೀಡಿರುವುದೂ ಉಂಟು. ಸಮಕಾಲೀನ ಸಾಮಾಜಿಕ ಜೀವನದ ಸಮಸ್ತ ದಿಕ್ಕುಗಳಿಗೂ ದೃಷ್ಟಿ ಹಾಯಿಸಿ ಸಮಾಜದ ಕೊಳಕನ್ನು ನಿರ್ಮೂಲ ಮಾಡಲು ಪ್ರಯತ್ನಿಸಿದ ಲೇಖಕ ಕೇಶವ ದೇವ್.

ವೈಕ್ಕಂ ಮುಹಮ್ಮದ್ ಬಷೀರ್ : ಅಚ್ಚ ಮಲಯಾಳವನ್ನು ಕೈವಶಪಡಿಸಿ ಕೊಂಡು ಆಡುಮಾತನ್ನೇ ಬಳಸಿ ಕಥೆಯನ್ನು ಹೆಣೆಯುವದರಲ್ಲಿ ಬಷೀರರದು ದಿಟ್ಟ ಹೆಜ್ಜೆ. 'ಮರಣತ್ತಿನ್ರೆ ನಿಳಲ್' ಎನ್ನುವ ಕಾದಂಬರಿಯಲ್ಲಿ ಕಂಡುಬರುವ ಮನೋ-ವಿಶ್ಲೇಷಣೆಯೂ 'ಪಾತುಮ್ಮಯುಡೆ ಆಡು' ಕಿರು ಕಾದಂಬರಿಯಲ್ಲಿ ಚಿತ್ರಿತವಾದ ಸಾಮಾನ್ಯ ಮುಸ್ಲಿಂ ಕುಟುಂಬದ ಸ್ತ್ರೀಯರ ಮನೋಧರ್ಮವೂ ಬಷೀರರನ್ನು ಓದು ಗರಿಗೆ ಎಂದೆಂದೂ ನೆನಪು ಮಾಡಿಕೊಡುವಂತಹ ಕೃತಿಗಳು. 'ಬಾಲ್ಯಕಾಲ ಸಖಿ' ಕಾದಂಬರಿಯಲ್ಲಿ ಬರುವ ಕಥಾನಾಯಕ ಬಷೀರರು ಎಂದು ಊಹಿಸಲು ಅವಕಾಶವಿದೆ. ಆ ಕಥಾನಾಯಕ ಏಳು ವರ್ಷಗಳು ಮನೆ ಬಿಟ್ಟುಹೋಗಿ ಹಿಂದಿರುಗಿ ತನ್ನ ಮನೆಗೆ ಬರುವ ಸನ್ನಿವೇಶ, ಬಷೀರರ ಜೀವನಾನುಭವವೇ. ಅವರ ಹೆಚ್ಚಿನ ಪರಿಶ್ರಮವೆಲ್ಲ ತಮ್ಮಲ್ಲೇ ಬಾಹ್ಯಜಗತ್ತನ್ನು ಪ್ರತಿಫಲನಗೊಳಿಸಿಕೊಳ್ಳುವ ಶ್ರೇಷ್ಠ ಕಲೆಯ ಕಡೆಗೆ. ಅದರಿಂದಾಗಿಯೇ ಅವರು ಡಿ. ಹೆಚ್. ಲಾರೆನ್ಸ್ ಅವರ ನಂಬಿಕೆಯ ಅನುಯಾಯಿ ಗಳಾಗಿ ಎದ್ದು ಕಾಣಿಸುತ್ತಾರೆ. 'ನ್ಡುಪ್ಪುಪ್ಪಾ ಕ್ಕೊರಾ ನೇಂಡಾರ್ನು' (ನಮ್ಮಜ್ಜ-ಸಿಗೊಂದಾನೆ ಇತ್ತು) ಕಾದಂಬರಿಯಲ್ಲಿ ವೈಭವದ ಬದುಕಿನಿಂದ ಬಡತನಕ್ಕಿಳಿದು ಸಾಗುವ ಮುಸ್ಲಿಂ ಕುಟುಂಬವೊಂದರ ಕೊನೆಯ ಕುಡಿಯೆನ್ನಿಸಿದ ಒಂದೇ ಒಂದು ಪಾತ್ರದ ಮೂಲಕ ಗತಕಾಲದ ವೈಭವದ ಕಥೆಯನ್ನು ಮನ ಕರಗುವಂತೆ ಹೆಣೆದಿರು ವುದು ಬಷೀರರ ಅನನುಕರಣೀಯ ಕಲೆಯಾಗಿ ಮಾರ್ಪಟ್ಟಿದೆ. ಇಪ್ಪತ್ತೈದಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ ಬಷೀರ್ ಅವರು ಯುವಜನಾಂಗಕ್ಕೆ ಸಾಹಿತ್ಯ ಸೃಷ್ಟಿಯಲ್ಲಿ ನೂತನ ಮಾರ್ಗವನ್ನು ರಚಿಸಿಕೊಟ್ಟ ಭಾವನಿಷ್ಠ ಲೇಖಕರು.

ಎಂ. ಟಿ. ವಾಸುದೇವನ್ ನಾಯರ್ : ಇಪ್ಪತ್ತನೆಯ ಶತಕದ ಭಾರ-ತೀಯ ಕಾದಂಬರಿ ಪ್ರಪಂಚದಲ್ಲಿ ಎಂ. ಟಿ. ವಾಸುದೇವನ್ ನಾಯರರ 'ನಾಲು-ಕೆಟ್ಟು', 'ಮಂಞ್', 'ಅಸುರವಿತ್ತ್' ಮುಂತಾದುವು ಹೆಸರಿಸಬಹುದಾದಂತಹ ಕೃತಿಗಳು. ವೈಭವದಿಂದ ಬಾಳಿ ಹರಿದು ಹಂಚಿಹೋಗುತ್ತಿದ್ದ ನಾಯರ್ ಸಮಾಜದ ದೊಡ್ಡ ಮನೆತನವೊಂದರ ವಾಸ್ತವ ಚಿತ್ರವನ್ನು ಭಾವಪೂರ್ಣವಾಗಿ ಚಿತ್ರಿಸಿರುವ ಕಾದಂಬರಿ 'ನಾಲುಕೆಟ್ಟು'. ಎಂ. ಟಿ. ಅವರ ನಿರಾಶಾವಾದ, ತತ್ತ್ವಶಾಸ್ತ್ರದ ಬೇರನ್ನು ಹುಡುಕುತ್ತದೆ. ಮಾನವನ ಲೌಕಿಕ ವ್ಯವಹಾರಗಳಿಂದ ಉಂಟಾಗುವ

ದೌರ್ಭಾಗ್ಯಗಳಿಗಿಂತಲೂ ನೈರಾಶ್ಯ ಮತ್ತು ವ್ಯರ್ಥಪ್ರಯತ್ನ ಮುಂತಾದ ವಿಮುಖತಾ ಭಾವನೆಗಳು ಅಧಿಕವಾಗಿ ಕಾಣಿಸಿಕೊಳ್ಳುತ್ತವೆ. ಘಟನಾ ಸಂಪತ್ತು ಎಂ.ಟಿ. ಯವರ ಕಾದಂಬರಿಗಳಲ್ಲಿ ತುಂಬಿ ತುಳುಕುತ್ತದೆ. ಆದರೆ ಸಮಾಜದ ವಾಸ್ತವಿಕತೆಗಳನ್ನು ನೇರವಾಗಿ ಎದುರಿಸುವ ಎದೆಗಾರಿಕೆ ಕಾದಂಬರಿ ಪಾತ್ರಗಳಲ್ಲಿ ಎದ್ದು ಕಾಣುವುದಿಲ್ಲ. 'ಅಘಯಾರ್ಥಿ' ಕಾದಂಬರಿಯಲ್ಲಿ ಬೆಕೆಟ್ಟನ 'ವೇಯ್‌ಟಿಂಗ್ ಫಾರ್ ಗೋಡೋಟ್' ನಾಟಕದ ಸ್ವಲ್ಪಾಂಶವೂ ಕಾಫ್ಕನ 'ಕ್ಯಾಸಲ್' ಕಾದಂಬರಿಯ ಕೆಲವಂಶಗಳೂ ಅಯನೆಸ್ಕೋನ ಜೇಡದ ಅರ್ಥಗರ್ಭಿತ ಮಾತುಗಳ ರೀತಿಯವೂ, ಕಾಣಿಸಿಕೊಂಡು ಇದೊಂದು ಅಸಾಧಾರಣ ಕೃತಿಯೆನಿಸಿದೆ. 'ಇರುಟ್ಟಿನ್ದೆ ಆತ್ಮಾವ್' (ಇರುಳಿನ ಆತ್ಮ) ಕಿರು ಕಾದಂಬರಿಯೊಂದು ಅಂತರ್ಧಾನ ಮತ್ತು ಏಕಾಂತಸ್ಥಿತಿಯ ವ್ಯೋಮಗರ್ಭದಿಂದ ಮೂಡಿಬಂದ ಲಲಿತ ಕಾದಂಬರಿ. ಎಂ. ಟಿ. ವಾಸುದೇವನ್ ನಾಯರ್ ಕಾದಂಬರಿಕಾರರ ಸಮೂಹದಲ್ಲಿ ಅಗ್ರ ಶ್ರೇಣಿಯಲ್ಲಿ ಉಚ್ಚಸ್ಥಾನವನ್ನು ಗಳಿಸಿಕೊಂಡ ಪ್ರತಿಭಾವಂತ ಲೇಖಕರಾಗಿದ್ದಾರೆ.

ಪಾರಪ್ಪುರತ್ತು : (ಕೆ. ಇ. ಮಥಾಯ್): ಸೈನಿಕರ ಇಲ್ಲವೇ ಹಳ್ಳಿಗರ ಬದುಕು ಪಾರಪ್ಪುರತ್ತು ಅವರ ಕಾದಂಬರಿಗಳ ಕಥಾವಸ್ತು. ಗ್ರಾಮ್ಯಜೀವನವನ್ನು ಯಥಾವತ್ತಾಗಿ ಚಿತ್ರಿಸುವುದರಲ್ಲಾಗಲಿ, ಹಳ್ಳಿಯ ಸ್ತ್ರೀಯರ ನೋವು ನಲಿವುಗಳನ್ನು ಚಿತ್ರಿಸುವುದರಲ್ಲಾಗಲಿ, ಸೈನಿಕರ ತ್ಯಾಗಮಯ ಬದುಕಿನಲ್ಲೂ ಧ್ಯೇಯಾದರ್ಶಗಳನ್ನು ಗುರುತಿಸುವುದರಲ್ಲಾಗಲಿ, ತನ್ನದೇ ಆದ ವಿನೂತನ ಮಾರ್ಗದಲ್ಲಿ ಕಥಾಸೃಷ್ಟಿ ಮಾಡಬಲ್ಲ ಶಕ್ತಿ ಪಾರಪ್ಪುರತ್ತು ಅವರಿಗಿದೆ. 'ನಿಣಮಣಿಞ್ಞ ಕಾಲ್ಪಾಡುಗಳ್', 'ಅನ್ವೇಷಿಚ್ಚು ಕಂಡೆತ್ತಿಯಿಲ್ಲ', 'ಅರನಾಳಿಗ ನೇರಂ', ಮುಂತಾದ ಕಾದಂಬರಿಗಳು ಓದುಗರಲ್ಲಿ ಮರುಕ, ದಯಾಪರತೆಗಳುದ್ಭವಿಸುವಂತೆ ಮಾಡುವ ಸತ್ವಪೂರ್ಣ ಕೃತಿಗಳು. ಸಣ್ಣ ಕಥೆಗಳನ್ನು ಬರೆಯುವುದರ ಮೂಲಕ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ ಪಾರಪ್ಪುರತ್ತು ಅವರು ಇಂದು ಮಲಯಾಳ ಗದ್ಯಸಾಹಿತ್ಯದ ಒಂದು ಆಸ್ತಿ ಎನ್ನಿಸಿಕೊಂಡಿದ್ದಾರೆ.

ನಂದನಾರ್ : ಸೈನಿಕರ ಜೀವನವನ್ನು ಕಥಾವಸ್ತುವನ್ನಾಗಿಟ್ಟುಕೊಂಡು ಕಾದಂಬರಿಗಳನ್ನು ಬರೆದಿರುವ ಮತ್ತೊಬ್ಬ ಲೇಖಕ ನಂದನಾರ್ (ಪಿ. ಸಿ. ಗೋಪಾಲನ್).

ಬಿಟ್ಟೋರ್ ರಾಮನ್ ನಾಯರ್ : ಸೈನಿಕರ ಬದುಕು ಕಥಾನಕಗಳ ಮೂಲಕ ಮೊತ್ತ ಮೊದಲಾಗಿ ಮಲಯಾಳ ಸಾಹಿತ್ಯಕ್ಕೆ ಪ್ರವೇಶಿಸುವಂತೆ ಮಾಡಿದ ಕೀರ್ತಿ ರಾಮನ್ ನಾಯರ್ ಅವರದು. ರಾಮನ್ ನಾಯರರ 'ಕಥಾನಾಯಕಿಯುಡೆ ಡೈರಿ ಕುರಿಪ್ಪುಗಳ್' ಕೃತಿ, ಕಾದಂಬರಿಯ ಸ್ವರೂಪವನ್ನು ಪಡೆದ ಏಕೈಕ ಕಾದಂಬರಿಯಾದರೂ ಮಲಯಾಳ ಸಾಹಿತ್ಯದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದೆ.

ಮಲಯಾಟ್ಟೂರ್ ರಾಮಕೃಷ್ಣನ್ (ಕೆ. ವಿ. ರಾಮಕೃಷ್ಣ ಅಯ್ಯರ್): ಸರ್ಕಾರದ ವಿವಿಧ ಹುದ್ದೆಗಳಲ್ಲಿ ಮಾತ್ರವಲ್ಲ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿಯೂ ಸ್ಥಾನವನ್ನು ಗಳಿಸಿಕೊಂಡಿರುವ ಸಾಹಿತಿ. 'ವೇರುಗಳ್', 'ಯಕ್ಷಿ', 'ಪೊನ್ನಿ', 'ಅಭ್ರ' ಮುಂತಾದ ಕಾದಂಬರಿಗಳ ಮೂಲಕ ಆಧುನಿಕ ಮಲಯಾಳ ಸಾಹಿತ್ಯ ಕ್ಷೇತ್ರವನ್ನು ವಿಸ್ತಾರಗೊಳಿಸುತ್ತಿರುವ ಲೇಖಕ. ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ 'ಯಕ್ಷಿ' ಕಾದಂಬರಿಯೂ, ಮನುಷ್ಯನಿಗೂ ಮಣ್ಣಿಗೂ ಇರುವ ಅವಿಭಾಜ್ಯ ಬಂಧನವನ್ನು ಚಿತ್ರಿಸುವ 'ವೇರುಗಳ್' ಕಾದಂಬರಿಯೂ ಮಲಯಾಳ ಸಾಹಿತ್ಯಕ್ಕೆ ಅಪೂರ್ವವಾದ ಕೊಡುಗೆಗಳು. ವೈಯಕ್ತಿಕ ಬದುಕಿನ ಸಿಹಿಕಹಿಗಳನ್ನು ಕಾಲ್ಪನಿಕ ಕಥಾಪಾತ್ರದ ಮೂಲಕ ಹೃದಯಂಗಮ ಶೈಲಿಯಲ್ಲಿ ಓದುಗರ ಚಿಂತನೆಗೆ ಅವಕಾಶವನ್ನುಂಟುಮಾಡಿಕೊಡುವ 'ವೇರುಗಳ್' ಕಾದಂಬರಿ ಮಲಯಾಳ ಸಾಹಿತ್ಯದಲ್ಲಿ ಹಿರಿದಾದ ಸ್ಥಾನವನ್ನು ಪಡೆದುಕೊಂಡಿರುವ ಕೃತಿ. ನಾಟಕಗಳು, ಸಣ್ಣ ಕಥೆಗಳು, ವಿಮರ್ಶೆ ಮುಂತಾದ ಸಾಹಿತ್ಯದ ಹಲವು ಕ್ಷೇತ್ರಗಳಲ್ಲಿ ಖ್ಯಾತಿ ಪಡೆದಿರುವ ಸಮಕಾಲೀನ ಶ್ರೇಷ್ಠ ಬರಹಗಾರ ಮಲಯಾಟ್ಟೂರ್.

ಮುಟ್ಟತ್ತು ವರ್ಕಿ: ಕೇರಳದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಕ್ರಿಶ್ಚಿಯನ್ನರ ಜೀವನದ ವಿವರಣೆಯನ್ನು ಕಥೆ ಕಾದಂಬರಿಗಳ ಮೂಲಕ ನೀಡಿರುವ ಹೆಸರಾಂತ ಲೇಖಕ. ಸಣ್ಣ ಕಥೆಗಳ ಮೂಲಕ ಕಾದಂಬರಿ ಪ್ರಪಂಚಕ್ಕೆ ವ್ಯಾಪಿಸಿ ಮಲಯಾಳ ಸಾಹಿತ್ಯದ ಅಲೆಕ್ಸಾಂಡರ್ ಡ್ಯೂಮಾ ಎನ್ನುವ ಖ್ಯಾತಿ ಪಡೆದಿರುವ ಬರಹಗಾರರು. 'ಪ್ರೇಮ ಕಥಗಳ್', 'ಇಣಪ್ರಾವುಗಳ್', 'ಪಾಡತ್ತ ಪೈಙ್ಕಿಳಿ' ಮುಂತಾದ ಮುವ್ವತ್ತಕ್ಕೂ ಹೆಚ್ಚಿನ ಕಾದಂಬರಿಗಳನ್ನು ಬರೆದು ಓದುಗರಲ್ಲಿ ಕುತೂಹಲವನ್ನು ಕೆರಳಿಸಿ ಸಾಹಿತ್ಯ ಕ್ರಾಂತಿಯನ್ನೆಬ್ಬಿಸಿದ ಸಾಹಿತಿ.

ಎಸ್. ಕೆ. ಪೊಟ್ಟೆಕ್ಕಾಡ್: ಮಲಯಾಳ ಸಾಹಿತ್ಯಕ್ಕೆ ಕಥೆಗಾರನಾಗಿ ಪ್ರವೇಶ; ಕಾದಂಬರಿಕಾರನಾಗಿ ಮುನ್ನಡೆ. 'ತಿರುವಿನ್ಡೆ ಮಕ್ಕಳ್', 'ವಿಷಕನ್ನಿಕ', 'ನಾಡನ್ ಪ್ರೇಮಂ', 'ಮೂಡು ಪಟಂ' ಮುಂತಾದುವು ಮಲ-ಯಾಳಿಗಳ ಮನಮೆಚ್ಚಿದ ಕೃತಿಗಳು. ಮಲಯಾಳ ಗದ್ಯಸಾಹಿತ್ಯದಲ್ಲಿ ಬಿರು-ಗಾಳಿಯನ್ನೆಬ್ಬಿಸಿದ ಕೃತಿಗಳೆಂದರೆ ಎಸ್. ಕೆ. ಪೊಟ್ಟೆಕ್ಕಾಡ್ ಅವರ 'ಮುತ್ತು ರಿಂಗೋಟು', 'ಭವತ್ರಾದನ್ ನಂಬೂದಿರಿಪಾದ್' ಎನ್ನುವ ಕಾದಂಬರಿಗಳು.

ಪುತ್ತೂರ್ ಉಣ್ಣಿ ಕೃಷ್ಣನ್: ಸಮಾಜದ ವಾಸ್ತವಿಕತೆಯನ್ನು ತೆರೆದು ಹೇಳಿ ಓದುಗನನ್ನು ಗಾಬರಿಗೊಳಿಸುವ ಒಂದು ತೆರನಾದ ಪ್ರತ್ಯೇಕತೆಯಿಂದಲೇ ಉಣ್ಣಿ ಕೃಷ್ಣನ್ ಓದುಗರ ಗಮನ ಸೆಳೆದು ಖ್ಯಾತಿಗೆ ಬಂದದ್ದು. ಅವರ 'ಬಲಿಗಲ್ಲು' ಎನ್ನುವ ಕಾದಂಬರಿಯಲ್ಲಿ ದೇವಾಲಯವೊಂದರ ಪರಿಸರದಲ್ಲಿ ನಡೆಯುವ ದುರ್ನೀ-ತಿಗಳನ್ನು ಬಹಿರಂಗಗೊಳಿಸುವ ಪ್ರಯತ್ನ ಕಂಡುಬರುತ್ತದೆ.

ಕಾಕನಾಡನ್ (ಜಾರ್ಜ್ ವರ್ಗೀಸ್) : ನೈರಾಶ್ಯ, ಅತೃಪ್ತಿ, ದುಃಖ ಮುಂತಾದುವುಗಳನ್ನೊಳಗೊಂಡ ಕಥಾವಸ್ತುಗಳನ್ನಾಯ್ದುಕೊಂಡು, ಬದುಕಿನ ಮೌಲ್ಯಮಾಪನ ನಡೆಸುವ ಅದ್ವಿತೀಯ ಬರಹಗಾರರು. ಮೇಲೆ ಹೇಳಿದ ಎಂ. ಟಿ. ವಾಸುದೇವನ್ ನಾಯರ್ ಅವರ ಪಂಥಕ್ಕೆ ಹೊಂದಿಕೊಂಡು ಹೋಗುವ ಲೇಖಕ ಕಾಕನಾಡನ್ ಎಂದು ಭಾವಿಸಲು ಅವಕಾಶವಿದೆ. ಪರಾಜಿತನ ವೀಕ್ಷಣೆ, ಏಕಾಂಗಿಯಾದವನ ವಿಕಾರ ವಿಚಾರ ಹಾಗು ಸಂಕಲ್ಪಗಳನ್ನೊಳಗೊಂಡು ಗದ್ಯ ಪದ್ಯಗಳ ನಡುವಿನ ಶೈಲಿಯಲ್ಲಿ ಓದುಗರ ಹೃದಯವನ್ನು ಕರಗಿಸುವ ಲೇಖನಿ ಕಾಕನಾಡರದು. ನವ್ಯತಂತ್ರದ ಮೂಲಕ 'ಏಳಾಂ ಮುದ್ರಾ', 'ಸಾಕ್ಷಿ' ಕಾದಂಬರಿಗಳನ್ನು ನೀಡಿರುವುದು ಕಾಕನಾಡನ್ ಅವರಲ್ಲಿ ಕಂಡುಬರುವ ಗಮನಾರ್ಹ ವೈವಿಧ್ಯ.

ಯು. ಎ. ಖಾದರ್ : ವೈಕ್ಕಂ ಮಹಮ್ಮದ್ ಬಷೀರರಂತೆ ಉತ್ತರ ಮಲಬಾರಿನ ಮುಸ್ಲಿಂ ಕುಟುಂಬದ ಜೀವನವನ್ನು ಹತ್ತಾರು ಕಾದಂಬರಿಗಳಲ್ಲಿ ಚಿತ್ರಿಸಿರುವ ಮತ್ತೊಬ್ಬ ಲೇಖಕ. ಗ್ರಾಮಾಂತರ ಪ್ರದೇಶಗಳ ಸಾಮಾನ್ಯ ಜನರ ಬದುಕಿನ ವಾಸ್ತವ ಚಿತ್ರಗಳನ್ನು ನೀಡಿ, ಮುಸ್ಲಿಂ ಸಮಾಜದ ದರ್ಶನವನ್ನೊದಗಿಸಿರುವ ಯು. ಎ. ಖಾದರ್ ಅಸಾಮಾನ್ಯ ಕಾದಂಬರಿಕಾರರೆನ್ನಿಸಿಕೊಂಡಿದ್ದಾರೆ.

ಕೆ. ಸುರೇಂದ್ರನ್ : ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಕಥೆಗಾರರಾಗಿ, ಕಾದಂಬರಿಕಾರರಾಗಿ ಮಲಯಾಳ ಸಾಹಿತ್ಯಕ್ಕೆ ಅವಿಶ್ರಾಂತವಾದ ಸೇವೆ ಸಲ್ಲಿಸುತ್ತ ಬಂದಿರುವ ಉದ್ದಾಮ ಸಾಹಿತಿ. ಸಾಂಸಾರಿಕ ಕ್ಲೇಶಗಳನ್ನು ಕಲಾತ್ಮಕವಾಗಿ ಚಿತ್ರಿಸುವುದನ್ನೂ ಕಥಾಪಾತ್ರಗಳ ಮಾನಸಿಕ ಹೋರಾಟದ ವ್ಯಾಪಕತೆಯನ್ನು ಅಳೆಯಲೆತ್ನಿಸುವುದನ್ನೂ ಕೆ. ಸುರೇಂದ್ರನ್ ಸಿದ್ಧಿಸಿಕೊಂಡಿದ್ದಾರೆ. ಕೇರಳ ಸಾಹಿತ್ಯ ಅಕಾದೆಮಿಯ ಪ್ರಶಸ್ತಿಯನ್ನು ಪಡೆದ 'ಮಾಯಾ' ಕಾದಂಬರಿಯೂ, 'ಜ್ವಾಲಾ', 'ಸುಜಾತಾ', 'ದೇವಿ' ಮುಂತಾದ ಕಾದಂಬರಿಗಳೂ ಮಲಯಾಳ ಗದ್ಯಸಾಹಿತ್ಯದ ಸತ್ವಪೂರ್ಣ ಕಥೆಗಳು.

ಚೆರುಕಾಡ್ ಗೋವಿಂದ ಪಿಶಾರಡಿ : ರಾಜಕೀಯ ಆದರ್ಶಗಳನ್ನು ಪ್ರಧಾನ ಗುರಿಯನ್ನಾಗಿಸಿಕೊಂಡು, ಕೆಲವು ಸಲ ಕಮ್ಯೂನಿಸ್ಟ್ ಆದರ್ಶಗಳೂ ಪ್ರವೇಶಿಸುವಂತೆ ಮಾಡಿ ವಾಸ್ತವಿಕ ಪಂಥವನ್ನು ಹಿಡಿದು ಕೇರಳದಲ್ಲಿ ಹರಿದು ಹಂಚಾಗುತ್ತಿರುವ ಬಹು ದೊಡ್ಡ ಮನೆತನಗಳ ಮತ್ತು ಗ್ರಾಮ್ಯಜೀವನದ ದೈನ್ಯ ಚಿತ್ರಗಳನ್ನು ನೀಡುವುದರಲ್ಲಿ ಚೆರುಕಾಡ್ ಅವರಂತೆ ಮತ್ತೊಬ್ಬ ಸಾಹಿತಿ ಮಲಯಾಳ ಸಾಹಿತ್ಯದಲ್ಲಿ ದೊರೆಯುವುದು ದುರ್ಲಭ. 'ತರವಾಡಿತ್ತಂ', 'ಅಡಿಮ', 'ಮನುಷ್ಯಹೃದಯಂಗಳ್' ಮುಂತಾದ ಹತ್ತಾರು ಕಾದಂಬರಿಗಳ ಗುರಿಯೂ ಮೇಲೆ ಹೇಳಿದುದೇ.

'ವಿನಯನ್' (ವಿ. ಎಸ್. ಎಂ. ಪಣಿಕ್ಕರ್): 'ತೀಯುಂಡ ಗಳ್ಕುಂ ತಿರಮಾಲಗಳ್ಕುಂ', 'ಇಡಯಿಲ್ ಯಾತ್ರ' ಮುಂತಾದ ಕೃತಿಗಳ ಮೂಲಕ ಬೆಸ್ತರ ಜೀವನವನ್ನು ಕುರಿತು ಮೊತ್ತಮೊದಲಾಗಿ ಮಲಯಾಳದಲ್ಲಿ ಬರೆದ ಲೇಖಕ.

ಮನುಷ್ಯನ ಮೂಢ ನಂಬಿಕೆಗಳಿಂದುಂಟಾಗುವ ದುಷ್ಪರಿಣಾಮಗಳನ್ನು ಬಿಡಿಸಿ ಹೇಳುವ 'ಭ್ರಾಂತಾಲಪತ್ರಿ', 'ದೈವತ್ತಿನ್ಡೆ ಮರಣಂ', 'ನಾಳತ್ತೆ ಮಳವಿಲ್' ಮುಂತಾದ ಕಾದಂಬರಿಗಳ ಮೂಲಕ ಪ್ರಸಿದ್ಧಿಗೆ ಬಂದ ವಿ. ಟಿ. ನಂದ ಕುಮಾರ್-'ಚಂದ್ರಿಕಾ', 'ಅಮೃತವುಂ ವಿಷವುಂ' ಮೊದಲಾದ ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಖ್ಯಾತಿವೆತ್ತ ಹಳೆಯ ತಲೆಮಾರಿನ ಪಯ್ಯಂಪೆಳ್ಳಿಲ್ ಗೋಪಾಲ ಪಿಳ್ಳೆ- 'ಅಭಯ', 'ಸರ್ಪಕಾವು', ಮುಂತಾದ ನಾಲ್ಕಾರು ಕಾದಂಬರಿಗಳಲ್ಲಿ ಮಾನವನ ಮನೋವಿಕಾರಗಳನ್ನು ಕಾವ್ಯಶೈಲಿಯಲ್ಲಿ ಆವಿಷ್ಕಾರಗೊಳಿಸಿ ಮಲಯಾಳದ ಅತ್ಯುತ್ತಮ ಕಾದಂಬರಿಗಳನ್ನು ರಚಿಸಿದ ಹಳೆಯ ತಲೆಮಾರಿನ ಮತ್ತೊಬ್ಬ ಸಾಹಿತಿ ಪೆರುಂಬಳವಂ ಶ್ರೀಧರನ್— ಮಲಯಾಳ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ದುಡಿದು 'ಮೇಯರ್ ನಾಯರ್', 'ಅಯ್ಯಪ್ಪನ್', 'ಕಳ್ಳ ನಾಣಯಂ' ಮೊದಲಾದ ಕಾದಂಬರಿಗಳನ್ನು ರಚಿಸಿ ಸಾಹಿತ್ಯನಾಯಕರೆನ್ನಿಸಿ ಕೊಂಡಿರುವ ಡಾ. ಎಸ್. ಕೆ. ನಾಯರ್— 'ಡಿಟೆಕ್ಟಿವ್ ಚಂದ್ರಮೋಹನ್', 'ರಾಣಿ ಮಲ್ಲಿಕ', 'ಜೈಲಿಲೆ ಕಾಮುಖಿ', 'ಅದ್ಭುತ ಮೋಹಿನಿ' ಮೊದಲಾದ ಹಲವಾರು ಕಾದಂಬರಿಗಳನ್ನು ಸೃಷ್ಟಿಸಿ ಹಿರಿಯ ಬರಹಗಾರರೆನ್ನಿಸಿಕೊಂಡಿರುವ ಡಾ. ಪಿ. ಎಸ್. ನಾಯರ್— ಮಲಯಾಳದಲ್ಲಿ ಮೊತ್ತಮೊದಲ ದಾರ್ಶನಿಕ ಕಾದಂಬರಿಯಾದ 'ಇಣಂಗಾತ್ತ ಕಣ್ಣಿಗಳ್' ಕೃತಿಯನ್ನು ರಚಿಸಿರುವ 'ವಿಲಾಸಿನಿ' ಕಾವ್ಯನಾಮದ ಎಂ. ಕೆ. ಮೆನೋನ್- ಮಲಯಾಳದ ಮೇಲೆ ಫ್ರೆಂಚ್ ಸಾಹಿತ್ಯದ ಪ್ರಭಾವವುಂಟಾಗಲು ಕಾರಣಕರ್ತೃವಾದ ಎಂ. ಮುಕುಂದನ್- ಮಕ್ಕಳಿಗಾಗಿ ಕಾದಂಬರಿಗಳನ್ನು ಪ್ರಾಯೋಗಿಕವಾಗಿ ರಚಿಸಿ ವಿಜಯಿಗಳಾದ ಸಿ. ಸಿ. ಮಾಡಾಕ್ಕರ ಮತ್ತು 'ಮಾಲಿ' (ವಿ. ಮಾಧವನ್ ನಾಯರ್)- ಪುರೋಗಾಮಿ ಸಾಹಿತ್ಯದ ಒಂದು ಪ್ರಮುಖ ಅಂಗವೆನ್ನಿಸಿಕೊಂಡು ಸಾಹಿತ್ಯಜಗತ್ತಿನಲ್ಲಿ ಬಿರುಗಾಳಿಯನ್ನೇನೂ ಎಬ್ಬಿಸಿಲ್ಲವಾದರೂ 'ಒಳುಕತ್ತುವನ್ನ ವೀಡು', 'ಇರಂಡು ಲೋಕಂ' ಮೊದಲಾದ ಗಮನಾರ್ಹ ಕಾದಂಬರಿಗಳನ್ನು ರಚಿಸಿರುವ ಪ್ರಗತಿಶೀಲ ಸಾಹಿತಿ ನಾಗವಳ್ಳಿ ಆರ್. ಎಸ್. ಕುರುಪ್- ಪತ್ತೇದಾರಿ ಕಾದಂಬರಿಗಳನ್ನು ರಚಿಸಿ ಖ್ಯಾತಿ ಪಡೆದ ಕೆ. ಎನ್. ಪೋಟಿ, ಪ್ರಸನ್ನನ್, ಮಲ್ಲಶ್ಶೇರಿ, ಮೋಹನ್ ಡಿ. ಕಂಗಳ- ಕಳೆದ ತಲೆಮಾರಿನ ಕೇರಳ ಸಾಮಾಜಿಕಜೀವನವನ್ನು ಆಧಾರವಾಗಿಟ್ಟುಕೊಂಡು 'ಅತ್ತಾಣಿ', 'ಮರತ್ತಿನ್ಡೆ ಮರವಿ', ಎನ್ನುವ ಕಾದಂಬರಿಗಳನ್ನು ಬರೆದಿರುವ ಟಾಟಾಪುರಂ ಸುಕುಮಾರನ್- ಕಾದಂಬರಿಕಾರ ಎಂದು ಕರೆಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಕವಿಯೆಂದೇ ಪ್ರಸಿದ್ಧಿ ಪಡೆದಿರುವ 'ಕಾಕತ್ತಂಬುರಾಟ್ಟಿ', 'ಕುಟ್ಟನಾಡು'

ಕಾದಂಬರಿಗಳ ಕರ್ತೃ ಶ್ರೀಕುಮಾರನ್ ತಂಜಿ- ಅನೇಕ ಕಾದಂಬರಿಗಳನ್ನು ಬರೆದರೂ ಹೆಚ್ಚು ಪ್ರಸಿದ್ಧಿಗೆ ಬರದ ಏವೂರ್ ಸಿ. ಕೆ. (ಮಾಧವನ್ ನಾಯರ್)- ಇವರೇ ಮುಂತಾದ ಗಣ್ಯ ಕಾದಂಬರಿಕಾರರ ಸಾಲಿನಲ್ಲಿ ಉದಯೋನ್ಮುಖ ಬರಹಗಾರರಾಗಿ ಸಣ್ಣ ಕಥಾ ಪ್ರಪಂಚದಿಂದ ಕಾದಂಬರಿ ಪ್ರಪಂಚಕ್ಕೆ ಕಾಲಿರಿಸಿ ಮಲಯಾಳ ಗದ್ಯಸಾಹಿತ್ಯವನ್ನು ಪರಿಪೋಷಿಸುವ ಸಮಕಾಲೀನ ಲೇಖಕರಲ್ಲಿ 'ಪಾರ' ಕಾದಂಬರಿಯ ಕರ್ತೃ ಎಂ. ಸುಕುಮಾರನ್ -'ಮಣ್ಣು', 'ಒರು ಮನುಷ್ಯನುಂ ಕುರೆ ಪೇಲಾಂಬಲುಗಳುಂ' ಕಾದಂಬರಿಗಳ ಕರ್ತೃ ಶೇಖರ್ - 'ಮೊಟ್ಟೆಯುಂ ಕಾಫರುಂ', 'ಅಪದ ಸಂಚಾರಂ' ಮೊದಲಾದ ಕಾದಂಬರಿಗಳನ್ನು ರಚಿಸಿರುವ ಎನ್. ಎಂ. ಪಿಯೋತ್ -ಸಾಹಿತ್ಯಿಕ ದಂಪತಿಗಳಾದ ಕರೂರ್ ಶಶಿ ಮತ್ತು ಪಿ. ಆರ್. ಶ್ಯಾಮಲ- ಕೆ. ಜಿ. ಸೇತುನಾಥ್. ರೋಸಿ ಥಾಮಸ್, ಅಶೋಕನ್, ಕೆ. ಪಿ. ಶ್ರೀಧರನ್, ಈಯಂಗೋಳು ಶ್ರೀಧರನ್, ಕೆ. ಟಿ. ಮುಹಮ್ಮದ್, ಕಿಳಿಮಾನೂರು ವಿಶ್ವಂಭರನ್, ಜಿ. ವಿವೇಕಾನಂದನ್, ಪಿ. ಎಸ್. ನಾರಿಯರ್, ರಾಧಾಕೃಷ್ಣನ್ ಸಿ., ಎಸ್. ಕೆ. ಮಾರಾರ್, ಭಾಸಿ ಮಲಾಪರಂಬು, ಬಾಬು ಚೆಂಗನೂರ್, ಎಂ.ಎಸ್. ಪಿಳ್ಳೆ, ಇರುಮೇಲಿ ಪರಮೇಶ್ವರನ್ ಪಿಳ್ಳೆ, ಥೋಮಸ್ ಕೆ. ಜೆ., ತುಳಸಿ, ಆನಿಲನ್ (ಕೆ. ಕೆ. ತಂಗಪ್ಪನ್ ನಾಯರ್), ವಲ್ಲಚ್ಚಿರ ಮಾಧವನ್ ಮುಂತಾದ ಅಸಂಖ್ಯಾತ ಬರಹಗಾರರ ಬಳಗ ಮಲಯಾಳ ಸಾಹಿತ್ಯದಲ್ಲಿ ಇಂದು ವರ್ಧಿಸುತ್ತಿದೆ.

ಕಳೆದ ದಶಕದಲ್ಲಿ ಸಾಪ್ತಾಹಿಕಗಳ ಮೂಲಕ ಸಣ್ಣ ಕಥೆಗಾರನೆಂದು ಹೆಸರು ಪಡೆದು ಈ ದಶಕದಲ್ಲಿ ಕಾದಂಬರಿಕಾರನಾಗಿ 'ಹೈರೇಂಜ್', 'ಭರ್ತಾವು', 'ದತ್ತುಪುತ್ರನ್', 'ಕಡಲಾಸುಪೂಕ್ಕಳ್', 'ಚಿಲಂಬೊಲಿ' ಮುಂತಾದ ಚಿತ್ತಾಕರ್ಷಕ ಕಾದಂಬರಿಗಳನ್ನು ರಚಿಸಿ ಓದುಗರ ಗಮನವನ್ನು ಸೆಳೆದಿರುವ ಇ. ಜೆ. ಕಾನಂ—'ಖಸಾಕಿನ್ಟೆ ಇತಿಹಾಸಂ' ಎನ್ನುವ ಕಾದಂಬರಿಯನ್ನು ರಚಿಸಿ, ಗ್ರಾಮ್ಯಜೀವನದ ಅಂಧಕಾರದ ಮೂಲೆಗೆ ಓದುಗರನ್ನು ಎಳೆದುಕೊಂಡು ಹೋಗುವ ನವ್ಯತಂತ್ರದ ಮೂಲಕ ಕಥೆಯನ್ನು ಹೆಣೆದಿರುವ ಒ. ಇ. ವಿಜಯನ್ ಮುಂತಾದವರೆಲ್ಲರೂ ಮಲಯಾಳದ ಉದಯೋನ್ಮುಖ ಸಾಹಿತಿಗಳೆನ್ನಿಸಿಕೊಳ್ಳುತ್ತಿದ್ದಾರೆ.

ಭಾಷಾಂತರಕಾರರು ಮತ್ತು ಕಾದಂಬರಿಗಳು : ಮಲಯಾಳೇತರ ಭಾಷೆಗಳನ್ನು ಅಭ್ಯಸಿಸಿ ಹೊರಗಿನ ಗಾಳಿ ಬೆಳಕಿನ ಪ್ರಭಾವ ಮಲಯಾಳ ಸಾಹಿತ್ಯದ ಮೇಲೆ ಉಂಟಾಗಲು ಶ್ರಮಿಸಿರುವ ಭಾಷಾಂತರಕಾರರಾದ ಸಾಹಿತಿಗಳೂ ಮಲಯಾಳದಲ್ಲಿ ಅಗಣಿತ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಅಂತಹ ಭಾಷಾಂತರಕಾರರಲ್ಲಿ ಕಳೆದ ತಲೆಮಾರಿನ ಟಿ. ಎನ್. ಕೃಷ್ಣ ಪಿಳ್ಳೆ ಪ್ರಮುಖರು.

'ನೀಲ ನೋಟು ಪುಸ್ತಕಂ', 'ಅಗಸ್ಟಿನೋ' ಮೊದಲಾದ ರಶ್ಯನ್ ಕಾದಂಬರಿಗಳನ್ನು ಮಲಯಾಳಕ್ಕೆ ಭಾಷಾಂತರಿಸಿ ವಿದೇಶದ ಸಾಮಾಜಿಕ ಹಾಗು ಕೌಟುಂಬಿಕ ಚಿತ್ರಗಳನ್ನು ಪರಿಚಯ ಮಾಡಿಕೊಟ್ಟಿರುವ ಮಹಾಕವಿ ವಳ್ಳ-ತ್ತೋಳ್ ಅವರ ಪುತ್ರ ಸಿ. ಗೋವಿಂದ ಕುರುಪ್ ಒಬ್ಬ ಪ್ರತಿಭಾವಂತ ಸಾಹಿತಿ.

ಅನೇಕ ಪಾಶ್ಚಾತ್ಯ ಕಾದಂಬರಿಗಳನ್ನು ಮಲಯಾಳಕ್ಕೆ ಭಾಷಾಂತರಿಸಿರುವ ಎ. ಎನ್. ನಂಬಿಯಾರ್, 'ನಾಲುಕೆಟ್ಟು', 'ಮಞ್ಞ', 'ಭ್ರಾಂತಾಲಯಂ' ಮುಂತಾದ ಕಾದಂಬರಿಗಳನ್ನು ತಮಿಳಿಗೆ ಭಾಷಾಂತರಿಸಿ ಮಲಯಾಳ ತಮಿಳಿನ ಸೇತುವಾಗಿರುವ ಸಿ. ಎ. ಬಾಲನ್, ಭಾಷಾಂತರಕಾರರಾಗಿಯೂ ಸ್ವತಃ ಕಾದಂಬರಿ ಕಾರರಾಗಿಯೂ 'ಚುವುಪ್ಪುನಾಡ', 'ಕಡನ್ನಲ್‌ಕೂಡು', 'ಒಡುವಿಲ್ ಕಿಟ್ಟಿಯದು' ಮೊದಲಾದ ಐದಾರು ಕಾದಂಬರಿಗಳ ಮೂಲಕ ಮಲಯಾಳ ಸಾಹಿತ್ಯಕ್ಷೇತ್ರದಲ್ಲಿ ಕೀರ್ತಿಯನ್ನು ಪಡೆದಿರುವ ಇ. ವಾಸು, ಏಳೆಂಟು ಬಂಗಾಳಿ ಕಾದಂಬರಿಗಳನ್ನು ಮಲಯಾಳಕ್ಕೆ ಭಾಷಾಂತರಿಸಿ ದಕ್ಷಿಣಕ್ಕೂ ಉತ್ತರಕ್ಕೂ ಸಾಹಿತ್ಯಸೇತುವೆಯನ್ನು ನಿರ್ಮಿಸಿರುವ ಎಂ. ಎನ್. ಸತ್ಯಾರ್ಥಿ, ಮುಂತಾದ ಹಲವಾರು ಮಂದಿ ಭಾಷಾಂತರಕಾರರಿಂದಲೂ ನೆರೆಭಾಷೆಗಳ ಸಾಹಿತ್ಯದಸಂಪರ್ಕ ಮಲಯಾಳ ಸಾಹಿತ್ಯಕ್ಕೆ ದೊರಕುತ್ತಿದೆ.

ಹಿಂದಿ ಕಾದಂಬರಿ

'ವಿದ್ಯಾಪ್ರೇಮಿ'

ಹಿಂದಿ ಕಾದಂಬರಿಗೆ ಇನ್ನೂ ೯೦ ವರ್ಷ ಆಗಿಲ್ಲ. ಆದರೆ ವಿಷಯವೈವಿಧ್ಯ, ಸ್ವರೂಪ ಹಾಗೂ ಉದ್ದೇಶದ ದೃಷ್ಟಿಯಿಂದ ನೋಡಿದರೆ ಅದು ೩೦೦ ವರ್ಷದ ಪರಿಪಕ್ವತೆಯನ್ನು ಗಳಿಸಿದೆ. ಅಲ್ಲದೆ ವಿಶ್ವದ ಯಾವ ಭಾಷೆಯ ಕಾದಂಬರಿಗಳಿಗೂ ಸಮಸಮವಾಗಿದೆ ಎನ್ನಬಹುದು.

ಕಾದಂಬರಿಗೆ ಪಾಶ್ಚಾತ್ಯ ಸಾಹಿತ್ಯವೇ ಪ್ರೇರಣೆಯೆಂದು ನಂಬಲಾಗಿದೆ. ಆದರೆ ಯುರೋಪಿನ ಕಾದಂಬರಿಯ ಪ್ರಭಾವ ನೇರವಾಗಿ ಹಿಂದಿಗೆ ಬಾರದೆ ಬಂಗಾಲಿ ಭಾಷೆಯ ಮಾಧ್ಯಮವಾಗಿ ಪ್ರವೇಶ ಪಡೆಯಿತು. ಆದರೂ ಹಿಂದಿ ಕಾದಂಬರಿಯ ಜನ್ಮ ಹಾಗೂ ವಿಕಾಸದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಸಾಕಷ್ಟಿದೆ. ೧೯ ನೇ ಶತಮಾನದ ಉತ್ತರಾರ್ಧದಲ್ಲಿ, ಹಿಂದಿ ಕಾದಂಬರಿ ಜನ್ಮ ತಾಳಿದಾಗ ಇಂಗ್ಲೀಷಿನಿಂದ ಎರಡು ತರದ ಕಾದಂಬರಿಗಳ ಅನುವಾದವಾಯಿತು. ರೇನಾಲ್ಡ್ ರವರ 'ಲೈಲಾ', 'ಲಂಡನ್ ರಹಸ್ಯ' ಹಾಗೂ 'ಟಾಮ್ ಕಾಕಾ ಕೀ ಕುಟಿಯಾ'ದಂತಹ ರೋಮಂಟಿಕ್ ಕಾದಂಬರಿಗಳು ಒಂದು ತರವಾದರೆ ಬ್ಲಾಕ್ ಸೀರೀಜ್ ಮೊದಲಾದ ಪತ್ತೆದಾರಿ ಕಾದಂಬರಿಗಳಿನ್ನೊಂದು ತರವು. ಈ ಕಾರ್ಯ ಆಗುವಷ್ಟರಲ್ಲೇ ಬಂಗಾಲಿ ಕಾದಂಬರಿಗಳು ಅನುವಾದವಾಗತೊಡಗಿದ್ದುವು. ಬಂಕಿಮಚಂದ್ರ, ರಮೇಶಚಂದ್ರ ದತ್ತ, ಹಿರೇಣಚಂದ್ರ ರಕ್ಷಿತ್, ಚಂಡೀಚರಣ ಸೇನ್, ಶರಚ್ಚಂದ್ರ, ಚಾರುಚಂದ್ರ ಮೊದಲಾದವರ ಕೃತಿಗಳು ಹಿಂದಿಯಲ್ಲಿ ಕಾಣಿಸಿಕೊಂಡವು. ಇನ್ನೊಂದು ಕಡೆಯಲ್ಲಿ ಪಂಚತಂತ್ರ, ಹಿತೋಪದೇಶ, ಶುಕಸಪ್ತತಿ, ಕಥಾಸರಿತ್ಸಾಗರ, ಬೃಹತ್ಕಥಾಮಂಜರಿ ಕಾದಂಬರಿ, ಹರ್ಷಚರಿತೆ ಮೊದಲಾದ ಸಂಸ್ಕೃತ ಕೃತಿಗಳ ಅನುವಾದವೂ ನಡೆಯುತ್ತಿತ್ತು. ಈ ರೀತಿಯಾಗಿ ಪ್ರಾರಂಭದಲ್ಲೇ (ಭಾರತೇಂದು ಯುಗದಲ್ಲಿ) ಹಿಂದಿ ಕಾದಂಬರಿಯಲ್ಲಿ ಮೂರು ಪ್ರವಾಹಗಳು ಕಂಡುಬರುತ್ತವೆ.

೧. ಪ್ರೇಮಕಥಾತ್ಮಕವಾದ ಕಾಲ್ಪನಿಕ ಪ್ರವಾಹ
೨. ಸಮಾಜಸುಧಾರಣೆಯ ಆದರ್ಶವಾದಿ ಪ್ರವಾಹ
೩. ಪತ್ತೆದಾರಿ ಹಾಗೂ ರಹಸ್ಯ–ರೋಮಾಂಚಕಾರಿ ಪ್ರವಾಹ

ಒಂದನೆಯದರಲ್ಲಿ ಕಿಶೋರಿಲಾಲ್ ಗೋಸ್ವಾಮಿಯವರ 'ಅಂಗೂಠಿಕಾ ನಗೀನಾ' ಹಾಗೂ 'ಕುಸುಮಕುಮಾರಿ'ಯನ್ನು ಉಲ್ಲೇಖಿಸಬಹುದು. ಎರಡನೆಯ

ಪ್ರವಾಹದಲ್ಲಿ ಉಪದೇಶ, ನೀತಿ, ಆದರ್ಶವಾದ ಮೊದಲಾದವುಗಳಿಗೆ ಸ್ಥಾನ ದೊರೆ-ತಿವೆ. ಇಲ್ಲಿ 'ನೂತನ ಬ್ರಹ್ಮಚಾರಿ', 'ನಿಸ್ಸಹಾಯ ಹಿಂದೂ', 'ವಿಧವಾ ವಿಪತ್ತಿ', 'ಕಾಮಿನಿ','ಸೌ ಅಜಾನ್ ಏಕ್ ಸುಜಾನ್', 'ಶೇರ್ ಹಿಂದೀ ಕಾ ಠಾರ್', 'ಸ್ವದೇಶ ಪ್ರೇಮ', 'ಆದರ್ಶ ಹಿಂದು', 'ಆದರ್ಶ ದಂಪತಿ' ಮೊದಲಾದ ಕೃತಿಗಳನ್ನು ತೆಗೆದು ಕೊಳ್ಳಬಹುದು. ಮೂರನೆಯ ಪ್ರವಾಹವನ್ನು ಪ್ರಾರಂಭಿಸಿದವರು ಗೋಪಾಲ ದಾಸ ಗಹಮರಿಯವರು 'ಚತುರ್ ಚಂಚಲಾ' (೧೮೯೩) ಅವರ ಪ್ರಥಮ ಕೃತಿ. ಈ ಕ್ಷೇತ್ರದಲ್ಲಿ 'ಸರಕ್ ತೀಲಾಶ್', 'ಫುರಕಾ ಭೇದಿ', 'ಡಾಕ್ಟರ್ ಕೀ ಕಹಾನಿ','ಚಕ್ಕರ್ ದಾರ್ ಚೋರಿ', 'ರಹಸ್ಯ ವಿಪ್ಲವ', 'ಅದ್ಭುತ್ ಖೂನ್', 'ಭಯಂಕರ್ ಭೇದ್', 'ಖೂನೀಕಾ ಭೇದ್', 'ಜಾಲೀ ಬೀಬಿ', 'ಮೆಮ್ ಕೀ ಲಾಶ್', 'ಗಾಡಿಮೇ ಲಾಶ್', 'ಜೇಗುನಾಹ್ ಕಾ ಖೂನ್', 'ಜಾಸೂಸ್ ಕೀ ಭೂಲ್', 'ಡಬಲ್ ಜಾಸೂಸ್', 'ಭಯಂಕರ್ ಚೋರಿ' ಮೊದಲಾದ ಕೃತಿಗಳು ಕಾಣಿಸಿಕೊಂಡವು.

ಇನ್ನೊಂದು ಸಣ್ಣ ಪ್ರವಾಹವೂ ಅದೇ ಸಮಯದಲ್ಲಿ ಹರಿಯುತ್ತಿತ್ತು-ತಿಲಸ್ಮಿ ಐಯಾರಿ. ದೇವಕಿನಂದನ್ ಖತ್ರಿಯವರ ಪ್ರಸಿದ್ಧ ಕೃತಿ 'ಚಂದ್ರಕಾಂತಾ', 'ಚಂದ್ರಕಾಂತಾ ಸಂತತಿ', 'ಭೂತನಾಥ' ಮೊದಲಾದ ಕಾದಂಬರಿಗಳನ್ನು ಉಲ್ಲೇಖಿಸ ಬಹುದು.

ಈ ರೀತಿ ಆದರ್ಶ, ಮನೋರಂಜನೆ, ರಹಸ್ಯ ಹಾಗೂ ರೊಮಾಂಚಕಾರಿ ಕತೆಗಳೇ ಪ್ರಾರಂಭಿಕ ಕಾದಂಬರಿಗಳ ಸ್ವರೂಪ. ಲೇಖಕನು ಕತೆಯನ್ನು ಪ್ರಾರಂಭಿಸಿ, ಮಧ್ಯ ಹಾಗೂ ಅಂತ್ಯದ ವರೆಗೆ ನೇಯುತ್ತಾ ಹೋಗುವನು. ಕತೆ ಚರಮೋತ್ಕರ್ಷ ಬಿಂದುವಿನಲ್ಲಿ ಮುಗಿಯುತ್ತದೆ. ಆ ಬಿಂದುವಿನ ವರೆಗೆ ಪಾಠಕನನ್ನು ಜಿಜ್ಞಾಸೆಯ ಪಾಶದಲ್ಲಿ ಬಂಧಿಸಿ ಕೊಂಡೊಯ್ಯುವನು. ಇಂತಹ ಕಾದಂಬರಿಗಳಲ್ಲಿ ಪಾತ್ರ, ಸಂಭಾಷಣೆ, ಉದ್ದೇಶ, ವಾತಾವರಣ ಮೊದಲಾದ ಕಾದಂಬರಿ ತತ್ವಗಳಿಗೆ ಪ್ರಾಮುಖ್ಯವಿಲ್ಲ. ಮನೋರಂಜನೆಯೇ ಕೃತಿಯ ಮುಖ್ಯ ಉದ್ದೇಶವಾಗಿರುತ್ತದೆ. ಪತ್ತೇದಾರಿ ಕಾದಂಬರಿಗಳಲ್ಲಿ ಘಟನೆಯೇ ಮುಖ್ಯ. ಈ ಕಾದಂಬರಿಗಳಿಗೆ ಸಾಹಿತ್ಯದ ಮಹತ್ವ ದೊರೆಯಲಿಲ್ಲವಾದರೂ ಹಿಂದೀ ಭಾಷೆಯನ್ನು ಲೋಕಪ್ರಿಯವನ್ನಾಗಿ ಮಾಡುವದರಲ್ಲಿ ಇವುಗಳ ಮಹತ್ವ ಸಾಕಷ್ಟು ಇದೆ.

ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಿ ಹಿಂದಿ ಸಾಹಿತ್ಯದ ಕಡಿವಾಣ ಹಜಾರಿಪ್ರಸಾದ ದ್ವಿವೇದಿಯವರ ಕೈಗೆ ಬಂತು. ಕಾದಂಬರಿಕಾರರು ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು, ತಾಂತಿಕ ಮಾಂತ್ರಿಕ ಕಾದಂಬರಿಗಳು ಎಡೆಬಿಡದೆ ಪ್ರಕಟವಾಗುತ್ತಿದ್ದುವು, ಪತ್ತೆದಾರಿ ಕಾದಂಬರಿಗಳಿಗೆ ಲೆಕ್ಕವಿರಲಿಲ್ಲ. ಪಾಠಕ ವರ್ಗ ಈ ಮಾಯಾಜಾಲದಲ್ಲಿ ಸಿಲುಕಿಕೊಂಡಿತ್ತು. ಅದರಿಂದ ಮುಕ್ತಗೊಳಿಸ ಲೆಕ್ಕಾಗಿ ದ್ವಿವೇದಿಯವರು ಮಹಾಭಾರತ, ವೇಣೀಸಂಹಾರ, ಕುಮಾರಸಂಭವ, ಮೇಘದೂತ, ಕಿರಾತಾರ್ಜುನೀಯ ಮೊದಲಾದ ಸಂಸ್ಕೃತ ಕೃತಿಗಳನ್ನು ಹಿಂದಿಗೆ

ಅನುವಾದಿಸಿದರು. ಅದೇ ಸಮಯದಲ್ಲಿ ಬ್ರಜ್‌ನಂದನ ಸಹಾಯರವರ 'ಲಾಲ್ ಚೀನಾ', ಮಿಶ್ರಬಂಧುರವರ 'ವೀರಮಣಿ', ಮೊದಲಾದ ಐತಿಹಾಸಿಕ ಕಾದಂಬರಿಗಳು, ಬನಮೋಹನ್ ಸಿಂಹರವರ 'ಶ್ಯಾಮಾಸ್ವಪ್ನ', 'ಉಗ್ರ'ರವರ 'ಘಂಟಾ' ಮೊದಲಾದ ಸಾಮಾಜಿಕ ಕಾದಂಬರಿಗಳೂ ಹೊರಬಂದುವು. ಈ ಯುಗದಲ್ಲಿ ಪ್ರೇಮಚಂದರು ಈ ಸಾಹಿತ್ಯಾಂಗಕ್ಕೆ ಪದಾರ್ಪಣ ಮಾಡಿದರು.

ಹಿಂದಿ ಕಾದಂಬರಿಗೆ ಕಲಾತ್ಮಕ ರೂಪ ಕೊಟ್ಟವರು ಪ್ರೇಮಚಂದ್. ಅವರ 'ಸೇವಾಸದನ್' ಕಾದಂಬರಿ ಈ ಕಲಾತ್ಮಕ ರೂಪ ತಾಳಿ ಬಂದ ಸರ್ವ ಪ್ರಥಮ ಕೃತಿ. ಅವರ ಆಗಮನ ಹಿಂದಿ ಕಾದಂಬರಿ ಸಾಹಿತ್ಯಕ್ಕೆ ವರದಾನಸಿದ್ಧವಾಯಿತು. ಅವರ ದೃಷ್ಟಿಯಲ್ಲಿ ಕಾದಂಬರಿ ಮಾನವ ಜೀವನದ ಚಿತ್ರ. ಅವರ ಲೇಖನಿಯಲ್ಲಿ ಅದು ಎಷ್ಟು ಸ್ವಾಭಾವಿಕ ಹಾಗೂ ಯಥಾರ್ಥವಾಗುತ್ತಿತ್ತೋ ಅಷ್ಟೇ ಸುಂದರ ಮತ್ತು ಪ್ರಭಾವಶಾಲಿಯೂ ಆಗುತ್ತಿತ್ತು. ಯಥಾರ್ಥವಾದ ಪ್ರೇಮಚಂದರ ಜೀವನ ಮಂತ್ರ ಅವರ ಭಾಷೆ, ಭಾವನೆ, ಪಾತ್ರ, ಕಥೆ, ವಾತಾವರಣ, ಸಂಭಾಷಣೆ ಎಲ್ಲದರಲ್ಲಿಯೂ ಯಥಾರ್ಥವಿತ್ತು. ವಾಸ್ತವಿಕತೆಯ ನಿಷ್ಕಪಟ ಅಭಿವ್ಯಕ್ತಿಯೇ ಯಥಾರ್ಥವಾದದ ಲಕ್ಷ್ಯ; ಜೀವನದ ಸಮಂಜಸಪೂರ್ಣ ಚಿತ್ರವನ್ನು ಪ್ರಸ್ತುತಗೊಳಿಸುವುದೇ ಅವರ ಕರ್ತವ್ಯ; ಸಮಾಜದಲ್ಲಿ ಹಬ್ಬಿರುವ ಕುರೀತಿಗಳನ್ನು ಎತ್ತಿ ತೋರಿಸಿ ಅವನ್ನು ನಿರ್ಮೂಲ ಮಾಡುವ ಪ್ರಯತ್ನದಲ್ಲೇ ಅವರ ಸಾಫಲ್ಯ. ಈ ದೃಷ್ಟಿಯಲ್ಲಿ ಪ್ರೇಮಚಂದರು ಹಿಂದಿ ಕಾದಂಬರಿ ಸಾಹಿತ್ಯದಲ್ಲಿ ಯುಗಪ್ರವರ್ತಕರು. ಅವರು ಪಾರಿವಾರಿಕ, ಸಾಮಾಜಿಕ, ರಾಜನೈತಿಕ ಮೊದಲಾದ ಸಮಸ್ಯೆಗಳನ್ನೆತ್ತಿ ಅವುಗಳಿಗೆ ನಿವಾರಣೆ ಹುಡುಕಲು ಪ್ರಯತ್ನಿಸಿರುವರು. 'ಪ್ರೇಮಾಶ್ರಮ', 'ಗೋದಾನ', 'ರಂಗಭೂಮಿ', 'ಸೇವಾ ಸದನ', 'ಕಾಯಾಕಲ್ಪ', 'ಗಬನ್', 'ನಿರ್ಮಲಾ' ಇವಕ್ಕೆ ಉದಾಹರಣೆ. ಅರಮನೆಗಳ ಕಡೆಗೆ ನೋಡದೆ, ಗುಡಿಸಲಿನಲ್ಲಿ ನರಳುತ್ತಿರುವ ಆತ್ಮಗಳನ್ನು ನೋಡಿದವರಲ್ಲಿ ಅವರು ಮೊದಲಿಗರು. ಪ್ರೇಮಚಂದ್ ಯುಗದ ಸಮಸ್ಯೆಗಳೆಂದರೆ ಅಸಂಬದ್ಧ ವಿವಾಹ, ಬಾಲವಿವಾಹ, ವರದಕ್ಷಿಣೆ ಪದ್ಧತಿ, ಆಭೂಷಣಪ್ರಿಯತೆ, ಲಂಚ, ಕೃಷಿಕರ ಮೇಲೆ ಪೋಲೀಸ್, ಸರಕಾರ ಹಾಗೂ ಜಮೀನುದಾರರ ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರ. ಇವು ವ್ಯಕ್ತಿಗತವಲ್ಲ; ಸಮಾಜಗತ, ಸಮಷ್ಟಿಗತ. ಈ ಯುಗ ರಾಜನೀತಿಯಲ್ಲಿ ಗಾಂಧೀಯುಗವೆಂದು ಪ್ರಸಿದ್ಧವಾಗಿದೆ. ಭಾರತೀಯ ಸ್ವಾತಂತ್ರ್ಯ ಅಂದಿನ ಯುಗದ ಕಾದಂಬರಿಗಳ ಮೂಲಸ್ವರವಾಗಿತ್ತು. ಈ ಸ್ವರ ಅಂದಿನ ಕೃತಿಗಳಲ್ಲಿ ಕೇಳಿಬರುತ್ತಿತ್ತು.

ಪ್ರೇಮಚಂದರ ಬಳಿಕ ಸಾಮಾಜಿಕ ಕಾದಂಬರಿಯ ವರ್ಣನಶೈಲಿಯಲ್ಲಿ ತುಂಬಾ ಪರಿವರ್ತನೆಯಾಯಿತು. ಪ್ರೇಮಚಂದರ ಆದರ್ಶೋನ್ಮುಖ ಯಥಾರ್ಥವಾದವನ್ನು ಬಿಟ್ಟು ಲೇಖಕರು ವಾಸ್ತವಿಕ ಯಥಾರ್ಥವಾದವನ್ನು ಸ್ವೀಕರಿಸಿದರು. ಜಯಶಂಕರ ಪ್ರಸಾದರವರ 'ಕಂಕಾಲ್' ಎಂಬ ಕಾದಂಬರಿಯು ಈ ಶೈಲಿಯಲ್ಲಿ

ಅಗ್ರದೂತವಾಗಿ ಹೊರಬಂತು. ಇಲ್ಲಿ ಲೇಖಕನು ಸಮಾಜದಲ್ಲಡಗಿರುವ ಪಶು ಪ್ರವೃತ್ತಿಯನ್ನು ಸ್ಪಷ್ಟ ರೀತಿಯಲ್ಲಿ ಬಯಲಿಗೆಳೆಯುವನು. ಧರ್ಮದ ಹೆಸರಿನಲ್ಲಿ, ದೇವಾಲಯ, ಮಸೀದಿ, ಇಗರ್ಜಿಗಳಲ್ಲಿ ಯಾವ ರೀತಿಯ ಅನ್ಯಾಯ, ಮೋಸ, ಅತ್ಯಾಚಾರಗಳಾಗುತ್ತಿರುತ್ತವೆ ಎಂದು ಚಿತ್ರಿಸುವನು.

ಜೈನೇಂದ್ರರು ಹಿಂದಿ ಕಾದಂಬರಿ ಕ್ಷೇತ್ರದ ಚಿರಪರಿಚಿತ ವ್ಯಕ್ತಿ. ಅವರು ವ್ಯಕ್ತಿವಾದಿ ವಿಚಾರದವರು. ಪ್ರೇಮಚಂದರ ಪಾತ್ರಗಳ ಮುಂದೆ ಸಾಮಾಜಿಕ ಸಮಸ್ಯೆಗಳಿರುತ್ತವೆ. ಆ ಸಮಸ್ಯೆಗಳ ಪ್ರಭಾವ ಸಂಪೂರ್ಣ ಸಮಾಜದ ಮೇಲಾಗುತ್ತದೆ. ಮತ್ತು ಸಮಸ್ಯೆಗಳ ನಿವಾರಣೆಯ ಪ್ರಭಾವವೂ ಹಾಗೆಯೆ. ಆದರೆ ಜೈನೇಂದ್ರರವರ ಸಾಮಾಜಿಕ ಸಮಸ್ಯೆ ವ್ಯಕ್ತಿಯ ಸಮಸ್ಯೆಯಾಗಿರುತ್ತದೆ. ಅವರ ಪಾತ್ರ ವಿದ್ರೋಹಮಾಡುತ್ತವೆ. ಆದರೆ ಆ ವಿದ್ರೋಹದ ಪ್ರಭಾವ ಸಾಮಾಜಿಕ ವಾಗಿರದೆ, ವೈಯಕ್ತಿಕವಾಗಿರುತ್ತದೆ. ಪ್ರೇಮಚಂದರ ಕಥಾಪ್ರಧಾನ ಮಾರ್ಗ ವನ್ನು ಮೊಟ್ಟಮೊದಲು ಅಲ್ಲಗಳೆದವರೆಂದರೆ ಜೈನೇಂದ್ರರು. ಕತೆ ಹೇಳುವುದು ಲೇಖಕನ ಉದ್ದೇಶವಾಗಬಾರದು; ಕೃತಿಯಲ್ಲಿ ಭಾವನೆಯ ವಿಕಾಸವಾಗಬೇಕು ಎಂದು ಅವರ ಅಭಿಮತ. ಅವರ 'ಸುನೀತಾ', 'ಕಲ್ಯಾಣಿ', ಮತ್ತು 'ಸುಖದಾ' ಕಾದಂಬರಿಗಳಲ್ಲಿ ಅದು ಸ್ಪಷ್ಟವಾಗಿದೆ. ತಮ್ಮ ಪ್ರಥಮ ಕೃತಿ 'ಪರಖ್'ನಲ್ಲಿ ಅವರೆಂದಿರುವರು; "ನಾನು ಹಲವಾರು ಕಥೆಗಳಲ್ಲಿ ಕತೆಯ ತಂತಿಯನ್ನು ಜೋಡಿಸದೆ ಬಿಟ್ಟಿರುವೆನು. ಅಲ್ಲಿ ಪಾಠಕರು ಜಿಗಿಯಬೇಕಾದೀತು. ಇಂತಹ ಪ್ರಯಾಸ, ವ್ಯಾಯಾಮ ಅವರಿಗೂ ಹಿತಕರವೆಂದೆನಿಸುವದು" ಎಂದು. 'ತ್ಯಾಗಪತ್ರ' ಅವರ ಪ್ರಸಿದ್ಧ ಹಾಗೂ ಸಫಲಕೃತಿ. ಅಜ್ಞೇಯ, ಯಶಪಾಲ್, ಭಗವತಿಚರಣ ವರ್ಮಾ, ಡಾ. ಧರ್ಮವೀರ ಭಾರತಿ, ಪ್ರಭಾಕರ ಮಾಚ್ವೆ, ರಾಮೇಶ್ವರ ಶುಕ್ಲ ಅಂಚಲ್ ಹಾಗೂ ಇನ್ನಿತರರ ಕೃತಿಗಳಲ್ಲಿ ಕತೆಯ ಅಪ್ರಧಾನತೆಯನ್ನು ಗಮನಿಸ ಬಹುದು. ಕ್ರಮೇಣ ಕಥಾನಕದ ಪ್ರಾಚೀನ ಸ್ವರೂಪ ತನ್ನ ಮಹತ್ವವನ್ನು ಕೊಳ್ಳುತ್ತಿದೆ. ಹೊಸ ಕಾದಂಬರಿಗಳು ಹೊಸ ಸ್ವರೂಪವನ್ನು ತಾಳುತ್ತಿವೆ.

ಪ್ರೇಮಚಂದೋತ್ತರ ಕಾದಂಬರಿ ಸಾಹಿತ್ಯ ಸಂಕೀರ್ಣದಿಂದ ಸಂಕೀರ್ಣತರವಾಗುತ್ತಾ ಹೋಯಿತು. ಕಾದಂಬರಿಕಾರರು ಮೊದಲು ಸಮಾಜವನ್ನು ಬಿಟ್ಟು ವ್ಯಕ್ತಿಯನ್ನೆತ್ತಿಕೊಂಡರು; ಆ ಬಳಿಕ ಆ ವ್ಯಕ್ತಿಯನ್ನು ಬಿಟ್ಟು ಅವನ ಅವಚೇತನ ಮನದ ಕಾರ್ಯಕಲಾಪದ ವಿಶ್ಲೇಷಣೆ ಮಾಡತೊಡಗಿದರು. ಲೇಖಕನ ಮೇಲೆ ಪಾಶ್ಚಾತ್ಯ ಸಾಹಿತ್ಯ ಹಾಗೂ ವಿಚಾರದ ಪ್ರಭಾವ ಸಾಕಷ್ಟು ಬಿದ್ದಿದೆ. ಅವನ ಚಿತ್ರಪಟ (Canvas) ವಿಸ್ತೃತವಾದರೂ ಲಕ್ಷ್ಯ ಒಬ್ಬ ವ್ಯಕ್ತಿ ಹಾಗೂ ವ್ಯಕ್ತಿಯ ಒಂದು ವಿಶಿಷ್ಟ ಪಕ್ಷದಲ್ಲೇ ಕೇಂದ್ರಿತವಾಗಿದೆ. ಇದರಿಂದಾಗಿಯೇ ಕಾದಂಬರಿಯಲ್ಲಿ ಸೂಕ್ಷ್ಮತೆ ಹೆಚ್ಚಾಗುತ್ತಾ ಹೋದಂತೆ ಅದರ ಸಂಕೀರ್ಣತೆಯೂ ಹೆಚ್ಚಾಯಿತು. ಕಾದಂಬರಿ ಕ್ರಮೇಣ 'ಜನಸಮಾಜದ ಸಾಹಿತ್ಯ'ದ ಪದವಿಯನ್ನು ಬಿಟ್ಟು

‘ವಿಶೇಷ ವರ್ಗದ ಸಾಹಿತ್ಯ’ವಾಗುತ್ತಾ ಹೋಗುತ್ತಿದೆ.

ಹಿಂದಿ ಕಾದಂಬರಿಕಾರರು ಎತ್ತಿಕೊಂಡ ಸಮಸ್ಯೆಗಳಲ್ಲಿ ನಾರೀಸಮಸ್ಯೆ ಮುಖ್ಯವಾದುದು. ಸಿಯಾರಾಮಶರಣ ಗುಪ್ತರವರ ‘ನಾರಿ’ ಕಾದಂಬರಿ ಈ ಸಮಸ್ಯೆಯ ಚಿತ್ರಣಕ್ಕೇ ಮೀಸಲಾಗಿದೆ. ಜೈನೇಂದ್ರರವರ ‘ಪರಖ್’, ಪ್ರತಾಪ ನಾರಾಯಣ ಶ್ರೀವಾಸ್ತವರವರ ‘ವಿಜಯ’ದಲ್ಲಿ ವಿಧವಾವಿವಾಹದ ಸಮಸ್ಯೆಯಿದೆ. ಪ್ರೇಮಚಂದರ ‘ಸೇವಾಸದನ’ದ ಬಳಿಕ ರಾಂಗೇಯ ರಾಘವ ತಮ್ಮ ‘ಘರೌಂಧೆ’ಯಲ್ಲಿ ವೇಶ್ಯೆ ಜನ್ಮತಃ ವೇಶ್ಯೆಯಾಗಿರುವುದಿಲ್ಲ, ಪರಿಸ್ಥಿತಿ ಹಾಗೆ ಮಾಡಿಸುತ್ತದೆ ಅಥವಾ ತನ್ನ ಕುತ್ಸಿತ ವೃತ್ತಿಯಿಂದಾಗಿ ಅವಳು ಆ ದಾರಿ ಹಿಡಿಯುವಳು ಎಂದು ಹೇಳಿದರು. ಜೈನೇಂದ್ರರವರ ‘ಸುನೀತಾ’, ಶ್ರೀನಾಥರವರ ‘ಉಲ್‌ಝನ್’, ಯಶಪಾಲರವರ ‘ದಾದಾ ಕಾಮರೇಡ್’ ಕಾದಂಬರಿಗಳಲ್ಲಿ ನಾರಿಯ ಸ್ವಚ್ಛಂದ ಕಾಮುಕತನದ ಚಿತ್ರವಿದೆ. ನಾರಿಗೆ ಅಲ್ಲಿ ಬಂಧನವೆಂಬುದು ಕಂಡುಬರುವುದಿಲ್ಲ; ಬೇಕಾದವನನ್ನು ಬಿಟ್ಟು, ಬೇಕಾದಾಗ, ಬೇಕಾದವನೊಡನೆ ಆಕೆ ಜೀವಿಸಬಹುದು! ಉಪೇಂದ್ರನಾಥ ‘ಅಶ್ಕ’ರವರ ‘ಗಿರ್ತೀ ದೀವಾರೆ’ಯಲ್ಲಿ ಅಂತರ್‌ಜಾತೀಯ ವಿವಾಹದ ಚಿತ್ರವಿದೆ. ಸರ್ವದಾನಂದರ ‘ನರಮೇಧ’ ಮತ್ತು ಅಜ್ಞೇಯರವರ ‘ನದೀಕೆದೀಪ’ದಲ್ಲಿ ನಾರಿಯ ಅತ್ಯಾಧುನಿಕ ರೂಪ ಕಾಣುತ್ತೇವೆ. ಮೊದಲನೆಯದರಲ್ಲಿ ಮಲತಾಯಿಯು ಮಲಮಗನನ್ನು ಕಾಮಾತುರದಿಂದ ಪ್ರೀತಿಸುತ್ತಾಳೆ; ಎರಡನೆಯ ಕೃತಿಯಲ್ಲಿ ಮದುವೆ ಎಂಬುದು ಒಂದು ಧಾರ್ಮಿಕ ಸಂಸ್ಕಾರವಾಗಿರದೆ ಧಾರ್ಮಿಕ ಒಪ್ಪಂದವಾಗಿದೆ. ಚತುರ್‌ಸೇನ್ ಶಾಸ್ತ್ರಿಯವರ ‘ಹೃದಯಕೀ ಪರಖ್’, ‘ವ್ಯಭಿಚಾರ’, ‘ಉಗ್ರ’ರವರ ‘ದಿಲ್ಲಿಕಾ ದಲಾಲ್’, ‘ಬುಧುಆಕೀ ಬೇಟಿ’, ‘ಚಂದ್ ಹಸೀನೋಂಕೇ ಖುತೂತ್’ ಇವು ನಗರಗಳಲ್ಲಿ ಹಬ್ಬಿರುವ ವೇಶ್ಯಾಗೃಹ, ಅನಾಥಾಲಯ, ವಿಧವಾಶ್ರಮ ಮತ್ತು ಸೇವಾಸದನಗಳ ಪರದೆ ತೆರೆಯುತ್ತವೆ. ಸಮಾಜದಲ್ಲಿ ಹಬ್ಬಿರುವ ಕಳ್ಳಕಾಕರು, ಕುಡುಕರು, ಬಡವರ ರಕ್ತಹೀರುವ ಧನವಂತರು, ಮತ್ತು ಪಥಭ್ರಷ್ಟರು ಮೊದಲಾದವರನ್ನು ಬಯಲಿಗೆಳೆದಿರುವರು. ಇಲಾಚಂದ್ ಜೋಶಿಯವರ ‘ಲಜ್ಜಾ’ದಲ್ಲಿ ನಾಯಕಿ ಲಜ್ಜಾಳ ಮಾನಸಿಕ ಯಾತನೆಯ ಸಹಜ ಚಿತ್ರವಿದೆ. ಉಷಾ ದೇವಿಯವರ ‘ಅಷ್ನೆ ಪಿಯಾ’, ಕಾಮರೇಡ್ ಯಶಪಾಲರವರ ‘ಪಾರ್ಟಿ ಕಾಮರೇಡ್’ ಕಾದಂಬರಿಗಳಲ್ಲಿಯೂ ನಾರೀಸಮಸ್ಯೆಗೆ ಸ್ಥಾನ ದೊರೆತಿದೆ.

ಈ ರೀತಿ ಪ್ರೇಮಚಂದರ ಬಳಿಕ ಹಿಂದಿ ಕಾದಂಬರಿ ಕ್ಷೇತ್ರದಲ್ಲಿ ಮುಖ್ಯತಃ ಮೂರು ವಿಧದ ಲೇಖಕರನ್ನು ಕಾಣಬಹುದು. (೧) ತಮ್ಮ ಕೃತಿಗಳಲ್ಲಿ ಬರುವ ಪಾತ್ರಗಳ ಆರಂಭಿಕ ಜೀವನವನ್ನು ಚಿತ್ರಿಸುವ ಮನೋವೈಜ್ಞಾನಿಕ ಪ್ರವೃತ್ತಿಯುಳ್ಳ ಲೇಖಕರು (ಜೈನೇಂದ್ರ ಮೊದಲಾದವರು); (೨) ಫ್ರಾಯ್ಡನ ಮನೋವಿಶ್ಲೇಷಣಾತ್ಮಕ ವಿಜ್ಞಾನದಿಂದ ಪ್ರಭಾವಿತರಾಗಿ ಆ ಪ್ರತಿಕ್ರಿಯಾವಾದಿ ಪ್ರವೃ-

ತ್ತಿಯ, ಕಾಮಪೀಡಿತ ಪಾತ್ರಗಳ ರೋಗಪೀಡಿತ ಮನಸ್ಸಿನ ಚೇತನ, ಅರ್ಧಚೇತನ ಹಾಗೂ ಅವಚೇತನಗಳ ಆಳದಲ್ಲಿಯೇ ವಿಹರಿಸುತ್ತಿರುವ ಲೇಖಕರು (ಅಜ್ಞೇಯ, ಇಲಾಚಂದ್ ಜೋಶಿ ಮೊದಲಾದವರು); ಮತ್ತು (೩) ಮಾನವ ಸಮಾಜದಲ್ಲಿ ಹಬ್ಬಿರುವ ವೈಷಮ್ಯ, ಅನ್ಯಾಯ, ದಬ್ಬಾಳಿಕೆಗಳನ್ನು ದೂರಮಾಡಿ ಸಮಾನತೆ, ನ್ಯಾಯ, ಸುವ್ಯವಸ್ಥೆಯನ್ನು ಸ್ಥಾಪಿಸಬೇಕೆಂಬ ಸದುದ್ದೇಶವನ್ನಿಟ್ಟುಕೊಂಡಿರುವ ಪ್ರಗತಿವಾದಿ ಪ್ರವೃತ್ತಿಯ ಲೇಖಕರು (ಯಶಪಾಲ್, ರಾಂಗೇಯ ರಾಘವ ಮೊದಲಾದವರು).

ಸಾಮಾಜಿಕ, ರಾಜನೈತಿಕ ವಿಷಯಗಳನ್ನೆತ್ತಿಕೊಂಡಿರುವ ಹಲವಾರು ಲೇಖಕರು ಈ ಸಾಹಿತ್ಯಾಂಗಕ್ಕೆ ನೀರೆರೆದಿರುವರು. ಮಧ್ಯಮವರ್ಗದಲ್ಲಡಗಿರುವ ಘಾತ–ಪ್ರತ್ಯಾಘಾತ, ಅಂಧವಿಶ್ವಾಸ, ಸಾಮಾಜಿಕ ರೂಢಿ, ಕುರೀತಿ, ಕುನೀತಿ, ಅಹಂಭಾವನೆಗಳನ್ನು ಯಥಾರ್ಥರೂಪದಲ್ಲಿ ಚಿತ್ರಿಸಿದ ಲೇಖಕರೂ ಅನೇಕರು. ಭಗವತೀಚರಣ ವರ್ಮಾರವರ 'ಭೂಲೇ ಬಿಸ್‌ರೆ ಚಿತ್ರ' ವಿಷಯ ಹಾಗೂ ಶಿಲ್ಪದ ದೃಷ್ಟಿಯಲ್ಲಿ ಹಿಂದಿ ಕಾದಂಬರಿ ಕ್ಷೇತ್ರಕ್ಕೊಂದು ಹೊಸ ಕೊಡುಗೆ. ೧೮೮೫ ರಿಂದ ೧೯೩೦ ರ ವರೆಗೆ ಭಾರತೀಯ ಸಮಾಜದಲ್ಲಿ ಯಾವ ಯಾವ ಪರಿವರ್ತನೆಗಳಾದುವು ಎಂಬುದರ ಕಲಾತ್ಮಕ ಲೆಕ್ಕಾಚಾರ ಪ್ರಸ್ತುತಗೊಳಿಸುವುದೇ ಇದರ ಮುಖ್ಯ ಉದ್ದೇಶ ಎನ್ನಬಹುದು. ಇಲ್ಲಿ ಸಾಮಂತ ಪರಂಪರೆಯಲ್ಲಿ ಹುಟ್ಟಿಬೆಳೆದ ಒಂದು ಪರಿವಾರದ ನಾಲ್ಕು ತಲೆಮಾರಿನ ಕತೆಯಿದೆ. ವರ್ಮಾರವರ 'ಟೇಡೆ ಮೇಡೆ ರಾಸ್ತೆ' ರಾಜನೈತಿಕ ಕಾದಂಬರಿ. ಇದರಲ್ಲಿ ರಾಜನೀತಿಯ ಮೂರು ಪ್ರಮುಖ ವಾದಗಳನ್ನು ಮೂರು ಮಾರ್ಗಗಳ ರೂಪದಲ್ಲಿ ಚಿತ್ರಿಸಿರುವರು; ಸಂಭಾಷಣೆಯ ಮುಖಾಂತರ ಗಾಂಧಿವಾದಿ, ಉಗ್ರವಾದಿ ಹಾಗೂ ಸಾಮ್ಯವಾದಿ ಸಿದ್ಧಾಂತಗಳನ್ನು ವಿವೇಚಿಸಿರುವರು. 'ತೀನ್ ವರ್ಷ' ಅವರ ಇನ್ನೊಂದು ಕೃತಿ. ಕಾಲೇಜು ಜೀವನವನ್ನು ಅಲ್ಲಿ ವ್ಯಂಗ್ಯವಾಗಿ ಚಿತ್ರಿಸಿರುವರು. ಅವರ 'ವಹ್ ಫಿರ್ ನಹಿ ಆಯಿ' ಇನ್ನೊಂದು ಕೃತಿ. ತಮ್ಮ 'ಚಿತ್ರಲೇಖಾ' ಎಂಬ ಸುಪರಿಚಿತ ಕಾದಂಬರಿಯಲ್ಲಿ ಜೀವನದಲ್ಲಿ ಪಾಪ–ಪುಣ್ಯವೆಂದರೇನು ಎಂದು ವ್ಯಾಖ್ಯೆ ಮಾಡುವ ಪ್ರಯತ್ನ ಮಾಡಿರುವರು. ಯಶಪಾಲ್‌ರವರ 'ಝೂಟಾ ಸಚ್'(ಎರಡು ಭಾಗ)ದಲ್ಲಿ ೧೯೪೭ ರ ವರೆಗಿನ ಸಾಮಾಜಿಕ, ರಾಜನೈತಿಕ ಪರಿಸ್ಥಿತಿಗಳ ಅತ್ಯಂತ ಸಜೀವ ಚಿತ್ರವಿದೆ. ಪ್ರಥಮಭಾಗದಲ್ಲಿ ಭಾರತದ ವಿಭಜನೆಯ ಸ್ಪಷ್ಟಚಿತ್ರವಿದೆ. ಸಾಂಪ್ರದಾಯಿಕ ವಿಚಾರ ಸಮಾಜ ಹಾಗೂ ರಾಜನೀತಿಗೆ ಹೇಗೆ ವಿಷ ಬೆರೆಸುತ್ತದೆ, ಮನುಷ್ಯತ್ವ ಹೇಗೆ ಪಶುತ್ವಕ್ಕೆ ಪರಿವರ್ತನೆಗೊಳ್ಳುತ್ತದೆ, ನಗ್ನನೃತ್ಯ ಹೇಗೆ ಪ್ರಾರಂಭವಾಗುತ್ತದೆ ಎಂಬುದನ್ನು ಚಿತ್ರಿಸಿರುವರು. ಇಲ್ಲಿ ಪಾತ್ರಗಳಿಗೆ ಮಹತ್ವವಿಲ್ಲ, ಪರಿಸ್ಥಿತಿ ಮುಖ್ಯ. ಎರಡನೆ ಭಾಗದಲ್ಲಿ ವಿಭಜನೆಯ ಬಳಿಕದ ಜನಜೀವನ, ಪರಿಸ್ಥಿತಿಗಳ ಚಿತ್ರವಿದೆ.

ಹಿಂದಿಯ ಸಾಮಾಜಿಕ ಕಾದಂಬರಿಕಾರರಲ್ಲಿ ಯಜ್ಞದತ್ತ ಶರ್ಮಾರವರಿಗೆ ಮಹತ್ವಪೂರ್ಣ ಸ್ಥಾನವಿದೆ. 'ವಿಚಿತ್ರ ತ್ಯಾಗ', 'ಇನ್ಸಾನ್', 'ನಿರ್ಮಾಣ-ಪಥ' 'ಅಂತಿಮಚರಣ' ಮೊದಲಾದ ಒಂದು ಡಜನ್‌ಗಿಂತಲೂ ಹೆಚ್ಚು ಕಾದಂಬರಿಗಳನ್ನು ಬರೆದಿರುವರು. ಇವರ ಕೃತಿಗಳು ಅಶ್ಲೀಲದಿಂದ ತುಂಬಾ ದೂರ ನಿಂತಿವೆ. ಹರ್ಷನಾಥರು ತಮ್ಮ 'ರಕ್ತ ಕೆ ಆಂಸು' ಎಂಬ ಪ್ರೌಢ ಕಾದಂಬರಿಯಲ್ಲಿ ಮಾನವಮನದ (ಸ್ತ್ರೀ ಹೃದಯದ) ಅಂತರಾಳದಲ್ಲಿ ಹುದುಗಿರುವ ಭಾವನೆಗಳನ್ನು ಬಯಲಿಗೆಳೆದಿರುವರು. ಪ್ರಭಾಕರ ಮಾಚ್ವೆಯವರ 'ಪರಂತು' ಎಂಬ ಕೃತಿಯಲ್ಲಿ ಮಧ್ಯಮವರ್ಗದ ಜೀವನ ಚಿತ್ರವಿದೆ.

ಹಿಂದಿಯಲ್ಲಿ ಸಫಲ ಐತಿಹಾಸಿಕ ಕಾದಂಬರಿಗಳ ಅಭಾವವಿದೆ ಎಂದರೂ ತಪ್ಪಾಗಲಾರದು. ಈ ಕ್ಷೇತ್ರದಲ್ಲಿ ಬರುವ ಲೇಖಕರಾರೂ ಇತಿಹಾಸದ ವಿದ್ವಾಂಸರಾಗದಿರುವುದೇ ಈ ಅಭಾವಕ್ಕೆ ಮುಖ್ಯ ಕಾರಣ. ಆದರೂ ವೃಂದಾವನಲಾಲ್ ವರ್ಮಾರವರ 'ಝಾಂಸೀ ಕೀ ರಾಣಿ', 'ಮೃಗನಯನಿ' ಈ ಕ್ಷೇತ್ರದ ಪ್ರಸಿದ್ಧ ಕೃತಿಗಳು. ಪ್ರಥಮ ಕೃತಿಯಲ್ಲಿ ಬುಂದೇಲಖಂಡದ ಸಜೀವ ಸಾಮಾಜಿಕ ಹಾಗೂ ಯಥಾರ್ಥ ರಾಜನೈತಿಕ ಚಿತ್ರವಿದ್ದರೆ, ಎರಡನೆಯದು ಗ್ವಾಲಿಯರ್ ರಾಜ ಮಾನಸಿಂಹ ತೋಮರ(೧೪೮೬-೧೫೧೬)ನಿಗೆ ಸಂಬಂಧಪಟ್ಟದ್ದು. ಅವನ ರಾಣಿಯಲ್ಲೊಬ್ಬಳಾದ ಮೃಗನಯನಿ ಇದರ ನಾಯಕಿ 'ಗಢಕುಂಡಾರ್', 'ವಿರಾಟಕೀ ಪದ್ಮಿನಿ' ವರ್ಮಾರವರ ಇನ್ನೆರಡು ಕಾದಂಬರಿಗಳು.

ಚತುರ್‌ಸೇನ್ ಶಾಸ್ತ್ರಿಯವರ 'ವೈಶಾಲಿ ಕೀ ನಗರವಧು' ಎಂಬ ದೀರ್ಘ ಐತಿಹಾಸಿಕ ಕಾದಂಬರಿಯಲ್ಲಿ ಬೌದ್ಧ ಕಾಲದ (ಮಗಧದಲ್ಲಿ ಬಿಂಬಸಾರನ ರಾಜ್ಯವಿತ್ತು) ಭಾರತದ ಸಾಮಾಜಿಕ, ರಾಜನೈತಿಕ ಹಾಗೂ ಧಾರ್ಮಿಕ ಪರಿಸ್ಥಿತಿಗಳ ಒಂದು ವ್ಯಾಪಕ ವಿವರಣೆಯನ್ನಿತ್ತಿರುವರು. 'ಸೋನಾ ಔರ್ ಖೂನ್' ಎಂಬುದು ಅವರ ಇನ್ನೊಂದು ದೀರ್ಘ ಐತಿಹಾಸಿಕ ಕಾದಂಬರಿ ಎರಡು ಭಾಗಗಳಲ್ಲಿದೆ ಕಾದಂಬರಿ ಶಿಲ್ಪದ ದೃಷ್ಟಿಯಲ್ಲಿ ಇದೊಂದು ಹೊಸ ಪ್ರಯೋಗ. ಇಂಗ್ಲೀಷರು ಈ ದೇಶದ ದೊಡ್ಡ ಶಕ್ತಿಗಳನ್ನು ಒಂದೊಂದಾಗಿ ಹೇಗೆ ಧ್ವಂಸಗೊಳಿಸಿದರು ಎಂಬುದು ಮೊದಲನೆ ಭಾಗದ ವಿಷಯವಾದರೆ ಎರಡನೆಯದರಲ್ಲಿ ಈಸ್ಟ್ ಇಂಡಿಯಾ ಕಂಪನಿ ಬಂದ ಹಾಗೂ ಶಾಸನಕ್ಕೆ ಸಂಬಂಧಪಟ್ಟ ಘಟನೆಗಳ ವರ್ಣನೆ ಇದೆ.

ಯಶಪಾಲ್‌ರವರ 'ದಿವ್ಯಾ' ಪ್ರಸಿದ್ಧ ಐತಿಹಾಸಿಕ ಕಾದಂಬರಿ. ಲೇಖಕರು ಇದರಲ್ಲಿ ಬೌದ್ಧ ಕಾಲದ ಭಾರತದ ಸಾಮಾಜಿಕ, ರಾಜನೈತಿಕ ಹಾಗೂ ಧಾರ್ಮಿಕ ಪರಿಸ್ಥಿತಿಗಳ ವಿಶ್ಲೇಷಣಾತ್ಮಕ ಚಿತ್ರವನ್ನು ಪ್ರಸ್ತುತಗೊಳಿಸಿರುವರು. ಮನುಷ್ಯನು ಪರಿಸ್ಥಿತಿಗಳ ದಾಸನಲ್ಲ; ಅವನು ಅವನ್ನು ಪರಿಹರಿಸುವುದೇ ಅಲ್ಲದೆ ಪರಿಸ್ಥಿತಿಗಳನ್ನು ನಿರ್ಮಿಸಲೂ ಸಮರ್ಥನು; ಅವನು ಪ್ರಾಕೃತಿಕ ಹಾಗೂ ಭೌತಿಕ ಪರಿಸ್ಥಿತಿಗಳನ್ನು

ಪರಿವರ್ತಿಸುವನು, ಸಾಮಾಜಿಕ ಪರಿಸ್ಥಿತಿಗಳ ನಿರ್ಮಾತ ಎಂಬ ಜೀವನದರ್ಶನವನ್ನು ಒತ್ತಿ ಹೇಳಿರುವರು. ಭಗವತೀಚರಣ ವರ್ಮಾರವರು ತಮ್ಮ 'ಚಿತ್ರಲೇಖಾ'ದಲ್ಲಿ ಮನುಷ್ಯ ಪರಿಸ್ಥಿತಿಗಳ ದಾಸ ಎಂದು ಎತ್ತಿ ತೋರಿಸಿರುವರು.

ಆಚಾರ್ಯ ಹಜಾರಿಪ್ರಸಾದ ದ್ವಿವೇದಿಯವರ 'ಬಾಣಭಟ್ಟಕೀ ಆತ್ಮಕಥಾ' ಶೈಲಿ, ಕಥಾಸಂಚಯ ಹಾಗೂ ಪರಿಸ್ಥಿತಿ ಸಂಯೋಜನೆಯ ದೃಷ್ಟಿಯಲ್ಲಿ ಒಂದು ಉತ್ಕೃಷ್ಟ ಐತಿಹಾಸಿಕ ಕಾದಂಬರಿ. ಇದರಲ್ಲಿ ಹರ್ಷನ ಕಾಲದ ಸಜೀವ ಚಿತ್ರವಿದೆ. ಇಲ್ಲಿ ಭಾರತೀಯ ಸಂಸ್ಕೃತಿ, ಪ್ರಾಚೀನ ಪರಂಪರೆಗಳ ಅತ್ಯಂತ ಗಂಭೀರ ವಿವೇಚನೆಯನ್ನು, ಲೇಖಕರ ಪಾಂಡಿತ್ಯವನ್ನು ಕಾಣಬಹುದು.

'ಬೆಕಸೀಕಾ ಮಜಾರ್' ಪ್ರತಾಪನಾರಾಯಣ ಶ್ರೀವಾಸ್ತವರವರ ಐತಿಹಾಸಿಕ ಕಾದಂಬರಿ. ಇದರಲ್ಲಿ ೧೮೫೭ ರ ಪ್ರಥಮ ಸ್ವಾತಂತ್ರ್ಯ ಆಂದೋಲನ ಹಾಗೂ ಜನಕ್ರಾಂತಿಯನ್ನು ಅತ್ಯಂತ ಸತ್ಯನಿಷ್ಠವಾಗಿಯೂ ಸಜೀವವಾಗಿಯೂ ಚಿತ್ರಿಸಿರುವರು. ತತ್ಕಾಲೀನ ಎಲ್ಲಾ ಘಟನೆ, ಘಟನಾಸ್ಥಳ ಹಾಗೂ ಪರಿಸ್ಥಿತಿಗಳ ಚಿತ್ರವನ್ನು ಪಾಠಕರ ಮುಂದಿಡುವುದರಲ್ಲಿ ಲೇಖಕನಿಗಿಲ್ಲಿ ಸಾಫಲ್ಯ ದೊರೆತಿದೆ.

ಡಾ. ಯತೀಂದ್ರರ 'ಆಚಾರ್ಯ ಚಾಣಕ್ಯ', ಗಿರಿಜಾಶಂಕರ್ ಪಾಂಡೇಯವರ 'ಚೇತ್‌ಸಿಂಹ ಕಾ ಸಪ್ನಾ', ರಘುವೀರಶರಣ ಮಿಶ್ರರವರ 'ಬಲಿದಾನ', ರಾಂಗೇಯ ರಾಘವರವರ 'ಮುರ್ದೋಂಕಟೀಲಾ', ಜಯಶಂಕರ್ ಪ್ರಸಾದರವರ 'ಈರಾವತಿ' ಮೊದಲಾದ ಕೃತಿಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.

ಸಾಹಿತ್ಯ ಸಮಾಜದ ಪ್ರತಿಬಿಂಬ. ಸಮಾಜ ಬದಲಾದಂತೆ ಸಾಹಿತ್ಯವೂ ಬದಲಾಗುತ್ತಿದೆ. ಇಂದಿನ ಯುಗ ತೀವ್ರಗತಿಯಲ್ಲಿ ಪರಿವರ್ತನಗೊಳ್ಳುತ್ತಿದೆ. ಇಂತಹ ಯುಗದಲ್ಲಿ ಸಾಹಿತಿಗೂ ತನ್ನ ಲಕ್ಷ್ಯ, ಉದ್ದೇಶ, ದೃಷ್ಟಿಕೋನವನ್ನು ಸ್ವಾಭಾವಿಕ-ವಾಗಿ ಬದಲಾಯಿಸಲೇಬೇಕಾಗುತ್ತದೆ. ಇಂದು ಸಮಯವೆಂಬುದು ಬಹು-ಮೂಲ್ಯವಾಗಿದೆ. ಸ್ವಲ್ಪ ಸಮಯದಲ್ಲಿ ತುಂಬಾ ತಿಳಿಯಬಯಸುವವನು ಈ ಯುಗದ ಮಾನವ. ಎರಡೆರಡು ಖಂಡಗಳಲ್ಲಿ ಪ್ರಕಟವಾದ ಚತುರಸೇನ್ ಶಾಸ್ತ್ರಿ-ಯವರ 'ವಯಂ ರಕ್ಷಾಮಃ' 'ವೈಶಾಲಿ ಕೀ ನಗರವಧು', 'ಸೋನಾ ಔರ್ ಖೂನ್', ಪ್ರತಾಪನಾರಾಯಣ ಶ್ರೀವಾಸ್ತವರವರ 'ವಿಕಾಸ', ಯಶಪಾಲ್‌ರವರ 'ಝೂಟಾ ಸಚ್' ಮೊದಲಾದ ಕೃತಿಗಳನ್ನು ಓದುವ ಸಾಹಸ ಮಾಡುವ ಓದುಗರು ಬಹಳ ಕಡಿಮೆ ಸಿಗಬಹುದು.

ಹಿಂದಿಯಲ್ಲಿ ೪೦, ೪೫ ರಷ್ಟು ಬೆಲೆಬಾಳುವ ದೀರ್ಘ ಕಾದಂಬರಿಗಳು ಪ್ರಕಟವಾಗಿದ್ದವು. ಆದರೆ ಇಂದು ಅಂತಹ ಸಾಹಸ ಲೇಖಕ, ಪ್ರಕಾಶಕ ಹಾಗೂ ಓದುಗರಿಗಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಹಿಂದಿಯಲ್ಲಿ ಲಘುಕಾದಂಬರಿಯ ಜನ್ಮ-ವಾಯಿತು. ೧೯೫೦ರ ಬಳಿಕವೇ ಇದರ ವಿಕಾಸವೆನ್ನಬಹುದು. ಇದು ಕಾದಂಬರಿ-ಯಿಂದಲೇ ಹುಟ್ಟಿತಾದರೂ, ಒಂದು ಹೊಸ ವಿಧದಲ್ಲಿಯೇ ಸ್ಥಾಪನೆಗೊಂಡಿತು. ಇಲ್ಲಿ

ಕಾದಂಬರಿಯ ಅನಾವಶ್ಯಕ ವಿಸ್ತಾರವಿಲ್ಲ; ಕಲಾತ್ಮಕ ಸಮಗ್ರತೆಯೇ ಅಲ್ಲಿ ಮುಖ್ಯ. ಸಾಮಾನ್ಯತಃ ಮುಖ್ಯ ಕತೆ ಮಾತ್ರ ಬರುತ್ತದೆ; ಉಪಕತೆ, ಪ್ರಾಸಂಗಿಕ ಕತೆಗಳಿಗೆ ಅಸ್ಪದ ಬಹಳ ಕಡಿಮೆ. ಅದಲ್ಲದೆ ಕತೆಗಿಂತಲೂ ಮುಖ್ಯ ಪಾತ್ರ. ಲಘುಕಾದಂಬರಿಯಲ್ಲಿ ಲೇಖಕನ ವೈಯಕ್ತಿಕ ವಿಷಯಾನುಭೂತಿಗೆ ಪ್ರಮುಖತೆ ಹೆಚ್ಚು. ಕತೆ ತೀವ್ರಗಾಮಿಯೂ ತೀಕ್ಷ್ಣತಮವೂ ಆಗಿರಬೇಕು. ವರ್ಣನೆ ಸಂಕ್ಷಿಪ್ತವಾಗಿರಬೇಕು. ವಾತಾವರಣದ ಅಭಾವ ಹಾಗೂ ಕಡಿಮೆ ಪಾತ್ರಗಳು (೩-ಅಥವಾ ೪ ಮುಖ್ಯ ಪಾತ್ರಗಳು) ಇವು ಅಗತ್ಯ. ಲಘುಕಾದಂಬರಿಯ ಕತೆ ಸಾಮಾನ್ಯತಃ ಯಾವುದಾದರೊಂದು ವ್ಯಕ್ತಿ(ನಾಯಕ-ನಾಯಕಿ)ಯನ್ನು ಕೇಂದ್ರವೆಂದು ಗ್ರಹಿಸಿ ನಿರ್ಮಿಸಲಾದಂಥದು. ಆ ವ್ಯಕ್ತಿ ಜನಸಾಮಾನ್ಯರಲ್ಲೊಬ್ಬನಾಗಿರುವುದಾದರೂ ಅವನ ಅಂತರ್ಮುಖಿ ಸಂಘರ್ಷದ ಶಕ್ತಿ ಬಹಳ ಮಹತ್ವಪೂರ್ಣವಾಗಿರುತ್ತದೆ. ಸಾಧಾರಣ ವ್ಯಕ್ತಿಯಲ್ಲಿ ಅಸಾಧಾರಣ ವ್ಯಕ್ತಿತ್ವ ತುಂಬಿ ಸಮಾಜದಲ್ಲಿ ಹೊಸ ಮಾನ್ಯತೆ ಪ್ರಸ್ತುತಗೊಳಿಸುವುದೇ ಲಘುಕಾದಂಬರಿಯ ಮುಖ್ಯ ಉದ್ದೇಶ. ಸಂಕೇತತೆ ಸಂಪೂರ್ಣ ಲಘು-ಕಾದಂಬರಿಯ ಬೆನ್ನೆಲುಬು. ದೊಡ್ಡ ದೊಡ್ಡ ಘಟನೆಗಳನ್ನು ಸಂಕೇತದಲ್ಲೇ ಉಲ್ಲೇಖಿಸುವುದು ಲೇಖಕನ ಸಾಫಲ್ಯವನ್ನು ಹೊಂದಿಕೊಂಡಿರುತ್ತದೆ. ಇಲ್ಲಿ ಭಾಷೆ ಹಾಗೂ ವ್ಯಾಕರಣದ ಬಂಧನವೆಂಬುದಿಲ್ಲ. ಅದು ಲೇಖಕನ ಅನುಭವವನ್ನು ವ್ಯಕ್ತಗೊಳಿಸುವ ಮಾಧ್ಯಮ. ಪ್ರತಿಯೊಬ್ಬ ಲಘುಕಾದಂಬರಿಕಾರನೂ ವಿಷಯಕ್ಕನುಸಾರವಾಗಿ ಭಾಷೆಯನ್ನು ಪ್ರಯೋಗಿಸಿರುವನು.

ಈ ಲಘುಲೇಖನದಲ್ಲಿ ಸಂಪೂರ್ಣ ಇತಿಹಾಸವನ್ನು ಪ್ರಸ್ತುತಗೊಳಿಸಲು ಸಾಧ್ಯವಿಲ್ಲ, ಬರೀ ಪಕ್ಷಿನೋಟ ಮಾತ್ರವಿದೆ. ೧೯೩೬ರ ವರೆಗೆ ಹಿಂದಿ ಕಾದಂಬರಿ ಕ್ಷೇತ್ರದಲ್ಲಿ ವ್ಯಕ್ತಿವಾದ, ನೀತಿ, ಮನೋವಿಜ್ಞಾನ ಹಾಗೂ ಫ್ರಾಯ್ಡ್‌ನ ಪ್ರಭಾವವಿತ್ತು. ಪ್ರೇಮಚಂದರಂತಹ ಸಶಕ್ತ ಸಮಾಜವಾದಿ ಲೇಖಕರು ಇಲ್ಲವಾದುದರಿಂದ ಲಘುಕಾದಂಬರಿ ಜನ್ಮ ತಾಳಿತು. ಲಘುಕಾದಂಬರಿಕಾರರು ಸಮಾಜದಲ್ಲಿ ಹಬ್ಬಿರುವ ಹಲವಾರು ಸಮಸ್ಯೆಗಳನ್ನು ಎತ್ತಿಕೊಂಡು ಪಾಠಕರ ಮುಂದಿಟ್ಟರು. ನಾಗಾರ್ಜುನರವರ 'ಬಲಚನಮಾ', 'ಬಾಬಾ ಬಟೇಸರ್‌ನಾಥ್', 'ದುಖಮೋಚನ್' 'ವರುಣಕೇ ಬೇಟೆ' ಮೊದಲಾದ ಕೃತಿಗಳಲ್ಲಿ ಭಾರತೀಯ ಜನಜೀವನ ಸಮಸ್ಯೆ, ಪ್ರಗತಿಪಥದಲ್ಲಿ ಮುಂದೆ ಸಾಗಲು ವಿರೋಧಿಶಕ್ತಿಗಳೊಡನೆ ಹೋರಾಡುತ್ತಿರುವುದನ್ನು ನೋಡಬಹುದು. ಡಾ. ಧರ್ಮವೀರ ಭಾರತಿಯವರ 'ಸೂರಜ್ ಕಾ ಸಾತ್ವಾ ಘೋಡಾ'ದಲ್ಲಿ ಮಾನವಸಂವೇದನೆ ಕೃತಿಯ ಸಂಜೀವಿನೀಶಕ್ತಿಯಾಗಿ ವ್ಯಕ್ತವಾಗಿದೆ. ನಿರಾಲಾರವರ 'ಬಿಲ್ಲೆಸುರ್ ಬಕ್‌ರಿಹಾ', 'ಕುಲ್ಲಿಭಾಟ್' ಜೀವನದ ಕಟು ಸತ್ಯ ಹಾಗೂ ಸಂಸಾರದ ಯಥಾರ್ಥ ಅಭೂತಪೂರ್ವ ಶೈಲಿಯಲ್ಲಿ ಪ್ರಕಟಗೊಂಡಿವೆ. ರಾಂಗೇಯ ರಾಘವರವರ 'ಉಬಾಲ್' ಹಾಗೂ 'ಹುಜೂರ್'ನಲ್ಲಿ ಮಾನವಮನದ ಆಕ್ರೋಶ, ಕಾಮವಾಸನೆ ಮತ್ತು ಅತಿಯಥಾರ್ಥತೆಯ

ಚಿತ್ರವಿದೆ. ಉಪೇಂದ್ರನಾಥ್ ಅಶ್ಕರವರ 'ಪತ್ಥರ್ ಅಲ್ ಪತ್ಥರ್'ದಲ್ಲಿ ಕಾಶ್ಮೀರ ಜನಜೀವನ ಮತ್ತೆ ರೊಟ್ಟಿಗಾಗಿ ಹೋರಾಡುವ ಚಿತ್ರ ಅತ್ಯಂತ ಸ್ವಾಭಾವಿಕವಾಗಿ ವ್ಯಕ್ತವಾಗಿದೆ. ಗಿರಿಧರ್ ಗೋಪಾಲರವರ 'ಚಾಂದನಿಕೇ ಖಂಡಹರ್' ಮತ್ತು ಕೃಷ್ಣ ಬಲದೇವ್ ವೈದರ 'ಉಸ್ಕಾ ಬಚ್‌ಪನ್' ಸಾಮಾಜಿಕ ಸಮಸ್ಯೆಗಳನ್ನೆತ್ತಿರುವ ಉಲ್ಲೇಖನೀಯ ಕೃತಿಗಳು. ಕಮಲೇಶ್ವರರವರ 'ಏಕ್‌ಸಡಕ್ ಸತ್ತಾವನ್ ಗಲಿಯಾ', 'ಲೌಟೀಹುವೆ ಮುಸಾಫಿರ್' ಮತ್ತು 'ತೀಸರಾ ಆದ್ಮಿ' ಯಲ್ಲಿ ಮಧ್ಯಮವರ್ಗದ ಸಮಾಜ ಹಾಗೂ ವ್ಯಕ್ತಿಯ ಯಥಾರ್ಥ ಚಿತ್ರವಿದೆ. ಈ ಕಾದಂಬರಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿ (ಪಾತ್ರ) ಸ್ವತಂತ್ರ ಭಾರತದ ನಾಗರಿಕನು. ಅವನು ಜೀವನದ ಪ್ರತಿ ಕೇಂದ್ರದಲ್ಲೂ ಸಂಘರ್ಷಿಸುವನು; ಪ್ರತಿ ಹೆಜ್ಜೆಗೂ ಒಂದು ಹೊಸ ಸಂಘರ್ಷವನ್ನು ಎದುರಿಸಲು ಸಿದ್ಧವಿರುವನು. ಅಜ್ಞೇಯರವರ 'ಅಪ್ನೆ ಅಪ್ನೆ ಅಜ್‌ನಬಿ' ತನ್ನಲ್ಲೇ ಒಂದು ವಿಶಿಷ್ಟ ಕೃತಿ.

೧೯೬೦ರ ಬಳಿಕ ಕಾದಂಬರಿ ಕ್ಷೇತ್ರದಲ್ಲಿ ತೀವ್ರ ಪ್ರಗತಿಯಾಯಿತು. ಅದರ ಕ್ರಮಿಕ ವಿಕಾಸವನ್ನು ತೋರಿಸುವುದು ಕಠಿಣ ಕಾರ್ಯವೆನಿಸುತ್ತದೆ. 'ಪಚ್‌ಪನ್ ಖಂಭೆ ಲಾಲ್ ದೀವಾರೆ' ಉಷಾಪ್ರಿಯಂವದರ ಸುಂದರ ಹಾಗೂ ಸುರುಚಿಪೂರ್ಣ ಕಾದಂಬರಿ. ಅವರು 'ರುಕೋಗಿ ನಹಿ ರಾಧಿಕಾ'ದಲ್ಲಿ ಸುಶಿಕ್ಷಿತ ಬುದ್ಧಿಜೀವಿ ಮತ್ತು ಮಧ್ಯಮ ಪರಿವಾರದ ತರುಣಿಯೊಬ್ಬಳ ಜೀವನವನ್ನು ಸ್ವಾಭಾವಿಕವಾಗಿ ಚಿತ್ರಿಸಿರುವರು. ಯಶಪಾಲರ 'ಬಾರಹ ಘಂಟೆ'ಯಲ್ಲಿ ನಾರಿಯ ಕರುಣ ಕತೆ ಇದೆ. ರಾಜೇಂದ್ರ ಯಾದವರವರು 'ಅನ್‌ದೇಖೆ ಅನ್‌ಜಾನ್ ಪುಲ್'ದಲ್ಲಿ ಕುರೂಪಿ ಯುವತಿಯೊಬ್ಬಳ ಮನಸ್ಸಿನ ಮನೋವೈಜ್ಞಾನಿಕ ವಿಶ್ಲೇಷಣೆ ಮಾಡಿರುವರು. 'ಕುಲ್ಟಾ' ಅವರ ಇನ್ನೊಂದು ಸಫಲ ಕಾದಂಬರಿ. ಪ್ರಸಿದ್ಧ ಕಾದಂಬರಿಕಾರ ಫಣೀಶ್ವರನಾಥ್ 'ರೇಣು'ರವರ ಲಘುಕಾದಂಬರಿಗಳಲ್ಲಿ 'ಜುಲೂಸ್' ಮತ್ತು 'ಕಿತ್ನೆ ಚೌರಾಹೆ' ಸಫಲಕೃತಿಗಳು. ತರುಣ ಕತೆಗಾರ ಅಮರಕಾಂತ್‌ರವರ 'ಸೂಖೆ ಪತ್ತೆ' ಮತ್ತು 'ಪರಾಯಿ ಡಾಲ್‌ಕಾ ಪಂಛಿ' ಪ್ರಸಿದ್ಧ ಕಾದಂಬರಿಗಳು. ಎರಡನೆ ಕೃತಿಯಲ್ಲಿ ಕಾಮುಕ ಯುವಕನ ಚಾರಿತ್ರ್ಯದ ಮನೋವೈಜ್ಞಾನಿಕ ಚಿತ್ರವಿದೆ. ನಿರ್ಮಲ ವರ್ಮಾರವರ 'ವೆ ದಿನ್' ರಾಜಕಮಲ್ ಚೌಧರಿಯವರ 'ಮಛಲೀ ಮರೀಹುಯಿ', ಶಾಂತಾ ಸಿನ್ಹಾರವರ 'ಅತೃಪ್ತಾ', ಶಾಸಿಯವರ 'ನದಿ ಔರ್ ಸೀಪಿಯಾ', ದುಷ್ಯಂತಕುಮಾರರ 'ತರ್ಟ್ ಕೀ ಖೋಜ್', ಮೆಹರುನ್ನಿಸಾ ಪರವೇಜ್‌ರವರ 'ಆಂಖೋ ಕಿ ದಹಲೀಜ್', ರಮೇಶ್ ಭಕ್ಷಿಯವರ 'ಫಿಸಾಹುವಾ ಚೆಹರಾ' ಭೀಷ್ಮ ಸಾಹನಿ 'ರುಹೋಷೆ' ಮೊದಲಾದ ಕಾದಂಬರಿಗಳು ಉಲ್ಲೇಖನೀಯ ಕೃತಿಗಳು. ಇವುಗಳಲ್ಲಿ ಲೇಖಕರ ಜೀವನಾನುಭವ ವ್ಯಕ್ತವಾಗಿವೆ.

ಅಮೃತಲಾಲ್ ನಾಗರ್‌ರವರ 'ಬೂಂದೆ ಔರ್ ಸಮುದ್ರ' ಮತ್ತು 'ಅಮೃತ

ಔರ್ ವಿಷ್', ರೇಣುರವರ 'ಮೈಲಾ ಅಂಚಲ್', 'ಪರತಿ ಪರಿಕಥಾ', ಇಲಾಚಂದ್ರ ಜೋಶಿಯವರ 'ಜಹಾಜ್ ಕಾ ಪಂಛಿ', ಮೋಹನ ರಾಕೇಶರವರ 'ಅಂಧೇರೆ ಬಂದ್ ಕಮರೆ', ರಾಜೇಂದ್ರ ಯಾದವರವರ 'ಉಖಡೆ ಹುಏ ಲೋಗ್', ರಾಹೀ ಮಾಸೂಮ್ ರಾಜಾರವರ 'ಆಧಾ ಗಾಂವ್', ಶಾನಿಯವರ 'ಕಾಲಾ ಜಲ್', ಶಿವ–ಪ್ರಸಾದಸಿಂಹರವರ 'ಅಲಗ್ ಅಲಗ್ ವೈತರಣಿ', ಶ್ರೀಲಾಲ್ ಶುಕ್ಲರವರ 'ರಾಗ್ ದರಬಾರಿ', ಮನ್ನು ಭಂಡಾರಿಯವರ 'ಆಪ್ಕಾ ಬಂಟೀ', ರಮೇಶ್ ಉಪಾಧ್ಯಾಯರವರ 'ಚಕ್ರಬದ್ಧ', ಕೃಷ್ಣ ಸೋಬತಿಯವರ 'ಡಾರ್ ಸೆ ಬಿಛುಡಿ' ಮತ್ತು 'ಮಿತ್ರೋಮರ್ ಜಾನಿ', ಹೃದಯೇಶ್ ರವರ 'ಗಾಂಠ್' ಮೊದಲಾದ ಕಿರುಕಾದಂಬರಿಗಳಿಗೆ ಮಹತ್ವಪೂರ್ಣ ಸ್ಥಾನವಿದೆ.

ಚೇತನಾ–ಪ್ರವಾಹ, ಕಾಲ–ವಿಪರ್ಯಯ ಹಾಗೂ ಪೂರ್ವದೀಪ್ತಿಯಂತಹ ಶೈಲಿಗಳನ್ನು ಹಿಂದಿ ಲಘುಕಾದಂಬರಿಗಳಲ್ಲಿ ಕಾಣಬಹುದು. ಗಿರಿಧರ್ ಗೋಪಾಲರವರ 'ಚಾಂದ್ನಿ ಕಾ ಖಂಡಹರ್', ಯಶಪಾಲರವರ 'ಬಾರಹಾ ಘಂಟೆ' ಕಾದಂಬರಿಗಳಲ್ಲಿ ಕ್ರಮಶಃ ೨೪ ಹಾಗೂ ೧೨ ತಾಸುಗಳ ಕತೆಯಿದೆ. ಈ ಶಿಲ್ಪಪ್ರಯೋಗದಿಂದಾಗಿ ಅವು ಅತ್ಯಧಿಕ ಲೋಕಪ್ರಿಯವಾಗುತ್ತಿವೆ. 'ಸೂರಜ್ ಕಾ ಸಾತ್ವಾ ಘೋಡಾ'. 'ಬಲಚನಮಾ', 'ಕಸ್ತೂರಿ', 'ಅಪ್ನೆ ಅಪ್ನೆ ಅಜನಬಿ'. 'ಪಚ್ಪನ್ ಖಂಭೆ ಲಾಲ್ ದೀವಾರೆ'.'ತೀಸ್ರಾ ಆದ್ಮಿ'.'ವೇ ದಿನ್'. 'ಉಸ್ಕಾ ಬಚ್ಪನ್' ಮೊದಲಾದ ಕೃತಿಗಳು ಸಾಕಷ್ಟು ಪ್ರಭಾವಕಾರಿಯಾಗಿವೆ. ಪ್ರಭಾಕರ ಮಾಚ್ವೆಯವರ 'ಪರಂತು' ಚೇತನಾಪ್ರವಾಹದ ಸುಂದರ ಉದಾಹರಣೆ. ರಮೇಶ ಬಕ್ಷಿಯವರು 'ಅಠಾರಹ ಸೂರಜ್ ಕೆ ಪೌಧೆ'ಯಲ್ಲಿ ರೈಲಿನ ಛಕ್ ಛಕ್ ಧ್ವನಿಯಲ್ಲೇ ಕತೆ ಹೇಳಿ ಮುಗಿಸಿರುವರು.

ಲಘುಕಾದಂಬರಿಗಳಲ್ಲಿ ಕತೆಗೆ ಅಪ್ರಧಾನತೆ, ಪಾತ್ರಕ್ಕೆ ಮಹತ್ವ. ಅಜ್ಞೇಯ, ಯಶಪಾಲ್, ಭಾಗವತೀಚರಣ ವರ್ಮಾ, ಡಾ. ಭಾರತಿ, ಪ್ರಭಾಕರ ಮಾಚ್ವೆ, ರಾಮೇಶ್ವರ ಶುಕ್ಲ ಅಂಚಲ್ ಹಾಗೂ ಪರವರ್ತಿ ಕಾದಂಬರಿಕಾರರ ಕೃತಿಗಳಲ್ಲಿ ಈ ವಿಷಯವನ್ನು ನೋಡಬಹುದು. ಬರಬರುತ್ತಾ ಹೊಸ ಕಾದಂಬರಿಗಳಲ್ಲಿ ಸ್ವರೂಪವೇ ಹೊಸದಾಯಿತು. ಭಾರತಿಯವರ 'ಸೂರಜ್ ಕಾ ಸಾತ್ವಾ ಘೋಡಾ'. ಶಿವಪ್ರಸಾದ ಮಿಶ್ರ ರುದ್ರರವರ 'ಬಹತಿ ಗಂಗಾ' ಮೊದಲಾದ ಕೃತಿಗಳಲ್ಲಿ ಕತೆಯ ಅಕ್ರಮಬದ್ಧತೆಯನ್ನು ಕಾಣಬಹುದು.

ಯಥಾರ್ಥವಾದದ ವಿಕಸಿತ ಅಂಗವೊಂದು ಹಿಂದಿ ಸಾಹಿತ್ಯವನ್ನು ಪ್ರವೇಶಿಸಿದೆ. ಅದಕ್ಕೆ ಪ್ರಕೃತವಾದವೆನ್ನುವರು. ಇದರ ಪ್ರಕಾರ ಮನುಷ್ಯನು ಪೂರ್ಣತಃ ಪ್ರಕೃತಿಯ ಒಂದು ಅಂಗ. ಸಾಹಿತ್ಯದಲ್ಲಿ ಇದು ಪ್ರಕೃತಿಯ ಬಗ್ಗೆ ಆತ್ಮೀಯತೆ ಹಾಗೂ ಅದರ ಸೌಂದರ್ಯದ ಬಗ್ಗೆ ಆಸ್ಥೆ ವ್ಯಕ್ತಗೊಳಿಸುವ ಉದ್ರೇಕದ ರೂಪದಲ್ಲಿ ಬಂದಿದೆ. ಪ್ರಕೃತವಾದಿ ಸಾಹಿತ್ಯ ಜೀವನದ ನಗ್ನಸತ್ಯವನ್ನು ಓದುಗರ ಮುಂದಿಡು-

ತ್ತವೆ; ಯಾವುದನ್ನೂ ಗುಪ್ತವಾಗಿರಿಸುವುದಿಲ್ಲ. ಈ ವಾದದಲ್ಲಿ ಸ್ತ್ರೀಯ ನಾರಿತ್ವವನ್ನು ನೋಡುವುದೇ ಹೊರತು ಇನ್ನಿತರ ಸಾಮಾಜಿಕ ಸಂಬಂಧವನ್ನೇ ಮರೆತುಬಿಡುತ್ತಾರೆ. ಇಲ್ಲಿ ಮನುಷ್ಯನು ಪಶು, ಕ್ರಿಮಿ–ಕೀಟಗಳ ರೂಪದಲ್ಲಿ ನಮ್ಮ ಮುಂದೆ ಬರುತ್ತಾನೆ. ಅವನ ಕಾಮವಾಸನೆ ಕೃತಿಗಳಲ್ಲಿ ವ್ಯಕ್ತವಾಗುವುದು. ಈ ಮಾರ್ಗದಲ್ಲಿ ನಡೆದ ಲೇಖಕರು ಮನುಷ್ಯನ ಶರೀರವನ್ನು ಸೀಳುವುದೇ ಹೊರತು, ಅದರಲ್ಲಡಗಿರುವ ಗುಣಗಳನ್ನು ನೋಡದಿರುವ ಕಾರಣ ತಮ್ಮ ಕಾರ್ಯ, ಉದ್ದೇಶಗಳಲ್ಲಿ ಸಫಲರಾಗುವುದಿಲ್ಲ. ಹಿಂದಿ ಕಾದಂಬರಿ ಸಾಹಿತ್ಯದಲ್ಲಿ ಈ ಪ್ರಕೃತಾವಾದದ ಪ್ರಭಾವ ಹೆಚ್ಚಿಲ್ಲ. ಆದರೂ ಚತುರ್ಸೇನ್ ಶಾಸ್ತ್ರಿ (ಅಮರ್ ಅಭಿಲಾಷಾ) ಬೇಚನ್ ಶರ್ಮಾ 'ಉಗ್ರ' (ದಿಲ್ಲಿಕಾ ದಲಾಲ್), ಇಲಾಚಂದ್ರ ಜೋಶಿ (ಘೃಣಾಮಯೀ), ಯಶಪಾಲ್ (ದಾದಾ ಕಾಮರೆಡ್), ಅಜ್ಞೇಯ (ನದೀಕೆ ದೀಪ್) ಮೊದಲಾದ ಲೇಖಕರನ್ನು ಈ ಕ್ಷೇತ್ರದಲ್ಲಿ ಕಾಣಬಹುದು.

ಕಾದಂಬರಿಯ ಕ್ಷೇತ್ರ ಬಹಳ ವಿಶಾಲವಾದದ್ದು. ಲೇಖಕರು ಅನೇಕರು, ಕೃತಿಗಳು ಅಸಂಖ್ಯಾತ. ಈ ಲಘು ಲೇಖನದಲ್ಲಿ ಎಲ್ಲರನ್ನೂ ಎಲ್ಲವನ್ನೂ ಪ್ರಸ್ತುತ ಗೊಳಿಸಲು ಸಾಧ್ಯವಿಲ್ಲ. ಆದರೂ ಮೇಲೆ ಬಂದಿರುವ ಲೇಖಕರೊಡನೆ ಈ ಕ್ಷೇತ್ರದಲ್ಲಿ ರಾಹುಲ ಸಾಂಕೃತ್ಯಯನ್, ಉದಯಶಂಕರ ಭಟ್, ಅಮೃತಲಾಲ್ ನಾಗರ್, ರಮೇಶಚಂದ್ರ ಝಾ, ಶಾಂತಿಪ್ರಿಯ ದ್ವಿವೇದಿ, ರಾಜೇಂದ್ರ ಯಾದವ, ಗುರುದತ್ತ, ಗುಲ್‌ಶನ್ ನಂದಾ, ಕಮಲಶುಕ್ಲ, ಹಿಮಾಯ ಶ್ರೀವಾಸ್ತವ ಮೊದಲಾದ ಕಾದಂಬರಿಕಾರರನ್ನು ಉಲ್ಲೇಖಿಸದೆ ಬಿಟ್ಟರೆ ತಪ್ಪು ಮಾಡಿದಂತಾಗುತ್ತಿದೆ.

ಈ ಸಾಹಿತ್ಯಾಂಗ ಸಮಾಜದೊಡನೆ, ಪಾಠಕರ ರುಚಿಗನುಸಾರವಾಗಿ ಪರಿವರ್ತನೆ ಮಾಡಿಕೊಂಡು ಹೆಚ್ಚು ಹೆಚ್ಚು ವ್ಯಾಪಕವಾಗುತ್ತ, ಸಹಜವಾಗುತ್ತ ಹೋಗುತ್ತಿದೆ. ಆದುದರಿಂದ ಭವಿಷ್ಯ ಉಜ್ವಲವಾಗಿದೆ ಎಂದರೆ ತಪ್ಪಾಗಲಾರದು.

ಉರ್ದು ಕಾದಂಬರಿ

ಪಂಚಾಕ್ಷರಿ ಹಿರೇಮಠ

ಉರ್ದು ಭಾಷೆ ಹಿಂದು-ಮುಸಲ್ಮಾನರ ತ್ಯಾಗ, ಬಾಂಧವ್ಯ, ಪರಿಶ್ರಮ, ಐಕ್ಯದ ಕುರುಹಾಗಿ ಜನ್ಮ ತಾಳಿದ ಭಾಷೆ. ಕೆಲವು ಸಲ ತಮ್ಮ ತಮ್ಮ ಮೂಲ ಭಾಷೆಗಳನ್ನು ಬಲಿಗೊಟ್ಟು ಈ ಭಾಷೆಯನ್ನು ಬೆಳೆಸಿದರು. ಈ ಭಾಷೆ ಪುಣ್ಯಭೂಮಿಯಾದ ಭಾರತದಲ್ಲಿಯೇ ಜನ್ಮತಾಳಿತು. ಇಲ್ಲಿಯ ನೆಲದ ಸತ್ವ, ಗಾಳಿ, ನೀರು, ಬೆಳಕನ್ನುಂಡು ಪೋಷಣೆ ಹೊಂದಿತು. ಕನ್ನಡ ಭಾಷೆಗಿರುವ ಸಾವಿರ ವರುಷಗಳ ಇತಿಹಾಸ ಪರಂಪರೆ ಈ ಭಾಷೆಗೆ ಇಲ್ಲವೆಂಬುದು ನಿಜ. ಆದರೆ ಉರ್ದು ಭಾಷೆಯಷ್ಟು ಮಾಧುರ್ಯ, ಲಾಲಿತ್ಯ, ಕೋಮಲತೆ, ನಯ-ನಾಜೂಕು, ಸೊಬಗು ಅಷ್ಟೇ ಪ್ರಮಾಣದಲ್ಲಿ ಇನ್ನಾವುದೇ ಭಾಷೆಯಲ್ಲಿ ಸಿಕ್ಕುವುದು ಕಷ್ಟ ಸಾಧ್ಯವೆಂದು ಹೇಳಿದರೆ ಸತ್ಯವನ್ನೇ ಹೇಳಿದಂತಾಗುತ್ತದೆ.

ಇಂಥ ಮಧುರ ಭಾಷೆಯಲ್ಲಿ ಕಾದಂಬರೀ ಸಾಹಿತ್ಯ ಎಂದಿನಿಂದ ಆರಂಭವಾಯಿತೆಂಬುದನ್ನು ಹುಡುಕಲು ಹೊರಟಾಗ ನಮಗೆ ಪ್ರಪ್ರಥಮ ನಜೀರ ಅಹ್ಮದರ ಕಾದಂಬರಿಗಳ ಮೇಲೆ ದೃಷ್ಟಿ ಹರಿಯುತ್ತದೆ. ಆದರೆ ಕೆಲ ವಿಮರ್ಶಕರು ಇವುಗಳು ಕಾದಂಬರಿಗಳೆಂದು ಪರಿಗಣಿಸಲು ಸಿದ್ಧರಾಗಿಲ್ಲವೆಂಬುದು ನಿಜವಾದರೂ ಉರ್ದು ಕಾದಂಬರೀ ಸಾಹಿತ್ಯಕ್ಕೆ ಇವೇ ಮೂಲಾಧಾರವೆಂಬುದನ್ನು ಮಾತ್ರ ನಾವು ಒಪ್ಪಲೇಬೇಕಾಗುತ್ತದೆ. ಆಧುನಿಕ ಕಾದಂಬರಿಗಳಿಗೆ ಇರುವ ಶೈಲಿ, ತಂತ್ರ, ವಸ್ತು, ಪರಿಣಾಮ, ಪಾತ್ರರಚನೆ, ತಿರುವು ಮುಂತಾದವು ನಜೀರ ಅಹ್ಮದರ ಕಾದಂಬರಿಗಳಲ್ಲಿ ಕಂಡುಬರುತ್ತಿಲ್ಲವೆಂಬುದು ಆ ವಿಮರ್ಶಕ ವಿದ್ವಾಂಸರ ಅಭಿಮತ. ನಮಗೆ ಪಾಶ್ಚಾತ್ಯರು ಕೊಟ್ಟಿರುವ ಕಾದಂಬರಿಯ ಪರಿಭಾಷೆಯಂತೆ ನಜೀರ ಅಹ್ಮದರ ಕಾದಂಬರಿಗಳಲ್ಲವೆಂಬ ಮಾತ್ರಕ್ಕೆ ಅವು ಕಾದಂಬರಿಗಳಲ್ಲವೆಂದು ಹೇಳಲು ಬಾರದು ಎಂಬ ಅಭಿಪ್ರಾಯ ನನ್ನದು. ನಜೀರ ಅಹ್ಮದರು ತಮ್ಮ ಕಾದಂಬರಿಗಳಲ್ಲಿ ತೋರಿರುವ ವಾಸ್ತವಿಕ ಪ್ರಜ್ಞೆಯನ್ನು ಇಂದಿನ ಯಾವ ಕಾದಂಬರಿಕಾರನೂ ತೋರಲು ಶಕ್ತನಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಅವರ ಕೃತಿಗಳಲ್ಲಿ ನಿರೂಪಿತಗೊಂಡಿರುವ ಜೀವನ ನೇರವಾಗಿ ವಾಸ್ತವಿಕ ಬದುಕಿನಿಂದ ಎತ್ತಿಕೊಂಡ ಜೀವನ. ಅಲ್ಲಿಯ ಪಾತ್ರಗಳು ನಮ್ಮ ಮಧ್ಯದಲ್ಲಿ ದಿನನಿತ್ಯ ಕಾಣುವ ಪಾತ್ರಗಳು. ನಜೀರ ಅಹ್ಮದರು ಉರ್ದು ಭಾಷೆಯ ಪ್ರಥಮ ಕಾದಂಬರಿಕಾರ. ಅವರು ರಾಜಕೀಯ, ಸಾಂಸ್ಕೃತಿಕ,

ಬೌದ್ಧಿಕ ಜೀವನವನ್ನು ಬಹು ಹತ್ತಿರದಿಂದ ಕಂಡು ಅನುಭವಿಸಿ ಜೀವನದೊಂದಿಗೆ ಆಳವಾದ ಸಂವೇದನೆ ಹೊಂದಿ, ಸಮರಸ ಭಾವ ಪಡೆದು ಸಾಹಿತ್ಯ ರಚನೆಗೆ ತೊಡಗಿದವರು.

ಕಾದಂಬರಿಯನ್ನೇ ತಮ್ಮ ಬರೆವಣಿಗೆಯ ಮಾಧ್ಯಮವನ್ನಾಗಿ ಅವರು ಆರಿಸಿಕೊಂಡರು. ಅವರಿಂದಾಗಿ ಈ ಪ್ರಕಾರಕ್ಕೆ ಹೊಸ ಚೇತನ ಬಂತು. ಹೊಸ ಗಾಳಿ, ಹೊಸ ನೀರು, ಹೊಸ ಪಯಿರು ಪಡೆಯಿತು ಉರ್ದು ಕಾದಂಬರಿ ಜಗತ್ತು. ಕೇವಲ ಕಾಲ ಕಳೆಯಲು ಕಥಾಗೋಷ್ಠಿ ಅಥವಾ ಕಥೆ ಓದುವುದು ಎಂಬ ವಾದ ಕಳೆದು ಹೋಗಿ ಜೀವನದ ಗಂಭೀರ ಚಿಂತನಕ್ಕೆ ಕಾದಂಬರಿ ರಚನೆ ಎಂಬ ತಿಳುವಳಿಕೆ ಮೂಡಲಾರಂಭಿಸಿತ್ತು. ಇಂಥ ಕಾಲದಲ್ಲಿ ಮುಂಚೂಣಿಯಲ್ಲಿ ಇದ್ದು ಈ ಪ್ರಕಾರಕ್ಕೊಂದು ರೂಪ ಕೊಟ್ಟವರು ನಜೀರ ಅಹ್ಮದರು.

ಈ ಮೊದಲಿಗರಲ್ಲಿ 'ಸರಷಾರ' ಒಬ್ಬರು. 'ಅವಧ ಅಖ್ಬಾರ' ಪತ್ರಿಕೆಯಲ್ಲಿ ಧಾರಾವಾಹಿ ಆರಂಭಿಸಿ ಲಖನೌ ನಗರದ ನಾಗರಿಕತೆ, ಸಂಸ್ಕೃತಿ, ಜೀವನದ ನೂರಾರು ಮುಖಗಳನ್ನು ಕುರಿತು ಬರೆಯುತ್ತಿದ್ದರು. ಆ ಬರವಣಿಗೆ ರಸಪೂರ್ಣ ಹಾಗೂ ಅನುಭವದಿಂದ ತುಂಬಿ ತುಳುಕಿರುತ್ತಿತ್ತು. ರತನನಾಥ 'ಸರಷಾರ' (೧೮೪೬ ರಿಂದ ೧೯೦೨)ರ 'ಫಸಾನೆ ಅಜಾದ' ಒಂದು ಅಮೂಲ್ಯ ಕೃತಿ. ಕಾದಂಬರಿ ಮಾತ್ರ ಜೀವನದ ಸಮಗ್ರತೆಯನ್ನು ಪಡೆಯಲು ಸಾಧ್ಯ ಎನ್ನುವುದನ್ನು ಎಲ್ಲರೂ ಒಪ್ಪುವ ಮಾತು. ಸಾಹಿತ್ಯದ ಇನ್ನಾವ ಪ್ರಕಾರವೂ ಜೀವನದ ಆಳವನ್ನು ವಿಸ್ತಾರವನ್ನು ಒಳಕೊಳ್ಳಲಾರದು. ಜೀವನದ ಆಳ, ವಿಸ್ತಾರ ಸುಖದುಃಖಗಳನ್ನು ಕಾದಂಬರಿಯಲ್ಲಿ ಸಮಾವೇಶಗೊಳಿಸಬೇಕಾಗುತ್ತದೆ. ಈ ಆಳಕ್ಕೆ, ವಿಸ್ತಾರಕ್ಕೆ ತೊಡಕುಗಳಿಗೆ ಯಾವ ಇತಿಮಿತಿಗಳಿಲ್ಲ, ಸೀಮೆಗಳಿಲ್ಲ. ಇವುಗಳ ಬಗ್ಗೆ ಮನುಷ್ಯ ವಿಚಾರ ಮಾಡಿದಷ್ಟೂ ಅವು ಇನ್ನೂ ಆಳವಾಗುತ್ತವೆ, ವಿಸ್ತಾರವಾಗುತ್ತವೆ, ತೊಡಕಾಗುತ್ತವೆ. ಬಿಡಿಸಲು ಪ್ರಯತ್ನಿಸಿದಷ್ಟೂ ಅವುಗಳ ತೊಡಕು ಹೆಚ್ಚಾಗುತ್ತ ಹೋಗುತ್ತದೆ. ಕಾದಂಬರಿಕಾರನ ಸಫಲತೆ ಎಲ್ಲಿದೆಯೆಂದರೆ ಆತ ಈ ಆಳ, ಈ ವಿಸ್ತಾರಗಳ ಮೇಲೆ ಎಷ್ಟರ ಮಟ್ಟಿಗೆ ಹಿಡಿತ ಸಂಪಾದಿಸಿದ್ದಾನೆ ಹಾಗೂ ತನ್ನ ದೃಷ್ಟಿಯಲ್ಲಿ ಸಮಾವೇಶಗೊಳಿಸಿಕೊಂಡಿದ್ದಾನೆ ಎನ್ನುವದರಲ್ಲಿದೆ; ಈ ತೊಡಕುಗಳು ತೊಡಕುಗಳಲ್ಲ ಎನ್ನುವ ಹಾಗೆ ಪ್ರತಿಪಾದಿಸುವ ಕಲಾತ್ಮಕತೆಯಲ್ಲಿದೆ; ಜೀವನದಲ್ಲಿ ಹುದುಗಿರುವ ರಹಸ್ಯಗಳು ಓದುಗನ ಎದುರಿಗೆ ಕಾಣಿಸಿಕೊಳ್ಳುವಂತೆ ಮಾಡುವುದಲ್ಲಿದೆ; ಜೀವನದ ಸೊಗಸು, ಚೆಲುವು ಓದುಗನೆದುರು ಆವಿಷ್ಕಾರಗೊಳ್ಳುವಂತೆ ಮಾಡುವದರಲ್ಲಿದೆ; ತೊಡಕುಗಳು ಪರಿಹಾರಗೊಳ್ಳುತ್ತಿರುವುದನ್ನು ತೋರಿಸುವದರಲ್ಲಿದೆ. ಇಂಥ ಅದ್ಭುತ ಕಾರ್ಯವನ್ನು ನಜೀರ ಅಹ್ಮದ, 'ಸರಷಾರ', 'ಷರರ' ಮಾಡಿದರು. ಈ ಕಾರಣದಿಂದಾಗಿಯೇ 'ಫಸಾನೆ ಆಜಾದ' ಉರ್ದು ಕಾದಂಬರಿ ಇತಿಹಾಸದಲ್ಲಿ ಸದಾ ಜೀವಂತವಾಗಿರಲು ಸಾಧ್ಯವಾಗಿದೆ. ಈ ಕೃತಿಯಿಂದಾಗಿ ಪುರಾತನ ಲಖನೌ

ಜೀವಂತವಾಗಿದೆ ಈಗ ಕೂಡ. 'ಸರಷಾರ' ಅಂದಿನ ಲಖನೌದಲ್ಲಿದ್ದ ಜೀವನದ ನರನಾಡಿಗಳಲ್ಲಿ ರಕ್ತವಾಗಿ ಚಲಿಸಿ ಈ ಕೃತಿ ರಚಿಸಿದ್ದಾರೆ. ಅಂದಿನ ಲಖನೌದ ಎದೆಯ ಬಡಿತವನ್ನು ಅದರ ಎದೆಯಲ್ಲಿ ಹೊಕ್ಕು ಕೇಳಿದ್ದಾರೆ. ಜೀವನ ಆಳ, ವಿಸ್ತಾರ ಹಾಗೂ ಪರಿಪೂರ್ಣ ಜೀವನ ಚಿತ್ರಿಸುವುದೇ ಕಾದಂಬರಿಯ ಉದ್ದೇಶವಾಗಿದೆ–ಎನ್ನುವುದಕ್ಕೆ ಈ ಕೃತಿ ಸಾಕ್ಷಿಯಾಗಿದೆ.

'ಷರರ' ಐತಿಹಾಸಿಕ ಕಾದಂಬರಿ ರಚಿಸಿದವರಲ್ಲಿ ಮೊದಲಿಗ. ನಜೀರ ಅಹ್ಮದ ತಮ್ಮ ಕಾದಂಬರಿಯ ಮುಖಾಂತರ ಮುಸಲ್ಮಾನರ ಜೀವನದ ಸ್ತರವನ್ನು ಮೇಲೆತ್ತುವ ಕಾರ್ಯ ಮಾಡಿದ್ದಾರೆ. 'ಷರರ' ಇತಿಹಾಸದ ಸುವರ್ಣ ಪುಟಗಳ ದರ್ಶನ ಮಾಡಿಸಿ ಸಮಕಾಲೀನ ಜನತೆಯಲ್ಲಿ ಶೌರ್ಯ, ಧೈರ್ಯ, ಸಾಹಸ ತುಂಬುವ ಕಾರ್ಯ ಮಾಡಿದರು.

೧೮೮೮ ರಲ್ಲಿ 'ಮಲಿಕ್ ಅಲ್ ಅಜೀಜ ವರ್ಜಿನಾ' ಪ್ರಕಟವಾದಾಗ ಅದರ ಬಗ್ಗೆ 'ಷರರ' ಹೀಗೆ ಬರೆದ: "ಬಹುಶಃ ಉರ್ದುವಿನಲ್ಲಿ ಈ ರೀತಿಯ ಕಾದಂಬರಿ ಇದೊಂದೆ. ನಮ್ಮ ಮುಸಲ್ಮಾನ ಮಿತ್ರರು ಈ ಕಾದಂಬರಿಯನ್ನು ಬಹುವಾಗಿ ಮೆಚ್ಚಿಕೊಂಡರು. ಈ ಕಾದಂಬರಿ ಇಸ್ಲಾಂ ಧರ್ಮದ ಅಭೂತಪೂರ್ವವಾದ ವೈಚಿತ್ರ್ಯಗಳನ್ನು ತನ್ನ ಓದುಗರಿಗೆ ನೀಡಿದೆ. ಆರಿಹೋದ ಶೌರ್ಯ, ಸಾಹಸಗಳಲ್ಲಿ ಮತ್ತೆ ಪ್ರಜ್ವಲಿಸುವ ಅಗ್ನಿಶಿಖೆಯನ್ನು ಉರಿಸುವ ಕಾರ್ಯವನ್ನು ಈ ಕಾದಂಬರಿ ಮಾಡಿದೆ...."

ನಜೀರ ಅಹ್ಮದ, 'ಸರಷಾರ', 'ಷರರ' ಉರ್ದು ಕಾದಂಬರೀಲೋಕದ ಪ್ರಥಮರು. ಈ ಮಹಾನುಭಾವರು ಉರಿಸಿದ ದೀವಟಿಗೆಯ ಬೆಳಕಿನಲ್ಲಿ ಕಾದಂಬರಿ ವ್ಯಾಪ್ತಿ ಸುಸ್ಪಷ್ಟವಾಗಿ ಅನಂತರ ಬಂದವರಿಗೆ ಗೋಚರಿಸುತ್ತಿತ್ತು. ಈ ಬೆಳಕಿನಲ್ಲಿ ಬಂದು ಕಾದಂಬರಿ ಸಾಹಿತ್ಯಕ್ಕೆ ಒಂದು ಭದ್ರ ಬುನಾದಿ ಹಾಕಿದವರಲ್ಲಿ ರಾಷಿದ್ ಅಲ್ಖೈರಿ, ಮುನ್ಷಿ ಸಜ್ಜಾದ ಹುಸೇನ ಮತ್ತು ಮಹಮ್ಮದ ಅಲೀ ತಬೀಬ ಪ್ರಮುಖರು.

ಇಪ್ಪತ್ತನೆಯ ಶತಮಾನದ ಆರಂಭದ ಕಾಲ ಉರ್ದು ಕಾದಂಬರಿಯ ಸುವರ್ಣಕಾಲವೆಂದೇ ಹೇಳಬೇಕು. ಇಲ್ಲಿಯವರೆಗೂ ಕಾದಂಬರಿ ಜೀವನ ಹಾಗೂ ಕಲೆ ನಡುವೆ ಹೊಂದಿದ ಸಂಬಂಧ ತುಂಬ ನೇರ ಹಾಗೂ ಸರಳವಾಗಿತ್ತು. ಈ ಸಂಬಂಧದಲ್ಲಿ ಜೀವನದ ತೊಡಕುಗಳಿರಲಿಲ್ಲ. ಕತೆಯ ಸೂಕ್ಷ್ಮಾತಿಸೂಕ್ಷ್ಮ ನಿರ್ಮಾಣವಿರಲಿಲ್ಲ. ಇಲ್ಲಿಯವರೆಗಿನ ಲೇಖಕರು ಜೀವನದ ಮೇಲೆ ಮೇಲೆ ಕಾಣುವುದಕ್ಕೇನೇ ಕಥೆಯ ರೂಪ ಕೊಟ್ಟರು: ಅಂಥವೇ ಪಾತ್ರಗಳನ್ನು ಸೃಷ್ಟಿಸಿದರು; ಓದುಗ ಸಂತೋಷಪಡುವ ಹಾಗೆ ರಸಪೂರ್ಣವಾಗಿ ಬರೆದರು. ಇದಕ್ಕೂ ಮುಂದೆ ಹೋಗಲು ಕಾದಂಬರಿ ಸಾಹಿತ್ಯಕ್ಕೆ ಸಾಧ್ಯವಾಗಿರಲಿಲ್ಲ. ನಜೀರ ಅಹ್ಮದ, ಸರಷಾರ, ಷರರ, ರಾಷಿದ್ ಅಲ್ಖೈರಿ, ಮಹಮ್ಮದ ಅಲೀ ತಬೀಬ ಮುನ್ಷಿ ಸಜ್ಜಾದ ಹುಸೇನ, ಆಗಾ ಷಾಯಿರ್, ರಿಯಾಜ ಖೈರಾಬಾದಿ ಮತ್ತು ಸರಫರಾಜ ಹುಸೇನ ಮುಂತಾದವರ ಕಾದಂಬರಿಗಳಲ್ಲಿ ಜೀವನದ ವಿಸ್ತಾರವಿದೆ, ಕೆಲವೆಡೆ ಆಳವೂ ಇದೆ. ಆದರೆ

ಜೀವನದ ಆಳ, ವಿಸ್ತಾರ, ಒಂಟಿತನಗಳನ್ನು ಎಷ್ಟರ ಮಟ್ಟಿಗೆ ಕಲಾತ್ಮಕತೆಗೆ ಹೊಂದಿಸಿದ್ದಾರೆ ಎಂದು ನೋಡಿದಾಗ ಎಲ್ಲೋ ಕೆಲ ಕಡೆ ನಮಗೆ ಇದರ ಅನುಭವ ವಾಗುತ್ತದೆ ಅಷ್ಟೆ. ಈ ಕಲಾತ್ಮಕತೆ, ಸೊಗಸು, ಆಳ, ವಿಸ್ತಾರ, ಅನುಭೂತಿ 'ಉಮರಾವಜಾನ ಅದಾ', 'ಖ್ವಾಬ ಮಹಸ್ತಿ' ಅಂಥ ಕೃತಿಗಳಲ್ಲಿ ಕಾಣ ಸಿಕ್ಕುತ್ತವೆ. ಸರಷಾರ 'ಫಸಾನೆ ಆಜಾದ'ದಲ್ಲಿ ನಿರೂಪಿಸಿದ ಜೀವನದ ಒಂದು ವಿಶಿಷ್ಟ ಮುಖವೇ 'ಉಮರಾವಜಾನ ಅದಾ' ಎಂದು ಹೇಳಬೇಕು. ಈ ಕೃತಿ ಸೌಂದರ್ಯಕ್ಕೆ ವ್ಯಾಖ್ಯೆ ನೀಡಿದ ಹಾಗಿದೆ. ಇದೊಂದು ಸುಂದರ ಕಾವ್ಯವೆಂದೇ ಹೇಳಬೇಕು. ರುಸ್ವಾ ಓರ್ವ ತತ್ತ್ವಜ್ಞಾನಿ, ಕವಿ, ರಸಿಕಚಕ್ರಿ ಎಂದೇ ಹೇಳಬೇಕು. ಹಾಗೆಂದೇ 'ಉಮರಾವಜಾನ ಅದಾ' ದಂಥ ಮಹೋನ್ನತ ಕೃತಿ ರಚಿಸಲು ಅವನಿಗೆ ಸಾಧ್ಯವಾಯಿತು. ಅದು ಉರ್ದು ಕಾದಂಬರಿ ಮಂದಿರಕ್ಕೆ ಕಲಶ ಸದೃಶವಾದ ಕೃತಿ.

ರುಸ್ವಾ 'ಉಮರಾವಜಾನ ಅದಾ' ಬರೆದು ಬರೆಹಗಾರರಿಗೆ ಒಂದು ಪಾಠ ಕಲಿಸಿದ. ಅದು–ಜೀವನದ ಸಹಜವಾದ, ಸಾಮಾನ್ಯವಾದ, ಮಹತ್ವವಿಲ್ಲದ ಘಟನೆಯ ಹಿಂದೆಯೂ ನಾಗರಿಕತೆ, ಸಂಸ್ಕೃತಿ, ರಾಜಕೀಯ ಹಾಗೂ ಐತಿಹಾಸಿಕತೆ ಅಡಗಿಕೊಂಡಿರುತ್ತದೆ ಎಂಬುದನ್ನು ಮೊದಲ ಬಾರಿಗೆ ತೋರಿಸಿದ. ಮನುಷ್ಯನ ವರ್ತಮಾನ ಜೀವನದಿಂದ ನಮಗೆ ಯಾವಾಗಲೂ ಅವನ ಕಳೆದ ಜೀವನದ ಪರಿಚಯವಾಗುತ್ತದೆ. ಒಂದು ಸಾಮಾನ್ಯವಾದ ಘಟನೆಯ ತಿಳುವಳಿಕೆಯಿಂದ ಸಾವಿರಾರು ಬೆಳಕಿನ ಕಿರಣಗಳು ಹೊರಹೊಮ್ಮುತ್ತವೆ. ಈ ಕಿರಣಗಳು ಮಾನವನ ಜೀವನದ ಆಶೋತ್ತರಗಳ ಹಾಗೂ ಆಕಾಂಕ್ಷೆಗಳ ಕತ್ತಲೆಯ ಹಾದಿಯನ್ನು ಬೆಳಗಿಸುತ್ತವೆ.

'ಖ್ವಾಬ ಮಹಸ್ತಿ' ಈ ಕಾಲದ ಇನ್ನೊಂದು ಕಾದಂಬರಿ. ಮಿರ್ಜಾ ಮಹಮ್ಮದ ಸಯ್ಯದ ಒಂದು ವಿಶಿಷ್ಟ ಕಾಲದ ಘಟನೆಗೆ ವಾಸ್ತವಿಕತೆಯ ರೂಪಕೊಟ್ಟು ಬರೆದ ಕಾದಂಬರಿ ಇದು. ೧೯ ನೆಯ ಶತಮಾನದ ಉತ್ತರಾರ್ಧ ಹಾಗೂ ೨೦ ನೆಯ ಶತಮಾನದ ಆರಂಭದ ಕಾಲ ಈ ಕಾದಂಬರಿಯಲ್ಲಿ ವರ್ಣಿತವಾಗಿದೆ. ಇದರಲ್ಲಿ ಅಂದಿನ ರಾಜಕೀಯತೆ, ಸಾಂಸ್ಕೃತಿಕತೆ, ನಾಗರಿಕತೆ ಒಂದು ಇನ್ನೊಂದರಿಂದ ಬೇರ್ಪಡಿಸಲು ಸಾಧ್ಯವಾಗದ ರೀತಿಯಲ್ಲಿ ಹೆಣೆದುಕೊಂಡು ವರ್ಣಿತವಾಗಿದೆ.

ಇದೇ ಕಾಲದಲ್ಲಿಯ ಇನ್ನೋರ್ವ ಮಹತ್ವದ ಕಾದಂಬರಿಕಾರರೆಂದರೆ ಪ್ರೇಮ ಚಂದ. ಪ್ರೇಮಚಂದರಷ್ಟು ಜೀವನವನ್ನು, ಬದುಕನ್ನು ಬಹು ಹತ್ತಿರದಿಂದ ನೋಡಿ ದವರು, ನೋಡಿ ಅದನ್ನು ಸಾಹಿತ್ಯದಲ್ಲಿ ಅಷ್ಟೇ ಪ್ರಭಾವಪೂರ್ಣವಾಗಿ ಚಿತ್ರಿಸಿದವರು ಅಪರೂಪ. ಮಾನವನ ಬದುಕಿನ ಒಳತೋಟಿಯನ್ನು ಹೊಕ್ಕು ಪ್ರೇಮಚಂದ ಸಾಹಿತ್ಯ ಸೃಜಿಸಿದರು. ಬೌದ್ಧಿಕ ಹಾಗೂ ಚಿಂತನ ದೃಷ್ಟಿಯಿಂದ ಪ್ರೇಮಚಂದ ಸಾಹಿತ್ಯ ಅಪ್ಪಟ ಭಾರತೀಯ. ತಮ್ಮ ಅಗಣಿತ ಮತ್ತು ಅಪರೂಪದ ಕೃತಿಗಳಿಂದ

ಬಹು ಸುಂದರ ಹಾಗೂ ಭವ್ಯವಾದ ಸೌಧವನ್ನೇ ನಿರ್ಮಿಸಿದರು. ಉರ್ದು ಕಾದಂಬರೀಲೋಕವನ್ನು ತಮ್ಮ ಅಮೂಲ್ಯ ಕೃತಿರತ್ನಗಳಿಂದ ಸಾಲಂಕೃತವಾಗಿ ಶೃಂಗರಿಸಿದರು ಕೂಡ. ಅವರ ಆರಂಭದ ಕಾದಂಬರಿ 'ಖಾಲಿಸ್'. ತಾವು ಬಹು ಹತ್ತಿರದಿಂದ ಕಂಡ ಜೀವನದ ಕಥೆಯನ್ನು ಇದರಲ್ಲಿ ನಿರೂಪಿಸಿದ್ದಾರೆ. ಅಲ್ಲಿಯ ಮಠ-ಮಸ್ತಾನಗಳಲ್ಲಿ ಅವರ ದುಃಖ, ಯಾತನೆಗಳನ್ನೂ ಕಾಣುತ್ತೇವೆ. ತಾನು ಸೃಜಿಸುವ ಕೃತಿಯೊಂದಿಗೆ ಇಷ್ಟು ಸಾಮರಸ್ಯ ಹೊಂದಿದ ಲೇಖಕ ಪ್ರೇಮಚಂದರನ್ನು ಬಿಟ್ಟರೆ ಇನ್ನೊಬ್ಬ ಸಿಕ್ಕುವುದು ದುಸ್ಸಾಧ್ಯ. ಪಾತ್ರಗಳನ್ನು ಘಟನೆಗಳನ್ನು ಪ್ರೇಮಚಂದ ತಮ್ಮ ಕಾದಂಬರಿಗೆ ಪ್ರತ್ಯಕ್ಷ ಬದುಕಿನಿಂದಲೇ ನೇರವಾಗಿ ಎತ್ತಿಕೊಂಡರು. 'ಬಾಜಾರೆ ಹುಸ್ನ್', 'ಮೈದಾನ ಅಮಲ್', 'ಗೋದಾನ' ಇತ್ಯಾದಿ ಅವರ ಕಾದಂಬರಿಗಳು ಉರ್ದು ಕಾದಂಬರಿಯ ಇತಿಹಾಸ ಗುರುತಿಸುವ ಮೈಲಿಗಲ್ಲುಗಳು. ಈ ಕಾದಂಬರಿಗಳು ಕಾದಂಬರಿಯ ರಚನಾವಿಧಾನದಲ್ಲಿ, ವಸ್ತುನಿಷ್ಠೆಯಲ್ಲಿ ಬಹು ದೊಡ್ಡ ಕ್ರಾಂತಿಯನ್ನುಂಟುಮಾಡಿದವು. ಪ್ರೇಮಚಂದರ ಈ ಕಾದಂಬರಿಗಳನ್ನು ಓದಿದ ಓದುಗನಿಗೆ ನಜೀರ ಅಹ್ಮದ, ಸರಷಾರ ಮತ್ತು ಶರರ ಮತ್ತೆ ಮಿರ್ಜಾ ರುಸ್ವಾ, ಮಿರ್ಜಾ ಮಹಮ್ಮದ ಸಯ್ಯದರು ಕಾದಂಬರಿ ಪ್ರಕಾರಕ್ಕೆ ಏನೇನು ತಮ್ಮ ತಮ್ಮ ಶಕ್ತ್ಯಾನುಸಾರ ಕೊಡುಗೆ ನೀಡಿದ್ದರೋ ಅದನ್ನು ಪ್ರೇಮಚಂದರು ಕಾಯ್ದುಕೊಂಡುಬಂದರು. ಅಷ್ಟೇ ಅಲ್ಲ ಅದಕ್ಕೆ ತಮ್ಮ ಅಮೋಘವಾದ ಪ್ರತಿಭೆಯಿಂದ ಇನ್ನೂ ಹೆಚ್ಚಿನ ಸೌಂದರ್ಯವನ್ನು, ಆಳವನ್ನು, ಅನುಭವದ ತೀವ್ರತೆಯನ್ನು ನೀಡಿ ಅದರ ಪ್ರತಿಯೊಂದು ಅಂಗವನ್ನು ಸಂಪೂರ್ಣಗೊಳಿಸಿದರು, ಪರಿಪುಷ್ಟಗೊಳಿಸಿದರೆಂಬುದರ ಅರಿವಾಗದೆ ಇರದು. ಪ್ರೇಮಚಂದರ ಹಿರಿಮೆ ಹಾಗೂ ವೈಶಿಷ್ಟ್ಯವೆಂದರೆ ಅವರು ಮನುಷ್ಯನ ಮನಸ್ಸಿನ ಆಳದಲ್ಲಿ ಮುಳುಗಿ ಅವನನ್ನು ಅರಿಯುವ, ತಿಳಿಯುವ ಸಾಹಸ ಮಾಡಿದುದು ಹಾಗೂ ಅವನ ದುಃಖದ ಹುಡುಕುವಿಕೆಯಲ್ಲಿ ಅವರು ತೋರಿದ ಪ್ರಾಮಾಣಿಕತೆಯದು. ಅವರು ಸೃಜಿಸಿದ ಪಾತ್ರಗಳು ಸ್ನೇಹದ ಪ್ರೇಮದ ತೆಕ್ಕೆಯಲ್ಲಿ ಬೆಳೆದವುಗಳು. ಅವರ ಬರೆವಣಿಗೆ ಸರಳ, ನೇರ, ಸುಂದರ. ಈ ಸರಳತೆಯ ನಯ ನಾಜೂಕಿನ ಮೇಲೆ ಜೀವನದ ಸಮಗ್ರತೆಯನ್ನು, ಆಳವನ್ನು ಗುರುತಿಸಬಹುದು. ಪ್ರೇಮಚಂದರ ಕಾದಂಬರಿಗಳು ಉರ್ದು ಕಾದಂಬರಿ ಇತಿಹಾಸದಲ್ಲಿ ಜೀವನ ಹಾಗೂ ಕಲೆಯ ಶ್ರೇಷ್ಠತೆಯ ಹಾಗೂ ಸರ್ವೋತ್ತಮ ಕುರುಹುಗಳಾಗಿವೆ. ನವಭಾರತದ ನಿರ್ಮಾಣ ಕಾರ್ಯದಲ್ಲಿ ಹಳ್ಳಿಗರ ಮಹತ್ವ ಹಾಗೂ ಅವಶ್ಯಕತೆಗಳನ್ನು ಅರಿತವರಲ್ಲಿ ಪ್ರೇಮಚಂದ ಉರ್ದು ಸಾಹಿತ್ಯಕಾರರಲ್ಲಿ ಮೊದಲಿಗರು. ಅವರ ಕೃತಿಗಳಲ್ಲಿ ಭಾರತೀಯ ಹಳ್ಳಿಗರ ಜೀವನ, ಸಮಸ್ಯೆ, ಅಂಧಾನುಕರಣ, ಅವಿದ್ಯೆ ಹಾಗೂ ಸರಳತೆಯ ಗರ್ಭದಲ್ಲಿ ಜನ್ಮ ತಾಳುವ ಮನುಷ್ಯಪ್ರಕೃತಿಯ ವಿವಿಧ ರೂಪ ಹಾಗೂ ನಗರಜೀವನದ ಮೋಸಗಾರಿಕೆ, ಶಕ್ತಿ ಮತ್ತು ಅಧಿಕಾರದ ದುರುಪ

ಯೋಗ, ದ್ವೇಷ ಹೀಗೆ ನಗರ-ಹಳ್ಳಿಗಳ ಜೀವನದ, ಹೋರಾಟದ ಜೀವನ ಚಿತ್ರಣವನ್ನು ಬಹು ನೈಜವಾಗಿ ನೀಡಿದ್ದಾರೆ. ಮಾನವನ ಅಂತರಂಗದ ಪದರು ಪದರು ಬಿಚ್ಚಿ ಓದುಗನೆದುರಿಗೆ ಸಮಗ್ರ ಜೀವನ ಅನಾವರಣಗೊಳಿಸಿದ್ದಾರೆ. ಪ್ರೇಮಚಂದರು ಹಾಕಿದ ಬೀಜಕ್ಕೆ ಒಳ್ಳೆ ನೆಲ, ನೀರು ಹಾಗೂ ಗಾಳಿ ದೊರೆಯಿತು. ಪ್ರೇಮಚಂದರ ಸುಧಾರಣತ್ವದ ಪ್ರಭಾವಕ್ಕೆ ಒಳಗಾದವರಲ್ಲಿ ಪಂಡಿತ ಸುದರ್ಶನ, ಅಜಂತದೇವಿ, ಅಲಿಅಬ್ಬಾಸ ಹುಸೇನಿ ಮುಂತಾದವರು ಒಳ್ಳೆಯ ಕೃತಿಗಳನ್ನು ನೀಡಿದರು.

ಆನಂತರದ ಲೇಖಕರಲ್ಲಿ ಸಜ್ಜಾದ ಜಹೀರ, ಕೃಷ್ಣಚಂದರ, ಅಸ್ಮತ್ ಚುಕ್ತಾಯಿ, ಅಜೀಜ ಮುಂತಾದವರು ಪ್ರಮುಖರು. ಜಹೀರರ 'ಲಂದನ ಕೀ ಏಕ ರಾತ', ಕೃಷ್ಣಚಂದರರ 'ಷಿಕಸ್ತ', ಚುಕ್ತಾಯಿಯ 'ಟೇಢೀ ಲಕೀರ' ಕಾದಂಬರಿಗಳನ್ನು ಇಲ್ಲಿ ಸ್ಮರಿಸಬಹುದು. ಈ ಎಲ್ಲ ಕಾದಂಬರಿಗಳಲ್ಲಿ ಈ ಲೇಖಕರ ಜೀವನದೃಷ್ಟಿ, ವಾಸ್ತವಿಕ ಪ್ರಜ್ಞೆ, ಮಾನವತಾವಾದದ ಅರಿವು ಓದುಗನಿಗೆ ಉಂಟಾಗುತ್ತದೆ. ಈ ಕಾದಂಬರಿಗಳಲ್ಲಿ ಘಟನೆಗಳಿಗಿಂತಲೂ ಪಾತ್ರಗಳಿಗೆ ಪ್ರಾಮುಖ್ಯವಿರುವುದನ್ನು ಕಾಣುತ್ತೇವೆ. ಇಲ್ಲಿ ಬರುವ ಪಾತ್ರಗಳು ಹೊಸ ವಿಚಾರ ಪರಂಪರೆಗೆ ಸೇರಿದವು; ಜೀವನದಲ್ಲಿ ಹೊಸ ಮನ್ವಂತರ ತರಬಯಸುವಂತಹವು. ಆದರೆ ಅವಕ್ಕೆ ಭದ್ರವಾಗಿ ಕಾಲೂರಿ ನಿಲ್ಲಲು ಗಟ್ಟಿಯಾದ ನೆಲವೇ ಸಿಗುತ್ತಿಲ್ಲ. ಹಳೆಯ ಹಾಗೂ ಹೊಸದರ ತಿಕ್ಕಾಟದಲ್ಲಿ ಸಿಕ್ಕು ಅನವರತ ಹೋರಾಟದಲ್ಲಿರುವ ಪಾತ್ರಗಳು. ಈ ಪಾತ್ರಗಳ ತಲೆಯ ತುಂಬೆಲ್ಲ ಎಂದೂ ಮುಗಿಯಲಾರದ ಸಮಸ್ಯೆಗಳು, ಬಗೆಹರಿಯಲಾರದ ವಿಚಾರಗಳು. ಈ ಎಲ್ಲ ಗೊಂದಲಕ್ಕೆ ಸಿಕ್ಕ ಪಾತ್ರಗಳ ಚಿತ್ರಣದಲ್ಲಿ ಈ ಕಾದಂಬರಿಕಾರರು ತೋರಿರುವ ಅಸಾಧಾರಣವಾದ ಚಾತುರ್ಯ, ಪ್ರತಿಭೆ ಶ್ಲಾಘನೀಯವಾದುದು, ಅದ್ಭುತವಾದುದು. 'ಷಿಕಸ್ತ' ಹೊಸ ಮನ್ವಂತರದ ಆವಿಷ್ಕಾರಕ್ಕಾಗಿ ಹಾತೊರೆಯುವ ಕಾದಂಬರಿ. ಮನಮೋಹಗೊಳಿಸುವಂಥ ಲೋಕವನರಸುವುದು ಅದರ ಉದ್ದೇಶ. ಇಲ್ಲಿ ಬರುವ ಪಾತ್ರಗಳಿಗೆ ಕಾಲ್ಪನಿಕ ಸೌಂದರ್ಯವೊಂದನ್ನು ಬಿಟ್ಟರೆ ಉಳಿದ ಎಲ್ಲ ವಾಸ್ತವಿಕತೆ ನಿರ್ಜೀವ ಹಾಗೂ ಬೂಟಾಟಿಕೆಯದಾಗಿದೆ ಎಂದೆನಿಸುತ್ತದೆ. 'ಲಂದನ್ ಕೀ ಏಕ ರಾತ'ದಲ್ಲಿ ಬರುವ ವಾತಾವರಣ ಹಾಗೂ ಜೀವನದ ಚಿತ್ರಣ ಕಾದಂಬರಿಕಾರನ ಲೋಕಾನುಭವದ ಆಳ ಹಾಗೂ ವಿಸ್ತಾರವನ್ನು ತೋರಿಸುತ್ತದೆ. ಜೀವನದ ವೈವಿಧ್ಯ ಈ ಕೃತಿಯ ತುಂಬೆಲ್ಲ ಚೆಲ್ಲುವರಿದಿದೆ. ಈ ಕಾದಂಬರಿಯಿಂದಾಗಿ ಉರ್ದು ಕಾದಂಬರಿ ಪ್ರಕಾರ ಹೊಸ ತಿರುವನ್ನು ಪಡೆಯಿತು. 'ಟೇಢಿ ಲಕೀರ' ಸಮಾಜದ ಬಂಧನ, ಪರಂಪರೆ ಹಾಗೂ ಸ್ವತಂತ್ರ ವಿಚಾರಗಳ ನಡುವಿನ ಘರ್ಷಣೆಯನ್ನೊಳಗೊಂಡಿದೆ. ಈ ಲೇಖಕರು ಹಾಗೂ ಇವರ ಸಮಕಾಲೀನ ಲೇಖಕರು ಪುರೋಗಾಮಿ ಸಾಹಿತ್ಯವನ್ನು ನಿರ್ಮಿಸಿದರು.

೧೯೪೭ ರ ದೇಶವಿಭಜನೆಯ ಕಾಲದಲ್ಲಿ ಉಂಟಾದ ನರಹತ್ಯಾಕಾಂಡದ ಹಿನ್ನೆಲೆಯಲ್ಲಿ ಸಾಕಷ್ಟು ಕಾದಂಬರಿಗಳು ಬಂದವು. ಅವುಗಳಲ್ಲಿ ರಾಮಾನಂದ ಸಾಗರರ 'ಔರ ಇನ್ಸಾನ ಮರ್ ಗಯಾ', ರಶೀದ ಅಖ್ತರನದ್ವಿಯ '೧೫ ಆಗಸ್ಟ್' ಪ್ರೈಸಿರಾಮ ಫ್ರೀಯ 'ಖೂನ', 'ಜೇಆಬರೂ', ಅಹ್ಮದ ಜಾಫರಿಯ 'ಮುಜಾಹರ್' ಈ ಎಲ್ಲ ಕಾದಂಬರಿಗಳಲ್ಲಿ ಲೇಖಕರು ೧೯೪೭ ರಲ್ಲಿ ನಡೆದ ಜಾತೀಯ ಗಲಭೆಗಳಿಂದ ಉಂಟಾದ ರಕ್ತಪಾತದ ಹೃದಯದ್ರಾವಕ ಕಥೆಯನ್ನು ಅಷ್ಟೇ ಭಯಾನಕವಾಗಿ ನಿರೂಪಿಸಿದ್ದಾರೆ. ಈ ಎಲ್ಲ ಹಾಗೂ ಇಂಥ ಕೃತಿಗಳನ್ನು ಓದಿದ ಓದುಗ ಮನುಷ್ಯ ಮೂಲತಃ ಒಂದು ಪ್ರಾಣಿ, ಇಲ್ಲಿಯವರೆಗೂ ತನಗೆ ತಾನೇ ತೊಡಿಸಿಕೊಂಡ ನಾಗರಿಕತೆ, ಸಂಸ್ಕೃತಿ, ಸಭ್ಯತೆಯ ನಯವಾದ ಪರದೆಯನ್ನು ತನ್ನ ಅಮಾನುಷ ಕೃತಿಗಳಿಂದ ಚೂರು ಚೂರಾಗಿ ಹರಿದು ಹಾಕಿದ ಎಂಬ ನಿರ್ಣಯಕ್ಕೆ ಬರುತ್ತಾನೆ ಹಾಗೂ ಅಮಾನುಷತೆ ತನ್ನ ನೈಜ ಸ್ವರೂಪದಲ್ಲಿ ಪ್ರದರ್ಶಿತವಾದುದನ್ನೂ ಕಾಣುತ್ತಾನೆ. ಹತ್ಯಾಕಾಂಡವೇ ಈ ಕಾದಂಬರಿಗಳಲ್ಲಿ ಪ್ರಧಾನವಸ್ತುವಾಗಿದ್ದರೂ ಕೆಲವುಗಳಲ್ಲಿ ಅಲ್ಲಲ್ಲಿಯಾದರೂ ಕಲಾತ್ಮಕತೆ, ಮಾನವೀಯ ಅನುಕಂಪ, ಮಾನವೀಯತೆಯ ಶ್ರೇಷ್ಠತೆಯ ಬೆಳಕನ್ನೂ ಓದುಗ ಕಾಣಲಾರ.

ಈ ಸಂಕ್ರಾಂತಿ ಕಾಲದ ನಂತರ ಬಂದ ಲೇಖಕರು ಸ್ವಾತಂತ್ರ್ಯ ದೇಶದ ಸುಖಸಂಪದದ ಬದುಕಿನ ಚಿತ್ರಣ ಕೊಡಲು ಪ್ರಯತ್ನಿಸಿದರು. ಅಂಥವರಲ್ಲಿ ನಸೀಮ ಹಜಾಜಿ, ಅಹ್ಮದ ಜಾಫರಿ ಮುಂತಾದವರು ಪ್ರಮುಖರು.

ಈಗಿನ ಕಾದಂಬರಿಕಾರರಲ್ಲಿ ಕೃಷ್ಣಚಂದರು ಅದ್ವಿತೀಯರು. ಸಮಾಜದ ಆರೋಗ್ಯವನ್ನು ಹಾಳು ಮಾಡುವ ಎಲ್ಲ ಕುನೀತಿಗಳನ್ನು, ಮೂಢ ನಂಬಿಕೆಗಳನ್ನು ಶ್ರೀಮಂತವರ್ಗದ ವಿಲಾಸವನ್ನು ತಮ್ಮ ಕೃತಿಗಳಲ್ಲಿ ಪ್ರಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ತೀವ್ರ ಗತಿಯಲ್ಲಿ ಬದಲಾಗುತ್ತಿರುವ ಕಾಲ ಹಾಗೂ ಅದಕ್ಕೂ ಹೆಚ್ಚಿನ ವೇಗದಲ್ಲಿ ಪರಿವರ್ತನೆಗೊಳ್ಳುತ್ತಿರುವ ಕಲೆ ಇವುಗಳ ಪ್ರತಿ ಕ್ಷಣವನ್ನೂ ತನ್ನ ಹಿಡಿತದಲ್ಲಿ ಇಟ್ಟುಕೊಂಡವರು ಪ್ರೇಮಚಂದರ ನಂತರದ ಪೀಳಿಗೆಯ ಲೇಖಕರಲ್ಲಿ ಕೃಷ್ಣಚಂದರೆಂದೇ ಹೇಳಬೇಕಾಗುತ್ತದೆ. ಕೃಷ್ಣಚಂದರ್ ಓರ್ವ ಪ್ರತಿಭಾವಂತ ಸೃಜನಶೀಲ ಭಾವುಕ ಕವಿಯ ಮನಸ್ಸನ್ನು ಹಾಗು ಚಿತ್ರಕಲಾವಿದನ ಕುಂಚವನ್ನು ಹೊಂದಿದ್ದಾರೆ. ಕೃಷ್ಣಚಂದರರು ಉರ್ದು ಭಾಷೆಗೆ ಅಸಂಖ್ಯಾತ ಕಾದಂಬರಿಗಳನ್ನು ನೀಡಿದ್ದಾರೆ. ಅವರ ಜೀವನಾನುಭವ ಅಪಾರವಾದುದು. ಮೊದಲೇ ಮಧುರವಾದ ಉರ್ದು ಭಾಷೆಗೆ ಕೃಷ್ಣಚಂದರು ತಮ್ಮ ಕೃತಿಗಳಿಂದ ಇನ್ನೂ ಹೆಚ್ಚಿನ ಮಾಧುರ್ಯವನ್ನು ಆ ಭಾಷೆಗೆ ನೀಡಿದ್ದಾರೆ. ಪ್ರೇಮ ಹಾಗು ಜೀವನದ ವಾಸ್ತವಿಕತೆಯ ಸುಂದರ ಹೊಂದಾಣಿಕೆ, ಇಂದಿನ ಸಮಾಜದಲ್ಲಿರುವ ಆರ್ಥಿಕ ವಿಷಮತೆ, ವ್ಯಂಗ್ಯ ಮತ್ತು ಮಾನವನ ಅಂತರಂಗದ ಸೂಕ್ಷ್ಮ ವಿಶ್ಲೇಷಣೆ, ಮಾನವೀಯ ಅನುಕಂಪ ಕೃಷ್ಣಚಂದರರ ಕಾದಂಬರಿಗಳಲ್ಲಿ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು.

ಕೃಷ್ಣಚಂದರ್ ಪ್ರಗತಿಪರ ಸಾಹಿತ್ಯದ ಆರಂಭ ಕಾಲದಲ್ಲಿ ಹಾಗೂ ಈಗ ಕೂಡ ಉರ್ದು ಕಾದಂಬರಿಲೋಕದ ಅನಭಿಷಿಕ್ತ ಚಕ್ರವರ್ತಿಯೆಂದೇ ಹೇಳಬೇಕು. ಕೃಷ್ಣಚಂದರ್ ಕಲ್ಪನೆಯ ಸುರಮ್ಯ ಲೋಕವನ್ನು ಹಾಗೂ ವಾಸ್ತವಿಕ ಲೋಕದ ಕಠೋರತೆಯನ್ನು ಸಮರಸಗೊಳಿಸಿದ ಮಹಾ ಕಲಾವಿದ. ತಮ್ಮ ಅಪಾರ ಪ್ರತಿಭೆ ಹಾಗೂ ಅನುಭವದಿಂದ ಉರ್ದು ಸಾಹಿತ್ಯಜಗತ್ತಿಗೆ ಅಸಂಖ್ಯಾತ ಕೃತಿಗಳನ್ನು ನೀಡಿ ಅದರ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. 'ಆಗ ಕಾದರಿಯಾ', 'ತೂಫಾನ ಕೀ ಕಲಿಯಾ', 'ಬರ್ಫಕೆ ಫೂಲ', 'ಆಸ್ಮಾನ ರೋಚಿನ್ ಹೈ', 'ಬೋರಬನ್ ಕ್ಲಬ್', 'ಬಾವನ್ ಪತ್ತೆ', 'ಹಾಂಗ್‌ಕಾಂಗ್‌ಕೀ ಹಸೀನಾ', 'ಮಿಟ್ಟಿಕೆ ಸನಮ್', 'ಜಬ್ ಖೇತ ಜಾಗೆ', 'ದಿಲ್ ಕೀ ವಾದಿಯಾ ಸೋಗಯೇ', 'ಏಕ್ ಗಧೆ ಕೀ ಸರಗುಜಶ್ತಿ', 'ಗದ್ದಾರ', 'ಸಡಕ್ ವಾಪಸ್ ಜಾತಿ ಹೈ', 'ಗಧೆ ಕೀ ವಾಪಸೀ', 'ಚಾಂದಿಕೆ ಘಾವ್', 'ಜರಗಾಂವ ಕೀ ರಾನಿ', 'ಗಂಗಾ ಬಹೇ ನ ರಾತ', 'ಕಾಗಜ ಕೀ ನಾವ್', 'ಲಂಡನ್ ಕೆ ಸಾತ ರಂಗ', 'ಫಿಲ್ಮಿ ಖಾಯ್ದಾ' ಇತ್ಯಾದಿ ಅವರ ನೂರಾರು ಕಾದಂಬರಿಗಳು ಅವರ ಅಸಾಧಾರಣವಾದ ಸೃಜನಶಕ್ತಿಗೆ, ಪ್ರತಿಭೆಗೆ ಸಾಕ್ಷಿ ನುಡಿಯುತ್ತಲಿವೆ.

ಕೃಷ್ಣಚಂದರರ ಸಮಕಾಲೀನ ಬರೆಹಗಾರರಲ್ಲಿ ಖ್ವಾಜಾ ಅಹ್ಮದ ಅಬ್ಬಾಸ ಹಾಗೂ ರಾಜೇಂದ್ರಸಿಂಗ್ ಬೇದಿ, ಸಾದತ್ ಹಸನ್ ಮಂಟೊ, ಅಲಿ ಅಬ್ಬಾಸ ಹುಸೇನಿ, ಮಹೇಂದ್ರನಾಥ ಮುಂತಾದವರು ಪ್ರಮುಖರು. ಅಬ್ಬಾಸರ ಬರೆಹದಲ್ಲಿರುವ ಮಾನವೀಯ ಅನುಕಂಪ, ಅಂತಃಕರಣ ಯಾರನ್ನೂ ಮುಗ್ಧಗೊಳಿಸುವಂಥದು. ಬೇದಿಯವರ 'ಏಕ ಚಾದರ ಮೈಲಿಸಿ' ಹಾಗೂ 'ದಸ್ತಕ' ಇತ್ಯಾದಿ ಕೃತಿಗಳಲ್ಲಿ ಸಾಮಾಜಿಕ ಜೀವನದ ಪ್ರಜ್ಞೆ ಬಹು ಜ್ವಲಂತವಾಗಿರುವುದನ್ನು ಕಾಣುತ್ತೇವೆ. ಮಂಟೋ ಒಂದೇ ಒಂದು ಕಾದಂಬರಿಯನ್ನು ಬರೆದ. ಆತ ವಾಸ್ತವಿಕತೆಗೆ ಇನ್ನೊಂದು ಹೆಸರೆಂದರೂ ಸಂದೀತು.

ಸಾಮಾಜಿಕ, ಐತಿಹಾಸಿಕ ಕಾದಂಬರಿಗಳೊಂದಿಗೆ ಪತ್ತೇದಾರಿ ಕಾದಂಬರಿಗಳೂ ಉರ್ದುವಿನಲ್ಲಿ ಬೇಕಾದಷ್ಟು ಬಂದಿವೆ. ಪತ್ತೇದಾರಿ ಕಾದಂಬರಿ ಲೇಖಕರಲ್ಲಿ ಜಾಫರ ಉಮರ ಪ್ರಮುಖ ಲೇಖಕರೆಂದು ಹೇಳಬಹುದು.

ಉರ್ದುವಿನಲ್ಲಿ ಇನ್ನುಳಿದ ಭಾಷೆಗಳಿಗಿಂತ ಹೆಚ್ಚು ಜನ ಲೇಖಿಕೆಯರು ನಮಗೆ ಸಿಗುತ್ತಾರೆ. ಅದು ಉರ್ದು ಭಾಷೆಯ ಸೌಭಾಗ್ಯ. ಮೊದಲ ಗುಂಪಿನಲ್ಲಿ ಖಾತಿಮಾ ಬೇಗಂ, ಮಹ್ಮದೀ ಬೇಗಂ, ಶೋಕತ್ ಆರಾ ಬೇಗಂ, ಅಖ್ತರಿ ಬೇಗಂ, ಜಹಾರಾ ಬೇಗಂ, ಅನ್ವರಿ ಬೇಗಂ ಮುಂತಾದವರು ಪ್ರಮುಖರು. ಇವರೆಲ್ಲ ಸುಂದರ ಕೃತಿಗಳನ್ನು ನೀಡಿದರು. ಆನಂತರ ಬಂದವರಲ್ಲಿ ಇಮ್ತಿಯಾಜ ಬೇಗಂ ಜೀವನಾನುಭವದ ತೀವ್ರತೆ ಹೊಂದಿದ ಲೇಖಕಿಯಾಗಿದ್ದಳು. ಆಕೆಯ 'ಜಾಲಿಮ್ ಮೊಹಬತ್' 'ಅಂಧೇರಾ ಖ್ವಾಬ' ಪ್ರಮುಖ ರಚನೆಗಳು.

ಇಂದಿನ ಲೇಖಿಕೆಯರಲ್ಲಿ ಕುರತ್ - ಉಲ್ - ಐನ್ - ಹೈದರ್ ಬಹು ಪ್ರಜ್ಞಾವಂತ ಬರೆಹಗಾರ್ತಿ. ಆಕೆಯ ಕಾದಂಬರಿಯಲ್ಲಿ ವೇದಾಂತ, ತತ್ತ್ವಜ್ಞಾನದ ಪ್ರಶಾಂತತೆಯನ್ನು ಕಾಣುತ್ತೇವೆ.

ಉರ್ದು ಸಾಹಿತ್ಯದಲ್ಲಿ ನವ್ಯಮಾರ್ಗ ತಲೆಯೆತ್ತಿದಂದಿನಿಂದ ಈ ಮಾರ್ಗ ಅನುಸರಿಸಿದವರಿಂದ ಕಾದಂಬರಿಗಳಿಗಿಂತಲೂ ಹೆಚ್ಚಾಗಿ ಕಥೆಗಳೇ ಬರುತ್ತಲಿವೆ. ಈಗಲೂ ಕಾದಂಬರೀಲೋಕದಲ್ಲಿ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಕಾದಂಬರಿ ರಚಿಸುತ್ತಿರುವ ಕೃಷ್ಣಚಂದರೇ ಉರ್ದು ಸಾಹಿತ್ಯಾಕಾಶದ ತುಂಬ ಬೆಳಗುತ್ತಿದ್ದಾರೆ.

ಮರಾಠಿ ಕಾದಂಬರಿ

ಲೇಖಕರು : **ಪ್ರೊ. ವ. ದಿ. ಕುಲಕರ್ಣಿ**
ಕನ್ನಡಿಸಿದವರು : **ಎಸ್. ಎಸ್. ಬ್ಯಾತನಾಳ**

ಭಾರತೀಯ ಸಾಹಿತ್ಯದಲ್ಲಿಯೇ 'ಕಾದಂಬರಿ' ಒಂದು ವಾಙ್ಮಯ ಪ್ರಕಾರವೆಂದು ನನ್ನ ತಿಳಿವಳಿಕೆ. ಇಂಗ್ಲಿಷ್ ಸಾಹಿತ್ಯ ಪರಿಚಯಾನಂತರ ನಮ್ಮಲ್ಲಿ ಹುಟ್ಟಿ, ಬೆಳೆದುಬಂದು ಹಲವು ಸಾಹಿತ್ಯರೂಪದಲ್ಲಿ ಕಾಬಂದರಿಯೂ ಒಂದು. ಕಾದಂಬರಿ ಮಹತ್ವಪೂರ್ಣ ಪ್ರಕಾರವೂ ಆಗಿದೆ. ನಮ್ಮ ಪ್ರಾಚೀನ ಸಾಹಿತ್ಯದಲ್ಲಿ 'ಕಾದಂಬರಿ' ಎಂಬ ಅರ್ಥದಲ್ಲಿ ಯಾವ ಕೃತಿ ರಚನೆಯೂ ಆಗಲಿಲ್ಲ. ಆದರೆ 'ಮಹಾಕಾವ್ಯ' ಮತ್ತು 'ಆಖ್ಯಾನ' ಕಾವ್ಯಗಳಿದ್ದವು. ಆ ಕಾಲದಲ್ಲಿ ಕಾಣಬಹುದಾದುದು ಪದ್ಯ– ಕಾದಂಬರಿಯೇ ಎನ್ನಬಹುದು. ಒಂದು ದೃಷ್ಟಿಯಿಂದ ಈ ಹೇಳಿಕೆಯಲ್ಲಿ ಸತ್ಯಾಂಶವಿದೆ. ವಿವಿಧ ಪ್ರಸಂಗ, ವಿವಿಧ ಪಾತ್ರ ರಚನೆ, ವಿವಿಧ ಕಥಾನಕಗಳು ಒಟ್ಟುಗೂಡಿ ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಮಹಾಕಾವ್ಯಗಳು ನಿರ್ಮಾಣವಾದುವು. 'ವಾರ್ ಆ್ಯಂಡ್ ಪೀಸ್'ನಂತಹ ಕಾದಂಬರಿಗಳ ರಚನೆಯ ಬಗೆ ಮಹಾಕಾವ್ಯಗಳಂತೆಯೇ ತೋರುತ್ತದೆ. ಅರ್ಥಾತ್, ಮೇಲಿನ ವಿಧಾನಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಈ ಮಾತಿನ ನಿಜತೆ ಹೊಳೆಯುತ್ತದೆ. ಭಾಗವತಾದಿ ಮಹಾಕಾವ್ಯಗಳಲ್ಲಿಯಾಗಲಿ, ಮುಕ್ತೇಶ್ವರ ಮೋರೋಪಂತ ಮುಂತಾದ ಕವಿಗಳ ಆಖ್ಯಾನ ಕಾವ್ಯಗಳಲ್ಲಿಯಾಗಲಿ, ಮುಕ್ತಿ ಹಾಗು ಭಕ್ತಿಮಾರ್ಗಗಳ ಪ್ರಸಾರಾರ್ಥದ ಉದ್ದೇಶ ಎದ್ದುಕಾಣುತ್ತದೆ. ಅಂತೆಯೇ, ಅವುಗಳಲ್ಲಿಯ ಪ್ರಸಂಗ ವರ್ಣನೆ, ವ್ಯಕ್ತಿಚಿತ್ರಣ, ವಾತಾವರಣ ನಿರ್ಮಾಣಗಳು ಮೂಲೋದ್ದೇಶಕ್ಕೆ ತಕ್ಕಂತೆ ಹೊಂದಿಕೊಂಡಿರುತ್ತವೆ. ನಿಜವಾದ 'ಕಾದಂಬರಿ'ಯ ತತ್ತ್ವ ಭಕ್ತಿ ಸಂಪ್ರದಾಯ ನಿರೂಪಣೆಗೆಂದೇ ಮೀಸಲಾದುದಲ್ಲ; ಮೀಸಲಾಗಿಲ್ಲ. ಪೌರಾಣಿಕ ಕಾದಂಬರಿ ಒಂದು ಅಪವಾದ. ಇದೆಲ್ಲ, ಮುಂದಣ ವಿವರಣೆಗೆ ಪ್ರಾಸ್ತಾವಿಕವಾಗಿ ಬಂದ ವಿಚಾರಗಳು.

ಮರಾಠಿ ಸಾಹಿತ್ಯದ ಪ್ರಾರಂಭಕಾಲದಲ್ಲಿ ಗದ್ಯಲೇಖನದ ಪರಂಪರೆಯಿರ-ಲಿಲ್ಲ. ಹದಿಮೂರನೆಯ ಶತಮಾನದಲ್ಲಿ, ಹಿಂದಣ ಘಟನೆಗಳ ಸಂಗ್ರಹರೂಪವಾಗಿ

ಕೆಲವು ಗದ್ಯಚರಿತ್ರೆಗಳು ಉಪಲಬ್ಧವಿವೆ. ಅನಂತರ, ಹದಿನೇಳನೆಯ ಶತಮಾನದಲ್ಲಿ ಕಥಾರೂಪ ಗದ್ಯಗ್ರಂಥಗಳು ಕಂಡುಬರುತ್ತವೆ. ಇದರಿಂದ ಪ್ರಸಿದ್ಧ ಐತಿಹಾಸಿಕ ವ್ಯಕ್ತಿಗಳ ಚರಿತ್ರೆಗಳನ್ನು ಕಥಾರೂಪದಿಂದ ಗದ್ಯದಲ್ಲಿ ಬರೆಯುವ ರೂಢಿ ಮೊದಲಾಯಿತು. ಮರಾಠಿ ಸಾಹಿತ್ಯ ಚರಿತೆಯಲ್ಲಿ ಈ ಬಗೆಯ ಸಾಹಿತ್ಯಕ್ಕೆ 'ಬಖರ' ಸಾಹಿತ್ಯವೆನ್ನುವರು. 'ಬಖರ' ಸಾಹಿತ್ಯದ ಮೂಲ ಉದ್ದೇಶ ಐತಿಹಾಸಿಕ ಘಟನೆ, ಪ್ರಸಂಗಗಳ ಪ್ರತ್ಯಕ್ಷ ವಿವರಣೆ. ಈ ಉದ್ದೇಶ ಸಫಲವಾಗಿ ಕೈಗೂಡಲಿಲ್ಲವೆಂಬ ಚರ್ಚೆ ಇಲ್ಲಿ ಅನವಶ್ಯ.

ಮುಕ್ತಮಾಲಾ ಕಾಲಖಂಡ

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ, ಪೌರಾಣಿಕ ಆಖ್ಯಾನಗಳ ಸಂಕ್ಷಿಪ್ತ ರೂಪದ ಬಖರಗಳು ಪ್ರಚಲಿತಗೊಂಡವು. ಇದರಿಂದ ಉಪದೇಶದ ಜೊತೆಗೆ ವಾಚಕರಿಗೆ ಅದ್ಭುತ ರಸಾಸ್ವಾದನೆಯ ಅವಕಾಶ ಒದಗಿತು. ಉರ್ದು ಮತ್ತು ಫಾರ್ಸಿ ಕಥೆಗಳ ಮರಾಠಿ ಭಾಷಾಂತರಗಳು ಪ್ರಾರಂಭವಾದವು. ಇವುಗಳಲ್ಲಿ ವಿಶೇಷ ಪ್ರಸಿದ್ಧವಾದ ಭಾಷಾಂತರಗೊಂಡ ಕೃತಿ 'ಹಾತಿಮತಾಯಿ' (ಕ್ರಿ. ಶ. ೧೮೫೪). ಅರಬ್ಬೀ ಭಾಷೆಯ ಸುರಸ ಹಾಗು ಚಮತ್ಕಾರಿಕ ಕಥೆಗಳಿವು. ಕ್ರಿ. ಶ. ೧೮೬೧ ರಲ್ಲಿ ಉರ್ದು ಮತ್ತು ಫಾರ್ಸಿ ಕಥಾಸಾಹಿತ್ಯದ ಭಾಷಾಂತರಗಳ ಮೂಲಕ ಮರಾಠಿ ಸಾಹಿತ್ಯಕ್ಕೆ ಅದ್ಭುತ ಮತ್ತು ಶೃಂಗಾರರಸಗಳ ಮಹಾಪೂರವೇ ಹರಿದು ಬಂದಿತು. ಇಂಗ್ಲಿಷ್ ಕಾದಂಬರಿಗಳ ಮರಾಠಿ ಭಾಷಾಂತರ ಕಾರ್ಯವೂ ಇದೇ ಸಮಯದಲ್ಲಿ ಸುರುವಾಯಿತು. ಇದೆಲ್ಲದರ ಪರಿಣಾಮವಾಗಿ, ಮರಾಠಿಯಲ್ಲಿ ಕೂಡ ಅದ್ಭುತರಮ್ಯ, ಸಾಹಸಪೂರ್ಣ ಮತ್ತು ಶೃಂಗಾರರಸಪ್ರಧಾನ ಕಾದಂಬರಿ ರಚನೆಗೆ ಪ್ರೇರಣೆ ದೊರೆಯಿತು. ಕ್ರಿ.ಶ. ೧೮೬೧ ರಲ್ಲಿ ಲಕ್ಷ್ಮಣಶಾಸ್ತ್ರಿ ಹಳಬೆಯವರ 'ಮುಕ್ತಮಾಲಾ' ಮರಾಠಿಯ ಪ್ರಪ್ರಥಮ ಸ್ವತಂತ್ರ ಕಾದಂಬರಿ; ಎರಡನೆಯ ಕೃತಿ ಕ್ರಿ. ಶ. ೧೮೬೭ ರಲ್ಲಿಯ ರೀಸ್‌ಬೂಡರ 'ಮಂಜುಘೋಷಾ'. ಕ್ರಿ. ಶ. ೧೮೬೧–೧೮೮೦ ರ ನಡುವಣ ಇಪ್ಪತ್ತು ವರ್ಷಗಳ ಕಾಲದಲ್ಲಿ ಹಲವಾರು ಅದ್ಭುತರಮ್ಯ ಕಾದಂಬರಿಗಳು ಬೆಳಕಿಗೆ ಬಂದವು. ಇಂತಹ ಕಾದಂಬರಿಗಳನ್ನು ಕುರಿತು ಟೀಕೆ–ಟಿಪ್ಪಣಿಗಳೂ ಬಂದವು. ಪ್ರಣಯ ಸಾಮ್ರಾಜ್ಯದ ಅದ್ಭುತರಮ್ಯ ಕಥಾವಸ್ತುವಿಗೇ ಪ್ರಾಧಾನ್ಯ, ಕಥಾನಕ ಮತ್ತು ವ್ಯಕ್ತಿಚಿತ್ರಣಗಳೂ ಅತಿರಂಜಿತ; ಪುರುಷಪಾತ್ರಗಳೆಲ್ಲ ಪ್ರತಿ ಮನ್ಮಥರು, ಸ್ತ್ರೀಪಾತ್ರಗಳೆಲ್ಲ ರತಿದೇವಿಯರು. ಈ ಬಗೆಯ ನಿಯಮಬದ್ಧತೆಯಿಂದ ಭಾಷೆಯಲ್ಲಿ ಕೃತ್ರಿಮತೆ ತಲೆದೋರಿತು. ಕಾದಂಬರಿಯ ತಂತ್ರದ ಸೂತ್ರಗಳೇ ತಿಳಿದಿರದ ಕಾಲವದು. ಆದರೂ, ಕಾದಂಬರಿಗಳು ಜನಪ್ರಿಯವಾದುವೆಂಬಲ್ಲಿ ಸಂದೇಹವಿಲ್ಲ. ವಿಷ್ಣುಶಾಸ್ತ್ರಿ ಚಿಪಳೂಣಕರ ಮತ್ತು ನ್ಯಾಯಮೂರ್ತಿ ರಾನಡೆಯವರು 'ಮುಕ್ತಮಾಲಾ'ವನ್ನು ಹೊಗಳಿದರು.

ಹರಿಭಾವು–ಪೂರ್ವ ಕಾಲ

ಕ್ರಿ. ಶ. ೧೮೬೦ ರ ನಂತರ ಮರಾಠಿ ವಾಙ್ಮಯಾಭಿರುಚಿಯಲ್ಲಿ ನಿಧಾನವಾಗಿ-ಯಾದರೂ ಹೊಸತನದ ಲಕ್ಷಣಗಳು ಇಣಿಕಿದವು. ಕ್ರಿ. ಶ. ೧೮೫೭ರಲ್ಲಿ ಮುಂಬಯಿ ವಿಶ್ವವಿದ್ಯಾಲಯವು ಪ್ರಾರಂಭವಾಯಿತು. ಇಂಗ್ಲಿಷ್ ಸಾಹಿತ್ಯವನ್ನು ಅಭ್ಯಸಿಸಿದ ಪದವೀಧರರು ಹೊರಬೀಳಹತ್ತಿದರು. ಇವರಿಗೆ ರಾಜ–ರಾಣಿಯರ ಅತಿರಂಜಿತ ಕಥೆ-ಗಳಾಗಲಿ, ನಿರೂಪಣೆಯ ಏಕತಾನತೆಯಾಗಲಿ ಹಿಡಿಸಲಿಲ್ಲ, ಸಮಾಧಾನವಾಗಲಿಲ್ಲ. ನಿತ್ಯ ನಡೆಯುವ ಜನಜೀವನವೇ ನಮ್ಮ ಜಗತ್ತು; ಅದರ ವಾಸ್ತವ ಚಿತ್ರಣವೇ ಸಾಹಿತ್ಯದ ಸೊತ್ತಾಗುವುದು ಉಚಿತವೆಂಬ ವಿಚಾರಪ್ರಣಾಲಿ ಬೆಳೆಯತೊಡಗಿತು. ಕಾಲ್ಪನಿಕ ಕಥೆಗಳಿಗಿಂತ ಶ್ರೇಷ್ಠ ಐತಿಹಾಸಿಕ ವ್ಯಕ್ತಿಗಳ ಕರ್ತೃತ್ವಶಕ್ತಿಯ ಯಥಾವತ್ತಾದ ಚಿತ್ರಣ ಬರೆಯುವುದೇ ಮಹತ್ವವಾದುದೆಂದಿವರು ಬಗೆದರು.[೧]

ಇದೆಲ್ಲದರ ಫಲವಾಗಿ, ಮರಾಠಿಯಲ್ಲಿ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳು ಜನ್ಮವೆತ್ತಿದವು. ಮರಾಠಿ ಸಾಹಿತ್ಯದಲ್ಲಿ, ಕ್ರಿ. ಶ. ೧೮೭೯ ರಲ್ಲಿ ಪ್ರಕಟವಾದ ರಹಾಳಕರ ಅವರ 'ನಾರಾಯಣರಾವ್ ಆಣಿ ಗೋದಾವರಿ' ಯೇ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ಗಣಿಸಲಾಗಿದೆ. ಹಿಂದು ವಿಧವಾ ಸ್ತ್ರೀಯರ ಅನುಕಂಪನೀಯ ಪರಿಸ್ಥಿತಿಯ ಚಿತ್ರಣವೇ ಈ ಕಾದಂಬರಿಯ ಕಥಾವಸ್ತು. ಈ ಕಾದಂಬರಿಯ ಮೇಲೆ ಇಂಗ್ಲಿಷ್ ಗ್ರಂಥವೊಂದರ ಪ್ರಭಾವವಿದ್ದರೂ, ಸಂಸಾರ ಚಿತ್ರ ನೈಜತೆಯಿಂದ ತುಂಬಿಕೊಂಡಿದೆ.[೨]

ವ್ಹಿ. ಕೆ. ಓಕರವರ 'ಶಿರಸ್ತೇದಾರ' ಕಾದಂಬರಿಯಲ್ಲಿ (ಕ್ರಿ. ಶ. ೧೮೮೧). ಲಂಚ ತಿನ್ನುವುದರ ದುಷ್ಪರಿಣಾಮಗಳ ನಿರೂಪಣೆಯಿದೆ. ಭಾಷೆ ಕಥಾವಸ್ತುವಿಗೆ ಅನುಗುಣವಾಗಿದೆ. ಗುಂಜೀಕರವರ 'ಮೋಚನಗಡ' (ಕ್ರಿ. ಶ. ೧೮೭೧) ಮರಾಠಿಯಲ್ಲಿ ಪ್ರಥಮ ಸ್ವತಂತ್ರ ಐತಿಹಾಸಿಕ ಕಾದಂಬರಿ. ವರ್ಣನಾಶೈಲಿ, ಕಥಾರಚನೆ ಚಿತ್ತಾಕರ್ಷಕವಾಗಿವೆ. ಇಲ್ಲಿ 'ವಾಲ್ಟರ್ ಸ್ಕಾಟರ ಐತಿಹಾಸಿಕ ಕಾದಂಬರಿಯ ಪದ್ಧ-ತಿಯ ಅನುಸರಣೆ ಕಾಣುತ್ತಿದೆ. ಮುಂದೆ ಏಳೆಂಟು ವರ್ಷಗಳಲ್ಲಿ, ಬಾಪಟರವರ,

---

೧. ಕ್ರಿ. ಶ. ೧೮೬೫ ರಿಂದ ಕ್ರಿ. ಶ. ೧೮೭೫ ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ, ಪ್ರಾರ್ಥನಾ ಸಮಾಜ, ಡೆಕ್ಕನ್ ಕಾಲೇಜ್, ಸತ್ಯಶೋಧಕ ಸಮಾಜ, ಸಾರ್ವಜನಿಕ ಸಭಾ, ಥಿಯಾಸಫಿಕಲ್ ಸೊಸೈಟಿ, ವಿವಾಹೋತ್ತೇಜಕ ಮಂಡಳ, ಆರ್ಯಸಮಾಜ ಮೊದಲಾದ ಸಂಘ–ಸಂಸ್ಥೆಗಳು, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿ ಕಾರ್ಯ ಮಾಡತೊಡಗಿದವು. ಹೇಳಿಕೊ–ಳ್ಳುವಂತಹ ಕಾರ್ಯಗಳೂ ನಡೆದವು.

೨. ಕ್ರಿ. ಶ. ೧೮೫೭ ರಲ್ಲಿ ಬಾಬಾ ಪದಮನಜೀಯವರ 'ಯಮುನಾ ಪರ್ಯಟನ' ಸಾಮಾಜಿಕ ಕಾದಂಬರಿ ಪ್ರಕಟವಾಗಿದ್ದಿತು. ಹಿಂದು ಧರ್ಮದ ಅವಗುಣ, ಕ್ರೈಸ್ತ ಧರ್ಮದ ಒಳ್ಳೆಯ ಗುಣಗಳನ್ನು ಹೇಳುವುದೇ ಈ ಕಾದಂಬರಿಕಾರರ ಉದ್ದೇಶ. ಕಾದಂಬರಿಯ ತಂತ್ರ ಇಲ್ಲಿ ಕಾಣುತ್ತಿಲ್ಲ.

'ಚಿತ್ತೂರಗಡಚಾ ವೇಢಾ', 'ಪಾನಿಪತ್‌ಚೀ ಮೋಹಿಮ್' ಮೊದಲಾದ ಐತಿಹಾಸಿಕ ಕಾದಂಬರಿಗಳು ಪ್ರಕಟವಾದವು. ಈ ಬಗೆಯ ಸಾಮಾಜಿಕ ಮತ್ತು ಐತಿಹಾಸಿಕ ಹೊಸ ಕಾದಂಬರಿಗಳಿಂದ 'ಮುಕ್ತಮಾಲಾ', 'ಮಂಜುಘೋಷಾ' ಗಳಂತಹ ಕಾದಂಬರಿಗಳ ಯುಗ ಅಸ್ತವಾಯಿತು. ಕ್ರಿ. ಶ. ೧೮೮೦ ರ ಸುಮಾರದ ಕಾಲದಲ್ಲಿ ಮರಾಠಿ ಕಾದಂಬರಿ ಇತಿಹಾಸದಲ್ಲಿ ನಡೆದ ಮಾರ್ಪಾಟುಗಳಿವು.

ಹರಿಭಾವು ಕಾಲಖಂಡ

ಹರಿ ನಾರಾಯಣ ಆಪಟೆಯವರ ಮೊದಲನೆಯ ಕಾದಂಬರಿ 'ಮಧಲಿ ಸ್ಥಿತಿ' ಕ್ರಿ. ಶ. ೧೮೮೫ ರಲ್ಲಿ ಪುಣೆಯ 'ವೈಭವ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ರೆನಾಲ್ಡ್ಸನ 'ಓಲ್ಡ್ ಲಂಡನ್'ನ ಭಾಷಾಂತರ, ಈ ಕಾದಂಬರಿಯ ಮೊದಲ ಪ್ರಕರಣ. ಹರಿಭಾವುರವರ 'ಆಜ ಕಾಲಚಾ ಗೋಷ್ಟಿ' ಪ್ರಕಟವಾದಾಗ, ಮರಾಠಿ ಕಾದಂಬರಿ ಚರಿತೆಯಲ್ಲಿಯ ಕ್ರಾಂತಿ ಸ್ವರೂಪ ನಿಶ್ಚಿತ-ವಾಯಿತು. ಹರಿಭಾವು ಸತ್ಯನಿಷ್ಠರು, ಧ್ಯೇಯವಾದಿ. ಇವರ ಕಾದಂಬರಿಗಳಲ್ಲಿ ಸುಶಿಕ್ಷಿತ ತರುಣವರ್ಗ ಮತ್ತು ಸನಾತನಿ ಪುರುಷ ಪ್ರತಿಷ್ಠಿತ ಸಮಾಜಗಳಲ್ಲಿಯ ಮತಭೇದ ಸಂಘರ್ಷಣೆಗಳ ಚಿತ್ರಣ ಎದ್ದು ತೋರುವ ಅಂಶವಾಗಿದೆ. ಹಿಂದೂ ಸಮಾಜದಲ್ಲಿರುವ ರಾಕ್ಷಸಿ ರೂಢಿಯ ಅತಿಭಯಾನಕ ದೃಶ್ಯವೆಂದರೆ, ಅಸಹಾಯರಾದ ಬಾಲವಿಧವೆಯರ ಕೇಶವಪನ ಪ್ರಸಂಗ. ಈ ಘಟನೆಯನ್ನೇ ಮುಖ್ಯವಾಗಿರಿಸಿ, ಕೊಂಡು 'ಪಣ ಲಕ್ಷ್ಯಾತ ಕೋಣ ಘೇತೋ ಎಂಬ ಕಾದಂಬರಿ' ಬರೆದರು. ಇದರಲ್ಲಿ ಕಥಾನಾಯಕಿ ಯಮೂ ತನ್ನ ಆತ್ಮಚರಿತೆಯನ್ನು ನಿವೇದಿಸುವಳು. ಕಾದಂಬರಿಯ ಭಾಷೆ ಸ್ತ್ರೀಸಹಜವಾಗಿದ್ದು ಹೃದಯಸ್ಪರ್ಶಿಯಾಗಿದೆ. ಅವಿಭಕ್ತ ಏಕತ್ರ ಹಿಂದು ಕುಟುಂಬ ಪದ್ಧತಿಯ ಅನ್ಯಾಯಗಳ ಯಥಾಯೋಗ್ಯ ನಿವೇದನೆ-ಯಿದೆ. ಶಂಕರ ಮಾಮಂಜಿ ಎಂಬ ಪಾತ್ರ ಸನಾತನಿ ಕುಟುಂಬ ಪದ್ಧತಿಯ ಬಲಿರೂಪದ ಪ್ರತೀಕವೆಂದೇ ಹೇಳಬೇಕು. ಹ. ನಾ. ಆಪಟೆಯವರ ಸಾಮಾಜಿಕ ಕಾದಂಬರಿಗಳಲ್ಲಿ, ಹಿಂದೂ ಸಮಾಜದಲ್ಲಿಯ ಸ್ತ್ರೀಯ ಅಸಹಾಯಕತೆಯೇ ಪ್ರಧಾನ ವಿಷಯ. ಸ್ತ್ರೀಶಿಕ್ಷಣ, ಪ್ರೌಢವಿವಾಹ ಮತ್ತು ಪುನರ್ವಿವಾಹ ಮೊದಲಾದ ಕ್ರಾಂತಿಕಾರಕ ವಿಚಾರಗಳನ್ನು ಆ ಕಾಲದಲ್ಲಿ ಪ್ರಶಂಸಿಸಿದರು.

ಹರಿಭಾವುರವರ 'ಮೀ' ಕಾದಂಬರಿಯಲ್ಲಿ ಅವರ ವಿಚಾರಸರಣಿ ಮತ್ತು ಕಲ್ಪನೆಗಳ ಪ್ರಚಂಡ ರೂಪ ಕಂಡುಬರುತ್ತದೆ. ದೇಶದ ಉನ್ನತಿಗಾಗಿ ಸರ್ವಸ್ವ ತ್ಯಾಗಕ್ಕೆ ಸಿದ್ಧವಾಗಿರಬೇಕು. ಈ ವಿಚಾರಕ್ಕನುರೂಪವಾದ ಸ್ಫೂರ್ತಿದಾಯಕ ಆದರ್ಶ ಪಾತ್ರವೇ 'ಮೀ' ಕಾದಂಬರಿಯ ಭಾವಾನಂದ. ಇಲ್ಲಿ ರಾಜಕೀಯ ಧ್ಯೇಯ-ವಾದದ ಪುರಸ್ಕಾರವಿದೆ. ಇದೇ ತಳಹದಿಯ ಮೇಲೆ ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿ ರೂಪುಗೊಂಡಿತು. ಮಹಾತ್ಮಾ ಗಾಂಧಿಯವರ ರಾಜಕೀಯ ತತ್ತ್ವ-

ಗಳ ಅಧಿಷ್ಠಾನವಾದಂತಾಯಿತು. ಇದು ಅವಶ್ಯವಾಗಿ ಗಮನಾರ್ಹವಾದ ಸಂಗತಿ.

ಹರಿಭಾವು ಬರೆದ ಮರಾಠಿ ಸಾಮಾಜಿಕ ಕಾದಂಬರಿಗಳ ಸಂಖ್ಯೆ ಹತ್ತು ಮಾತ್ರ. ಅವುಗಳಲ್ಲಿ ಮೂರು ಕಾದಂಬರಿಗಳು ಉಳಿದಿವೆ. ಹರಿಭಾವು ಮರಾಠಿ ಸಾಮಾಜಿಕ ಕಾದಂಬರಿಗಳ ಸಂಸ್ಥಾಪಕರೆಂಬುದು ನಿಸ್ಸಂದೇಹವಾದುದು. ಅವರ ವಿಶಾಲ ಬುದ್ಧಿಮತ್ತೆ, ಕೋಮಲ ಅಂತಃಕರಣ, ಸಂಸ್ಕಾರಗೊಂಡ ಮನಸ್ಸು, ಆಳ–ಅಗಲವುಳ್ಳ ಅಭ್ಯಾಸ, ವಾಸ್ತವ ಧ್ಯೇಯವಾದಗಳು ಆದರಣೀಯವಾಗಿವೆ. ದೊಡ್ಡವರ ಆದರ್ಶ, ಧ್ಯೇಯನಿಷ್ಠ ಹಾಗು ವಾಸ್ತವತೆಗಳನ್ನೊಳಗೊಂಡ ಸಾಮಾಜಿಕ ಕಾದಂಬರಿಗಳನ್ನು ಬರೆಯಲು ಅವರ ಕರ್ತೃತ್ವಶಕ್ತಿಯನ್ನು ಪ್ರೇರೇಪಿಸಿತು. ಅವರ ಸಾಮಾಜಿಕ ಕಾದಂಬರಿಗಳೆಂದರೆ ಕ್ರಿ. ಶ. ೧೮೭೦–೭೫ ರಿಂದ ೧೯೧೫–೨೦ರ ವರೆಗಿನ ಮಹಾರಾಷ್ಟ್ರದ ಹಿಂದೂ ಸಮಾಜಜೀವನದ ಕಲಾರೂಪ ಕೈಗನ್ನಡಿಗಳಾಗಿವೆ.

ಸಾಮಾಜಿಕ ಕಾದಂಬರಿಗಳ ಜೊತೆಗೆ ಐತಿಹಾಸಿಕ ಕಾದಂಬರಿಗಳ ಸ್ಥಾನವನ್ನೂ ಸ್ಥಿರಗೊಳಿಸಿದವರು ಆಪಟೆಯವರೇ. ಅವರ 'ಉಷಃಕಾಲ' ಕಾದಂಬರಿಯೆಂದರೆ ಮರಾಠಿ ಐತಿಹಾಸಿಕ ಕಾದಂಬರಿಗಳಿಗೂ ಉಷಃಕಾಲವೇ ಸರಿ. ಇವರ ಐತಿಹಾಸಿಕ ಕಾದಂಬರಿಗಳ ಕಥಾವಸ್ತುವಿನ ವ್ಯಾಪ್ತಿ ಗುಪ್ತರ ಕಾಲದಿಂದ ಪೇಶವೆಯರ ಕಾಲದವರೆಗಿನ ಸುದೀರ್ಘ ಹರವಿನಲ್ಲಿ ಹರಡಿಕೊಂಡಿದೆ. ಹರಿಭಾವು-ರವರ ಇತಿಹಾಸಪ್ರಜ್ಞೆ ಕೇವಲ ಮಹಾರಾಷ್ಟ್ರದ ಇತಿಹಾಸಕ್ಕೆ ಸೀಮಿತವಾಗಿರಲಿಲ್ಲ. ರಜಪೂತ ಮತ್ತು ಕರ್ನಾಟಕದ ಇತಿಹಾಸವನ್ನೂ ತಮ್ಮ ಕಾದಂಬರಿಗಳಲ್ಲಿ ಬಳಸಿಕೊಂಡಿರುವರು. ಮರಾಠಿ ಬಖರ, ಪರ್ಸಿಯನ್ ಬಖರಗಳ ಭಾಷಾಂತರ, ಕಾವ್ಯೇತಿಹಾಸ ಸಂಗ್ರಹ, ಗೀಗೀ ಪದ, ಐತಿಹಾಸಿಕ ಗೋಷ್ಠಿ ಮತ್ತು ದಂತಕತೆಗಳು ಆಧಾರಮೂಲಗಳು. ಮರಾಠಶಾಹಿ ಇತಿಹಾಸದಲ್ಲಿ ಶಿವರಾಜ್ಯ ಸ್ಥಾಪನೆಯಿಂದ ಸಂಭಾಜೀ ಅಂತ್ಯದವರೆಗಿನ ಕಾಲವನ್ನು ಉಪಯೋಗಿಸಿಕೊಂಡಿರುವರು. 'ಉಷಃ-ಕಾಲ', 'ಗಡ ಆಲಾ ಪಣ ಸಿಂಹ ಗೇಲಾ', 'ರೂಪನಗರಚೀ ರಾಜಕನ್ಯಾ', 'ಚಂದ್ರಗುಪ್ತ', 'ವಜ್ರಾಘಾತ'ಗಳು ಇವರ ಶ್ರೇಷ್ಠ ಐತಿಹಾಸಿಕ ಕಾದಂಬರಿಗಳು. ಕ್ರಿ. ಶ. ೧೮೯೦–೯೫ ರ ಅವಧಿಯಲ್ಲಿ ಅನೇಕ ಮಹಾರಾಷ್ಟ್ರೀಯ ವಿದ್ವಾಂಸರು ಸ್ವದೇಶಾಭಿಮಾನಪ್ರೇರಿತರಾಗಿ, ಇತಿಹಾಸ ಸಂಶೋಧನ ಕಾರ್ಯ ಕೈಕೊಂಡರು. ರಾಯಗಡದ ಮೇಲೆ ಶಿವಾಜಿ ಮಹಾರಾಜನ ಮಹೋತ್ಸವ ಕಾರ್ಯ ಪ್ರಾರಂಭ-ವಾಗಿತ್ತು. ಇದರಿಂದ ಪ್ರೇರಿತರಾದ ಹರಿಭಾವು ಒಂದು ಲೇಖನವನ್ನೂ ಬರೆದಿದ್ದ-ರೆಂದು ತಿಳಿಯುತ್ತಿದೆ. ಐತಿಹಾಸಿಕ ಕಾಲಕ್ಕೆ ತೀರ ಹೊಂದಿಕೊಳ್ಳುವಂತೆ, ಆ ಕಾಲದ ಜೀವನದ ಸ್ವಾಭಾವಿಕ ಸ್ವರೂಪವನ್ನು ಚಿತ್ರಿಸುವಂತೆ, ಅವರ ಕಲ್ಪನಾ ಶಕ್ತಿ ಪ್ರಖರವಾಗಿತ್ತು. ಐತಿಹಾಸಿಕ ಕಾದಂಬರಿಗಳಲ್ಲಿ ಕಲ್ಪನಾವಿಲಾಸಕ್ಕೆ ಸ್ಥಾನ ಪಿತ್ತಿದ್ದಾರೆ; ಆದರೆ ಆ ಕಾಲದ ವ್ಯಕ್ತಿಗಳ ಚಿತ್ರಣದಲ್ಲಿ ಕಾಲವಿಸಂಗತಿಯುಂಟಾಗ-ದಂತೆ ಎಚ್ಚರಿಕೆ ವಹಿಸಿದ್ದಾರೆ. ಇತಿಹಾಸ ಗ್ರಂಥಗಳಿಗಿಂತ ಮರಾಠಿ ವಾಚಕರಿಗೆ

ಶಿವಾಜಿಯ ವ್ಯಕ್ತಿತ್ವವನ್ನರಿಯಲು ಇವರ ಕಾದಂಬರಿಗಳೇ ಹೆಚ್ಚು ಸಹಾಯಕವಾದವು. ಆಪಟೆಯವರ ಐತಿಹಾಸಿಕ ಕಾದಂಬರಿಗಳಲ್ಲಿ, ಉತ್ಕೃಷ್ಟ ವಾತಾವರಣ ನಿರ್ಮಾಣವಿದೆ; ರಹಸ್ಯಗಮ್ಯ ಕಥಾವಸ್ತುವಿದೆ; ಮೂರ್ತಿಮಂತ ವ್ಯಕ್ತಿಚಿತ್ರಣವಿದೆ: ಮಾರ್ಮಿಕ ಸಂವಾದಶೈಲಿಯಿದೆ. ಇಂತಹ ಕಾದಂಬರಿಗಳು ಮರಾಠಿ ವಾಚಕರ ಮೇಲೆ ಅಚ್ಚಳಿಯದ ಪ್ರಭಾವಮುದ್ರೆಯೊತ್ತುವದರಲ್ಲಿ ಅಚ್ಚರಿಯಿಲ್ಲ.

ಹರಿಭಾವು ಅವರ ಸಾಹಿತ್ಯರಚನೆಗೆ ಒಂದು ಉದ್ದೇಶವಿತ್ತು. ವಿದಗ್ಧ ವಾಙ್ಮಯ ವಾಚಕರ ಮನ ಸೆಳೆಯುತ್ತದೆ. ಅವರ ರೂಪ, ಗುಣಗಳು ಅವರ ಹೃದಯವನ್ನು ಸೂರೆಗೊಳ್ಳುತ್ತವೆ. ಸಾಹಿತ್ಯದ ಅಭಿರುಚಿ, ಉಪಾಸನೆ ಹೆಚ್ಚುತ್ತವೆ. ಜೊತೆಗೆ ಮನೋರಂಜನೆಯೂ ಉಂಟಾಗುತ್ತದೆ. ಉಚ್ಚ ಮಟ್ಟದ ಸಾಹಿತ್ಯ ಮಾನವನಲ್ಲಿ ಸಾತ್ವಿಕ ಪ್ರವೃತ್ತಿಯನ್ನು ವರ್ಧಿಸುತ್ತದೆ. ಇಂತಹ ಅಭಿಪ್ರಾಯವನ್ನಿಟ್ಟುಕೊಂಡೇ ಹರಿಭಾವು ಧ್ಯೇಯವಾದಿಯಾದ ಮತ್ತು ಬೋಧಪರ ಸಾಹಿತ್ಯ ಸೃಷ್ಟಿಯನ್ನು ಸ್ವೀಕರಿಸಿದರೆಂದಲ್ಲ. ವಸ್ತುತಃ ಅವರ ಕಲಾದೃಷ್ಟಿ ನಿರ್ವಿಕಾರವಾದುದು. ಇಂಗ್ಲಿಷ ಮತ್ತು ಫ್ರೆಂಚ್ ಸಾಹಿತ್ಯದಲ್ಲಿ ಉತ್ತಮ ಕೃತಿಗಳನ್ನು ಕಲಾದೃಷ್ಟಿಯಿಂದ ಕಂಡಿದ್ದರು; ಚಿಕಿತ್ಸಕ ಬುದ್ಧಿಯಿಂದ ಪರಿಶೀಲಿಸಿದ್ದರು. ಮಾನವನ ಸೂಕ್ಷ್ಮಾತಿಸೂಕ್ಷ್ಮ ಭಾವನೆ, ಅನಿಸಿಕೆಗಳ, ಮನದ ಆಳದ ಒಳಪದರುಗಳ ಚಿತ್ರಣದಲ್ಲಿ ಅವರದು ಎತ್ತಿದ ಕೈ. ಇಂದಿಗೂ ಇವರನ್ನು ಸರಿಗಟ್ಟುವ ಕಾದಂಬರಿಕಾರ ಮರಾಠಿ ಸಾಹಿತ್ಯದಲ್ಲಿಲ್ಲವೆನ್ನಬಹುದು. 'ಪಣ ಲಕ್ಷಾತ ಕೋಣ ಘೇತೋ', 'ಮೀ' ಹಾಗು 'ವಜ್ರಾಘಾತ'– ಈ ಮೂರು ಕಾದಂಬರಿಗಳು ಮರಾಠಿ ಕಾದಂಬರಿ ರಂಗದ ಮುಕುಟಮಣಿಗಳು. ರಮಣೀಯತೆ ಮತ್ತು ರಸಾತ್ಮಕತೆಗಳು ಲಲಿತ ಸಾಹಿತ್ಯದ ತಿರುಳು ಎಂಬುದೆ ಅವರ ನಂಬುಗೆ. 'ಕರಮಣೂಕ' ಎಂಬ ಪತ್ರಿಕೆಯಲ್ಲಿವರು ಬರೆಯುತ್ತಿದ್ದ, ಲೇಖನಗಳಲ್ಲಿ ಪುನರುಕ್ತಿ ಮತ್ತು ಹಾಳುಹರಟೆಯ ದೋಷಗಳು ಕಂಡುಬರುತ್ತವೆ. ಈ ದೋಷಗಳಿಗಿಂತ ಸಾಹಿತ್ಯ ಗುಣಗಳು ಅಧಿಕವಾಗಿರುವದರಿಂದ, ಹರಿಭಾವು ಅವರ ಆದರ್ಶ ಇಂದಿಗೂ ಮರಾಠಿ ಕಾದಂಬರಿಕಾರರಿಗೆ ಆದರ್ಶವಾಗಿಯೇ ಉಳಿದಿದೆ. ಅನೇಕ ಭಾರತೀಯ ಭಾಷೆಗಳಲ್ಲಿ ಇವರ ಕಾದಂಬರಿಗಳು ಅನುವಾದಗೊಂಡಿವೆ. ಗಳಗನಾಥರವರು ಹರಿಭಾವುರವರ ಕೆಲವು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡ ಕಾದಂಬರಿ ವಾಙ್ಮಯಕ್ಕೆ ಬುನಾದಿ ಹಾಕಿದರೆಂದು ಹೇಳುವರು.

ರಾಗಿಣಿ ಕಾಲಖಂಡ

ಮರಾಠಿ ಕಾದಂಬರಿ ಸ್ವರೂಪ ವಿಚಾರಪೂರ್ಣತೆಗೆ ತಿರುಗಿದುದು ಸುಮಾರು ೧೯೨೦ರ ನಂತರ–ಅಂದರೆ, ಮುಂಬಯಿ ವಿಶ್ವವಿದ್ಯಾಲಯ ಸ್ಥಾಪಿತವಾಗಿ ಅರವತ್ತು ವರ್ಷಗಳ ಮೇಲೆ. ಹರಿಭಾವು ಅವರು ತಮ್ಮ ಕಾದಂಬರಿಗಳಲ್ಲಿ ಯಾವ ಸ್ತ್ರೀಶಿಕ್ಷಣ

ಕ್ಕಾಗಿ ಅಗ್ರಪದ ಪುರಸ್ಕಾರವಿತ್ತರೋ, ಅದೇ ಬಗೆಯ ಶಿಕ್ಷಣದಿಂದ ಮುಂದೆ ಸ್ತ್ರೀಯರಿಗೆ ಸ್ವತಂತ್ರ ವ್ಯಕ್ತಿಮತ್ವ ಲಭ್ಯವಾಯಿತು. ಇದರಿಂದ ಹೊಸ ಸಾಮಾಜಿಕ ಸಮಸ್ಯೆಯೂ ನಿರ್ಮಾಣವಾಯಿತು. ಪುರುಷರಷ್ಟೇ ಶಿಕ್ಷಣ ಪಡೆದ ಸ್ತ್ರೀಯರಿಗೆ ಸಮಾನ ಹಕ್ಕು ಬಂದಿತು; ಮತ್ತು ಅದಕ್ಕಾಗಿ ಅವರು ಘರ್ಷಣೆ ಪ್ರಾರಂಭಿಸಿದರು. ವಾಮನ ಮಲ್ಹಾರ ಜೋಶಿ ಅವರ 'ರಾಗಿಣಿ' ಕಾದಂಬರಿಯಲ್ಲಿ, ಈ ಘರ್ಷಣೆಯ ಸ್ವರೂಪ ವ್ಯಕ್ತವಾಗುತ್ತದೆ. 'ರಾಗಿಣಿ'ಯ ಉತ್ತರಾ ಸ್ವಾತಂತ್ರ್ಯವಾದಿನಿ. ರಾಗಿಣಿ ಅವಳ ಗೆಳತಿ; ಸುಶಿಕ್ಷಿತಳಾಗಿದ್ದರೂ ಸ್ವಭಾವದಿಂದ ಸೌಮ್ಯ, ಹಾಗು ರಸಿಕಳು. ಅವಳದು ಗೃಹಿಣಿಯರ ಮನೋಹರವಾದ ಗುಣ. 'ರಾಗಿಣಿ'ಯಲ್ಲಿ ವಿದ್ಯಾವಂತ ಸ್ತ್ರೀಯರ ಇವೆರಡು ಮಾದರಿಗಳಿವೆ.

ಪುರುಷರು ಸಹ ಸುಮಾರು ಮೂರು ತಲೆಮಾರುಗಳಿಂದ ಹೊಸ ಶಿಕ್ಷಣಕ್ಕೆ ಪಕ್ಕಾಗಿದ್ದರು. ಇಂಗ್ಲಿಷ್ ಸಾಹಿತ್ಯಾಭ್ಯಾಸ ಪ್ರಭಾವದಿಂದ ನಮ್ಮ ಧರ್ಮ, ಸಮಾಜ ಮತ್ತು ಸಂಸ್ಕೃತಿಗಳ ಬಗೆಗೆ ವಿಶಾಲ ಮತ್ತು ಉದಾರ ದೃಷ್ಟಿಯಿಂದ ವಿಚಾರಿಸಲು ಸಾಧ್ಯವಾಯಿತು. ಲೋಕಹಿತವಾದಿ ಗೋಖಲೆ, ಜ್ಯೋತಿಬಾ ಫುಲೆ, ಅಗರಕರ ಅವರು ತಮ್ಮ ವಿಚಾರಸರಣಿಯನ್ನು ದೃಢವಾಗಿ ನಂಬಿಕೊಂಡಿದ್ದರು. ಇವರಿಗೆ ಲೋಕಮಾನ್ಯ ಟಿಳಕರ ರಾಜಕಾರಣ ಮತ್ತು ಭಾರತೀಯ ಕಾಂಗ್ರೆಸ್ಸಿನ ಕಾರ್ಯ-ಕಲಾಪಗಳ ಹಿನ್ನೆಲೆಯ ಅನುಭವವಿತ್ತು. ಆಗಿನ ತರುಣ ಪೀಳಿಗೆ ಧ್ಯೇಯವಾದಿ ಮತ್ತು ರಾಷ್ಟ್ರೀಯವಾದಿಯಾಗಿತ್ತು. ಹರಿಭಾವು ಕಾಲದಲ್ಲಿಯ ಸಂಘರ್ಷಣೆ ಸನಾತನಿ ಮತ್ತು ಸುಧಾರಕರ ನಡುವೆ; ವಾಮನ ಮಲ್ಹಾರರ ಕಾಲದಲ್ಲಿಯ ತಿಕ್ಕಾಟ ಇಂಗ್ಲಿಷ್ ಕಲಿತ ಎರಡು ತಲೆಮಾರಿನ ಪೀಳಿಗೆಗಳಲ್ಲಿ. ಈ ಎರಡು ಪೀಳಿಗೆಗಳ ಉದ್ದೇಶ ಒಂದೇ, ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯ. ವಿಚಾರ ಒಂದಿದ್ದರೂ, ಅನುಸರಿಸುವ ದಾರಿ ಎರಡಾದವು. ಆ ಕಾಲದ ರಾಜಕೀಯ ಧೋರಣೆಯಲ್ಲಿಯೂ ಮೂಬಗೆಯ ವಿಚಾರ ಪಂಗಡಗಳು ತೋರುತ್ತಿದ್ದವು. 'ಜಹಾಲ', 'ಮವಾಳ'(ತಲೆತಿರುಕ ವರ್ಗ,ಸೌಮ್ಯವರ್ಗ)ಮತ್ತು'ಸಶಸ್ತ್ರಕ್ರಾಂತಿಕಾರಿ'. ವಾಮನ ರಾಯರ ಕಾದಂಬರಿ ವೃದ್ಧ–ತರುಣ ಪೀಳಿಗೆಗಳು ಇಣಿಕಿವೆ. ವೃದ್ಧರ ವಿಚಾರಗಳಿಗೇ ಕಾದಂಬರಿಕಾರರ ಬೆಂಬಲವೆಂಬುದು ಕಂಡುಬರುತ್ತಿದೆ. ತರುಣರು ಟಿಳಕರ ರಾಜ-ಕಾರಣ ಮಾರ್ಗದಿಂದ ನುಸುಳಿಕೊಂಡು ಗಾಂಧೀವಾದದೆಡೆಗೆ ವಾಲಿದರು, ವಾಮನ-ರಾಯರ ಆ ಮುಂದಿನ ಕಾದಂಬರಿಗಳಲ್ಲಿ ಗಾಂಧೀ ಹಾಗೂ ಕೇಳಕರರ ರಾಜಕೀಯ ಭಿನ್ನರೂಪಗಳ ತಾಕಲಾಟದ ಚಿತ್ರಣವಿದೆ. 'ಸುಶೀಲೇಚಾ ದೇವ', 'ನಲಿನೀ', 'ಇಂದು ಕಾಳೇ, ಸರಲಾ ಭೋಳೆ'–ಈ ಕಾದಂಬರಿಗಳಲ್ಲಿ ಬರುವ ಸುನಂದಾ, ಬಾಳು, ಸುಶೀಲಾ, ವಿನಾಯಕರಾವ್ ಮೊದಲಾದ ಪಾತ್ರಗಳು ವೈಚಾರಿಕ ಜೀವನದ ಸಂಕೇತಗಳು. ಸುಶಿಕ್ಷಿತರಲ್ಲಿ ವಿದ್ಯಾರ್ಜನೆಯ, ಸಂಶೋಧನೆಯ ಹಂಬಲವಿತ್ತು. ಇಂತಹ ಒಂದು ವ್ಯಕ್ತಿಚಿತ್ರಣವೇ 'ಇಂದೂ ಕಾಳೆ, ಸರಲಾ ಭೋಳೆ'ಯಲ್ಲಿಯ ನಾರಾಯಣ

ರಾವ್ ಪಾಠಕ ಎಂಬ ಪಾತ್ರದಲ್ಲಿದೆ. ವಾಙ್ಮಯಕ್ಷೇತ್ರದಲ್ಲಿ ಸಹ ಕಲೆಗಾಗಿ ಕಲೆ, ಜೀವನಕ್ಕಾಗಿ ಕಲೆ ಎಂಬ ದ್ವಂದ್ವವಾದವಿದ್ದಿತು. ಈ ವಾದವೂ ಮೇಲಿನ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಒಟ್ಟಿನಲ್ಲಿ, ವಾಮನರಾಯರು ತಮ್ಮ ಕಾದಂಬರಿಗಳಲ್ಲಿ ೧೮೬೦ರಿಂದ ೧೯೩೦-೩೫ರ ವರೆಗಿನ ಕಾಲದ ಮಹಾರಾಷ್ಟ್ರೀಯ ಸುಶಿಕ್ಷಿತ ಸ್ತ್ರೀ-ಪುರುಷರ ಬೌದ್ಧಿಕ, ಸಾಮಾಜಿಕ ಆಚಾರ-ವಿಚಾರಗಳ ತಿಕ್ಕಾಟದ ಚಿತ್ರಣವನ್ನು ರೂಪಿಸಿದ್ದಾರೆ.

ಈ ವಾದಗಳಿಂದಾಗಿ ಜೋಶಿಯವರ ಕಾದಂಬರಿಗಳು ಘಟನಾಪ್ರಧಾನ ಇಲ್ಲವೆ ಕೃತಿ ಪ್ರಧಾನವಾಗಿ ಉಳಿಯಲಿಲ್ಲ, ಕೇವಲ ವ್ಯಕ್ತಿಪ್ರಧಾನವಾದುವು. ವ್ಯಕ್ತಿಗಳ ವಿಚಾರಸರಣಿ, ವೈಚಾರಿಕ ತಾಕಲಾಟಗಳಿಗೆ ಕೃತಿ ಮತ್ತು ಘಟನೆಗಳು ಪೂರಕವಾಗಿವೆ. ಮರಾಠಿ ಕಾದಂಬರಿ ಇತಿಹಾಸದಲ್ಲಿ 'ರಾಗಿಣಿ' ತತ್ತ್ವಪ್ರಧಾನವಾದ ಮೊದಲ ಕೃತಿ. ಮರಾಠಿ ಸಾಹಿತ್ಯ ಚರಿತ್ರೆಯಲ್ಲಿ ವಾ. ಮ. ಜೋಶಿಯವರನ್ನು 'ತತ್ತ್ವಪ್ರಧಾನ ಕಾದಂಬರಿ ಜನಕ' ಎಂದು ಸಂಬೋಧಿಸಲಾಗಿದೆ. 'ರಾಗಿಣಿ'-ಯಲ್ಲಿಯ ವಿವಿಧ ವಾದಗಳನ್ನು ಗಮನಿಸಿದಾಗ ಈ ಹೇಳಿಕೆಯ ಸತ್ಯತೆ ಹೊಳೆಯುತ್ತದೆ; ಅಧ್ಯಾತ್ಮದಿಂದ 'ಬಟಾಟೆ ಪೋಹೆ'ವರೆಗಿನ ವಾದವೈಖರಿ ಎದ್ದು ತೋರುತ್ತದೆ. ಆಗಿನ ತರುಣವರ್ಗ ವಿವೇಕಾನಂದರ ತತ್ತ್ವಪ್ರಭಾವಕ್ಕೊಳಗಾಗಿತ್ತು. ಸಂನ್ಯಾಸ ಪ್ರವೃತ್ತಿ ಮನ ಸೆಳೆದಿತ್ತು. 'ರಾಗಿಣಿ'ಯ ಆನಂದರಾವ್ ಇಂತಹ ಭಾವನೆಯ ಪ್ರತೀಕ. ಇಲ್ಲಿ, ಬೌದ್ಧಿಕ ಮತ್ತು ಆಧ್ಯಾತ್ಮಿಕ ದೃಷ್ಟಿಗಳ ಸಮತೋಲನವಿದೆ. ಬೌದ್ಧಿಕ ಚರ್ಚೆ ಜೋಶಿಯವರ ಕಾದಂಬರಿಗಳ ಕಥಾನಕಕ್ಕೆ ಭದ್ರವಾದ ತಳಹದಿ.

'ಆಶ್ರಮ ಹರಿಣಿ' ವಾಮನರಾಯರ ಮಧುರರಮ್ಯ ಕಾದಂಬರಿ. ಹಳೆಯ ವಾಲಿಗಳು ಡೊರೆತ ನೆಲದ ಮೂಲಕ, ದ್ವಿಪತಿಕತ್ವ (ಅರ್ಥಾತ್ ವಿಧವಾ ಪುನರ್ವಿವಾಹ) ಸಮಸ್ಯೆಯನ್ನು ಮಂಡಿಸುವ ಪ್ರಯತ್ನ ಇಲ್ಲಿ ಕಾಣುತ್ತಿದೆ. ಇವರ ಕಾದಂಬರಿ ಪ್ರಪಂಚವೆಂದರೆ ರಮ್ಯ ವಿಚಾರ ವಿಲಾಸ, ಕಾವ್ಯಶಾಸ್ತ್ರವಿನೋದ! ('ರಾಗಿಣಿ'ಗೆ 'ಕಾವ್ಯಶಾಸ್ತ್ರವಿನೋದ'ವೆಂಬ ಹೆಸರೂ ಉಂಟು.) 'ಸುಶೀಲೆಯ ದೇವ'ದಲ್ಲಿ 'ಧ್ಯೇಯವೇ ದೇವರು' ಎಂಬ ತತ್ತ್ವವಿದೆ; 'ವಸುಧೈವ ಕುಟುಂಬಕ' ವೃತ್ತಿಯ ಪುರಸ್ಕಾರವಿದೆ. ೧೯೧೫ ರಿಂದ ೧೯೩೦ ರವರೆಗಿನ ಮಹಾರಾಷ್ಟ್ರದ ಸುಶಿಕ್ಷಿತ ಸಮಾಜಜೀವನದ ಸಹಜ ಸುಂದರ ಚಿತ್ರಣ ಇವರ ಕಾದಂಬರಿಗಳ ಒಂದು ವಿಶಿಷ್ಟತೆ :

ವಾ. ಮ. ಜೋಶಿಯವರು ಕಾದಂಬರಿ ರಚನೆಯಲ್ಲಿ ಪ್ರಯೋಗಶೀಲರು; ಚರ್ಚಾತ್ಮಕ, ಪತ್ರಾತ್ಮಕ ಮತ್ತು ವಾಲಿಸ್ವರೂಪವೆಂದು ವಿವಿಧ ಸ್ವರೂಪಗಳ ಕೃತಿಗಳನ್ನು ರಚಿಸಿರುವರು. ಬಳಸಿದ ಭಾಷೆ ಪ್ರೌಢವಾದುದು. ಇವರದು ತತ್ತ್ವ ಜಿಜ್ಞಾಸೆ, ಸತ್ಯ ಸಂಗತಿಗಳ ಬಗೆಗಿರುವ ತಳಮಳವನ್ನು ಸಮರ್ಥವಾಗಿ ನಿರೂ

ಪಿಸುವ ಸತ್ತ್ವಯುತ ಭಾಷಾಶೈಲಿ. ಸೂಕ್ಷ್ಮ ಮನೋದರ್ಶನ ಮತ್ತು ಬುದ್ಧಿಗಮ್ಯ ಪ್ರಸನ್ನ ವಿನೋದ ಲಕ್ಷಿಸಬೇಕಾದ ಅಂಶಗಳು.

ಶ್ರೀಧರ ವೆಂಕಟೇಶ ಕೇತಕರ ಸಮಾಜಶಾಸ್ತ್ರಜ್ಞರು, ರಸಿಕರು, ವ್ಯಕ್ತಿ ಮತ್ತು ಸಾಮಾಜಿಕ ಮಾನಸಶಾಸ್ತ್ರದಲ್ಲಿ ಅವರಿಗೆ ತುಂಬ ಕುತೂಹಲ. ಮಾನವೀಯ ವ್ಯವಹಾರ ಮತ್ತು ಅವುಗಳ ಸಂಬಂಧಗಳನ್ನು ಸಮಾಜಶಾಸ್ತ್ರಜ್ಞನ ದೃಷ್ಟಿಯಿಂದ ಪರಿಶೀಲಿಸುತ್ತಿದ್ದರು. ಅವರ ಸೂಕ್ಷ್ಮ ನಿರೀಕ್ಷಣೆ, ಆಳವಾದ ಅನುಭವಗಳು, ಕಾದಂಬರಿ ರೂಪದಲ್ಲಿ ಮರಾಠಿ ವಾಚಕರಿಗೆ ದೊರೆತವು. ಅವರ ಪ್ರತಿಯೊಂದು ಕಾದಂಬರಿಯಲ್ಲಿಯೂ ಅನೇಕ ಕುಟುಂಬಗಳ ಕಥೆಗಳು ಹೆಣೆದುಕೊಂಡಿವೆ. ನೈತಿಕ ಆಚಾರ, ಜೀವನ ದೃಷ್ಟಿಗಳಿಗೆ ವಿಶೇಷ ಮಹತ್ವವಿತ್ತಿದ್ದಾರೆ. ಸಮಾಜದಲ್ಲಿಯ ವಿವಿಧ ಹಂತಗಳಲ್ಲಿಯ ವ್ಯಕ್ತಿಗಳ ಕಡೆಗೆ ಮತ್ತು ಅವರ ವಾಸ್ತವ ಸಮಸ್ಯೆಗಳ ಕಡೆಗೆ ನೇರವಾಗಿ ನೋಡಿರುವರು; ಸಮಸ್ಯೆಗಳ ಅರ್ಥ ಮತ್ತು ವ್ಯಾಪ್ತಿಗಳನ್ನು ಕೂಲಂಕ-ಷವಾಗಿ ತಿಳಿದು, ಯಥಾವತ್ತಾಗಿ ನಿರೂಪಿಸುವ ಧೈರ್ಯ ಕೇತಕರ ಅವರಿಗಿದೆ. ಅವರ ಉದಾರ ಬುದ್ಧಿ, ವಿಶಾಲ ಸಹಾನುಭೂತಿ, ಮತ್ತು ನಿಕೋಪ ಮನೋ-ವೃತ್ತಿಗಳಿಂದ ಅವರ ಕಾದಂಬರಿಗಳಲ್ಲಿ ಶ್ರೇಷ್ಠ ಸಮಾಜದರ್ಶನ ಕಂಡುಬರುತ್ತದೆ. 'ಬ್ರಾಹ್ಮಣ ಕನ್ಯಾ', 'ವಿಚಕ್ಷಣ', 'ಗೊಂಡವನಾತೀಲ ಪ್ರಿಯಂವದಾ'ಗಳ ವರ್ಗಕ್ಕೆ ಸೇರುವ ಇವರ ಕಾದಂಬರಿಗಳೆಂದರೆ ಕಥಾತ್ಮಕ ಮತ್ತು ಸಂವಾದಾತ್ಮಕ ಜ್ಞಾನಕೋಶಗಳೇ ಆಗಿವೆ. ವಿಷಯವೈಚಿತ್ರ್ಯ ವಿಪುಲ. ಮಹಾರಾಷ್ಟ್ರದ ಹೊರಗಣ ಜೀವನಚಿತ್ರಗಳೂ ಇರುವುದರಿಂದ ಕೇತಕರರ ಕಾದಂಬರಿಗಳು ಅಂತರ್ ಪ್ರಾಂತೀಯ ಮತ್ತು ಅಂತರ್ವರ್ಗೀಯ ಸ್ವರೂಪವುಳ್ಳವು. ವಿಲಾಯತಿಗೆ ಹೋದ ಭಾರತೀಯರ ಜೀವನಚಿತ್ರಣವಿರುವ 'ಆಶಾವಾದಿ', 'ಗಾವಸಾಸು' ಮುಂತಾದುವು ವಾಸ್ತವ-ವಾದಿ ಕಾದಂಬರಿಗಳು. 'ವೈಜನಾಥಶಾಸ್ತ್ರಿ', 'ಡಾ. ತರ್ಕಟೆ' ಮೊದಲಾದ ಪಾತ್ರಗಳು ಸ್ವತಃ ಲೇಖಕರ ಸಮಾಜಶಾಸ್ತ್ರ ಸಿದ್ಧಾಂತಗಳನ್ನು ಪ್ರತಿಬಿಂಬಿಸುವ ಶಾಸ್ತ್ರಜ್ಞ ಪಾತ್ರಗಳಾಗಿವೆ.

ಕೇತಕರರು ನಿರೂಪಿಸಿದ ಸಮಾಜದರ್ಶನದ ಬಗೆಗೆ ತುಂಬಾ ಆದರವಿದೆ. ಆದರೆ ಅವರ ಕೃತಿಗಳಲ್ಲಿಯ ಶಿಥಿಲ ಕಥಾವಸ್ತು, ಪಾತ್ರಗಳ ಸ್ವಭಾವ ಪೋಷಣೆಯ ಅಭಾವ, ನಿರರ್ಥಕ ಪಾತ್ರಗಳು, ನೀರಸವಾದ ನೀಳವಾದ ಸಂವಾದ, ದಿಗಿಲು ಗೊಳ್ಳುವ ಅಕ್ರಮ ಭಾಷಾಪ್ರಯೋಗಗಳ ಮೂಲಕ ಇವರ ಕಾದಂಬರಿಗಳನ್ನು ಕಾದಂಬರಿ ಎಂದೆನ್ನಬೇಕೆ ಎಂಬ ಪ್ರಶ್ನೆ ಅನೇಕ ವಿಮರ್ಶಕರನ್ನು ಗೊಂದಲಕ್ಕೆ ಕೆಡವಿದೆ. ಕೆಲವರು ಇವನ್ನು 'ಕಾದಂಬರಿ–ಪ್ರಬಂಧ'ವೆಂದೂ, ಕೆಲವರು 'ಸಂಸಾರ ಪರಿದಿ ಪುಸ್ತಕ' (ಸಂಸಾರ ಚೋಪರ್‍ಯಾ) ಎಂದೂ ನಾಮಕರಣ ಮಾಡಿ ಟೀಕಿಸಿರು-ವರು. "ಕಲೆಯ ಹೆಸರಿನಲ್ಲಿ ಏನಾದರೂ ನಿರರ್ಥಕವಾದುದನ್ನು ಬರೆಯುವುದಕ್ಕಿಂತ ಪರಿಪೂರ್ಣ ಜೀವನಚಿಂತನ ಮಹತ್ವಪೂರ್ಣವಾದುದು", ಎಂದು ವಾಮನ ಮಲ್ಹಾರಿ

ಯವರು ಕೇತಕರರ ಕಾದಂಬರಿಗಳ ಬಗೆಗೆ ಅಭಿಪ್ರಾಯ ವ್ಯಕ್ತಪಡಿಸಿರುವರು. ಕೇತಕರವರ ಕಾದಂಬರಿಗಳು ರಚನೆಯ ದೃಷ್ಟಿಯಿಂದ ಪರಿಶುದ್ಧವಿಲ್ಲದಿದ್ದರೂ ಪಾತ್ರಗಳು ಜೀವಂತವಾಗಿವೆ, ರಸರಸಿತವಾಗಿವೆ. ಅವರ ಅನುಭವಗಳಿಗೆ ವಾಸ್ತವತೆಯ ಭದ್ರ ತಳಹದಿಯಿದೆ. ಅವರ ಕಾದಂಬರಿಗಳ ರಚನಾಕ್ರಮ ಗುತ್ತಾಗಿ ಬೆಳೆದ ವೃಕ್ಷದಂತಿಲ್ಲ; ಅನೇಕ ವೃಕ್ಷಗಳ ಟೊಂಗೆಗಳನ್ನು ಒಂದರಲ್ಲೊಂದು ಸಿಕ್ಕಿಸಿದಂತಿದೆ. ಅದೊಂದು ದಟ್ಟವಾದ ಅರಣ್ಯ.

ಹರಿಭಾವು, ವಾಮನ ಮಲ್ಹಾರ ಮತ್ತು ಕೇತಕರ ಅವರು ಮರಾಠಿ ಸಾಮಾಜಿಕ ಕಾದಂಬರಿಗಳಲ್ಲಿ ತತ್ಕಾಲೀನ ಜೀವನದರ್ಶನವನ್ನು ನೀಡಿರುವರು. ಜನತೆಯನ್ನು ಧ್ಯೇಯದರ್ಶನದೆಡೆ ಆಕರ್ಷಿಸಿದರು. ಮೇಲಣ ಕಾದಂಬರಿ ಕಾಲವನ್ನು ಧ್ಯೇಯನಿಷ್ಠ ಮತ್ತು ವಾಸ್ತವವಾದಿ ಕಾದಂಬರಿಯುಗವೆನ್ನಬಹುದಾಗಿದೆ.

ವಾಮನ ಮಲ್ಹಾರ ಮತ್ತು ಕೇತಕರರ ವಿಚಾರವಿಲಾಸಾತ್ಮಕ ಮತ್ತು ವಿಚಾರಪ್ರೈಲಕ್ಷಣಾತ್ಮಕ ಕಾದಂಬರಿ ಕಾಲದಲ್ಲಿಯೇ ನಾ. ಸಿ. ಫಡಕೆ, ವಿ. ಸ. ಖಾಂಡೇಕರ, ಗ. ತ್ರ್ಯಂ. ಮಾಡಖೋಲಕರರು ಕೂಡ ಕಾದಂಬರಿ ಬರೆಯಲು ಪ್ರಾರಂಭಿಸಿದ್ದರು. ಹರಿಭಾವು ಕಾಲದಲ್ಲಿ ನಡುಮನೆಯಲ್ಲಿದ್ದ ಕಾದಂಬರಿ, ವಾಮನರಾಯರಿಂದ ಪಡಸಾಲೆಗೆ ಬಂದಿತು. ಫಡಕೆಯವರು ಅದನ್ನು ಟೆನಿಸ್ ಕೋರ್ಟಿನವರೆಗೆ ಒಯ್ದು ನಿಲ್ಲಿಸಿದರು. ೧೯೩೦-೧೯೪೦ ರ ಕಾಲಾವಧಿಯಲ್ಲಿಯ ಕಾಲೇಜ್ ಯುವಕ-ಯುವತಿಯರ ಜೀವನವನ್ನು, ಸ್ವಪ್ನಮಧುರ ಚಿತ್ರಗಳನ್ನು ಸೃಷ್ಟಿಸುವಲ್ಲಿ ಇವರಿಗೆ ವಿಶೇಷ ಅಭಿರುಚಿ. 'ಕಾಶ್ಮೀರಿ ಗುಲಾಬ', 'ಜಾದೂಗಾರ' ಕಾದಂಬರಿಗಳು ತತ್ಕಾಲೀನ ತರುಣ ವಾಚಕರಿಗೆ ಹಿಡಿಸಿದುವು. ಫಡಕೆ ಮರಾಠಿ ಕಾದಂಬರಿಗಳ ಜಾದೂಗಾರರೇ! ಏನು ಬರೆಯಬೇಕು ಎನ್ನುವುದಕ್ಕಿಂತ ಹೇಗೆ ಬರೆಯಬೇಕೆಂಬುದಕ್ಕೆ ವಿಶೇಷ ಗಮನವಿತ್ತರು. ಜೀವನ ಕಲೆ, ಕಲೆಗಾಗಿ ಕಲೆ ಎಂಬ ದ್ವಂದ್ವದಲ್ಲಿ ಫಡಕೆಯವರು ಕಲೆಗಾಗಿ ಕಲೆ ಎಂಬ ಪಕ್ಷ ವಹಿಸಿ ಅದರ ಪ್ರಚಾರವನ್ನು ಜೋರು ಮಾಡಿದರು. ಕಲೆ ಮನೋರಂಜನೆಗಾಗಿ, ನೀತಿಪಾಠ ಕೊಡುವುದಕ್ಕಲ್ಲ. ಸರಸ್ವತಿ ಕೂಡುವುದು ವ್ಯಾಸಪೀಠದ ಮೇಲಲ್ಲ, ಗರಿಗೆದರಿದ ಮಯೂರದ ಮೇಲೆ. ಫಡಕೆಯವರು ಮನಃಪೂರ್ವಕವಾಗಿ ಮೇಲಿಂದ ಮೇಲೆ ಮಂಡಿಸಿದ ಮತದ ಸಾರವಿದು. ಅವಿಚ್ಛಿನ್ನವಾದ ಆನಂದ ನೀಡುವ ಶಕ್ತಿಯೆಂದರೆ ಅಕ್ಷರ; ಅದು ವಾಙ್ಮಯದ ಗುಣವಿಶೇಷ. ಅಂತೆಯೇ, ಫಡಕೆಯವರು ಕಾದಂಬರಿ ರಚನಾತಂತ್ರಕ್ಕೆ ಬಹಳ ಮಹತ್ವವಿತ್ತರು. ಈ ವಿಷಯವಾಗಿ 'ಪ್ರತಿಭಾ ಸಾಧನ'ವೆಂಬ ಗ್ರಂಥವನ್ನು ಬರೆದರು. ಸುಬದ್ಧ ಕಥಾನಕ, ಯೋಗ್ಯ ವ್ಯಕ್ತಿ ದರ್ಶನ, ಸುಯೋಗ್ಯ ವಾತಾವರಣ ನಿರ್ಮಾಣ, ಸಂವಾದ ಚಾತುರ್ಯ, ಪ್ರಸನ್ನ ಹಾಗು ಮಧುರಭಾಷಾ ಶೈಲಿಗಳು ಇವರ ಕಾದಂಬರಿಗಳಲ್ಲಿ ಎದ್ದು ತೋರುವ ಗುಣಗಳು. ಹರಿಭಾವುರವರ ಆದರ್ಶವನ್ನೇ ಮುಂದರಿಸಿದ್ದರೂ, ಹರಿಭಾವು ಕಾದಂಬರಿಗಳಲ್ಲಿ ಕಂಡು ಬರುವ

ಶಿಥಿಲತೆ, ಪಾಳು ಹರಟೆ, ಪುನರುಕ್ತಿ ದೋಷಗಳಿಂದ ದೂರ ಉಳಿದರು. ಕಾದಂಬರಿ ರಚನಾತಂತ್ರದ ದೃಷ್ಟಿಯಿಂದ ಫಡಕೆಯವರದೇ ಒಂದು ಪಡಿಯಚ್ಚಾಯಿತು. ಅವರ ಅನುಭವ ಸೃಷ್ಟಿಯೂ ಒಂದು ಪಡಿಯಚ್ಚೇ ಆಗಿದೆ, ಸಾಂಕೇತಿಕವೂ ಆಗಿದೆ. ಕೊನೆಗೆ ಉಳಿದದ್ದೆಂದರೆ, ಫಡಕೆಯವರ ಕಾದಂಬರಿಗಳಿಗೆ ವರ್ತನಿ ವ್ಯಾಪಾರ ಸ್ವರೂಪವೊಂದೆ.

ಕಲೆಗಾಗಿ ಕಲೆ ಎಂಬ ವಾದದ ವಿರುದ್ಧ ಕತ್ತಿ ಹಿರಿದವರೆಂದರೆ ವಿ. ಸ. ಖಾಂಡೇಕರರವರು. ಇವರು ಆಗರಕರರವರ ಸುಧಾರಣಾವಾದ ಮತ್ತು ಗಾಂಧೀಜೀ-ಯವರ ಮಾನವತಾವಾದಗಳನ್ನು ಪುರಸ್ಕರಿಸಿದರು; ಅದೇ ಮಾರ್ಗದಲ್ಲಿ ಕಾದಂಬರಿ-ಗಳನ್ನು ಬರೆದರು. ಹೊಸ ರಾಜಕೀಯ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಕೃತಿ ರಚನೆಗೆ ತೊಡಗಿದಾಗ, ಜೀವನವನ್ನು ಅಳೆದು ತೂಗಿ ನೋಡುವ ದೃಷ್ಟಿ, ಕಳಕಳಿ ಯುಕ್ತ ನಿವೇದನೆಗಳು ಖಾಂಡೇಕರರ ಕಾದಂಬರಿಗಳ ಒಳಗುಟ್ಟುಗಳಾಗಿ ಕಂಡು ಬರುತ್ತವೆ. ಇಲ್ಲಿ ಫಡಕೆಯವರ ಗೆರೆ ಕೊರೆದ ರೀತಿಯ ರಚನೆ, ಪ್ರಸನ್ನ ಭಾಷಾಶೈಲಿ ಗಳಿಲ್ಲ. ಆದರೆ ಅದ್ಭುತ ಕಲ್ಪನಾಶಕ್ತಿ, ಅಲಂಕೃತ ಭಾಷೆ ಮತ್ತು ವಿನೋದಗಳ ಮೂಲಕ ಖಾಂಡೇಕರರ ಭಾಷಾಶೈಲಿಗೆ ಒಂದು ಬಗೆಯ ಕೃತ್ರಿಮತೆ ಒದಗಿದೆ. ಆದರೂ, ಇವರ ಕಾದಂಬರಿಗಳು ಲೋಕಪ್ರಿಯವಾದುವು. ಫಡಕೆ ಕಾದಂಬರಿಗಳಿಗೆ ಸರಿದೊರೆಯಾಗಿ ಇವರ ಕಾದಂಬರಿಗಳೂ ಜನಪ್ರಿಯವಾಗಲು, ಮಾನವತೆಯ ಬಗೆಗಿರುವ ಅಪಾರ ಪ್ರೇಮವೇ ಪ್ರಬಲ ಕಾರಣವೆನ್ನಬೇಕು. 'ದೋನ ಧ್ರುವ,' 'ಉಲ್ಕಾ,' 'ಹೃದಯಾಚೀ ಹಾಕ,' 'ಕಾಂಚನಮೃಗ' 'ರಿಕಾಮಾ ದೇವ್ಹಾರಾ', 'ಕ್ರೌಂಚವಧ' ಮುಂತಾದುವು ಇವರ ಪ್ರಸಿದ್ಧ ಕಾದಂಬರಿಗಳು.

ಮಾನವತಾಪ್ರೇಮದ ಬಲದಿಂದಲೇ ಸಾನೇ ಗುರೂಜಿಯವರ ಕಾದಂಬರಿಗಳು ಕೂಡ ಮನೆಮನೆಗೂ ಜನಪ್ರಿಯವಾದುವು. ಸೂಕ್ಷ್ಮಭಾವನೆ, ಬೋಧಪ್ರಿಯತೆ ಮತ್ತು ದಯಾಶೀಲತೆಯ ಅತಿರೇಕಗಳ ಮೂಲಕ ಇವರ ಕಾದಂಬರಿಗಳು ವಾಸ್ತ-ವತೆಯಿಂದ ದೂರ ಉಳಿದುವೆಂಬುದು ಸ್ಪಷ್ಟ. ಆದರೆ ಸಾನೇ ಗುರೂಜಿಯವರ ಮಾನವಪ್ರೇಮ ಮತ್ತು ಅಪಾರ ವಾತ್ಸಲ್ಯಗಳಿಂದಾಗಿ 'ಶ್ಯಾಮಚೀ ಆಯಿ' ಕಾದಂಬರಿಯು ಆ ಕಾಲದ ಮಕ್ಕಳಿಗೆ ಮಹಾಭಾರತ, ಭಗವದ್ಗೀತೆಗಳಂತೆ ಗೌರವ-ಪೂರ್ಣ ಗ್ರಂಥವಾಯಿತು.

ಮಾಡಖೋಲಕರರು 'ಮುಕ್ತಾತ್ಮಾ' ಕಾದಂಬರಿ ಬರೆದು ಮರಾಠಿ ಸಾಹಿತ್ಯ-ದಲ್ಲಿ ರಾಜಕೀಯ ಕಾದಂಬರಿ ಪ್ರಕಾರವನ್ನು ಪ್ರಾರಂಭಿಸಿದರು. ಇವರ 'ಭಂಗಲೇಲೇ ದೇವ್ಹಾಳ'ವೂ ಹೆಸರುಗೊಂಡ ಕಾದಂಬರಿ. ಈಗಿನ ಕಾಲದಲ್ಲಿ ನಮ್ಮ ಸಮಾಜ-ದಲ್ಲಿಯ ವೈವಾಹಿಕ ಜೀವನವೆಂದರೆ ಒಂದು ಭಗ್ನಮಂದಿರ; ಮಧ್ಯಮವರ್ಗದ ಸಮಾಜಗಳಲ್ಲಿಯ ಸ್ತ್ರೀಯರಿಗೆ ವಿವಾಹ–ಘಟಸ್ಫೋಟದ ಹಕ್ಕು ದೊರೆಯುವುದು ಅತ್ಯವಶ್ಯಕವೆಂಬುದೇ ಈ ಕಾದಂಬರಿಯ ಪ್ರಧಾನತತ್ತ್ವ. ಮಾಡಖೋಲಕರರ

ಭಾಷಾಶೈಲಿ ಸಂಸ್ಕೃತನಿಷ್ಠವಾಗಿದ್ದರೂ, ಪದ ಜೋಡಣೆ ತೂಕಬದ್ಧವಾಗಿ ಹದಗೊಂಡಿದೆ.

ಈ ಕಾಲದಲ್ಲಿಯೇ ಭಾ. ವಿ. ವರೇರಕರರವರು ತಮ್ಮ ಕಾದಂಬರಿ ಮತ್ತು ನಾಟಕಗಳ ಮುಖಾಂತರ ಸ್ತ್ರೀಯರ, ಮತ್ತು ಶ್ರಮಿಕವರ್ಗದವರ ಪರವಾಗಿ ಸಮರ್ಥನೆ ಮಾಡಿರುವರು. ಲಲಿತಸಾಹಿತ್ಯದ ಮೂಲಕ ಈ ಬಗೆಯ ಪ್ರಚಾರ ಕಾರ್ಯ ಸಾಧುವೆಂದೇ ಅವರ ಬಲವತ್ತರವಾದ ಗ್ರಹಿಕೆ. ಪ್ರಚಾರವೆಂದರೆ ತಮ್ಮ ಅಭಿಪ್ರಾಯಗಳ ಪುರಸ್ಕಾರ ಮತ್ತು ಬಲವಾದ ಪ್ರತಿಪಾದನೆ. ಮಾಮಾ ವರೇರಕರರ ಕಾದಂಬರಿಗಳು ಈ ದೋಷಗಳಿಂದ ಬಿಡುಗಡೆ ಪಡೆದಿಲ್ಲ. 'ವಿಧವಾಕುಮಾರಿ'ಯು ಸಮಾಜದಲ್ಲಿ ಕೋಲಾಹಲವನ್ನೇ ಉಂಟುಮಾಡಿತು. ಬಾಲವಿಧವೆಯ ಕರುಣಾಜನಕ ಆತ್ಮಕತೆಯೇ ಇಲ್ಲಿನ ಕಥಾವಸ್ತು. ಕಥಾನಾಯಕಿ ಗೋದೂ ಗೋಖಲೆ ಲೇಖಕರ ಪ್ರಗತಿಶೀಲ ಮಾನಸಕನ್ಯೆ. 'ಧಾವತಾ ಧೋಂಡಾ', 'ಸೋನ್ಯಾಚಾ ಕಳಸ'ಗಳಲ್ಲಿ ಗಿರಣಿ ಕೂಲಿಕಾರರ ಜೀವನ, ಅವರ ಸಮಸ್ಯೆಗಳು, ಚಳವಳಿ, ಸಂಪು ಇತ್ಯಾದಿಗಳನ್ನು ಪ್ರತಿಪಾದಿಸಿರುವರು. ಮಾಮಾರವರ ಭಾಷೆ ಸರಳ, ಸಾದಾ; ಪ್ರಸಂಗವಶಾತ್ ಬಿಗುವು, ಕಠಿನತೆಗಳೂ ಕಾಣುತ್ತವೆ. ಕಥನ ಪದ್ಧತಿ ಸರಳವಾಗಿದೆ, ಯಥಾವತ್ತಾಗಿದೆ.

ಪ್ರ. ಯ. ದೇಶಪಾಂಡೆ ಈ ಕಾಲದಲ್ಲಿಯ ಪ್ರಸಿದ್ಧ ಕಾದಂಬರಿಕಾರರಲ್ಲೊಬ್ಬರು. 'ಬಂಧನಾಚ್ಯಾ ಪಲೀಕಡೆ'ಯಲ್ಲಿ, ಪ್ರೇಮವಿವಾಹ ತತ್ತ್ವವನ್ನು ಪುರಸ್ಕರಿಸಿರುವರು. ಕಥಾನಾಯಕ ವೇಶ್ಯೆಯ ಮಗಳನ್ನು ಮದುವೆಯಾಗುವನು. ಈ ಕಾದಂಬರಿ ಕಟುವಾದ ಟೀಕೆಗೆ ಗುರಿಯಾಗಿತ್ತು. 'ಸುಕಲೇಲಿ ಫೂಲ್', 'ಸದಾಫುಲಿ'ಗಳಲ್ಲಿಯೂ ಪ್ರೇಮಭಾವ ವಿಷಯವೇ ಇದೆ. ಈ ಕಾದಂಬರಿಗಳಲ್ಲಿ ಭಾವನಾ ಚಿತ್ರಣವು ಮನೋವಿಶ್ಲೇಷಣೆಯ ಪದ್ಧತಿಯದು: ಸ್ವಭಾವ ಚಿತ್ರಣ ಪ್ರತೀಕಾತ್ಮಕವಾದುದು. ಸೂಚಕತೆ ಒಂದು ವೈಶಿಷ್ಟ್ಯ. ಭಾಷಾಶೈಲಿ, ವಿಷಯ, ಭಾವನೆಗಳಿಗೆ ತಕ್ಕಂತೆ ಕಲಾತ್ಮಕ ರೂಪ ಪಡೆಯಲು ಶಕ್ತವಾದುದು.

ಮರಾಠಿ ಸಾಹಿತ್ಯದಲ್ಲಿ ೧೯೨೦–೧೯೪೫ ರ ವರೆಗಿನ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಕಾದಂಬರಿಗಳ ಹುಯಿಲು ಎದ್ದಿತು: ಅರ್ಥಾತ್ ಕಾದಂಬರಿಗಳ ಸುಗ್ಗಿಯ ಕಾಲ. ನಾ. ಹ. ಆಪಟೆ, ನಾ. ವಿ. ಕುಲಕರ್ಣಿ ಮೊದಲಾದವರು ಕೌಟುಂಬಿಕ ಕಾದಂಬರಿಗಳನ್ನು ಬರೆದರು. ನಾಥ ಮಾಧವ ಮತ್ತು ವಿ. ವಾ. ಹಡಪರು ಅನುಕ್ರಮವಾಗಿ 'ಸ್ವರಾಜ್ಯ' ಮತ್ತು 'ಪೇಶವಾಯಿ'ಗಳನ್ನು ಕುರಿತು ಬರೆದರು. ಗ್ರಾಮೀಣ ಕಾದಂಬರಿಗಳೂ ಈ ಕಾಲದಲ್ಲಿ ಪ್ರಕಟವಾದವು, ರ. ವಾ. ದಿಘೆಯವರ 'ಪಾನಕಳಾ', 'ಸರಾಯೀ'ಗಳಲ್ಲಿಯ ಜೀವನ ಚಿತ್ರಣ, ಲೇಖಕರ ಸೌಂದರ್ಯವೃತ್ತಿ, ಭಾಷಾಪ್ರಯೋಗಗಳ ನವೀನತೆಯಿಂದ ಅತಿ ಜನಪ್ರಿಯವಾದುವು.

ಇಲ್ಲಿ ಕೆಲವು ಸ್ವತಂತ್ರ ಕಾದಂಬರಿಗಳ ಗೌರವಪೂರ್ವಕವಾದ ಉಲ್ಲೇಖ ಅವಶ್ಯ. ಶ್ರೀ. ಕೃ. ಕೋಲ್ಹಟಕರರ 'ದುಟಪ್ಪೀ ಕೀ ದುಹೇರಿ' ಕಾದಂಬರಿ ಸಾಹಿತ್ಯ ಮತ್ತು ರಾಜಕಾರಣಗಳ ಮನೋರಂಜಕತೆ ಮತ್ತು ರಹಸ್ಯಪೂರ್ಣತೆಗಳ ದೃಷ್ಟಿಯಿಂದ ಚರ್ಚಿಸಲೇಬೇಕಾದ ಉತ್ತಮ ಕಲಾಕೃತಿ. ಗೋ. ಚಿ. ಭಾಟೆಯವರ 'ಪ್ರೇಮ ಕೀ ಲೌಕಿಕ' ಮರಾಠಿಯಲ್ಲಿ ಆತ್ಮವೃತಪರವಾದ ಪ್ರಥಮ ಕೃತಿಯೆನ್ನಬಹುದು. ನ. ಚಿಂ. ಕೇಳಕರರ 'ನವಲಪುರಚಾ ಸಂಸ್ಥಾನಿಕ'ವು ಸಂಸ್ಥಾನಿಕ ರಾಜಕಾರಣದ ವಾಸ್ತವ ಚಿತ್ರಣ ಕೊಡುತ್ತದೆ; ಜೊತೆಗೆ ಆದರ್ಶ ಸಂಸ್ಥಾನಿಕನ ಚಿತ್ರಣವನ್ನೂ ನಿರೂಪಿಸುತ್ತಿದೆ. ತುಳಜಾಪುರಕರರ 'ಮಾಝೆ ರಾಮಾಯಣ' ಕಾದಂಬರಿ ಒಂದು ಬೃಹತ್ಕಥೆಯೇ ಆಗಿದೆ. ೧೮೫೭ ರ ರಾಜಕೀಯ ಆಂದೋಲನದಿಂದ ೧೯೧೯ ರಲ್ಲಿಯ ಜಾಲಿಯನವಾಲಾಬಾಗದ ನರಹತ್ಯಾಕಾಂಡದವರೆಗಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಘಟನೆಗಳ ಕಥಾರೂಪ ಇತಿಹಾಸವೇ ಈ ಕಾದಂಬರಿಯಲ್ಲಿ ಹುದುಗಿಕೊಂಡಿದೆ. ಕಾದಂಬರಿಕಾರನ ದೃಷ್ಟಿ ವ್ಯಾಪಕವಾದುದು. ಹಿಂದೂ ರಾಜಕಾರಣ ಮತ್ತು ಸಮಾಜ ಸುಧಾರಣೆಗಳ ವಿಚಾರಗಳನ್ನು ಇಲ್ಲಿ ವ್ಯಾಪಕ ದೃಷ್ಟಿಯಿಂದ ಮತ್ತು ರಾಷ್ಟ್ರೀಯ ಮನೋವೃತ್ತಿಯಿಂದ ಮಾಡಲಾಗಿದೆ. ಈ ರೀತಿ ವಿಶಾಲ ದೃಷ್ಟಿಯುಳ್ಳ ಕಾದಂಬರಿ ಮರಾಠಿಯಲ್ಲಿ ಇನ್ನೊಂದಿಲ್ಲ; ಕಾದಂಬರಿಕಾರನೂ ಇಲ್ಲ. ತುಳಜಾಪುರಕರವರ ಕಾದಂಬರಿ ರಚನಾ ಪದ್ಧತಿ ಹರಿಭಾವು ಸಂಪ್ರದಾಯಕ್ಕೆ ಸೇರಿದುದು.

ಸೌ. ವಿಭಾವರಿ ಶಿರೂರಕರರ 'ಹಿಂದೊಳ್ಯಾವರ', ಮತ್ತು ವಿಶ್ರಾಮ ಬೇಡೇಕರರ 'ರಣಾಂಗಣ' ಕಾದಂಬರಿಗಳು ಭಿನ್ನ ಪ್ರಕೃತಿಯುಳ್ಳವು. 'ಹಿಂದೊಳ್ಯಾವರ' ಚಿಕ್ಕದಾಗಿದ್ದರೂ ದೀರ್ಘ ಭಾವಕಥಾ ಉಳ್ಳುದೆನ್ನಬಹುದು. ಈ ಕಾದಂಬರಿಯಲ್ಲಿ ಲೇಖಕರ ಸ್ವಂತ ಅನುಭವ ಮತ್ತು ವಿಚಾರಗಳ ಅತ್ಯಂತ ಕಳಕಳಿಯ ಮತ್ತು ಆವೇಶಪೂರ್ಣವಾದ ನಿರೂಪಣೆಯಿದೆ. ಅದುದರಿಂದ ಲೇಖಕಿಗೆ ಅದು ತನ್ನದು ಎಂಬ ಅಭಿಮಾನವಿದೆ. ಕಥೆ ಮತ್ತು ಪಾತ್ರಗಳಿಗಿಂತ, ಭಾವ ವಿಶ್ಲೇಷಣೆ, ವಿಚಾರ ಪ್ರಕಟನೆಗಳೇ ಕಾದಂಬರಿ ರೂಪ ತಳೆದಿವೆ. ೧೯೩೬ ರಲ್ಲಿ ಪ್ರಕಟವಾದ 'ರಣಾಂಗಣ' ರಚನೆಯಲ್ಲಿ ಪ್ರತ್ಯೇಕವಾಗಿದೆ. ಹರಿಭಾವು, ಫಡಕೆ, ಖಾಂಡೇಕರರ ಕೃತಿ ರಚನೆಯ ತಂತ್ರದ ಚೌಕಟ್ಟಿಗೂ ಇದು ಹೊರತಾದುದು. ಕಥಾನಕದ ವಿಶೇಷತೆ ಏನಿಲ್ಲ; ಆದರೂ ಮೂಲ ಆಕಾರಕ್ಕಿಂತ ಉದ್ದುದ್ದವಾಗಿ ಬೆಳೆಯುತ್ತ ಹೋಗುವ ಭಾವಕಥೆಯಿದೆ. ಮಹಾಯುದ್ಧದ ಸಂಹಾರಕಾಂಡದ ಹಿನ್ನೆಲೆಯಲ್ಲಿ ಒಂದು ಪ್ರೀತಿಯ ಹೂವು ಅರಳುವುದು ಏತಕ್ಕಾಗಿ ಎಂಬ ಪ್ರಶ್ನೆ ಅನುತ್ತರವಾಗಿಯೇ ಉಳಿಯುತ್ತಿದೆ. ಇದುವೇ ಈ ಕಾದಂಬರಿಯ ಹಿರಿಮೆ ಮರಾಠಿಯಲ್ಲಿ ನವಕಾದಂಬರಿಯ ಉಗಮವನ್ನು ಕಾಣಲು 'ರಣಾಂಗಣ'ದ ವರೆಗಿನ ಹಿನ್ನೋಟ ಅವಶ್ಯ.

೧೯೪೫-೧೯೬೦ ಸಂಕ್ರಮಣಕಾಲ

ಫಡಕೆ, ಖಾಂಡೇಕರ, ಮಾಡಖೋಲಕರ ಮತ್ತು ಬೇರೆ ಹಲವರು ಕಾದಂಬರಿಕಾರರು ಕಾದಂಬರಿಗಳನ್ನು ಬರೆಯುವುದನ್ನು ಮುಂದರಿಸಿದರು. ಫಡಕೆಯವರ ಅರವತ್ತೈದನೆಯ ಕಾದಂಬರಿ ಪ್ರಕಟವಾಗಿದೆ. ಇವರ ಕಾದಂಬರಿಯ ಪಡಿಯಚ್ಚು ಸಾಮಾನ್ಯವಾಗಿ ಒಂದೇ ರೀತಿಯದು. ಹೊಸ ವಿಚಾರ, ಹೊಸ ಭಾವನೆಗಳನ್ನು ನಿರ್ಮಿಸಲು ಸಾಧ್ಯವಿದ್ದಿತು; ಆದರೆ ಈ ಕಾಲದ ಕಾದಂಬರಿಕಾರರು ಹೊಸತನವನ್ನು ತರಲು ಶಕ್ತರಾಗಲಿಲ್ಲ. ಮರಾಠಿ ಕಾದಂಬರಿ ಕೇವಲ ಮನೋರಂಜನೆಯ ಸಾಧನವಾಗಿದ್ದಿತು ಇಲ್ಲವೆ ಉಪದೇಶಪರ ನೀತಿಯನ್ನು ಅನುಸರಿಸಿತ್ತು. ಬೆಳವಣಿಗೆ ಕುಂಠಿತವಾಯಿತು. ಈ ಕಾಲದ ಯುಗಪ್ರವರ್ತಕ ಕಾದಂಬರಿಕಾರ ಫಡಕೆ ಅವರ ಕಾದಂಬರಿಗಳು ಅಂತರ್ಬಾಹ್ಯ ಕಳಾಹೀನ ಮತ್ತು ಕಲಾಹೀನವಾಗಿದ್ದವು.

ಮರ್ಢೇಕರರ 'ರಾತ್ರಿಚಾ ದಿವಸ'ವು ಒಂದು ಕಥಾತ್ಮಕ ಪ್ರಯೋಗ. ಯಾಂತ್ರಿಕ ಜೀವನವನ್ನನುಭವಿಸುವ ದಿಕ್ಪಾಲರ ಆಂತರಿಕ ವ್ಯಾಪಾರಗಳನ್ನು ತಿಳಿಯಬೇಕು; ವ್ಯಕ್ತಿಯ ಮನಸ್ಸಿನ ಮೇಲೆ ಅನೇಕ ದಿಕ್ಕುಗಳಿಂದ ಪ್ರಕಾಶ ಬೀರಬೇಕು ಎಂಬ ದೃಷ್ಟಿಯಿಂದಲೇ ಮರ್ಢೇಕರರು ಸಂಜ್ಞಾಪ್ರವಾಹಿ ನಿವೇದನೆಯ ರೀತಿಯನ್ನು ಉದ್ದೇಶಪೂರ್ವಕವಾಗಿ ಆಯ್ದುಕೊಂಡಿದ್ದಾರೆ. ಆದುದರಿಂದ, ಈ ಕಾದಂಬರಿಯಲ್ಲಿ ಜಾಗೃತ, ಅರೆ ಜಾಗೃತ ಮತ್ತು ಸುಪ್ತ—ಹೀಗೆ ಮನಸ್ಸಿನ ಮೂಬಗೆಯ ಸಂವೇದನೆಗಳ ಪ್ರವಾಹವಿದೆ, ಸಂಮಿಶ್ರಣವಿದೆ. ಈ ಸಂಜ್ಞಾಪ್ರವಾಹಿ ಕಾದಂಬರಿಯ ಜನಪ್ರಿಯತೆ ಕೆಲ ಕಾಲ ಮಾತ್ರವಿತ್ತು. ವಸಂತ ಕಾನೆಟಕರರ 'ಘರ', 'ಪಂಖ' ಎಂಬ ಕಾದಂಬರಿಗಳು ಇದೇ ಮಾದರಿಯವು.

ಸೌ. ವಿಭಾವರಿಯವರ 'ಬಳಿ' ಕಾದಂಬರಿಯಲ್ಲಿ ಮಾತ್ರ ಹೊಸ ಅನುಭವ ವಿಶ್ವದ ಪರಿಚಯವಾಗುತ್ತದೆ. ಮಾಂಗ (ಕಟುಕ), ಗಾರುಡಿ (ಹಾವಾಡಿಗ) ಜಾತಿಯ ಸುಶಿಕ್ಷಿತ ಮತ್ತು ಸುಧಾರಿತ ತರುಣನ ಶೋಕದಾಯಕ ಕಥೆಯಿದೆ. ಆ ಸಮಾಜದ ದರ್ಶನ ನಿರೂಪಿತವಾಗಿದೆ. ಭಾ.ಭ. ಬೋರಕರರ 'ಭಾವಿಣ' ಕಾದಂಬರಿಯಲ್ಲಿ ಗೋವಾದ ಒಬ್ಬ ದೇವದಾಸಿಯ ಗತ್ಯಂತರವಿಲ್ಲದ ಜೀವನಚಿತ್ರಣವಿದೆ. ಮೇಲಿನ ಎರಡು ಕಾದಂಬರಿಗಳಲ್ಲಿಯೂ ಕಠೋರ ವಾಸ್ತವತೆಯನ್ನು ಸ್ವಾಭಾವಿಕವಾಗಿ ಸ್ವೀಕರಿಸಿಲ್ಲ. ಆದುದರಿಂದ, ಇವಕ್ಕೆ ನಿಜವಾದ ದುರಂತ ಸ್ವರೂಪ ಉಂಟಾಗಲಿಲ್ಲ. ಆದರೂ ಕಥಾವಸ್ತು ಹೊಸತೆಂಬುದರಿಂದ ವಾಚಕರ ಮನ ಸೆಳೆದವು.

ಪ್ರಾದೇಶಿಕ ಕಾದಂಬರಿಗಳ ಉದಯವೂ ಈ ಕಾಲದಲ್ಲಿಯೇ ಆಯಿತು. ನಾ. ಪೆಂಡಸೆಯವರ 'ಎಲಗಾರ', 'ಹದ್ದಪಾರ' ಪ್ರಾದೇಶಿಕ ಕಾದಂಬರಿಗಳು ಹೇತುನಿಷ್ಠವಾದುವು. ನಂತರದ 'ಗಾರಂಬಿಚಾ ಬಾಪು'ವು ರಸಿಕರನ್ನು

ತೋರಿಸಿತು. ಇದರಲ್ಲಿ ನಿಸರ್ಗ, ಪ್ರದೇಶ ಮತ್ತು ವ್ಯಕ್ತಿಗಳು ಸಮರಸಗೊಂಡಿವೆ. ವ್ಯಕ್ತಿದರ್ಶನ ಮತ್ತು ವಾತಾವರಣ ನಿರ್ಮಾಣ ಅನುಪಮವಾಗಿವೆ. ಅತ್ಯಂತ ಯಶಸ್ವಿಯಾದ ಸಂವಾದಶೈಲಿ. ಸನ್ನಿವೇಶಗಳ ಜೋಡಣೆ ಸರಸವಾಗಿದ್ದು, ಪ್ರತ್ಯಕ್ಷ ನಾಟಕದಂತೆ ಚಿತ್ರಕಶಕ್ತಿಯುಳ್ಳದ್ದಾಗಿದೆ (ಕಾದಂಬರಿ ನಾಟಕರೂಪದಲ್ಲಿ ಪರಿವರ್ತಿತವಾಗಿದೆ. ರಂಗಭೂಮಿಯ ಮೇಲೆ ಇಂದಿಗೂ ಯಶಸ್ಸು ಪಡೆಯುತ್ತಿದೆ). ಕೊಂಕಣದ ಹಳ್ಳಿಯ ಜನಜೀವನದ ತ್ರಿಗುಣಾತ್ಮಕ ಚಿತ್ರಣವೇ ಇಲ್ಲಿನ ಕಥಾವಸ್ತು. ಗೋ. ನೀ. ದಾಂಡೇಕರರ 'ಶಿತೂ', 'ಪಡಪವಲೀ'(ಊರಿನ ಹೆಸರು)ಗಳೂ ಲೋಕಪ್ರಿಯವಾದುವು. ಮೊದಲನೆಯದು ವ್ಯಕ್ತಿಪ್ರಧಾನ; ಎರಡನೆಯದರಲ್ಲಿ ಒಂದು ಗ್ರಾಮವನ್ನೇ ಒಬ್ಬ ನಾಯಕನಂತೆ ಹೇಳಿರುವುದೇ ವೈಶಿಷ್ಟ್ಯ. ಹಳೆಯ ಮೌಲ್ಯಗಳು, ಗ್ರಾಮಸಂಸ್ಥೆಗಳು ಕಣ್ಮರೆಯಾಗುತ್ತಿದ್ದು, ಹಳ್ಳಿಯ ಜೀವನದ ಮೇಲೆ ನಗರಜೀವನದ ಪ್ರಭಾವ ಬೀಳುತ್ತಿರುವ ದುಃಖ ಇಲ್ಲಿ ವ್ಯಕ್ತವಾಗಿದೆ. ವೆಂಕಟೇಶ ಮಾಡಗೂಳಕರರ 'ಬನಗರವಾಡಿ' ಈ ಬಗೆಯ ಉದ್ದೇಶಪೂರ್ಣವಾದ ಕೃತಿಯಲ್ಲ. ಬಯಲುಸೀಮೆಯ ಹಾಳು ಹಳ್ಳಿಯ ಕುರುಬರ ಜೀವನದ ಶಬ್ದಚಿತ್ರಣ ಕುಶಲತೆಯಲ್ಲಿ ಮಾಡಗೂಳಕರರದು ಪಳಗಿದ ಕೈ. ಉದ್ಧವ ಶೇಳಿಕೆಯವರ 'ಧಗ' ಖಾನದೇಶದ ಜೀವನವನ್ನು ಕುರಿತಿದೆ. ಓರ್ವ ಸ್ತ್ರೀಯ ಮನಸ್ಸಿನ ಒಳಪದರುಗಳನ್ನು ಒಂದೊಂದಾಗಿ, ನಿಧಾನವಾಗಿ ಬಿಚ್ಚಿತೋರುವ ಯತ್ನ ಕಾಣುತ್ತಿದೆ. 'ಧಗ' ಕೊನೆಕೊನೆಗೆ ಪ್ರಾದೇಶಿಕ ಮರ್ಯಾದೆಯನ್ನು ಉಲ್ಲಂಘಿಸಿದೆ!

ಇನ್ನು ಕೆಲವು ವೈಶಿಷ್ಟ್ಯಪೂರ್ಣ ಕಾದಂಬರಿಗಳನ್ನು ನೋಡೋಣ. ಬಿವಲಕರರವರು 'ಸುನೀತಾ'ದಲ್ಲಿ, ನೌಖಾಲಿಗೆ ಸ್ಮಶಾನಸ್ವರೂಪ ಉಂಟಾಗುವ ಪೂರ್ವದಲ್ಲಿಯೇ ಜನಮನ ಸ್ಮಶಾನರೂಪ ತಳೆದಿತ್ತೆಂದು ತೋರಿಸಿರುವರು. ದಿ. ಬಾ. ಮೊಕಾಶಿಯವರ, 'ದೇವಚಾಲತಿ'ಯಲ್ಲಿ, ಶ್ರದ್ಧಾಹೀನವಾಗುತ್ತಿರುವ ಇಂದಿನ ಸಮಾಜದಲ್ಲಿಯೂ, ಶ್ರದ್ಧೆಗೆ ಮಹತ್ವ ಕೊಡುವ ವ್ಯಕ್ತಿಗಳ ಹೃದಯಸ್ಪರ್ಶಿ ಚಿತ್ರಣ, ಮತ್ತು ಅದರ ಬಗ್ಗೆ ಆಲೋಚಿಸಲು ಪ್ರೇರೇಪಿಸುವ ಉದ್ದೇಶ ಕಂಡು ಬರುತ್ತಿದೆ.

ಈ ಕಾಲ ನಿಜವಾಗಿ ಸ್ವಾತಂತ್ರ್ಯೋತ್ತರ ಕಾಲಖಂಡ. ಸ್ವಾತಂತ್ರ್ಯಪ್ರಾಪ್ತಿಯಿಂದ ನಮ್ಮ ಸಾಮಾಜಿಕ ಜೀವನದ ಮೇಲೆ ಪ್ರತ್ಯಕ್ಷವಾಗಿ ಯಾವುದೇ ಕ್ರಾಂತಿಕಾರಕ ಪರಿಣಾಮ ಕಂಡುಬಂದಿಲ್ಲ. ಆದರೆ ತದ್ವಿರುದ್ಧವಾಗಿ ದ್ವಿತೀಯ ಮಹಾಯುದ್ಧದ ಕಾವು ಏರಿ, ಯುರೋಪ್ ಮತ್ತು ಜಪಾನಗಳಲ್ಲುಂಟಾದ ಪರಿಸ್ಥಿತಿಯ ಪರಿಣಾಮವಾಗಿ ಜಗತ್ತಿನ ಲೇಖಕವರ್ಗದ ಮನಸ್ಸೇ ಭಯಾನಕಛಾಪದಿಂದ ಕೂಡಿದ್ದಿತು. ೧೯೪೫–೧೯೬೦ ರ ಅವಧಿಯಲ್ಲಿ, ಮರಾಠಿ ಕವನ ಸಾಹಿತ್ಯದಲ್ಲಿ ಈ ಸಂಹಾರಕಾಂಡದ ಪರಿಣಾಮ, ಪ್ರಭಾವ ಹೆಚ್ಚಾಗಿ ಕಾಣುತ್ತಿದೆ. ಮರಾಠಿ ಲಘುಕಥಾ ಸಾಹಿತ್ಯದಲ್ಲಿಯೂ ಮಾನವನ ಆಂತರಿಕ ಹೋರಾಟಗಳ

ಚಿತ್ರಣಕ್ಕೆ ಮಹತ್ವ ಬಂದಿತು. ೧೯೪೫–೧೯೬೦ ರ ಕಾಲ ಮರಾಠಿಯಲ್ಲಿ ನವ್ಯ-ಕಾವ್ಯ ಮತ್ತು ನವ್ಯಕಥೆಗಳ ಕಾಲಖಂಡವು. ಮೇಲಿನ ಕಾಲದಲ್ಲಿ ಮರಾಠಿಯಲ್ಲಿ ಕಾದಂಬರಿಯು ಅತಿ ಕಡಿಮೆಯೆಂದರೆ ಒಂದೆರಡು ಬಗೆಗಳಲ್ಲಿ ಮಾತ್ರ ಮುಂದುವರಿ-ಯಿತು. ಕಾದಂಬರಿಗೆ ತನ್ನದೇ ಆದ ಸ್ವತಂತ್ರ ಪ್ರವಾಹವಿರಲಿಲ್ಲ. ಆದರೆ ಈ ಕಾಲದಲ್ಲಿ ಮುಂಬರಲಿದ್ದ ಕಾದಂಬರಿ ಪ್ರವೃತ್ತಿಗಳ ಬೀಜಗಳು ಕಂಡುಬಂದುವು.

೧೯೪೫–೬೦ ರ ನಡುವಣ ಕಾಲದಲ್ಲಿ ಮರಾಠಿ ಸಾಹಿತ್ಯದಲ್ಲಿ ನವಕಾದಂಬರಿ ಅಥವಾ ನವನಾಟಕ ಪ್ರತ್ಯಕ್ಷವಾಗಿ ನಿರ್ಮಾಣವಾಗದಿದ್ದರೂ, ಅಂತಹ ಕೃತಿಗಳು ಹುಟ್ಟಲು ಸಹಾಯಕವಾದಂತಹ ಕಲಾ ವಿಷಯಕ ಭೂಮಿಕೆ ಸಿದ್ಧವಾಗಿತ್ತು. ಕಲೆಯು ಆಕೃತಿಬಂಧ ವಿಷಯದ ವಿಚಾರವೂ ತಲೆದೋರಿತು; ತುರುಸಿನ ಪ್ರಚಾರವೂ ನಡೆಯಿತು. ಕಾದಂಬರಿ ಒಂದು ಸೃಜನಾತ್ಮಕ ಯೋಜನೆ; ಅಖಂಡವಾದುದು; ಅನೇಕ ಅಂಗಗಳ ನಿರ್ಮಾಣಗಳಿಂದ ಒಟ್ಟುಗೂಡಿದ ಸಜೀವ ಕಲಾಕೃತಿ. ಕಾದಂಬರಿ ಕಾರರಿಗೆ ಮತ್ತು ವಾಚಕರಿಗೆ ಕಾದಂಬರಿಯ ಮೂಲ ಸ್ವರೂಪ, ತತ್ತ್ವಗಳ ಅರಿವು ಮೂಡಿತು, ನೆಲೆಯೂರಿತು; ನವಕಾವ್ಯ, ನವಕಥೆಗಳಿಂದ ನವಕಾದಂಬರಿಯು ರೂಪುಗೊಂಡಿತು; ನವಕಾದಂಬರಿಯು ಸ್ವರೂಪ ಪೃಥಕವಾಯಿತು.

೧೯೬೦–೧೯೭೨ ನವಕಾದಂಬರಿ

೧೯೬೦–೧೯೭೨ ರ ಕಾಲವೆಂದರೆ ನವಸಾಹಿತ್ಯದ ಪ್ರಚಂಡ ಯಶೋತ್ತರ ಕಾಲ. ಈ ಕಾಲದ ಮರಾಠಿ ಕಾದಂಬರಿಗಳಲ್ಲಿ ಮುಖ್ಯವಾಗಿ ಎರಡು ಬಗೆಯ ಜೀವನ ಪ್ರವೃತ್ತಿಗಳು ತೋರುತ್ತವೆ. ಒಂದು: ಭೂತಕಾಲದಿಂದ ಪ್ರೇರಣೆ ಪಡೆಯುವುದು; ಎರಡು: ವರ್ತಮಾನವನ್ನು ಎದುರಿಸುವುದು. ಮೊದಲನೆಯದರಲ್ಲಿ, ಪುರಾಣ, ಇತಿ-ಹಾಸಗಳಿಂದ ಕಥಾವಸ್ತುಗಳನ್ನು, ವ್ಯಕ್ತಿಗಳನ್ನು ಆಯ್ದುಕೊಂಡು, ತಮ್ಮ ಉದ್ದೇಶಕ್ಕನುಗುಣವಾಗಿ ಕಾದಂಬರಿಯ ರೂಪ ಕೊಡುವುದು ಕಂಡುಬರುತ್ತದೆ. ವಿ. ಸ. ಖಾಂಡೇಕರರ 'ಯಯಾತಿ' ಈ ಮೊದಲೇ ಪ್ರಕಟವಾಗಿತ್ತು. ಪುರಾಣ ಕಥೆಗೆ ತನ್ನದೇ ಆದ ಪ್ರತೀಕ ರೂಪವಿತ್ತ ಕಾದಂಬರಿಯಿದು. ಇಂದಿನ ಸಂಯಮರಹಿತ ಭೋಗಲಂಪಟ ಮಾನವಜೀವನದ ಪ್ರತಿನಿಧಿಯಾಗಿ ಯಯಾತಿ ಪಾತ್ರ ನಿರ್ಮಿತವಾಗಿದೆ. ಮರಾಠಿಯಲ್ಲಿ ಹೊಸ ರೂಪ ತಳೆದು ಜನಪ್ರಿಯವಾದ ಪ್ರಥಮ ಪೌರಾಣಿಕ ಕಾದಂಬರಿಯೆಂದರೆ 'ಯಯಾತಿ'ಯೇ. ಖಾಂಡೇಕರ ಮತ್ತು ಅವರ 'ಯಯಾತಿ'ಯ ಪ್ರೇರಣೆಯಿಂದ ರಣಜಿತ ದೇಸಾಯಿಯವರು ಹಿರಿಯ ಮಾಧವರಾವ್ ಪೇಶವೆಯ ಜೀವನವನ್ನು ಕುರಿತು 'ಸ್ವಾಮಿ' ಎಂಬ ಕಾದಂಬರಿ ಬರೆದರು. ಮರಾಠಿ ಸಾಮ್ರಾಜ್ಯದ ಸ್ವಾಮಿ ಮತ್ತು ಪತ್ನಿ ರಮಾಬಾಯಿಯ ಸೌಭಾಗ್ಯದ ಸ್ವಾಮಿ ಎಂಬ ಇಬ್ಬಗೆಯ ಭಾವಚಿತ್ರಣವುಳ್ಳುದು ಮಾಧವರಾಯನ ಪಾತ್ರ. ರಾಜಕೀಯ ಕರ್ತವ್ಯ ಮತ್ತು ವೈಯಕ್ತಿಕ ಭಾವಜೀವನಗಳ ಎಳೆಗಳಿಂದ 'ಸ್ವಾಮಿ' ಎಂಬ ಮಹಾವಸ್ತ್ರ

ವನ್ನು ನೆಯ್ದಿದ್ದಾರೆ. ಇತಿಹಾಸ ಮತ್ತು ಕಲ್ಪಿತಗಳ ರಸಾಯನವೇ ಘಟ್ಟಿಇಳಿದಿದೆ. ರಮಾ-ಮಾಧವರ ಶೋಕಾಂತ ಜೀವನದ ಪರಿಣಾಮವಾಗಿ ಮರಾಠಿ ವಾಚಕವೃಂದ ತುಂಬಾ ಮೆಚ್ಚಿಕೊಂಡಿದೆ. ಮಾಧವ ಒಬ್ಬ ಆದರ್ಶ ರಾಜ್ಯಕರ್ತ ಎಂದು ತೋರಿಸುವ ವ್ಯಕ್ತಿಚಿತ್ರಣ ಪ್ರಭಾವ್ವಿತವಾಗಿದೆ. ಸಾಮಾನ್ಯ ರಾಜಕೀಯ ನೇತಾರರ ಕಾಲದಲ್ಲಿ ಬದುಕಿರುವ ಓದುಗರಿಗೆ, ಇಚ್ಛಾಪೂರ್ತಿಗೊಳಿಸುವ ಕಾದಂಬರಿ 'ಸ್ವಾಮಿ'. ಭಾಷಾಶೈಲಿಯೂ ಓದುಗನ ಮೇಲೆ ಪರಿಣಾಮಕಾರಿಯಾಗುವಂತಿದೆ. ರಚನಾ ಪದ್ಧತಿ ಸಾದಾ, ಆದರೆ ಆಕರ್ಷಕ. ಒಂದು ಪ್ರಸಂಗ ಇಲ್ಲವೆ ದೃಶ್ಯವನ್ನು ಸಂಪೂರ್ಣ ವಾಗಿ ಮುಗಿಸಿ, ಮತ್ತೊಂದನ್ನು ಎತ್ತಿಕೊಳ್ಳುವ ಪಟಕಥಾರೂಪ (Scenerio) ಪದ್ಧತಿಯ ಪ್ರಸಂಗಮಾಲೆ ಅಥವಾ ದೃಶ್ಯಮಾಲೆಗಳ ರಚನಾಕ್ರಮ 'ಸ್ವಾಮಿ'-ಯಲ್ಲಿ ಒಳಗೊಂಡಿದೆ.

'ಸ್ವಾಮಿ' ಕಾದಂಬರಿಯನ್ನೇ ಮಾದರಿಯಾಗಿರಿಸಿಕೊಂಡು ಮುಂದಿನ ಕೆಲವರು ಕಾದಂಬರಿಕಾರರು ತಮ್ಮ ಐತಿಹಾಸಿಕ ಕಾದಂಬರಿಗಳನ್ನು ಬರೆದರೇ ಎಂಬ ಸಂದೇಹಕ್ಕೆ ಅವಕಾಶವಿದೆ. ನಾ. ಸಂ. ಇನಾಮದಾರರ 'ಝೇಪ', 'ಝುಂಜ', 'ಮಂತ್ರಾ ವೇಗಳಾ' ಕಾದಂಬರಿಗಳು ಅನುಕ್ರಮವಾಗಿ ತ್ರಿಂಬಕಜೀ ಡೇಂಗಳೆ, ಯಶವಂತರಾವ್ ಹೋಳಕರ ಮತ್ತು ಎರಡನೆಯ ಬಾಜೀರಾಯರ ಮೇಲೆ ಬರೆದವುಗಳು. ಇತಿಹಾಸಕಾರರು ಈ ಐತಿಹಾಸಿಕ ವ್ಯಕ್ತಿಗಳಿಗೆ ನ್ಯಾಯ ದೊರಕಿಸಿಲ್ಲ. ಇದನ್ನು ಅವರಿಗೆ ಎತ್ತಿ ತೋರಿಸುವುದೇ ಕಾದಂಬರಿಕಾರರ ಪ್ರಯತ್ನ. ಈ ಕಾದಂಬರಿಗಳ ರಚನಾಪದ್ಧತಿ ತೀರ 'ಸ್ವಾಮಿ' ಕಾದಂಬರಿಯಂತೆಯೇ ಇದೆ. ಈ ಕಾಲದ ಐತಿಹಾಸಿಕ ಕಾದಂಬರಿಗಳಲ್ಲಿ, ಐತಿಹಾಸಿಕ ವ್ಯಕ್ತಿಗಳ ಆದರ್ಶೀಕರಣ, ಉಪೇಕ್ಷಿತ ವ್ಯಕ್ತಿಗಳ ಹೊಗಳಿಕೆ, ದೊಡ್ಡ ವ್ಯಕ್ತಿಗಳ ಕೌಟುಂಬಿಕ ಜೀವನದ ಅಟ್ಟಹಾಸಗಳೇ ಕಂಡುಬರುತ್ತಿವೆ. ಗೋ. ನೀ. ದಾಂಡೇಕರರು ಶಿವ (ಶಿವಾಜಿ) ಕಾಲವನ್ನೇ ನಾಯಕನನ್ನಾಗಿ ಕಲ್ಪಿಸಿ ನಾಲ್ಕು ಕಾದಂಬರಿಗಳನ್ನು ಬರೆದರು. ಮರಾಠಿಯಲ್ಲಿ ಐತಿಹಾಸಿಕ ಕಾದಂಬರಿಗಳ ಸುಗ್ಗಿಯೇ ಎದ್ದಿತು. ಬಳಿವಲಕರ, ಮನಮೋಹನ ನಾತೂ, ಭೀಮರಾವ ಕುಲಕರ್ಣಿ ಮೊದಲಾದವರು ಹಲವು ಲೇಖನ-ಗಳನ್ನೂ ಬರೆದರು.

ಶಿವಾಜಿ ಸಾವಂತರ 'ಮೃತ್ಯುಂಜಯ'ವು ಕರ್ಣನ ಜೀವನ ನಿರೂಪಿಸುವ ಪೌರಾಣಿಕ ಕಾದಂಬರಿ. ಇದು 'ಯಯಾತಿ'ಯ ಜಾತಿಗೇ ಸೇರಿದುದು. 'ಮೃತ್ಯುಂ-ಜಯ'ದಲ್ಲಿ ಕಲ್ಪನೆಯ ಪ್ರಮಾಣ ಹೆಚ್ಚಿದೆ. ಭೀಷ್ಮನ ಜೀವನಾಧಾರಿತ ಸ್ಪಷ್ಟ ನಿವೇದನೆಯುಳ್ಳ ಇನ್ನೊಂದು ಪೌರಾಣಿಕ ಕಾದಂಬರಿಯೆಂದರೆ, ಆನಂದ ಸಾಧಲೆ-ಯವರ 'ಮಹಾಪುರುಷ'.

ಪುರಾಣ – ಇತಿಹಾಸಗಳನ್ನು ಬಿಡು, ವರ್ತಮಾನಕಾಲದಲ್ಲಿಯೇ ಕೆಲ ವರ್ಷಗಳ ಹಿಂದೆ ಸ್ವರ್ಗಸ್ಥರಾದವರ ಜೀವನವನ್ನು ಆಧರಿಸಿ ಕಾದಂಬರಿಗಳನ್ನು ಬರೆಯುವ

ಕ್ರಮ ಮರಾಠಿಯಲ್ಲಿ ಈ ದಶಕದಲ್ಲಿ ರೂಢಿಗತವಾಗಿಯೇ ಬೆಳೆದುಬಂದಿತು. ಟಿಳಕರ ಕಾಲದಲ್ಲಿದ್ದ ಆನಂದೀಬಾಯಿ ಜೋಶಿ (ಭಾರತದಲ್ಲಿಯೇ ಡಾಕ್ಟರ್ ಆದ ಪ್ರಥಮ ಮಹಿಳೆ.) ಮತ್ತು ಅವರ ಪತಿ ಗೋಪಾಳರಾವ ಜೋಶಿಯವರ ಲೋಕವಿಲಕ್ಷಣ ವರ್ತನೆಯ ಮೇಲೆ ಬೆಳಕು ಬೀರುವ 'ಆನಂದೀ ಗೋಪಾಳ' ಎಂಬ ಕರುಣ-ರಮ್ಯ ಕಾದಂಬರಿಯನ್ನು ಶ್ರೀ. ಜ. ಜೋಶಿಯವರು ಬರೆದರು. ಈ ತರಹದ ಚರಿತ್ರಾತ್ಮಕ ಕಾದಂಬರಿಗಳನ್ನು ಬರೆಯುವ ಒಂದು ಹೆಮ್ಮೆಯ ಪ್ರವೃತ್ತಿಯೇ ಪ್ರಾರಂಭವಾಯಿತು. ಸ್ವಾತಂತ್ರ್ಯವೀರ ಸಾವರಕರ ಮತ್ತು ಲಾಲಬಹದ್ದೂರ ಶಾಸ್ತ್ರಿಯವರ ಮೇಲೆ 'ಯಜ್ಞ' ಮತ್ತು 'ಅಮೃತಪುತ್ರ' ಎಂಬೆರಡು ಕಾದಂಬರಿ-ಗಳು ಪ್ರಕಟವಾದವು. ಇವುಗಳ ಲೇಖಕರು ಭಾ. ದ. ಖೇರ ಅವರು ಈ ಕಾದಂಬರಿಗಳಲ್ಲಿ ಸಾಹಿತ್ಯಕ ಗುಣ ಅಷ್ಟಕ್ಕಷ್ಟೆ. ಟಿಳಕರ ಮೇಲೆ, ಗಂಗಾಧರ ಗಾಡಗೀಳರು ಬರೆದ 'ದುರ್ದಮ್ಯ'ದಲ್ಲಿ ಸತ್ಯಸಂಗತಿಗಳ ಜೋಡಣೆಯಿದೆ. ಜೀವಿಸಿದ್ದ ವ್ಯಕ್ತಿಗಳ ಬಗ್ಗೆಯೂ ಕಾದಂಬರಿಗಳನ್ನು ಬರೆಯುವ ಮೋಹ ಬೆಳೆಯಿತು. 'ಲತಾ ಮಂಗೇಶಕರ'ರವರ ಜೀವನವನ್ನು ಕುರಿತ ಒಂದು ಕಾದಂಬರಿಯ ಬರವಣಿಗೆ ಮುಂದುವರಿಯುತ್ತಲಿದೆಯೆಂದು ತಿಳಿದುಬಂದಿದೆ.

ಈ ದಶಕದಲ್ಲಿ, ಅಸ್ತಿತ್ವವಾದಿ ಜೀವನ ಪ್ರವೃತ್ತಿಯನ್ನು ನಿರೂಪಿಸುವ ಕಾದಂಬರಿಗಳ ಪ್ರವಾಹ ಎರಡನೆಯ ಬಗೆಯದು. ವಿಶಾಲ ಪ್ರಪಂಚದಲ್ಲಿ ಹರಡಿದ ಮಾನವನ ಬಾಳುವೆಗೆ ಏನಾದರೂ ಅರ್ಥ ಉಂಟೇ? ನಾನು ಏಕೆ ಈ ಜನ್ಮಕ್ಕೆ ಬಂದೆ? ನಾನು ಯಾತಕ್ಕಾಗಿ ಜೀವಿಸುತ್ತಿರುವೆ? ಇಂತಹ ಮೂಲಭೂತ ಪ್ರಶ್ನೆಗಳನ್ನು ಸಾಹಿತಿಗಳು ವಿಚಾರಿಸುತ್ತಿರುವರು. ಜೀವಧರ್ಮ (biolagical) ದ ಅಡಿಗಲ್ಲ ಮೇಲೆ ಜೀವಿಸುವ ಮಾನವೀಯ ಬಾಳಿಗೆ ತರ್ಕನಿಷ್ಠವಾದ ಗತಿಯೊಂದುಂಟೇ? ಜೀವನ ಆಕಾರಹೀನ (formless)ವಾದುದು. ಸಾಹಿತ್ಯಕೃತಿಯೂ ಜೀವನ-ದಂತೆಯೇ ಹೇತುವಿಹೀನ, ಅರ್ಥವಿಹೀನ, ಆಕಾರವಿಹೀನವೆಂಬುದೇ ಅಸ್ತಿತ್ವ-ವಾದಿಗಳ ಧೋರಣೆ. ಭಾಲಚಂದ್ರ ನೇಮಾಡೆಯವರ 'ಕೋಸಲಾ' ಈ ಬಗೆಯ ಮೊದಲನೆಯ ಕಾದಂಬರಿ. ಪರಂಪರೆ ಮತ್ತು ಆಪ್ತವಾಕ್ಯ ಇತ್ಯಾದಿಗಳನ್ನು ಕೈಬಿಟ್ಟು ಜೀವನದ ಹೊಸ ಬಗೆಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸುವುದು. ನಮ್ಮ ಸಂಕಲ್ಪಗಳನ್ನು ನಿರ್ಧರಿಸುವವರು ನಾವೇ; ಅದರ ಸುಖ–ದುಃಖಗಳ ಒಡೆಯರೂ ನಾವೇ; ಇದೇ ಒಂದು ಸತ್ಯ. ಈ ಬಗೆಯ ನಡೆವಳಿಯೇ 'ಮನಃಪೂತ ಕೃತಿ', (Authentic deed) ಎನ್ನುತ್ತಾರೆ. ಇವರೆಲ್ಲರೂ ಪ್ರಸ್ಥಾಪಿತರ ವಿರುದ್ಧ (against establishment) ದಂಗೆ ಹೂಡಿದ್ದಾರೆ. ಭಾವು ಪಾಧ್ಯೆಯವರ 'ಬ್ಯಾರಿಸ್ಟರ್ ಮೋಹೇಶ್ವರಕರ' ಕಾದಂಬರಿಯಲ್ಲಿ ಅಸ್ತಿತ್ವವಾದದ ಸುಂದರ ರೇಖಾಚಿತ್ರಣವಿದೆ. ಅಸ್ತಿತ್ವವಾದ ಪ್ರತಿಪಾದಿಸುವ ಮತ್ತೊಂದು ಕಾದಂಬರಿ ಜಿ. ತ್ರ್ಯ. ಮಾನೋಲಕರರ 'ತ್ರಿಶಂಕು'.

ಅಸ್ತಿತ್ವವಾದಿಗಳೇ ಎಂದಲ್ಲ; ಆದರೆ ಬೇರೆ ಅರ್ಥ ಮತ್ತು ಕಾರಣಗಳಿಂದ ಸಮಾಜಪ್ರವಾಹದಿಂದ ಹಿಂದುಳಿದ ಜೀವನವನ್ನು ನಡೆಸುತ್ತಿರುವ ಗುಡಿಸಲುವಾಸಿ ಜನರ ಭಾವಾನುಭವಗಳನ್ನು ವ್ಯಕ್ತಪಡಿಸುವ ಪ್ರವೃತ್ತಿ ಇಂದಿನ ಕೆಲವು ಕಾದಂಬರಿಕಾರರಲ್ಲಿ ಕಂಡುಬರುತ್ತಿದೆ. ಜಯವಂತ ದಳವಿಯವರ 'ಚಕ್ರ' ಮತ್ತು ಮಧೂ ಮಂಗೇಶ ಕರ್ಣಿಕರ 'ಮಾಹಿಮಚೀ ಖಾಡಿ' ಕಾದಂಬರಿಗಳಲ್ಲಿ ಯಾವುದೇ ನಿರ್ದಿಷ್ಟ ಭೂಮಿಕೆ ಇಲ್ಲದಿದ್ದರೂ, ಸಮರ್ಪಕ ಪ್ರತೀಕಗಳ ಸಹಾಯದಿಂದ ಗುಡಿಸಲ ನಿವಾಸಿಗಳ ಮಾನವೀಜೀವನದ ಚಿತ್ರಣವನ್ನು ಕಾಣಬಹುದಾಗಿದೆ. ಈ ವರ್ಗದ ಜನತೆಯ 'ಆಹಾರ ನಿದ್ರಾಭಯ ಮೈಥುನಾಚ'ಗಳ ಯಥಾಕೃತಿ ನಿರೂಪಣೆಯೇ ಮೇಲಿನೆರಡು ಕಾದಂಬರಿಗಳ ಉದ್ದೇಶ. 'ವಾಸೂನಾಕಾ'ದಲ್ಲಿ ಯಾವುದೇ ಬಗೆಯ ಸಂಸ್ಕೃತಿಯ ವಿಧಿ-ನಿಷೇಧಗಳಿಲ್ಲ; ದೈಹಿಕ ಬಲದ ಮೇಲೆ ಅಧಿಕಾರ ನಡೆಯಿಸುವ ಟೋಳಿಗಳ ಸಾಮೂಹಿಕ ಜೀವನದ ಕಥಾ-ರೂಪ ಚಿತ್ರಣವನ್ನು ಬಣ್ಣ ಕಟ್ಟಿ ಬರೆದಿರುವರು.

ಸದ್ಯದ ಪರಿಸ್ಥಿತಿಯಲ್ಲಿ, ಮರಾಠಿ ಕಾದಂಬರಿಗಳಲ್ಲಿ ಕಾಮವಾಸನೆ ಮತ್ತು ಕಾಮಕ್ರೀಡೆಗಳ ಹೊಸಹೊಸ ರೂಪಗಳನ್ನು ಬಣ್ಣಿಸಿ ಪ್ರಕಟಿಸುವ ಮೋಹ ಅನೇಕ ಲೇಖಕರಿಗೆ ಅಂಟಿಕೊಂಡಿದೆ. 'ಬಾಯೀ ವಿನಾ ಬುವಾ' (ಉದ್ಧವ ಶೇಳಕೆ); 'ರಾತ್ರ ಕಾಳೀ ಘಾಗರ ಕಾಳೀ', 'ಅಜಗರ' (ಚಿಂ. ತ್ರ್ಯಂ. ಖಾನೋಲಕರ); 'ಸ್ವಗತ' (ಜಯವಂತ ದಳವಿ); 'ಉಭಯಾನ್ವಯೀ ಅವ್ಯಯ' (ಚಂದ್ರಕಾಂತ ಖೋತ) ಮೊದಲಾದುವು ಮೇಲೆ ಹೇಳಿದ ಪ್ರವೃತ್ತಿಯನ್ನನುಸರಿಸಿದ ಕೃತಿಗಳು. 'ಕಾಚಾಪಾಣಿ' ಕಾದಂಬರಿಯನ್ನು ಸ್ವತಂತ್ರವಾಗಿಯೇ ನೋಡಬೇಕು.

ಮೇಲಿನ ವಿಚಾರಧಾರೆಗೆ ವಿರುದ್ಧವಾಗಿ, ಸ್ತ್ರೀಜೀವನದ ಮೂಲಾರ್ಥವನ್ನು ಶೋಧಿಸುವ ಮಹತ್ವಪೂರ್ಣ ಪ್ರಯತ್ನವನ್ನು 'ಆದಿಮಾಯಾ' ಕಾದಂಬರಿಯಲ್ಲಿ ಮಾಡಲಾಗಿದೆ. ಈ ಕಾದಂಬರಿಯ ರೂಪ ಸೂಕ್ಷ್ಮ, ಆಳ ಮತ್ತು ಗಂಭೀರ; ಭಾವಪೂರ್ಣವಾದ ಆತ್ಮಸಂಶೋಧನೆಯಾಗಿದೆ. 'ಸಂಜೀವನಿ' ಕಾದಂಬರಿಯಲ್ಲಿ, ಪ್ರೀತಿಯ ಸಂಯಮ, ವಿವೇಕದ ಪ್ರಗಲ್ಭ ತಿಳಿವಳಿಕೆಗಳ ಶುದ್ಧ ಹೊದಿಕೆಯಿದೆ. ಪು. ಸಿ. ರೇಗೆಯವರ 'ಸಾವಿತ್ರಿ'ಯು, 'Experience: Growth' ಎಂಬ ಜೀವನ ಸೂತ್ರವನ್ನು ವ್ಯಕ್ತಪಡಿಸುವ ಅತಿರಮ್ಯ ಪ್ರೇಮಕಥೆಯುಳ್ಳದು.

ಶ್ರೀ. ನಾ. ಪೇಂಡಸೆ ಇಂದಿನ ಪ್ರಸಿದ್ಧ ಕಾದಂಬರಿಕಾರರು. ಅವರು ಸದೈವ ಪ್ರಯತ್ನಶೀಲರು. ಸಾಮಾನ್ಯ ಮನುಷ್ಯನ ಜೀವನ ಒಂದು ವೃಕ್ಷದಂತೆ ಹೇಗೆ ಇರುತ್ತದೆಂಬುದನ್ನು, ತಮ್ಮ 'ಲವ್ಹಾಲೀ' ಕಾದಂಬರಿಯಲ್ಲಿ ಚಿತ್ರಿಸಿರುವರು. ಇದರಲ್ಲಿ ಒಂದು ಚಾಳು ನಾಯಕ ಪಾತ್ರಸ್ಥಾನದಲ್ಲಿದೆ. ದೈನಂದಿನ ಪದ್ಧತಿಯ ಬರವಣಿಗೆ ನೇರವಾಗಿದೆ. 'ಆಕ್ರೋಪ' ಕಾದಂಬರಿ ಕಾಮಜೀವನದ ಸೂಕ್ಷ್ಮ ಮತ್ತು ಭಯಾನಕ ಸ್ವರೂಪಗಳನ್ನು ತೋರಿಸಿಕೊಡುತ್ತಿದೆ. ಪೇಂಡಸೆಯವರ

'ರಥಚಕ್ರ'ವು ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿದೆ.

ರಂಗನಾಥ ದೇಶಪಾಂಡೆಯವರ 'ಅಗ್ನ್ಯಮೊಹೊಳೆ' ಮರಾಠಿಯಲ್ಲಿ ಒಂದು ಸ್ವತಂತ್ರ ಕಾದಂಬರಿ. ಇದು ಜೀವನದ ಎಲ್ಲ ಪ್ರವೃತ್ತಿಗಳನ್ನು ಚಿತ್ರಿಸುವ ಮತ್ತು ಒಂದು ವಿಲಕ್ಷಣ ಅನುಭವ ಕಲ್ಪಿಸುವ ಅಸಾಧ್ಯ ಕಾದಂಬರಿಯೆಂದೇ ವರ್ಣಿಸಬೇಕು. ಗೋ. ನೀ. ದಾಂಡೇಕರರ, 'ಮಾಚೀವರಿಲ ಬುಧಾ', 'ಮೃಣ್ಮಯೀ' ಕಾದಂಬರಿಗಳು ನಿಸರ್ಗದಲ್ಲಿ ಪರಮೇಶ್ವರರನ್ನು ಕಾಣುವ ಮತ್ತು ಜ್ಞಾನೇಶ್ವರಿಯ ಜೀವನದಂತೆ ಜೀವಿಸಲು ಪ್ರಯತ್ನಿಸುವ ಜೀವಿಗಳ ಕಥೆಯನ್ನು ಹೇಳುತ್ತಿವೆ.

ಇತ್ತೀಚೆಗೆ ಮೂರು ನಾಲ್ಕು ವರ್ಷಗಳಿಂದ ದೀಪಾವಳಿಯ ವಿಶೇಷ ಸಂಚಿಕೆಗಳಲ್ಲಿ ಅನೇಕ ಲಘುಕಾದಂಬರಿಗಳನ್ನು ಪ್ರಕಟಿಸುವ ರೂಢಿ ಪ್ರಾರಂಭವಾಗಿದೆ. ಸಾಮಾನ್ಯವಾಗಿ ಇವುಗಳಲ್ಲಿಯ ಕಥಾವಸ್ತು ಮತ್ತು ನಿವೇದನ ಪದ್ಧತಿಗಳು ವರ್ತಮಾನಕಾಲೀನವಾದುವು. ಲಘು ಇಲ್ಲವೆ ಸಣ್ಣ ಕಾದಂಬರಿ ಈಗ ಹೆಚ್ಚು ಜನಪ್ರಿಯವಾಗುತ್ತಿವೆ. ರವೀಂದ್ರ ಪಿಂಗೆ, ಲ. ಗ. ಜೋಗ, ದ. ಮೋ. ಮರಾಠೆ, ಪ್ರಭಾಕರ ಪೆಂಢಾರಕರ, ಹಿದಾಯತುಲ್ಲಾ, ವಿ. ಕಂ. ಪಾರಗಾವಕರ, ಮೊದಲಾದ ಲೇಖಕರು ಲಘುಕಾದಂಬರಿ ಪ್ರಕಾರದಲ್ಲಿ ಯಶಸ್ಸು ಗಳಿಸಿರುವರು. ಆಧುನಿಕ ಕಾಲದಲ್ಲಿ ಅಮೇರಿಕನ್ ಕಾದಂಬರಿಗಳ ಭಾಷಾಂತರಗಳೂ ಮರಾಠಿಯಲ್ಲಿ ಪ್ರಚಲಿತವಾಗುತ್ತಿವೆ.

ಮರಾಠಿ ಕಾದಂಬರಿ ಸಾಹಿತ್ಯದ ಪ್ರಾಚೀನತೆ ಸುಮಾರು ಒಂದುನೂರಾ ಹದಿನೈದು ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಪ್ರಾರಂಭದಲ್ಲಿ ಅದ್ಭುತ ರಮ್ಯತೆಯಿಂದ ವಾಸ್ತವವಾದಿ, ಧ್ಯೇಯನಿಷ್ಠವಾಯಿತು. ಆ ಮುಂದೆ ಜೀವನವಾದ, ಕಲಾವಾದಗಳು ತಲೆದೋರಿದವು. ಜೀವನವಾದಕ್ಕೆ ಹೆಚ್ಚಿನ ಯಶಸ್ಸು ಲಭಿಸಿತೆನ್ನಬೇಕು. ಮಾರ್ಕ್ಸ್‌ವಾದಿಗಳ ಪ್ರಚಾರಕ್ಕೆ ಕೂಡ ಜೀವನವಾದದ ಉಪಯೋಗವಾಯಿತು. ನಂತರ ಸ್ವತಂತ್ರ ರೀತಿಯಿಂದ ತತ್ತ್ವ ಸಂಶೋಧನೆಗೆ ತಿರುಗಿತು; ಮನಃಶಾಸ್ತ್ರದ ಪ್ರಮೇಯಗಳನ್ನು ಬಿಡಿಸಲೆತ್ನಿಸಿತು. ಬಿಟ್ಟ ಕಲಾರೂಪದ ಲಾಭ ಪಡೆಯಿತು. ಸಂಜ್ಞಾಪ್ರವಾಹದೊಡನೆ ಕೆಲಕಾಲ ಹರಿದು ಬಂದು, ಪ್ರಾದೇಶಿಕ ಮತ್ತು ಗ್ರಾಮೀಣ ರೂಪ ತಳೆಯಿತು. ಇಂದು ಮರಾಠಿ ಕಾದಂಬರಿ ಒಂದೆಡೆ ಐತಿಹಾಸಿಕ ಪೌರಾಣಿಕವಾಗಿದ್ದರೆ, ಬೇರೆಡೆ ಅಸ್ತಿತ್ವವಾದವನ್ನು ಅನುಸರಿಸಿದೆ. ಮರಾಠಿ ಕಾದಂಬರಿ, ಅದ್ಭುತರಮ್ಯತೆಯಿಂದ ಅಸ್ತಿತ್ವವಾದದ ವರೆಗೂ ನಡೆದು ಬಂದ ದಾರಿಯಾಗಿದೆ. ಸರಳ ಭಾಷಾಶೈಲಿಯಿಂದ ಪ್ರತಿಭಾಸಂಪನ್ನ ಪ್ರತಿಮೆಗಳ ಮಾಧ್ಯಮದವರೆಗೆ ತನ್ನನ್ನೇ ತಾನು ಸುಧಾರಿಸಿಕೊಂಡಿದೆ. ಇವತ್ತಿಗೂ ಹರಿಭಾವುರವರ ಸರಿಸಮಾನಕ್ಕಾದರೂ ನಿಲ್ಲುವ ಕಾದಂಬರಿಕಾರ ಇಲ್ಲದೆ ಹೋದರೂ ಒಟ್ಟಿನಲ್ಲಿ ಮರಾಠಿ ಕಾದಂಬರಿ ಹರಿಭಾವು, ಫಡಕೆ, ಖಾಂಡೇಕರರವರ ಕಾಲಕ್ಕಿಂತ ಬಹಳಷ್ಟು ಮುಂದುವರಿದಿದೆ ಎಂಬುದು ನಿಸ್ಸಂಶಯ.

ವಂಗ ಕಾದಂಬರಿ

— ಅಹೋಬಲ ಶಂಕರ

ಬಂಗಾಳಿ ಕಾದಂಬರಿಯು ಆ ಸಾಹಿತ್ಯದ ಮುಖ್ಯ ಅಂಗವಾಗಿರುವುದೊಂದೇ ಅಲ್ಲ, ಇಂದು ಅದು ಭಾರತದ ಬೇರೆ ಭಾಷೆಗಳ ಸಾಹಿತ್ಯಗಳ ಮೇಲೆ ಉಂಟು ಮಾಡಿರುವ ಪರಿಣಾಮದ ದೃಷ್ಟಿಯಿಂದ ಗಮನಿಸಿದರೆ ಕಾದಂಬರಿಯೇ ಸಾಹಿತ್ಯ-ವಾಗಿದೆ. ಇದಕ್ಕೆ ಕಾರಣ, ಬೇರೆ ಯಾವ ಅಂಗವೂ ಕಾದಂಬರಿಯಷ್ಟು ವಿಪುಲ-ವಾಗಿಯೂ ಘನವಾಗಿಯೂ ಬೆಳೆದಿಲ್ಲ. ಕಾವ್ಯ ಸಹ ಮೈಕೇಲ್, ಟಾಗೋರ್, ನಜರುಲ್ ಇಸಲಾಮ್‌ರಂತಹ ಉದ್ದಾಮ ಕವಿಗಳ ಕೃತಿಗಳನ್ನು ಬಿಟ್ಟರೆ ಅಷ್ಟು ಫಲವತ್ತಾದ ಕ್ಷೇತ್ರವಾಗಿಲ್ಲ. ನಾಟಕವಂತೂ ಬಂಜರು ನೆಲ. ಹೇಳಿಕೊಳ್ಳಬಹು-ದಾದ ಒಂದೆರಡು ನಾಟಕಗಳು ಸಹ ಇದುವರೆಗೆ ರಚಿತವಾಗಿಲ್ಲ. (ಇತ್ತೀಚಿಗೆ ಹೆಸರಿಗೆ ಬರುತ್ತಿರುವ ಬಾದಲ್ ಸರಕಾರರ ಪ್ರಯೋಗಾತ್ಮಕ ನಾಟಕಗಳು ಮಾತ್ರ ಸ್ವಲ್ಪ ಆಶಾದಾಯಕವಾಗಿವೆ.) ಕಾರಣವೇನೇ ಇರಲಿ ಬಂಗಾಳಿ ಸಾಹಿತ್ಯ-ಪ್ರತಿಭೆಯೆಲ್ಲ ಕಾದಂಬರೀಕ್ಷೇತ್ರದಲ್ಲೇ ಹರಿದುಕೊಂಡು ಬಂದಿದೆ.

ಭಾರತೀಯ ಭಾಷಾ ಸಾಹಿತ್ಯಗಳಲ್ಲೆಲ್ಲ ಕೇವಲ ವಂಗಭಾಷೆಯಲ್ಲಿ ಮಾತ್ರ ಕಾದಂಬರಿಯು ಆ ನಾಡಿನ ಸಾಮಾಜಿಕ ಜೀವನದ ಮೇಲೇ ಅಲ್ಲದೆ ಬೇರೆ ಭಾಷೆಗಳ ಸಾಹಿತ್ಯಗಳ ಮೇಲೂ ಪ್ರಭಾವ ಬೀರುವಷ್ಟು ಶಕ್ತಿಶಾಲಿಯಾಗಲು ಕಾರಣವಿಲ್ಲದೆ ಇಲ್ಲ.

ವಂಗ ಕಾದಂಬರಿಯು ಹತ್ತೊಂಬತ್ತನೆ ಶತಮಾನದ ಆರಂಭದಲ್ಲಿ ಪಾಶ್ಚಾತ್ಯ ಕಾದಂಬರಿಗಳ ಪ್ರಭಾವದಿಂದ ಹುಟ್ಟಿ, ಧಾರ್ಮಿಕ, ರಾಜಕೀಯ ಆಂದೋಳನದಿಂದ ಪುಷ್ಟಿಗೊಂಡು ಸಸಿಯಾಗಿ, ಈ ಒಂದೂವರೆ ಶತಮಾನದ ಅವಧಿಯಲ್ಲಿ ದೊಡ್ಡ ಆಲದ ಮರವಾಗಿ ಬೆಳೆದು ಇಡೀ ಭಾರತೀಯ ಸಾಹಿತ್ಯಕ್ಕೆಲ್ಲ ಆಶ್ರಯ ಮತ್ತು ನೆರಳು ಕೊಟ್ಟು ಪ್ರಪಂಚದ ಯಾವ ಸಾಹಿತ್ಯಕ್ಕೂ ಕಡಿಮೆಯೆನ್ನಿಸದೆ ಭಾರತೀಯ ಸಂಸ್ಕೃತಿಗೇ ಹೆಗ್ಗುರುತಾಗಿ, ಹೆಮ್ಮೆ ತರುವ ಸಂಸ್ಥೆಯಾಗಿ ನಿಂತುಕೊಂಡಿದೆ. ಹೀಗೆ ಇಷ್ಟು ಮಹತ್ತರವಾಗಿ ಬೆಳೆದು ವಿಶ್ವಸಾಹಿತ್ಯದಲ್ಲಿ ಸಹ ಶಾಶ್ವತವಾಗಿ ನಿಲ್ಲತಕ್ಕಂಥ ಉತ್ತಮ ಕೃತಿಗಳನ್ನು ನೀಡಿ ನಾಡಿನಲ್ಲೆಲ್ಲ ವಿಚಾರಕ್ರಾಂತಿ ಹುಟ್ಟಿಸಿ ಹೊಸ ಸಮಾಜ, ಹೊಸ ಯುಗಗಳು ನಿರ್ಮಾಣವಾಗಲು ಸಾಧಕವಾಗಿರುವ ವಂಗ ಕಾದಂಬರಿಯು ಮೂರು ಮುಖ್ಯ ಪರ್ಯಾಯಗಳಲ್ಲಿ ಅತಿಶಯ ವ್ಯಾಪ್ತಿಯನ್ನು ಪಡೆಯಿತು.

ಮೊದಲನೆ ಪರ್ಯಾಯದಲ್ಲಿ ರಾಜಾರಾಮಮೋಹನರಾಯ್ ಮತ್ತು ಈಶ್ವರಚಂದ್ರ ವಿದ್ಯಾಸಾಗರರು ಬಂಗಾಳದ ಬೌದ್ಧಿಕ ಜೀವನದಲ್ಲಿ ಉಂಟು ಮಾಡಿದ್ದ ವೈಚಾರಿಕ ಕ್ರಾಂತಿಯೂ ಸ್ವತಂತ್ರ ಸಾಂಸ್ಕೃತಿಕ ವಾತಾವರಣವೂ ಕಾದಂಬರಿಯು ತನ್ನದೇ ಆದ ವೈಶಿಷ್ಟ್ಯದಿಂದ ಬೆಳೆಯಲು ಅನುವು ಮಾಡಿ-ಕೊಟ್ಟುವು. ಕಾದಂಬರಿಗೆ ಒಂದು ವ್ಯಕ್ತಿತ್ವ ಬೆಳೆದು ಬರುವಂತೆ ಮಾಡಿದವರು ಬಂಕಿಮಚಂದ್ರ ಮತ್ತು ರಮೇಶಚಂದ್ರ ದತ್ತ ಎಂಬ ಇಬ್ಬರು ಮಹಾ ವ್ಯಕ್ತಿಗಳು. ಇವರಿಬ್ಬರೇ ವಂಗ ಕಾದಂಬರಿಯು ಇಂದು ವಿಶ್ವಸಾಹಿತ್ಯದಲ್ಲಿ ತಲೆ ಎತ್ತಿ ನಿಲ್ಲುವಂತೆ ಈ ಮಹಾಸೌಧಕ್ಕೆ ಭದ್ರವಾದ, ಆಳವಾದ ತಳಹದಿ ಹಾಕಿ ಕೊಟ್ಟವರು. ಇವರಿಗೆ ಮೊದಲು ಕಾದಂಬರಿ ಸಾಧಾರಣವಾಗಿ ಬೆಳೆದುಕೊಂಡು ಬಂದಿತ್ತು. ಕಾದಂಬರಿ ಹುಟ್ಟಿದುದೇ ೧೮೫೭ರಲ್ಲಿ. ಭೂದೇವ ಮುಖರ್ಜಿ ವಾಲ್ಟರ್ ಸ್ಕಾಟನ ಚಾರಿತ್ರಿಕ ಕಾದಂಬರಿಗಳ ಮಾದರಿಯಲ್ಲಿ 'ಅಂಗೂರೀಯ ವಿನಿಮಯ' ಎಂಬ ಐತಿಹಾಸಿಕ ಕಾದಂಬರಿಯನ್ನು ಬರೆದರು. ಅದು ಶಿವಾಜಿ ಮತ್ತು ಔರಂಗಜೇಬನ ಮಗಳಾದ ರೋಷನಾರ ಇವರ ಪ್ರಣಯ ಕಥೆಯ ಆಧಾರದ ಮೇಲೆ ಬರೆದದ್ದು. ಅದರ ನಂತರ ೧೮೫೮ರಲ್ಲಿ ಪ್ಯಾರೀ ಚಂದ ಮಿತ್ರ 'ಟೇಕ್ ಚಂದ್ರ ಠಾಕೂರ್' ಎಂಬ ಗುಪ್ತನಾಮದಲ್ಲಿ ಬಂಗಾಳಿಯಲ್ಲಿ ಮೊದಲನೆ ಸಾಮಾಜಿಕ ಕಾದಂಬರಿ ಬರೆದರು. 'ಆಲಾಲೇರ್ ಘರೇರ್ ದುಲಾಲ್' (ದೊಡ್ಡ ಮನೆತನದ ಮುದ್ದು ಮಗ) ಎಂಬ ಆ ಕಾದಂಬರಿ ಇಂದಿಗೂ ಎಣೆಯಿಲ್ಲದ ವಿಡಂಬ-ನಾತ್ಮಕ ಕಾದಂಬರಿಯಾಗಿದೆ. ಹಣವಂತರ ಬಡಾಯಿ, ಪ್ರತಿಷ್ಠೆಗಳನ್ನು ಇದರಲ್ಲಿ ಅಣಕ ಮಾಡಿರುವಷ್ಟು ಬೇರಾವ ಕಾದಂಬರಿಯಲ್ಲೂ ಮಾಡಿಲ್ಲ. ಅದರಲ್ಲಿನ ಸಹಜ ಪಾತ್ರಗಳೂ ಹಾಸ್ಯ ಸನ್ನಿವೇಶಗಳೂ ವಂಗ ಸಾಹಿತ್ಯದಲ್ಲಿ ಇನ್ನೂ ಉಳಿದುಕೊಂಡು ಬಂದಿವೆ. ಈ ಗ್ರಂಥದಿಂದ ಸ್ಫೂರ್ತಿ ಪಡೆದು ಅದೇ ಕಾಲದ ಮತ್ತೊಬ್ಬ ಲೇಖಕ ಕಾಳೀ ಪ್ರಸನ್ನ ಸಿಂಹ (೧೮೪೦-೭೦) 'ಹುತೋಮ್ ಪ್ರೇಮಾಚಾರ್ ನಕ್ಷ' (ಪಿಶಾಚರ ಗೂಬೆಯ ಹರಟೆಗಳು) ಎಂಬ ವಿಡಂಬನಾತ್ಮಕ ಕಾದಂಬರಿಯಲ್ಲಿ ಅಂದಿನ ಬಂಗಾಳಿ ಧನಿಕ ಸಮಾಜದ ಆಡಂಬರ ಜೀವನವನ್ನೂ ಪೊಳ್ಳು ದೊಡ್ಡಸ್ತಿಕೆಯನ್ನೂ ಅಪಹಾಸ್ಯಕ್ಕೆ ಗುರಿಮಾಡಿದರು. ಈ ಎರಡು ಗ್ರಂಥಗಳೂ ಅತಿ ಬೇಗ ಜನಪ್ರಿಯ-ವಾದುದನ್ನು ಕಂಡು ಅನೇಕ ಲೇಖಕರು ಕತೆ ಕಾದಂಬರಿಗಳನ್ನು ಬರೆಯತೊಡಗಿದರು. ಆಗ ಭಾರತದಲ್ಲಿ ಹೆಸರು ಪಡೆಯುತ್ತಿದ್ದ ಜಿ. ಡಬ್ಲ್ಯು. ಎಮ್. ರೆನಾಲ್ಡ್ಸ್ ಎಂಬ ಆಂಗ್ಲ ಲೇಖಕನ ರಮ್ಯ ಕಾದಂಬರಿಗಳು ಕೆಲವರಿಗೆ ಮೇಲ್ಪಂಕ್ತಿಯಾದುವು. 'ಹರಿದಾಸನ ಗುಪ್ತ ಕಥೆ' ಮೊದಲಾದ ಅಗ್ಗದ ಕಾದಂಬರಿಗಳು ಕೀಳು ಅಭಿರುಚಿ-ಯುಳ್ಳ ಓದುಗರನ್ನು ಆಕರ್ಷಿಸಿದುವು.

ಈ ಹಿನ್ನೆಲೆಯಲ್ಲೇ ವಂಗ ಕಾದಂಬರೀಕ್ಷೇತ್ರದಲ್ಲಿ ಮೊದಲ ಸೂರ್ಯೋದಯ-ವಾಯಿತು. ಬಂಕಿಮಚಂದ್ರ ಚಟರ್ಜಿ (೧೮೩೮-೯೪) ಇದಕ್ಕೆ ಮೊದಲು ವಂಗ

ಸಾಹಿತ್ಯದಲ್ಲಿ ತಮ್ಮ ಪಾಂಡಿತ್ಯದಿಂದಲೂ ಹೊಸ ಬಗೆಯ ಕವಿತೆಗಳಿಂದಲೂ ಮೇಲು ಪಂಕ್ತಿ ಹಾಕಿ ಹೋಗಿದ್ದ ಈಶ್ವರಚಂದ್ರ ವಿದ್ಯಾಸಾಗರರಿಂದ ಪ್ರಭಾವಿತರಾಗಿ ಹೊಸ ಶೈಲಿಯಲ್ಲಿ ಕವಿತೆ ಬರೆಯುತ್ತಿದ್ದರು. ಯಾವುದೋ ಪುರಸ್ಕಾರ ಸ್ಪರ್ಧೆಯಿಂದ ಉತ್ತೇಜಿತರಾಗಿ 'ರಾಜಮೋಹನನ ಹೆಂಡತಿ' ಎಂಬ ಮೊದಲ ಕಾದಂಬರಿ ಬರೆದು ಸ್ಪರ್ಧೆಗೆ ಕಳಿಸಿದರು. ಅದಕ್ಕೆ ಬಹುಮಾನ ಬರಲಿಲ್ಲ; ಪ್ರಕಟಣೆಯೂ ಆಗಲಿಲ್ಲ. ಆದರಿಂದ ಧೈರ್ಯಗೆಡದೆ 'ದುರ್ಗೇಶ ನಂದಿನಿ' ಎಂಬ ಐತಿಹಾಸಿಕ ಕಾದಂಬರಿ ಬರೆದರು. ಅದರ ಶೈಲಿ, ಕತೆ ಹೇಳುವ ಜಾಣ್ಮೆ, ಪಾತ್ರವೈಚಿತ್ರ್ಯ ಇವೆಲ್ಲ ಕೂಡಲೆ ಓದುಗರ ಮನಸ್ಸನ್ನು ಸೆಳೆದವು. ಅದರ ಕತೆ, ಪಾತ್ರಗಳು ನಾಡಿನಲ್ಲೆಲ್ಲ ಮನೆ ಮಾತಾಗಿಬಿಟ್ಟುವು. ಅದರಿಂದ ಇನ್ನೂ ಹುರುಪುಗೊಂಡು ಬಂಕಿಮಚಂದ್ರರು 'ಕಪಾಲಕುಂಡಲ' ಎಂಬ ಕಾದಂಬರಿಯನ್ನು ಬರೆದರು. ಅದು ಸಹ ನಾಡಿನಲ್ಲೆಲ್ಲ ಬಹಳ ಜನಪ್ರಿಯವಾಯಿತು.

ಅದರ ನಂತರ ಬಂಕಿಮಚಂದ್ರರು ಕವಿತೆ ತಮಗೆ ಹಿಡಿಸಿದ್ದಲ್ಲ, ಕಾದಂಬರಿಯೇ ತಮ್ಮ ಬಳುವಳಿ ಎಂದುಕೊಂಡು ಒಂದಾದ ಮೇಲೊಂದು ಕಾದಂಬರಿ ಬರೆಯತೊಡ-ಗಿದರು. ಅಷ್ಟರಲ್ಲೇ ವಂಗ ಜನತೆಯಲ್ಲಿ ಸ್ವಲ್ಪ ಸ್ವಲ್ಪವಾಗಿ ಕುದಿಯುತ್ತಿದ್ದ ದೇಶಾಭಿಮಾನ, ಮುಸಲ್ಮಾನ ಮತ್ತು ಆಂಗ್ಲ ಪ್ರಭುತ್ವದ ಕಾಲ ಕೆಳಗೆ ಜಜ್ಜಿ ಹೋಗುತ್ತಿದ್ದ ಭಾರತ ಸಂಸ್ಕೃತಿಯ ಬಗ್ಗೆ ಆವೇಶಪೂರಿತ ಭಕ್ತಿ, ಸಂತಾಪಗಳು ಬಂಕಿಮರ ಲೇಖನಿಯನ್ನು ಕೆರಳಿಸಿದುವು. 'ಆನಂದಮಠ', 'ಚಂದ್ರಶೇಖರ', 'ಸೀತಾ ರಾಮ', 'ದೇವಿ ಚೌಧುರಾಣಿ' ಎಂಬ ರಾಷ್ಟ್ರೀಯತೆಯನ್ನು ಹುರಿದುಂಬಿಸುವ ಕಾದಂ-ಬರಿಗಳು ಹೊರಬಂದುವು. 'ಆನಂದಮಠ'ದ ವಸ್ತು ೧೭೭೩ ರಲ್ಲಿ ಉತ್ತರ ವಂಗ ಪ್ರಾಂತದಲ್ಲಿ ಪಠಾಣರ ಮತ್ತು ಆಂಗ್ಲರ ವಿರುದ್ಧ ಆದ ಸಂನ್ಯಾಸಿಗಳ ಬಂಡಾಯ. ಅದೇ ಗ್ರಂಥದಲ್ಲೇ ಬಂಕಿಮರು ಇಂದಿಗೂ ಹೆಸರಾಗಿರುವ ವಂದೇ ಮಾತರಂ ಎಂಬ ಉಜ್ವಲ ರಾಷ್ಟ್ರಗೀತೆಯನ್ನು ಬರೆದು ಸೇರಿಸಿದರು. ಅದಕ್ಕೆ ಹಿಂದೆ ರಾಷ್ಟ್ರೀಯತೆ-ಯಾಗಲೀ, ನಾಡೆಂಬುದು ತಾಯಿಯ ಸಮಾನವೆಂಬ ಭಾವನೆಯಾಗಲೀ ಬಂಗಾಳ-ದಲ್ಲೇ ಅಲ್ಲ, ಭಾರತದಲ್ಲೇ ಹೆಚ್ಚಾಗಿ ಬೇರೂರಿರಲಿಲ್ಲ.

'ಆನಂದಮಠ'ದ ಸಂನ್ಯಾಸಿಗಳು ತಾಯ್ನಾಡಲ್ಲದೆ ಬೇರೆ ತಾಯಿಯಿಲ್ಲ, ಬೇರೆ ದೇವತೆಯಿಲ್ಲವಾದುದರಿಂದ ತಾಯ್ನಾಡನ್ನ ಬಿಡುಗಡೆ ಮಾಡುವವರೆಗೆ ಬ್ರಹ್ಮಚಾರಿ ಜೀವನ ನಡೆಸುವೆವೆಂದು ದೀಕ್ಷೆ ವಹಿಸಿ ಮದ್ದುಗುಂಡುಗಳನ್ನು ಸಂಗ್ರಹಿಸಿ ಆಂಗ್ಲರ ಪದ್ಧತಿಯಂತೆ ಯುದ್ಧಮಾಡಲು ಕಲಿತು ಹಲವಾರು ಘೋರ ಕದನಗಳಲ್ಲಿ ಹೋರಾಡಿ ಕಡೆಗೆ ತಮ್ಮ ಸಂಘಟನ ದೌರ್ಬಲ್ಯದಿಂದ ಸೋತುಹೋಗುವರು. 'ಆನಂದಮಠ' ಪ್ರಕಟವಾದೊಡನೆ ಇಡೀ ನಾಡಿನಲ್ಲೆಲ್ಲ ಅದರ ರೋಮಾಂಚಕ ಸನ್ನಿವೇಶಗಳು, 'ಆನಂದಮಠ'ದ ಸಂನ್ಯಾಸಿವೀರರ ಉಜ್ವಲ ವ್ಯಕ್ತಿತ್ವ ವರ್ಣನೆಗಳೂ ಓದುಗರ ಮನಸ್ಸಿನ ಮೇಲೆ ಬಹಳವಾಗಿ ಪರಿಣಾಮ ಮಾಡಿದುವು.

ಪರಿಣಾಮ ಎಲ್ಲಿಯವರೆಗೆ ಶಕ್ತಿಯುತವಾಗಿತ್ತೆಂದರೆ ಅದಾದ ನಲವತ್ತು ಐವತ್ತು ವರುಷಗಳ ನಂತರ ವಂಗನಾಡಿನಲ್ಲಿ ಬ್ರಿಟಿಷರ ವಿರುದ್ಧ ನಡೆದ ಕ್ರಾಂತಿಕಾರ ಬಂಡಾಯದಲ್ಲಿ ಭಾಗವಹಿಸಿದ ಎಷ್ಟೋ ಬಿಸಿ ನೆತ್ತರದ ತರುಣರು ಅಂದಿನ ಸಂನ್ಯಾಸಿಗಳಂತೆಯೇ ದೀಕ್ಷೆವಹಿಸಿ ತಾಯ್ನಾಡಿನ ಬಿಡುಗಡೆಗಾಗಿ ಹೋರಾಡಿ ಜೀವ ತೆತ್ತರು. ಅಷ್ಟೇಕೆ, ಇಂದಿಗೂ ವಂಗದೇಶದ ತರುಣರ ಮನಸ್ಸಿನಲ್ಲಿ ಸಮಾಜದ ಅನ್ಯಾಯ, ಅತ್ಯಾಚಾರಗಳ ವಿರುದ್ಧ ಹೋರಾಡುವ ಕೆಚ್ಚು, ಹಠ, ಶೌರ್ಯಗಳ ಪ್ರೇರಣೆಯಿದ್ದರೆ ಅದು ಬಂಕಿಮರ 'ಆನಂದಮಠ'ದ ಮಹಿಮೆಯಿಂದಲೇ ಎಂದು ನಿಸ್ಸಂಕೋಚವಾಗಿ ಹೇಳಬಹುದು........

ಬಂಕಿಮರು 'ದೇವಿ ಚೌಧುರಾಣಿ' 'ಸೀತಾರಾಮ' ಮತ್ತು 'ಚಂದ್ರಶೇಖರ' ಕಾದಂಬರಿಗಳಲ್ಲೂ ಇದೇ ಬಗೆಯ ನಾಡಿನ ಪ್ರೇಮ, ನಾಡಿಗಾಗಿ ಹೋರಾಟ, ಸ್ವಾರ್ಥತ್ಯಾಗ ಮುಂತಾದ ಉಚ್ಚ ಆದರ್ಶಗಳನ್ನು ಪ್ರತಿಪಾದಿಸಿದ್ದಾರೆ. ಆದರೆ ಈ ಕಾದಂಬರಿಗಳಲ್ಲಿ ಬಂಕಿಮರ ರಚನಾಕೌಶಲ್ಯ ಕಲ್ಪನಾಶಕ್ತಿ ಅಷ್ಟಾಗಿ ತೋರುವುದಿಲ್ಲ. ಸಾಹಿತ್ಯ ದೃಷ್ಟಿಯಿಂದ ಇವು ಉತ್ತಮ ಕೃತಿಗಳಾಗಿಲ್ಲ. ಅದಕ್ಕಾಗಿ ಓದುಗರ ಮೇಲೆ ಅವು ಹೆಚ್ಚು ಪರಿಣಾಮಮಾಡಲಿಲ್ಲ. ಬಂಕಿಮರು ಇವಲ್ಲದೆ 'ವಿಷವೃಕ್ಷ', 'ರಜನಿ,' 'ಕೃಷ್ಣಕಾಂತನ ಉಯಿಲು', 'ಇಂದಿರಾ' ಮುಂತಾದ ಸಾಮಾಜಿಕ ಕಾದಂಬರಿಗಳನ್ನು ಬರೆದರು. ಸಾಹಿತ್ಯ ದೃಷ್ಟಿಯಿಂದ ಅವು ಮೇಲ್ತರದ ಕೃತಿಗಳಾದರೂ ಅವುಗಳಲ್ಲಿ ಸಾಂಪ್ರದಾಯಿಕತೆಯ ಬಲವು ಹೆಚ್ಚಾಗಿರುವುದು. ರಾಷ್ಟ್ರೀಯತೆಗಾಗಿ, ನಾಡಿನ ಬಿಡುಗಡೆಗಾಗಿ ಓದುಗರನ್ನು ಹುರಿದುಂಬಿಸಿದ ಬಂಕಿಮರು ಸನಾತನ ಹಿಂದೂ ಸಮಾಜದ ಸಾಂಪ್ರದಾಯಿಕತೆಯ ಪರವಾಗಿ ಟೊಂಕಕಟ್ಟಿ ರಾಮಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ವಿವೇಕಾನಂದ ಮುಂತಾಗಿ ಸಮಾಜಕ್ರಾಂತಿಗಾಗಿ ಹೋರಾಡುವ ಮಹಾವ್ಯಕ್ತಿಗಳ ವಿರೋಧವಾಗಿ ನಿಂತದ್ದು ಶೋಚನೀಯ. ಆದರೂ ಬಂಕಿಮರು ವಂಗ ಸಾಹಿತ್ಯವನ್ನು ಇಡೀ ಭಾರತೀಯ ಭಾಷೆಗಳ ಸಾಹಿತ್ಯಗಳ ಮೇಲೆಲ್ಲ ಪ್ರಭಾವ ಬೀರುವಂತೆ ಮೇಲೆ ನಿಲ್ಲಿಸಿದ ಲೇಖಕರಲ್ಲಿ ಮೊದಲಿಗರು.

ಅವರ ಕಾದಂಬರಿಗಳು ಭಾರತೀಯ ಭಾಷೆಗಳಲ್ಲೆಲ್ಲ ಅನುವಾದವಾಗಿ, ಒಂದಲ್ಲ ಒಂದು ರೀತಿಯಲ್ಲಿ ಆಯಾ ಭಾಷೆಗಳ ಕಾದಂಬರಿಗಳ ಬೆಳವಣಿಗೆಗೆ ಸಹಾಯಕವಾದುವು. ಅವರಾದನಂತರ ಹಲಕೆಲವು ಸಾಧಾರಣ ಲೇಖಕರು ಕಾದಂಬರಿಗಳನ್ನು ರಚಿಸಿದರೂ ಅವುಗಳಲ್ಲಿ ಅಂಥ ಸಾಹಿತ್ಯ ಮೌಲ್ಯಗಳು ಬೆಳೆದು ಬರಲಿಲ್ಲ. ಅಂಥವರಲ್ಲಿ ಬಂಕಿಮರ ಸಹೋದರರಾದ ಸಂಜೀವಚಂದ್ರರೂ ಒಬ್ಬರು. ಅದೇಕಾಲದಲ್ಲಿ ಪ್ರತಾಪಚಂದ್ರ ಘೋಷ ಒಂದೆರಡು ಸ್ವತಂತ್ರ ಐತಿಹಾಸಿಕ ಕಾದಂಬರಿಗಳನ್ನು ಬರೆದರು. ಇವರೆಲ್ಲರಿಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಕಾದಂಬರಿ ಬರೆದವರು ತಾರಕನಾಥ ಗಂಗುಲಿ ಇವರ 'ಸ್ವರ್ಣಲತಾ', ವಂಗಭಾಷೆಯ ಮೊಟ್ಟಮೊದಲು ವಾಸ್ತವಿಕ ಶೈಲಿಯ ಸಾಮಾಜಿಕ ಕಾದಂಬರಿ. ಅನೇಕ ಓದುಗರ

ಮನಸ್ಸನ್ನು ಸೆಳೆಯಿತು. ಅದು ಆಂಗ್ಲ ಭಾಷೆಗೂ ಅನುವಾದಿತವಾಗಿ ಲಂಡನ್ನಿನ ಪ್ರಸಿದ್ಧ ಪ್ರಕಟನಸಂಸ್ಥೆಯೊಂದರಿಂದ ಪ್ರಕಟವಾಯಿತು.

ಬಂಕಿಮರಾದ ಮೇಲೆ ದೊಡ್ಡ ಕಾದಂಬರಿಕಾರರೆಂದರೆ ರಮೇಶಚಂದ್ರ ದತ್ತ. ಇವರು ಭಾರತದ ಮೊಟ್ಟಮೊದಲ ಐ. ಸಿ. ಎಸ್. ಪದವೀಧರರಲ್ಲಿ ಒಬ್ಬರು. ದೊಡ್ಡ ಸರಕಾರಿ ಹುದ್ದೆಯಲ್ಲಿದ್ದರೂ ಸಾಹಿತ್ಯದಲ್ಲಿ ಆಳವಾದ ಆಸಕ್ತಿ-ಯಿಟ್ಟಿದ್ದರು. 'ಮಾಧವೀ ಕಂಕಣ', 'ವಂಗವಿಜೇತ', 'ಮಹಾರಾಷ್ಟ್ರ ಜೀವನ ಪ್ರಭಾತ', 'ರಾಜಪುತ್ರ ಜೀವನಸಂಧ್ಯಾ' ಈ ನಾಲ್ಕು ಉತ್ತಮ ಕಾದಂಬರಿಗಳನ್ನು ಬರೆದರು. ಇವುಗಳಲ್ಲಿ ಮೊದಲಿನವೆರಡು ಐತಿಹಾಸಿಕ ಹಿನ್ನೆಲೆಯಲ್ಲಿ ಬರೆದ ಸಾಮಾಜಿಕ ಕಾದಂಬರಿಗಳು. ಕಡೆಯವೆರಡು ಅಚ್ಚ ಐತಿಹಾಸಿಕ ಕೃತಿಗಳು. ಇವು ನಾಲ್ಕೂ ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದಿತವಾಗಿವೆ. ವಂಗ ಕಾದಂಬರಿಯ ಬೆಳವಣಿಗೆಯಲ್ಲಿ ರಮೇಶಚಂದ್ರ ದತ್ತರ ಹೆಸರು ಮೇಲು ಮಟ್ಟದ್ದು.

ಈ ಪರ್ಯಾಯದಲ್ಲಿ ಇವರಿಬ್ಬರ ಹೊರತಾಗಿ ವಂಗ ಕಾದಂಬರಿಕ್ಷೇತ್ರವನ್ನು ಸಿರಿವಂತವಾಗಿ ಮಾಡುವಷ್ಟು ದೊಡ್ಡ ಲೇಖಕರು ಬೇರೆ ಯಾರೂ ಹುಟ್ಟಲಿಲ್ಲ. ಎರಡನೆ ಪರ್ಯಾಯದಲ್ಲಿ ಅಂದರೆ ಮೊದಲನೆ ಮಹಾಯುದ್ಧ ಮತ್ತು ಭಾರತದಲ್ಲಿ ರಾಷ್ಟ್ರೀಯ ಆಂದೋಲನದ ಮಧ್ಯದ ಕಾಲದಲ್ಲಿ ವಂಗ ಕಾದಂಬರಿಗೆ ಬೌದ್ಧಿಕ, ವೈಚಾರಿಕ ಸ್ಫೂರ್ತಿ ಕೊಡುವ ಹೊಸ ವಾತಾವರಣ ಒದಗಿಬಂತು ಈ ಪರ್ಯಾಯದಲ್ಲೇ ಟಾಗೋರ್ ಮತ್ತು ಶರಚ್ಚಂದ್ರ ಚಟರ್ಜಿ ಇವರಿಬ್ಬರು ಮಹಾವ್ಯಕ್ತಿಗಳು. ಈ ಸಾಹಿತ್ಯವನ್ನು ವಿಶ್ವಸಾಹಿತ್ಯದ ಎತ್ತರಕ್ಕೆ ತಂದರು. ಸಾವಿರದೊಂಬೈನೂರಇಪ್ಪತ್ತರಿಂದ ಮೂವತ್ತರವರೆಗೆ ಹತ್ತೊಂಬತ್ತು ವರುಷ-ಗಳ ಅವಧಿಯಲ್ಲಿ, ಅಂದರೆ ಎರಡು ಪ್ರಪಂಚ ಯುದ್ಧಗಳ ನಡುವೆ ಬಂಗಾಳದಲ್ಲಿ ಆದ ಯುಗಪ್ರವರ್ತಕ ಆರ್ಥಿಕ, ರಾಜಕೀಯ ಸಾಮಾಜಿಕ ಬದಲಾವಣೆ-ಗಳು ಸಾಹಿತ್ಯದಲ್ಲೂ, ಹೆಚ್ಚಾಗಿ ಕಾದಂಬರಿಯಲ್ಲೂ ಕಾಣಿಸಿಕೊಂಡುವು. ಕವಿ ಟಾಗೋರ ಶರಚ್ಚಂದ್ರ ಚಟರ್ಜಿಯವರಲ್ಲದೆ ಅವರಿಬ್ಬರ ಬೆನ್ನ ಹಿಂದೆಯೇ ಬಂದ ಇತರ ಮೇಧಾವಿ ಲೇಖಕರೂ ಕಾದಂಬರಿಕ್ಷೇತ್ರವನ್ನು ಇನ್ನೂ ಹುಲುಸಾದ ಬೆಳೆಯಿಂದ ತುಂಬಿದರು.

ಟಾಗೋರರು ಅವರ ಕಾವ್ಯಸೃಷ್ಟಿಯಿಂದಲೂ ಅಷ್ಟೇ ವಿಪುಲವಾದ ಉತ್ತಮ ಸಣ್ಣಕತೆಗಳಿಂದಲೂ ವಿಶ್ವವಿಖ್ಯಾತರಾಗಿದ್ದರು. ಆದರೆ ಕಾದಂಬರೀಪ್ರಪಂಚಕ್ಕೂ ಅವರಿಂದ ದೊರೆತ ಕೊಡುಗೆ ಸಾಧಾರಣವಲ್ಲ. 'ಗೋರಾ', 'ಚೋಬೇರ್ ಬಾಲಿ', 'ಯೋಗಾಯೋಗ', 'ಘರೇ ಬಾಹಿರೇ', 'ಚತುರಂಗ', ಮತ್ತು 'ಚಾರ್ ಅಧ್ಯಾಯ್' ಈ ಕೆಲವೇ ಕಾದಂಬರಿಗಳು ಉತ್ತಮ ಕಲಾಕೃತಿಗಳೆನ್ನಿಸಿಕೊಂಡು ವಂಗಸಾಹಿತ್ಯದಲ್ಲೇ ಮಾತ್ರವಲ್ಲ, ಇತರ ಭಾಷೆಗಳ ಕಾದಂಬರಿ ಲೇಖಕರಿಗೂ ಮಾದರಿಯಾಗಿವೆ. ಹುಟ್ಟು ಕವಿಗಳಾದ ಟಾಗೋರರು ತಮ್ಮ ಕವಿತಾಪ್ರತಿಭೆ-

ಯನ್ನು ಕಾದಂಬರಿಗಳಲ್ಲೂ ಹರಿಯಬಿಟ್ಟಿರುವುದು ನಿಜ. ಆದರೂ ಉತ್ತಮ ಸಾಹಿತ್ಯಕ್ಕೆ ಹೆಗ್ಗುರುತಾದ ಸುಂದರ ಭಾಷಾಶೈಲಿ, ಜೀವಂತ ಪಾತ್ರಸೃಷ್ಟಿ, ಪಾತ್ರಗಳ ಮನೋವಿಶ್ಲೇಷಣೆ ಮತ್ತು ಆಳವಾದ, ವಿಶಾಲವಾದ ಜೀವನದೃಷ್ಟಿ–ಇಂಥವು-ಗಳಿಂದ ಇವರ ಕಾದಂಬರಿಗಳು ವಿಶ್ವಸಾಹಿತ್ಯದಲ್ಲಿ ಸೇರತಕ್ಕುವಾಗಿವೆ.

'ಗೋರಾ' ಕಾದಂಬರಿಯ ವಸ್ತು ಗಹನವಾದುದು. ಸಿಪಾಯಿ ದಂಗೆಯಲ್ಲಿ ಅನಾಥನಾದ ಆಂಗ್ಲ ಹುಡುಗನೊಬ್ಬನು ಬಂಗಾಳಿ ಬ್ರಾಹ್ಮಣ ಕುಟುಂಬವೊಂದರಲ್ಲಿ ಸಾಕುಮಗನಾಗಿ ಬೆಳೆದು ವಾತಾವರಣ ಪ್ರಭಾವದಿಂದ ಅಚ್ಚ ಸನಾತನ ಹಿಂದುವಿನ ಮನೋಭಾವವನ್ನೇ ಬೆಳೆಸಿಕೊಳ್ಳುತ್ತಾನೆ. ಆಗ ಕ್ರಮೇಣ ಹರಡಿ, ಬುದ್ಧಿವಂತರ ಮೇಲೆ ಪ್ರಭಾವ ಬೀರುತ್ತಿದ್ದ ರಾಷ್ಟ್ರೀಯ ಚಳುವಳಿಯಿಂದ ಪ್ರೇರಿತನಾಗಿ ಪಾಶ್ಚಾತ್ಯ ಸಂಸ್ಕೃತಿಯ ಶತ್ರುವಾಗಿ ಕಡೆಯಲ್ಲಿ ತನ್ನ ಬದುಕಿನ ಸತ್ಯವನ್ನು ತಿಳಿದ ಮೇಲೆ ಒಂದು ಬಗೆಯಾದ ಭಾವಸ್ಥಿಮಿತಕ್ಕೆ ಬರುತ್ತಾನೆ. ಇಂಥ ಗಂಭೀರವಾದ ವಸ್ತುವಿನ ಹರಹಿನಲ್ಲಿ ರವೀಂದ್ರರು ಅನೇಕ ನೈಜಪಾತ್ರಗಳ ಮೂಲಕ ಅವರ ಸಂಭಾಷಣೆಗಳ ಮೂಲಕ ಅಂದಿನ ಸುಶಿಕ್ಷಿತ ಬಂಗಾಳೀ ಸಮಾಜದ ಚಿತ್ರವನ್ನೇ ಅಲ್ಲದೆ, ಬುದ್ಧಿ-ವಂತರಲ್ಲಿ, ವಿದ್ಯಾವಂತರಲ್ಲಿ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಆಗುತ್ತಿದ್ದ ಒಳತೋಟಿಯನ್ನು ಸುಂದರವಾಗಿ ಚಿತ್ರಿಸಿದ್ದಾರೆ. 'ಗೋರಾ' ಕಾದಂಬರಿ ಇಂಗ್ಲಿಷಿಗೂ ಬೇರೆಲ್ಲ ಭಾರತೀಯ ಭಾಷೆಗಳಿಗೂ ಅನುವಾದಿತವಾಗಿ ಸಾಹಿತ್ಯಪ್ರಪಂಚದಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡಿದೆ.

ಟಾಗೋರರ ಎರಡನೆ ಉತ್ತಮ ಕಾದಂಬರಿ 'ಯೋಗಾಯೋಗ'. ಕೆಲವು ವಿಮರ್ಶಕರಂತೂ ಇದನ್ನು ಟಾಗೋರರ ಅತ್ಯುತ್ಕೃಷ್ಟ ಕಾದಂಬರಿಯೆಂದು ಗಣಿಸು-ತ್ತಾರೆ. ಇದರಲ್ಲಿ ಅಂದಿನ ಸಮಾಜದಲ್ಲಿ ಕುಸಿದುಬೀಳುತ್ತಿದ್ದ ಒಂದು ಜಮೀನು-ದಾರಿ ವಂಶದ ಕನ್ನೆಯೊಬ್ಬಳು ತನ್ನ ವಂಶಗೌರವವನ್ನುಳಿಸಬೇಕೆಂದು ವ್ಯಾಪಾರ-ದಲ್ಲಿ ಏಳಿಗೆಗೆ ಬರುತ್ತಿದ್ದ ಹೊಸ ಪೀಳಿಗೆಯ ಧನಿಕನೊಬ್ಬನನ್ನು ಮದುವೆಯಾಗಿ, ತನ್ನ ಎರಡರಷ್ಟು ವಯಸ್ಸಾಗಿದ್ದ, ಸದಾ ಹಣಕಾಸಿನ ವ್ಯವಹಾರದಲ್ಲೇ ಮುಳು-ಗಿರುವ ಅರಸಿಕ ಗಂಡನೊಂದಿಗೆ ಸಂಸಾರ ಮಾಡುತ್ತ ತನ್ನ ವ್ಯಕ್ತಿತ್ವವನ್ನೇ ಬಲಿ ಕೊಡುತ್ತಾಳೆ. ಕ್ರಮೇಣ ಪ್ರಬಲವಾಗುತ್ತಿರುವ ಈ ಹೊಸ ಧನಿಕ ಸಮೂಹದಿಂದ ಸಮಾಜದಲ್ಲಿ ಮೊದಲಿಂದಲೂ ಬೇರೂರಿದ್ದ ಸಾಂಸ್ಕೃತಿಕ ಮೌಲ್ಯಗಳು ಹೇಗೆ ಘಾಸಿಗೊಳ್ಳುತ್ತವೆಂಬುದನ್ನು ಈ ಕಾದಂಬರಿಯಲ್ಲಿ ಟಾಗೋರರು ಬಹಳ ಪರಿಣಾಮ-ಕಾರಿಯಾಗಿ ವರ್ಣಿಸಿದ್ದಾರೆ. ಅಲ್ಲದೆ ವಂಗಸಾಹಿತ್ಯದಲ್ಲಿ ಹಿಂದೆಂದೂ ಪ್ರಯತ್ನಿಸ-ದಿದ್ದ ಅತಿ ಸೂಕ್ಷ್ಮ ಮಾನವಪ್ರವೃತ್ತಿಗಳ ಒಳತೋಟಿಯ ಚಿತ್ರಣ ಇದರಲ್ಲಿ ಕಾಣುತ್ತವೆ. ಇದರ ಮುಖ್ಯ ಪಾತ್ರಗಳಾದ ಕುಮುದಿನಿ, ಮಧುಸೂದನ ಮತ್ತು ವಿಪ್ರದಾಸರ ಪಾತ್ರನಿರೂಪಣೆಯಲ್ಲಿ ಅಸಾಧಾರಣ ಕಲಾವಂತಿಕೆ ಕಾಣಬರುತ್ತದೆ.

ಟಾಗೋರರ ಇನ್ನೊಂದು ಮುಖ್ಯ ಕಾದಂಬರಿ 'ಘರೇ ಬಾಹಿರೇ' (ಮನೆ ಮತ್ತು ಪ್ರಪಂಚ). ಇದರಲ್ಲಿ ರವೀಂದ್ರರು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಉಗ್ರ ರಾಷ್ಟ್ರೀಯ ಚಳುವಳಿಯಿಂದ ಸಾಮಾಜಿಕ, ನೈತಿಕ ಮೌಲ್ಯಗಳಿಗೆ ಆಗುತ್ತಿದ್ದ ಹಾನಿಯನ್ನು ಮುಖ್ಯವಸ್ತುವಾಗಿಟ್ಟುಕೊಂಡು ಕಾದಂಬರಿ ರಚಿಸಿದ್ದಾರೆ. ಟಾಗೋರರ ನಿರೂಪಣಾಶೈಲಿಯ ಹೊಸತನ, ಪಾತ್ರಗಳ ಮನೋವಿಶ್ಲೇಷಣ ಮುಂತಾದ ಉತ್ತಮ ಸಾಹಿತ್ಯ ಗುಣಗಳಿಂದ ಕಾದಂಬರಿಗೊಂದು ವೈಶಿಷ್ಟ್ಯ ದೊರೆತಿದೆ. ಟಾಗೋರರ ಇನ್ನೊಂದು ಉತ್ತಮ ಕೃತಿ 'ಚೋಖೇರ್ ಬಾಲಿ' (ವಿನೋದಿನಿ) ಬಾಲವಿಧವೆಯೊಬ್ಬಳು ಪ್ರಕೃತಿಸಹಜವಾದ ಆಸೆ, ಆಕಾಂಕ್ಷೆಗಳಿಗೆ ತುತ್ತಾಗಿ ಅನುಭವಿಸುವ ಸಂಕಟವನ್ನು ನಿರೂಪಿಸುವ ಸಾಧಾರಣ ಕತೆಯಾದರೂ ಟಾಗೋರರು ಅತ್ಯಂತ ಅನುಕಂಪದಿಂದಲೂ ಜಾಣ್ಮೆಯಿಂದಲೂ ಕಾದಂಬರಿಯನ್ನು ರಚಿಸಿದ್ದಾರೆ. ಒಟ್ಟಿನಲ್ಲಿ ಟಾಗೋರರು ಬರೆದಿರುವ ಕಾದಂಬರಿಗಳು ಕೆಲವೇ ಆದರೂ ಎಲ್ಲವೂ ಉತ್ತಮ ಸಾಹಿತ್ಯಕೃತಿಗಳಾಗಿ ನಿಂತಿವೆ ಮತ್ತು ವಂಗ ಕಾದಂಬರಿ ಬರೆಹಗಾರರ ಮೇಲೆ ಬಹಳವಾಗಿ ಪರಿಣಾಮ ಮಾಡಿವೆ.

ಸಾಹಿತ್ಯಪ್ರೇಮಿಗಳು ಮಾತ್ರವಲ್ಲ, ಜನಸಾಮಾನ್ಯರ ಕಲಾ ಅಭಿರುಚಿಯನ್ನು ಬೆಳೆಸುವುದರ ದೃಷ್ಟಿಯಿಂದಲೂ ಶರಚ್ಚಂದ್ರ ಚಟರ್ಜಿಯವರು ಬರೆದ ಕಾದಂಬ-ರಿಗಳು ಎಣೆಯಿಲ್ಲದುವು. ಬಂಕಿಮರ ನಂತರ, ನಾಡಿನಲ್ಲೆಲ್ಲ ಎಲ್ಲರಿಗೂ ಪ್ರಿಯರಾದ ಲೇಖಕರು, ನಿಜವಾದ ಕಾದಂಬರೀಸಮ್ರಾಟ ಶರಚ್ಚಂದ್ರರು. ಇವರ ಕೃತಿಗಳು ಬಂಕಿಮರ ಕೃತಿಗಳಂತೆಯೇ ಭಾರತದ ಎಲ್ಲಾ ಭಾಷೆಗಳಲ್ಲೂ ಇವತ್ತಿಗೂ ಓದು-ಗರನ್ನೂ ಆಕರ್ಷಿಸುತ್ತಿರುವುದನ್ನು ಗಮನಿಸಿದರೆ ಅವರ ಸಾಹಿತ್ಯದಲ್ಲಿ ಅಮರವಾಗಿ ಉಳಿದಿರುವ ಶಕ್ತಿಯೆಂಥದೆಂಬುದನ್ನು ಊಹಿಸಬಹುದು. ಅವುಗಳಲ್ಲಿ ಹಲವಾರು ಚಲಚ್ಚಿತ್ರಗಳಿಗೂ ನಾಟಕಗಳಿಗೂ ವಸ್ತುವೊದಗಿಸಿ ದೃಶ್ಯರೂಪವಾಗಿಯೂ ಜನತೆಯ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿಬಿಟ್ಟಿವೆ.

ಶರಚ್ಚಂದ್ರರು ಬಾಲ್ಯದಲ್ಲೂ ಯೌವನದಲ್ಲೂ ಅನೇಕ ಕಷ್ಟ ಕೋಟಲೆ-ಗಳನ್ನು ಅನುಭವಿಸಿ ಹೊಟ್ಟೆಗಾಗಿ ಊರೂರು ಅಲೆದು ಕಡೆಗೆ ರಂಗೂನಿನಲ್ಲಿ ಯಾವುದೋ ಸರ್ಕಾರೀ ಕಚೇರಿಯಲ್ಲಿ ಕಾರಕೂನರಾಗಿದ್ದವರು. ಅಲ್ಲಿ ನೆಲೆಸಿದ್ದ ಅನೇಕ ಬಂಗಾಳಿ ಕ್ರಾಂತಿಕಾರರ ಪ್ರಭಾವಕ್ಕೆ ಒಳಗಾಗಿ ಕತೆ, ಕಾದಂಬರಿಗಳನ್ನು ಬರೆಯತೊಡಗಿದರು. ಮೊದಲಲ್ಲಿ ಇವರ 'ಪರಿಣೀತಾ', 'ಬಡಿ ದೀದಿ' (ಹಿರಿಯಕ್ಕ), 'ಅರಕ್ಷಣೀಯ' ಮುಂತಾದ ಕಿರುಕಾದಂಬರಿಗಳು ಅವುಗಳ ವಾಸ್ತವಿಕತೆ-ಯಿಂದಲೂ, ಸಮಾಜದ ದುಃಖಿಗಳ ಬಗ್ಗೆ ಅನುಕಂಪದಿಂದಲೂ ಬೇಗ ಓದುಗರನ್ನು ಆಕರ್ಷಿಸಿದುವು. ಆ ಮೇಲೆ ಶರಚ್ಚಂದ್ರರು ಕಲಕತ್ತೆಗೆ ಬಂದು ನೆಲಸಿ ಅನೇಕ ಕಾದಂಬರಿಗಳನ್ನು ಬರೆದು ನೆಮ್ಮದಿಯಾಗಿ ಜೀವನ ನಡೆಸತೊಡಗಿದರು.

ಬಹುಮಟ್ಟಿಗೆ ಇವರ ಕಾದಂಬರಿಗಳೆಲ್ಲ ಜನಪ್ರಿಯವಾಗಿದ್ದರೂ ಸಾಹಿತ್ಯ ಮೌಲ್ಯಗಳ ದೃಷ್ಟಿಯಿಂದ ಶಾಶ್ವತವಾಗಿ ಉಳಿಯತಕ್ಕವು ಹತ್ತು ಹನ್ನೆರಡು ಮಾತ್ರ. ಇವುಗಳಲ್ಲಿ 'ಶ್ರೀಕಾಂತ' (ನಾಲ್ಕು ಭಾಗ), 'ಪಥೇರ್ ದಾಬಿ' (ಹಾದಿಯ ಹಕ್ಕು), 'ಪಲ್ಲೀ ಸಮಾಜ', 'ದೇವದಾಸಿ', 'ಚರಿತ್ರಹೀನ' 'ಶುಭದಾ', 'ದೇನಾ ಪಾಓನಾ', 'ಗೃಹದಹ' (ಮನೆಗೆ ಬಿದ್ದ ಬೆಂಕಿ), 'ಶೇಷ ಪ್ರಶ್ನ' ಮುಖ್ಯವಾದುವು.

ಇವುಗಳಲ್ಲಿ ಮೊದಲ ಎರಡು ಮತ್ತು 'ಚರಿತ್ರಹೀನ' ಅವರ ಸ್ವಂತ ಅನುಭವಗಳ ಆಧಾರದ ಮೇಲೆ ರಚಿತವಾದ ಕಾದಂಬರಿಗಳು. 'ಶ್ರೀಕಾಂತ' ಬೃಹತ್ ಗ್ರಂಥ ಕಾದಂಬರಿಯೆನ್ನಿಸಿಕೊಳ್ಳುವ ಮುಖ್ಯ ಗುಣಗಳನ್ನು ಹೊಂದಿರದಿದ್ದರೂ ಇತರ ಕೃತಿಗಳಲ್ಲಿ ಅದು ಅತಿ ಗಣನೀಯವಾಗಿದೆ. ಇದರಲ್ಲಿ ಒಂದು ನಿರ್ದಿಷ್ಟವಾದ ಕತೆಯಿಲ್ಲ. ಶ್ರೀಕಾಂತನೆಂಬ ಅರ್ಧ ಶಿಕ್ಷಿತನಾದರೂ ಅತಿ ಬುದ್ಧಿವಂತನೂ ಭಾವನಾಶೀಲನೂ ಆದ ಮಧ್ಯಮವರ್ಗದ ಯುವಕ. ಚಿಕ್ಕ ವಯಸ್ಸಿನಲ್ಲೇ ಅನಾಥನಾಗಿ ಊರೂರು ಅಲೆಯುತ್ತ ಚಿತ್ರವಿಚಿತ್ರವಾದ ಅನುಭವಗಳಲ್ಲಿ ಹಾದು, ನೂರಾರು ಜನರ ಸಂಪರ್ಕಕ್ಕೆ ಬಂದು, ಅವರ ಸುಖ ದುಃಖಗಳಲ್ಲೂ ಪಾಲುಗೊಂಡು ಕಡೆಯಲ್ಲಿ ತನ್ನ ಹಳೆಯ ಒಡನಾಡಿಯಾಗಿದ್ದ ಆಮೇಲೆ ವೇಶ್ಯೆಯಾದ ರಾಜಲಕ್ಷ್ಮಿಯೊಡನೆ ಸಂಸಾರ ಮಾಡುತ್ತ ಒಂದು ಕಡೆ ನೆಲಸುತ್ತಾನೆ. ಇದು ಸಾಧಾರಣವಾಗಿ ಶರಚ್ಚಂದ್ರರ ಸ್ವಂತ ಜೀವನ ಕತೆಯೇ. ಈ ಗ್ರಂಥದ ವೈಶಿಷ್ಟ್ಯವೇನೆಂದರೆ ಇದರಲ್ಲಿ ಬರುವ ವಂಗದೇಶದ ನಾನಾ ಭಾಗದ ಹಳ್ಳಿಗಳ, ಊರುಗಳ, ನಾನಾ ವೃತ್ತಿಗಳ, ಜಾತಿಗಳ, ವ್ಯಕ್ತಿಗಳ ಕಷ್ಟ ಸುಖಗಳ ವರ್ಣನೆ. ಒಳ್ಳೆಯವರು, ಕೆಟ್ಟವರು, ಸುಖಿಗಳು, ದುಃಖಿಗಳು, ಬಡವರು, ಹಣವಂತರು, ಸಂಸಾರಿಗಳು, ಸಂನ್ಯಾಸಿಗಳು, ಸಾಧ್ವಿಯರು, ವೇಶ್ಯೆಯರು – ಒಟ್ಟಿನಲ್ಲಿ ಅಂದಿನ ವಂಗಸಮಾಜದ– ಹೆಚ್ಚಾಗಿ ಗ್ರಾಮಜೀವನದ ಒಂದು ವಿಶಾಲಚಿತ್ರವೇ ನಮ್ಮ ಕಣ್ಮುಂದೆ ನಿಲ್ಲುತ್ತದೆ. ಈ ದೃಷ್ಟಿಯಲ್ಲಿ ಇಂಥ ಕಾದಂಬರಿ ವಂಗಭಾಷೆಯಲ್ಲಿ ಮಾತ್ರವಲ್ಲ, ಬೇರೆ ಯಾವ ಭಾರತೀಯ ಭಾಷೆಯಲ್ಲೂ ರಚಿತವಾಗಿಲ್ಲ. ಅದರ ಹರಹು, ಬದುಕಿನ ವೈವಿಧ್ಯ ಮತ್ತು ಗಾಢ ಮಾನವೀಯತೆ ಇವೆಲ್ಲ 'ಶ್ರೀಕಾಂತ'ಕ್ಕೆ ವಂಗ ಸಾಹಿತ್ಯದಲ್ಲೇ ಅಲ್ಲ, ಪ್ರಪಂಚಸಾಹಿತ್ಯದಲ್ಲೇ ಅತಿ ದೊಡ್ಡ ಸ್ಥಾನವನ್ನು ಗಳಿಸಿಕೊಟ್ಟಿವೆ. ಈ ಕಾದಂಬರಿ ಇತರ ಭಾರತೀಯ ಭಾಷೆಗಳಲ್ಲಿ ಮಾತ್ರವಲ್ಲ, ಇಂಗ್ಲಿಷಿಗೂ ಅನುವಾದವಾಗಿದೆ. ಇದರ ಇಂಗ್ಲಿಷ್ ಅನುವಾದಕ ಎಡ್ವರ್ಡ್ ಥಾಮ್ಸನ್‌ರು ಇದಕ್ಕೆ ನೋಬೆಲ್ ಪಾರಿತೋಷಕ ದೊರೆಯುವಂತೆ ಮಾಡಲು ಎಷ್ಟೋ ಪ್ರಯತ್ನ ಮಾಡಿ ವಿಫಲರಾದರು.

ಶರಚ್ಚಂದ್ರರ 'ಪಥೇರ್ ದಾಬಿ', 'ಚರಿತ್ರಹೀನ', 'ಗೃಹದಹ'– ಕಾದಂಬರಿಗಳು ಇದುವರೆಗಾಗಲೇ ಪ್ರಸಿದ್ಧರಾಗಿದ್ದ ಕವಿ ಟಾಗೋರರ ಕಾದಂಬರಿ-

ಗಳಿಂದ ಪ್ರಭಾವಿತವಾದುವು. 'ಪಥೇರ್ ದಾಬಿ'ಯಲ್ಲಿ ಶರಚ್ಚಂದ್ರರು ರಂಗೂನಿನಲ್ಲಿ ತಮಗೆ ಪರಿಚಿತರಾಗಿದ್ದ ಬಂಗಾಳಿ ಕ್ರಾಂತಿಕಾರರ ಚಟುವಟಿಕೆಗಳ ಆಧಾರದಿಂದ ನಾಡಿನ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂಸಾತ್ಮಕ ಚಳುವಳಿಗಳ ಬಗ್ಗೆ ಕತೆ ಕಟ್ಟಿದ್ದಾರೆ. ಅದರಲ್ಲಿ ಚಿತ್ರಿತವಾಗಿರುವ ಕ್ರಾಂತಿಕಾರರ ಅಸಾಧಾರಣ ಚಾರಿತ್ರ್ಯ, ಅವರ ಮನಸ್ಸಿನ ಒಳತೋಟಿ, ಅವರ ಭಯಂಕರ ಸಾಂಘಿಕ ಚಟುವಟಿಕೆಗಳ ಮಾನವೀಯತೆ ಕಾದಂಬರಿಗೆ ಒಂದು ಹೆಚ್ಚುಗಾರಿಕೆ ಕೊಟ್ಟಿವೆ. ಇದರ ಪ್ರಭಾವ-ದಿಂದ ಜನ ಇನ್ನೂ ಸಿಡಿದೇಳಬಹುದೆಂದು ಅಂದಿನ ಆಂಗ್ಲ ಪ್ರಭುತ್ವವು 'ಪಥೇರ್ ದಾಬಿ'ಯನ್ನು ಪ್ರತಿಬಂಧಿಸಿತು.

ಶರಚ್ಚಂದ್ರರ 'ಪಲ್ಲೀ ಸಮಾಜ' ಇನ್ನೊಂದು ವಿಧದಲ್ಲಿ ಓದುಗರನ್ನು ಕೆಣಕಿತು. ಹಳ್ಳಿಗರ ಮೌಢ್ಯ, ಅಂತಃಕಲಹ, ಕುರುಡು ನಂಬಿಕೆಗಳನ್ನು ಬಳಸಿ ತಮ್ಮ ಪ್ರತಿಷ್ಠೆಯನ್ನು ಬೆಳಸಿಕೊಂಡು ಇಡೀ ಗ್ರಾಮಜೀವನವನ್ನೇ ಹೊಲಸಾಗಿ ಮಾಡಿರುವ ಸ್ವಾರ್ಥಿಗಳನ್ನೂ ಅವರನ್ನು ಪ್ರತಿಭಟಿಸಿ ನಿಲ್ಲುವ ಧ್ಯೇಯ-ವಾದಿಗಳನ್ನೂ ಈ ಕಾದಂಬರಿ ಮನಕಲಕುವಂತೆ ಚಿತ್ರಿಸಿದೆ. ಇಂಥ ಕಾದಂಬರಿಗಳು ಯಾವ ಭಾಷೆಯಲ್ಲಾದರೂ ವಿರಳವಾದುದರಿಂದ ಇದಕ್ಕೆ ವಂಗಸಾಹಿತ್ಯದಲ್ಲಿ ಪ್ರತ್ಯೇಕಸ್ಥಾನವಿದೆ. ಶರಚ್ಚಂದ್ರರ ಇತರ ಕಾದಂಬರಿಗಳು ಹೆಚ್ಚಾಗಿ ಹಿಂದೂ ಸಮಾಜದಲ್ಲಿ ಹೆಂಗಸರಿಗಾಗುವ ಅನ್ಯಾಯ ಅತ್ಯಾಚಾರಗಳ ಕತೆಗಳಾಗಿವೆ. ಅವುಗಳಲ್ಲಿ ಕತೆ ಹೇಳುವ ಜಾಣ್ಮೆ, ಅಚ್ಚಳಿಯದಂಥ ವ್ಯಕ್ತಿಚಿತ್ರಣ, ವಾಸ್ತವಿಕತೆ ಇವೇ ಮೊದಲಾದ ಗುಣಗಳಿಂದ ಸಾಮಾನ್ಯ ಓದುಗರಲ್ಲಿ ಹೆಚ್ಚು ಪ್ರಿಯವಾಗಿವೆ. ಶರಚ್ಚಂದ್ರರ ಬರೆಹದಲ್ಲಿ ಟಾಗೋರರಲ್ಲಿದ್ದ ಹೆಚ್ಚು ಪ್ರೌಢತೆಯಾಗಲಿ, ಆಳವಾದ ವಿಚಾರಸರಣಿಯಾಗಲಿ, ವ್ಯಕ್ತಿಚಿತ್ರಣದಲ್ಲಿ ಸೂಕ್ಷ್ಮ ಮನೋವಿಶ್ಲೇಷಣವಾಗಲಿ ಕಾಣಬರದೆ ಇರುವುದರಿಂದ ಸಾಹಿತ್ಯವಿಮರ್ಶಕರನೇಕರಿಗೆ ಅವರ ಬಗ್ಗೆ ಹೆಚ್ಚು ಗೌರವವಿಲ್ಲದಿದ್ದರೂ ಅವರು ನಿರ್ಮಿಸಿರುವ ವಿಸ್ತಾರವಾದ ಕಥಾಪ್ರಪಂಚ, ವ್ಯಕ್ತಿ, ಸನ್ನಿವೇಶಗಳ ವೈವಿಧ್ಯ, ವಾಸ್ತವಿಕತೆಗಳಿಂದ ವಂಗ ಕಾದಂಬರಿಯಲ್ಲಿ ಅವರಿಗಿರುವ ಶಾಶ್ವತ ಸ್ಥಾನವನ್ನು ಯಾರೂ ಅಲುಗಿಸುವ ಹಾಗಿಲ್ಲ.

ಟಾಗೋರ್ ಮತ್ತು ಶರಚ್ಚಂದ್ರರು ವಂಗ ಕಾದಂಬರೀಯುಗದ ಎರಡನೇ ಪರ್ಯಾಯದ ಮಹಾ ವ್ಯಕ್ತಿಗಳು. ಆ ಪರ್ಯಾಯದ ಕೊನೆಯವರೆಗೂ ವಂಗ ಸಮಾಜವು ತನ್ನ ಹಳೆಯ ವೈಶಿಷ್ಟ್ಯವನ್ನು ಕಳೆದುಕೊಂಡಿರಲಿಲ್ಲ. ಜಮೀನುದಾರಿ ಪದ್ಧತಿ ಇನ್ನೂ ಭದ್ರವಾಗಿತ್ತು. ಯುರೋಪಿನಲ್ಲಿ ಆಗಲೇ ತಲೆದೋರಿದ್ದ ಸಮತಾ ವಾದದ ಬಿರುಗಾಳಿ ಈ ಕಡೆ ಇನ್ನೂ ಬೀಸಿರಲಿಲ್ಲ. ರೈತರಲ್ಲೂ ಕಾರ್ಮಿಕರಲ್ಲೂ ಹೊಸ ಚೇತನ ಹುಟ್ಟಿರಲಿಲ್ಲ. ಪಾಶ್ಚಾತ್ಯ ವಿದ್ಯಾಭ್ಯಾಸದ ಫಲದಿಂದಲೂ ಪಾಶ್ಚಾತ್ಯ ನಾಗರಿಕತೆಯ ಅಂಧಾನುಕರಣೆಯಿಂದಲೂ ವೇಷಭೂಷಣಗಳಲ್ಲಿ, ವೃತ್ತಿ ವಿಧಾನಗಳಲ್ಲಿ ಎಷ್ಟೇ ಮಾರ್ಪಾಟು ಆಗಿದ್ದರೂ ದೇಶದಾದ್ಯಂತ ನಡೆಯುತ್ತಿದ್ದ

ರಾಷ್ಟ್ರೀಯ ಚಳುವಳಿಯ ಪ್ರಭಾವದಿಂದ ವಂಗಸಮಾಜದ ನೈತಿಕ, ವೈಚಾರಿಕ ವ್ಯಕ್ತಿತ್ವಕ್ಕೆ ಧಕ್ಕೆ ಬರಲಿಲ್ಲ. ಟಾಗೋರ್ ಮತ್ತು ಶರಚ್ಚಂದ್ರರ ನಂತರವೇ ಪಾಶ್ಚಾತ್ಯ ದೇಶಗಳ ಬೌದ್ಧಿಕ ಜೀವನದಲ್ಲಿ ಈಗಾಗಲೇ ಪರಿಣಾಮವುಂಟುಮಾಡಿದ್ದ ಡಾರ್ವಿನ್, ಮಾರ್ಕ್ಸ್, ಫ್ರಾಯ್ಡ್ ಈ ಮೂವರು ಕ್ರಾಂತಿಕಾರಕ ದಾರ್ಶನಿಕರ ತತ್ವಗಳು ಬಂಗಾಳದ ಸುಶಿಕ್ಷಿತ ಜನರ ಮೇಲೆ ಪ್ರಭಾವ ಬೀರದೆ ಇರಲಿಲ್ಲ. ಈ ಸಮಯದಲ್ಲಿ ಬರೆಯಲು ತೊಡಗಿದ್ದ ಹೊಸ ಮೇಧಾವಿ ಲೇಖಕರಲ್ಲಿ ಕವಿ ಟಾಗೋರರ ವಿರುದ್ಧವಾಗಿ ಪ್ರಬಲವಾದ ಪ್ರತಿಭಟನೆ ಹುಟ್ಟಿಕೊಂಡಿತು. ಟಾಗೋರರ ಬರವಣಿಗೆಗಳಲ್ಲಿ ಕಾಣುತ್ತಿದ್ದ ಭಾವಾತಿರೇಕದ ಅಭಾವ, ಅವರ ಕವಿತಾಶೈಲಿ, ಎಲ್ಲ ವಿಧಗಳಲ್ಲೂ ಸಂಯಮವನ್ನು ಬೋಧಿಸುವ ಅವರ ನೈತಿಕ ದೃಷ್ಟಿ ಇವೆಲ್ಲ ಅವರು ಬದುಕಿದ್ದಾಗಲೇ ಕೆಲವು ತರುಣ ಲೇಖಕರಲ್ಲಿ ಅತೃಪ್ತಿಯುಂಟುಮಾಡಿದ್ದುವು. ಈಗ ಆ ಅತೃಪ್ತಿಯು ಪ್ರಬಲವಾದ ವಿರೋಧ ಚಳುವಳಿಯಾಗಿ ಬೆಳೆಯಿತು. ಟಾಗೋರರ ವಿಶಾಲ ವ್ಯಾಪಕವಾದ ವ್ಯಕ್ತಿತ್ವದ ಪ್ರಭಾವದಿಂದ ವಂಗಸಾಹಿತ್ಯವನ್ನು ಬಿಡುಗಡೆ ಮಾಡಲು ಕೆಲವು ಚುರುಕು ಬುದ್ಧಿಯ ಯುವಕ ಲೇಖಕರು 'ಕಲ್ಲೋಲ'ವೆಂಬ ಒಂದು ಬಂಡುಕೋರ ಸಾಹಿತ್ಯಪಂಥವನ್ನು ಸ್ಥಾಪಿಸಿದರು. ಈ ಗುಂಪಿನಲ್ಲಿ ಮುಂದಾಳುಗಳಾಗಿದ್ದವರು ಈಗಲೂ ಬದುಕಿರುವ ಬುದ್ಧದೇವ ಬಸು, ಅಚಿಂತ್ಯ ಕುಮಾರ ಸೇನಗುಪ್ತ ಮತ್ತು ಪ್ರೇಮೇಂದ್ರ ಮಿತ್ರ ಎಂಬ ಲೇಖಕರು. ಇವರ ನೇತೃತ್ವದಲ್ಲಿ 'ಕಲ್ಲೋಲ'ವೆಂಬ ಮಾಸಪತ್ರಿಕೆಯೂ ಹೊರಬಿದ್ದಿತು. ಆದರೆ ವಂಗಸಾಹಿತ್ಯದಲ್ಲಿ, ವಂಗಸಮಾಜದಲ್ಲಿ ಹೊಸ ಯುಗ ಸೃಷ್ಟಿ ಮಾಡಬೇಕೆಂದು ಹೊರಟಿದ್ದ ಈ ಲೇಖಕರ ಪ್ರಯತ್ನ ಫಲಪ್ರದವಾಗಲಿಲ್ಲ. ಇವರ ಕೃತಿಗಳಲ್ಲಿ ಕೇವಲ ಪಾಶ್ಚಾತ್ಯ ಸಾಹಿತ್ಯದಿಂದ ಎರವು ಪಡೆದ ಭಾವಗಳ ಕಾವು, ಅರ್ಭಟ ಮಾತ್ರ ತೋರಿಬಂದುವೇ ಹೊರತು ಒಳಗಡೆ ಸಾಹಿತ್ಯದ ಜೀವ ಇರಲಿಲ್ಲ. ಈ ಕಾರಣದಿಂದ ಈ ಕೃತಿಗಳಲ್ಲಿ ಯಾವುದೂ ಹೆಚ್ಚು ಕಾಲ ಉಳಿಯಲಿಲ್ಲ.

ಆದರೆ ಮೊದಲಲ್ಲಿ ಈ ಗುಂಪಿಗೆ ಸೇರಿದವರಾಗಿದ್ದರೂ ಆಮೇಲೆ ಹೊರಗೆ ಬಂದು ಟಾಗೋರ್, ಶರಚ್ಚಂದ್ರರ ಪ್ರಭಾವಕ್ಕೂ ಒಳಗಾಗದೆ ತಮ್ಮ ವ್ಯಕ್ತಿತ್ವ ಉಳಿಸಿಕೊಂಡು ಉತ್ತಮ ಕತೆ, ಕಾದಂಬರಿಗಳನ್ನು ರಚಿಸಿ ವಂಗಸಾಹಿತ್ಯದಲ್ಲಿ ನಿಜವಾದ ಹೊಸ ಯುಗ ಬರಮಾಡಿದವರು, ಈಗ ಬ್ಯಾನರ್ಜಿತ್ರಯರೆಂದು ಹೆಸರಾದ ಮೂವರು ಪ್ರತಿಭಾಶಾಲಿ ಲೇಖಕರು– ವಿಭೂತಿಭೂಷಣ ಬ್ಯಾನರ್ಜಿ, ಮಾಣಿಕ್ ಚಂದ್ರ ಬ್ಯಾನರ್ಜಿ ಮತ್ತು ತಾರಾಶಂಕರ ಬ್ಯಾನರ್ಜಿ.

ವಿಭೂತಿಭೂಷಣರು ಪಾಶ್ಚಾತ್ಯ ಸಾಹಿತ್ಯ, ವಿಜ್ಞಾನಗಳನ್ನು ಚೆನ್ನಾಗಿ ಓದಿ ಅರಗಿಸಿಕೊಂಡಿದ್ದರೂ ಅವುಗಳ ಪ್ರಭಾವದಿಂದ ತಮ್ಮ ವ್ಯಕ್ತಿತ್ವವನ್ನು ಕಳೆದು-ಕೊಳ್ಳದೆ ತಮ್ಮದೇ ಆದ ಒಂದು ಸಹಜ, ಕಾವ್ಯಮಯ ಶೈಲಿಯಲ್ಲಿ, ಅಸಾಧಾರಣ-ವಾದ ಆಧ್ಯಾತ್ಮಿಕ ಜೀವನದರ್ಶನವನ್ನು ಪ್ರತಿಬಿಂಬಿಸುವ ಎರಡು ವಿಶ್ವವಿಖ್ಯಾತ

ಕಾದಂಬರಿಗಳನ್ನು ಬರೆದರು. 'ಪಥೇರ್ ಪಾಂಚಾಲಿ' (ಮಹಾಯಾತ್ರಿಕ) ಮತ್ತು 'ಅಪರಾಜಿತ' ಈ ಗ್ರಂಥಗಳನ್ನು ಚಲಚ್ಚಿತ್ರ ನಿರ್ದೇಶಕ ಸತ್ಯಜಿತ್ ರೇ ರಜತ ಪರದೆಗೆ ಅಳವಡಿಸಿ ವಂಗಸಾಹಿತ್ಯಕ್ಕೇ ಅಲ್ಲದೆ ಭಾರತೀಯ ಚಲಚ್ಚಿತ್ರ ಕಲೆಗೆ ಸಹ ವಿಶ್ವದಲ್ಲಿ ಅತಿ ಮೇಲಿನ ಸ್ಥಾನ ಒದಗಿಸಿಕೊಟ್ಟರು.

ಅಪೂರ್ವನೆಂಬ ಬಡ ಹಳ್ಳಿಯ ಹುಡುಗನೊಬ್ಬ ಅತಿ ಪ್ರತಿಕೂಲ ವಾತಾವರಣವನ್ನೂ ಗೆದ್ದುಕೊಂಡು ತನ್ನ ವ್ಯಕ್ತಿತ್ವ ಬೆಳೆಸಿಕೊಂಡು, ವಿದ್ಯೆ ತಿಳುವಳಿಕೆ ಗಳಿಸಿಕೊಂಡು, ಆಳವಾದ ಆತ್ಮಜ್ಞಾನವನ್ನು ಪಡೆದು ಕಾದಂಬರಿ ಲೇಖಕನಾಗುವುದನ್ನು ಈ ಎರಡು ಕಾದಂಬರಿಗಳಲ್ಲಿ ವಿಭೂತಿಭೂಷಣರು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಈಗ ಈ ಎರಡು ಕಾದಂಬರಿಗಳೂ ಇಂಗ್ಲಿಷಿಗೆ ಅನುವಾದಿತವಾಗಿ ಇಂಗ್ಲೆಂಡಿನ ಫೊಲಿಯೊ ಕ್ಲಬ್ ಪರವಾಗಿ ಫೊಲಿಯೊ ಆವೃತ್ತಿ ಗ್ರಂಥಮಾಲೆಯಲ್ಲಿ ಪ್ರಕಟವಾಗಿ ಪ್ರಪಂಚದಲ್ಲಿ ಕೆಲವೇ ಗ್ರಂಥಗಳಿಗೆ ಮೀಸಲಾಗಿರುವ ಮಹಾ ಗೌರವವನ್ನು ಪಡೆದಿವೆ. ಈ ಗೌರವ ಸಂದಿರುವ ಇನ್ನೊಂದು ಭಾರತೀಯ ಗ್ರಂಥ ಬ್ಯಾನರ್ಜಿತ್ರಯದ ಎರಡನೆ ಲೇಖಕರಾದ ಮಾಣಿಕ್ ಬ್ಯಾನರ್ಜಿಯವರ 'ಪುತೂಲ್ ನಾಚೇರ್ ಇತಿಕಥಾ' (ಬೊಂಬೆಯಾಟದ ಕಥಾ ಪ್ರಸಂಗ)

ಪೂರ್ವವಂಗದಲ್ಲಿ (ಈಗಿನ ಬಾಂಗ್ಲಾದೇಶ) ಹುಟ್ಟಿ ಬೆಳೆದ ಮಾಣಿಕ್ ಬ್ಯಾನರ್ಜಿಯವರು ಈ ಕಾದಂಬರಿಯಲ್ಲಿ, ಆಧುನಿಕ ಧ್ಯೇಯವಾದಿ ಡಾಕ್ಟರೊಬ್ಬ ಸ್ವಂತ ಗ್ರಾಮದಲ್ಲಿ ತನ್ನ ಆದರ್ಶಗಳಂತೆ ಪ್ರಜಾಸೇವೆ ಮಾಡಲು ಹೋಗಿ ಸುತ್ತಮುತ್ತಲ ಕಂದಾಚಾರ ಸಮಾಜದ ಎದುರು ವ್ಯರ್ಥವಾಗಿ ಹೋರಾಡುವ ಕತೆಯನ್ನು ಅತ್ಯಂತ ವಾಸ್ತವಿಕವಾದರೂ ಕಾವ್ಯಮಯ ಶೈಲಿಯಲ್ಲಿ ಬರೆದಿದ್ದಾರೆ. ಮಾರ್ಕ್ಸ್‌ವಾದದಿಂದ ಪ್ರಭಾವಿತರಾದ ದಿವಂಗತ ಮಾಣಿಕ್ ಬ್ಯಾನರ್ಜಿ 'ಪದ್ಮಾನದೀರ್ ಮಾಝಿ' (ಪದ್ಮಾ ನದಿಯ ನಾವಿಕ) ಎಂಬ ಇನ್ನೊಂದು ಉತ್ತಮ ಕಾದಂಬರಿ ಬರೆದಿದ್ದಾರೆ. ಇವರಲ್ಲಿ ಪದ್ಮಾ (ಪೂರ್ವ ಬಂಗಾಳದಲ್ಲಿ ಹರಿಯುವ ಗಂಗೆಗೆ ಹೆಸರು) ನದೀ ತೀರದ ಬೆಸ್ತರ ಜೀವನವನ್ನು ಚಿತ್ರಿಸುವ ವಾಸ್ತವಿಕ ಶೈಲಿಯ ಕತೆಯನ್ನು ಹೆಣೆದಿದ್ದಾರೆ. ಇವೆರಡೂ ಈಗ ಭಾರತದ ಎಲ್ಲಾ ಭಾಷೆಗಳಿಗೂ ಅನುವಾದಿತವಾಗಿವೆ.

ಬ್ಯಾನರ್ಜಿತ್ರಯಕ್ಕೆ ಸೇರಿದ ಮೂರನೆಯ ಲೇಖಕರು, ತಾರಾಶಂಕರ ಬ್ಯಾನರ್ಜಿ. ಇವರು ಸಹ ತಮ್ಮದೇ ಆದ ವಾಸ್ತವಿಕ ಶೈಲಿಯಲ್ಲಿ ಬರೆದ ಕಾದಂಬರಿಗಳಲ್ಲಿ ತಮ್ಮ ಸುತ್ತಮುತ್ತಲ ಜನಜೀವನವನ್ನು ಸುಂದರವಾಗಿ, ಮಾರ್ಮಿಕವಾಗಿ ಪ್ರತಿಬಿಂಬಿಸಿದ್ದಾರೆ. ಹೆಚ್ಚಾಗಿ ಬಂಗಾಳ ಮತ್ತು ಬಿಹಾರದ ಗಡಿನಾಡಿನ ವೀರಭೂಮಿ ಪ್ರಾಂತದ ಹಳ್ಳಿಗರ ಜೀವನವನ್ನು ಅತ್ಯಂತ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಇವರು ಸಹ ಮೊದಲಲ್ಲಿ ರವೀಂದ್ರರ ಪ್ರಭಾವಕ್ಕೆ ಒಳಗಾದವರು. ಕ್ರಮೇಣ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು 'ಕಾಳಿಂದಿ', 'ಆರೋಗ್ಯ

ನಿಕೇತನ', 'ಮನ್ವಂತರ', 'ಗಣದೇವತಾ', 'ಕವಿ' ಮುಂತಾದ ಹಲವಾರು ಬೆಲೆಯುಳ್ಳ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಎಷ್ಟೋ ಕತೆಗಳೂ ಕಾದಂಬರಿಗಳೂ ಚಲಚಿತ್ರಗಳಾಗಿ ಜನಪ್ರಿಯವಾಗಿವೆ. ಇವರ 'ಗಣದೇವತಾ' ಎಂಬ ಕಾದಂಬರಿ ೧೯೬೦ನೆ ವರುಷದ ಭಾರತೀಯ ಜ್ಞಾನಪೀಠದ ಮಹಾ ಪುರಸ್ಕಾರ ಪಡೆಯಿತು. ಪಶ್ಚಿಮ ಬಂಗಾಳದ ಹಳ್ಳಿಯೊಂದರಲ್ಲಿ ಕೆಲವರು ಪ್ರಗತಿಶೀಲ ವ್ಯಕ್ತಿಗಳು ಅಲ್ಲಿನ ಸಮಾಜದ್ರೋಹಿ ಶಕ್ತಿಗಳೊಂದಿಗೆ ಹೂಡುವ ಹೋರಾಟವನ್ನು ಚಿತ್ರಿಸುವ ಕತೆಯೇ 'ಗಣದೇವತಾ' ಕಾದಂಬರಿಯ ವಸ್ತು. 'ಕವಿ' ಎಂಬ ಇನ್ನೊಂದು ಕೃತಿಯಲ್ಲಿ ತಾರಾಶಂಕರರು ಡೊಲೆಯ ಜಾತಿಗೆ ಸೇರಿದ, ಕೊಳ್ಳೆಗಾರರ ಕುಲಸ್ಥನಾದವನೊಬ್ಬ ತನ್ನ ಅಲ್ಪ ಶಿಕ್ಷಣದಿಂದಲೇ ಪ್ರಭಾವಿತನಾಗಿ ಕುಲ ಕಸಬನ್ನು ತ್ಯಜಿಸಿ ರೈಲ್ವೆ ಪೋರ್ಟರಾಗಿ ಕೆಲಸ ಮಾಡುತ್ತ ವಿರಾಮಕಾಲದಲ್ಲಿ ಗ್ರಾಮದ ಕವಿ ಮೇಳಗಳಲ್ಲಿ ಭಾಗವಹಿಸಿ ಸ್ವಯಂಸ್ಫೂರ್ತಿಯಿಂದ ತಾನೇ ಕವಿಯಾಗಿ ಅಸಾಧಾರಣ ವ್ಯಕ್ತಿತ್ವ ಬೆಳೆಸಿಕೊಂಡ ಕತೆಯನ್ನು ಎಂದಿಗೂ ಮರೆಯಲಾಗದ ಕುಶಲತೆಯಿಂದ ಹೆಣೆದಿದ್ದಾರೆ.

ವಂಗಸಾಹಿತ್ಯಕ್ಕೆ ಇಷ್ಟು ಅಮೋಘ ಸೇವೆ ಸಲ್ಲಿಸಿದ ಈ ಬ್ಯಾನರ್ಜಿತ್ರಯದಲ್ಲಿ ಮೊದಲು ಇಬ್ಬರು–ವಿಭೂತಿಭೂಷಣ, ಮತ್ತು ಮಾಣಿಕ್ ನಲವತ್ತೈದನೆ ವಯಸ್ಸಿಗೆ ಮುಂಚೆಯೇ ಕಾಲವಾಗಿ ಕಾದಂಬರಿ ಪ್ರಪಂಚಕ್ಕೆ ಅತಿ ದೊಡ್ಡ ನಷ್ಟ ವುಂಟುಮಾಡಿದರು. ತಾರಾಶಂಕರರಾದರೋ ಎಪ್ಪತ್ತನೆ ವಯಸ್ಸಿನ ವರೆಗೂ ಸಾಹಿತ್ಯಸೇವೆ ಮಾಡಿ ವಂಗ ಕಾದಂಬರಿಯ ಕ್ಷೇತ್ರವನ್ನು ಅನೇಕ ಉತ್ತಮ ಕೃತಿಗಳಿಂದ ಶ್ರೀಮಂತವಾಗಿ ಮಾಡಿ ಹೋದರು. ಇವರ ಕಾದಂಬರಿಗಳಲ್ಲಿ ವಂಗದೇಶದಲ್ಲಿ ಎಲ್ಲೆಲ್ಲೂ ಹರಡಿದ್ದ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಪ್ರತಿಧ್ವನಿ ಕೇಳಬರುತ್ತದೆ. ಒಂದು ದೃಷ್ಟಿಯಲ್ಲಿ ಇವೆಲ್ಲ ಅಂದಿನ ಕಾಲದ ಗ್ರಾಮಜೀವನವನ್ನು ಪ್ರತಿಬಿಂಬಿಸುವದರಿಂದ ಐತಿಹಾಸಿಕ ಕೃತಿಗಳೆನ್ನಿಸಿಕೊಳ್ಳುವ ಯೋಗ್ಯತೆ ಪಡೆದಿವೆ.

ಇವರಾದ ಮೇಲೆ ಇದೇ ಪರ್ಯಾಯಕ್ಕೆ ಸೇರಿದವರಾದ, ಇಂದಿಗೂ ಬದುಕಿದ್ದು ಸತತವಾಗಿ ಸಾಹಿತ್ಯಸೇವೆ ಸಲ್ಲಿಸುತ್ತಿರುವ ಕಾದಂಬರಿ ಲೇಖಕರಲ್ಲಿ ವಿಮಲ ಮಿತ್ರ, 'ಶಂಕರ' ಸಮರೇಶ ಬಸು, 'ಅವಧೂತ', 'ಜರಾಸಂಧ' ಆಶಾಪೂರ್ಣಾದೇವಿ, 'ಬನಫೂಲ್', ಪ್ರಬೋಧಕುಮಾರ ಸಾನ್ಯಾಲ್, ರಮಾಪದ ಚೌಧುರಿ ಈ ಪ್ರೌಢವಯಸ್ಸಿನ ಲೇಖಕರು ಅಗ್ರಗಣ್ಯರು.

ಇವರು ಕಾದಂಬರಿ ರಚನೆಯಲ್ಲಿ ಶೈಲಿ ಮತ್ತು ಕಥಾವಸ್ತುಗಳಲ್ಲಿ ಪ್ರಯೋಗಾತ್ಮಕ ಕೃತಿಗಳನ್ನು ರಚಿಸಿ ವಂಗ ಕಾದಂಬರಿಯನ್ನು ಇನ್ನೂ ಮೇಲಕ್ಕೆ ಬೆಳೆಸಿದ್ದಾರೆ. ವಿಮಲ ಮಿತ್ರರು 'ಸಾಹೇಬ್ ಬೀಬಿ ಗುಲಾಮ್' 'ಕಡಿದಿಯೇ ಕಿನ್‌ಲಾಮ್' (ಕವಡೆ ಕೊಟ್ಟು ಕೊಂಡೆ), ಮತ್ತು 'ಏಕಕ್ ದಶಕ್ ಶತಕ್' ಹೀಗೆ ಯುಗಪ್ರವರ್ತಕವೆನ್ನಿಸಿಕೊಳ್ಳಬಹುದಾದ ಮೂರು ಐತಿಹಾಸಿಕ ಕಾದಂಬರಿ

ಗಳನ್ನು ಬರೆದು ನಾಲ್ಕು ಸಾವಿರದಷ್ಟು ಪುಟಗಳ ಹರಹಿನಲ್ಲಿ ವಂಗನಾಗರಿಕ ಸಮಾಜದ ಐವತ್ತು ವರುಷಗಳ ಐತಿಹಾಸಿಕ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಹೆಣೆದಿದ್ದಾರೆ. ಇವುಗಳಲ್ಲಿ ಬರುವ ನೂರಾರು ವ್ಯಕ್ತಿಗಳೂ ವಿಷಯವೈವಿಧ್ಯವೂ ಐತಿಹಾಸಿಕ ದೃಶ್ಯಗಳ ವೈಖರಿ, ಪರಿಣಾಮಗಳೂ ಮತ್ತು ಅವುಗಳಲ್ಲಿ ಪ್ರದರ್ಶಿಸಿರುವ ಲೇಖಕರ ಐತಿಹಾಸಿಕ ದೃಷ್ಟಿಕೋನ ಮತ್ತು ಸಮಗ್ರ ಮಾನವ ವರ್ಗದ ಶ್ರೇಯಸ್ಸಿನ ಬಗ್ಗೆ ತೋರಿರುವ ಗಾಢವಾದ ಅನುಕಂಪ– ಇವೆಲ್ಲ ವಿಶ್ವ ಸಾಹಿತ್ಯ ವಿಮರ್ಶಕರನ್ನು ಆಕರ್ಷಿಸಿದೆ. 'ಸಾಹೆಬ್ ಬೀಬಿ ಗುಲಾಮ್' ಗ್ರಂಥವನ್ನು ಯುನೆಸ್ಕೊ ವಿಶ್ವಸಂಸ್ಥೆ ಪ್ರಪಂಚದ ಪ್ರಮುಖ ಭಾಷೆಗಳಲ್ಲಿ ಅನುವಾದಿಸಲು ಆರಿಸಿರುವುದು ಅತ್ಯಂತ ಹೆಮ್ಮೆಯ ವಿಷಯ. ಸಮರೇಶ ಬಸು ಅಸಾಧಾರಣ ಪ್ರತಿಭಾಶಾಲಿ ಕಾದಂಬರಿ ಲೇಖಕರು; ಮೊದಲು ಮಾರ್ಕ್ಸ್‌ವಾದದ ಪ್ರಭಾವದಲ್ಲಿದ್ದು, ಬೆಸ್ತರ ಜೀವನವನ್ನು ವರ್ಣಿಸುವ ವಾಸ್ತವಿಕ ಕಾದಂಬರಿ 'ಗಂಗಾ' ಬರೆದು ಜನಪ್ರಿಯರಾದರು. ಈಚೆಗೆ ಫ್ರಾಯ್ಡ್‌ನ ಲೈಂಗಿಕ–ಮಾನಸಿಕ ತತ್ತ್ವಗಳಿಂದ ಪ್ರಭಾವಿತರಾಗಿ 'ಪ್ರಜಾಪ್ರತಿ' ಮತ್ತು 'ಬಿ ಬೋರ್' ಕಾದಂಬರಿ-ಗಳನ್ನು ಬರೆದು ವಿಮರ್ಶಕರನ್ನು ಕೆರಳಿಸಿದರು. ಈ ಎರಡು ಕಾದಂಬರಿಗಳು ಬಂಗಾಳದಲ್ಲಿ ನ್ಯಾಯಬಾಹಿರವೆಂದು ಸರಕಾರ ಘೋಷಿಸಿದೆ.

'ಶಂಕರ'ರು ವಿವಿಧ ವಿಷಯಗಳನ್ನು ವಸ್ತುವಾಗಿ ಬಳಸಿಕೊಂಡು ಹೊಟೇಲು, ಕೋರ್ಟು, ಕಛೇರಿ ಮುಂತಾದ ಆವರಣಗಳಲ್ಲಿ ವೃತ್ತಿ ನಡೆಸುವ ಸಾಮಾನ್ಯ ಜನರ ಸುಖ ದುಃಖಗಳ ಕತೆಗಳನ್ನು ತಮ್ಮ ಕಾದಂಬರಿಗಳಲ್ಲಿ ವರ್ಣಿಸಿ-ದ್ದಾರೆ. ಇವರ ರಚನೆಗಳಲ್ಲಿ ಪ್ರತ್ಯೇಕ ಮನೋವಿಶ್ಲೇಷಣೆಗೆ ಆಸ್ಪದವಿಲ್ಲದಿದ್ದರೂ ಸಾಮಾಜಿಕ ಕುಂದುಕೊರತೆಗಳಿಂದ ಜನಸಾಮಾನ್ಯಕ್ಕೆ ಉಂಟಾಗುವ ಕಷ್ಟ ಕೋಟಲೆಗಳ ವರ್ಣನೆಯಿದೆ. ಇವರ ಮೊದಲ ಕಾದಂಬರಿ ಕೊತೊ 'ಅಜಾನಾರೇ' ಕೋರ್ಟು ವ್ಯವಹಾರಗಳಿಗೆ ಸಂಬಂಧಪಟ್ಟ ಗ್ರಂಥ. ಎರಡನೆಯದು "ಚೌರಂಘೀ"-ಹೊಟೇಲು ವೃತ್ತಿಯವರ ಬದುಕನ್ನು ಕುರಿತದ್ದು.

'ಜರಾಸಂಧ'ರು ನಿವೃತ್ತ ಜೈಲು ಸೂಪರಿಂಟೆಂಡೆಂಟ್‌ರಾಗಿದ್ದುದರಿಂದ ತಮ್ಮ ವೃತ್ತಿಯ ಅನುಭವಗಳನ್ನೇ ಆಧಾರ ಮಾಡಿಕೊಂಡು ಜೈಲಿನಲ್ಲಿರುವ ಕೈದಿಗಳ ಒಳಜೀವನವನ್ನೂ ಅವರ ಮನೋವೃತ್ತಿಗಳನ್ನೂ ಮಾನವೀಯ ಅನುಕಂಪದಿಂದ ಪ್ರತಿಬಿಂಬಿಸುವ ಕಾದಂಬರಿ 'ಲೋಹಾ ಕಪಾಟ್' (ಕಬ್ಬಿಣದ ಪಂಜರ) ರಚಿಸಿದ್ದಾರೆ.

'ಅವಧೂತ' ಗುಪ್ತನಾಮದ ಹಿಂದೆ ಅಡಗಿರುವ ಸಂನ್ಯಾಸಿಯೊಬ್ಬರು ಯಾಂತ್ರಿಕರ ಬಗ್ಗೆ, ಸಂನ್ಯಾಸಿಗಳ ಮತ್ತು ತಾಂತ್ರಿಕರ ವಿಷಯವಾಗಿ ಕಾದಂಬರಿ-ಗಳನ್ನು ಬರೆಯುತ್ತಿದ್ದಾರೆ. ಇವರ ಅತಿ ಹೆಸರಾದ 'ಮರುತೀರ್ಥೇ ಹಿಂಗ್‌ಲಾಜ್' ಕಾದಂಬರಿ ಅತ್ಯಂತ ಜನಪ್ರಿಯವಾಗಿದ್ದರೆ, ಪ್ರಬೋಧ ಕುಮಾರ ಸಂನ್ಯಾಲರೂ

ಸೈಯದ್ ಮುಸ್ತಫಾ ಅಲಿಯವರೂ ವಿದೇಶ ಸಂಚಾರಗಳನ್ನೇ ವಸ್ತುವಾಗಿ ಉಪಯೋಗಿಸಿ ಕಾದಂಬರಿಗಳಾಗಿ ಬರೆದಿದ್ದಾರೆ. ಸಂನ್ಯಾಲರು ಇದರ ಜೊತೆಯಲ್ಲಿ ಕಲಕತ್ತೆಯ ಹೊಲಸು ಗಲ್ಲಿಗಳಲ್ಲಿ, ಗುಡಿಸಲುಗಳಲ್ಲಿ ಜೀವಿಸುವ ಅತಿ ಹೀನ, ದೀನ ದರ್ಜೆಯ ಜನರ ಬದುಕಿನ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಬೀರೇನ್ ದಾಸರು ಸಹ ವಿವಿಧ ವಸ್ತುಗಳ ಆಧಾರದ ಮೇಲೆ ಕಾದಂಬರಿಗಳನ್ನು ರಚಿಸಿದ್ದಾರೆ. ಅವರ 'ಆರೇ ದೂರ್ ಪಥ್' (ಇನ್ನೂ ದೂರದ ದಾರಿ) ಎಂಬ ಕಾದಂಬರಿ ಮಕ್ಕಳಿಂದ ದೂರ ಮಾಡಲ್ಪಟ್ಟ ನಿಸ್ಸಹಾಯ ಮುದಿ ತಂದೆ, ತಾಯಿಯರ ದುಃಖ ಜೀವನವನ್ನು ಮನ ಕಲಕುವಂತೆ ಚಿತ್ರಿಸುತ್ತದೆ. ಇವರೇ ಅಲ್ಲದೆ ಶಿರ್‌ಶೇಂದು ಮುಖರ್ಜಿ, ಅಸಿಲ್ ಗಂಗೋಪಾಧ್ಯಾಯ, ನಾರಾಯಣ ಗಂಗೋಪಾಧ್ಯಾಯ, ಪ್ರಮಥನಾಥ ಬಿಶಿ, ವಿಮಲ್ ಕಾರ್ ಮುಂತಾದ ಅತಿ ಆಧುನಿಕ ಕಾದಂಬರಿಕಾರರು ಸಮ ಸಾಮಯಿಕ ಸಮಾಜಜೀವನದ ಸಮಸ್ಯೆಗಳನ್ನು ಕುರಿತು ಹೊಸ ಸಂವಿಧಾನ, ಶೈಲಿಗಳಲ್ಲಿ ಕೃತಿಗಳನ್ನು ರಚಿಸಿ ಕಾದಂಬರಿಯ ವ್ಯಾಪ್ತಿ, ಪ್ರಭಾವಗಳನ್ನು ಬಹಳ ಮಟ್ಟಿಗೆ ಹೆಚ್ಚಿಸಿದ್ದಾರೆ. ಅಸಿಲ್ ಗಂಗೋಪಾಧ್ಯಾಯರ ಕಾದಂಬರಿ ಸತ್ಯಜಿತ್ ರೇಯವರ 'ಖ್ಯಾತ ಚಿತ್ರ ಪ್ರತಿದ್ವಂದಿ'ಗೆ ವಸ್ತು ಒದಗಿಸಿದೆ. ಇದು ಇಂದಿನ ಸುಶಿಕ್ಷಿತ ಯುವಕರ ನಿರುದ್ಯೋಗ ಸಮಸ್ಯೆಯನ್ನು ಬಹಳ ಪರಿಣಾಮಕಾರಿಯಾಗಿ ವಿಶ್ಲೇಷಿಸಿದೆ. ಹೀಗೆ ವಂಗ ಕಾದಂಬರಿಯು ದಿನದಿನಕ್ಕೂ ಬದಲಾಯಿಸುತ್ತಿರುವ ಸಮಾಜದ ಸಮಸ್ಯೆಗಳನ್ನೇ ಆಧಾರ ಮಾಡಿಕೊಂಡು ವೃದ್ಧಿ ಹೊಂದುತ್ತ ಆ ಮೂಲಕ ಸಾಮಾನ್ಯ ಓದುಗರಲ್ಲೂ ಮಧ್ಯಮ ವರ್ಗದ ಓದುಗರಲ್ಲೂ ಸಮಾಜಪ್ರಜ್ಞೆಯನ್ನು ಕೆರಳಿಸಿ ಸಮಾಜದಲ್ಲಿ ಇನ್ನೂ ಪ್ರಬಲವಾಗಿರುವ ಅಜ್ಞಾನ, ದಾರಿದ್ರ್ಯ, ಅಂಧಶ್ರದ್ಧೆ, ವರ್ಗ ವೈಷಮ್ಯ ಮುಂತಾದ ಅರಿಷ್ಟಗಳ ವಿರೋಧವಾಗಿ ಅವರಲ್ಲಿ ಆಕ್ರೋಶ ಹುಟ್ಟುವಂತೆ ಮಾಡುತ್ತಿದೆ. ಈ ದೃಷ್ಟಿಯಿಂದ ವಂಗ ಕಾದಂಬರಿ ಭಾರತದ ಇತರ ಭಾಷೆಗಳ ಕಾದಂಬರಿಗಳಿಗೆ ಮೇಲುಪಂಕ್ತಿಯಾಗಿದೆ ಮಾತ್ರವಲ್ಲ, ಮುನ್ನಡೆಯುತ್ತಿರುವ ಪ್ರಪಂಚದ ಪ್ರಮುಖ ಭಾಷೆಗಳ ಕಾದಂಬರಿಗಳಿಗೆ ಸರಿಸಮಾನವಾಗಿ ನಿಂತು ಭಾರತ ಸಂಸ್ಕೃತಿಗೆ ಸ್ಮರಣೀಯವಾದ ಸೇವೆ ಸಲ್ಲಿಸಿದೆ.

ಗುಜರಾತಿ ಕಾದಂಬರಿ

ಮೂಲ : **ಗುಲಾಬದಾಸ ಬ್ರೋಕರ**
ಅನುವಾದ : **ಪಿ. ಆರ್. ಪಂಢರಿ**

ಗುಜರಾತಿಯಲ್ಲಿ, ಹತ್ತೊಂಭತ್ತನೆಯ ಶತಮಾನದ ದ್ವಿತಿಯಾರ್ಧದಲ್ಲಿ ಕಲಾತ್ಮಕ ಅಭಿವ್ಯಕ್ತಿಯ ರೂಪವಾಗಿ ಕಾದಂಬರಿಯು ಕಾಣಿಸಿಕೊಂಡಿತು. ಬಹುಕಾಲದ ವರೆಗೆ ಅಲ್ಲಿಯೆ ಇದ್ದ ಇಂಗ್ಲಿಷ ಅಧ್ಯಾಪಕರು ಹಾಗು ಅಧಿಕಾರಿಗಳು ಆ ಪ್ರದೇಶದ ಸಾಹಿತ್ಯಿಕ-ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿಯನ್ನಿರಿಸಿಕೊಂಡಿದ್ದರು. ಅವರ ಸಂಪರ್ಕ ಹೊಂದಿದ ಸುಶಿಕ್ಷಿತ ಜನರು, ಇಂಗ್ಲಿಷ ಭಾಷೆ ಮತ್ತು ಸಾಹಿತ್ಯಗಳ ಪರಿಚಯ ಪಡೆದ ಪರಿಣಾಮವಾಗಿ ಗುಜರಾತದಲ್ಲಿ ಕಾದಂಬರಿ ತಲೆದೋರಿತೆಂದು ಹೇಳಬಹುದು.

೧೮೫೦ ರ ಹೊತ್ತಿಗೆ ಬ್ರಿಟಿಶ್ ಸತ್ತೆಯು ದೇಶದ ಈ ಭಾಗದಲ್ಲಿ ಪೂರ್ಣವಾಗಿ ನೆಲೆಸಿತ್ತು. ಆಗಲೇ ಅದು ದೊಡ್ಡ ಕೇಂದ್ರಗಳಲ್ಲಿ ಶಾಲೆ ಮೊದಲಾದ ಶೈಕ್ಷಣಿಕ-ಸಂಸ್ಥೆಗಳನ್ನು ಸ್ಥಾಪಿಸಿತ್ತು. ಈ ಸಂಸ್ಥೆಗಳ ಪ್ರಯೋಜನ ಪಡೆದ ಹಾಗು ಇಂಗ್ಲಂಡದ ಸಾಹಿತ್ಯ, ಜೀವನ ವಿಚಾರಗಳನ್ನು ಅರಿತ ಭಾರತೀಯರು ತಮ್ಮ ಸಮಾಜ ಮತ್ತು ಸಾಮಾಜಿಕ ಸಂಸ್ಥೆಗಳ ಕುರಿತು ವಿಚಾರ ಮಾಡತೊಡಗಿದರು. ಅದೇ ಸಮಯಕ್ಕೆ ಗುಜರಾತಿ ಭಾಷೆಯಲ್ಲಿ ಗದ್ಯ ಬರವಣಿಗೆಯು ಪ್ರಾರಂಭವಾಯಿತು. ಅಲ್ಲಿಯ ವರೆಗೆ ಕಾವ್ಯವೊಂದೇ ಪ್ರಚಾರದಲ್ಲಿತ್ತು. ಗದ್ಯವನ್ನು ಪ್ರಪ್ರಥಮವಾಗಿ ಬರೆದ ವ್ಯಕ್ತಿ ಕವಿ ಹಾಗು ಸಾಮಾಜಿಕ ಸುಧಾರಕನಾಗಿದ್ದ. ಆತನೇ ನರ್ಮದಾಶಂಕರ. ಆತನು ಗುಜರಾತಿ ಸಾಹಿತ್ಯದ ಅನೇಕ ಪ್ರಕಾರಗಳ ಆದ್ಯ ಪ್ರವರ್ತಕ. ಅವರೇ ಗುಜರಾತೀ ಸಾಹಿತ್ಯದಲ್ಲಿ ಆಧುನಿಕ ಯುಗವನ್ನು ಪ್ರಾರಂಭಿಸಿದರು. ಆದರೆ ಅವರೂ ಗದ್ಯವನ್ನು ವಿಶೇಷವಾಗಿ ಬರೆಯಲಿಲ್ಲ.

ಸುರತದ ಸುಶಿಕ್ಷಿತ ಹಾಗು ಸುಸಂಸ್ಕೃತ ವ್ಯಕ್ತಿ ನಂದಶಂಕರ ತುಳಜಾಶಂಕರ ಗುಜರಾತಿಯಲ್ಲಿ ಮೊದಲ ಕಾದಂಬರಿಯನ್ನು ಬರೆದರು. ಆ ಕಾದಂಬರಿಯ ಮೂಲವು ತುಂಬ ವಿಚಿತ್ರವಾಗಿದೆ.

ಆ ಪ್ರಾಂತದ ನಿವೃತ್ತ ಶಿಕ್ಷಣಾಧಿಕಾರಿ ರಸೆಲ್ ಎಂಬವರು ನಂದ ಶಂಕರರಿಗೆ ಇಂಗ್ಲಿಷಿನಲ್ಲಿ ಬರೆದಂತಹ ಗದ್ಯ ಕಾದಂಬರಿಗಳನ್ನು ಗುಜರಾತಿಯಲ್ಲಿ ಬರೆಯಲು ಸೂಚಿಸಿದರು. ನಂದಶಂಕರರು ಸರ್ ವಾಲ್ಟರ್ ಸ್ಕಾಟ್ ಮೊದಲಾದ ಲೇಖಕರ ಕಾದಂಬರಿಗಳನ್ನು ಓದಿದ್ದರು. ಆ ಪ್ರಾಂತದ ಸುಶಿಕ್ಷಿತ ಜನರೂ ಇದೇ

ಬಗೆಯಾಗಿ ವಿಚಾರಿಸುತ್ತಿದ್ದರು. ನಂದಶಂಕರರು ಈ ಸೂಚನೆಯನ್ನು ತುಂಬ ಮನಃಪೂರ್ವಕವಾಗಿಯೇ ಸ್ವೀಕರಿಸಿದರು. ಇಂತು ಗುಜರಾತಿಯಲ್ಲಿ ಕಾದಂಬರಿ ಆವಿರ್ಭವಿಸಿತು. ಅದು ೧೮೬೬ ರಲ್ಲಿ ಪ್ರಕಟವಾಯಿತು.

ಅದು ಗುಜರಾತದ ಕೊನೆಯ ಅರಸು ಕರ್ಣನ ಜೀವನದ ಸುತ್ತ ಹೆಣೆದ ಐತಿಹಾಸಿಕ ಕಾದಂಬರಿಯಾಗಿದೆ. ಲೇಖಕರು ಆ ಗ್ರಂಥವನ್ನು "ಕರಣ ಘೇಲೊ" ಎಂದು ಕರೆದಿದ್ದಾರೆ. ಏಕೆಂದರೆ ಆ ರಾಜನು ಬಹಳಷ್ಟು ದುಡುಕಿನವನಾಗಿದ್ದರಿಂದ ಆತನು ಅರೆಹುಚ್ಚ "ಘೇಲೊ" ಎಂದೇ ತಿಳಿಯಲ್ಪಟ್ಟಿದ್ದ.

ಗ್ರಂಥಕರ್ತೃವು ಈ ಕಾದಂಬರಿಗೆ ಐತಿಹಾಸಿಕ ಆಧಾರವನ್ನೊದಗಿಸಿದ್ದಾನೆ. ಏಕೆಂದರೆ, ಕಾಲ್ಪನಿಕ ಗದ್ಯಲೇಖನಗಳಿಗೆ ಅಪರಿಚಿತರಾಗಿದ್ದ ಆಗಿನ ಜನರಿಗೆ ಐತಿಹಾಸಿಕ ಕಾದಂಬರಿಯು ಹೆಚ್ಚು ಆಕರ್ಷಕವಾಗುವದೆಂದು ಅವರು ತಿಳಿದಿದ್ದರು. ಅಲ್ಲದೆ ಅವರು ಸರ್ ವಾಲ್ಟರ್ ಸ್ಕಾಟ್‌ನ ಲೇಖನಗಳಿಂದ ಪ್ರಭಾವಿತನಾಗಿದ್ದ. ಅವನ ಕೃತಿಗಳಿಂದ ಅವರು ಅನೇಕ ಅವತರಣಿಕೆ ವರ್ಣನೆಗಳನ್ನು ತೆಗೆದುಕೊಂಡಿದ್ದಾರೆ. ಅದರವನ ಉದ್ದೇಶವು ಸ್ಪಷ್ಟವಾಗಿತ್ತು. ಅವರು ತಮ್ಮ ಕಾದಂಬರಿಯ ಮುಖಾಂತರ ಗರ್ವದ ಪತನ, ದುರಾಶೆಯ ಸೋಲು, ಅನ್ಯಾಯದ ನಾಶ ಮತ್ತು ಧಾರ್ಮಿಕ- ಶಕ್ತಿಯ ಜಯಗಳನ್ನು ಚಿತ್ರಿಸಬೇಕೆಂದಿದ್ದುದನ್ನು ತಾವೇ ಹೇಳಿದ್ದಾರೆ.

ಈ ವಿಚಾರಗಳೇ ಅಂದಿನ ಲೇಖಕರ ಮಾರ್ಗದರ್ಶಕ ಮೌಲ್ಯಗಳಾಗಿದ್ದವೆಂಬುದನ್ನು ಸ್ಪಷ್ಟವಾಗಿ ನಿದರ್ಶಿಸುತ್ತವೆ. ಕಾದಂಬರಿಯು ಆ ಮೌಲ್ಯಗಳ ಸಾಮಾಜಿಕ ವಾಹಿನಿಗಳಾಗಿವೆ. ಅವೇ ಮುಂದಿನ ಅನೇಕ ವರುಷಗಳವರೆಗೆ ಕಾದಂಬರಿ ಪ್ರಪಂಚದಲ್ಲಿ ಪ್ರಾಮುಖ್ಯವನ್ನು ಪಡೆದಿದ್ದವು.

ಪ್ರಸ್ತುತ ಕಾದಂಬರಿ "ಕರಣ ಘೇಲೊ" ಶ್ರೇಷ್ಠ ಕೃತಿಯಲ್ಲ, ಅದು ದುರ್ಬಲ ಹಾಗು ಸಡಿಲಾಗಿದೆ. ಅದು ಅನೇಕಸಲ ಎರವಲು ನಿಧಿಯನ್ನು ಪ್ರದರ್ಶಿಸುತ್ತದೆ. ಅದನ್ನು ಆಡಂಬರದ ಗದ್ಯದಲ್ಲಿ ಬರೆಯಲಾಗಿದೆ. ಏಕೆಂದರೆ ಗುಜರಾತಿ ಗದ್ಯವು ಆಗ ಕೇವಲ ಹದಿನಾರು ವರುಷದ್ದಾಗಿತ್ತು. ಹೀಗಿದ್ದರೂ ಗುಜರಾತಿ ಸಾಹಿತ್ಯದಲ್ಲಿ ಪ್ರಥಮ ಕಾದಂಬರಿಯ ಗೌರವವು ಇದಕ್ಕೆ ಸಲ್ಲುತ್ತದೆ.

ನಂದಶಂಕರರನ್ನು ಅನುಸರಿಸಿ ಅನೇಕ ಲೇಖಕರು ಐತಿಹಾಸಿಕ ಕಾದಂಬರಿಗಳನ್ನು ಬರೆದರು. ಏಕೆಂದರೆ "ಕರಣ ಘೇಲೊ" ಆಗಲೇ ಒಲವನ್ನು ಸೂಚಿಸಿತ್ತು. ಅವರದು ಬಹುದಿನ ನಡೆಯಲಿಲ್ಲ. ಆ ಪ್ರದೇಶದಲ್ಲಿಯ ಪರಿಸ್ಥಿತಿಯು ಭರದಿಂದ ಬದಲಾಗುತ್ತಲಿತ್ತು. ೧೮೫೭ ರಲ್ಲಿ ಸ್ಥಾಪಿತವಾದ ಮುಂಬೈ ವಿಶ್ವವಿದ್ಯಾಲಯದಿಂದ ಸುಶಿಕ್ಷಿತ ಪದವೀಧರರು ೧೮೬೫–೮೦ ರಲ್ಲಿ ಹೊರಗೆ ಬರತೊಡಗಿದರು. ಇವರೆಲ್ಲ ಇಂಗ್ಲಿಷ ಮತ್ತು ಸಂಸ್ಕೃತಗಳಲ್ಲಿ ಸಾಕಷ್ಟು ಪಾಂಡಿತ್ಯವನ್ನು ಗಳಿಸಿದ್ದರು. ಅವರು ಇಂಗ್ಲಿಷ ವಿಚಾರ, ಜೀವನ ಪದ್ಧತಿ ಮತ್ತು ಪ್ರಭುತ್ವ ಪದ್ಧತಿಗಳ ಒಳಿತು ಕೆಡಕುಗಳನ್ನು ಕುರಿತು ವಿಚಾರಿಸಿದ್ದರು. ಇಷ್ಟೇ ಅಲ್ಲದೆ ಅವರು ತಮ್ಮ ನಾಡಿನಲ್ಲಿಯ

ಜೀವನ ಮತ್ತು ಅದರ ಒಳಿತುಕೆಡಕಿನ ಅಂಶಗಳ ಬಗೆಗೆ ಸಾಕಷ್ಟು ವಿಚಾರಿಸಿದ್ದರು. ಅವರು ಆವೆರಡು ಪದ್ಧತಿಗಳ ಒಳ್ಳೆಯದನ್ನು ಸಂಗಮಿಸಬೇಕೆಂದು ಮತ್ತು ಯೋಗ್ಯ ಸಾಮಾಜಿಕ ಸುಧಾರಣೆಗಳಿಂದ ತಮ್ಮ ನಾಡಿನಲ್ಲಿ ಜೀವನ ಪರಿಸ್ಥಿತಿಯನ್ನು ಸುಖಮಯಗೊಳಿಸಬೇಕೆಂದು ಬಯಸಿದ್ದರು. ಇದನ್ನು ಸಾಧಿಸಲು ಜೀವನ ಸಮಸ್ಯೆಯ ದೃಷ್ಟಿ ಬೇಕಿತ್ತು, ಕೆಲವರಲ್ಲಿ ಆ ದೃಷ್ಟಿಯೂ ಇತ್ತು.

ಈ ದೃಷ್ಟಿಯನ್ನು ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸಬೇಕಿತ್ತು. ಆದರೆ ಐತಿಹಾಸಿಕ ಕಾದಂಬರಿಯು ಇದಕ್ಕೊಳ್ಳೆಯ ಮಾಧ್ಯಮವಾಗಿರಲಿಲ್ಲ. ಅದಕ್ಕೆ ಹೆಚ್ಚು ಶಕ್ತಿಯುತ ಮತ್ತು ಖಚಿತವಾದ ಮಾಧ್ಯಮ ಹಾಗು ಒಳ್ಳೆಯ ಲೇಖಕ ಬೇಕಿತ್ತು.

ಗೋವರ್ಧನರಾಮ ಮಾಧವರಾಮ ತ್ರಿಪಾಠಿಯು ಅಂತಹ ಲೇಖಕರಾಗಿದ್ದರು. ಅವರು ಒಳ್ಳೆಯ ವಿದ್ವಾಂಸ, ತತ್ವಜ್ಞಾನಿ, ಕನಸುಗಾರಮತ್ತು ಜೀವನದ ಎಲ್ಲ ಬಗೆಗಳನ್ನು ಅರಿತ ವಕೀಲರಾಗಿದ್ದರು.

ಮಹಾಕಾವ್ಯಕ್ಕೆ ಸರಿಸಮನಾದ “ಸರಸ್ವತೀಚಂದ್ರ”ವೆಂಬ ಕಾದಂಬರಿಯನ್ನು ಈ ಗೋವರ್ಧನರಾಮ ತ್ರಿಪಾಠಿಯೇ ನಿರ್ಮಿಸಿದರು. ಅದರ ಮೊದಲ ಸಂಪುಟವು ೧೮೮೭ ರಲ್ಲಿ ಅದರ ನಾಲ್ಕನೆಯ ಮತ್ತು ಕೊನೆಯ ಸಂಪುಟವು ೧೯೦೧ ರಲ್ಲಿ ಪ್ರಕಟವಾದವು. ಅದು ಪ್ರಕಟವಾಗುತ್ತಲೆ ಸಾಕಷ್ಟು ಕೋಲಾಹಲವನ್ನುಂಟು ಮಾಡಿತು. ಏಕೆಂದರೆ ತತ್ಕಾಲೀನ ಸಮಾಜದ ಸುಶಿಕ್ಷಿತ ವರ್ಗದ ಎಲ್ಲ ಅಭೀಪ್ಸೆ, ಕಾಮನೆ ಆಶೆ, ವಿಚಾರ ಮತ್ತು ಆದರ್ಶಗಳನ್ನು ಅದು ತನ್ನೊಳಗೆ ಒಳಗೊಂಡಿತ್ತು. ಅದರ ನಾಯಕ ಸರಸ್ವತೀಚಂದ್ರನು ಕವಿ, ತತ್ತ್ವಜ್ಞಾನಿ, ಕನಸುಣಿಯಾಗಿದ್ದ. ಅವನಲ್ಲಿ ನೈತಿಕ ಶಕ್ತಿಯಿತ್ತು, ಆದರ್ಶದ ಆಶೆಗಳಿದ್ದವು. ಗುಜರಾತವು ಒಂದು ಒಳ್ಳೆಯ ಕಾದಂಬರಿಯನ್ನು ಪಡೆಯಿತು. ಕೃತಿಕಾರನ ಕನಸಿನ ಪೂರ್ಣ ಜಗತ್ತನ್ನು ಚಿತ್ರಿಸಿದ ಕೃತಿಗಳಲ್ಲಿ ಇದೊಂದೇ ಅಂತಹದೆನ್ನಬೇಕು. ನಿಜವಾದ ಪುರುಷ ಮತ್ತು ಸ್ತ್ರೀ, ಕಾವ್ಯ, ತತ್ತ್ವಜ್ಞಾನ, ರಾಜಕಾರಣ ಸಾಮಾಜಿಕ ಸಂಬಂಧಗಳು ಎಲ್ಲಕ್ಕೂ ಮಿಗಿಲಾಗಿ ಪ್ರಭಾವಿ ಕಲಾತ್ಮಕತೆ ಇತ್ಯಾದಿ ಎಲ್ಲವೂ ಅದರೊಳಗಿದೆ. ಗದ್ಯವು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುದರಿಂದ ಮತ್ತು ಸಂಸ್ಕೃತದ ಪ್ರಭಾವವು ಬಹಳಷ್ಟು ಇದ್ದುದರಿಂದ ಭಾಷೆಯು ಅನೇಕ ಸ್ಥಳಗಳಲ್ಲಿ ಗಡುಚಾಗಿದೆ. ಆದರೆ ಅವಕಾಶ ಒದಗಿದಾಗಲೆಲ್ಲ ಭಾಷೆಯು ಸುಲಭ ಹಾಗು ಸೂಚ್ಯವಾಗಿದೆ. ಅದರಲ್ಲಿ ಅನೇಕ ಗಹನ ವಿಚಾರಗಳು ತತ್ತ್ವಗಳು ಇದ್ದರೂ ನಯವಾದ ಮಾನವೀಯ ಭಾವನೆಗಳು ವಿರಳವಾದ ಅಂತರ್ದೃಷ್ಟಿಗಳು ಸಮರ್ಥವಾಗಿ ಚಿತ್ರಿತವಾಗಿವೆ.

ಇದಾದ ನಂತರ ಅನೇಕ ವರುಷಗಳವರೆಗೆ ಇದನ್ನನುಸರಿಸಿ ಅನೇಕ ಕಾದಂಬರಿಗಳು ಬರೆಯಲ್ಪಟ್ಟವು. ಆದರೆ ಯಾವವೂ ಪ್ರಸಿದ್ಧಿಗೆ ಬರಲಿಲ್ಲ. ಶ್ರೀ ಕೆ. ಎಂ. ಮುನ್ಶಿಯವರು ೧೯೧೫ ರಲ್ಲಿ ಗುಜರಾತಿ ಸಾಹಿತ್ಯದಲ್ಲಿ ಕಾಲಿರಿಸಿದಾಗ, ಗುಜರಾತಿ

ಕಾದಂಬರಿಯು ಹೊಸ ತಿರುವನ್ನು ಹಾಗು ಹೊಸ ಜೀವನವನ್ನು ಪಡೆಯಿತು.

ಸರಸ್ವತೀಚಂದ್ರ ಮತ್ತು ಮುನ್ಶಿಯವರ ಮಹಾಕೃತಿ "ಗುಜರಾತ್ನೊನಾಥ" ನಡುವಣ ಅವಧಿಯಲ್ಲಿ ಗುಜರಾತದಲ್ಲಿಯ ಜೀವನವು ಬಹಳಷ್ಟು ಬದಲಾವಣೆಗಳನ್ನು ಹೊಂದಿತ್ತು. ಪುರುಷ ಮತ್ತು ಸ್ತ್ರೀಯ ಸಂಬಂಧ, ವ್ಯಕ್ತಿಯ ಜೀವನದಲ್ಲಿ ಪ್ರೀತಿಯಸ್ಥಾನ, ವಿದೇಶೀ ಆಘಾತದಿಂದ ಮುಕ್ತಿಪಡೆವ ಆಶೆ ಹಾಗು ಹೊಸ ಪೀಳಿಗೆಯ ಅಭಿರುಚಿಕೆಗಳ ಯೋಗ್ಯ ಅಭಿವ್ಯಕ್ತಿ ನೀಡುವ ಸುಲಲಿತ ಭಾಷೆ ಮೊದಲಾದವುಗಳ ಬಗೆಗೆ ಸಮಾಜವು ಹೆಚ್ಚು ಎಚ್ಚೆತ್ತಿತ್ತು. ಈ ಎಲ್ಲ ವಿಷಯಗಳನ್ನು ಸಾಹಿತ್ಯಿಕ ಉಡುಪಿನಲ್ಲಿ ಜೋಡಿಸಬಲ್ಲ ಮತ್ತು ನಾಡಿನ ಜೀವನ ಹಾಗು ಸಾಹಿತ್ಯಗಳಿಗೆ ಹೊಸ ದೃಷ್ಟಿಯನ್ನೊದಗಿಸಬಲ್ಲ ವ್ಯಕ್ತಿಗಾಗಿ ಅದು ಕಾಯುತ್ತಲಿತ್ತು.

ಮುನ್ಶಿಯವರು ಈ ಸಮಸ್ಯೆಯನ್ನು ಸಮರ್ಥರೀತಿಯಲ್ಲಿ ಪರಿಹರಿಸಿದರು. ಅವರು ತೀವ್ರ ಹಾಗು ಕಾವ್ಯದ ಲಕ್ಷಣಗಳ ಸರಾಗ ಗದ್ಯವನ್ನು ಬೆಳೆಸಿದರು. ಅವರು ಸೃಷ್ಟಿಸಿದ ಪಾತ್ರಗಳು ಗುಜರಾತದಲ್ಲೆಲ್ಲ ಮನೆಮಾತಾದವು. ಅವರು ಧೀರ ಪುರುಷರನ್ನು ಸುಂದರ ಸ್ತ್ರೀಯರನ್ನು ಚಿತ್ರಿಸಿದರು. ಅವರು ಗುಜರಾತಕ್ಕೆ ಅಸ್ಮಿತ ಜನತೆ ಹಾಗು ದೇಶದೆದುರು ಎದ್ದು ನಿಲ್ಲುವ ಮತ್ತು ಪ್ರಭಾವೀ ವ್ಯಕ್ತಿತ್ವವನ್ನು ಅಸ್ಮಿತವನ್ನು ನೀಡಿದರು. ಅವರು ತಮ್ಮ ಕಾದಂಬರಿಗಳ ಮೂಲಕ ತಮ್ಮ ಜನರಿಗಾಗಿ ಅಸ್ಮಿತಾವನ್ನು ಚಿತ್ರಿಸಿದರು. ೧೯೭೧ ರಲ್ಲಿ ಕೊನೆಯುಸಿರೆಳೆವ ವರೆಗೆ ಅವರು ಪ್ರಭಾವಿ ಹಾಗು ಶಕ್ತಿಯುತ ಕಾದಂಬರಿಗಳನ್ನು ಒಂದರ ನಂತರ ಒಂದನ್ನು ಪ್ರಕಟಿಸಿದರು. ಅವರಿಂತು ಗುಜರಾತವನ್ನು ಭಾರತದ ಸಾಹಿತ್ಯ ನಕ್ಷೆಯಲ್ಲಿ ತಂದರು.

ಮುನ್ಶಿಯವರ ಅದ್ಭುತ ಕಲ್ಪನಾಶಕ್ತಿ ಮತ್ತು ಹುಮ್ಮಸ್ಸು ಕೇವಲ ಸಾಮಾಜಿಕ ಕಾದಂಬರಿಗಳಲ್ಲಿಷ್ಟೇ ವ್ಯಕ್ತವಾಗಿಲ್ಲ. ಅವರು ಉತ್ಕೃಷ್ಟ ಜೀವನದ ಕನಸು ಕಂಡಿದ್ದರು. ಅದನ್ನು ತತ್ಕಾಲೀನ ಸಮಾಜದ ಜನತೆ ಅವರಿಗೆ ಒದಗಿಸಲಾರದಾಗಿತ್ತು. ಅಂತೆಯೆ ಅವರು ಇತಿಹಾಸಕಾಲದತ್ತ ಹೊರಳಿದರು, ಅಲ್ಲದೆ ಇತಿಹಾಸವನ್ನಾಧರಿಸಿ ಕಾದಂಬರಿಗಳನ್ನು ಬರೆದರು. ಐತಿಹಾಸಿಕ ಅಂಶವನ್ನು ಪೂರ್ಣವಾಗಿ ಸ್ವೀಕರಿಸಿಲ್ಲವಾದರೂ ಅವರಿಂತು ಜೀವನದಲ್ಲಿಗಿಂತ ಹೆಚ್ಚು ಉದಾತ್ತ ಪಾತ್ರಗಳನ್ನು ಸೃಷ್ಟಿಸಿದರು. ಮತ್ತು ಅದರ ಮುಖಾಂತರ ತಮ್ಮ ಕನಸು ಆದರ್ಶಗಳನ್ನು ವ್ಯಕ್ತಮಾಡಿದರು. ಇದೊಂದು ಘನವಾದ ಕಾರ್ಯ. ಆದರವರು ಅದರಲ್ಲಿ ಯಶಸ್ವಿಯಾದರು.

ಭಾರತದ ಭವಿಷ್ಯವನ್ನು ರೂಪಿಸಲು ಹಾಗು ಇಲ್ಲಿಯೇ ಉಳಿಯಲೆಂದು ೧೯೧೫ ರಲ್ಲಿ ಮಹಾತ್ಮಾ ಗಾಂಧಿಯವರು ಭಾರತಕ್ಕೆ ಆಗಮಿಸಿದರಷ್ಟೇ. ಅವರ ಆಗಮನ ಹಾಗು ಮುನ್ಶಿಯವರು ಬರೆಯತೊಡಗಿದಂದಿನಿಂದ ಗುಜರಾತಿ ಗದ್ಯವು ಮೊದಲಿನಂತಿರದೆ ಬದಲಾವಣೆಯನ್ನು ಹೊಂದಿತು. ವಿಷಯ ಹಾಗೂ ಬರವಣಿಗೆಯ

ಶೈಲಿ ಇವೆರಡರಲ್ಲೂ ಮುನ್ಶಿಯವರು ಪ್ರಭಾವವನ್ನು ಬೀರಿದರು. ಅದಕ್ಕೆ ಕಾರಣ ಅವರು ಜೀವನದ ಎಲ್ಲ ಮಟ್ಟಗಳನ್ನು ಚಿತ್ರಿಸಿದುದು ಮತ್ತು ಸರಳ ಹಾಗು ಪರಿಣಾಮಕಾರೀ ಗದ್ಯ ಲೇಖನ ಶೈಲಿಯನ್ನು ರೂಪಿಸಿದುದಾಗಿದೆ.

ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಸ್ವಾತಂತ್ರ್ಯಂದೋಲನದಿಂದ ಹೊಸ ಇತಿಹಾಸವು ಪ್ರಾರಂಭವಾಯಿತು. ಸ್ತ್ರೀ–ಪುರುಷರು ಹೆಚ್ಚು ಹೆಚ್ಚು ಸಮೀಪ ಬಂದರು. ಸಾಮಾಜಿಕ ಸಂಕೋಲೆಗಳು ಮುರಿಯತೊಡಗಿದವು. ಜೀವನದ ಹೊಸ ಮೌಲ್ಯಗಳು ಹಾಗು ರೀತಿಗಳು ಸ್ಥಾಪಿತವಾದವು.

ಈ ಎಲ್ಲ ಅಂಶಗಳು ಕಾದಂಬರಿಕಾರರನ್ನು ಆಕರ್ಷಿಸಿದವು. ಅವರೂ ತಡ ಮಾಡಲಿಲ್ಲ.

ಮೂವತ್ತರ ಕಾದಂಬರಿಕಾರ ರಮಣಲಾಲ ವಸಂತಲಾಲ ದೇಸಾಯಿಯವರು ಮಹಾತ್ಮರು ಕಟ್ಟಿದ ಗುಜರಾತವನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದರು. ಝುವೇರಚಂದ ಮೇಘಾನಿಯವರು ತಮ್ಮ ಓದುಗರಿಗೆ ಗುಜರಾತದ ಮಹತ್ವದ ಭಾಗವಾದ ಸೌರಾಷ್ಟ್ರದ ಹಳ್ಳಿ ಚಿಕ್ಕಪಟ್ಟಣಗಳ ಜೀವನದ ಜೀವಂತ ಚಿತ್ರವನ್ನು ಒದಗಿಸಿದರು. ರಮಣಲಾಲರ ಶೈಲಿಯು ಸುಂದರ, ಸರಳ ಹಾಗು ಸುಭಗ. ಅದು ಮಹಾತ್ಮರ ಪ್ರಭಾವದ ಮುದ್ರೆಯನ್ನು ಪಡೆದಿತ್ತು. ಆದರೆ ಮೇಘಾನಿಯವರದು ಹೀಗಲ್ಲ. ಅವರು ಜಾನಪದ ಸಾಹಿತ್ಯವನ್ನು ಶೋಧಿಸುತ್ತ ಸೌರಾಷ್ಟ್ರದಲ್ಲೆಲ್ಲ ಪ್ರವಾಸ ಮಾಡಿದ್ದರು. ಅಲ್ಲಿಯ ಜನರಜೀವನದಿಂದ ಅವರು ಪ್ರಭಾವಿತರಾಗಿದ್ದರು. ಆ ಜನರ ಭಾಷೆಯ ಸೊಗಸು ಅವರ ಬರವಣಿಗೆಯಲ್ಲಿದೆ. ಅದು ಅವರನ್ನು ಪ್ರಭಾವಿ ಗದ್ಯಶೈಲಿಯ ಕಾದಂಬರಿಕಾರರನ್ನಾಗಿ ಮಾಡಿದೆ.

ಧೂಮಕೇತು, ಗುಣವಂತರಾಯ ಆಚಾರ್ಯ ಮತ್ತು ಚುನಿಲಾಲ ವರ್ಧಮಾನ ಶಹಾರವರು ಈ ಯುಗದ ಇನ್ನುಳಿದ ಪ್ರಸಿದ್ಧ ಲೇಖಕರು. ಆದರೆ ಮೇಘಾನಿಯ ನಂತರ ನಿಜವಾದ ಕಾದಂಬರಿಕಾರನೆಂದರೆ ಪನ್ನಾಲಾಲ ಪಟೇಲ. ಅಷ್ಟು ಕಲಿತಿರದ ಈ ಲೇಖಕನು ಗುಜರಾತದ ಉತ್ತರ ಗಡಿಯ ಒಂದು ಹಳ್ಳಿಯವನು.

ಮೇಘಾನಿ ಸೌರಾಷ್ಟ್ರದ ಜೀವನವನ್ನು ಚಿತ್ರಿಸುವ ಪ್ರಾದೇಶಿಕ ಕಾದಂಬರಿಯನ್ನು ಬರೆದರಾದರೆ ಪನ್ನಾಲಾಲರು ತಮ್ಮ ಕಾದಂಬರಿಗಳಲ್ಲಿ ತಮ್ಮ ಭಾಗದ ಜನರ ಸಜೀವ ಚಿತ್ರಣವನ್ನು ನೀಡಿದರು.

ಅವರು ೧೯೪೦ ರಲ್ಲಿ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದರು. ಅಷ್ಟು ಹೊತ್ತಿಗೆ ಗಾಂಧೀಜಿಯ ಆಂದೋಲನದ ತೀವ್ರತೆಯು ಕಡಿಮೆಯಾಗಿತ್ತು. ಆದರೆ ಆಗಲೇ ಭಾರತದಲ್ಲಿ ಹಳ್ಳಿಯು ರಾಷ್ಟ್ರೀಯ ಜೀವನದ ಜೀವಂತ ಘಟಕವಾಗಿತ್ತು. ಸ್ವತಃ ಹಳ್ಳಿಯವರಾದ ಪನ್ನಾಲಾಲರು ಹಳ್ಳಿಯ ಜನರನ್ನು ಸುತ್ತ ಮುತ್ತಲ ಪ್ರದೇಶವನ್ನು ಹಾಗು ಅಲ್ಲಿಯ ಜೀವನದ ಎಲ್ಲ ಬಗೆಗಳನ್ನು ಚೆನ್ನಾಗಿ ಅರಿತಿದ್ದರು. ಅವರು ತಮ್ಮ ಪ್ರತಿಯೊಂದು ಪುಸ್ತಕದಲ್ಲಿ ಹಳ್ಳಿಯನ್ನು ಜೀವಂತವಾಗಿ

ಚಿತ್ರಿಸಿದರು. ಅವರ ಕೃತಿಗಳಲ್ಲಿ ಶ್ರೇಷ್ಠವಾದವುಗಳೆಂದರೆ ಪ್ರಣಯಕಥೆ 'ಮಳೇಲ ಜೀವ' (ಪ್ರಸನ್ಮಿಲನ) ಜೀವನದ ಆಳಕ್ಕಿಳಿದು ಶೋಧನಡೆಸುವ ಪ್ರಯತ್ನವಾದ 'ಮಾನವಿನಿ ಭಾವೈ' ಕಾದಂಬರಿಗಳು. ಪ್ರಕೃತಿಪ್ರೇಮವು ಹಳ್ಳಿಗನಿಗೆ ಅಸಾಮಾನ್ಯವಾದರೂ ಅದು ಅವನ ಕೃತಿಗಳಲ್ಲಿ ಚಿತ್ರಿತವಾಗಿದೆ. ಈ ಹಿನ್ನೆಲೆಯ ಪರಿಚಯ ಅವರಿಗೆ ಸಾಕಷ್ಟು ಇರುವುದರಿಂದ ಅವರು ಆ ಹಿನ್ನೆಲೆಯ ಮೇಲೆ ಏನನ್ನೂ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಅವರು ಪ್ರಾದೇಶಿಕ ಕಾದಂಬರಿಗಳ ರೂಪದಲ್ಲಿ ಮಾಡಿದಂತೆ ಅವರನ್ನು ಅನುಸರಿಸಿದವರಿಗೆ ಯಾರಿಗೂ ಹಾಗೆ ಮಾಡಲು ಸಾಧ್ಯವಾಗಿಲ್ಲ. ಚುನಿಲಾಲ ಮಾಡಿಯಾ ಸೌರಾಷ್ಟ್ರದಲ್ಲಿಯ ಹಳ್ಳಿಗಳ ಜೀವನವನ್ನು ಚಿತ್ರಿಸುವ ಕಾದಂಬರಿಗಳನ್ನು ಬರೆದರು. ಮೇಘಾನಿ ಈ ದಿಶೆಯಲ್ಲಿ ಸಾಕಷ್ಟು ಕಾರ್ಯ ಮಾಡಿದರೂ ಚುನಿಲಾಲ ತಮ್ಮದೇ ಆದ ವೈಶಿಷ್ಟ್ಯ ತೋರಿದ್ದಾರೆ. ಅವರು ಸಮಾಜದ ಬೇರೆ ಬೇರೆ ವರ್ಗದವರ ಜೀವನವನ್ನು ಚಿತ್ರಿಸಿದರು. ಚಿತ್ರಣ ಹಾಗು ನಿರೂಪಣಗಳು ಆತನ ಸಾಮರ್ಥ್ಯವು ಆತನ ಜಗತ್ತಿನಲ್ಲಿ ಕಂಪನವನ್ನುಂಟು ಮಾಡಿತು. ಪಟ್ಟಣದ ಬಗೆಗೆ ಬರೆದಾಗ ಆತನು ವ್ಯಂಗ್ಯವಾಗಿ ಕಟುವಾಗಿ ಬರೆದ. ಇದು ಹೀಗೆಂದರೆ ಆತನು ಸ್ವಾತಂತ್ರ್ಯಾನಂತರದ ಭ್ರಮನಿರಸನವಾಗಿ ಅದರ ಬಗೆಗೆ ಬರೆದ, ರಾಷ್ಟ್ರ ಜೀವನವು ಹುಟ್ಟಿಟ್ಟ ಸ್ವಚ್ಛಂದ ಮತ್ತು ಮೊಣಗೇಡಿ ಶಕ್ತಿಗಳನ್ನು ವರ್ಣಿಸಲು ವ್ಯಂಗ್ಯವಿಡಂಬನೆಗಳ ಅವಶ್ಯಕತೆಯಿತ್ತು.

ಇನ್ನೊಬ್ಬ ಲೇಖಕ ಈಶ್ವರ ಪೆಟ್ಲೀಕರ ತಮ್ಮ ಪ್ರಧಾನ ಕಾದಂಬರಿ 'ಜನ್ಮಟೀಪ್' (ಆಜನ್ಮ ಕಾರಾಗೃಹವಾಸ)ದಲ್ಲಿ ಗುಜರಾತದ ಬೇರೆ ಬೇರೆ ಪ್ರದೇಶಗಳ ಜೀವನವನ್ನು ಚಿತ್ರಿಸಿದ್ದಾರೆ. ಆನಂತರ ಅವರು ಸಾಮಾಜಿಕ ಸುಧಾರಕರ ಗುಂಪನ್ನು ಸೇರಿದರು. ಹೀಗಾಗಿ ಅವರ ನಿಜವಾದ ಪ್ರತಿಭೆಯು ವ್ಯಕ್ತವಾಗಲಿಲ್ಲ. ಪೀತಾಂಬರ ಪಟೇಲ ಮತ್ತು ಪುಷ್ಕರ ಚಂದಾವರಕರ ಮೊದಲಾದ ಲೇಖಕರು ಈ ಅವಧಿಯಲ್ಲಿ ಅನೇಕ ಪ್ರಾದೇಶಿಕ ಕಾದಂಬರಿಗಳನ್ನು ಬರೆದರು.

ಸ್ವಾತಂತ್ರ್ಯಾನಂತರ ಜೀವನವು ಅನಿರೀಕ್ಷಿತ ತಿರುವನ್ನು ಪಡೆಯಿತು. ಜನತೆ ಕಂಡ ಬಂಗಾರ ಕನಸುಗಳೆಲ್ಲ ಮಾಯವಾದವು. ನೀರಸ, ನಿರಾಶಾಯುಕ್ತ ವಾಸ್ತವಿಕತೆಯು ಜನತೆಯ ಮುಖವನ್ನು ದಿಟ್ಟಿಸಿ ನೋಡಿತು. ಈ ವಾಸ್ತವಿಕತೆಯ ಒತ್ತಡದಲ್ಲಿ. ಗೋವರ್ಧನರಾಮ ತ್ರಿಪಾಠಿಯ ಆದರ್ಶವಾದ ಮತ್ತು ಕನಸಿನ ಜಗತ್ತಾಗಲಿ ಅಥವಾ ಮಹಾತ್ಮಾ ಗಾಂಧಿಯವರ ಮಾನವೀಯ ಹಾಗು ಆದರ್ಶದ ಕನಸಾಗಲಿ ಹೊಸ ಲೇಖಕರಿಗೆ ಯಾವುದೇ ಅರ್ಥವನ್ನು ನೀಡಲಿಲ್ಲ. ಸಾಮಾಜಿಕ ಸುಧಾರಣೆ ಅಥವಾ ರಾಜಕೀಯ ಆಂದೋಲನಗಳ ಮೂಲಕ ಸಮಾಜವನ್ನು ಸುಧಾರಿಸಲಾಗದೆಂದು ಎಲ್ಲರೂ ತಿಳಿದಿದ್ದರು. ಏಕೆಂದರೆ ಆಗಲೇ ಜೀವನವು ನಿರುತ್ಸಾಹಕ ಹಾಗೂ ಕನಸೊಡೆದದ್ದು ಆಗಿತ್ತು. ಶ್ರೇಷ್ಠ ಹಾಗು ಉದಾತ್ತ ಪಾತ್ರಗಳನ್ನು ಊಹಿಸಲಾರದ

ವರಾಗಿದ್ದರು. ಏಕೆಂದರೆ ಜೀವನದಲ್ಲಿಯ ಘನತೆ ಉದಾತ್ತತೆಗಳೆಲ್ಲ ಮಾಯವಾಗಿ-ದ್ದವು. ಜೀವನವು ಸೌಂದರ್ಯರಹಿತವಾಗಿದ್ದರಿಂದ ಸೌಂದರ್ಯಕ್ಕೆ ಸ್ಥಾನವೇ ಇರಲಿಲ್ಲ. ಯಾರಾದರೂ ಲಕ್ಷ್ಯವಹಿಸಿದ್ದರೆ ತಮ್ಮ ಬರವಣಿಗೆಯನ್ನು ಸುಂದರವಾಗಿ ಮಾಡಬಹುದಿತ್ತು.

ಇಂತು ಔಪಚಾರಿಕ ಪ್ರಯೋಗಗಳು ಸಾಮಾಜಿಕ ಕಥೆಗಳ ಕಾದಂಬರಿಗಳ ಸ್ಥಾನದಲ್ಲಿ ಬರತೊಡಗಿದವು. ಅಂತೆಯೇ ಆ ಕಾದಂಬರಿಗಳಲ್ಲಿ ನಿರಾಶಾದಾಯಕ ಸೌಂದರ್ಯರಹಿತ ಜಗತ್ತು ಚಿತ್ರಿತವಾಯಿತು.

ಕೆಲವು ಜನ ಒಳ್ಳೆಯ ಲೇಖಕರು ೧೯೫೫ ರ ನಂತರದ ಈ ಅವಧಿಯಲ್ಲಿ ಕಾಣಿಸಿಕೊಂಡರು. ಅವರು ಕೆಲವು ಉತ್ತಮ ಕಾದಂಬರಿಗಳನ್ನು ಬರೆದರಾದರೂ ಅವೆಲ್ಲ ನಿರಾಶೆ ದಾರುಣ ವಿಷಯಗಳಿಂದ ಕೂಡಿವೆ. ಧೀರುಬೆನ್ ಪಟೇಲರಂತಹರು ಮಾತ್ರ ಪ್ರತಿನಿತ್ಯದ ಸಾಮಾನ್ಯ ಜೀವನದಲ್ಲಿಯ ಸೂಕ್ಷ್ಮ ಹಾಗು ಮಾನಸಿಕ ಕ್ರಿಯೆ ಪ್ರತಿಕ್ರಿಯೆಗಳನ್ನು ಚಿತ್ರಿಸಲು ಪ್ರಯತ್ನಿಸಿದರು. ಸಾಹಿತ್ಯದಲ್ಲಿ ಸೌಂದರ್ಯ ದೃಷ್ಟಿಯನ್ನು ತರಲು ಬಹಳಷ್ಟು ಪ್ರಯತ್ನಿಸಿದ ಸುರೇಶ ಜೋಶಿಯವರು ಆಗಲೇ ಅನೇಕ ಕಥೆಗಳನ್ನು ಹೊಸರೀತಿಯಲ್ಲಿ ಬರೆದಿದ್ದರಾದರೂ ಈ ಅವಧಿಯಲ್ಲಿ "ಚಿನ್ನ ಪಾತ್ರ" ವೆಂಬ ಚಿಕ್ಕ ಕೃತಿಯನ್ನು ಬರೆದರು. ಈ ಚಿಕ್ಕ ಹೊತ್ತಿಗೆಯನ್ನು ಅವರು ಕಾದಂಬರಿಯ ಕರಡು ಎಂದು ಕರೆದರು. ಅದರಲ್ಲಿ ಅನೇಕ ಸಾಹಿತ್ಯಿಕ ಸೂಕ್ಷ್ಮ ವ್ಯತ್ಯಾಸಗಳಿವೆ. ಆದರೆ ಅದೆಲ್ಲ ಅಲ್ಲಿರುವದರ ಬಗೆಗಿದೆ. ಅದನ್ನು ಗುಜರಾತೀ ಕಾದಂಬರಿ ಸಾಹಿತ್ಯಕ್ಕೆ ನೀಡಿದ ಕಾಣಿಕೆ ಎಂದು ಎಣಿಸಲಾಗದು. ಅವರಿಗಿಂತ ಮೊದಲು ಜಯಂತಿ ದಲ್ಲಾಲರು ಈ ಸ್ವರೂಪದ ಮೊದಲ ಕಾರ್ಯಗಳನ್ನು ಮಾಡಿ-ದ್ದರು. ಆದರೆ ಸ್ವಾತಂತ್ರ್ಯನಂತರದ ನಿಜವಾದ ಶ್ರೇಷ್ಠ ಕಾದಂಬರಿಕಾರರೆಂದರೆ ಚಂದ್ರಕಾಂತ ಬಕ್ಷಿಯವರು. ಹೊಸ ಬಗೆಯ ಪ್ರಭಾವಿ ಕಾದಂಬರಿ 'ಅಕಾರ' ಹಾಗೂ ಕಾದಂಬರಿಯ ರೂಪದಲ್ಲಿರುವ ಸುಂದರ ಗೀತೆ 'ಪ್ಯಾರಾಲಿಸಿಸ್' ಅವರ ಪ್ರಮುಖ ಕಾದಂಬರಿಗಳು.

ಮಧುರಾಯ್ ಇನ್ನೊಬ್ಬ ಕಾದಂಬರಿಕಾರ. ಅವರು ತಮ್ಮ ಮೊದಲಕಾದಂಬರಿ 'ಚಿಹರಾ' (ಮುಖಗಳು) ವನ್ನು ಸುಂದರವಾಗಿ ಬರೆದಿದ್ದಾರೆ. ಅದರ ಎರಡನೆಯ ಕೃತಿ 'ಕಾಮಿನಿ' ಮಹಾನ್ ಕಾದಂಬರಿಯಾಗಿದೆ. ಇನ್ನೊಂದು ಒಳ್ಳೆಯ ಕಾದಂಬರಿ 'ಝಂಝಾ' (ಬಿರುಗಾಳಿ) ರಾವಜಿ ಪಟೇಲರದು. ಆದರೆ ದುರ್ದೈವದಿಂದ ಅವರು ೨೮ರ ಎಳೆಯ ಪ್ರಾಯದಲ್ಲಿ ಮರಣಹೊಂದಿದರು. 'ಅಮೃತ' ದಿಂದ ಹೊಸಭರವಸೆಯನ್ನು ಮೂಡಿಸಿದ ಹೊಸ ಲೇಖಕ ರಘುವೀರ ಚೌಧರಿಯವರು ಭರವಸೆಯನ್ನು ಪೂರ್ಣಗೊಳಿಸಬೇಕಿದೆ. ರಾಧೇಶ್ಯಾಮ ಶರ್ಮರ 'ಫೇರೊಂ' (ತಿರುವು) ಒಳ್ಳೇ ಸಾಹಸವಾಗಿದೆ. ಅವರನ್ನು ಕಾದಂಬರಿಕಾರರೆಂದು ಹೇಳುವ ಮೊದಲು ಅವರು ಇನ್ನಷ್ಟು ಬರೆಯಬೇಕಿದೆ. ಶಿವಕುಮಾರ ಜೋಶಿಯವರು ಈ ಯುಗದಲ್ಲಿ ಸಾಕಷ್ಟು

ಕೆಲಸ ಮಾಡಿದ್ದರೂ ಅವರನ್ನು ಆಧುನಿಕ ಲೇಖಕರ ಸಾಲಿಗೆ ಸೇರಿಸಲಾಗದು.

ಆದರ್ಶವಾದಿ ಲೇಖಕ ಮನೂಭಾಯಿ ಪಂಚೋಲಿ 'ದರ್ಶಕ'ರು ಗುಜರಾತದ ಇನ್ನೊಬ್ಬ ಹಿರಿಯ ಕಾದಂಬರಿಕಾರರು. ಜಹರ ತೋ ಪಿಧಾ ಛೆ ಜಾನಿ ಜಾನಿ (ತಿಳಿದು ತಿಳಿದು ನಾವು ವಿಷ ಕುಡಿದಿದ್ದೇವೆ) ಯಂತಹ ಹಳೆಯ ಪೀಳಿಗೆಯ ಜನರ ಮನಸ್ಸನ್ನು ಕರಗಿಸುವ ಕಾದಂಬರಿಯನ್ನು ಬರೆದ ಅವರು ಇಂದಿಗೂ ಬರೆಯುತ್ತಿರುವರು.

ಅಂತರ್ಯವನ್ನು ಕೆದಕುವದು, ತನ್ನ ವ್ಯಕ್ತಿತ್ವವನ್ನು ಮನುಷ್ಯನು ಕಳೆದುಕೊಂಡಿದ್ದಾನೆಂದೂ ಮತ್ತು ದೊಡ್ಡ ಚಕ್ರದಲ್ಲಿ ಮನುಷ್ಯನು ಹೆಸರಿಲ್ಲದ ಹಲ್ಲಾಗಿರುವನೆಂದು ಕಂಡುಹಿಡಿಯುವದು. ಕೇವಲ ಅವನ ಬಿಕ್ಕಟ್ಟನ್ನು ಚಿತ್ರಿಸಲು ಪ್ರಯತ್ನಿಸುವದು ಮೊದಲಾದವು, ಈಗ ಅವಶ್ಯ ಬೇಕಾದ ಗರ್ವಹರಣ. ಕಾಮನೆಯ ಸೋಲು. ಪಾಪದನಾಶ ಮತ್ತು ಧಾರ್ಮಿಕ ಶಕ್ತಿಯ ವಿಜಯಗಳನ್ನು ಚಿತ್ರಿಸುವ ಪ್ರಯತ್ನಗಳಿಂದ ಬಹು ದೂರವಿವೆ. ಗುಜರಾತೀ ಕಾದಂಬರಿಯು ಇದೀಗ ಈ ಕವಲುದಾರಿಯಲ್ಲಿದೆ.

ಆಸ್ಸಾಮಿ ಕಾದಂಬರಿ

ಮೂಲ: ಬೀರೇಂದ್ರಕುಮಾರ ಭಟ್ಟಾಚಾರ್ಯ
ಅನುವಾದ: ಮಾಧವ ಮಹಿಷಿ

ಆಸ್ಸಾಮಿ ಕಾದಂಬರಿ ನಡೆದುಬಂದ ದಾರಿ ಸಾಕಷ್ಟು ದೀರ್ಘವಾದುದಾದರೂ ಮಧ್ಯಯುಗೀನ ಕಾವ್ಯಗಳಲ್ಲಾಗಲಿ, ಜಾನಪದ ಕತೆಗಳಲ್ಲಾಗಲಿ ಅದರ ಮೂಲ-ವನ್ನು ಗುರುತಿಸಲಸಾಧ್ಯ. ಆಧುನಿಕ ಆಸ್ಸಾಮಿ ಗದ್ಯದ ಮೊದಲ ಪುಟಗಳು ನೋಡ-ಸಿಕ್ಕುವುದು ಈ ಭಾಷೆಯ ಪ್ರಪ್ರಥಮ ಪತ್ರಿಕೆ 'ಅರುಣೋದಯಿ' (೧೮೪೬-೮೨) ಯಲ್ಲಿ. ತನ್ನ ಜೀವಿತಾವಧಿಯಲ್ಲಿ ಈ ಪತ್ರಿಕೆ ನಾಲ್ಕು ಅನುವಾದಿತ ಹಾಗು ಎರಡು ಮೂಲರಚನೆಗಳಾದ ನೀಳ್ಗತೆಗಳನ್ನು ಪ್ರಸಿದ್ಧಿಸಿತು. 'ಯಾತ್ರಿಕರ್ ಯಾತ್ರಾ' (ಪಿಲ್‌ಗ್ರಿಮ್ಸ್ ಪ್ರೊಗ್ರೆಸ್: ೧೮೫೧), 'ಎಲೊಕೇಸಿರ್ ಬೇಶ್ಯಾ' (ವೇಶ್ಯೆ ಎಲೊ-ಕೇಸಿಯ ಕಥೆ: ೧೮೫೭), 'ಕಾಮಿನಿಕಾಂತಾ' (೧೮೭೭), 'ಫುಲ್ಮನಿ ಅರು ಕರುಣಾ' ಅನುವಾದಿತ ಕತೆಗಳು; 'ಸುಧರ್ಮರ್ ಉಪಾಖ್ಯಾನ' (ಸುಧರ್ಮನ ಕಥೆ: ೧೮೮೬), 'ಬಾಹಿರೆ ರೇಂಗ್‌ಕೊಂಗ್ ಭಿತರೆ ಕೋಆ ಭಾತುರಿ' (ಹೊಳೆಯುವದೆಲ್ಲ ಚಿನ್ನವಲ್ಲ: ೧೮೭೬) ಮೂಲ ಕೃತಿಗಳು. ಅನುವಾದಿತ ಕಾದಂಬರಿಗಳನ್ನು ಆಸ್ಸಾಮಿ ಭಾಷೆಗೆ ತಂದವರು ಅಮೇರಿಕನ್ ಬ್ಯಾಪ್ಟಿಸ್ಟ್ ಮಿಶನರಿಗಳು; ಸ್ವತಂತ್ರ ಕೃತಿಗಳಲ್ಲಿ ಮೊದಲನೆಯವೆರಡನ್ನು ಬರೆದವರು ಪದ್ಮಾವತಿ ಫುಲಕನಾನಿ ಎಂಬ ಲೇಖಿಕೆ ಹಾಗು ಹೇಮಚಂದ್ರ ಬರುವಾ ಎಂಬ ಪ್ರಸಿದ್ಧ ವ್ಯಂಗ್ಯ ಲೇಖಕ. ಅನುವಾದಿತ ಕ್ರಿಶ್ಚನ್ ಕತೆಗಳಲ್ಲಿ ಮತಾಂತರದ ಸ್ವಲ್ಪ ಛಾಯೆ ಇದ್ದೇ ಇರುತ್ತಿತ್ತು. ಒಂದು ಹದವನ್ನು ತಲುಪಿದ ಹಾಗು ಬಂಧುರ ಮತ್ತು ಲಾಲಿತ್ಯಗಳ ದೃಷ್ಟಿಯಿಂದ ಪ್ರಪ್ರಥಮ ಆಸ್ಸಾಮಿ ಗದ್ಯಕೃತಿಯೆಂದರೆ 'ಕೋಆ ಭಾತುರಿ'ಯೇ. ಇದು ಒಂದು ದೃಷ್ಟಿಯಿಂದ ವಿಡಂಬನಾತ್ಮಕ, ಘಟನಾಪ್ರಧಾನ ಕಾದಂಬರಿ. ಪಾತ್ರಸೃಷ್ಟಿಗೂ ಇಲ್ಲಿ ಸಾಕಷ್ಟು ಪ್ರಾಧಾನ್ಯ ದೊರೆತಿದೆ.

ಆಸ್ಸಾಮಿ ಕಾದಂಬರಿಯಲ್ಲಿ ಮುಂದಿನ ಮಹತ್ವದ ಘಟ್ಟವೆಂದರೆ 'ಜಾನಕಿ' (೧೮೮೯) ಮತ್ತು 'ಬಿಜುಲಿ' (೧೮೯೦) ಎಂಬೆರಡು ಸಾಹಿತ್ತಿಕ ಪತ್ರಿಕೆಗಳು ನೀಡಿದ ಚಾಲನೆ. 'ಜಾನಕಿ'ಯಲ್ಲಿ ಎಲ್. ಎನ್. ಬೆಝಬರುವಾರವರ 'ಪದುಮ್ ಕುಂವಾರಿ' (ರಾಜಕುವರಿ ಪದುಮಿ: ೧೯೦೫) ಧಾರಾವಾಹಿಯಾಗಿ ಬಂದರೆ 'ಬಿಜುಲಿ'ಯಲ್ಲಿ ಪದ್ಮನಾಥ ಗೋಹೈನ್ ಬರುವಾರವರ 'ಭಾನುಮತಿ' ಧಾರಾವಾಹಿಯಾಗಿ ಪ್ರಕಟವಾಯಿತು. ಹಾಗೆ ನೋಡಿದರೆ 'ಭಾನುಮತಿ'ಗೆಯೆ

ಅಸ್ಸಾಮಿಯಲ್ಲಿ ಪ್ರಪ್ರಥಮ ಕಾದಂಬರಿ ಎಂಬ ಗೌರವವನ್ನು ನೀಡಲಾಗುತ್ತಿದೆ ಅದಕ್ಕೆ ಕಾರಣ ಅದರ ಕಥೆಯಲ್ಲಿ ವ್ಯಕ್ತವಾಗುವ ಸುಸಂಗತತೆ ಮತ್ತು ನಿರೂಪಣೆಯಲ್ಲಿರುವ ಭಾವಪೂರ್ಣತೆ. ಪದ್ಮನಾಥರ 'ಲಾಹೋರಿ' (೧೮೯೨)ಯಲ್ಲಿ ಸಹ ಇವೇ ಗುಣಾಂಶಗಳನ್ನು ಗುರುತಿಸಬಹುದು. ಈ ಎರಡು ಕೃತಿಗಳಿಗೆ ಹೋಲಿಸಿ ನೋಡಿದರೆ ಪದುಮ್ ಕುಂವರಿ'ಯ ಮಟ್ಟ ತುಸು ಕಡಿಮೆಯೆಂದೇ ಹೇಳಬೇಕು. ಇವೆಲ್ಲವೂ ಪ್ರೇಮ ತ್ರಿಕೋನದ ಕಥೆಗಳೇ. ಆದರೂ ನಾಯಕ – ನಾಯಿಕೆಯರು ಮಾತ್ರ ಸ್ಪಷ್ಟವಾಗಿ ಗುರುತಿಸಲ್ಪಡುವಂತೆ ಚಿತ್ರಿತರಾಗಿದ್ದಾರೆ. ಈ ಕಾದಂಬರಿಗಳಲ್ಲಿ ವ್ಯಕ್ತವಾಗುವ ಪ್ರಣಯ ಸನ್ನಿವೇಶಗಳು ಮತ್ತು 'ಪದುಮ್ ಕುಂವರಿ' ಯಲ್ಲಿ ಬರುವ ಸಾಮೂಹಿಕ ಆತ್ಮಹತ್ಯೆ ಸಮಕಾಲೀನ ಲೇಖಕ ಲಮ್ಬೋದರ್ ಬೋರಾರವರ ತೀವ್ರ ಟೀಕೆಗೆ ಗುರಿಯಾದುವು. ಈ ವಿಮರ್ಶಕರ ದೃಷ್ಟಿಯಲ್ಲಿ ಕಾದಂಬರಿಯ ಉದ್ದೇಶ ಪರಿಶುದ್ಧವೂ ಸಮಾಜಕ್ಕೆ ಮಾರ್ಗದರ್ಶಕವೂ ಆಗಿರಬೇಕು.

ಅಸ್ಸಾಮಿನಲ್ಲಿ ಕಾದಂಬರೀ ಲೇಖನ ಭಾರತೀಯ ಉತ್ಕ್ರಾಂತಿಯ ಉಪಪರಿಣಾಮವಾಗಿ ಬೆಳೆದುಬಂತು. ಅಸ್ಸಾಮಿ ಕಾದಂಬರಿ ಒಂದು ವಿಶಿಷ್ಟ ಕಲಾಮಾಧ್ಯಮವೆಂದು ಪ್ರಾಧಾನ್ಯತೆಗೆ ಬಂದುದು ರಜನೀಕಾಂತ ಬರ್ದೊಲೊಯಿಯವರ ಐತಿಹಾಸಿಕ ಕಾದಂಬರಿಗಳಿಂದ. ಅವುಗಳಲ್ಲಿ ವ್ಯಕ್ತವಾಗುವ ಪ್ರಮುಖ ಅಂಶಗಳೆಂದರೆ ಸುಸಂಗತ ಕಥೆ, ಪಾತ್ರಗಳ ಮತ್ತು ಘಟನೆಗಳಲ್ಲಿಯ ಕ್ರಿಯೆ – ಪ್ರತಿಕ್ರಿಯೆಗಳು, ಭಾವಪೂರ್ಣ ನಿರೂಪಣೆ. ಹಾಗು ದೇಶಪ್ರೇಮವನ್ನು ಜಾಗ್ರತಗೊಳಿಸಲೋಸುಗ ಐತಿಹಾಸಿಕ ಘಟನೆಗಳ ಬಳಕೆ. ಅವರ 'ಮಿರಿ ಜಿಯರೀ' (ಸುರಕನ್ಯೆ ಮಿರಿ: ೧೮೯೫) ಗುಡ್ಡಗಾಡು ಜನಾಂಗಗಳ ಜನಜೀವನವನ್ನು ಚಿತ್ರಿಸುವ ಕಾದಂಬರಿಗಳಿಗೆ ನಾಂದಿಯಾಯಿತು. ಅವರ ಐತಿಹಾಸಿಕ ಕಾದಂಬರಿಗಳಾದ 'ಮನೋಮತಿ' (೧೯೦೦), 'ರಾಂಗಿಲೀ' (೧೯೦೯), 'ನಿರ್ಮಲ ಭಕ್ತ' (೧೯೨೬), 'ರಾಧಾ-ರುಕ್ಮಿಣಿ' (೧೯೨೫), 'ತಾಮ್ರೇಶ್ವರೀ ಮಂದಿರ' (೧೯೨೬), 'ದಂದುವಾ ದ್ರೋಹ' (೧೯೨೮) ಬ್ರಿಟಿಶ್-ಪೂರ್ವ ಕಾಲದ ಅಸ್ಸಾಮಿನ ಹಿನ್ನೆಲೆಯಲ್ಲಿ ರಚಿತವಾಗಿವೆ. ಬ್ರಹ್ಮದೇಶವು ನಡೆಸಿದ ಅನೇಕ ಆಕ್ರಮಣಕಾರೀ ದಾಳಿಗಳು, ಆಂತರಿಕ ಯುದ್ಧಗಳಿಂದಾಗಿ ಅಸ್ಸಾಮಿ ಜನಜೀವನದಲ್ಲಾದ ಅಲ್ಲೋಲಕಲ್ಲೋಲ, ಜನರನ್ನು ಮುತ್ತಿದ್ದ ಹತಾಶಭಾವ ಈ ಕಾಲದ ಮುಖ್ಯ ಲಕ್ಷಣಗಳು. ಇಲ್ಲಿನ ಪಾತ್ರಗಳ ಸ್ವಭಾವ ಮತ್ತು ವರ್ತನೆಗಳಿಗೆ ರಸಚೇತನವನ್ನು ಒದಗಿಸುವುದು ಪ್ರಾದೇಶಿಕ ಸಂಸ್ಕೃತಿಯ ಹಲವು ಹತ್ತು ಮುಖಗಳು, ವೈವಿಧ್ಯಪೂರ್ಣ ಜಾತಿ – ಧರ್ಮಗಳು. ಸಾಮಾಜಿಕ ನಡವಳಿಕೆಗಳು. ಹಾಗು ಲೈಂಗಿಕ – ನೈತಿಕ ಮೌಲ್ಯಗಳು. ಹೆಚ್ಚಿನ ಕಾದಂಬರಿಗಳ ಕಥಾವಸ್ತುಗಳು ಸ್ವತಂತ್ರ ಮೂಲದವಾಗಿದ್ದರೆ ಆಗೀಗ ಹೊರಗಿನ ಸಾಮಗ್ರಿಗಳಿಂದಲೂ ಎರವಲು ಪಡೆಯಲಾಗಿದೆ. ಅವುಗಳಲ್ಲೆಲ್ಲ ಕಾಲ ಮತ್ತು

ದೈವನಿಯತಿಯ ವಿರುದ್ಧ ಪ್ರೇಮಿಗಳು ನಡೆಸಿದ ಹೋರಾಟವನ್ನೇ ಕಾಣುತ್ತೇವೆ. 'ತಾಮ್ರೇಶ್ವರೀ ಮಂದಿರ'ದಲ್ಲಿ ಬ್ರಹ್ಮೇಯರ ದಾಳಿಗಳು ಮತ್ತು ಶಾಕ್ತರ ತಾಂತ್ರಿಕ ವಿಧಾನಗಳು ಸಮಾಗಮಕ್ಕಾಗಿ ಹೊಂದುತ್ತಿರುವ ಪ್ರೇಮಿಗಳ ಕ್ರಿಯೆಗೆ ಹಿನ್ನೆಲೆಯೊದಗಿಸುತ್ತವೆ. 'ಮನೋಮತಿ' ಕೆಲ ಮಟ್ಟಿಗೆ 'ರೋಮಿಯೊ-ಜೂಲಿಯೆಟ್' ನೆನಪಿಗೆ ತರುತ್ತದೆ. ಅದರ ಕಥೆ ಸುಸಂಗತವೂ ಹತ್ತಾರು ಸೂಕ್ಷ್ಮ ಎಳೆಗಳನ್ನು ಮನೋಜ್ಞ ರೀತಿಯಲ್ಲಿ ಹೆಣೆದಂತಹುದೂ ಆಗಿದೆ. ಇಲ್ಲಿ ಪ್ರೇಮಿಗಳು ಅನೇಕ ಬಾಹ್ಯ ಆಕ್ರಮಣಗಳಿಂದ ಹಾಗು ಎರಡು ಮನೆತನಗಳಲ್ಲಿ ವಂಶಪಾರಂಪರ್ಯವಾಗಿ ಬಂದ ವೈರದಿಂದ ಉಂಟಾಗುವ ಅನೇಕ ಗುರುತರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. 'ನಿರ್ಮಲ ಭಕ್ತಿ' ಭಗ್ನಾವಸ್ಥೆಗೆ ಎಳಸಿರುವ ಪ್ರೇಮಿಗಳು ಮರಳಿ ಒಂದುಗೂಡಿರುವ ಕಥೆ. ಬ್ರಹ್ಮೀ ಆಕ್ರಮಣದ ಪರಿಣಾಮವಾಗಿ ಪ್ರೇಮಿಗಳು ಅಗಲಬೇಕಾಗಿ ಬಂದು ಪ್ರೇಮಗೋಪುರವೇ ಕುಸಿಯುವುದರಲ್ಲಿರುತ್ತದೆಯಿಲ್ಲಿ. 'ದಂಡುವಾ ದ್ರೋಹ' 'ಪದಮ್‌ಕುಂವರಿ'ಯ ಕಥೆಯನ್ನೇ ಬಳಸಿಕೊಂಡಿದೆಯಾದರೂ ಅದಕ್ಕಿಂತಲೂ ವಸ್ತು ಮತ್ತು ಪಾತ್ರರಚನೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ. ಓದುಗನನ್ನು ಕಥೆಯ ಓಟದಿಂದ ದಾರಿ ತಪ್ಪಿಸುವಂತಹ ಚರ್ಚೆಗಳನ್ನು ಅಲ್ಲಲ್ಲಿ ತುಂಬಿರುವುದನ್ನುಳಿದರೆ ಬರ್ಡೋಲೋಯಿ ಕಾದಂಬರೀಲೇಖನ ಕಲೆ ಅವರಿಂದ ನಿರೀಕ್ಷಿಸಿದ್ದನ್ನು ಪೂರ್ತಿಗೊಳಿಸಿದರೆಂದೇ ಹೇಳಬೇಕು.

ಐತಿಹಾಸಿಕ ಕಾದಂಬರಿಗಳಲ್ಲಿ ಆಸ್ಥೆ ಬರಬರುತ್ತ ಕುಗ್ಗತೊಡಗಿತಾದರೂ ಕೆಲವು ಐತಿಹಾಸಿಕ ಕಾದಂಬರಿಗಳು ಆಗೊಮ್ಮೆ ಈಗೊಮ್ಮೆ ಬರುತ್ತಲೇ ಇದ್ದುವು. ಹಿತೇಶ್ವರ ಬರ್ಬುವಾರವರ 'ಮಲಿತಾ' (೧೯೧೫), ಶರಚ್ಚಂದ್ರ ಗೋಸ್ವಾಮಿಯವರ 'ಪಾನೀಪತ್', ಎಚ್. ಎನ್. ದತ್ತಬರುವಾರವರ 'ಚಿತ್ರದರ್ಶನ', ದಂಡಿನಾಥ ಕಲಿತಾರವರ 'ಗಾನವಿಪ್ಲವ' ಮುಂತಾದುವು ಈ ಪರಂಪರೆಯ ಸೂಕ್ಷ್ಮ ತಂತುವನ್ನು ಭದ್ರವಾಗಿಯೇ ಉಳಿಸಿಕೊಂಡುಬಂದವು.

ಸಮಾಜದಲ್ಲಿ ಜಾತಿ ಧರ್ಮಗಳನ್ನು ಮೀರಿದ ಮಾನವೀಯ ಶಕ್ತಿಗಳು ಹೆಚ್ಚೆಚ್ಚು ಪ್ರಭಾವಿಯಾಗತೊಡಗಿದಂತೆಯೆ ಅದರೊಟ್ಟಿಗೆ ಅಸ್ಸಾಮಿ ಭಾಷೆಯಲ್ಲಿ ಸಾಮಾಜಿಕ ಕಾದಂಬರಿ ರೂಪದಳಿದು ಬೆಳೆಯಿತು. ಐತಿಹಾಸಿಕ ಹಿನ್ನೆಲೆಯ ಆವರಣದಿಂದ ಬೇರ್ಪಟ್ಟ ಪ್ರೇಮ ಮತ್ತು ಅನೈಸರ್ಗಿಕ ಕಟ್ಟಳೆಗಳಿಂದ ಹತ್ತಿಕ್ಕಲ್ಪಟ್ಟಿದ್ದ ಕಾಮವನ್ನು ನೈಸರ್ಗಿಕವಾಗಿ ಮಾನವೀಯ ಆವರಣದಲ್ಲಿ ಚಿತ್ರಿಸುವುದು ಅವಶ್ಯವಿದ್ದಿತು. ಈ ಸಮಸ್ಯೆಯನ್ನು ಬಳಸಿಕೊಳ್ಳುವಲ್ಲಿ ಪ್ರಾರಂಭ ಕಾಲದಲ್ಲಿ ಲೇಖಕರು ಮಾಡಿದ ಪ್ರಯತ್ನಗಳನ್ನೆಲ್ಲ ಇಲ್ಲಿ ಹೇಳುವುದು ಅನಾವಶ್ಯಕ. ಕೆಲವು ಮಹಿಳೆಯರನ್ನೊಳಗೊಂಡು ಈ ಕಾಲದ ಲೇಖಕರು ಕೌಟುಂಬಿಕ ಹಾಗು ವೈಯಕ್ತಿಕ ಸಂದರ್ಭಗಳಲ್ಲಿಯ ದುರಂತಪಿಡೆ ಓದುಗನ ಗಮನವನ್ನು ಸೆಳೆಯಲು ಯತ್ನಿಸಿದರು. ಈ ಕಾಲದಲ್ಲಿ ದಂಡಿನಾಥ ಕಲಿತಾ, ದೈವಚಂದ್ರ ತಾಲೂಕಪಾರರಂತಹ ಕೆಲ ಕಾದಂ-

ಬರಿಕಾರರು ಗಾಂಧೀಪ್ರಣೀತ ಸಾಮಾಜಿಕ ಸುಧಾರಣಾಂದೋಲನದ ಪ್ರಭಾವಕ್ಕೊಳಗಾದರು. ಆದರೆ ಸಮಾಜ ಸುಧಾರಣೆಯ ಈ ಉದ್ದೇಶ ಮತ್ತು ಕಾದಂಬರೀಕಲೆಯಲ್ಲಿ ಇಷ್ಟ ಸಮನ್ವಯವನ್ನು ತಮ್ಮ ಕೆಲವೇ ಕೃತಿಗಳಲ್ಲಿ ಮಾತ್ರ ಸಾಧಿಸಲು ಇವರು ಸಮರ್ಥರಾದರು. ಇವರ ಮುಖ್ಯ ಕೊಡುಗೆಯೆಂದರೆ ಸಮಾಜ ಸುಧಾರಕನನ್ನು ಕಥಾನಾಯಕನನ್ನಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನು ಗುರುತಿಸಿದ್ದೆಂದು ತೋರುತ್ತದೆ. ಕಲಿತಾರವರ ‘ಸಾಧನಾ’ (೧೯೩೫) ಸ್ವಸಾಮರ್ಥ್ಯದಲ್ಲಿ ದೃಢವಿಶ್ವಾಸವುಳ್ಳವನೂ ಸೂಕ್ಷ್ಮ ಸಂವೇದಿಯೂ ಆಗಿರುವ ಶಾಲಾ ಶಿಕ್ಷಕ ದೀನಬಂಧುವು ಹೊಸದಾಗಿ ಕಂಡುಕೊಂಡಿರುವ ಸ್ತ್ರೀಗೌರವವನ್ನು, ದೀನದಲಿತರ ಸ್ಥಾನಗೌರವವನ್ನು ಸಮರ್ಥಿಸಿ ಸಂರಕ್ಷಿಸುವಂಥ ನೈತಿಕ ಧೈರ್ಯ ತಳೆದಿರುವುದನ್ನು ಬಿಂಬಿಸುತ್ತದೆ. ಇಲ್ಲಿ ಕಂಡುಬರುವ ಒಂದು ಮುಖ್ಯ ಲಕ್ಷಣವೆಂದರೆ ಈ ಸುಧಾರಣಾಪಥಕ್ಕೆ ಹಿಂದೇಟು ಹಾಕುವವರೆಂದು ತಿಳಿಯಲಾದವರ ವಿರುದ್ಧ ವಾಚ್ಯ ಆವರಣದಲ್ಲಿಡಗಿರುವಂಥ ನಿಂದೆ ಮತ್ತು ಅವರಿಗೆ ಉಪದೇಶಗಳಿಂದಲೇ ತುಂಬಿದಂಥ ಸಂಭಾಷಣೆ. ಗುರಿ ಮತ್ತು ಸಾಧನೆಗಳ ನಡುವಿನ ಅಂತರ ಹೆಚ್ಚು ಸ್ಪಷ್ಟವಾಗಿ ವ್ಯಕ್ತವಾಗುವುದು ತಾಲೂಕದಾರರ ಕಾದಂಬರಿಗಳಲ್ಲಿ. ಅಮೂರ್ತ ಪಾತ್ರಗಳ ಜಗತ್ತಿನ ಶಿಥಿಲ ವ್ಯಕಟ್ಟುಳ್ಳ ಈ ಕಾದಂಬರಿಗಳಲ್ಲಿ ಮೆಚ್ಚಬೇಕಾದಂಥದು ಕಾದಂಬರಿಕಾರನ ಉದ್ದೇಶವನ್ನು. ತಮ್ಮ ‘ಅಗ್ನೇಯ ಗಿರಿ’ಯಲ್ಲಿ ಕಾದಂಬರಿಕಾರ ಕಾರ್ತಿಕರು ತಮ್ಮ ಕಥಾನಾಯಕನಿಗೆ ಬಾಲವಿಧವೆಯೊಂದಿಗೆ ಮದುವೆ ಮಾಡುವ ಏರ್ಪಾಟಿಕೆಯನ್ನು ತೋರುವುದರೊಂದಿಗೆ ಸಮಾಜಸುಧಾರಣೆಯಲ್ಲಿನ ತಮ್ಮ ಆಸ್ಥೆಯನ್ನು ವ್ಯಕ್ತಪಡಿಸುತ್ತಾರೆ. ಅವರ ‘ವಿದ್ರೋಹಿ’ (೧೯೪೮)ಯಲ್ಲಿ ಈ ಅಂಶ ಇನ್ನೂ ಸ್ಫುಟವಾಗಿ ಕಂಡುಬರುತ್ತದೆ.

ದೀನಾನಾಥ ಶರ್ಮರ ‘ಸಂಗ್ರಾಮ’ (೧೯೪೫)ದ ವಸ್ತು ಕೆಳ ಮಧ್ಯಮವರ್ಗದ ಸಾಮಾಜಿಕ ನೈರಾಶ್ಯ. ಇಲ್ಲಿಯ ನಾಯಕ ಬುದ್ಧರಾಮ ಸುಶಿಕ್ಷಿತ ನಿರುದ್ಯೋಗಿ. ಆದರೆ ಅಮಾನುಷವೂ ಆತ್ಮಾಭಿಮಾನವನ್ನು ಹತ್ತಿಕ್ಕುವಂತಹದೂ ಆದ ಪರಿಸರದಲ್ಲಿ ತಲೆ ತಗ್ಗಿಸಿ ದುಡಿಯಕೂಡದೆಂಬ ಪ್ರಜ್ಞೆ ಅವನಲ್ಲಿ ಜಾಗ್ರತವಿರುವುದರಿಂದ ಅವನು ಒಂದು ಕೆಲಸದಿಂದ ಇನ್ನೊಂದಕ್ಕೆ ಪುಟಿಚೆಂಡಿನಂತೆ ಹಾರುತ್ತಾನೆ. ಈ ಅವಸ್ಥೆಯಲ್ಲೂ ಅವನ ಹೃದಯ ಕನಸಿನ ಕನ್ಯೆಯೊಬ್ಬಳನ್ನು ಆರಾಧಿಸುತ್ತಿರುತ್ತದೆ. ಇದೆಲ್ಲದರ ಅಂತಿಮ ಪರಿಣಾಮ ದುರಂತ. ‘ನದಾಯಿ’ಯಲ್ಲಿ ಕಾಣುವುದು ತನ್ನ ಸಮೃದ್ಧ ಜೀವನದ ಸಂಧ್ಯಾಕಾಲದಲ್ಲಿರುವ, ಕಾಯಕವೇ ಕೈಲಾಸವೆಂದು ನಂಬಿದ ನೇಗಿಲಯೋಗಿಯೊಬ್ಬ ಮುಂದಿನ ತಲೆಮಾರಿನ ಯುವಕರು ಅವನ ಜೀವನ ಮೌಲ್ಯಗಳನ್ನೇ ಕಪದಾರ್ಥವಾಗಿದ್ದನ್ನು ನೋಡಬೇಕಾಗಿ ಬಂದ ವಿಪನ್ನಾವಸ್ಥೆಯ ಚಿತ್ರಣವನ್ನು. ಈ ಬಗೆಯ ಭಾವನಾಪ್ರಧಾನ ಮಾನವೀಯತೆಯ ಹೆಚ್ಚು ಸಮತೂಕದ ಚಿತ್ರಣ ಬೀನಾ ಬರುವಾರವರ ‘ಜೀವನರ್ ಬಾತತ್’ (ಜೀವನ ಪಥದಲ್ಲಿ: ೧೯೪೫) ಕಾದಂಬರಿಯಲ್ಲಿ. ಈ ಶತಮಾನದ ಮೂರನೆಯ ದಶಕದ ಅಸ್ಸಾಮಿ ಜನಜೀವನವು

ಇಲ್ಲಿ ಮೂಡಿಬಂದಿದೆ. ಇಲ್ಲಿ ಕಥಾತಂತ್ರ, ತಥ್ಯಗಳೆರಡೂ ಮಾರ್ಮಿಕವಾಗಿ ಹಾಸುಹೊಕ್ಕಾಗಿರುವದರಿಂದ ಕಥೆ ಪರಿಣಾಮಕಾರಿಯಾಗುತ್ತದೆ, ಮತ್ತು ಪರಿಸ್ಥಿತಿಯು ಹಾಗೂ ಪಾತ್ರಗಳ ಕ್ರಿಯೆ ಪ್ರತಿಕ್ರಿಯೆಗಳು ತಮ್ಮ ವಾಸ್ತವತೆಯಿಂದ ಮನನಂಬುಗುತ್ತವೆ.

೨

ದ್ವಿತೀಯ ಮಹಾಯುದ್ಧ ಮತ್ತು ಅಗಸ್ಟ್ ಕ್ರಾಂತಿಯು ಈಚೆಗೆ ಎರಡು ತಲೆಮಾರುಗಳ ಕಾದಂಬರಿಕಾರರು ಕಾಣಿಸಿಕೊಂಡಿದ್ದಾರೆ. ಯುದ್ಧ, ಕ್ರಾಂತಿ, ಸ್ವಾತಂತ್ರ್ಯಾಗಮನಗಳಂತಹ ಬೃಹದ್ಘಟನೆಗಳು ಇವುಗಳಲ್ಲಿ ಮೊದಲ ತಲೆಮಾರಿನವರ ಮೇಲೆ, ಅವರ ಕಲ್ಪನಾಶಕ್ತಿಯ ಮೇಲೆ ಅಚ್ಚಳಿಯದಂಥ ಮುದ್ರೆಯೊತ್ತಿವೆ. ಎರಡನೆಯ ತಲೆಮಾರಿನವರಿಗೆ ಈ ಘಟನೆಗಳು ಬರಿ ಕೇಳಿಕೆಯ ಮಾತುಗಳು. ಸ್ವಾತಂತ್ರ್ಯದ ಕಹಿ-ಸಿಹಿಗಳ ರುಚಿ ನೋಡಬೇಕಾದುದು ಇವರ ಪಾಲಿನ ಬುತ್ತಿ. ಒಟ್ಟಾರೆ ಈ ಎರಡು ತಲೆಮಾರಿನವರ ಸಂಖ್ಯೆ ಬಹು ದೊಡ್ಡದಾದ್ದರಿಂದ ಅವರೆಲ್ಲರನ್ನೂ ಇಲ್ಲಿ ಗಮನಿಸುವುದು ಸಾಧ್ಯವಾಗಲಿಕ್ಕಿಲ್ಲ. ನಾನು ವ್ಯಕ್ತಿನಿಷ್ಠನಾಗುವ ಭಯವಿರುವುದರಿಂದ ನನ್ನ ಕಾದಂಬರಿಗಳ ಕುರಿತೂ ನಾನಿಲ್ಲಿ ಚರ್ಚಿಸುವುದಿಲ್ಲ.

ಮಾನವೀಯತೆಯು ಲೇಖಕರ ಕಣ್ಣು ಕಿವಿಗಳಾದಂತೆ ಇದು ವರೆಗೆ ಅಸ್ಪೃಶ್ಯವೆನಿಸಿದ್ದಂತಹ ಜೀವನದ ಹಲವಾರು ಮುಖಗಳನ್ನು (ಲೇಖಕರ ವೈಯಕ್ತಿಕ ಮನೋಭಾವ, ನಂಬಿಕೆಗಳು ಮತ್ತು ಅನುಭವಗಳನ್ನು ಅವಲಂಬಿಸಿ) ಕಥಾವಸ್ತುವಿಗಾಗಿ ಅರಸುವುದು ಈಗಿನವರ ಪ್ರಮುಖ ಒತ್ತಾಸೆ. ಎಲ್ಲ ಕಾದಂಬರಿಕಾರರೂ ಕಥಾನಿರೂಪಣೆಯಲ್ಲಿ ವಾಸ್ತವವಾದಕ್ಕೆಯೆ ಕಟ್ಟುನಿಟ್ಟಾಗಿ ಅಂಟಿಕೊಂಡಿಲ್ಲ. ಅನೇಕ ಕಾದಂಬರಿಗಳಲ್ಲಿ ಭಾವನಾಪ್ರಾಧಾನ್ಯವನ್ನು ಈಗಲೂ ಕಾಣಬಹುದು. ಉತ್ತರ ಆಸ್ಸಾಮಿನ ಚಹಾ ತೋಟಗಳ ಪ್ರದೇಶದಲ್ಲಿ ಯುದ್ಧದಿಂದುಂಟಾದ ನೈಸರ್ಗಿಕ ಮತ್ತು ನೈತಿಕ ದುಷ್ಪರಿಣಾಮಗಳ ಹಿನ್ನೆಲೆಯಲ್ಲಿ ಪ್ರಾಮಾಣಿಕ ಮನುಷ್ಯನ ನೈತಿಕ ಹೋರಾಟವನ್ನು ಜೋಗೇಶ ದಾಸರ 'ದಾವರ್ ಅರು ನಾಯಿ' (ಮೋಡಗಳಿನ್ನಿಲ್ಲ:೧೯೫೫) ಚಿತ್ರಿಸುತ್ತದೆ. ರಸನಾ ಬರುವಾ (ಇವರೇ ಬೀನಾ ಬರುವಾ ಅಥವಾ ಡಾ. ಬಿರಿಂಚಿಕುಮಾರ ಬರುವಾ) ಅವರ 'ಸೇಯುಜಿ ಪಾತರ್ ಕಾಹಿನಿ' (ಹಸಿರೆಲೆಗಳ ಕಥೆ : ೧೯೫೮) ಅನ್ಯ ದೇಶೀಯ ಕಾಮಜೀವನ ಮತ್ತು ಸಾಂಸ್ಕೃತಿಕ ಬೆರಕೆಯ ಪರಿಣಾಮವಾದ ಸಾಮ್ರಾಜ್ಯಶಾಹಿ ಕಾಲದ ಚಹಾ ತೋಟಗಳಲ್ಲಿಯ ಜೀವನದ ಮನ ಸೆಳೆಯುವ ಕಥನ. ಸುಪ್ರಸಿದ್ಧ ಸಣ್ಣ ಕತೆಗಾರ ಸಯ್ಯದ್ ಅಬ್ದುಲ್ ಮಲೀಕರು ಸ್ವಾತಂತ್ರ್ಯೋತ್ತರದಲ್ಲಿ ಕಾದಂಬರೀಲೇಖನಕ್ಕಿಳಿದಿದ್ದಾರೆ. ಅವರ ಶೈಲಿ ಭಾವನಾಪ್ರಧಾನ ಕಲ್ಪಕತೆಯಿಂದ ಬಣ್ಣಗೊಂಡಿದೆ. 'ಸೂರಜ್ ಮುಖೀರ್ ಸ್ವಪ್ನ' (ಸೂರ್ಯಪಾನ ಹೂವಿನ ಕನಸು : ೧೯೬೦) ಕಾದಂಬರಿಯಲ್ಲಿ ಅವರು ಚಿತ್ರಿಸಿದ್ದು ಸ್ಥಳೀಯ ಮುಸಲ್ಮಾನ ಗ್ರಾಮಜೀವನವನ್ನು. ಅವರ ಶೈಲಿಯ ಈ

ಪ್ರಧಾನಗುಣದಿಂದಾಗಿಯೆ ಇದು ಯಶಸ್ವಿ ಪ್ರಾದೇಶಿಕ ಕಾದಂಬರಿಯೆನಿಸಿದೆ. ಅವರ 'ಅಘರಿ ಆತ್ಮಾರ್ ಕಾಹಿನಿ'(ಭ್ರಷ್ಟ ಆತ್ಮದ ಕಥೆ)ಯಲ್ಲಿ ಜೀವಂತ ಸಂಭಾಷಣೆ ಹಾಗು ಹಲವಾರು ಸೂಕ್ಷ್ಮ ಪದರಗಳು ನಯವಾಗಿ ಹೆಣೆದುಕೊಂಡಿರುವುದು ಅವರ ದುರಂತ ನಾಯಿಕೆಯ ಕೊನೆಗೆ ಅದ್ಭುತ ಮುಕ್ತಾಯವನ್ನು ಒದಗಿಸುತ್ತದೆ. ಜೋಗೇಶ ದಾಸರ 'ಜ ಜುಯಿ ಫೇದಿ' (ಬಿಸಿಲ್ಗ ಮರೆಯ ಬಿನ್ನೇರಿ) ಮಧ್ಯಮವರ್ಗದ ಸುಶಿಕ್ಷಿತ ಭ್ರಷ್ಟ ಹೆಣ್ಣೊಬ್ಬಳ ಆಂತರಿಕ ವೇದನೆಯ ಇನ್ನೊಂದು ಮಾರ್ಮಿಕ ಚಿತ್ರಣ. ಪ್ರಫುಲ್ಲದತ್ತ ಗೋಸ್ವಾಮಿಯವರ 'ಕೇಚಾ ಪಾತರ್ ಕಪನಿ' (ನಡಗುವ ಎಲೆ: ೧೯೫೦). ತನ್ನ ರೈತರೊಂದಿಗೆ ಘರ್ಷಣೆಗಿಳಿದಿರುವ ಭೂ-ಮಾಲಿಕನೊಬ್ಬನ ಸುಶಿಕ್ಷಿತ ಮಗನ ಅಸ್ವಸ್ಥ ಪ್ರಜ್ಞೆಯನ್ನು ಚಿತ್ರಿಸುತ್ತದೆ. ರಾಧಿಕಾ ಮೋಹನ ಗೋಸ್ವಾಮಿಯವರ 'ಚಾಕ್ನೈಯಾ' (ತಿರುಗಣಿ ಮಡುವು: ೧೯೫೪), 'ಜಾಮರಲಿ'(ಸುಂಟರಗಾಳಿ: ೧೯೫೭)ಗಳಲ್ಲಿ ತೋಟಿಕೆಯ ಆಧುನೀಕರಣ ಮತ್ತು ಜೀವನದ ಮೇಲೆ ಅದರ ಪರಿಣಾಮಗಳು ಕಟು ಟೀಕೆಗೆ ಗುರಿಯಾಗಿವೆ. ಹೋಮೆನ್ ಬರ್ಗೋಹಾಯಿನ್‌ರವರಿಗೆ ಲೈಂಗಿಕತೆ ದೈವೀ ಆಳವುಳ್ಳ ರಹಸ್ಯವಾಗಿ ತೋರುತ್ತಿದೆ. ಇದು ಅವರ 'ತಾಂತ್ರಿಕ'(೧೯೬೭)ದಲ್ಲಿ ಪ್ರತಿಬಿಂಬಿತವಾಗಿದೆ. ಆಕರ್ಷಕ ಶೈಲಿಗೆ ಹೆಸರಾಗಿರುವ ಬರ್ಗೋಹಾಯಿನ್ ತಮ್ಮ ಅದಕ್ಕೂ ಮುಂಚಿನ ಕಾದಂಬರಿ 'ಸುಬಾಲಾ'ದಲ್ಲಿ ವೇಶ್ಯೆಯೊಬ್ಬಳ ಜೀವನವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ನವಕಾಂತ ಬರುವಾರವರ ಪ್ರಾದೇಶಿಕ ಕಾದಂಬರಿ 'ಕಪಿಲಿ ಪರಿಯಾ ಸಾಧು' (ಕಪಿಲಿ ಪ್ರದೇಶದ ಕಥೆ: ೧೯೫೪) ಜನ್ಮದಾತ ತಂದೆ-ತಾಯಿಗಳಾರೆಂದು ತಿಳಿಯದ, ಅವರೆ ನೆರೆಹಾವಳಿಯಿಂದ ಕೊಚ್ಚಿಕೊಂಡು ಹೋದ ಪ್ರದೇಶದಲ್ಲಿ ದಯಾಳುವೊಬ್ಬ ತನ್ನ ದತ್ತುಪುತ್ರನೆಂದು ಸ್ವೀಕರಿಸಿ ಪೋಷಿಸಿ ಬೆಳೆಸಿದ ಹಳ್ಳಿಯ ಸಂವೇದನಶೀಲ ಹುಡುಗನೊಬ್ಬನ ಕಥೆ. ಇಲ್ಲಿ ಕಾದಂಬರಿಕಾರ ಕಪಿಲಿಯಲ್ಲಿ ದೈವೀ ಗುಣಗಳನ್ನು ಕಾಣಲೆತ್ನಿಸಿದ್ದಾರೆ. ಚಂದ್ರಪ್ರಸಾದ ಸೈಕಿಯಾರ 'ಏದಿನ್' (ಒಂದು ದಿನ) ಪ್ರಾಯೋಗಿಕವೂ ಚಿಂತನಶೀಲವೂ ಆದ ಕಾದಂಬರಿ. ಇದಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಪ್ರಗತಿಯೇ ಸ್ಫೂರ್ತಿ ನೆಲೆ.

ಸಮಕಾಲೀನ ಕಾದಂಬರೀಲೇಖನದಲ್ಲಿ ಪ್ರಾದೇಶಿಕ ಹಾಗು ಜನಜೀವನದ ಹಲವಾರು ಸ್ತರಗಳಲ್ಲಿ ವ್ಯಕ್ತವಾಗುವ ಜೀವನದ ಚಿತ್ರಣವೇ ಪ್ರಮುಖ ಮಾರ್ಗವಾಗಿ ಪರಿಣಮಿಸಿದೆ. ಪದ್ಮಾ ಬರಕತಕಿಯವರ 'ಜನರ್ ದಾಪೋನ್' (ಜೀವನ ದರ್ಪಣ), ಪಶುಪತಿ ಭರದ್ವಾಜರ 'ಉರಂತ ಮೇಘರ್ ಛಾ' (ಓಟ ಕಿತ್ತ ಮೋಡಗಳ ನೆರಳಲ್ಲಿ), ನಿರುಪಮಾ ಬರ್ಗೋಹಾಯಿನ್‌ರವರ 'ಸೇಯಿ ನದಿ ನಿರವಧಿ' (ಎಂದೆಂದೂ ಹರಿವ ಆ ನದಿ), ಯುವ-ಲೇಖಕರೊಬ್ಬರ 'ಎಯಿ ಪದುಮುನಿ' (ಈಕೆ ಪದ್ಮಿನಿ), ಆದಿವಾಸಿ ಯುವಕ ಉಮ್ಮರ್ ದಯಿಯವರ 'ಪೃಥಿವೀರ್ ಹಾಹಿ' (ಜಗತ್ತಿನ ನಗು) ಕಾದಂಬರಿಗಳು ಈ ಲಕ್ಷಣದ ಪ್ರಾತಿನಿಧಿಕ ಕೃತಿಗಳು. 'ಎಯಿ

ಪದುಮುನಿ' ಔದ್ಯಮಿಕ ಪ್ರಗತಿಯ ಪರಿಣಾಮವಾಗಿ ತಲ್ಲಣಿಸಿದ ನದೀತೀರದಲ್ಲಿಯ ಒಂದು ಗ್ರಾಮದ ಜೀವನವನ್ನು ಆತ್ಮೀಯವಾಗಿ ಚಿತ್ರೀಕರಿಸುತ್ತವೆ. ಕಾದಂಬರಿಯನ್ನು ತಮ್ಮ ಲೇಖನ ಮಾಧ್ಯಮವಾಗಿ ಬಳಸಿಕೊಳ್ಳುತ್ತಿರುವವರಲ್ಲಿ ಮಹಿಳೆಯರು ಗಣನೀಯವಾಗಿ ಮುಂದೆಬಂದಿರುವುದೊಂದು ಬಹು ಮಹತ್ವದ ಹೆಜ್ಜೆ ಎನ್ನಬೇಕು. ನಿರುಪಮಾ ಬರ್ಗೊಹಾಯಿನ್, 'ಆಕಾಶ ಬಂತಿ' (ಆಕಾಶ ದೀಪ)ಯ ಲೇಖಿಕೆ ನೀಲಿಮಾ ದತ್ತ, 'ಉತ್ತರಾಯಣ' ಬರೆದ ಪ್ರವೀಣಾ ಸೈಕಿಯಾ ಸಮರ್ಥ ಕಲಾಕಾರರೆಂದು ಉದಯಿಸಿದ್ದಾರೆ. ಮಹಮ್ಮದ್ ಪಿಯಾರ್, ನಿರಾದ ಚೌಧರಿ, ಹಿತೇಶ ದೇಕಾ, ಕುಮಾರಕಿಶೋರ ಮತ್ತು ನವೀನ ಬರುವಾ ಜನಸಾಮಾನ್ಯದ ಅಭಿರುಚಿಗೆ ಹಿಡಿಸುವಂತೆ ಬರೆಯುತ್ತಿದ್ದಾರೆ. ವ್ಯಾವಹಾರಿಕ ಯಶಸ್ಸಿನ ದೃಷ್ಟಿಯಿಂದ ಲೈಂಗಿಕತೆಯನ್ನು, ಭಾವೋದ್ರೇಕವನ್ನು, ದಾರಿದ್ರ್ಯವನ್ನು ಬಳಸಿಕೊಂಡು ಹಣ ಗಳಿಸಿದವರೂ ಇದ್ದಾರೆ. ಆದರೆ ಇಂಥ ಕೃತಿಗಳು ಕಲೆಯ ಮಟ್ಟಕ್ಕೇರಿರುವುದು ಅಪರೂಪಕ್ಕೆ ಮಾತ್ರ.

ಲಕ್ಷ್ಮೀನಾರಾಯಣ ಬೋರಾ ಕಾದಂಬರಿ ಕ್ಷೇತ್ರಕ್ಕೆ ಬಹುಮಟ್ಟಿಗೆ ಹೊಸಬರೆ. ಅವರಿಗೆ ತಮ್ಮ ಕೃತಿಗಳಲ್ಲಿ ಒಂದು ಮಟ್ಟವನ್ನು ಕಾಯ್ದುಕೊಂಡು ಬರಲಾಗಿಲ್ಲ. ಕಲೆಯ ಬಗ್ಗೆ ಅವರಿಗಿರುವ ಆಸ್ಥೆ ಅವರ ಎಲ್ಲ ಕೃತಿಗಳಲ್ಲಿ ವ್ಯಕ್ತವಾಗುವುದಿಲ್ಲ. ಅವರ ಕಾದಂಬರಿಗಳ ಬಗ್ಗೆ ಈ ಮಾತು ಬರೆಯಬೇಕಾದ ಕಾರಣವೆಂದರೆ ಈ ಮೊದಲೆ ಯಶಸ್ವಿ ಸಣ್ಣ ಕತೆಗಾರರಿಗೆ ಅವರು ಹೆಸರಾಗಿರುವುದು. ನಗರೀಕರಣದಿಂದಾಗಿ ಗ್ರಾಮಜೀವನದ ಮೇಲುಂಟಾದ ಮಹತ್ತರ ಪರಿಣಾಮಗಳನ್ನು ತಮ್ಮ ಸಣ್ಣ ಕತೆಗಳಲ್ಲಿ ಅವರು ಸತ್ತ್ವಯುತವಾಗಿ ಮೂಡಿಸಿದ್ದಾರೆ. ಅವರ ಕಾದಂಬರಿ 'ಗಂಗಾ ಚಿಲನಿರ್ ಪಂಖಿ' (ಹಂಸದ ಪುಚ್ಛಗಳು : ೧೯೬೩) ಮಾತ್ರ ಅವರ ಸಣ್ಣ ಕತೆಗಳ ಯಶಸ್ಸಿಗೆ ಕಾರಣವಾಗಿರುವ ಅಂಶಗಳನ್ನು ಒಳಗೊಂಡಿದೆ. ಅಸ್ಸಾಮೀ ಕಾದಂಬರಿಯ ಪ್ರಾರಂಭದಿಂದಲೂ ಅಲ್ಲಿ ಕಂಡುಬರುವ ಹೆಣ್ಣಿಗಾಗಿ ನೈಜ ಅನುಕಂಪ ಈ ಕಾದಂಬರಿಯಲ್ಲೂ ಅವಶ್ಯಕತೆಗೆ ತಕ್ಕಷ್ಟು ಬಂದಿದೆ. ವಾಸಂತಿಯ ಪಾತ್ರ ಮಾನವೀಯವಾಗಿರುವುದರ ಜೊತೆಗೆ ಅವಳ ದುರಂತ ಪರಿಸ್ಥಿತಿ ಮತ್ತು ಪ್ರಸಂಗಗಳ ಪರಿಣಾಮವಾಗಿ ಚಿತ್ರಿತವಾಗಿದೆ. ಈ ಬಗೆಯ ಸ್ತ್ರೀ ಪಾತ್ರ ಸಾಕಷ್ಟು ಪ್ರಾತಿನಿಧಿಕವೂ ಅಹುದು. ಪುರುಷ ಪಾತ್ರಗಳಲ್ಲಿ ಧನಂಜಯ ಹೆಚ್ಚು ಸುಸಂಗತ ವ್ಯಕ್ತಿಯಾಗಿ ತೋರುತ್ತಾನಾದರೂ 'ಕಪಿಲಿಪರಿಯ ಸಾಧು'ದ ರೂಪಾಯಿಯನ್ನು ನೆನಪಿಗೆ ತರುತ್ತಾನೆ. ಭೋಗರಾಮ ಮತ್ತು ಮಧುರಾ ಪಾತ್ರಗಳ ಬೆಳವಣಿಗೆಯಲ್ಲಿ ದೋಷಗಳಿವೆಯೆಂದು ನನ್ನ ಭಾವನೆ. ಭೋಗರಾಮನು ಹಾದರದಲ್ಲೂ ಅಫೀಮಿನ ಕಳ್ಳ ಸಾಗಾಟದಲ್ಲೂ ಸಿಕ್ಕಿ ಹಾಕಿಕೊಳ್ಳುವುದು, ಮತ್ತು ಮಧುರಾಳಿಗೆಂದಾಗುವ ಅನಿರೀಕ್ಷಿತ ಅಪಘಾತ ಒಟ್ಟು ಕಥೆಗೆ ಆಂತರಿಕ ಆವಶ್ಯಕತೆಯಾಗಿ ಬರಲಿಲ್ಲ, ಅದನ್ನು ಮೀರಿದ ಯಾವುದೇ ಕಾರಣಕ್ಕಾಗಿ ಬಂದು ಸೇರಿಕೊಂಡಿವೆಯೆನಿಸುತ್ತದೆ. ಇಡೀ

ಕಾದಂಬರಿಯಲ್ಲಿ ನನಗೆ ಅತಿಯಾಗಿ ಹಿಡಿಸಿದ ಭಾಗಗಳೆಂದರೆ ಸೋನಾಯಿ ನದಿಯ ದಂಡೆಗಿರುವ ಕುಗ್ರಾಮವೊಂದನ್ನು ಹೆಣ್ಣಿಗಿರುವ ತವರ್ಮನೆಯ ಹಂಬಲದಿಂದ ಅದೇ ಆತ್ಮೀಯತೆಯಿಂದ ಲೇಖಕ ವರ್ಣಿಸಿರುವುದು ; ಹಾಗೂ ಸ್ವಾತಂತ್ರ್ಯೋತ್ತರದಲ್ಲಿಯ ಚುನಾವಣೆ-ರಾಜಕಾರಣ, ಅಭಿವೃದ್ಧಿ ಕಾರ್ಯಗಳು, ಆಧುನೀಕರಣ ಮೊದಲಾದವುಗಳಲ್ಲಿ ಅವರು ತೋರ್ಪಡಿಸುವ ಆಸ್ಥೆ. ನಿಸ್ಸಂಶಯವಾಗಿಯೂ ಈ ಕಾದಂಬರಿ ಬಹುಮಟ್ಟಿಗೆ ವಸ್ತುಸ್ಥಿತಿಗೆ ಹಿಡಿದ ಕನ್ನಡಿಯೆ.

ಬೋರಾರ ಈ ಕಾದಂಬರಿಯ ಬಗ್ಗೆ ಇಂತು ತುಸು ವಿಸ್ತರಿಸಿ ಬರೆದಿರುವುದಕ್ಕೆ ಕಾರಣವೆಂದರೆ ಇಂದು ಅಸ್ಸಾಮೀ ಕಾದಂಬರೀ ಹಿಡಿದಿರುವ ದಾರಿಗೆ ಇದು ಪ್ರಾತಿನಿಧಿಕವಾಗಿದೆ. ಇದರಿಂದ ಅಸ್ಸಾಮೀಯೇತರ ಓದುಗರಿಗೆ ಅಸ್ಸಾಮಿ ಜನಜೀವನದ ಒಂದು ನೋಟವಾದರೂ ಸಿಕ್ಕೀತು.

ಪಂಜಾಬೀ ಕಾದಂಬರಿ

ಮೂಲ : ಪ್ರೊ. ಆರ್. ಎಲ್. ಸೇತ್
ಕನ್ನಡಕ್ಕೆ : ಶ್ರೀಮತಿ ಸುನೀತಾ ಶೆಟ್ಟಿ

ಪಂಜಾಬೀ ಕಾದಂಬರಿಯು ಭಾರತೀಯ ಪರಂಪರೆಯಿಂದ ಪ್ರಭಾವಿತವಾದುದು; ಮಾತ್ರವಲ್ಲ ಪಾಶ್ಚಿಮಾತ್ಯ ಸಂಸ್ಕೃತಿ, ಸಂಪ್ರದಾಯಗಳ ಪ್ರಭಾವವೂ ಸಾಕಷ್ಟು ಅದರ ಮೇಲಾಗಿದೆಯೆನ್ನಬಹುದು.

ಹಲವಾರು ಭಾರತೀಯ ಭಾಷಾಸಾಹಿತ್ಯಗಳಂತೆ ಪಂಜಾಬೀ ಸಾಹಿತ್ಯದ ಮೇಲೆ ಕ್ರೈಸ್ತ ಮಿಶನರಿಗಳು ಬಲವಾದ ಮುದ್ರೆ ಒತ್ತಿದರು. ಈ ಕಾಲದಲ್ಲೆ ಇಂಥ ಪರಿಸರದಲ್ಲಿ ಪಂಜಾಬೀ ಕಾದಂಬರಿಯು ಜನ್ಮವಾಯಿತು. ಸಿಕ್ಖರ ಆಳಿಕೆಯ ಕಾಲದಲ್ಲೇ ಲುಧಿಯಾನಾದಲ್ಲಿ "ಯೇಸು ಕ್ರಿಸ್ತನ ಸುವಾರ್ತೆ"ಯಂತಹ ಅನೇಕ ಧಾರ್ಮಿಕ ಗ್ರಂಥಗಳು ಪಂಜಾಬೀ ಭಾಷೆಗೆ ಭಾಷಾಂತರಿಸಲ್ಪಟ್ಟುವು. ಅನೇಕ ಸಣ್ಣಕಥೆಗಳೂ ಇದೇ ಕಾಲದಲ್ಲಿ ಮುದ್ರಿಸಲ್ಪಟ್ಟು, ಪಂಜಾಬೀ ಕಾದಂಬರೀ ಸಾಹಿತ್ಯಕ್ಕೆ ಬಲವಾದ ಅಡಿಗಲ್ಲನ್ನು ನಿರ್ಮಿಸಿಕೊಂಡವು.

ಮೊದಲಿಗೆ ಕ್ರೈಸ್ತ ಮಿಶನರಿಗಳು, ಬೈಬಲ್ ಗ್ರಂಥದಿಂದ ಹಲವು ಘಟನೆಗಳನ್ನು ಆಯ್ದುಕೊಂಡು ಅವುಗಳನ್ನು ಕಥೆಯ ರೂಪದಲ್ಲಿ ಪ್ರಕಟಪಡಿಸಿದರು. ಕ್ರೈಸ್ತ ಇತಿಹಾಸದ ಕಥೆಗಳೂ ಇದರಲ್ಲಿ ಸೇರ್ಪಡೆಯಾದವು. ಕ್ರೈಸ್ತ ಧರ್ಮ ಪ್ರಸಾರಕ್ಕೆ ಪಂಜಾಬೀ ಭಾಷೆಯು ಮಾಧ್ಯಮವೆನಿಸಿದಾಗ ಈ ರೀತಿಯ ಸಾಹಿತ್ಯ ರಚನೆ ಆ ಭಾಷೆಯಲ್ಲೂ ಅವಿರತವಾಗಿ ಸಾಗಲೇಬೇಕಾಯಿತು. ಆಗ ಹಲವಾರು ಕ್ರಿಶ್ಚಿಯನ್ ಧರ್ಮಗ್ರಂಥಗಳು ಪಂಜಾಬೀ ಭಾಷೆಗೆ ರೂಪಾಂತರಗೊಂಡವು.

ಇವೆಲ್ಲವುಗಳಿಗಿಂತಲೂ ಅತಿ ಮುಖ್ಯವಾದ ಪ್ರಕಟಣೆಯೆಂದರೆ ೧೮೫೯ ರಲ್ಲಿ ಭಾಷಾಂತರಿಸಲ್ಪಟ್ಟ ಬನಿಯನ್ ಜಾನನ "ಪಿಲ್‌ಗ್ರಿಮ್ಸ್ ಪ್ರೊಗ್ರೆಸ್" ಪಂಜಾಬೀ ಕಾದಂಬರೀ ಸಾಹಿತ್ಯವು ಅಸ್ತಿತ್ವಕ್ಕೆ ಬಂದುದು ಹೀಗೆ. ಕ್ರೈಸ್ತ ಧರ್ಮ ಪ್ರಚಾರಕರು ಪಂಜಾಬೀ ಭಾಷೆಯನ್ನು ಧರ್ಮಪ್ರಚಾರದ ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡುದು ಒಂದು ರೀತಿಯಿಂದ ಲಾಭವೇ ಆಯಿತೆನ್ನಬೇಕು. ಆದರೆ ಇಂತಹ ಕಥಾವಿಸ್ತಾರದಲ್ಲಿ ಯಾವುದೇ ಕಲಾವಂತಿಕೆಯಾಗಲೀ, ಭಾಷಾ ಪ್ರೌಢಿಮೆಯಾಗಲೀ ಕಂಡುಬಾರದಿದ್ದರೂ ಅವೆಲ್ಲ ಉತ್ತಮ ಪಾತ್ರಪೋಷಣೆ ಹೊಂದಿ

ಮನೋರಂಜಕವಾಗಿದ್ದವು. ಆದ್ದರಿಂದಲೇ ಈ ಕಥೆಗಳು ಜನರ ಮನಸ್ಸನ್ನು ಸೂರೆಗೊಂಡವು. ಸೀಮಿತವಾದ ಕ್ಷೇತ್ರದಲ್ಲಷ್ಟೇ ಇವುಗಳ ಪ್ರಚಾರವಾದರೂ ಇವುಗಳ ಐತಿಹಾಸಿಕ ಪ್ರಭಾವವನ್ನು ಮರೆಯುವಂತಿಲ್ಲ. ಹೀಗೆ ಕ್ರೈಸ್ತ ಪಾದ್ರಿಗಳು ಪಂಜಾಬೀ ಕಾದಂಬರೀ ಸಾಹಿತ್ಯದ ಬೀಜವನ್ನು ಬಿತ್ತಿದರೆನ್ನಲು ಅಡ್ಡಿಯಿಲ್ಲ.

ಇವರ ಜೊತೆಗೇ, ಪಂಜಾಬಿನಲ್ಲಿ ಹಿಂದೂ, ಮುಸ್ಲಿಂ ಮತ್ತು ಸಿಕ್ಖಧರ್ಮಗಳಲ್ಲಿ ಧಾರ್ಮಿಕ ಉತ್ಕ್ರಾಂತಿ ನಡೆಯಿತು. ಪರಿಣಾಮವಾಗಿ ಭಾಯಿ ವೀರ್‌ಸಿಂಗ್ ಎಂಬುವರು ಪಂಜಾಬೀ ಕಾದಂಬರೀ ಸಾಹಿತ್ಯದ ಪ್ರವರ್ತಕರೆನಿಸಿಕೊಂಡರು. ಧಾರ್ಮಿಕ ಚಳವಳಿಯ ಕಾಲದಲ್ಲೇ ಹುಟ್ಟಿದ ವೀರ್‌ಸಿಂಗ್, ಮೊದಲ ಬಾರಿಗೆ ಸಿಕ್ಖಧರ್ಮ ಚಳವಳಿಯ ಅಂಗವಾಗಿ ಕಾದಂಬರಿಗಳನ್ನು ಪ್ರಕಟಿಸಿದರು. ಧಾರ್ಮಿಕ ಸಂದೇಶಗಳನ್ನು ಸಾರುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಅವರ ನಾಲ್ಕು ಕಾದಂಬರಿಗಳಲ್ಲಿ (ಸುಂದರಿ, ಬಿಜೇ ಸಿಂಗ್, ಸತ್‌ವಂತ್ ಕೌರ್, ಮತ್ತು ಬಾಬಾ ನೋಧ್ ಸಿಂಗ್), ಸಿಂಗ್‌ಸಭಾ ಚಳವಳಿಯ ಪ್ರಭಾವವನ್ನು ನಾವು ಚೆನ್ನಾಗಿ ಗುರುತಿಸಬಹುದಾಗಿದೆ. ೧೮ನೇ ಶತಮಾನದ ಧಾರ್ಮಿಕ ಇತಿಹಾಸವೇ ಅವರ ಕಾದಂಬರಿಗಳಿಗೆ ಹಿನ್ನೆಲೆಯನ್ನು ಒದಗಿಸಿದ್ದರೆ ಅದು ಆಶ್ಚರ್ಯದ ಮಾತೇನಲ್ಲ. ಅವರು ಸಿಕ್ಖರ ಶೌರ್ಯ, ಧೈರ್ಯ, ಆದರ್ಶಜೀವನ, ಧರ್ಮದ ಬಗ್ಗೆ ಪ್ರೇಮ, ದೇವರು ಮತ್ತು ಸತ್ಯ, ದೀನದಲಿತರ ಸಂಕಷ್ಟಗಳು ಇವುಗಳನ್ನು ತಮ್ಮ ಕೃತಿಗಳಲ್ಲಿ ಚೆನ್ನಾಗಿ ಪ್ರತಿಪಾದಿಸಲು ಯತ್ನಿಸಿದ್ದಾರೆ. ಆದರೆ ಸಿಕ್ಖಧರ್ಮದ ಮಹತಿಯನ್ನು ಹೇಳುವುದೇ ಅವರ ಮುಖ್ಯ ಉದ್ದೇಶವಾದುದರಿಂದಲೋ ಏನೋ ಅವರ ವಿಚಾರಸರಣಿಯಲ್ಲಿ ಜೀವನದ ಒಂದು ಮುಖವನ್ನು ಮಾತ್ರ ಬಿಂಬಿಸುವುದರಲ್ಲಿ ಸಫಲವಾಯಿತು. ಹಾಗೆಯೇ ಮುಸ್ಲಿಂ ಜನಜೀವನದಲ್ಲಿ ಕೇವಲ ಸಂಕುಚಿತ ಮನೋಭಾವನೆ, ಕ್ರೌರ್ಯ, ವಂಚನೆ, ದ್ರೋಹ, ಇವುಗಳನ್ನು ಮಾತ್ರ ಹೆಚ್ಚು ಸ್ಪಷ್ಟಗೊಳಿಸಲಾಗಿತ್ತು. ಆದುದರಿಂದ ಭಾಯಿ ವೀರ್‌ಸಿಂಗರ ಕೃತಿಗಳು ವಾಸ್ತವಿಕತೆಗಿಂತಲೂ ಆದರ್ಶವಾದದ ಕಡೆಗೆ ಹೆಚ್ಚು ವಾಲಿದಂತೆ ಕಂಡುಬರುವುದು ಸಹಜವೇ ಆಗಿದೆ. ಅವರು ಭಾವನಾತ್ಮಕ ವ್ಯಕ್ತಿಗಳನ್ನು ಮಾತ್ರ ಸೃಷ್ಟಿಸಿರುವುದರಿಂದ ಅವರೆಲ್ಲ ಲೇಖಕ ನಿರ್ಮಿತ ವ್ಯಕ್ತಿಗಳಂತೆ ಮಾತ್ರ ಕಾಣಿಸಿಕೊಳ್ಳುತ್ತಾರೆ. ಹೀಗಾಗಿ ವಸ್ತುನಿರ್ಮಾಣದಲ್ಲಿ ದೌರ್ಬಲ್ಯ ಗೋಚರಿಸುವುದುಂಟು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಜಾತೀಯತೆಯ ಅಂಶಗಳು ಹೆಚ್ಚು ತುಂಬಿಕೊಂಡಿದ್ದರಿಂದಲೇ ಈ ಕೃತಿಗಳು ಜನಪ್ರಿಯವೆನಿಸಲು ಅಸಮರ್ಥವಾದುವು.

ಮೋಹನ್‌ಸಿಂಗ್ ವೈದ್. ಮತ್ತು ಚರಣ್‌ಸಿಂಗ್ ಶಹೀದ್ ಇವರು ಸಹ ಭಾಯಿ ವೀರ್‌ಸಿಂಗರನ್ನು ಅನುಸರಿಸಿದರು. ಆದರೆ ಅವರು ಧರ್ಮಕ್ಕಿಂತಲೂ ಸಮಾಜಕ್ಕೇ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿ ಕೃತಿ ರಚನೆ ಮಾಡಿದರು.

ಅಮರ್‌ಸಿಂಗ್ ಮತ್ತು ಹರ್‌ಭಕ್ಷಸಿಂಗರ ಕಾದಂಬರಿಗಳು ಉಳಿದ ಭಾಷೆಗಳಿಗೂ ಅನುವಾದಿಸಲ್ಪಟ್ಟುವು. ಮೋಹನ್‌ಸಿಂಗ್ ವ್ಯಾಡ್ ಇವರು ಸಿಂಗ್‌ಸಭಾ ಚಳವಳಿಯಿಂದ ಪ್ರಭಾವಿತರಾದರೂ ಸಾಮಾಜಿಕ ಸಮಸ್ಯೆಗಳ ಕಡೆಗೇ ಹೆಚ್ಚಿನ ಗಮನವಿಟ್ಟು ಬರೆದರು. ಆದ್ದರಿಂದ ಅವರ ಕೃತಿಗಳೆಲ್ಲ ಸುಧಾರಿತ ಅಂಶಗಳನ್ನು ಒಳಗೊಂಡುವು. ಪಾತ್ರವೈಶಾಲ್ಯ ಜೀವಂತಿಕೆಯ ಲಕ್ಷಣವನ್ನು ತುಂಬಿಕೊಂಡು ವೈಚಾರಿಕತೆಯ ದಾರಿಯಲ್ಲಿ ಸಾಗಹತ್ತಿತು. ಅವರ ಪ್ರಸಿದ್ಧ ಕಾದಂಬರಿಗಳೆಂದರೆ "ಏಕ್ ಸಿಕ್ಖ್ ಘರಾನಾ", "ನಾಸ್ತಿಕ್", "ಸುಭಾಗ್ ಕೌನ್", "ವಕೀಲ್-ದಿ-ಕಿಸ್ಮತ್" ಇತ್ಯಾದಿ.

ಚರಣ್‌ಸಿಂಗ್ ಷಹೀದ್ ಇವರು ಇವೇ ಕಾಲದಲ್ಲಿ ಬದುಕಿದ್ದು **'ಶ್ಯಾಮ್ ಸುಂದರ್', 'ದಿಲೇಲ್‌ಖಾನ್', 'ರಣಜಿತ್‌ಕೌರ್', 'ಚಂಚಲ್‌ಮೂರ್ತಿ' 'ಜಗತ್ ತಮಾಷಾ', 'ಜೋಗನ್ ಜಾದೂಗರ್‌ನೀ'** ಮೊದಲಾದ ಕಾದಂಬರಿಗಳನ್ನು ರಚಿಸಿದರು. ಈ ಎಲ್ಲಾ ಕೃತಿಗಳು ಮನೋರಂಜನೆಯನ್ನು ನೀಡುವುದಲ್ಲದೆ ಓದುಗರಲ್ಲಿ ಆಸಕ್ತಿಯನ್ನು ಕೆರಳಿಸುವ ಗುಣಗಳನ್ನು ಒಳಗೊಂಡಿವೆ. ಆದರೆ ಅವರ ಕೃತಿಗಳಲ್ಲಿ ಕಂಡುಬರುವ ಒಂದು ದೌರ್ಬಲ್ಯವೆಂದರೆ ಅವುಗಳು ಉಪದೇಶಾತ್ಮಕವಾಗಿರುವುದು. **ಅಮರಸಿಂಗರ** ಕಾದಂಬರಿಗಳು ನೈಜತೆಯಿಂದ ಕೂಡಿದ್ದು, ಪಂಜಾಬಿನ ಹಳ್ಳಿಗಾಡಿನ ಜೀವನವನ್ನು ಚಿತ್ರಿಸಲು ಸಮರ್ಥವಾದವು. ಪ್ರಣಯ ಜೀವನದ ಸೊಗಸನ್ನು ಬಿತ್ತರಿಸಿದುವು. ಆದರೆ ಇಲ್ಲಿಯೂ ಜೀವನದ ಒಂದೇ ಮುಖವಷ್ಟೇ ಬಿಂಬಿತವಾದುದು ಒಂದು ದೋಷವೇ ಸರಿ.

ಪ್ರಾರಂಭದಲ್ಲಿ ಧಾರ್ಮಿಕ ಅಂಶಗಳನ್ನಷ್ಟೇ ಒಳಗೊಂಡ ಪಂಜಾಬೀ ಕಾದಂಬರಿಗಳು ಕಲಾವಂತಿಕೆಯನ್ನಾಗಲೀ, ಸಾಮಾಜಿಕ ಸಮಸ್ಯೆಗಳನಾಗಲೀ ಎತ್ತಿ ತೋರಿಸಲು ಅಸಮರ್ಥವಾದುವು. ವಸ್ತುಗಳನ್ನು ಆಯ್ದುಕೊಳ್ಳುವಲ್ಲಿ ಇತಿಹಾಸದ ನೆರವನ್ನು ಪಡೆದುದರಿಂದ ಮೂಲತಃ ಅವು ಸ್ವತಂತ್ರ ಸೃಷ್ಟಿ ಎನಿಸಲಿಲ್ಲ. ಆದರೂ ಪಂಜಾಬೀ ಜನರಲ್ಲಿ ಓದುವ ಆಸಕ್ತಿಯನ್ನು ಕೆರಳಿಸಲು ಈ ಕೃತಿಗಳು ಸಹಾಯಕವಾದುದು ಮಾತ್ರವಲ್ಲ, ಭವಿಷ್ಯದಲ್ಲಿ ಕಾದಂಬರೀ ರಚನೆಗೆ ಭದ್ರ ಬುನಾದಿಯನ್ನೇ ಹಾಕಿಕೊಟ್ಟವು.

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ, ಸಾಕ್ಷರತೆ, ಜೀವನದ ಬಗ್ಗೆ ಆಸಕ್ತಿ ಇವುಗಳಲ್ಲಿ ಜ್ಞಾನಾರ್ಜನೆಯ ದೃಷ್ಟಿಯಿಂದ ಬಹು ಮುಖ್ಯವೆನಿಸಿದುವು. ಕಾಂಗ್ರೆಸ್ಸಿನಂತಹ ರಾಷ್ಟ್ರೀಯ ಸಂಸ್ಥೆಗಳು ದೇಶದಾದ್ಯಂತ ದೇಶಭಕ್ತಿಯ ಕಿಡಿಯನ್ನು ಪ್ರಜ್ವಲಿಸುವಂತೆ ಮಾಡಿದುದರಿಂದ ಜನರು ಆಧ್ಯಾತ್ಮಿಕತೆಗಿಂತಲೂ ಜೀವನದ ಮೌಲ್ಯಗಳ ಬಗ್ಗೆ ವಿಚಾರಮಾಡಹತ್ತಿದರು. ಬಂಗಾಲದಲ್ಲಿ ತಲೆದೋರಿದ ಭೀಕರ ಬರಗಾಲ, ಜೇಲಿಗಳ ಏರಾಟ, ಹಸಿವು, ನಿರುದ್ಯೋಗ, ಮೊದಲಾದ ಸಮಸ್ಯೆಗಳು ಕಡೆಗಣಿಸುವಂಥವಾಗಿರಲಿಲ್ಲ. ಇಂತಹ ಸಂದರ್ಭದಲ್ಲೇ **ನಾನಕ್‌ಸಿಂಗರ** ಆವಿರ್ಭಾವ

ವಾದುದು. ಇವರು ಜನರ ಕಷ್ಟಗಳನ್ನು ನಿವಾರಿಸಬಲ್ಲ ಧ್ರುವತಾರೆಯಂತೆ ಮೂಡಿ ಬಂದರು. ಪಂಜಾಬೀ ಕಾದಂಬರಿಯ ಬಹುಮುಖತೆಗೆ ಇವರೇ ಕೇಂದ್ರ ಬಿಂದುವೆಂದರೂ ಸಲ್ಲುವುದು. ಇವರ ಕೃತಿಗಳೆಲ್ಲಾ ಆ ಕಾಲದ ಇತಿಹಾಸವನ್ನು ಬಿಂಬಿಸಲು ಯತ್ನಿಸಿ ಸಫಲವಾದುವು. ದೀನ ದರಿದ್ರರ ಪ್ರತಿನಿಧಿ ಎನಿಸಿಕೊಂಡ ಇವರು ಅವರಿಗಾಗಿಯೇ ಸಾಹಿತ್ಯ ರಚನೆಗೆ ಮಾಡಿದಂತೆ ಅನಿಸುತ್ತದೆ. ಆದ್ದರಿಂದಲೇ ನಾನಕ್ ಸಾಮಾಜಿಕ ಕಾದಂಬರಿಗಳ ಕರ್ತೃ. ತಮ್ಮ ಕಾದಂಬರಿಗಳಲ್ಲಿ ಸಾಮಾಜಿಕ ಕುಂದುಕೊರತೆಗಳನ್ನೆ ಎತ್ತಿ ಹಿಡಿದುದಲ್ಲದೆ, ಸಮಾಜಪೀಡಿತರ ಅಧಿಕಾರವನ್ನು ಕಟುವಾಗಿ ಟೀಕಿಸುವ ಯತ್ನವನ್ನೂ ಮಾಡಿದರು. ಅಸ್ಪೃಶ್ಯತೆ, ವಿಧವಾ ಸುಧಾರಣೆ, ವಿಧವಾ ವಿವಾಹ, ಸ್ತ್ರೀಸ್ವಾತಂತ್ರ್ಯ, ಆದರ್ಶ ಪ್ರೇಮ ಇವುಗಳು ಅವರ ಕಾದಂಬರಿಯ ತೀವ್ರತೆಯನ್ನು ಹೆಚ್ಚಿಸಿದುವು. ಧರ್ಮಗುರುಗಳ ಅತ್ಯಾಚಾರವನ್ನು ಬಯಲಿಗೆಳೆಯಲೆತ್ನಿಸಿದ ಇವರು ಅಂಧಶ್ರದ್ಧೆಯನ್ನು ಖಂಡಿಸಿದರು. ಆದರೆ ಇವರ ಕೃತಿಗಳೂ ದೋಷರಹಿತವೆನಿಸಲಿಲ್ಲ. ಅದಕ್ಕೆ ಕಾರಣ ಕೇವಲ ಸಮಸ್ಯೆಗಳನ್ನೇ ಎತ್ತಿ ಹಿಡಿದು ಪರಿಹಾರವನ್ನು ಸೂಚಿಸಲಾರದೆ ವಿಫಲರಾದುದು ಇವರ ಹಲವು ಕೃತಿಗಳಲ್ಲಿ ಗೋಚರವಾಗುತ್ತದೆ. "**ಅಧಿಕಿರಿಯಾ ಫಲ್**" ಇವುಗಳಲ್ಲಿ ಒಂದು. ಇದಕ್ಕೆ ಮುಖ್ಯ ಕಾರಣವೆಂದರೆ ಬಾಲ್ಯದಲ್ಲಿ ಇವರ ಮೇಲೆ ಪ್ರಭಾವ ಬೀರಿದ ಅನೇಕ ಅನಿವಾರ್ಯ ಸನ್ನಿವೇಶಗಳು. ಘಟನೆಗಳನ್ನು ಬೇಕೆಂದೇ ಜೋಡಿಸಿ ಕಥೆಯನ್ನು ಬೆಳೆಸಿಕೊಂಡು ಹೋಗುವುದಲ್ಲದೆ ಉಳಿದ ಅಂಶಗಳ ಕಡೆಗೆ ಇವರು ಹೆಚ್ಚು ಗಮನಿಸಿದಂತೆ ಕಾಣುವುದಿಲ್ಲ. ಆದರೂ ಪಂಜಾಬೀ ಕಾದಂಬರೀ ಸಾಹಿತ್ಯವನ್ನು ಶೈಶವಾವಸ್ಥೆಯಿಂದ ಪರಿಪಕ್ವ ಪ್ರಬುದ್ಧತೆಯ ಕಡೆಗೆ ಸಾಗಿಸಿದ ಶ್ರೇಯಸ್ಸು ಇವರಿಗೆ ಸಲ್ಲಲೇಬೇಕು.

ಪ್ರಸಕ್ತಕಾಲದ ವಾಸ್ತವಿಕವಾದ ವ್ಯಕ್ತಿಗಳ ಬಗೆಗೇ ಇವರ ಆಸಕ್ತಿ. ಐತಿಹಾಸಿಕವಾದುದನ್ನು ಬದಿಗೊತ್ತಿ. ಪ್ರಣಯವನ್ನು ಪ್ರಧಾನವೆಂದು ಗಣಿಸದೆ ಇವರ ಕಾದಂಬರಿಗಳು ಮುಂದುವರಿದುವು. ಸಮಾಜದ ಅನೇಕ ವರ್ಗಗಳಲ್ಲಿಯ ಜನ ಜೀವನವೇ ಇವರ ಕಾದಂಬರಿಗಳಿಗೆ ಭಿನ್ನಭಿನ್ನ ವಸ್ತುಪ್ರಕಾರಗಳೆನಿಸಿದುವು. ಆದ್ದರಿಂದ ಸೃಜನಶೀಲತೆಯ ಜೊತೆಗೆ ಹಿತ, ಅಹಿತ, ಇವುಗಳೆರಡನ್ನೂ ಎತ್ತಿ ತೋರಿಸಿದ್ದಾರೆ. ಸ್ವತಂತ್ರ ಶೈಲಿ, ಸತ್ತ್ವಯುತವಾದ ವಸ್ತುಜೋಡಣೆ, ಉಚ್ಚ, ಆದರ್ಶ ವ್ಯಕ್ತಿಚಿತ್ರಗಳು, ಇವರ ಕಾದಂಬರಿಗಳ ಶ್ರೇಷ್ಠತೆಯನ್ನು ಗುರುತಿಸುವ ಮಾನದಂಡಗಳು. **ಫ್ರಾಯ್ಡ್** ಹಾಗೂ **ಮಾರ್ಕ್ಸ್‌ನ** ಸಿದ್ಧಾಂತಗಳಿಂದ ಇವರು ಹೆಚ್ಚು ಪ್ರಭಾವಿತರಾದುದರಿಂದಲೇ, ಇವರ ಬರೆಹಗಳಲ್ಲಿ ನಿರ್ಭೀತಿಯಿಂದ ಬೆಳಕು ಕಂಡವು. ಪಂಜಾಬೀ ಕಾದಂಬರೀಪ್ರಪಂಚದ ಮುನ್ನಡೆಗೆ ಇದೊಂದು ತಿರುವು; ಏಕೆಂದರೆ ಮುಂದಿನ ಯುಗವು ಹೊಸ ವಿಚಾರಗಳನ್ನು ಹೊತ್ತು ನಿಂತ ಕ್ರಾಂತಿಕಾರಿ ಯುಗವೆನಿಸಿತು.

ಭಾಯೀ ವೀರ್ ಸಿಂಗರಿಂದ ಹುಟ್ಟಿಕೊಂಡ ಪಂಜಾಬೀ ಕಾದಂಬರಿಯು ಸತ್ತ್ವಯುತವಾಗಿ, ಅಷ್ಟೇ ಹಿತಕರವಾಗಿ ನಾನಕ್ ಸಿಂಗರ ಕೈಯಲ್ಲಿ ಮೂರ್ತ ಸ್ವರೂಪವನ್ನು ತಾಳಿ, ಈ ಯುಗದಲ್ಲಿ ಮನೋವೈಜ್ಞಾನಿಕ ಕ್ಷೇತ್ರದಲ್ಲಿ ಅಡಿ ಇಟ್ಟುದೇ ಇಲ್ಲಿಯ ಹೊಸತನ. ಮನೋವಿಶ್ಲೇಷಣಾತ್ಮಕ ಕಾದಂಬರಿ ಎನಿಸಿದ “**ಪ್ರಭಾ**” **ಜೋಶುವಾ ಫಾಜಿಲ್ ದೀನ್** ಅವರ ಕೃತಿ. **ಗುರುಬಕ್ಷ್** ಸಿಂಗರ ಕೃತಿಗಳೂ ಇದೇ ದಾರಿಯಲ್ಲಿ ಸಾಗಿದುವು. ನಾನಕ್ ಸಿಂಗರ ‘**ಪವಿತ್ರ ಪಾಪಿ**’, ಆದರ್ಶವಾದಕ್ಕೆ ಹೆಚ್ಚು ಅಂಟಿಕೊಂಡ ಕಾದಂಬರಿ. ಈ ಕ್ಷೇತ್ರದಲ್ಲಿ ಯಶಸ್ವಿಯಾಗಿ ತಮ್ಮ ಕೃತಿಗಳನ್ನು ಪ್ರಚುರಪಡಿಸಿದವರಲ್ಲಿ **ಸುರೀಂದರ್ ಸಿಂಗ್, ಕನ್ವಾಲ್, ಅಮೃತಾ ಪ್ರೀತಮ್** ಮುಖ್ಯರು. ಸುರೀಂದರ್ ಸಿಂಗರ ‘**ಪಾವುಲ್ ಪುಟ್ಟು**’ (ತಂದೆ ಮತ್ತು ಮಗ) ಮತ್ತು ಕನ್ವಾಲರ ‘**ಪಾಲಿ**’ ಇವುಗಳನ್ನು ಇಲ್ಲಿ ನೆನೆಯಬೇಕು.

ಮುಂದಿನ ಯುಗವೇ ಪ್ರಗತಿಗಾಮೀ ಯುಗ. ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತದ ಮೇಲೆ ಹೆಚ್ಚಿನ ಕಾದಂಬರಿಗಳು ರಚಿಸಲ್ಪಟ್ಟವು. **ಸುರೀಂದರ್ ಸಿಂಗ್** ನರೂಲಾ ಇವರು ಈ ಪರಂಪರೆಗೆ ಮೂಲವ್ಯಕ್ತಿಯಾದರು. ಅವರ ‘**ದಿಲ್-ದರಿಯಾ**’ ಕಾದಂಬರಿ ಇದಕ್ಕೆ ಉತ್ತಮ ಉದಾಹರಣೆ. ‘**ರಾತ್ ಬಾಕೀ ಹೈ**’ ಎಂಬ ಜಸವಂತ್ ಸಿಂಗ್ ಕನ್ವಾಲರ ಕಾದಂಬರಿಯೂ ‘**ಲಹರ್ ಮಿಟ್ಟೀ**’ ಎಂಬ **ಸಂತ್ ಸಿಂಗರ** ಕಾದಂಬರಿಯೂ ಪ್ರಗತಿಗಾಮೀ ಸಾಹಿತ್ಯ ಪ್ರಕಾರದ ಸೀಮಾರೇಖೆಗಳೆನಿಸಿದುವು.

೧೯೪೭ ರ ನಂತರದ ಅವಧಿಯಲ್ಲಿ ನಾನಕ್ ಸಿಂಗರ ದೃಷ್ಟಿ ಮತ್ತೆ ಮಾನವತಾವಾದದ ಮೇಲೆ ಹರಿದುದರಿಂದ ‘**ಆ್ಯಡಮ್ ಖೋರ್**’, ಮತ್ತು ‘**ಕಟೀ ಹೋಯಿ ಪತಂಗ**’ ಬೆಳಕು ಕಂಡುವು. ಜಹಗೀರೀ ಪದ್ಧತಿಯನ್ನು ಖಂಡಿಸಿ, ಮಾನವನ ಆಶೋತ್ತರಗಳೆಲ್ಲ ಹೇಗೆ ನಷ್ಟವಾಗುವವೆಂಬುದನ್ನು ಪ್ರತಿಪಾದಿಸಿದ ಈ ಕಾದಂಬರಿಗಳು ಒಂದು ಕಾಲಕ್ಕೆ ದೊಡ್ಡ ಬಿರುಗಾಳಿಯನ್ನೆ ಎಬ್ಬಿಸಿದುವು. **ಗುರುಚರಣಸಿಂಗರ** ‘**ವಾಗ್‌ದೀ-ಸಿ-ರವಿ**’ ಎಂಬ ಕಾದಂಬರಿಯೂ ಇದೇ ಸತ್ತ್ವವನ್ನು ಮೈಗೂಡಿಸಿಕೊಂಡಿತು. ಸ್ವಾತಂತ್ರ್ಯೋತ್ತರದ ಕೃತಿಗಳು ಮೊದಲಿಗೆ ಕ್ರಾಂತಿ ಹಾಗೂ ಹಿಂಸಾತ್ಮಕ ಚಳವಳಿಗಳನ್ನು ಹೆಚ್ಚು ಪ್ರಭಾವಯುತವಾಗಿ ಪ್ರಕಟಪಡಿಸಿದುವು. ಹೀಗೆ ಹರಿದುಬಂದ ಪ್ರವಾಹವು ಒಮ್ಮೆಲೇ ದೇಶದ ಅನೇಕ ಸಮಸ್ಯೆಗಳ ಕಡೆಗೆ ತನ್ನ ದಿಕ್ಕನ್ನು ಬದಲಾಯಿಸಿ, ಸಮಸ್ಯಾತ್ಮಕ ಕಾದಂಬರಿಗಳ ಸೃಷ್ಟಿಗೆ ಕಾರಣವಾಯಿತು. ‘**ಅಮನ್-ದೆ-ರಾಹ್**’ ಎಂಬ ಕಾದಂಬರಿಯು ಶಾಂತಿ, ಸೌಹಾರ್ದಗಳನ್ನು ಎತ್ತಿಹಿಡಿಯಿತು.

ಪಂಜಾಬೀ ಕಾದಂಬರೀಸಾಹಿತ್ಯದ ಈ ಅವಿರತ ಹಾಗೂ ಬಹುಮುಖವಾದ ಪ್ರವಾಹವನ್ನು ನಾವು ಗಮನಿಸಿದರೆ ಉಳಿದ ಭಾಷೆಗಳಂತೆ ಅದರ ವ್ಯಾಪ್ತಿ ಹೆಚ್ಚಿಲ್ಲ-

ವೆಂದೇ ಹೇಳಬೇಕು. ಭಾವನೆಯ ಆಳ, ಶೈಲಿ ಇವುಗಳಲ್ಲಿ ಗಮನಾರ್ಹ ಪ್ರಗತಿ ಆಗಿದೆಯಾದರೂ ಹೊಸ ಪ್ರಾಯೋಗಿಕ ವಸ್ತು ಸ್ವೀಕಾರದಲ್ಲಿ ಪಂಜಾಬೀ ಸಾಹಿತ್ಯ ಇನ್ನೂ ಹೆಚ್ಚಿನ ಪ್ರಬುದ್ಧತೆಯನ್ನು ಪಡೆಯಬೇಕು ಎಂದು ಯಾರಿಗಾದರೂ ಅನಿಸುವುದು ಸಹಜವೇ. ಪಂಜಾಬೀ ಭಾಷೆಗೆ ಅದರದೇ ಸಂಪತ್ತು, ಗಾಂಭೀರ್ಯ, ಮಾಧುರ್ಯವಿದೆ. ಬದಲಾಗುತ್ತಿರುವ ಯುಗದ ಜೊತೆಗೆ, ತನ್ನಲ್ಲಿ ಹೊಸತನವನ್ನು ಮೈಗೂಡಿಸಿಕೊಂಡು ಬೆಳೆದುದಾದರೆ ಪಂಜಾಬೀ ಕಾದಂಬರೀಪ್ರಪಂಚಕ್ಕೆ ಉಜ್ವಲ ಭವಿಷ್ಯವಿದೆ.

೩

ವಿದೇಶಿ ಭಾಷೆಗಳಲ್ಲಿ ಕಾದಂಬರಿ

ಇಂಗ್ಲಿಷ್ ಕಾದಂಬರಿ

— ಡಾ. ಸರೋಜಿನಿ ಶಿಂತ್ರಿ

ಸಾಹಿತ್ಯದ ಅನೇಕ ರೂಪಗಳಲ್ಲಿ (Forms of literature) ಕಾದಂಬರಿಯು ತನ್ನದೇ ಆದ ಸ್ಥಾನವನ್ನು ಗಳಿಸಿಕೊಂಡಿದೆ. ದುಃಖಾಂತ ನಾಟಕ ಮತ್ತು ಮಹಾ ಕಾವ್ಯಗಳಿಗಿರುವ ಪ್ರಾಚೀನತೆ ಇದಕ್ಕಿಲ್ಲ; ಆದರೆ ಪರಂಪರೆಗೆ ಮಾತ್ರ ಕೊರತೆಯಿಲ್ಲ. ಆಧುನಿಕ ಪರಿಸರದಲ್ಲಿ ಅದಕ್ಕೆ ಪ್ರಾಧಾನ್ಯ ಒದಗಿರುವುದು ಮುಖ್ಯತಃ ಅದಕ್ಕಿರುವ ವ್ಯಾಪಕ ಸ್ವರೂಪಕ್ಕಾಗಿ. ಜೀವನದ ಹರವು, ಆಳ, ಸೂಕ್ಷ್ಮತೆ ಮತ್ತು ವಿವಿಧತೆ ಮೊದಲಾದವುಗಳನ್ನು ಚಿತ್ರಿಸಲು ಅದು ಬಹು ಉಪಯುಕ್ತವೆಂದೆನಿಸಿಕೊಂಡಿದೆ. ಅರಿಸ್ಟಾಟಲ್ಲನು ತನ್ನ **ಕಾವ್ಯವಿಮರ್ಶೆಯಲ್ಲಿ** (Poetics) ಕಾದಂಬರಿಯ ವಿಷಯ ವಾಗಿ ಪ್ರಸ್ತಾಪವನ್ನೇ ಮಾಡಿಲ್ಲ. ಆತನು ಚರ್ಚಿಸಿದ್ದು ಮುಖ್ಯವಾಗಿ ನಾಟ್ಯಕಾವ್ಯ ಮತ್ತು ನಿರೂಪಣಾ ಕಾವ್ಯಗಳನ್ನು. ಅವನ ದೃಷ್ಟಿಯಲ್ಲಿ ದುಃಖಾಂತ ನಾಟಕ ಮತ್ತು ಮಹಾಕಾವ್ಯಗಳು ಸಾಹಿತ್ಯದ ಶ್ರೇಷ್ಠ ರೂಪಗಳು. ಕಾದಂಬರಿಯು ಒಂದು ಗದ್ಯ-ದಲ್ಲಿಯ ಮಹಾಕಾವ್ಯ (Epic in prose) ಎಂದು ಕರೆಯಿಸಿಕೊಳ್ಳುತ್ತದೆ. ಎರಿಸ್ಟಾ-ಟಲ್ಲನು ಮಹಾಕಾವ್ಯದ ತಂತ್ರ ವಸ್ತು ಮತ್ತು ನಿರೂಪಣೆಯ ವಿಷಯವಾಗಿ ಹೇಳಿದ ಮಾತುಗಳು ಕಾದಂಬರಿಗೆ ಸುಲಭವಾಗಿ ಅನ್ವಯಿಸುತ್ತವೆಯೆಂದು ಹೇಳಬಹುದು.

ಒಂದು ದೃಷ್ಟಿಯಲ್ಲಿ ನೋಡಿದರೆ ಕಾದಂಬರಿಯಾದರೂ ಒಂದು ಪ್ರಾಚೀನ ಸಾಹಿತ್ಯರೂಪವೆಂದೆನಿಸುತ್ತದೆ. ಅದರ ಜೀವಾಳವೆಂದರೆ ಕತೆ. ಕತೆಯನ್ನು ಕೇಳುವ ಪ್ರವೃತ್ತಿ ಮತ್ತು ಅದನ್ನು ಹೇಳುವ ಪ್ರವೃತ್ತಿ ಮನುಷ್ಯನ ಸಂಸ್ಕೃತಿಯ ಇತಿಹಾಸ-ದಷ್ಟೇ ಪುರಾತನವಾದವುಗಳು. ಆದುದರಿಂದ ಕಾದಂಬರಿಯ ಜನನ ಆದಿಮಾನವನು ತನ್ನ ಅನುಭವದ ಕತೆಯನ್ನು ಹೇಳಲು ಪ್ರಾರಂಭಿಸಿದಾಗಿನಿಂದಲೆ ಆಯಿತೆಂದು ಹೇಳಬಹುದು.

ಕತೆಯೇನೋ ಕಾದಂಬರಿಯ ಜೀವಾಳವಿರಬಹುದು. ಆದರೆ ಕಾದಂಬರಿಯು ಬರೀ ಕತೆಯಲ್ಲ ಎಂಬ ಮಾತನ್ನೂ ನಾವು ಒಪ್ಪಬೇಕಾಗುತ್ತದೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ, ೧೫ ನೇ ಶತಮಾನದಲ್ಲಿ ಬೆಳಕನ್ನು ಕಂಡ ಸರ್ ಥೋಮಸ್ ಮ್ಯಾಲರಿಯ 'ಮೊರ್ಟೆ ಡಿ ಆರ್ಥರ್' ಕೃತಿಯಾಗಲೀ, ೧೬ ನೇ ಶತಮಾನದಲ್ಲಿ ರಚಿತ ವಾದ ಫಿಲಿಪ್ ಸಿಡ್ನಿಯ 'ಆರ್ಕೆಡಿಯಾ ಆಗಲೀ ಕಾದಂಬರಿಯೆನಿಸಿಕೊಳ್ಳಲಾರವು. ಅವು ಕಟ್ಟುಕತೆಗಳು. ಕಾದಂಬರಿಗೆ ಅವಶ್ಯವಾಗಿ ಬೇಕಾದ ನಿರೂಪಣಾ ಗದ್ಯವಾಗಲಿ, ಪಾತ್ರಪೋಷಣೆಯಾಗಲಿ, ಸನ್ನಿವೇಶಗಳನ್ನು ಸಂಘಟಿಸುವ ತಂತ್ರಗಳಾಗಲಿ

ಅವುಗಳಲ್ಲಿಲ್ಲ. ಅವುಗಳ ಬೆಳವಣಿಗೆಯನ್ನು ನಾವು ೧೮ ನೇ ಶತಮಾನದ ಸಾಹಿತ್ಯದಲ್ಲಿ ಕಾಣುತ್ತೇವೆ. ಎಡಿಸನ್ ಮತ್ತು ಸ್ಟೀಲ್ ಇವರೀರ್ವರೂ ಶ್ರೇಷ್ಠ ಲಲಿತ ಪ್ರಬಂಧಕಾರರೆಂದು ಹೆಸರು ಗಳಿಸಿದ್ದಾರೆ. ಅವರು ಪ್ರಾರಂಭಿಸಿದ The Tatler ಮತ್ತು Spectator ದ್ವೈಸಾಪ್ತಾಹಿಕೆಗಳು ಇಂಗ್ಲಿಷಿನ ಪತ್ರಿಕಾಸಾಹಿತ್ಯದಲ್ಲಿ ಮೈಲುಗಲ್ಲುಗಳು. ನಿರೂಪಣೆಗೆ ಅವಶ್ಯವಾದ ತಿಳಿ ಗದ್ಯವನ್ನು ಪ್ರಚಾರಕ್ಕೆ ತರುವಲ್ಲಿ, ಪಾತ್ರಗಳು ಸ್ವಾಭಾವಿಕವಾಗಿ ಕಾಣುವಂತೆ ಚಿತ್ರಿಸುವಲ್ಲಿ ಇವು ಮಹತ್ತ್ವದ ಪಾತ್ರಗಳನ್ನು ಆಡಿವೆಯೆಂದು ಹೇಳಬಹುದು. ಎಡಿಸನ್ನನ ಸರ್ ರೋಜರ್ ಡಿ. ಕೊವರ್ಲಿ ಒಬ್ಬ ಜೀವಂತ ಪಾತ್ರ. ಆತ ಆಗಿನ ಇಂಗ್ಲಂಡಿನಲ್ಲಿ ಮನೆಮಾತಾದನು. ಇವರ ನಂತರ ಬರೆಯಲು ಪ್ರಾರಂಭಿಸಿದ ಸ್ವಿಫ್ಟನ ಕೈಯಲ್ಲಿ ಇಂಗ್ಲಿಷ್ ಗದ್ಯ ಇನ್ನೂ ಸುಲಲಿತವಾಯಿತು. 'ಗಲ್ಲಿವರ್ಸ್ ಟ್ರಾವಲ್ಸ್'ದಲ್ಲಿಯ ಆತನ ನಿರೂಪಣಾಶಕ್ತಿಯನ್ನು ಮತ್ತು ತಂತ್ರವನ್ನು ಯಾರೂ ಮೆಚ್ಚಲೇಬೇಕು. ಚಿಕ್ಕಮಕ್ಕಳಿಂದ ಮುದುಕರವರೆಗೆಲ್ಲರನ್ನೂ ರಂಜಿಸುವ ಆ ಕಟ್ಟುಕತೆ ಜಗತ್ತಿನಲ್ಲಿಯೇ ಹೆಚ್ಚು ಓದಲ್ಪಡುವ ಸಾಹಿತ್ಯಕೃತಿಯೆಂದು ಹೆಸರು ಪಡೆದಿದೆ. ಆದರೆ ಅದು ಕಾದಂಬರಿಯಲ್ಲ. ಕಾದಂಬರಿಗೆ ಬೇಕಾಗುವ ಎಲ್ಲ ಆವಶ್ಯಕ ಸಾಮುಗ್ರಿಗಳನ್ನು ಒದಗೊಳಿಸುವಲ್ಲಿ ಎಡಿಸನ್, ಸ್ಟೀಲ್ ಮತ್ತು ಸ್ವಿಫ್ಟರು ನೆರವಾದರೆಂದು ಹೇಳಬಹುದು. ಅವರ ಮಾರ್ಗದರ್ಶನವಿರದಿದ್ದರೆ ಕಾದಂಬರಿಯು ೧೮ ನೇ ಶತಮಾನದ ಮಧ್ಯದಲ್ಲಿ ಜನ್ಮತಾಳುತಿತ್ತೋ ಇಲ್ಲವೋ ಎಂಬುದು ಸಂಶಯಾಸ್ಪದ.

ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಥಮ ಕಾದಂಬರಿಯೆಂದು ಕರೆಯಿಸಿಕೊಳ್ಳುವ 'ಪಾಮೆಲಾ' ರಚಿತವಾದ ರೀತಿ ಬಹು ಮೋಜಿನದಾಗಿದೆ. ಈ ಕೃತಿಯನ್ನು ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದವನು ಬರೆದಿರಬಹುದೆಂದು ಯಾರಾದರೂ ಭಾವಿಸಬಹುದು. ಆದರೆ ಅದನ್ನು ರಚಿಸಿದ ಸ್ಯಾಮುವೆಲ್ ರಿಚರ್ಡ್ಸನ್ನನು ಮಾತ್ರ ಒಬ್ಬ ಸಾಮಾನ್ಯ ವ್ಯಾಪಾರಿಯೆಂದು ಹೇಳಿದರೆ ಯಾರಿಗೂ ಆಶ್ಚರ್ಯವೆನಿಸಬಹುದು. ರಿಚರ್ಡ್ಸನ್ನನಿಗೆ ಪ್ರೇಮಪತ್ರಗಳನ್ನು ಬರೆಯುವದರಲ್ಲಿ ಅಸಾಧಾರಣ ಗತಿ ಇತ್ತು. ಯಾವ ಸನ್ನಿವೇಶಕ್ಕೂ ತಕ್ಕಂತೆ ಆತ ಬರೆಯಬಲ್ಲವನಾಗಿದ್ದ. ಆತನ ಕಡೆಗೆ ಯುವಕಯುವತಿಯರು ಬಂದು ಪ್ರೇಮಪತ್ರಗಳನ್ನು ಬರೆಯಿಸಿಕೊಂಡು ಹೋಗುತ್ತಿದ್ದರು. ರಿಚರ್ಡ್ಸನ್ನನಿಗೆ ಇದೊಂದು ಉಪಜೀವನ ಮಾರ್ಗ; ನಾನಾ ತರಹದ ರಮ್ಯ ಪ್ರೇಮಪತ್ರಗಳನ್ನು ಬರೆಯುವಾಗಲೇ ಆತ ಒಂದು ವಿಚಾರದ ಸೆಳುವಿನಲ್ಲಿ ಸಿಕ್ಕ-ಈ ಎಲ್ಲ ಪ್ರೇಮಪತ್ರಗಳನ್ನು ಒಂದು ಕತೆಯನ್ನು ಹೇಳುವ ರೀತಿಯಲ್ಲಿ ಏಕೆ ಬರೆಯಬಾರದು ಎಂದು. ಅದರ ಪರಿಣಾಮವೇ 'ಪಾಮೆಲಾ' ಕಾದಂಬರಿ! ಪಾಮೆಲಾ ತನ್ನ ಗೆಳತಿಗೆ ಬರೆದ ಪತ್ರಗಳೇ ಈ ಕಾದಂಬರಿಯ ವಸ್ತು. ತಾನು ಸೇವಿಸುತ್ತಿದ್ದ ಸರ್ ಬಿ. ತನ್ನಲ್ಲಿ ಅನುರಕ್ತನಾದದ್ದು, ತನ್ನನ್ನು ವಶಪಡಿಸಿಕೊಳ್ಳಲು ಕ್ರೂರ ರೀತಿಯಿಂದ ನಡೆದುಕೊಂಡದ್ದು, ಆತನ ಕೈಯಲ್ಲಿ ತಾನು ಪಟ್ಟ ದುಃಖದುಮ್ಮಾನ,

ತಾನು ಆತನ ಪ್ರೇಮವನ್ನು ನಿರಾಕರಿಸಿದ್ದು, ನಂತರ ತನ್ನ ಹೃದಯದಲ್ಲಿಯೇ ಆತನ ವಿಷಯವಾಗಿ ಅಂಕುರಿಸಿದ ಅದಮ್ಯವಾದ ಪ್ರೇಮವನ್ನು ಕಂಡುಕೊಂಡದ್ದು – ಮೊದಲಾದ ವಿಷಯಗಳನ್ನು ಪಾಮೆಲ್ಲಾ ತಾನು ಬರೆದ ಪತ್ರಗಳಲ್ಲಿ ಕೂಲಂಕಷವಾಗಿ ಚಿತ್ರಿಸಿದ್ದಾಳೆ. ರಿಚರ್ಡ್‌ಸನ್ನನ ಕಡೆಗೆ ಬರುತ್ತಿದ್ದ ಎಲ್ಲ ಗಿರಾಕಿಗಳೂ ಈ ಹೊಸ ಮಾದರಿಯ ಸಾಹಿತ್ಯಕೃತಿಯನ್ನು ಓದಿ ಮೆಚ್ಚಿದ್ದೇ. 'ಪಾಮೆಲ್ಲಾ' ಪ್ರಕಟವಾಗುವುದೇ ತಡ, ಎಲ್ಲರ ಕುತೂಹಲವನ್ನೂ ಕೆರಳಿಸಿತು. ಯಾವುದೇ ಸುಸಂಸ್ಕೃತ ಹೆಣ್ಣುಮಗಳು ಮತ್ತೊಬ್ಬಳನ್ನು ಸಂಧಿಸಿದಾಗ, "ಏನು, ನೀವು 'ಪಾಮೆಲ್ಲಾ' ಕಾದಂಬರಿಯನ್ನು ಓದಿರಬೇಕಲ್ಲವೆ ?" ಎಂದು ಕೇಳುವಷ್ಟರ ಮಟ್ಟಿಗೆ ಅದರ ಪ್ರಚಾರ ಬೆಳೆಯಿತು. ಅದನ್ನು ಓದದಿರುವುದು ಸಂಸ್ಕೃತಿಯ ಲಕ್ಷಣವಲ್ಲವೆಂದು ಗಣಿಸಲಾಯಿತು. ಕಾದಂಬರಿಯ ಯಶಸ್ಸಿಗೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದ ಎರಡನ್ನು ಮಾತ್ರ ಇಲ್ಲಿ ಹೇಳಬಹುದು. ಮೊದಲನೆಯದೆಂದರೆ, ಕಾದಂಬರಿಯ ನವ್ಯತೆ, ಎರಡನೆಯದೆಂದರೆ, ನಾಟಕ ಮತ್ತು ರಂಗಭೂಮಿಯ ಅಧೋಗತಿ. ಸುಸಂಸ್ಕೃತ ಜನರಿಗೆಲ್ಲ ಮನೋರಂಜನ ಬೇಕು. ನಾಟಕಗೃಹಗಳು ೧೭ ಮತ್ತು ೧೮ ನೇ ಶತಮಾನಗಳಲ್ಲಿ ಮನೋರಂಜನ ನೀಡುವ ಏಕಮೇವ ಸಾಧನೆಗಳಾಗಿದ್ದವು. ಆದರೆ ೧೮ ನೇ ಶತಮಾನದ ಮಧ್ಯದಲ್ಲಿ ನಾಟಕಗೃಹಗಳ ಪರಿಸ್ಥಿತಿ ಮತ್ತು ನಾಟಕಗಳ ಮೌಲ್ಯಗಳು ಯಾವ ಸುಸಂಸ್ಕೃತ ಮನುಷ್ಯನೂ ಮೆಚ್ಚದಷ್ಟು ಶೋಚನೀಯ ಸ್ಥಿತಿಗೆ ಇಳಿದಿದ್ದವು. ಅವು ಸಾಹಿತ್ಯಕ ಮೌಲ್ಯಗಳನ್ನೇ ಕಳೆದುಕೊಂಡಿದ್ದವು. ಅರ್ಥಪೂರ್ಣ ಮತ್ತು ಆರೋಗ್ಯಕರವಾದ ಮನೋರಂಜನೆಗೆ ಕಾಯ್ದಿದ್ದ ಸಾರಸ್ವತಲೋಕಕ್ಕೆ ಕಾದಂಬರಿಯು, ಒಂದು ಅಮೂಲ್ಯವಾದ ಕೊಡುಗೆಯಂತೆ ಭಾಸವಾಯಿತು. ಅದು ನಾಟಕದಷ್ಟೇ ರಂಜನೀಯ; ಅದನ್ನು ಓದುವುದೆಂದರೆ, ಮನೆಯಲ್ಲಿಯೇ ಕುಳಿತು ನಾಟಕವನ್ನು ನೋಡಿದಂತೆ. ಕಾದಂಬರಿಯನ್ನು ಪಾಕೆಟ್ ನಾಟಕವೆಂದೇ ಕರೆಯುತ್ತಾರೆ. 'ಪಾಮೆಲ್ಲಾ' ಯಶಸ್ಸಿನಿಂದ ಪ್ರೋತ್ಸಾಹಿತನಾದ ರಿಚರ್ಡ್‌ಸನ್ನನು ಮುಂದೆ ಇನ್ನೆರಡು ಕಾದಂಬರಿಗಳನ್ನು ಪ್ರಕಟಗೊಳಿಸಿದನು– 'ಕ್ಲ್ಯಾರಿಸ್ಸಾ ಹಾರ್ಲೋ' ಮತ್ತು 'ಸರ್ ಚಾರ್ಲ್ಸ್ ಗ್ರ್ಯಾಂಡಿಸನ್'. ಈ ಕಾದಂಬರಿಗಳಿಗೆ ಇರುವುದು ಐತಿಹಾಸಿಕ ಮಹತ್ತ್ವವೇ ಹೊರತು ಬೇರೇನಲ್ಲ. ಇಂಗ್ಲಿಷ್ ಸಾಹಿತ್ಯದ ಯಾವ ವಿದ್ಯಾರ್ಥಿಗೂ ಇವುಗಳ ಹೆಸರು ಗೊತ್ತು. ಆದರೆ ಅವುಗಳನ್ನು ಓದುವ ಹವ್ಯಾಸವನ್ನವನು ಮಾಡಲಾರ. ಪ್ರಥಮ ಕಾದಂಬರಿಯನ್ನು ಬೆಳಕಿಗೆ ತಂದ ಶ್ರೇಯಸ್ಸು ರಿಚರ್ಡ್‌ಸನ್ನನಿಗೆ ಸಲ್ಲತಕ್ಕತದ್ದೇನೋ ಸರಿ. ಆದರೆ ಆತ ಒಬ್ಬನೇ ಇಂಗ್ಲಿಷ್ ಕಾದಂಬರಿಯ ಜನಕನೆಂದು ಕರೆಯಿಸಿಕೊಳ್ಳಲಾರ. ಆ ಹಕ್ಕು ಆತನ ನಂತರ ಕಾದಂಬರಿಗಳನ್ನು ಬರೆದ ಫೀಲ್ಡಿಂಗನಿಗೂ ಸಲ್ಲಬೇಕಾಗಿದೆ. ಫೀಲ್ಡಿಂಗ್ ಮೊದಲು ನಾಟಕಗಳನ್ನು ಬರೆಯಲು ಪ್ರಾರಂಭಿಸಿದ; ಅಲ್ಲಿ ಅಯಶಸ್ವಿಯಾದ. ತಾನೂ ಕಾದಂಬರಿಯನ್ನೇಕೆ ಬರೆಯಬಾರದೆಂದು ತನ್ನಷ್ಟಕ್ಕೆ ತಾನೇ ಸವಾಲು ಹಾಕಿಕೊಂಡ.

ಪಾಮೆಲ್ಲಾಳ ವಿಪರೀತ ನಾಜೂಕತನ, ಆಕೆಯ ಮುರುಕ, ಅಸ್ವಾಭಾವಿಕ ವರ್ತನೆ ಅವನಿಗೆ ಎಳ್ಳಷ್ಟೂ ಹಿಡಿಸಲಿಲ್ಲ. ಅವುಗಳನ್ನು ಅಣಕು ಮಾಡಲು ಹೋದ. ತಾನೂ ಒಂದು ಕಾದಂಬರಿಯನ್ನೇ ಬರೆಯಲು ಪ್ರಾರಂಭಿಸಿದ. ಅದುವೇ 'ಜೋಸೆಫ್ ಆಂಡ್ರ್ಯೂಸ್'. ಜೋಸೆಫ್ ಪಾಮೆಲ್ಲಾಳ ತಮ್ಮ; ವಯಸ್ಸಿನಲ್ಲಿ ಚಿಕ್ಕವ. ಈತನನ್ನು ಕೆಲಸಕ್ಕೆ ಇಟ್ಟುಕೊಂಡ ಶ್ರೀಮತಿ ಬೂಬಿ ಮಧ್ಯಮ ವಯಸ್ಕಳು. ಅವಳಿಗೆ ಈ ಹುಡುಗನ ಮೇಲೆ ಕಣ್ಣು. ಆತನನ್ನು ತನ್ನ ಬಲೆಯಲ್ಲಿ ಹಾಕಿಕೊಳ್ಳಲು ನಾನಾ ವಿಧವಾಗಿ ಪ್ರಯತ್ನಿಸುತ್ತಾಳೆ; ಅದರಲ್ಲಿ ಅಯಶಸ್ವಿಯಾಗಲು ಅವನಿಗೆ ಅನೇಕ ಕೀಟಲೆಗಳನ್ನು ಕೊಡುತ್ತಾಳೆ– ಸರ್ ಬಿ. ಪಾಮೆಲ್ಲಾಳಿಗೆ ಕೊಟ್ಟಂತೆ. ಇದು ಒಂದು ತಿರುವು ಮುರುವು ಚಿತ್ರ. ಜೋಸೆಫ್ ಕೊನೆಗೂ ಆಕೆಯ ಕಾಟವನ್ನು ತಾಳದೇ ಅಲ್ಲಿಂದ ಓಡಿ ಹೋಗುತ್ತಾನೆ, ಅನೇಕ ಕಠಿಣ ಪ್ರಸಂಗಗಳನ್ನು ಎದುರಿಸುತ್ತಾನೆ. ಆದರೆ ಅವನಿಗೆ ಧೈರ್ಯ ಹೇಳಿ ಪಾರು ಮಾಡುವವನೊಬ್ಬನೇ, ಆತ ಮಾನವತಾವಾದಿ ಪಾರ್ಸನ್ ಆಡಮ್ಸ್. ಕಾದಂಬರಿಯ ಎರಡನೆಯ ಭಾಗವೆಲ್ಲ ಪಾರ್ಸನ್ ಆಡಮ್ಸನು ಕಾಣಿಸಿಕೊಳ್ಳುವ ಅನೇಕ ಪ್ರಸಂಗಗಳಿಂದಲೇ ತುಂಬಿದೆ. 'ಪಾಮೆಲ್ಲಾ' ಕಾದಂಬರಿಯನ್ನು ಅಣಕಿಸಲು ಹೊರಟ ಫೀಲ್ಡಿಂಗ್ ತನ್ನ ಮೂಲ ಉದ್ದೇಶವನ್ನು ಮರೆತು ಸಮಾಜದ ನ್ಯೂನತೆಗಳನ್ನು ಬಯಲಿಗೆಳೆಯುವ ಪಾರ್ಸನ್ ಆಡಮ್ಸನ ಪಾತ್ರ ಪೋಷಣೆಯಲ್ಲಿಯೇ ತಲ್ಲೀನನಾಗುತ್ತಾನೆ. ಭಾವನಾತಿರೇಕದ ಅಸ್ವಾಭಾವಿಕ ಚಿತ್ರಣಕ್ಕೆ ಬೇಸತ್ತ ಸಹೃದಯ ಓದುಗರಿಗೆ ಫೀಲ್ಡಿಂಗನ ಕಾದಂಬರಿಯು ಸಾಹಿತ್ಯವು ಜೀವನವನ್ನು ಹೇಗೆ ನೈಜವಾಗಿ ಮತ್ತು ವ್ಯಾಪಕವಾಗಿ ಚಿತ್ರಿಸಬಹುದೆಂಬುದರ ಅರಿವನ್ನು ಮಾಡಿಕೊಟ್ಟಿತು. ಫೀಲ್ಡಿಂಗನೇ ಕಾದಂಬರಿಯನ್ನು ಗದ್ಯದಲ್ಲಿಯ ಮಹಾಕಾವ್ಯ ಎಂದು ಕರೆದವನು. ಆ ಹೆಸರಿಗೆ ತಕ್ಕಂತೆಯೇ ಆ ಕಾಲದಲ್ಲಿಯ ಜೀವನದ ಬೃಹತ್ ಚಿತ್ರವನ್ನು ಜನರ ಕಣ್ಣೆದುರಿಗೆ ನಿಲ್ಲಿಸಿದನು. ಆತನ ಎರಡನೆಯ ಕಾದಂಬರಿ 'ಟೋಮ್ ಜೋನ್ಸ್' ಎಂಬುದು ಕಥಾನಿರೂಪಣೆ ಮತ್ತು ತಾಂತ್ರಿಕ ದೃಷ್ಟಿಯಿಂದ ಅತಿ ಶ್ರೇಷ್ಠ ಕಾದಂಬರಿಯೆಂದು ವಿಮರ್ಶಕರಿಂದ ಕರೆಯಲ್ಪಟ್ಟಿದೆ. ಹದಿನೆಂಟನೆಯ ಶತಮಾನದ ಕೊನೆಗೆ ಇನ್ನೀರ್ವರು ಕಾದಂಬರಿಯನ್ನು ಬಹು ಕುಶಲತೆಯಿಂದ ಬಳಸಿಕೊಂಡರು– ಒಬ್ಬ ಸ್ಮೊಲೆಟ್, ಇನ್ನೊಬ್ಬ ಸ್ಟರ್ನ್. ಈ ನಾಲ್ವರೂ ಕಾದಂಬರಿಯ ನಾಲ್ಕು ಗಾಲಿಗಳೆಂದು ಕರೆಯಲ್ಪಟ್ಟಿದ್ದಾರೆ. ಈ ನಾಲ್ಕು ಗಾಲಿಗಳ ಮೇಲೆ ನಿಂತ ಕಾದಂಬರಿ ೧೯ನೇ ಶತಮಾನದಲ್ಲಿ ಆಕರ್ಷಕ ಪ್ರಗತಿಯನ್ನು ಸಾಧಿಸಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಕಾದಂಬರಿಯ ನಿಲವು ಸ್ಥಿರವಾಯಿತು.

ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಹೊರಜಗತ್ತಿನ ಸಂಪರ್ಕ ಅಥವಾ ಆಕರ್ಷಣೆಯಿಲ್ಲದ ಒಬ್ಬ ಅವಿವಾಹಿತ ಹೆಣ್ಣುಮಗಳು ತನ್ನದೇ ಆದ ರೀತಿಯಲ್ಲಿ ತಾನು ಜೀವಿಸುತ್ತಿದ್ದ ಸಾಮಾಜಿಕ ಪರಿಸರದಲ್ಲಿಯ ಘಟನೆಗಳನ್ನು ಚಿತ್ರಿಸಲು ಕಾದಂಬರಿಯನ್ನೇ ಬಳಸಿದಳು. ಜೇನ್ ಆಸ್ಟಿನ್ನಳ ಕಾದಂಬರಿ 'ಪ್ರೈಡ್ ಆ್ಯಂಡ್

ಪ್ರೆಜ್ಯುಡಿಸ್' ಓದದವರಾರು ? ಆಕೆ ಚಿತ್ರಿಸಿದ ಸ್ತ್ರೀಪುರುಷರೆಲ್ಲ ಮಧ್ಯಮವರ್ಗಕ್ಕೆ ಸೇರಿದವರು. ಅವರ ವೃತ್ತಿಯೆಂದರೆ ತಮತಮಗೆ ಯೋಗ್ಯರಾದ ಸಂಗಾತಿಗಳನ್ನು ಹುಡುಕಿಕೊಳ್ಳುವುದು. ಇವರಿಗೆ ಒಂದೆಡೆ ಕಲೆಯಲು ಅವಕಾಶಗಳು ಬೇಕು. ಅದಕ್ಕೆಂತಲೇ ಟೀ ಪಾರ್ಟಿ,ಡಿನ್ನರ್,ಪಿಕ್ ನಿಕ್ ಮತ್ತು ಸುಖಪ್ರವಾಸ. ಈಕೆಯ ಕಾದಂಬರಿಗಳೆಂದರೆ ಟೀ ಟೇಬಲ್ ಹರಟೆಗಳಿದ್ದಂತೆ ಎಂದು ವಿಮರ್ಶಕರು ಮೂದಲಿಸಿದ್ದಾರೆ. ಜೀವನದ ಕಠಿಣ ಪ್ರಶ್ನೆಗಳನ್ನು ದುರಂತ ಸನ್ನಿವೇಶಗಳನ್ನು ಜೇನ್ ಆಸ್ಟೆನ್ ತನ್ನ ಕಥಾವಸ್ತುವನ್ನಾಗಿ ಆರಿಸಲಿಲ್ಲ. ಆದರೆ ಆಕೆಯ ಚಿಕ್ಕದಾದರೂ ಚೊಕ್ಕಾದ ಚಿತ್ರಣಕ್ಕೆ ನಾವು ತಲೆದೂಗಬೇಕು. ಆಕೆಯ ನಿರೂಪಣಾ ತಂತ್ರ, ಸನ್ನಿವೇಶಗಳನ್ನು ಸಂಘಟಿಸುವ ಶೈಲಿ, ಪ್ರಸಂಗಗಳನ್ನು ನಾಟಕೀಯವಾಗಿ ಚಿತ್ರಿಸುವ ಜಾಣತನ— ಇವೆಲ್ಲವುಗಳೂ ಆಕೆಯನ್ನು ಶ್ರೇಷ್ಠ ಕಾದಂಬರಿಕಾರ್ತಿಯನ್ನಾಗಿ ಮಾಡಿವೆ. ಈಕೆ ಬರೆಯುತ್ತಿದ್ದ ಕಾಲದಲ್ಲಿ ಫ್ರೆಂಚ್ ರಕ್ತಕ್ರಾಂತಿ ಇಡೀ ಜಗತ್ತನ್ನೇ ನಡುಗಿಸಿತು. ಈಕೆಯ ಸಮಕಾಲೀನನಾದ ವಾಲ್ಟರ್ ಸ್ಕಾಟ್ ಆ ಕ್ರಾಂತಿಯಿಂದ ಪುಲಕಿತನಾಗಿ ತನ್ನ ಕಾದಂಬರಿಗಳಲ್ಲೆಲ್ಲಾ ಕೂದಲು ನವಿರೇಳುವಂತಹ ಸನ್ನಿವೇಶಗಳನ್ನೇ ಸೃಷ್ಟಿಸಿದ. ಜೇನ್ ಆಸ್ಟೆನ್ ಮಾತ್ರ ತನ್ನ ಜಗತ್ತಿನಲ್ಲಿಯೇ ಮಗ್ನಳಾಗಿದ್ದಳು.

ಆಶ್ಚರ್ಯವೆಂದರೆ, ಕಾದಂಬರಿಯು ಅನೇಕ ಸ್ತ್ರೀ ಲೇಖಕರನ್ನು ಬಹುವಾಗಿ ಆಕರ್ಷಿಸಿದೆ. ಈ ವಿಷಯ ಇಂಗ್ಲಂಡಿಗಷ್ಟೇ ಪರಿಮಿತಗೊಂಡಿಲ್ಲ. ಸ್ತ್ರೀ ಕಾದಂಬರಿಕಾರರ ಸಂಖ್ಯೆ ಹೆಚ್ಚು. ನಾಟಕ, ಕಾವ್ಯ, ವಿಮರ್ಶೆ, ಮತ್ತು ಲಲಿತ ಪ್ರಬಂಧಗಳು ಅವರನ್ನು ಆಕರ್ಷಿಸಿಲ್ಲ. ಹತ್ತೊಂಬತ್ತನೇ ಶತಮಾನದಲ್ಲಿ ನಾವು ಸ್ತ್ರೀ ಕಾದಂಬರಿಕಾರರ ಒಂದು ದೊಡ್ಡ ಗುಂಪನ್ನೇ ಕಾಣುತ್ತೇವೆ. ಅವರಲ್ಲಿ, ಜೇನ್ ಆಸ್ಟೆನ್, ಜಾರ್ಜ್ ಇಲಿಯಟ್, ಚಾರ್ಲಟ್ ಬ್ರೊಂಟೆ, ಎಮಿಲಿ ಬ್ರೊಂಟೆ, ಮಿಸೆಸ್ ಗಾಸ್ಕೆಲ್ ಇವರು ಪ್ರಮುಖರೆಂದು ಹೇಳಬಹುದು. ಇಪ್ಪತ್ತನೆಯ ಶತಮಾನದಲ್ಲಿ ವರ್ಜಿನಿಯಾ ವೂಲ್ಫ್, ಎಲಿಜಬೆಥ್ ಬಾವನ್ ಮತ್ತು ಆಲಿಸ್ ಮರ್ಡೋಕ್, ಜೊಯ್ಸ್ ಕೇರೀ ತಮ್ಮದೇ ಆದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇದಕ್ಕೆ ಕಾರಣವೇನೋ ತಿಳಿಯದು. ಬಹುಶಃ ಕಾದಂಬರಿಯ ವ್ಯಾಪಕತೆ ಮತ್ತು ಪಾತ್ರಪೋಷಣೆಗೆ ಅದು ಕೊಡುವ ಅವಕಾಶವಿರಬಹುದು. ಹೆಣ್ಣಿಗೆ ಯಾವುದೇ ಪಾತ್ರವನ್ನು ಅರಿಯುವುದು ಸುಲಭಸಾಧ್ಯವೇನೋ ಎಂದೆನಿಸುತ್ತದೆ. ಅದು ಒಂದು ಸ್ವಪರಿಪೂರ್ಣವಾದ ಸಾಹಿತ್ಯರೂಪವಾಗಿದೆ. ಆದರೆ ನಾಟಕವು ಹಾಗಲ್ಲ. ನಾಟಕ ಮತ್ತು ರಂಗಭೂಮಿಗಳು ಪರಸ್ಪರ ಪೂರಕವಾಗಿವೆ. ಅದೇನೇ ಇರಲಿ, ಕಾದಂಬರಿಯ ವ್ಯಾಪಕ ಸ್ವರೂಪವೇ ಅದರ ಯಶಸ್ಸಿನ ಗುಟ್ಟು ಎಂದು ಹೇಳಬಹುದು.

ರಾಣಿ ವಿಕ್ಟೋರಿಯಾಳ ಕಾಲದಲ್ಲಿ ಔದ್ಯೋಗಿಕ ಕ್ರಾಂತಿಯಿಂದ ಉದ್ಭವಿಸಿದ ಅನೇಕ ಸಾಮಾಜಿಕ ಸಮಸ್ಯೆಗಳ ಕೂಲಂಕಷ ಚಿತ್ರಣಕ್ಕೆ ಕಾದಂಬರಿಯು ಬಹು ಉಪಯುಕ್ತವಾಗಿ ಕಂಡಿತು. ಚಾರ್ಲ್ಸ್ ಡಿಕನ್ಸ್ ಮತ್ತು ಥ್ಯಾಕರೆ ಕಾದಂಬರಿಯನ್ನು

ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಮತ್ತು ಅನ್ಯಾಯಗಳನ್ನು ಬಯಲಿಗೆಳೆಯಲು ಉಪಯೋಗಿಸಿಕೊಂಡರು. ಸಾಮಾಜಿಕ ಪ್ರಜ್ಞೆಯನ್ನು ಚಿತ್ರಿಸುವಲ್ಲಿ ಕಾದಂಬರಿ ಆಡಿದ ಪಾತ್ರ ದೊಡ್ಡದು. ಡಿಕನ್ಸನು ತನ್ನ ಎಲ್ಲ ಕಾದಂಬರಿಗಳಲ್ಲಿ—'ಆಲಿವರ್ ಟ್ವಿಸ್ಟ್', 'ಡೇವಿಡ್ ಕಾಪರ್‌ಫೀಲ್ಡ್' 'ಪಿಕವಿಕ್ ಪೇಪರ್ಸ್'—ಏಕ ನಿರೂಪಣಾ ತಂತ್ರವನ್ನು ಉಪಯೋಗಿಸಿದ್ದಾನೆ. ಥ್ಯಾಕರೆ ಮಾತ್ರ ಸಂವಾದಗಳ ಮೂಲಕ ಕಥಾವಸ್ತುವನ್ನು ನಿರೂಪಿಸಿದ್ದಾನೆ. ತಂತ್ರಗಳ ದೃಷ್ಟಿಯಿಂದ ನೋಡಿದರೆ ಇವರೀರ್ವರೂ ಸಾಂಪ್ರದಾಯಿಗಳೆಂದೇ ಹೇಳಬೇಕು. ಡಿಕನ್ಸನ ಹಿರಿಮೆಯನ್ನು ನಾವು ಕಾಣುವುದು ಜೀವನದ ಸೂಕ್ಷ್ಮ ಆಗುಹೋಗುಗಳನ್ನು ಚಿತ್ರಿಸುವಲ್ಲಿ ವಿನಾ ತಂತ್ರದ ನಾವೀನ್ಯದಲ್ಲಿ ಅಲ್ಲ. ನಂತರ ಗಾಲ್ಸ್‌ವರ್ದಿ ವಿಕ್ಟೋರಿಯನ್ನರ ಸ್ವಸಂತುಷ್ಟಿ, ಸ್ವತಂತುಷ್ಟಿಯಿಂದ ಉದ್ಭವಿಸುವ ಪರದುಃಖದ ವಿಷಯದಲ್ಲಿ ನಿರುತ್ಸಾಹ ಎಲ್ಲವನ್ನೂ ಲಾಭದಾಯಕ ದೃಷ್ಟಿಯಿಂದ ನೋಡುವ ಪ್ರವೃತ್ತಿಗಳನ್ನು ತನ್ನ ಬೃಹತ್ ಕಾದಂಬರಿ 'ಫೋರ್‌ಸೈಟ್ ಸಾಗಾ'ದಲ್ಲಿ ಚಿತ್ರಿಸಿದ್ದಾನೆ. ಇದಕ್ಕೂ ಮೊದಲು, ನಾವು ಹಾರ್ಡಿಯ ಕಾದಂಬರಿಗಳಲ್ಲಿ ಮಾನವ ಜೀವನದ ದುರಂತ ಚಿತ್ರಣವು ಬಹು ಹೃದಯಂಗಮವಾಗಿ ಬಂದಿರುವುದನ್ನು ಕಾಣುತ್ತೇವೆ. ಕಾದಂಬರಿಯು ಭಾವನೆಗಳನ್ನು ಕುದುರಿಸಿ ಬಹು ಎತ್ತರದ ಮಟ್ಟಕ್ಕೆ ಒಯ್ಯಬಹುದೆಂಬುದಕ್ಕೆ ಹಾರ್ಡಿಯ ಕಾದಂಬರಿಗಳು ನಿದರ್ಶನಗಳು.

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮನೋವಿಜ್ಞಾನದಲ್ಲಿ ಆದ ಪ್ರಗತಿ ಸಾಹಿತ್ಯದ ಮೇಲೆ ದೊಡ್ಡ ಪರಿಣಾಮವನ್ನು ಬೀರಿತೆಂಬ ಅಂಶವನ್ನು ನಾವಿಲ್ಲಿ ಅವಶ್ಯವಾಗಿ ಗಮನಿಸಬೇಕು. ಈ ಪರಿಣಾಮವನ್ನು ನಾವು ಕಾದಂಬರಿಯಲ್ಲಿಯೇ ಹೆಚ್ಚಾಗಿ ಕಾಣುತ್ತೇವೆ. ಈ ದಿಶೆಯಲ್ಲಿ ಪ್ರಥಮವಾಗಿ ಹೆಜ್ಜೆ ಇಟ್ಟವಳೆಂದರೆ ಜಾರ್ಜ್ ಇಲಿಯಟ್ ಎಂದು ಹೇಳಬಹುದು. ಆಕೆಯ ಕಾದಂಬರಿಗಳಲ್ಲಿ—'ಸೈಲಾಸ್ ಮಾರ್ನರ್' ಮತ್ತು –'ದಿ ಮಿಲ್ ಆನ್ ದಿ ಫ್ಲಾಸ್' –ಹೊಸತನ್ನು ಕಾಣುವುದೆಂದರೆ– ಪಾತ್ರಗಳ ಮನೋವಿಶ್ಲೇಷಣೆ ಮತ್ತು ಭಾವನೆಗಳ ಸೂಕ್ಷ್ಮ ಪರಿಶೀಲನೆ– ಒಂದು ಮಾತ್ರದ ಕೃತಿಗಳನ್ನು ಮನೋವಿಜ್ಞಾನದ ಸಹಾಯದಿಂದ ಅಳೆಯುವುದು ಮತ್ತು ಅರ್ಥೈಸುವುದು. ಜಾಗ್ರತ ಅವಸ್ಥೆಯಷ್ಟೇ ಆತನ ಕೃತಿಗಳಿಗೆ ಪ್ರಚೋದನೆ ನೀಡಿರುವದಿಲ್ಲ, ಸುಪ್ತಾವಸ್ಥೆಯೂ ಅಷ್ಟೇ ಪ್ರಚೋದನೆಯನ್ನು ನೀಡಿರುತ್ತದೆ. ಈ ಸಂದರ್ಭದಲ್ಲಿ, ಕಾದಂಬರಿಯಲ್ಲಿ ಪಾತ್ರಪ್ರೇಷಣೆಯ ಅರ್ಥವನ್ನೇ ಬದಲಿಸಬೇಕಾಯಿತು. ಆಧುನಿಕ ಕಾದಂಬರಿಗಳ ಗುರಿ ಈ ಸುಪ್ತ ಮತ್ತು ಜಾಗ್ರತ ಮನಸ್ಸಿನ ಪ್ರವಾಹವನ್ನು ಸೆರೆಹಿಡಿಯುವುದೇ ಆಗಿದೆ. ಅದಕ್ಕನುಗುಣವಾಗಿ ಕಾದಂಬರಿಯ ತಂತ್ರದಲ್ಲಿ ಅನೇಕ ಪ್ರಯೋಗಗಳಾದದ್ದು ಸ್ವಾಭಾವಿಕ. ಈ ದೃಷ್ಟಿಯಲ್ಲಿ ಜೇಮ್ಸ್ ಜಾಯ್ಸನ 'ಯುಲಿಸಸ್' ಕಾದಂಬರಿ ಒಂದು ಮಹತ್ತ್ವದ ಪ್ರಯೋಗವೆಂದು ಹೇಳಬಹುದು. ಬದುಕಿನ ಸೂಕ್ಷ್ಮ ಹಾಗೂ ಮಹತ್ತರ ಸಮ-

ಸ್ಯೆಗಳನ್ನು ಒಳಗೊಳ್ಳುವ ಕಾದಂಬರಿ ಅಷ್ಟೇ ಸೂಕ್ಷ್ಮ ಹಾಗೂ ಮಹತ್ತರ ತಾಂತ್ರಿಕ ಸಾಧನೆಗಳನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ವಸ್ತು ಮತ್ತು ತಂತ್ರ-ಗಳ ನಡುವೆ ಅನ್ಯೋನ್ಯತೆ ಹೆಚ್ಚು. ಹೆನ್ರಿ ಜೇಮ್ಸನ ಕಾದಂಬರಿಗಳಲ್ಲಿ 'ದಿ ಅಂಬಾ-ಸಡರ್' ತಾಂತ್ರಿಕ ಕೌಶಲ್ಯವನ್ನೇನೋ ಕಾಣುತ್ತೇವೆ. ಆದರೆ ಆ ಕೌಶಲ್ಯದ ಬಿಗಿ-ಯಾದ ಚೌಕಟ್ಟಿನೊಳಗಿಂದ ವಸ್ತುವಿನ ಬಹುಭಾಗ ಹೊರಗುಳಿಯುವದನ್ನು ನಾವು ನೋಡುತ್ತೇವೆ. ಅವನದು ಚೆನ್ನಾಗಿ ರೂಪಿತ ಕಾದಂಬರಿ, ಆದರೆ ಚೆನ್ನಾಗಿ ಬರೆದ ಕಾದಂಬರಿಯಲ್ಲ. ಈ ನ್ಯೂನತೆಯನ್ನು ನಾವು ಜೇಮ್ಸ್ ಜೊಯ್ಸನ ಕಾದಂಬರಿಯಲ್ಲಿ ಕಾಣುವದಿಲ್ಲ. ಆತನ ಹವ್ಯಾಸೀ ಪ್ರಯೋಗದಲ್ಲಿ ವಸ್ತು ಮತ್ತು ತಂತ್ರಗಳ ನಡುವಿನ ಸಮನ್ವಯವನ್ನೂ ಅನ್ಯೋನ್ಯತೆಯನ್ನೂ ಕಾಣುತ್ತೇವೆ. ವ್ಹರ್ಜಿನಿಯಾ ವೂಲ್ಫಳಾದರೂ ತನ್ನ ಕಾದಂಬರಿ– 'ದಿ ವೇವ್ಸ್' ಮತ್ತು 'ಮಿಸೆಸ್ ಡಾಲವೆ'ಗಳಲ್ಲಿ ಅದೇ ತಂತ್ರವನ್ನು ಉಪಯೋಗಿಸಿದ್ದಾಳೆ. ಭೂತವೆಲ್ಲ ಒಂದು ಅಖಂಡವಾದ ನೆನಪಿನ ಸರಪಣಿಯಲ್ಲ. ಅದನ್ನು ನೆನೆಯುತ್ತಿರುವಂತೆಯೇ ವರ್ತಮಾನವೂ ಚಲಿಸುತ್ತಿರು ತ್ತದೆ. ಭೂತವು ಚಲಿಸುವ ವರ್ತಮಾನದ ಜೊತೆಗೆ ಸಂಬಂಧ ಹೊಂದಿರುವಂತಹದು. ಭೂತ–ವರ್ತಮಾನಗಳೆರಡೂ ಕಾದಂಬರಿಯ ಅನುಭವಕ್ಕೆ ಏಕಕಾಲಕ್ಕೆ ಒದಗಿಬರು ತ್ತವೆ. ಆಧುನಿಕ ಕಾದಂಬರಿಕಾರರಾದ ಡಿ. ಎಚ್. ಲಾರೆನ್ಸ್, ಎಚ್. ಜಿ. ವೆಲ್ಸ್, ಗ್ರಾಹಾಮ್ ಗ್ರೀನ್, ಇ. ಎಮ್. ಫಾಸ್ಟರ್ ಇವರು ಕಾದಂಬರಿಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಎಚ್. ಜಿ. ವೆಲ್ಸ್ ವಿಜ್ಞಾನದ ಅನೇಕ ಪ್ರಯೋಗಗಳನ್ನು ತನ್ನ ಕಾದಂಬರಿಯ ಕಥಾವಸ್ತುವನ್ನಾಗಿ ಆರಿಸಿಕೊಂಡಿ-ದ್ದಾನೆ. ಆತನು ಬರೆದದ್ದು ವೈಜ್ಞಾನಿಕ ಸಾಹಿತ್ಯ.

ರಿಚರ್ಡ್‌ಸನ್ನನ 'ಪಾಮೆಲಾ' ಮತ್ತು ಜೇಮ್ಸ್ ಜೊಯ್ಸನ 'ಯುಲಿಸಿಸ್' ಇವುಗಳ ನಡುವಿನ ಅಂತರ ದೊಡ್ಡದು. ಕಾದಂಬರಿಯು ಆ ಅಂತರವನ್ನು ನಡೆದುಬಂದಿದೆ. ವಿಜ್ಞಾನದಲ್ಲಿ ಪ್ರಯೋಗಕ್ಕೆ ಕೊನೆಯೇ ಇಲ್ಲವೆಂಬಂತೆ ಕಾದಂಬರಿಯ ತಂತ್ರದಲ್ಲಿಯೂ ಕೊನೆಯೇ ಇಲ್ಲವೇನೋ ಎಂದೆನಿಸುತ್ತದೆ. ವಸ್ತು, ನಿರೂಪಣೆ ಮತ್ತು ಸಂಘಟನೆ ಇವುಗಳ ವಿಷಯದಲ್ಲಿ ಕಾದಂಬರಿಯಲ್ಲಿ ನಡೆದಷ್ಟು ಪ್ರಯೋಗಗಳು ಉಳಿದಾವ ಸಾಹಿತ್ಯ ರೂಪದಲ್ಲಿಯೂ ನಡೆದಿಲ್ಲವೆಂದು ಹೇಳಬಹುದು. ಕತೆ ಹೇಳುವುದೇ ಕಾದಂಬರಿಯ ಜೀವಾಳ. ಅದನ್ನು ಹೇಗೆ ಹೇಳಿದರೆ ತನ್ನ ಕಥಾವಸ್ತುವೆಲ್ಲ ಓದುಗನಿಗೆ ತಿಳಿಯುವುದು ಎಂಬುದೇ ಕಾದಂಬರಿ-ಕಾರನ ಸಮಸ್ಯೆ. ಕಾದಂಬರಿಯನ್ನು ಬರೆಯಲು ಕುಳಿತ ಬಾಣನಿಗೂ ಇದೇ ಪ್ರಶ್ನೆ; ಈಗಿನ ಕಾದಂಬರಿಕಾರನಿಗೂ ಅದೇ ಪ್ರಶ್ನೆ. ಆ ಪ್ರಶ್ನೆಗೆ ಪ್ರತಿಯೊಬ್ಬ ಕಾದಂಬರಿ-ಕಾರನೂ ತನ್ನದೇ ಆದ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ. ಅಂತೆಯೇ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಯೋಗಕ್ಕೆ ಬಹಳಷ್ಟು ಆಸ್ಪದವಿದೆ.

ಅಮೇರಿಕನ್ ಕಾದಂಬರಿ

—ಶಂ. ಮೊಕಾಶಿ ಪುಣೇಕರ

ಇಂಗ್ಲಂಡಿನಿಂದ ಅಮೇರಿಕೆಗೆ ವಸಾಹತುಗಾರರು ಬಂದು ನೆಲೆಸಿದ್ದು ತಮ್ಮ ತಮ್ಮ ಧರ್ಮರಕ್ಷಣೆಗಾಗಿ; ಇಲ್ಲವೆ ಇಂಗ್ಲಂಡಿನಲ್ಲಿ ಹೊಟ್ಟೆಬಟ್ಟೆಗೆ ಕೊರತೆಯುಂಟಾಗಿ, ಪೂರ್ವ ಅಮೇರಿಕೆಯ ಭಾಗಗಳು ಮೊದಲು ವಸಾಹತುಗಳಾದವು. ಇವುಗಳಲ್ಲಿ ನ್ಯೂ ಇಂಗ್ಲಂಡ್ ಎಂಬ ಹೆಸರಿನ ಪ್ರಾಜ್ಯವು ತನ್ನ ಕಠೋರ ಅಸಹಿಷ್ಣು ಧಾರ್ಮಿಕ ಹಾಗೂ ನೈತಿಕ ಬಂಧನಗಳಿಗಾಗಿ ಹೆಸರಾಯಿತು. ಅಮೇರಿಕೆಯಲ್ಲಿ ವಸಾಹತುಗಾರರು ಕೆಂಪು ಇಂಡಿಯನ್ನರ ಜೊತೆಗೆ ಹೋರಾಡಬೇಕಾಯಿತು. ಅವರು ತಂದ ಯಾಂತ್ರೀಕರಣವು, ವಶಪಡಿಸಿಕೊಂಡ ಭೂಭಾಗಗಳು, ಕೆಂಪು ಇಂಡಿಯನ್ನರ ರೋಷಕ್ಕೆ ಪಾತ್ರವಾದವು. ಈ ಹೋರಾಟದಲ್ಲಿ ಹೆಸರು ಪಡೆದ ವಸಾಹತುಗಾರರು Wild West ರೀತಿಯ ಕತೆಗಳ ನಾಯಕರಾದರು. ಇಂಥ ಕತೆಗಳು ಇಂದೂ ಲೋಕಪ್ರಿಯವಾಗಿವೆ. ಜೊತೆಗೆ ಅಮೇರಿಕೆಯ ಬಂಗಾರದ ಹೊಳೆಗಳು ಆಸೆಬುರುಕರನ್ನು ಆಕರ್ಷಿಸಿದವು. ಇಂಥ ನೆಲಗಳನ್ನು ವಶಪಡಿಸಿಕೊಳ್ಳುವವರ ಕಾಡುಜೀವನ ಕಾದಂಬರಿಗೆ ಇನ್ನೊಂದು ವಿಷಯವನ್ನು ಒದಗಿಸಿತು. ಅಮೇರಿಕೆಯ ವಸಾಹತುಗಾರರು ತಮ್ಮ ಹೊಲಗಳಲ್ಲಿ ಕೆಲಸ ಮಾಡಲು ಆಫ್ರಿಕೆಯ ನಿಗ್ರೋ ಗುಲಾಮರನ್ನು ಕೊಂಡೊಯ್ದರು. ಅಮೇರಿಕೆಯ ದಕ್ಷಿಣ ಭಾಗದಲ್ಲಿ ಒಕ್ಕಲುತನದ ಮೇಲೆ ನಿಂತ ಸಿರಿವಂತರ ಕೈಯಲ್ಲಿ ನಿಗ್ರೋ ಜನರು ದುಡಿಯಬೇಕಾದ್ದರಿಂದ, ಅವರನ್ನು ಸ್ವತಂತ್ರಗೊಳಿಸುವ ಹವ್ಯಾಸಕ್ಕೆ ಬಿದ್ದ ಉತ್ತರೀಯರಿಗೂ ಅವರಿಗೂ ಹುಟ್ಟಿದ ದ್ವೇಷವು ಇನ್ನೊಂದು ವಿಷಯವಾಯಿತು. ಹೀಗೆ ಅಮೇರಿಕೆಯ ಐತಿಹಾಸಿಕ ಜೀವನ ಕೇವಲ ೩-೪ ನೂರು ವರ್ಷಗಳದ್ದಾದರು ಕೂಡ ಕನಸುಗಾರಿಕೆ, ಪೌರಾಣಿಕತೆಗಳಿಂದ ಅದು ತುಂಬಿ ತುಳುಕುತ್ತದೆ. ಈ ಹಿನ್ನೆಲೆಯನ್ನು ಅರಿಯದವರು ಅಮೇರಿಕೆಯ ಕಾದಂಬರೀ ಪ್ರಪಂಚವನ್ನು ತೆಗಳುತ್ತಾರೆ. ಆದರೆ ಇಪ್ಪತ್ತನೆಯ ಶತಮಾನದಲ್ಲೂ ಈ ಕನಸುಗಾರಿಕೆ ಆಧುನಿಕ ಕಾದಂಬರಿಗಳಿಗೂ ಹಿನ್ನೆಲೆಯಾಗಿದೆಯೆಂಬುದನ್ನು ಮರೆಯಬಾರದು. ಇಂಗ್ಲಿಷ್ ಕಾದಂಬರಿಗೂ ಅಮೇರಿಕನ್ ಕಾದಂಬರಿಗೂ ಲಾಕ್ಷಣಿಕ ವ್ಯತ್ಯಾಸವಿರುವುದು ಈ ಕನಸುಗಾರಿಕೆಯೆ. ಆದರೆ ಅಮೇರಿಕೆಯ ತಾಂತ್ರಿಕ ಹಾಗೂ ಧನಿಕ ಯಶಸ್ಸಿಗೂ ಈ ಕನಸುಗಾರಿಕೆಗೂ ಎಂದಿಗಾದರೂ ವಿರೋಧಾಭಾಸವಿದೆ. ಆದ್ದರಿಂದ ಪುರಾಣವಾಗಬೇಕಾದದ್ದು ಅಪರಿಪೂರ್ಣ ಇಲ್ಲವೆ ಅರ್ಧಪೂರ್ಣ ಹಳಕುಗಳಾಗಿ ಈ ಕನಸುಗಾರಿಕೆ ವ್ಯಕ್ತವಾಯಿತು.

ಅಮೇರಿಕೆಯ ಧನಿಕ ಸಂಪ್ರದಾಯವು ಸುಮಾರು ಇನ್ನೂರು ವರ್ಷಗಳ ಇತಿಹಾಸ ಪಡೆದಿದೆ. ವಿಶೇಷತಃ ಬಂಗಾರದ ಹುಡುಕಾಟವು ಯುರೋಪದ ಇತರ ರಾಷ್ಟ್ರೀಕರನ್ನೂ ಅಮೇರಿಕೆಗೆ ಸೆಳೆದು ತಂದಿತು. ಇಂತು ಬಹು – ರಾಷ್ಟ್ರಿಕತೆ ಅಮೇ-ರಿಕೆಯ ಏಕತ್ವಕ್ಕೆ ಒಪ್ಪುಗೊಳ್ಳಲು ಹಲವಾರು ಸಂಸ್ಥೆ–ಪದ್ಧತಿಗಳು ಕಾರಣವಾದವು. ಧನ–ಸಂಪ್ರದಾಯ, ಪ್ರಜಾಪ್ರಭುತ್ವ, ಪತ್ರಿಕೋದ್ಯಮ, ಜಾಹೀರಾತು, ಸರ್ವ-ಸಹಿಷ್ಣುತೆ, ಭಾಷೆ ಇವೇ ಮುಂತಾದವುಗಳು. ಯಾವ ರಾಷ್ಟ್ರೀಕನೇ ಆಗಲಿ, ಈ ಪ್ರಚಂಡ ಯಂತ್ರದೊಳಗೆ ಹೊಕ್ಕನೆಂದರೆ ಕೆಲವೇ ವರ್ಷಗಳಲ್ಲಿ ಅವನು ಅಮೇರಿಕನ್ ಜೀವನದಲ್ಲಿ ಒಂದಾಗುತ್ತಾನೆಂಬುದು ಸರ್ವಸಾಮಾನ್ಯ ಅನುಭವ. ಇದಕ್ಕೆ ಕೆಂಪು ತೊಗಲು ಬೇಕೆಂಬುದು ನಿಜ. ಇದೊಂದು ಮಾತು ಬಿಟ್ಟರೆ, ಉಳಿದೆಲ್ಲ ವಿಷಯಗಳಲ್ಲಿ ಸಮರಸೀಕರಣದ ವಿಧಾನವು ಅಮೇರಿಕನ್ ಯಂತ್ರದಲ್ಲಿ ಪರಿಪೂರ್ಣಗೊಂಡಿದೆ-ಯೆಂದೇ ಹೇಳಬೇಕು. ಭಾರತದ ಇತಿಹಾಸವಾದರೂ ತುಸು ಮಟ್ಟಿಗೆ ಹೀಗಿದ್ದರೂ ಕೂಡ, ನಮ್ಮ ಜಾತಿ–ಪದ್ಧತಿಯು ‘ ಸಹಿಷ್ಣುತೆ ’, ಹಾಗೂ ‘ ಸ್ವತಂತ್ರ ಅಸ್ತಿತ್ವ ’ದ ತಳಹದಿಯ ಮೇಲೆ ಹಾಗೂ ಒಂದು ತಾತ್ವಿಕತೆಯ ಮೇಲೆ ಇದ್ದ ಮೂಲಕ ನಮ್ಮಲ್ಲಿ ಭೇದದ ಜೊತೆಗೆ ಅಭೇದವು ಕಲ್ಪಿಸಲ್ಪಟ್ಟಿತು. ನಮ್ಮದೊಂದು ರೀತಿ; ಅಮೇರಿಕೆಯ-ದೊಂದು ರೀತಿ.

ಅಮೇರಿಕೆ ೧೭೭೬ ರಲ್ಲಿ ಇಂಗ್ಲಂಡಿನ ಸುಂಕ ಧೋರಣೆಯ ವಿರುದ್ಧ ಬಂಡಾಯ ಹೂಡಿ ಸ್ವಾತಂತ್ರ್ಯ ಸಾರಿತು. ಈ ವರ್ಷಕ್ಕಿಂತ ಮುಂಚೆ ಅಲ್ಲಿ ಸಾಹಿತ್ಯವಿತ್ತಾದರೂ ಅದು ಮುಖ್ಯತಃ ತನ್ನ ಜೀವನವನ್ನು ಸುಕರಗೊಳಿಸುವ ಹವ್ಯಾಸದ ಪ್ಯಾಂಫ್ಲೆಟ್ ರೀತಿಯ ಸಾಹಿತ್ಯವಾಗಿತ್ತು. ವಾಶಿಂಗ್ಟನ್ ಐರ್‌ವಿಂಗನನ್ನು ಅಮೇರಿಕೆಯ ಪ್ರಥಮ ಲೇಖಕನೆಂದು ಒಪ್ಪಿದರೂ ಜೇಮ್ಸ್ ಫೆನಿಮೋರ್ ಕೂಪರ (೧೭೮೯–೧೮೫೧) ನ ಕಾದಂಬರಿಗಳು ಅಮೇರಿಕೆಯ ಗಡಿಪ್ರಾಂತ್ಯದ ಜೀವನದ ಪುರಾಣಮಯ ಚರಿತ್ರೆ-ಯನ್ನು ಹೆಚ್ಚು ವಿಶದಗೊಳಿಸಿ ರಾಷ್ಟ್ರಿಕ ಕಾದಂಬರಿಯ ತಳಹದಿ ಹಾಕಿಕೊಡುತ್ತವೆ. ಕೂಪರನು ವಸಾಹತುಗಾರರ ಧೈರ್ಯ–ಸಾಹಸ, ಪಶ್ಚಿಮ ಪ್ರಾಂತ್ಯದಲ್ಲಿ ಅವರು ಗೈದ ಯುದ್ಧ, ಅಡವಿಗಳನ್ನು ಕಡಿದು ನೆಲ ಸಾಗುಮಾಡಿದ್ದು, ಮುಂತಾದ ವಿಷಯುಗಳ ಬಗ್ಗೆ ರಂಜಕ ಕತೆಗಳನ್ನು ಚಿತ್ರಿಸಿದ್ದಾನೆ. ‘ ಪಯೋನಿಯರ್ಸ್ ’, ‘ ದ ಲಾಸ್ಟ್ ಆಫ್ ದ ಮೋಹಿಕನ್ಸ್’, ‘ ದ ಪಾಥ್–ಫೈಂಡರ್ ’, ‘ ದ ಡಿಯರ್ ಸ್ಲೇಯರ್ ’ ಇವು ಇವನ ಹೆಸರಾದ ಕಾದಂಬರಿಗಳು. ‘ ನ್ಯಾಟ್ ’ ಎಂಬ ಹೆಸರಿನ ಕೆಂದು ಇಂಡಿಯನ್ನನ ವಿಧವಿಧ ಸಾಹಸಗಳನ್ನು ಉತ್ಸಾಹದಿಂದ ವರ್ಣಿಸಿ ಜಗತ್ತಿನ ವೀರರೆಲ್ಲ ಒಂದೆ ಜಾತಿ ಎಂದು ತೋರಿಸಿದ್ದಾನೆ. ನಾಗರಿಕತೆ ಅಡವಿಯನ್ನು ಹೊಕ್ಕು ಹಳೆಯ ಜೀವನವನ್ನು ಬಟಾಬಯಲುಗೊಳಿಸಿದ ಮೋಹಕ ಇತಿಹಾಸದ ಹಂತಗಳೆಲ್ಲ ಇಲ್ಲಿ ಚಿತ್ರಿತವಾಗಿವೆ.

ಎಡ್ಗರ್ ಅಲನ್ ಪೋ (೧೮೦೯–೪೯) ಬಂದೊಡನೆ ಅಮೇರಿಕನ್ ಕಾದಂಬರಿ

ಕಥಾಸಾಹಿತ್ಯಕ್ಕೆ ಸ್ವಾತಂತ್ರ್ಯದ ಹೊಸ ಹಿರಗು ಬಂದಿತು. ಅಮೇರಿಕನ್ ಲೇಖಕರು ವಿಶ್ವಕೀರ್ತಿಯನ್ನು ಸಾಧಿಸುವ ಸ್ಥಿತಿಯಲ್ಲಿ ಇಲ್ಲದಾಗ ಇಂಗ್ಲೆಂಡ್, ಫ್ರಾನ್ಸ್‌ಗಳ ವರೆಗೆ ತನ್ನ ಕೀರ್ತಿಧ್ವಜವನ್ನು ಏರಿಸಿದ ಸಾಹಸ ಪೋನದು. ಇವನ ಮಹತ್ವ ಇತ್ತೀಚೆಗೆ ಕಡಿಮೆಯಾಗಿದೆ. ಒಂದು ಕಾಲಕ್ಕೆ 'ಸಣ್ಣ ಕತೆಯ ಜನಕ' ನೆಂಬ ಕೀರ್ತಿ, ಪತ್ತೇದಾರಿ ಕತೆಗಳ ಜನಕನೆಂಬ ಕೀರ್ತಿ ಇವನಿಗೆ ಸಲ್ಲುತ್ತಿತ್ತು. ಇವನು ಕವಿಯೂ ಹೌದು. ತನ್ನ ಕವಿತೆಯ ಬಗ್ಗೆ ಅವಾಸ್ತವ ಅಭಿಮಾನ ಇವನಲ್ಲಿ ಇತ್ತು. ಜೊತೆಗೆ ಇವನ ಜೀವನ ತುಸು ಅವಿಚಾರಿಯಾಗಿತ್ತು. ಈ ಕಾರಣಗಳ ಮೂಲಕ ಇವನ ಯಶಸ್ಸಿನ ಸರಿಯಾದ ಮೌಲ್ಯಮಾಪನ ಇಂದಿಗೂ ಆಗಿಲ್ಲವೆಂದರೆ ಓದುಗರಿಗೆ ಆಶ್ಚರ್ಯವಾಗಬಹುದು. ಕಥಾಸಾಹಿತ್ಯಕ್ಕೆ ಈತನು ಗುರುಸ್ಥಾನದಲ್ಲಿ ಇದ್ದವನು. ಆದರೆ ಇವನಿಗೆ ಮರಣೋತ್ತರ ಜೀವನದಲ್ಲಿ ವಿಶ್ವಾಸವಿತ್ತು. ಆದ್ದರಿಂದ ಇವನ ಅತಿ ಬೌದ್ಧಿಕತೆ, ಸೂಕ್ಷ್ಮ ಮನೋವಿಶ್ಲೇಷಣೆ, ಮುಂತಾದವು ಫ್ರೆಂಚ್ ಓದುಗರಿಗೆ ಹೆಚ್ಚು ತಿಳಿದವೇ ಹೊರತು ಅಮೇರಿಕನ್ - ಇಂಗ್ಲಿಷ್ ಓದುಗರಿಗೆ ಅಷ್ಟೊಂದು ಹಿಡಿಸಲಿಲ್ಲ. ಇವನ ಕತೆಗಳ ಬಗ್ಗೆ ಸದ್ಯಕ್ಕೆ ಬರೆಯಲು ಶಕ್ಯವಿಲ್ಲ. 'ಆರ್ಥರ್ ಗಾರ್ಡನ್ ಫಿಮ್' ಎಂಬ ಚಿಕ್ಕ ಕಾದಂಬರಿ ಪಾಪಪ್ರಜ್ಞೆಯ ಸೀಳು-ಮನಸ್ಸಿನ ವಿಸ್ತೀರ್ಣವಾದ ಅಭ್ಯಾಸ. ಪಾಪಪ್ರಜ್ಞೆಯ ಐಹಿಕ - ಅತಿದೈಹಿಕ ಪರಿಣಾಮಗಳನ್ನು ವಿಶ್ಲೇಷಿಸಿ ವಿಶದೀಕರಿಸುವದರಲ್ಲಿ ಇವನದು ಎತ್ತಿದ ಕೈ. ಇವನ ಪ್ರಭಾವವು ಫ್ರೆಂಚ್ ಸಿಂಬಲಿಸ್ಟ ಕವಿಗಳಾದ ಬಾದಲೇರ್, ಮಲಾರ್ಮೆ ಮುಂತಾದವರ ಮೇಲೆ ಬಹಳವಾಗಿದೆ. ಇವನ ಕತೆಗಳ ಅನುವಾದ ಕನ್ನಡದಲ್ಲಿ ಮೊದಲೇ ಆಗಿದ್ದರೆ ಕನ್ನಡ ಸಾಹಿತ್ಯಕ್ಕೆ ತಕ್ಕ ಮಾರ್ಗದರ್ಶನ ದೊರಕುತ್ತಿತ್ತು. ಶ್ರೀ ಗೋಪಾಲಕೃಷ್ಣ ಅಡಿಗರು 'ದ ಗೋಲ್ಡನ್ ಬಗ್'ನ ಅನುವಾದ ಮಾಡಿದ್ದಾರೆಂದು ಕೇಳಿದ್ದೇನೆ. ಇವನು ಕಲೆಗಳಲ್ಲದೆ, 'ಕಥಾರಚನೆಯ ತತ್ತ್ವಗಳು' ಎಂಬ ಅತಿ ಮಹತ್ವದ ಪ್ರಬಂಧವನ್ನು ಬರೆದನು.

ಪೋನಲ್ಲಿ ನೈತಿಕ ಜೀವನದ ಬಗ್ಗೆ ಇದ್ದ ಭೀತಿ ಕಳಕಳಿಯದಲ್ಲ. ನೈತಿಕ ಪಾಪದ ದುಷ್ಪರಿಣಾಮಗಳನ್ನು ಚಿತ್ರಿಸುವಾಗ ಪೋ ತನಗರಿಯದೆಯೆ ಅದರ ವಿಶದೀಕರಣಕ್ಕೆ ಮಾರುಹೋಗಿ ತಾನೂ ತನ್ಮಯತೆ ಪಡೆದು ಅದರ ಭಾಗವೆಂಬಂತೆ ನಟಿಸುತ್ತಾನೆ. ಕಾರಣ ಅವನನ್ನು ಅಧಃಪತನ (decadence) ದ ಸಂಕೇತ-ವೆಂದಾಗಿ ವಿಮರ್ಶಕರು ಗ್ರಹಿಸುತ್ತಾರೆ. ಇದಕ್ಕೆ ಪೋಷಕವಾಗಿ ಅವನಲ್ಲಿ ಹುಡುಗ-ತನವೂ, ಅವಿಚಾರಿ ಚಂಚಲತನವೂ ಇದ್ದವು. ಇವು ನೀತಿಯ ಬಗ್ಗೆ ಅವನಲ್ಲಿದ್ದ ಅವಿಶ್ವಾಸವೆಂದು ಗ್ರಹಿಸಲಾಗದು. ಆದರೆ ಪಾಪದ ಬಗ್ಗೆ ಅವನಲ್ಲಿದ್ದ ಅದರ ಚಿತ್ರಣದಲ್ಲಿ ಅವನು ಪಡೆಯುವ ವಿವಶತೆ, ಪಾಪವನ್ನೇ ಸೌಂದರ್ಯವೆಂದಾಗಿ ಸುಲಭವಾಗಿ ಅವನು ಗ್ರಹಿಸುವ ರೀತಿ, ಈ ಕಾರಣಗಳೇ ಅವನನ್ನು ಅಮೇರಿಕೆಯನ್ನು ಪ್ರತಿನಿಧಿಸುವ ಕಾರ್ಯದಲ್ಲಿ ಅಯಶಸ್ವಿಗೊಳಿಸಿದವು. ತದ್ವಿರುದ್ಧವಾಗಿ

ನಂತರ ಬಂದ ನೇಥನಿಯಲ್ ಹಾಥಾರ್ನ್ (೧೮೦೪–೧೮೬೪) ನ್ಯೂ ಇಂಗ್ಲೆಂಡ್ ಪ್ರಾಂತ್ಯದ ನೈತಿಕ ಕಟ್ಟುನಿಟ್ಟುಗಳ ಯಥಾರ್ಥ ಚಿತ್ರಣವನ್ನು ತನ್ನ ಹೃದಯದ ನೈತಿಕ ಸಹಾನುಭೂತಿಯಿಂದ ಎರೆದು, ಹೆಚ್ಚು ಮಾನವೀಯ ಕಾದಂಬರಿಗಳನ್ನು ಬರೆದನು. ಪೋನ ಬೌದ್ಧಿಕತೆ ಹಾಥಾರ್ನನಲ್ಲಿ ಇಲ್ಲ, ಅದರ ಬದಲು ಜೀವನಪರ ಸಹಾನುಭೂತಿ, ನೈಜ ಕ್ರಿಶ್ಚಿಯನ್ ತತ್ತ್ವದ ಆಶ್ರಯ ಇವು ಇವನಲ್ಲಿ ಹೆಚ್ಚು. ಪೋ ತನ್ನ ಬಡತನದ ಮೂಲಕ ತನ್ನ ಬುದ್ಧಿಯನ್ನು ಮಿತಿ ಮೀರಿ ದುಡಿಸಿದ. ಹಾಥಾರ್ನ್ ಕೆಲವೇ ಕಾದಂಬರಿಗಳನ್ನು ಬರೆದರೂ ಕಲೆಗಾರಿಕೆಯಿಂದ ಬರೆದ.

ಹಾಥಾರ್ನನನ್ನು ಆ ಕಾಲಕ್ಕೆ ಮುಂದೆ ಬಂದ ಇಮರ್ಸನ್, ಥರೋರಂಥ, ಅಧಿದೈವಿಕವಾದಿಗಳಲ್ಲಿ ಎಣಿಸಲಾಗುತ್ತದೆ. ಇವರಿಗೆ ಬೋಸ್ಟನ್ ಬ್ರಾಹ್ಮಣರೆಂದು ಹೆಸರಿಟ್ಟಿದ್ದಾರೆ. ಇದು ಇಮರ್ಸನ್, ಥರೋರಿಗೆ ಹೆಚ್ಚು ಅನ್ವಯಿಸುತ್ತದೆ. ಇವರು ತುಸುಮಟ್ಟಿಗೆ ಸಂಸ್ಕೃತ ಸಾಹಿತ್ಯ ಓದಿದವರು. ಹಾಥಾರ್ನ್ ಕ್ರಿಸ್ತೀಧರ್ಮದಲ್ಲೆ ತನ್ನ ಮೋಕ್ಷವನ್ನು ಅರಸುವವನು. ನ್ಯೂಇಂಗ್ಲಂಡಿನ ನೈತಿಕ ಶಿಷ್ಟತನಕ್ಕೆ, ಕಟುಟೀಕೆಗೆ, ಡಂಬಾಚಾರಕ್ಕೆ ಬಲಿಯಾದ ಪಾತ್ರಗಳನ್ನವನು, ಚಿತ್ರಿಸಿದ. ಅವರಲ್ಲಿದ್ದ ನೈಜ ಕ್ರಿಸ್ತಗುಣಗಳು ದಾಂಭಿಕರ ಶಿಷ್ಟಾಚಾರವನ್ನು ಮೀರಿ ನಿಲ್ಲುವಂತೆ ತೋರಿಸಿದ ಕ್ರಿಸ್ತ ಸಂಪ್ರದಾಯದಲ್ಲೆ ಪಾಪದ ಶಿಕ್ಷೆಯನ್ನೂ ಅದರ ಪರೀಕ್ಷಾಗುಣವನ್ನು ಆತ ಎತ್ತಿ ತೋರಿಸಿದ. 'ದಿ ಹೌಸ್ ಆಫ್ ಸೆವನ್ ಗೇಬಲ್ಸ್'ನಲ್ಲಿ ಇಂಥ ಚಿತ್ರಣವಿದೆ. ಜಜ್ ಪಿಂಚನ್ ತನ್ನ ಬಳಗದವರಿಗೆ ಮೋಸ ಮಾಡಿ ಅವರ ಆಸ್ತಿ ನುಂಗಿರುತ್ತಾನೆ. ತಲೆಮಾರುಗಳು ಮುಗಿದರೂ ಕೊನೆಗೆ ಅವನ ಅನ್ಯಾಯಕ್ಕೆ ಒಳಪಟ್ಟ ಅನಾಥರು ಮರಳಿ ಆ ಆಸ್ತಿ ಪಡೆದು, ಆ ಮನೆಯ ಪಾಪವನ್ನು ಸ್ವಚ್ಛಗೊಳಿಸಿದ ಚಿತ್ರಣ ಇಲ್ಲಿದೆ. 'ದಿ ಸ್ಕಾರ್ಲೆಟ್ ಲೆಟರ್'ನಲ್ಲಿ ಒಬ್ಬ ಪಾದ್ರಿಗೆ ಬಸಿರಾದ ಮಹಿಳೆ ತನ್ನ ಪಾಪವನ್ನು ತಾನೇ ಸ್ವೀಕರಿಸಿ, ಅವಮಾನಕ್ಕೆ ಈಡಾಗಿ ಕೊನೆಗೆ ಲೋಕಗೌರವ ಪಡೆದ ಕತೆ ಇದೆ. ಇತ್ತೀಚೆಗೆ ಹಾಥಾರ್ನನ ಕಾದಂಬರಿಗಳ ವಿವರವಾದ ಕಲಾವಿಮರ್ಶೆ ವಿಪುಲವಾಗಿ ದೊರೆಯುತ್ತಿದೆ.

ಹರ್ಮಾನ್ ಮೆಲವ್ಹಿಲ್ (೧೮೧೯–೯೧) ನಾವಿಕ ಜೀವನದ ಕಾದಂಬರಿಗಳ ಬಗ್ಗೆ ವಿಶ್ವವಿಖ್ಯಾತನಾಗಿದ್ದಾನೆ. ಹಾಥಾರ್ನನದು ಮಾನವಜೀವನದ ವಿರುದ್ಧ ಹೋರಾಟದ ಚಿತ್ರಣವಾದರೆ ಇವನದು ನಿಸರ್ಗದ ವಿರುದ್ಧ ಹೋರಾಟದಲ್ಲಿ ಮಾನವನ ಸಾಹಸದ ಚಿತ್ರಣ. ಇವನ ಜೀವನವಾದರೂ ಸಾಹಸದ್ದು. ಬ್ಯಾಂಕಿನ ಕೆಲಸ ಬಿಟ್ಟು ೧೮೪೧ ರಲ್ಲಿ ತಿಮಿಂಗಲ ಕೊಲ್ಲುವ ಹಡಗಕ್ಕೆ ನೌಕರಿಗೆ ಸೇರಿದ. ದಕ್ಷಿಣ ಸಾಗರದ ಒಂದು ನಡುಗಡ್ಡೆಯಲ್ಲಿ ಪಾರಾಗಿ, ನರಮಾಂಸಭಕ್ಷಕರ ನಾಡಿನಲ್ಲಿ ಸಿಲುಕಿ ಮೂರು ವರ್ಷಗಳ ನಂತರ ಮರಳಿ ಅಮೇರಿಕೆಗೆ ಬಂದ. ಈ ಅನುಭವಗಳು ಇವನ ಕಾದಂಬರಿಗಳಿಗೆ ಆಹಾರ ಒದಗಿಸಿದವು. ತಿಮಿಂಗಲದ ಬೇಟೆಯ ವಿಶಾಲವಾದ ವರ್ಣನೆಗಳು ಇವುಗಳಲ್ಲಿ ಬರುತ್ತವೆ. ತಿಮಿಂಗಲದ ವ್ಯಕ್ತಿತ್ವವು ಮನುಷ್ಯ-

ನಷ್ಟೆ ಸ್ವತಂತ್ರಗೊಂಡು ನಿಸರ್ಗದ ಶಕ್ತಿಗಳ ಸಂಕೇತವಾಗುತ್ತದೆ. ಇವನ ಶ್ರೇಷ್ಠ ಕಲಾಕೃತಿ 'ಮೋಬಿ ಡಿಕ್' ಕ್ಯಾಪ್ಟನ್ ಅಹಾಬ್ ಎಂಬ ಕಪ್ತಾನನು ಮೋಬಿ ಡಿಕ್ ಎಂಬ ಹೆಸರಿನ ಒಂದು ಮಹಾತಿಮಿಂಗಲದ ಬೇಟೆಯಾಡುವಾಗ ತನ್ನ ಕಾಲು ಕಳೆದುಕೊಂಡಿರುತ್ತಾನೆ. ಅನಂತರ ಅದನ್ನು ಕೊಲ್ಲುವದು ಅವನ ಜೀವನದ ಧ್ಯೇಯವಾಗುತ್ತದೆ. ಚಿಕ್ಕಪುಟ್ಟ ಮೀನುಗಳನ್ನು ಕಡೆಗಣಿಸಿ ಇದೊಂದೇ ಮೀನದ ಬೆನ್ನಟ್ಟಿ ತಿಂಗಳುಗಟ್ಟಲೆ ಸುತ್ತಾಡುತ್ತಾನೆ; ಕೊನೆಗೆ ಗೆಲ್ಲುತ್ತಾನೆ. ಅದರ ಬಿಳಿದಾದ ದೇಹಕ್ಕೆ ಭಲ್ಲೆ ಚುಚ್ಚುತ್ತಾನೆ. ಭಲ್ಲೆಯ ಹಗ್ಗಕ್ಕೆ ಉರಲು ಬಿದ್ದು ತಾನೂ ಅದ-ರೊಡನೆ ಮರೆಯಾಗುತ್ತಾನೆ. ಅದರ ದೇಹ ಅವನ ಕನಸುಗಳನ್ನು ತುಂಬಿಬಿಟ್ಟದ್ದು ಅನೇಕ ಸಾಂಕೇತಿಕ ವಿಮರ್ಶಕರ ವಿಚಾರಕ್ಕೆ ಆಧಾರವಾಗಿದೆ. ಕಾವ್ಯಮಯ ವರ್ಣನೆಗಳೊಡನೆ ಸಾಹಸದ ಚಿತ್ರಣ ಇಲ್ಲಿದೆ. ಇವನಾದರೂ ಕೂಪರನಂತೆ ಜಗತ್ತಿನ ಕೂರರೆಲ್ಲ ಒಂದೇ ಜಾತಿ ಎಂದು ಸಾರುವವನು. 'ಮೋಬಿ ಡಿಕ್' ಕಾದಂಬರಿಯಲ್ಲಿ ಒಬ್ಬ ಪಾರ್ಸಿ ನಾವಿಕನ ಹೆಸರು ಕೂಡ ಉಂಟು. ಜಗತ್ತಿನ ಶ್ರೇಷ್ಠ ಕೃತಿಗಳಲ್ಲಿ 'ಮೋಬಿ ಡಿಕ್' ಪರಿಗಣಿಸಲ್ಪಡುತ್ತದೆ.

'ಮಾರ್ಕ್ ಟ್ವೇನ್' ಎಂಬ ಹೆಸರಿನಿಂದ ಕೀರ್ತಿ ಪಡೆದ ಸ್ಯಾಮ್ಯುಯೆಲ್ ಲ್ಯಾಂಗ್‌ಹಾರ್ನ್ ಕ್ಲೆಮೆನ್ಸ್ (೧೮೩೫-೧೯೧೦) ಅಮೇರಿಕೆಯ ಹಾಸ್ಯ ಲೇಖಕರಲ್ಲಿ ಶ್ರೇಷ್ಠನು. ಇವನ ಜೀವನ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಪ್ರಾರಂಭವಾಯಿತು. ಆದ್ದರಿಂದ ಇವನನ್ನು ವ್ಯವಸಾಯಿ ಲೇಖಕನೆಂದು ಪರಿಗಣಿಸಬಹುದು. ಆದರೆ, ಹಾಸ್ಯಲೇಖನ-ಗಳ ಮುಖಾಂತರ ಅಮೇರಿಕನ್ ಸ್ವಭಾವಕ್ಕೆ ಒಂದು ಚೌಕಟ್ಟು ತಂದುಕೊಡುವ ಮಹಾಕಾರ್ಯವನ್ನು ಗೈದನು. ಟಾಮ್ ಸಾಯರ್, ಹಕಲ್‌ಬರಿ ಫಿನ್ ಇವೆರಡು ಚಿಕ್ಕ ಮಕ್ಕಳ ಪಾತ್ರಗಳು ಅಮೇರಿಕನ್ ಸ್ವಭಾವದ ಆಳತೆಗೋಲುಗಳಾಗಿವೆ. ತುಂಟತನ, ಸಾಹಸಿಕತೆ, ನೈತಿಕ ಮಾನಸಿಕ ಸ್ವಾತಂತ್ರ್ಯ, ಪ್ರೇರಣಾಗುಣ ಇವು ಇವರಲ್ಲಿವೆ. ಇವನ ಪ್ರಸಿದ್ಧ ಕೃತಿಗಳು 'ದ ಅಡ್ವೆಂಚರ್ಸ್ ಆಫ್ ಟಾಮ್ ಸಾಯರ್', 'ದ ಲೈಫ್ ಆನ್ ದ ಮಿಸಿಸಿಪಿ', 'ದ ಅಡ್ವೆಂಚರ್ಸ್ ಆಫ್ ಹಕಲ್‌ಬರಿ ಫಿನ್' ಇವುಗಳ ತಿಳಿ ಹಾಸ್ಯ, ಕೃತಿ ಕೇಂದ್ರಿತ ಜೀವನ ಇವು ಇವನ ವಿಶ್ವವಿಖ್ಯಾತಿಗೆ ಕಾರಣವಾದವು. ಇದಲ್ಲದೆ ಅಮೇರಿಕನ್ ಸ್ವಭಾವವಾದ ಆತ್ಮವಿಶ್ವಾಸವನ್ನು ಎತ್ತಿ ಹಿಡಿದವು. 'ಎ ಕನೆಕ್ಟಿಕಟ್ ಯಾಂಕೀ ಇನ್ ಕಿಂಗ್ ಆರ್ಥರ್ಸ್ ಕೋರ್ಟ್' ಇಂಥ ಸ್ವಭಾವದ ಚಿತ್ರಣ. ಹಳೆಯ ಜನಾಂಗಗಳಲ್ಲಿ ಬೇರೂರಿದ ಶ್ರದ್ಧಾಭಾರದ ಹೊರೆ-ಯಿಲ್ಲದೆ ನೈಸರ್ಗಿಕ ವ್ಯಕ್ತಿತ್ವವನ್ನು ಚಿತ್ರಿಸುವ ಹೊಸ ಜನಾಂಗದ ರಾಷ್ಟ್ರಿಕ ಚಿತ್ರಣ-ವಿದು. 'ಟ್ರ್ಯಾಂಪ್ ಅಬ್ರಾಡ್', 'ದ ಪ್ರಿನ್ಸ್ ಆ್ಯಂಡ್ ದ ಪಾಪರ್', 'ದ ಟ್ರ್ಯಾಜಿಡಿ ಆಫ್ ಪಡನ್ ಹೆಡ್ ವಿಲ್ಸನ್' ಕಾದಂಬರಿಗಳಾದರೂ ನಿಸ್ಸಂಪ್ರದಾಯ ನೈಸರ್ಗಿಕ ವ್ಯಕ್ತಿತ್ವದ ರಾಷ್ಟ್ರಿಕ ತತ್ತ್ವದ ಮೇಲೆ ನಿಂತಿವೆ. ಇಂತು ಅಮೇರಿಕದ ರಾಷ್ಟ್ರೀಯ ವ್ಯಕ್ತಿತ್ವ ಯುರೋಪಿನಿಂದ ಸ್ವತಂತ್ರವಾದುದು ಮಾರ್ಕ್ ಟ್ವೇನನ

ಕಾದಂಬರಿಗಳಲ್ಲಿ ವಿಜೃಂಭಣೆಗೊಂಡಿದೆ. ಚಾತುರ್ಯ, ಸಮಯಪ್ರಜ್ಞೆ, ಚಟುವಟಿಕೆ, ಹಾಸ್ಯ, ನಿರ್ಭೀತಿ, ನಿಸ್ಸಂಪ್ರದಾಯತೆ ಇವೇ ಗುಣಗಳನ್ನು ಅಮೇರಿಕನ್ ಸ್ವಭಾವದ ಭೂಮಿಕೆಯನ್ನಾಗಿ ಮಾಡಿ, ಐರೋಪ್ಯದಿಂದ ಅವನ್ನು ಭಿನ್ನಗೊಳಿಸಿ ತೋರಿಸಿದನು.

ನಿಗ್ರೋ ಜನರ ಗುಲಾಮಗಿರಿಯನ್ನು ಕಾಯ್ದೇಬದ್ಧವಾಗಿ ನಿರ್ಮೂಲನಗೊಳಿಸಿದವನು ಎಬ್ರಾಹಮ್ ಲಿಂಕನ್ ೧೮೬೧ ರಲ್ಲಿ. ಇದರಿಂದ ಕೋಪಗೊಂಡ ದಕ್ಷಿಣದ ಕೆಲವು ಸಂಸ್ಥಾನಗಳು ಸ್ವತಂತ್ರಗೊಳ್ಳಲು ಯತ್ನಿಸಿದಾಗ ಯಾದವೀ ಕಲಹ ಹುಟ್ಟಿ ೧೮೬೧ ರಿಂದ ೧೮೬೫ ರ ವರೆಗೆ ಸಾಗಿತು. ಲಿಂಕನ್ನನ ಬಲಿ ತೆಗೆದುಕೊಂಡಿತಾದರೂ ರಾಜ್ಯದ ಅವಿಭಾಜ್ಯತೆ ಸಂರಕ್ಷಿಸಲ್ಪಟ್ಟಿತು. ಈ ಸಮಯದಲ್ಲಿ ಹಲವಾರು ಕಾದಂಬರಿಗಳು ಬಂದವು. ಸಿಡ್ನಿ ಲ್ಯಾನಿಯರನ 'ಟೈಗರ್ ಲಿಲಿಸ್', ಕೇಬಲನ 'ದ ಗ್ಯಾಂಡಿಸಿಮ್ಸ್' ಇಂಥವಾದರೂ,ಇವುಗಳಲ್ಲಿ ಮಹತ್ವದ ಲೋಕಪ್ರಿಯ ಕಾದಂಬರಿ ಹ್ಯಾರಿಯಲ್ ಬೀಚರ್ ಸ್ಟೋಳ 'ಅಂಕಲ್ ಟಾಮ್ಸ ಕೇಬಿನ್'. ಈ ಕಾದಂಬರಿ ನಿಗ್ರೋಜನರ ಬಗ್ಗೆ ಸಹಾನುಭೂತಿಯನ್ನು ಹುಟ್ಟಿಸಲು, ಅಮೇರಿಕೆಯ ಸದಸದ್ವಿವೇಕವನ್ನು ಜಾಗ್ರತಗೊಳಿಸಲು ಬಹಳಷ್ಟು ಕಾರಣದಾಯಿತು. ಇದರ ಸಾವಿರಾರು ಪ್ರತಿಗಳು ಉತ್ತರದಲ್ಲಿ ಖರ್ಚಾಗಿ, ದಕ್ಷಿಣ ಭಾಗದಲ್ಲಿ ನಿಗ್ರೋ ಜನರಿಗಾಗುವ ಅನ್ಯಾಯದ ಬಗ್ಗೆ ಎಚ್ಚರ ಹುಟ್ಟಿಸಿತು. ಇದರ ಜೊತೆಗೆ ನಿಜವಾದ ಕ್ರಿಸ್ತೀ ಧರ್ಮದ ತತ್ತ್ವವಾದ, ಸಹನೆ ಅನೇಕ ಬಾರಿ ನಿಗ್ರೋ ಜನರಲ್ಲಿ ಇದ್ದ ಸಂಗತಿ ಬಹಳೇ ಚಿತ್ತವೇಧಕವಾಗಿ ಚಿತ್ರಿತವಾಗಿ, ಇದೊಂದು ರಾಷ್ಟ್ರಿಕ ವ್ಯಕ್ತಿತ್ವ ಅಮೇರಿಕೆಯಲ್ಲಿ ಬೇರೂರಿತು.

ಇಪ್ಪತ್ತನೆಯ ಶತಮಾನ ಸಮೀಪ ಬಂದಂತೆ, ಕಾದಂಬರಿಗಳ ನೈತಿಕ ಆದರ್ಶವಾದ ಕಡಿಮೆಯಾಗಿ ವಾಸ್ತವವಾದ ವಿಸ್ತಾರಗೊಳ್ಳತೊಡಗಿತು. ವಿಲಿಯಂ ಹಾವೆಲ್ಸ್ (೧೮೩೭-೧೯೨೦), ಹ್ಯಾಂಲಿನ್ ಗಾರ್ಲಂಡ್ (೧೮೬೦-೧೯೪೦), ಫ್ರ್ಯಾಂಕ್ ನಾರಿಸ್ (೧೮೭೦-೧೯೦೨) ಇವರು ವಾಸ್ತವವಾದಿಗಳು. ಹೆನ್ರಿ ಜೇಮ್ಸ್ ಕೂಡ ದೊಡ್ಡ ವಾಸ್ತವವಾದಿಯಾದರೂ ಮಧ್ಯಮವರ್ಗೀಯತೆ, ನೈತಿಕತೆ, ಕನಸುಗಾರಿಕೆಗಳನ್ನು ಅವನು ಬಿಡುವದಿಲ್ಲವಾದ್ದರಿಂದ ಅವನನ್ನು ಈ ಗುಂಪಿಗೆ ಸೇರಿಸಲಾಗದು. ಈಗಾಗಲೆ ಅಮೇರಿಕೆಯ ಜೀವನದ ಧನಿಕತೆಯ ದುಷ್ಪರಿಣಾಮಗಳು ಕಾಣತೊಡಗಿ,ಬಡತನದ ಬಿರುಸು ಧನಿ ಏಳುವದು ಸ್ವಾಭಾವಿಕವಾಗಿತ್ತು.ಬಡಬಗ್ಗರ, ಸಾಲಗಾರರ, ದಾರಿಹೋಕ ಹೆಣ್ಣುಗಳ ಜೀವನ ಚಿತ್ರಿಸುವ ಕಲೆ ಬೇಕಾಗಿತ್ತು. ಕಾದಂಬರಿಕಾರರು ಇಂಥ ಚಿತ್ರಣಗಳನ್ನು ಬರೆದಿದ್ದಾರೆ. ಆದರೆ ಇವರಲ್ಲಿಯ ಶ್ರೇಷ್ಠ ಲೇಖಕ ಥಿಯೊಡೋರ್ ಡ್ರೇಸಿಯರ್ (೧೮೭೧–೧೯೪೫). ಜಾಕ್ ಲಂಡನ್ (೧೮೭೬-೧೯೧೬) ಇನ್ನೊಬ್ಬ ಉತ್ತಮ ಕತೆಗಾರ. ಇವನ ಕತೆಗಳು ತುಸು ಸೋಶಲಿಸ್ಟ್ ರೀತಿಯತ್ತ ವಾಲಿದವಾದ್ದರಿಂದ ಅವು ರಶಿಯದಲ್ಲಿ ಬಹು ಪ್ರೀತಿಯಿಂದ ಓದಲ್ಪಡುತ್ತವೆ. (ಉದಾ: 'ದ ಐಯರ್ನ ಹೀಲ್') ಕಥನ-ಗ್ರಥನದ ಕಲೆ ಜ್ಯಾಕ್ ಲಂಡನ್‌ನಲ್ಲಿ ಬಹು ಉನ್ನತಗೊಂಡಿದೆ. ಡ್ರೀಸಿಯರನಲ್ಲಿ ಗ್ರಥನಕಲೆ ಬಲು ಕಡಿಮೆ.

ಆದರೆ ಅಮೇರಿಕೆಯ ಬೆಳೆಯುತ್ತಿರುವ ಜೀವನದ ಜೊತೆಗೇ ಹೆಜ್ಜೆಯಿಕ್ಕಿ ಸಮಕಾಲೀನತೆಯತ್ತ ಕಾದಂಬರಿಯನ್ನು ಬರಸೆಳೆದ ದೊಡ್ಡ ಮಾನ ಡ್ರಿಸಿಯರನಿಗೆ ಕೊಡಬೇಕು. ಇವನ ಬೃಹತ್ಕಾದಂಬರಿ ‘ದ ಅಮೇರಿಕನ್ ಟ್ರಾಜೆಡಿ’ಗೆ ಈ ವಿಶಿಷ್ಟ ಸ್ಥಾನವುಂಟು. ರೆಡಿಮೇಡ್ ಬಟ್ಟೆಗಳ ಕಾರಖಾನೆಯ ಜೀವನವನ್ನು ಚಿತ್ರಿಸುವ ಕಾದಂಬರಿ ಇದು. ಇದರಲ್ಲಿ ಬರುವ ಕ್ಲೈಡ್ ಗ್ರಿಫಿಥ್ ಎಂಬ ಪಾತ್ರವು ಓಮುಗರ ದ್ವೇಷ-ಪ್ರೇಮಗಳನ್ನು ಒಂದೇ ಸಮಯಕ್ಕೆ ಸೆಳೆಯುತ್ತದೆ. ಸ್ಟಿಫನ್ ಕ್ರೇನ್ (೧೮೭೧–೧೯೦೦) ಬರೆದ ‘ದ ರೆಡ್‌ಬ್ಯಾಜ್ ಆಫ್ ಕರೆಜ್’ ಕಾದಂಬರಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಇದು ಅಮೇರಿಕನ್ ಯಾದವೀಯುದ್ಧದ ಚಿತ್ರಣವಾದರೂ ಇದರಲ್ಲಿ ಆದರ್ಶವಾದದ ಸೋಂಕು ಕೂಡ ಇಲ್ಲ. ಇಲ್ಲದ ಶೌರ್ಯ-ಸಾಹಸಗಳ ವರ್ಣನೆ ಇಲ್ಲ. ಕ್ರೇನನು ಈ ಮೊದಲು ಕೆಲವು ವಾಸ್ತವವಾದೀ ಕಾದಂಬರಿಗಳನ್ನು ಬರೆದಿದ್ದನು. ಅಮೇರಿಕನ್ ಯುದ್ಧದ ವಾಸ್ತವವಾದಿತ್ವವನ್ನು ಹೀಗೆ ಚಿತ್ರಿಸಿದ್ದು ಮೊದಲ ಬಾರಿ.

ಮಾರ್ಕ್ ಟ್ವೇನ್ ಅಮೇರಿಕೆಯ ನಿಸ್ಸಂಪ್ರದಾಯತೆಯನ್ನು ಎತ್ತಿ ಹಿಡಿದನೆಂದು ಮೇಲೆ ಹೇಳಿದೆಯಲ್ಲವೆ? ಇನ್ನು ವಾಶಿಂಗ್ಟನ್ ಇರ್‌ವಿಂಗನಿಂದ ಹಿಡಿದು ಅಮೇರಿಕೆಯ ಈ ಗುಣಕ್ಕೆ ಭಯಪಟ್ಟು ಯುರೋಪ್ಯದ ಸಾಂಪ್ರದಾಯಿಕತೆಯ ಆಸರೆಯನ್ನು ಬಯಸುವ ಲೇಖಕರೂ ಇದ್ದಾರೆಂದರೆ ಆಶ್ಚರ್ಯವಾಗಬಹುದು. ಹೆನ್ರಿ ಜೇಮ್ಸ್ ಇಂಥ ಲೇಖಕರಲ್ಲಿ ಒಬ್ಬ (೧೮೪೩–೧೯೧೬). ಆದರೆ ಹೊಸತನದ ಮೋಹವು ಹೇಗೆ ಕೆಲವು ಕಿರಿಯಾಳ ಬುದ್ಧಿಯವರಿಗೆ ಆಕರ್ಷಕವಾಗುತ್ತದೆಯೋ ಹಾಗೆಯೇ ಕೆಲವು ಆಳ ಬುದ್ಧಿಯವರು ತಮ್ಮ ಬೇರುಗಳನ್ನು ಹುಡುಕಲು ಹಾತೊರೆಯುವುದೂ ಸ್ವಾಭಾವಿಕ. ‘ಶುಕ್ಲ-ಕೃಷ್ಣೆ ಗತೀ ಹ್ಯೇತೆ ಜಗತಃ ಶಾಶ್ವತೇ ಮತೆ,’ (ಗೀತಾ). ಟಿ. ಎಸ್. ಇಲಿಯಟ್ ಅಮೇರಿಕೆಯಲ್ಲಿ ಹುಟ್ಟಿದರೂ ಇಂಗ್ಲಂಡಿನಲ್ಲಿ ನೆಲೆಸಿ ಅದರ ನಾಗರಿಕನಾದದ್ದಲ್ಲದೇ ಇಂಗ್ಲಂಡಿನಲ್ಲಿ ೩೦೦ ವರ್ಷಗಳ ಹಿಂದಿನ ಪೂರ್ವಜರು ಇದ್ದ ಸ್ಥಳಗಳನ್ನೆಲ್ಲ ಸಂದರ್ಶಿಸಿ ‘ದ ಫೋರ್ ಕ್ವಾರ್ಟೆಟ್ಸ್’ನ ಕೆಲ ಭಾಗಗಳನ್ನು ಆ ಸ್ಥಳಗಳ ಮೇಲೆ ರಚಿಸಿದನು. ಕೆಲವು ನಾಟಕಗಳನ್ನು ಇಂಗ್ಲೆಂಡಿನ ಜೀವನದ ಬಗ್ಗೆಯೇ ರಚಿಸಿದನು. ಹೆನ್ರಿ ಜೇಮ್ಸನಾದರೂ ಆಳ ಬುದ್ಧಿಯವನು. ತನ್ನ ಜೀವನದ ೪೧ ವರ್ಷಗಳನ್ನಾತ ಯುರೋಪಿನಲ್ಲಿ ಕಳೆದನು. ಇವನಂತೆ ಎಡಿಥ್ ವ್ಹಾರ್ಟನ್ (೧೮೬೨–೧೯೩೭), ಗರ್‌ಟ್ರೂಡ್ ಸ್ಟೈನ್ (೧೮೭೪–೧೯೪೬) ಇವರಾದರೂ ಬಹುಕಾಲ ಯುರೋಪಿನಲ್ಲಿ ನೆಲೆಸಿದರು. ಇಂಥ ಲೇಖಕರನ್ನು Expatriates ಎಂದು ಕರೆಯುವುದುಂಟು. ಹಾಗೆಂದ ಮಾತ್ರಕ್ಕೆ ಇವರು ತಮ್ಮ ಅಮೇರಿಕನ್ ಸ್ವಭಾವಗುಣಗಳನ್ನು ತೊರೆಯಲು ಯತ್ನಿಸಿದರೆಂದು ಅರ್ಥವಲ್ಲ. ಅಮೇರಿಕೆ ತನ್ನ ಮಕ್ಕಳಿಗೆ ಆಳದ ಅನುಭವ ಕೊಡಬೇಕಾದರೆ ಹಾಥಾರ್ನ್–ಡ್ರಿಸಿಯರರ ಹಾದಿಯೊಂದು ಉಂಟು ನಿಜ. ಆದರೆ ಅದು ಅರ್ಧಶಿಕ್ಷಿತರು ಮಾತ್ರ ಪಡೆಯಬಲ್ಲ ಮೋಕ್ಷ. ಅತಿಶಿಕ್ಷಿತರು ತಾವು ಓದಿದ ಕೇಳಿದ

ಶಿಕ್ಷಣ ಸ್ಥಾನಗಳ ಬಗ್ಗೆ ಕಲಾಸ್ಥಾನಗಳ ಬಗ್ಗೆ ಸಾಮೀಪ್ಯ ಕೋರುತ್ತಾರೆ. 'ತುಂಗೆಯೇ ನನ್ನ ಭಾಗೀರಥಿ' ಎನ್ನುವವನೇ ಕನ್ನಡಿಗ, ಕಾಶಿಗೆ ಹೋಗುವವನು ಕನ್ನಡಿಗನಲ್ಲವೆಂದು ಹೇಳುವ ಅವಿವೇಕ ಸಲ್ಲದು. ಅನೇಕರು ಯುರೋಪಿಗೆ ಹೋದರೂ ಅಮೇರಿಕನ್ ಪ್ರಾಮಾಣಿಕತೆಯನ್ನೇ ಮೆಚ್ಚಿಕೊಂಡರು.

ಹೆನ್ರಿ ಜೇಮ್ಸ್ ಇತ್ತೀಚೆಗೆ ಎಫ್. ಆರ್. ಲೀವಿಸರು 'ದ ಗ್ರೇಟ್ ಟ್ರೆಡಿ-ಶನ್' ಗ್ರಂಥವನ್ನು ಬರೆದ ನಂತರ, ಇಂಗ್ಲೀಷ್ ಭಾಷೆಯ ಶ್ರೇಷ್ಠ ಕಾದಂಬರಿ-ಕಾರರಲ್ಲಿ ಒಬ್ಬನಾಗಿ ಗಣಿಸಲ್ಪಟ್ಟಿದ್ದಾನೆ. ಈತನು ಅತಿಶಿಕ್ಷಿತ ಮನೆತನದಲ್ಲಿ ಹುಟ್ಟಿದವನು. ಇವರಣ್ಣ ವಿಲ್ಯಂ ಜೇಮ್ಸ್ ಸೈಕಾಲಾಜಿಯ ಜನಕರಲ್ಲಿ ಒಬ್ಬನೆಂದು ಗಣಿಸಲ್ಪಟ್ಟಿದ್ದಾನೆ. ಹೆನ್ರಿಯ ಶಿಕ್ಷಣ ಕೆಲಕಾಲ ಯುರೋಪಿನಲ್ಲಿ ಆಯಿತು. ಬಹಳ ಬಾರಿ ಇಂಗ್ಲಂಡ್-ಅಮೇರಿಕೆಗಳ ನಡುವೆ ಪ್ರಯಾಣ ಮಾಡಿದನು. ಸಾಯುವ ಒಂದು ವರ್ಷ ಮೊದಲು ಇಂಗ್ಲಂಡಿನ ನಾಗರಿಕತೆಯನ್ನು ಪಡೆದನು. ಇವನಿಗೆ ಯುರೋಪುಪ್ರಿಯವಾದದ್ದು. ಅಲ್ಲಿಯ ಸಾಹಿತಿಗಳ ಮೂಲಕ. ಪ್ಯಾರಿಸ್ಸಿನಲ್ಲಿ ಜಗತ್ತಿನ ಶ್ರೇಷ್ಠ ಕಾದಂಬರಿಕಾರರಾದ ತುರ್ಜನೀವ್, ಫ್ಲಾಬೇರ್, ಝೋಲಾರಂಥವರ ಪರಿಚಯ ಇವನಿಗಾಯಿತು. ಅವರ ನಿಸ್ಸಹಾಯತೆ ಇವನಿಗೆ ಒಪ್ಪಿಗೆಯಾಗದಿದ್ದರೂ, ಸಾಹಿತ್ಯದ ಬಗ್ಗೆ ಅವರ ಕಳಕಳಿ ಇವನ ಮನಸ್ಸಿನ ಮೇಲೆ ಆಳ ಪರಿಣಾಮ ಮಾಡಿತು. 'ರೊಡರಿಕ್ ಹಡ್ಸನ್' ಇವನ ಪ್ರಥಮ ದೀರ್ಘ ಕಾದಂಬರಿ. ಅಮೇರಿ ಕನ್ ಕಲೆಗಾರನೊಬ್ಬ ಇಟಲಿಯಲ್ಲಿ ತನ್ನ ಬೌದ್ಧಿಕಶಕ್ತಿ ಕಳಕೊಳ್ಳುವ ಚಿತ್ರಣ. 'ದ. ಅಮೇರಿಕನ್' ಕಾದಂಬರಿ ಹಣದಿಂದ ಅಮೇರಿಕನ್ನೋರ್ವ ಸಂಸ್ಕೃತಿಯನ್ನು ಗೆಲ್ಲಲು ಯತ್ನಿಸುವ ಚಿತ್ರಣ. 'ದಿ ಪೋರ್ಟ್ರೈಟ್ ಆಫ್ ಎ ಲೇಡಿ' ಮತ್ತೆ ಅಮೇರಿಕನ್ ಕನ್ಯೆಯೋರ್ವಳು ಇಂಗ್ಲಂಡಿಗೆ ಬಂದ ಸಂದರ್ಭ. ಇಂಥ ಎರಡು-ಮೂರು ಜನಾಂಗಗಳು ಒಂದನ್ನೊಂದು ಎದುರಿಸುವ ರೀತಿಯನ್ನು ಚಿತ್ರಿಸುವ ಕಾದಂಬರಿಗಳಿಗೆ ಇತ್ತೀಚೆಗೆ the International Novel ಎಂದು ಹೆಸರಿಟ್ಟಿ-ದ್ದಾರೆ. ಅದರ ಅಭ್ಯಾಸ ನಡೆದಿದೆ.

ಜೇಮ್ಸ್ ಕೇವಲ ಅಮೇರಿಕನ್ ಸಂದರ್ಭಗಳ ಮೇಲೂ ಕಾದಂಬರಿಗಳನ್ನು ರಚಿಸಿದ್ದಾನೆ. 'ವಾಶಿಂಗಟನ್ ಸ್ಕ್ವೇರ್', 'ದ ಬೋಸ್ಟೋನಿಯನ್ಸ್' ಇಂಥ ಕಾದಂಬರಿಗಳು. ಅಮೇರಿಕೆಯ ಸುಲಭ ಆಶಾವಾದವನ್ನು ಟೀಕಿಸುತ್ತವೆ. 'ಆ್ಯಂಬ್ಯಾ-ಸಡರ್ಸ್', 'ದಿ ವಿಂಗ್ಸ್ ಆಫ್ ದಿ ಡವ್' ಇವು ಯಶಸ್ವಿಯಲ್ಲದಿದ್ದರೂ ಆಳವಾದ ಮನುಷ್ಯಸ್ವಭಾವದ ಅಭ್ಯಾಸಗಳು. 'ವಾಟ್ ಮೇಝಿ ನ್ಯೂ' ಎಂಬುದು ದಾಂಪತ್ಯಜೀವನದ ಕಠೋರ ಚಿತ್ರಣ. ಒಟ್ಟಿನ ಮೇಲೆ ಹೆನ್ರಿ ಜೇಮ್ಸ್ ದೊಡ್ಡ ಕಾದಂಬರಿಕಾರ. ಅವನು ಎತ್ತಿಕೊಳ್ಳುವ ವಿಷಯಗಳೇ ದೊಡ್ಡವು. ಅವುಗಳ ಮಾನಸಿಕ ಚಿತ್ರಣವೂ ದೊಡ್ಡದು.

ಎಡಿಥ್ ವ್ಹಾರ್ಟನಳ ಕಾದಂಬರಿಗಳು ಸಾಮಾಜಿಕ ಪರಿವರ್ತನೆಯ ಚಿತ್ರಣ-

ಗಳು. ನ್ಯೂಯಾರ್ಕ ಜೀವನವನ್ನು ಚೆನ್ನಾಗಿ ಅರಿತ ಅವಳು ಅವುಗಳ ವಾಸ್ತವಿಕ ಚಿತ್ರಣ ಕೊಟ್ಟಿದ್ದಾಳೆ. ೧೯ ನೆಯ ಶತಮಾನದ ಕಸುವಿನ ಜೀವನ ಕಳೆದು ಧನ ಕೇಂದ್ರಿತ ಸಮಾಜ ಹಳೆಯದನ್ನು ಸುಲಭವಾಗಿ ಅಟ್ಟಿದುದರ ಚಿತ್ರಣಗಳಿವು. ಅಷ್ಟೊಂದು ಚುರುಕಾಗಿಲ್ಲವಾದರೂ ವಾಸ್ತವಿಕತೆಯಿಂದ ಕೂಡಿವೆ.

ಗರ್‌ಟ್ರೂಡ್ ಸ್ಟೈನ್ ತನ್ನ ವಿಶಿಷ್ಟಶೈಲಿಯ ಮೂಲಕ ವಿಖ್ಯಾತಳಾಗಿದ್ದಾಳೆ. ಅವಳಿಗೆ ಮಾನಸಶಾಸ್ತ್ರದ ಶಿಕ್ಷಣವಿತ್ತಲ್ಲದೆ ಪ್ಯಾರಿಸಿನಲ್ಲಿ ಕ್ಯೂಬಿಝಂದಂಥ ಕಲಾ-ತಂತ್ರದ ಪರಿಚಯವೂ ಇತ್ತು. ಭಾಷೆಯಲ್ಲಿ ಕ್ಯೂಬಿಝಂದಂಥ ತಂತ್ರ ಹುಡುಕುವದು ಹೇಗೆ? ಅದಕ್ಕಾಗಿ ತನ್ನದೇ ಆದ ವಿಶಿಷ್ಟ ಶೈಲಿಯನ್ನು ನಿರ್ಮಿಸಿಕೊಂಡಳು. ಚಕ್ರಾಕಾರವಾಗಿ ತಿರುತಿರುಗಿ ಬರುವ ವಾಕ್ಯಗಳು ಒಂದು ಚೌಕಟ್ಟನ್ನು ಮೇಲಿಂದ ಮೇಲೆ ತಂದುಕೊಟ್ಟು 'ಭ್ರಮೆ'(obsession) ಯ ಭಾಸವನ್ನು ಹುಟ್ಟಿಸುತ್ತವೆ. ಮನಸ್ಸು ತನ್ನ ವಿಧವಿಧ ಶಕ್ತಿಗಳನ್ನು ಕೆಲವೇ ಆಕಸ್ಮಿಕ ನೆನಪುಗಳ ಸುತ್ತಲೂ ಹೆಣೆಯಹತ್ತಿದಾಗ ಒಂದು ಭ್ರಮೆಯ ಆಭಾಸವಾಗುವದಿಲ್ಲವೆ? ಮನಸ್ಸು ಒಂದೇ ಓಟ ಓಡುತ್ತದೆಯೇ? ಓಡುವಾಗಲೂ ತನ್ನ ಕೈಯಲ್ಲಿಯ ಸವಕಳಿ ದುಡ್ಡನ್ನು ಪತ್ತಿಕ್ಕಿ ಹಿಡಿಯುವದಿಲ್ಲವೆ? ಹಾಗಿದೆ ಇವಳ ಶೈಲಿ. ಸರಳವಾಗಿ ಓಡದು. ವಕ್ರಾ-ಕಾರವಾಗಿ ಅದೇ ಅದೇ ನೆನಪಿಗೇ ಮರಳುತ್ತದೆ. A rose is a rose is a rose, ಇಂಥ ವಾಕ್ಯಗಳು ಇವಳ ಶೈಲಿಯನ್ನು ನಿರ್ದೇಶಿಸುತ್ತವೆ.

ಇಪ್ಪತ್ತನೆಯ ಶತಮಾನದ ಯುದ್ಧೋತ್ತರ ಕಾದಂಬರಿಪ್ರಪಂಚದಲ್ಲಿ ದೊಡ್ಡ ಹೆಸರುಗಳೆಂದರೆ ಶರ್‌ವುಡ್ ಆ್ಯಂಡರ್‌ಸನ್ (೧೮೭೬-೧೯೪೧). ಕತೆಗಾರನೆಂದೇ ಹೆಸರಾದರೂ ಕಾದಂಬರಿಗಳನ್ನೂ ಬರೆದಿದ್ದಾನೆ. ಇವನ ಮೇಲೆ ಗರ್‌ಟ್ರೂಡ್ ಸ್ಟೈನಳ ಆಳವಾದ ಪರಿಣಾಮವಿದೆ. ಸಿಂಕ್ಲೇರ್ ಲ್ಯೂಯಿಸ್ (೧೮೮೫-೧೯೫೧) ತನ್ನ 'ಬ್ಯಾಬಿಟ್' ಎಂಬ ಕಾದಂಬರಿಗೆ ನೋಬೆಲ್ ಪಾರಿತೋಷಕ ಪಡೆದು ಹೆಸರಾಗಿದ್ದಾನೆ. ಇವನ ವಾಸ್ತವವಾದ ನೋಡತಕ್ಕಂಥದು. ಅರ್ನೆಸ್ಟ್ ಹೆಮಿಂಗ್‌ವೇ (೧೮೯೮-೧೯೬೧) ನಿಜವಾಗಿಯೂ ಯುದ್ಧೋತ್ತರ ಲೇಖಕ. ಇವನಿಗೆ ಸ್ವತಃ ತುಸು ಮಟ್ಟಿಗೆ ಸ್ಪ್ಯಾನಿಶ್ ಯುದ್ಧದ ಅನುಭವವಿತ್ತು. ಯುದ್ಧೋತ್ತರ ಜೀವನದ ಜುಗುಪ್ಸೆ, ನಿರುತ್ಸಾಹ, ಬೇಸರ ಇವುಗಳನ್ನು ತನ್ನ ಹಲವಾರು ಕಾದಂಬರಿಗಳಿಂದ ವ್ಯಕ್ತಗೊಳಿಸಿದನು. ಇವನ ಪ್ರಥಮ ಕಾದಂಬರಿ ಗರ್‌ಟ್ರೂಡ್ ಸ್ಟೈನಳಿಂದ ಸ್ಫೂರ್ತಿ ಪಡೆಯಿತು. ನಂತರ 'ಎ ಫೇರ್‌ವೆಲ್ ಟು ಆರ್ಮ್ಸ' ಇವನಿಗೆ ಕೀರ್ತಿ ತಂದಿತು. ಯುದ್ಧದ ಬಗ್ಗೆಯೇ ಇವನು ಬರೆದನೆಂದಲ್ಲ. ಆದರೆ ಏನನ್ನು ಬರೆದರೂ ನಿರುತ್ಸಾಹದ anti-heroರನ್ನು ನಿರ್ಮಿಸಿ, ಅವರ ಶೌರ್ಯವು ಅವರ ಮೇಲೆ ಹೇರಲ್ಪಟ್ಟಂತೆ ತೋರಿಸುತ್ತಾನೆ. ಅವನಿಗೆ ನೋಬೆಲ್ ಪಾರಿತೋಷಕ ದೊರಕಿದ್ದು 'ದ ಓಲ್ಡ್ ಮ್ಯಾನ್ ಎಂಡ್ ದ ಸೀ' ಎಂಬ ಕಾದಂಬರಿಗೆ. ಇದು ತುಸು ಮಟ್ಟಿಗೆ ಮೆಲ್‌ವಿಲ್ಲನ 'ಮೋಬಿ ಡಿಕ್'ನ್ನು ಹೋಲುತ್ತಿದ್ದರೂ, ಇದರ ನಿರೂಪಣ ರೀತಿ

ಅದರ ವಿರುದ್ಧ. ಕೇವಲ ಕೆಲವೇ ಶಬ್ದಗಳಲ್ಲಿ ಬಹಳವನ್ನು ಹೇಳುವ ರೀತಿ ಇಲ್ಲಿದೆ. ಇದರ ಮುಖ್ಯ ಧ್ವನಿ ಸೋಲು ಮತ್ತು ಸೋಲನ್ನು ಎದುರಿಸುವ ರೀತಿ. ಕಷ್ಟಪಟ್ಟು ಕೊಂದ ದೊಡ್ಡ ಮೀನನ್ನು ಊರವರೆಗೆ ಎಳೆದು ತರುವವರೆಗೆ ಚಿಕ್ಕ ಮೀನುಗಳು ಅದನ್ನು ತಿಂದು ಬರಿ ಅಸ್ಥಿಪಂಜರ ಮಾತ್ರ ಉಳಿದಿರುತ್ತದೆ. ಆದರೆ ಮುದುಕ ನಾವಿಕ ಸಿಟ್ಟುಸಿರು ಬಿಡ. ಇಂಥ ಕಾವ್ಯಮಯ ವಿಷಯದ ಬಗ್ಗೆ ಚಿಕ್ಕ ಕತೆಯಷ್ಟೆ ಕಿರಿದು ಕಾದಂಬರಿ ರಚಿಸಿ ಪಾರಿತೋಷಕ ಪಡೆದದ್ದು ಜೀವನದುದ್ದಕ್ಕೂ ಒಂದು ತತ್ತ್ವಕ್ಕೆ ಅಂಟಿಕೊಂಡುದರ ಪರಿಪಾಕ ಸ್ಕಾಟ್ ಫಿಝ್‌-ಜೆರಲ್ಡ್ (೧೮೯೬-೧೯೪೦) ಕೆಲವೇ ಕಾದಂಬರಿಗಳನ್ನು ಬರೆದರೂ ತನ್ನ ಜೀವನದ ಮೂಲಕ ಹೆಸರಾಗಿದ್ದಾನೆ. 'ದ ಗ್ರೇಟ್ ಗ್ಯಾಟ‍್ಸ್ಬಿ', 'ಟೆಂಡರ್ ಇಸ್ ದ ನೈಟ್' ಗಳಂಥ ಕಾದಂಬರಿಗಳು ಅಮೇರಿಕೆಯ ಧನಿಕತೆಯ ಮೇಲೆ ಆಧಾರಗೊಂಡ ರಾಷ್ಟ್ರಿಕ ಕಾದಂಬರಿಗಳು. ಡಾನ್ ಪ್ಯಾಸಾಸ್ (೧೮೯೬–)ನ ಕಾದಂಬರಿಗಳು ಅಮೇರಿಕೆಯ ಧನಸಂಘಟನೆ ಸೂಕ್ಷ್ಮ ಮನಸ್ಸಿನ ಕಲಾವಿದನ ಮೇಲೆ ಮಾಡುವ ಪರಿಣಾಮಗಳನ್ನು ವರ್ಣಿಸುತ್ತವೆ. ಜಾನ್ ಸ್ಟೈನ್‌ಬೆಕ್ (೧೯೦೨–) ಇನ್ನೂ ಬೆಳೆಯುತ್ತಲೇ ಇದ್ದಾನೆ. ಧನ-ತತ್ತ್ವದ ಮೇಲೆ ಆಧಾರಗೊಂಡ ಸಮಾಜ ತನ್ನ ಘಟಕಗಳಿಗೆ ತಾನೇ ಆಸರೆ ಕೊಡ-ಲಾಗದ ಸಂದರ್ಭವನ್ನು 'ದ ಗ್ರೇಪ್ಸ್ ಆಫ್ ರಾಥ್' ಎಂಬ ಸುಂದರ ಕಾದಂಬರಿ ಹೇಳುತ್ತದೆ. ಅವನ ಇತ್ತೀಚೆಗಿನ ಕಾದಂಬರಿಗಳಲ್ಲಿ ಭಾರತೀಯ ಜೀವನದ ಬಗ್ಗೆ ಆದರ ಒಡಮೂಡಿದೆ. ಇವನ ಮೊದಲಿನ ಕಾದಂಬರಿಗಳು ಅಮೇರಿಕೆ ೧೯೩೦ ರ ನಂತರ ಅನುಭವಿಸಿದ ಆರ್ಥಿಕ ಮುಗ್ಗಟ್ಟಿನಿಂದ (Depression) ಸ್ಫೂರ್ತಿ ಪಡೆದವು. ಮುಗ್ಗಟ್ಟು ಮುಗಿದರೂ ಜೀವನಕ್ಕೆ ನೆಮ್ಮದಿ ಇಲ್ಲದ್ದನ್ನು ಕಂಡು ಧನಕೇಂದ್ರಿತ ಸಮಾಜವ್ಯವಸ್ಥೆಯ ಬಗ್ಗೆಯೇ ಸ್ಟೈನ್‌ಬೆಕ್ ಸಂಶಯ ತಳೆದು ಪೌರ್ವಾಗತ್ಯ ಧರ್ಮಗಳಿಗೆ ಮೊರೆಹೋಗಿದ್ದಾನೆಂದು ತೊರುತ್ತದೆ. ಇನ್ನೊಬ್ಬ ನೋಬೆಲ್ ಪಾರಿತೋಷಕ ಪಡೆದ ಮಹತ್ವದ ಕಾದಂಬರಿಕಾರ ವಿಲ್ಯಂ ಫಾಕ್‌ನರ್ (೧೮೯೭) ದಕ್ಷಿಣ ಪ್ರಾಂತ್ಯಗಳ ಒಕ್ಕಲುತನ ಜೀವನದಿಂದ ಸ್ಫೂರ್ತಿ ಪಡೆದಿದ್ದಾನೆ. 'ಯೋಕ್‌ನಾಫತಾಫಾ' ಎಂಬ ಕಾಲ್ಪನಿಕ ಪ್ರಾಂತ್ಯದ ಹರುಕುಮುರುಕು ಜೀವನವೇ ಇವನ ಕಾದಂಬರಿಗಳಿಗೆ ಹಿನ್ನೆಲೆ. ಆದರೆ ಇವನು ಬಣ್ಣಿಸುವ ರೀತಿಯಿಂದ ಈ ಕಾಲ್ಪನಿಕ ನಾಡೇ ಒಂದು ಸತ್ಯವಾಗಿ ಭಾಸವಾಗುತ್ತದೆ. ಇವನ ಮೂಲ ಸ್ಫೂರ್ತಿ 'ಸಹನೆ'. ಸಹನೆಯ ತತ್ತ್ವವನ್ನು ಸಿದ್ಧಗೊಳಿಸಲಿಕ್ಕೆಂದು ಈತ ಮನುಷ್ಯರ ಮೇಲೆ ಬೇಕಾದ ಪ್ರಸಂಗಗಳನ್ನು ಹೊರಿಸುತ್ತಾನೆ. ಹರಿದುಹೋಗಬೇಕಾದ ಪ್ರಸಂಗ ಬಂದರೂ ಬದುಕು ಹಾಗೇ ನಡೆಯುತ್ತದೆಂಬುದನ್ನು ತೋರಿಸುವುದೇ ಇವನ ಉದ್ದೇಶ. 'ಸೌಂಡ್ ಆ್ಯಂಡ್ ಫ್ಯೂರಿ', 'ಸ್ಯಾಂಕ್ಚುಯರಿ', 'ಆ್ಯಸ್ ಐ ಲೇ ಡಾಯಿಂಗ್' ಇವು ಇವನಿಗೆ ಪ್ರಸಿದ್ಧಿ ತಂದುಕೊಟ್ಟವು. ಇತ್ತೀಚೆಗೆ 'ದ ಇಂಟ್ರೂಡರ್ ಇನ್ ದ ಡಸ್ಟ್', 'ರಿಕ್ವೀಮ್ ಫಾರ್ ಎ ನನ್' ಮತ್ತೆ ಹೆಸರಾದವು.

ತೀರ ಇತ್ತೀಚೆಗೆ ಹೊಸ ವಿಷಯಗಳು, ಹೊಸ ಆಳ, ಹೊಸ ಎತ್ತರ ಅಮೇರಿಕನ್ ಕಾದಂಬರಿಗಳಲ್ಲಿ ಕಂಡುಬರುತ್ತಿದೆ. ಹೊಸ ವಿಷಯಗಳೆಂದರೆ ರಾಜಕೀಯ ಕಾದಂಬರಿಗಳು: ಅಮೇರಿಕನ್ ಪ್ರಜಾಪ್ರಭುತ್ವವನ್ನು ಅಡ್ಡದಾರಿಗೊಯ್ಯುವ ಶಕ್ತಿಗಳನ್ನು ಬಯಲಿಗೆಳೆಯುವ ಅನೇಕ ಸುಂದರ ಕಾದಂಬರಿಗಳು ಬಂದಿವೆ. ರಾಬರ್ಟ್ ಪೆನ್ ವಾರನ್, ಗೋರ ವಿಡಲ್, ಕ್ಯಾಥ್ರೀನ್ ಆ್ಯನ್ ಪ್ರೋರ್ಟರ್– ಇಂಥ ಕಾದಂಬರಿಕಾರರು ಆಳವಾಗಿ ವಿಚಾರ ಮಾಡಿ ಚೆಂದವಾಗಿ ಹೃದಯಕ್ಕೆ ಮುಟ್ಟುವಂತೆ ಬರೆಯಬಲ್ಲರು. ಹೆಮಿಂಗ್‌ವೇ–ಫಾಕ್‌ನರ್ ಸಂಪ್ರದಾಯದಲ್ಲಿ ಹೆನ್ರಿ ಮಿಲರ್, ಆರ್ಥರ್ ಮೇಲರ್, ಜೇಮ್ಸ್ ಬಾಲ್ಡವಿನ್ ಹೆಸರಾದವರು. ಆದರೆ ಈ ಸಂಪ್ರದಾಯದಲ್ಲಿ ಒಂದು ದೊಡ್ಡ ದೋಷವೆಂದರೆ ಕಾದಂಬರಿಕಾರರು ವಿಮರ್ಶಕರ ಮೇಲೆ ಅವಲಂಬಿಸಬೇಕಾಗುತ್ತದೆ. ಅಮೇರಿಕೆಯಲ್ಲಿ ಜನಪ್ರಿಯ ಕಾದಂಬರಿಗೂ ಹೊಗಳಿಸಿಕೊಳ್ಳುವ ಕಾದಂಬರಿಗೂ ಅಂತರ ಬಹಳ. ಜನಪ್ರಿಯಕಾದಂಬರಿಯನ್ನು ಧನತತ್ತ್ವವು ಎತ್ತಿಹಿಡಿದಿದೆಯೊ ಹೇಗೆ ಎಂಬ ಸಂದೇಹ ಬಹಳ. ಆದ್ದರಿಂದ ವಿಮರ್ಶಕರು ಕಾದಂಬರಿಯನ್ನು ಕಾವ್ಯದಂತೆ Textual analysis ಈಡು ಮಾಡಿ ತಮಗೆ ಪ್ರಿಯವಾದ ಸೈಕಾಲಾಜಿ, ಆ್ಯಂಥ್ರೊಪಾಲಾಜಿ ತತ್ತ್ವಗಳನ್ನು ಅವುಗಳ ಮೇಲೆ ಆರೋಪ ಮಾಡಿ, ಅವುಗಳನ್ನು ಹೊಗಳುವದುಂಟು. ಕೃತ್ರಿಮವಾಗಿ ಪಡೆದ ಕೀರ್ತಿಗೆ ವೈಶಿಷ್ಟ್ಯಪೂರ್ಣ ಶೈಲಿ ಬೇಕಾಗುವದು. ಹೀಗಾಗಿ ಜನಪ್ರಿಯ ಆದರೆ ಸಾದಾ ಶೈಲಿಯಲ್ಲಿ ಚೆನ್ನಾಗಿ ಕಥೆ ಹೇಳುವ, ನೇರವಾಗಿ ಹೃದಯವನ್ನು ಮುಟ್ಟಬಲ್ಲ ಕಾದಂಬರಿಗಳು ಅನೇಕ ಬಾರಿ ವಿನಾಕಾರಣ ವಿಮರ್ಶಕರ ಅವಹೇಳನೆಗೆ ಗುರಿಯಾಗುತ್ತವೆ. (ಕನ್ನಡದಲ್ಲಿಯೂ ಇದೇ ಸ್ಥಿತಿ ತುಸು ಮಟ್ಟಿಗೆ ಉಂಟು. ಶಿಕ್ಷಣ ಹೆಚ್ಚಾದಂತೆ ಈ ದುಶ್ಚಟವೂ ಹೆಚ್ಚಾಗುವಂತೆ ತೋರುತ್ತದೆ.)

ಆಳದ ವಿಷಯದಲ್ಲಿ ಒಮ್ಮೆಲೇ ಕಣ್ಣಿಗೆ ಹೊಡೆಯುವವರೆಂದರೆ ಜೆ. ಡಿ. ಸ್ಯಾಲಿಂಗರ್ ಹಾಗೂ ಸಾಲ್ ಬೆಲೊ. ಇವರ ಯಾವ ಕಾದಂಬರಿ ತೆಗೆದರೂ ಹೊಸ ಆಳ–ಎತ್ತರಗಳು ಕಾಣಿಸುತ್ತವೆ. 'ದಿ ಕ್ಯಾಚರ್ ಇನ್ ದಿ ರಾಯ್', 'ಫ್ರ್ಯಾನ್ನಿ ಆ್ಯಂಡ್ ಝೂಯಿ' ಇವು ಸ್ಯಾಲಿಂಗರನ ಶ್ರೇಷ್ಠ ಕೃತಿಗಳು. ಸಾಲ್ ಬೆಲೋನ ಹೆಸರಾದ ಕಾದಂಬರಿ 'ಆಜಿ ಮಾರ್ಚ್', 'ಹರ್‌ಝೊಗ್' ಜ್ಯೂ ಜನಾಂಗದ ಜೀವನದ ಕಟುಚಿತ್ರಗಳು. ನಿಗ್ರೋ ಜೀವನ ಚಿತ್ರಿಸುವ ಜೇಮ್ಸ್ ಬಾಲ್ಡವಿನ್ ಹೆಸರಾಗಿದ್ದಾನೆ. ಧನತತ್ತ್ವವು ಅನೇಕ ಕಾದಂಬರಿಕಾರರ ಪ್ರತಿಭೆಯನ್ನು ಆಕರ್ಷಿಸಿ ಮುರಿದುಬಿಡುತ್ತದೆಯೆಂಬ ತಕರಾರು ಕೇಳಬರುತ್ತದೆ. ಇತ್ತೀಚೆಗೆ ಬಂದ ಹಿಪ್ಪಿ–ಹರೇಕೃಷ್ಣ ಚಳವಳಿಗಳು ಇನ್ನೂ ಕಾದಂಬರಿಯಾಗಲಿ ಸಿನೇಮಾ ಆಗಲಿ ಆದಂತಿಲ್ಲ. ಆದರೆ, ಅವೂ ಕಮರ್ಶಿಯಲ್ ಆಗುವ ಸಂಭವವಿದೆ. ಒಟ್ಟಾರೆ ಅಮೇರಿಕನ್ ಓದುಗರೇ ಬೇರೆ, ವಿಮರ್ಶಕರೇ ಬೇರೆ. ಕಾದಂಬರೀ-ಪ್ರಪಂಚಕ್ಕೆ ಒಳ್ಳೆಯದನ್ನು ಎತ್ತಿ ಹಿಡಿಯುವ ಕೆಲಸ ಬೇಕು ನಿಜ; ಆದರೆ

ಪೂರ್ಣತತ್ತ್ವವೂ ಅಷ್ಟೇ ಚೊಕ್ಕಟಬೇಕು. ವಿಮರ್ಶಕ ತನ್ನ ಬುದ್ಧಿಯನ್ನೇ ಮುಂದೆ ಓಡಿಸಿದರೆ ನಡೆಯದು. ಜೊತೆಗೆ ಧನತತ್ತ್ವದ ಕೈ ಹಿಡಿಯುವವರಾರೂ ಇಲ್ಲ. ಹೀಗಾಗಿ ಪ್ರತಿಭಾಮಾರಣದ ಪ್ರಶ್ನೆಗೆ ಏನು ಉತ್ತರ–ಪರಿಹಾರ ? ಎಂಬುದನ್ನು ನೋಡಬೇಕಾಗಿದೆ.

ರಶಿಯನ್ ಕಾದಂಬರಿ

—ವಾಸುದೇವ

ಸೋವಿಯತ್ ಒಕ್ಕೂಟದ ಸಾಹಿತ್ಯಕ್ಕೂ ಮತ್ತು ನಮ್ಮ ನಾಡುಗಳ ಸಾಹಿತ್ಯಕ್ಕೂ ಅಜಗಜಾಂತರವಿದೆ. ಸೋವಿಯತ್ ನಾಡಿನಲ್ಲಿರುವ ವ್ಯವಸ್ಥೆಯು ನಮ್ಮದಕ್ಕಿಂತಲೂ ತೀರಾ ಭಿನ್ನವಾದುದು. ಆದುದರಿಂದಲೇ ಅಲ್ಲಿನ ಯಾವ ವಿಷಯವನ್ನೇ ಆಗಲಿ, ನಮ್ಮಲ್ಲಿ ಸಾಮಾನ್ಯವಾಗಿ ಪ್ರಚಲಿತವಾಗಿರುವ ಅಳತೆಗೋಲಿನಿಂದ ನಾವು ಅಳೆಯುವುದು ಸರಿಯಲ್ಲ. ಅದನ್ನು ನಾವು ನಿಷ್ಪಕ್ಷಪಾತ ದೃಷ್ಟಿಯಿಂದ ಗಮನಿಸಿ ಅರಿತುಕೊಳ್ಳಬೇಕಾಗುತ್ತದೆ. ಸೋವಿಯತ್ ನಾಡಿನ ರಾಜಕೀಯಕ್ಕೆ ಮಾತ್ರವಷ್ಟೇ ಅಲ್ಲದೆ ಅಲ್ಲಿನ ಸಾಹಿತ್ಯ, ಕಲೆ, ಸಂಸ್ಕೃತಿ ಮುಂತಾದ ಎಲ್ಲ ವಿಷಯಗಳಿಗೂ ಇದೇ ಮಾತು ಅನ್ವಯಿಸುತ್ತದೆ.

ಪ್ರಸಕ್ತ ಸಮಯದಲ್ಲಿ ನಾವು ಕಾದಂಬರಿಗಳ ವಿಷಯವನ್ನು ಮಾತ್ರವಷ್ಟೆ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಸೋವಿಯೆತ್ ಕ್ರಾಂತಿಗೆ ಬಹುಕಾಲ ಮುಂಚಿನಿಂದಲೂ ಅಲ್ಲಿನ ಕಾದಂಬರೀಕ್ಷೇತ್ರದಲ್ಲಿ, ಸಣ್ಣಕತೆ ಮತ್ತು ನಾಟಕಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಪಡೆದವರು ಮಾಕ್ಸಿಂ ಗೋರ್ಕಿ ಅವರೇ ಎಂಬುದು ನಿರ್ವಿವಾದ. ಅವರ ನಿಜವಾದ ಹೆಸರು ಅಲೆಕ್ಸೇಯ್ ಮಕ್ಸಿಮೊವಿಚ್ ಪೇಷ್ಕೊವ್. ಅವರ ಮೊದಲ ಕತೆಯು 'ಮಾಕರ್ ಚೂದ್ರ' ಎಂಬುದು ೧೮೯೨ ರಲ್ಲಿ ಪ್ರಕಟವಾಯಿತು. ಆಗ ಅವರಿಗೆ ೨೪ ವರ್ಷ ವಯಸ್ಸು. ಅವರು ದಲಿತವರ್ಗದ ಪ್ರತಿನಿಧಿಯಾಗಿದ್ದರು. ಸ್ವತಃ ಕಷ್ಟನಷ್ಟಗಳನ್ನು ಅನುಭವಿಸಿದವರು. ಬಾಳಿನ ಬವಣೆಯಲ್ಲಿ ಬೇಯುತ್ತಿದ್ದರೂ ಸಾಹಿತ್ಯಸೇವೆಗೆ ಕೈಹಾಕಿದ, ಮೊದಲಿಗೇ ಅಷ್ಟೇನೂ ಶಿಕ್ಷಣ ಪಡೆಯದೆ ಇದ್ದ ವ್ಯಕ್ತಿ ಆತ. ದುಡಿಮೆಗಳೆಲ್ಲದರ ಅನುಭವವೂ ಆತನಿಗುಂಟು. ನಾಡಿನಲ್ಲೆಲ್ಲ ಓಡಾಡಿ, ಎಲ್ಲ ಕಡೆಯೂ ಶ್ರಮಜೀವಿಯಾಗಿದ್ದು, ಜನಸಾಮಾನ್ಯರೊಡನೆ, ದೀನದಲಿತರೊಡನೆ ಬೆರೆತಿದ್ದ ಈ ಭಾವಜೀವಿಯು ಲೋಕೋತ್ತರವಾದ ಕಾದಂಬರಿಗಳನ್ನು ರಚಿಸಿದರು. ಅವುಗಳಲ್ಲಿ 'ತಾಯಿ' ಎಂಬ ಕೃತಿಯು ಜಗದ್ವಿಖ್ಯಾತವಾಗಿದೆ. ಅದು ಪೀಡಿತ ದೇಶಗಳ ಜನತೆಗಳಿಗೆ ವಿಮೋಚನೆಯ ಮಾರ್ಗಸೂಚಕ ಕೈಪಿಡಿಯೆಂದರೂ ತಪ್ಪಾಗದು. ಸಾಹಿತ್ಯ ರಚನೆಗಾಗಿ ಅವರು ತ್ಸಾರ್ ಅರಸೊತ್ತಿಗೆಯ ಸರಕಾರದ ಕಣ್ಣಿಗೆ ದಂಗೆಕೋರರೆಂದು ಕಂಡುಬಂದುದರಿಂದಲೇ ಅವರು ಪುನಃ ಪುನಃ ಸೆರೆಮನೆಯ ಅತಿಥಿಯಾಗಬೇಕಾಯಿತು. ಅವರ ಸಾಹಿತ್ಯ ಕೃತಿಗಳು

ಸಾಮಾನ್ಯರ ಜನಜೀವನವನ್ನು ಆ ಕಾಲದಲ್ಲಿ ಇದ್ದಂತೆಯೇ ಚಿತ್ರಿಸುತ್ತವೆ. ಅದುದ-ರಿಂದಲೇ ಜಗತ್ತಿನ ಜನಸಾಮಾನ್ಯರೂ, ವಿರೋಧಿ-ಸಾಹಿತ್ಯಪ್ರೇಮಿಗಳೂ ಕೂಡ ಅವುಗಳನ್ನು ಮೆಚ್ಚುತ್ತಾರೆ.

ರಶಿಯನ್ ಸಾಹಿತಿಗಳಲ್ಲಿ ಭಾರತದ ಮೇಲೆ ಪ್ರಭಾವ ಬೀರಿದ ಎರಡನೆಯ ವ್ಯಕ್ತಿ ಲೆವ್ ತೋಲೆಸ್ತೊಯ್ ಅವರು. ನಮ್ಮ ನಾಯಕಮಣಿ ಪೂಜ್ಯ ಮಹಾತ್ಮ ಗಾಂಧಿಯವರು ಅವರ ಕೃತಿಗಳಿಂದ ಸ್ಫೂರ್ತಿ ಪಡೆದವರು. ತೋಲೆಸ್ತೊಯರ ಕೃತಿ-ಗಳಲ್ಲಿ ಆಧ್ಯಾತ್ಮಿಕ ಭಾವನೆಯ ಕಿರಣ ಹಾಯುತ್ತದೆ. ಅವರ 'ಯುದ್ಧ ಮತ್ತು ಶಾಂತಿ' ಕಾದಂಬರಿಯು ಅದ್ಭುತವಾದುದು. ಅದರಲ್ಲಿ ಅವರು ಉಚ್ಚವರ್ಗದವರ ಜೀವನವನ್ನು ರೂಪಿಸುವದರ ಜತೆಗೆ ಉತ್ತಮ ಸಂದೇಶವನ್ನೂ ಸಾರಿದ್ದಾರೆ.

ದೊಸ್ತೊಯೆವೆಸ್ಕಿಯವರು ಕ್ರಾಂತಿಪೂರ್ವದ ಗಣ್ಯ ಲೇಖಕರಲ್ಲೊಬ್ಬರು. ಅವರ 'ಮೂರ್ಖ' ಮುಂತಾದ ಕಾದಂಬರಿಗಳು ಆ ಕಾಲದ ಜೀವನವನ್ನು ಯಥಾ-ವತ್ತಾಗಿ ಚಿತ್ರಿಸುತ್ತವೆ.

ನವಯುಗದ ಸೋವಿಯೆತ್ ಲೇಖಕರಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಮಿಖಾ ಯಿಲ್ ಷೊಲೊಖೊವ್ ಅವರ ಹೆಸರು ಉಲ್ಲೇಖನೀಯವಾಗಿದೆ. ಅವರು ಅಕ್ಟೋಬರ್ ಕ್ರಾಂತಿಯ ಕಾಲದ ಜನಜೀವನವನ್ನು, ನಾಡಿನಲ್ಲಾದ ಪ್ರಗತಿಯ ಹೋರಾಟದ ಸೂಕ್ಷ್ಮ ಚಿತ್ರಣವನ್ನು ನೀಡಿದ್ದಾರೆ. ಅವರ ಕೃತಿಗಳನ್ನು ಒಮ್ಮೆ ಕೈಗೆತ್ತಿಕೊಂಡರೆ ಮುಗಿಸುವವರೆಗೂ ಕೆಳಗಿಡಲು ಮನಸ್ಸೊಪ್ಪದು. ಅವರ ನಿರೂ-ಪಣ ಶೈಲಿಯು ಅಷ್ಟೊಂದು ಆಕರ್ಷಕವಾಗಿದೆ. ಅವರು ತಮ್ಮ ಕ್ಷೇತ್ರದ ವಿಕಾಸ-ವನ್ನೇ ತಮ್ಮ ಕಾದಂಬರಿಗಳಲ್ಲಿ ಹೃದಯಂಗಮವಾಗಿ ಬಣ್ಣಿಸಿದ್ದಾರೆ.

ಆಲೆಕ್ಸೇಯ್ ತೋಲ್ಸ್ತೋಯರು ಬರೆದ ಕೃತಿಗಳೂ, ಅವುಗಳಲ್ಲಿ ವಿಶೇಷತಃ 'ಉಗ್ರಪರೀಕ್ಷೆ' ಎಂಬ ಯುದ್ಧಕಾಲೀನ ಕಾದಂಬರಿಯೂ ಜನಪ್ರಿಯವಾಗಿವೆ. ಅವರು ಬರೆದ 'ಪ್ರಥಮ ಪೀಟರ್' ಎಂಬ ಕಾದಂಬರಿಯು ಐತಿಹಾಸಿಕ ಮಹತ್ವದ ಕೃತಿ-ಯಾಗಿದೆ. ಈ ಯಥಾರ್ಥವಾದಿಯು ಆ ಕಾಲದ ಜಮೀನದಾರರ ಜೀವನವನ್ನು ಇದ್ದಕ್ಕಿದ್ದ ಹಾಗೆ ಚಿತ್ರಿಸಿದ್ದಾರೆ.

ಪತ್ರಿಕೋದ್ಯಮಿ, ಕಾದಂಬರಿಕಾರ, ಶಾಂತಿಯೋಧ ಇಲ್ಯಾ ಎದ್ರೆನ್‌ಬುರ್ಗ್ ಅವರು ಭಾರತೀಯರಿಗೆ ಪರಿಚಿತರು. ಅವರು ನಮ್ಮ ನಾಡಿನಲ್ಲಿ ಸಂಚರಿಸಿ ನಮ್ಮ ಜನತೆಯನ್ನು ಮೆಚ್ಚಿದವರು. ಅವರ ಕೃತಿಗಳು ಆಯಾ ಕಾಲದಲ್ಲಿ ಇಡೀ ಜಗತ್ತಿನ ಗಮನವನ್ನು ಸೆಳೆದವು.

ಅಲೆಕ್ಸಾಂದರ್ ಫದೇಯೆವ್ ಅವರು ಕ್ರಾಂತಿಯೊಂದಿಗೆ ಬೆಳೆದ ಭಾವಜೀವಿ. ಸೈನ್ಯದಲ್ಲಿ ಸಾಮಾನ್ಯ ದರ್ಜೆಯಿಂದ ಮೇಲಕ್ಕೇರಿ, ಸಾಹಿತ್ಯಸೇವೆ ಮಾಡಿದವರು. ಅವರು ಮೂರು ದಶಕಗಳವರೆಗೆ ಸೋವಿಯೆತ್ ನಾಡಿನಲ್ಲಿ ಲೇಖಕರ ಸಂಘದ ಮುಖಂಡರಾಗಿದ್ದರು. ಅವರ 'ಯುವಕ ಭಟ' ಎಂಬ ಕಾದಂಬರಿಯು ಮಾನವ

ಸಾಹಸದ, ಘನತೆಯ ಅದ್ಭುತ ನಿರೂಪಣೆಯಾಗಿದೆ. ಅದೇ ಅವರ ಕೊನೆಯ ಕಾದಂಬರಿಯಾಯಿತು.

ಕಾನ್‌ಸ್ತಾನ್‌ತಿನ್ ಫೆದಿನ್ ಅವರೂ ಸೋವಿಯೆತ್ ನಾಡಿನ ಹೆಸರಾಂತ ಕಾದಂಬರಿಕಾರರಲ್ಲೊಬ್ಬರು. ಅವರ ಕೃತಿಗಳಲ್ಲಿ ಮಾನವಸ್ವಭಾವದ ಸೂಕ್ಷ್ಮ ವಿವರಣೆ ದೊರೆಯುತ್ತದೆ. ಒಮ್ಮೆ ಹೇಳಿದುದನ್ನೇ ಪುನಃ ಪುನಃ ತಿಳಿಸುವುದು ಅವರ ಬರಹದಲ್ಲೆಲ್ಲೂ ಕಂಡುಬರದು. ಅವರ ಕಥಾಪಾತ್ರಗಳಲ್ಲಿ ಉದಾತ್ತ ಗುಣಗಳ ಚಿತ್ರಣ ಕಂಡುಬರುತ್ತದೆ.

ಪ್ರಧಾನತಃ ಸಣ್ಣಕತೆಗಳ ಪ್ರಖ್ಯಾತ ಲೇಖಕರಾದ ಕಾನ್‌ಸ್ತಾನ್‌ತಿನ್ ಪುಸ್ತೊವ್‌ಸ್ಕಿಯವರು ಸಹ ಕಾದಂಬರಿಗಳನ್ನು ಬರೆದಿದ್ದಾರೆ. ಅವರು ಸಹ ಸೋವಿಯೆತ್ ಜನಜೀವನವನ್ನು ಅವುಗಳಲ್ಲಿ ಮನಮುಟ್ಟುವಂತೆ ಚೆನ್ನಾಗಿ ಚಿತ್ರಿಸಿದ್ದಾರೆ. ಅವರ ಪುಸ್ತಕಗಳನ್ನೋದುವಾಗ ಮಹಾನ್ ಕಲಾವಿದರೊಬ್ಬರ ವರ್ಣಚಿತ್ರದ ಪ್ರತ್ಯಕ್ಷ ದರ್ಶನವಾದಂತಿರುತ್ತದೆ.

ವೇರ ಪನೋವ ಅವರು ಸೋವಿಯೆತ್‌ನಾಡಿನ ಗಣ್ಯ ಲೇಖಕಿಯರಲ್ಲೊಬ್ಬರು. ಅವರ ಅನೇಕ ಕಾದಂಬರಿಗಳಲ್ಲಿ 'ಕಾಮನ ಬಿಲ್ಲು' ಎಂಬುದನ್ನು ಅನೇಕರು ಮೆಚ್ಚಿದ್ದಾರೆ.

ನಿಕೋಲಯೇವ ಎಂಬಾಕೆಯು ಸ್ವತಃ ಡಾಕ್ಟರರು. ಯುದ್ಧಕಾಲದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ತಾವೇ ಚಿಕಿತ್ಸೆ ಪಡೆಯಬೇಕಾದ ಪರಿಸ್ಥಿತಿ ಅವರಿಗುಂಟಾಯಿತು. ಆದರೂ ಸಹ ವಾಸಿಯಾದ ಮೇಲೆಯೂ ಅವರು ಸೈನ್ಯಕ್ಕೆ ಹಿಂದಿರುಗಿದರು. ೧೯೪೫ ರ ತರುವಾಯ ಅವರು ಕಾವ್ಯರಚನೆಯ ಜತೆಗೆ ಕಾದಂಬರಿಗಳನ್ನೂ ಬರೆಯತೊಡಗಿದರು. ಅವರ 'ಸುಗ್ಗಿ'ಯು ರಶಿಯನ್ ರೈತರ ಬಾಳನ್ನು, ಯುದ್ಧಕಾಲದಲ್ಲಿ ಧ್ವಂಸಗೊಂಡರೂ ಪುನಃ ಅವರು ಪೂರ್ವಸ್ಥಿತಿ ಸಾಧಿಸಿದ ಸಾಹಸವನ್ನು ಚಿತ್ರಿಸುತ್ತದೆ. ಅವರು ದೊಡ್ಡ ಕೈಗಾರಿಕೆಯ ಕುರಿತಾದ 'ರಸ್ತೆಯ ಹೋರಾಟ' ಎಂಬ ಕಾದಂಬರಿಯನ್ನೂ ರಚಿಸಿದ್ದಾರೆ.

ಬರೀಸ ಪೋಲೆವೊಯ್ ಅವರು ವಸ್ತುತಃ ಪತ್ರಿಕೋದ್ಯಮಿ. ತಾವು ಕಂಡುದನ್ನು ತಮಗೆ ಚೆನ್ನಾಗಿ ತಿಳಿದುದನ್ನು ಚಿತ್ರಿಸುವ ಸ್ವಭಾವ ಅವರದು. ವಾಸ್ತವತೆಯು ಅವರ ಪ್ರಥಮ ಸಾಹಿತ್ಯಪ್ರಯೋಗವಾಗಿತ್ತು. ಅವರ ಮೊದಲ ಕೃತಿಯು ಅಲೆಮಾರಿಯೊಬ್ಬನ ಜೀವನದ ಜನಸಾಮಾನ್ಯರ ಅಸಂಸ್ಕೃತ ಭಾಷೆಯ ಚಿತ್ರವಾಗಿತ್ತು. ಅದರ ಪ್ರತಿಯನ್ನು ೧೯೨೭ ರಲ್ಲಿ ಆತನ ಮಿತ್ರರು ಗುಪ್ತವಾಗಿ ಮಾಕ್ಸಿಂ ಗೋರ್ಕಿಯವರಿಗೆ ಕಳಿಸಿ ಕೊಟ್ಟರು. ಅದನ್ನೋದಿದ ಗೊರ್ಕಿಯವರು ಆತನಿಗೆ ಒಡನೆಯೇ ೫ ಪುಟಗಳ ಕಾಗದ ಬರೆದು ಭಾಷಾಪ್ರಯೋಗದ ಬಗೆಗೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು. ಕ್ರಮೇಣ ಬರೀಸ್ ಪೋಲೆವೊಯ್ ಅವರು 'ಪ್ರಾವ್ದ' ಪತ್ರಿಕೆಯ ಸುದ್ದಿಗಾರರಾದರು. ಅವರ 'ನಿಜವಾದ ಮಾನವನ ಕತೆ'

ಎಂಬ ಕಾದಂಬರಿಯು ಯುದ್ಧಕಾಲದ್ದೇ ಆದರೂ ಸತ್ಯಕಥೆ. ಮೆರೆಸಿಯೆವ್ ಎಂಬ ವೈಮಾನಿಕನ ಸಾಹಸಜೀವನ ಕುರಿತಾದ ಈ ಕಾದಂಬರಿಯು ಸೋವಿಯೆತ್ ನಾಡಿನಲ್ಲಿ ಮಾತ್ರವಷ್ಟೇ ಅಲ್ಲದೆ ಜಗತ್ತಿನ ಸಾಹಿತ್ಯಪ್ರೇಮಿಗಳೆಲ್ಲರ ನಡುವೆಯೂ ಸುಪ್ರಸಿದ್ಧವಾಗಿದೆ.

ಇಲ್ಲಿ ಸೂಚಿತವಾಗಿರುವ ಕಾದಂಬರಿಗಳೆಲ್ಲವೂ ಬಹುಮಟ್ಟಿಗೆ ಸೋವಿಯೆತ್ ನಾಡಿನಲ್ಲಿ ಚಲಚ್ಚಿತ್ರಗಳಾಗಿ ತಯಾರಾಗಿವೆ.

ಒಟ್ಟಿನಲ್ಲಿ ಸೋವಿಯೆತ್ ಮತ್ತು ರಶಿಯನ್ ಸಾಹಿತಿಗಳ ಕುರಿತು ಇಷ್ಟು ಹೇಳಬಹುದು. ಅವರು ಕೇವಲ ಮನೋರಂಜನೆಗೆಂತಲೇ ಕತೆ–ಕಾದಂಬರಿಗಳನ್ನು ಬರೆಯದೆ ಜನಜೀವನ ಚಿತ್ರಿಸಲು ಬರೆಯುತ್ತಾರೆ. ಅವರ ಪ್ರತಿಯೊಂದು ಕೃತಿಯಲ್ಲಿಯೂ ಮಾನವನ ಹಿರಿಮೆಯನ್ನು ಅವರು ಹಾಡಿ ಹೊಗಳುತ್ತಾರೆ. ಧನಿಕರ, ರಾಜಕಾರಣಿಗಳ ಹೊಗಳುಭಟರಂತೆ ಅವರು ಎಂದಿಗೂ ಬರೆಯರು. ಅವರ ಕೃತಿಗಳಲ್ಲಿ ನಾವು ಎಷ್ಟೋ ಸಲ ಅಧಿಕಾರಿಗಳ ಟೀಕೆಗಳನ್ನೂ ಕಾಣಬಹುದು.

ಸೋವಿಯೆತ್ ಒಕ್ಕೂಟದಿಂದ ಪ್ರಕಟವಾಗುವ 'ಸೋವಿಯೆತ್ ಲಿಟರೇಚರ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯು ಪ್ರತಿ ತಿಂಗಳಿನಲ್ಲಿಯೂ ಅಲ್ಲಿನ ಕಾದಂಬರಿ, ಕತೆ, ಕವಿತೆ, ನಾಟಕ ಮುಂತಾದವುಗಳನ್ನು ಪ್ರಕಟಿಸುತ್ತದೆ.

ಸೋವಿಯೆತ್ ನಾಡಿನ ಸಾಹಿತ್ಯದ ಬಗೆಗೆ ಕೆಲವು ಅವಿಚಾರಾಭಿಪ್ರಾಯಗಳು ಬಂಡವಾಳವಾದಿ ಜಗತ್ತಿನಲ್ಲಿ ಕೇಳಿಬರುತ್ತಿರುತ್ತವೆ. ಸೋವಿಯೆತ್ ದೇಶದ ಕೆಲವು ಮಂದಿ ಅಸ್ಥಿರ ಮನೋಭಾವದ ವ್ಯಕ್ತಿಗಳನ್ನು ಒಲಿಸಿಕೊಂಡು ಅಪಪ್ರಚಾರದ ಪ್ರಯತ್ನಗಳನ್ನೂ ಮಾಡಲಾಗುತ್ತದೆ. ಆದರೆ ಈ ಪ್ರಯತ್ನವು ಎಂದಿಗೂ ಯಶಸ್ವಿಯಾಗದೆಂಬುದನ್ನು ಆ ಪ್ರಚಾರಕ ವಲಯಗಳವರೂ ಚೆನ್ನಾಗಿ ಬಲ್ಲರು.

ಪ್ರಗತಿಶೀಲ ಸಾಹಿತ್ಯಕ್ಕೆ ಸೋವಿಯೆತ್ ನಾಡು ವಿಶೇಷ ಕಾಣಿಕೆ ನೀಡಿದೆ. ಅದೊಂದು ಅಮರಜ್ಯೋತಿಯಾಗಿ ಜಗತ್ತಿನಲ್ಲಿ ಮುಂದುವರಿಯುತ್ತದೆ.

ಫ್ರೆಂಚ್ ಕಾದಂಬರಿ

ಶ್ರೀಮತಿ ವಸುಂಧರಾ ಫಿಲಿಯೋಜಾ

ಕಾದಂಬರಿಗಳಿಗೆ ಫ್ರೆಂಚಿನಲ್ಲಿ 'ರೊಮಾ' ಎನ್ನುತ್ತಾರೆ. ಇದು ಅನ್ಯಭಾಷಾ ಶಬ್ದ. ಇಟಾಲಿಯನ್ ಭಾಷೆಯಲ್ಲಿ ಹೇಳಿದುದು ಎಂದರ್ಥ ಹೊಂದಿದೆ. ಹೇಳಿದ್ದು ಕಾಲ್ಪನಿಕ ಕಥೆಯೇ ಇರಬಹುದು, ಒಂದು ಘಟನೆಯೇ ಇರಬಹುದು ಇಲ್ಲವೇ ಒಂದು ಅನುಭವವಾಗಿರಬಹುದು; ಪದ್ಯವೇ ಇರಬಹುದು ಇಲ್ಲವೇ ಗದ್ಯವೂ ಇರಬಹುದು ಅಥವಾ ಅವೆರಡರ ಸಮ್ಮಿಳನವೂ ಆಗಬಹುದು. ಇತ್ತೀಚೆಗೆ ಸುಮಾರು ಉದ್ದವಾದ ಕಥೆ, ಮನಸೆಳೆಯುವಂತೆ ಘಟನೆಗಳ ಜೋಡಣೆ, ಸುಂದರ ಗದ್ಯಶೈಲಿಯಲ್ಲಿ ಬರೆದ-ದ್ದಕ್ಕೆ ಕಾದಂಬರಿ ಇಲ್ಲವೆ ರೋಮಾ ಎಂದು ಕರೆಯುವ ವಾಡಿಕೆಯಾಗಿದೆ. ಕೆಲವರು ಚಿಕ್ಕಕಥೆಯನ್ನೇ ಅನೇಕ ಪುಟಗಳಲ್ಲಿ ತುಂಬಿಸಿ ಪುಟಸಾರ್ವಭೌಮರಾಗಿರುವದೂ ಉಂಟು. ವ್ಹಿಕ್ಟರ್ ಹ್ಯೂಗೊನ 'ಲೆ ಮಿಸ್ಜೆರಾಬ್ಲ' ನಾವು ನೋಡಿದುದು ಶಾಲೆಯಲ್ಲಿ ಪಠ್ಯೇತರ ಓದಿನ ಚಿಕ್ಕ ಪುಸ್ತಕ. ಆದರೆ ಮೂಲದಲ್ಲಿ ಅದು ಸಾವಿರಕ್ಕೂ ಮೇಲ್ಪಟ್ಟ ಪುಟಗಳ ಕಾದಂಬರಿ. ಮಕ್ಕಳಿಗೆ ಹಾಗೂ ಸಾಧಾರಣ ವ್ಯಕ್ತಿಗಳಿಗೆಂದು ಬರೆದು ಪ್ರಸಿದ್ಧನಾಗಿರುವ ಅಲೆಕ್ಝಾಂಡರ್ ಡ್ಯೂಮಾನ ಕಾದಂಬರಿಗಳು ಯಾವಾಗಲೂ ಅನೇಕ ಭಾಗಗಳನ್ನೊಳಗೊಂಡಿವೆ. ಹೀಗೆ ಫ್ರೆಂಚಿನಲ್ಲಿ ಕಾದಂಬರಿಗೆ ಪುಟದ ಮೇರೆ ಇಲ್ಲ. ಕಥೆ ಸಾಗಿದಂತೆ ಪುಟ ತುಂಬುತ್ತಲೇ ಹೋಗುತ್ತವೆ.

ಸುಮಾರು ೧೨-೧೩ ನೇ ಶತಮಾನದವರೆಗೂ ಕಾದಂಬರಿ ಎಂಬುದು ಗೊತ್ತೇ ಇರಲಿಲ್ಲ ಎನ್ನುವುದಕ್ಕಿಂತ ಅವರು ಕಾದಂಬರಿ ಹಾಗೂ ಕಾವ್ಯ ಎಂದು ಬೇರೆ ಬೇರೆಯಾಗಿ ಹೇಳುತ್ತಿರಲಿಲ್ಲ. ಕಾದಂಬರಿ ಎಂದು ಕರೆದದ್ದು ಜನರಿಗೆ ತಿಳಿಯುವ ಭಾಷೆಯಲ್ಲಿ, ಎಂದರೆ ಸುಸಂಸ್ಕೃತ ಜನರಿಗೆ ಮಾತ್ರ ಮೀಸಲಾದ ಲ್ಯಾಟಿನ್ ಭಾಷೆಯನ್ನು ಬಿಟ್ಟು, ಎಂತಹರಿಗೂ ತಿಳಿಯುವಂತಹ ಆಡುವ ಫ್ರೆಂಚ್ ಭಾಷೆಯಲ್ಲಿ ಬರೆದ ಸಾಹಿತ್ಯವನ್ನು, ಈ ಕಾದಂಬರಿಗಳಲ್ಲಿ ಬರುವ ಕಥೆ, ದಂತಕಥೆ, ಅದ್ಭುತ ಚಮತ್ಕೃತಿಗಳು ಇತ್ಯಾದಿಗಳನ್ನು. ಈ ಪದ್ಯ ಕಾದಂಬರಿಗೂ ಕಾವ್ಯಕ್ಕೂ ಇದ್ದ ಮುಖ್ಯ ಅಂತರವೆಂದರೆ ಕಾವ್ಯ ತನ್ನದೇ ಆದ ಬಂಧನಕ್ಕೊಳಪಟ್ಟಿತ್ತು; ಛಂದಸ್ಸು, ಅಲಂಕಾರ ಇತ್ಯಾದಿಗಳಿಂದ ಪದ್ಯಕಾದಂಬರಿ ಸ್ವತಂತ್ರವಾಗಿತ್ತು. ಪದ್ಯಕಾದಂಬರಿಯನ್ನು ಹಾಡಲೇಬೇಕೆಂಬ ನಿರ್ಬಂಧನೆ ಇರಲಿಲ್ಲ. ಈ ಕಥೆಗಳಲ್ಲಿ ಕಲ್ಪನೆಯ ಪಾತ್ರ ಮಹತ್ವದ್ದು. ಆದರೆ ಈ ಕಥೆಗಳಿಂದ ನೀತಿಪಾಠ ಕಲಿಯುವರೆಂದೇನೂ ಇರಲಿಲ್ಲ.

ಮೊದಲ ಕಾದಂಬರಿಗಳಲ್ಲಿ ಒಂದಾದ 'ಲಾನ್ಸಲೊ' ರೂಪಿತವಾದುದು ಮಾರೀ ದ ಶಂಪಾನ್ನಳ ಮೂಲಕ ಎಂಬುದನ್ನು ಈಗಿನ ವಿಮರ್ಶಕರು ಒಪ್ಪುವದಿಲ್ಲ. ಆದರೂ ರಾಣಿ ಮಾರೀ ದ ಶಂಪಾನ ಹಾಗೂ ಅವಳ ಸೋದರಿ ಅಯೆಲಿಸ್ ಬ್ಲಾವ ಅವರ ತಾಯಿ ಎಲಿಯೇನೋರ ದ ಅಕಿತೇನ ತಮ್ಮ ಸುತ್ತಲೂ ಅನೇಕ ಕಲಾವಿದರಿಗೆ ಜೀವಿಸಲು ಎಡೆಗೊಟ್ಟು ಅವರ ಕಲೆಗಳಿಗೆ ಬಹಳೇ ಪ್ರೋತ್ಸಾಹನ ನೀಡಿದರು ಎಂಬುದನ್ನು ನಿರ್ಲಕ್ಷಿಸಲಾಗದು. ಮಧ್ಯಯುಗದಲ್ಲಿ ಒಂದು ಪದ್ಧತಿ ಬಳಕೆಯಲ್ಲಿತ್ತು. ನಿಷ್ಣಾತ ಕಲಾವಿದರು ಊರಿಂದೂರಿಗೆ ಇಲ್ಲವೆ ರಾಜ್ಯದಿಂದ ರಾಜ್ಯಕ್ಕೆ ಹೋಗಿ ಅರಸರ ಇಲ್ಲವೆ ಮಾಂಡಲಿಕರ ಸಭೆಯಲ್ಲಿ ತಮ್ಮ ಕಲಾಕೌಶಲ್ಯವನ್ನು ಪ್ರದರ್ಶಿಸುತ್ತಿದ್ದರು. ಇಂತಹ ವ್ಯಕ್ತಿಗಳಲ್ಲಿ ಕಾದಂಬರಿಕಾರರೂ ಬರುತ್ತಾರೆ. ಇವರು ಅರಸರ ಓಲಗದಲ್ಲಿ ತಮ್ಮ ಕಲಾಚಾತುರ್ಯದಿಂದ ಕಥೆಗಳನ್ನು ಪದ್ಯರೂಪದಲ್ಲಿ ಹಾಡಿ ಅರಸರಿಗೆ ಹಾಗೂ ಓಡ್ಡೋಲಗದಲ್ಲಿದ್ದವರಿಗೆಲ್ಲ ಮನೋರಂಜನ ಒದಗಿಸುತ್ತಿದ್ದರು. ಇವರು ಹಾಡುತ್ತಿದ್ದ ಕಥೆಗಳಲ್ಲಿ ಬರುವ ಪಾತ್ರಗಳು ಧೀರೋದಾತ್ತ ನಾಯಕ, ನಾಯಿಕೆಯತ್ತ ಅವನ ಪ್ರೇಮ, ಅವರ ಪ್ರೇಮಪಥದಲ್ಲಿ ಬರುವ ಅಡತಡೆಗಳು, ಅವನ್ನೆಲ್ಲ ಎದುರಿಸಿ ನಾಯಕ ತನ್ನ ಪ್ರೇಯಸಿಯನ್ನು ಪಡೆಯುವದು ಇಲ್ಲವೆ ಅವಳೊಡನೆ ಸ್ವರ್ಗಕ್ಕೇರುವದು ಇತ್ಯಾದಿ. ಇಂತಹ ಕಥೆಗಳಿಗೆ ಹೆಚ್ಚು ಮನ್ನಣೆ ಕೊಟ್ಟ ರಾಜರು ಪೊತಿಯೆ ಹಾಗೂ ಶಾಂಪಾನ್ನದವರು.

ಪ್ರಪ್ರಥಮ ಪ್ರಾಚೀನ ಕಾದಂಬರಿ ಓರ್ವ ಅನಾಮಿಕ ಲೇಖಕನ ಕೃತಿ 'ಲ ರೊಮಾ ದ ಥೇಬ'. ಇದನ್ನು ಬರೆದವನು ನೊರ್ಮಾಂಡಿಯವನೋ ಪೊಲೆಯೇದವನೋ ಗೊತ್ತಿಲ್ಲ. ಸುಮಾರು ಹತ್ತು ಸಾವಿರಕ್ಕೂ ಮೇಲ್ಪಟ್ಟ ನುಡಿಗಳಿಂದ ಕೂಡಿದ ಈ ಪದ್ಯಕಾದಂಬರಿಗೆ ಪ್ರೇರಣೆ ಸಿಕ್ಕಿದುದು. ಸ್ತಾಸನ ಕವಿತೆ 'ಥೆಬಾಯಿದ್'ನಿಂದ. ಈ ಪದ್ಯಕ್ಕೂ ಶೌರ್ಯ ಸಾಹಸಗಳಿಂದೊಡಗೂಡಿದ ಕಾವ್ಯಗಳಾದ 'ಇಲಿಯಡ್', 'ಎನಿಯಡ್'ಗಳಿಗೂ ಅಂತರವೆಂದರೆ ಶೌರ್ಯ ಸಾಹಸಗಳ ಸ್ಥಳದಲ್ಲಿ ಪ್ರೇಮ ಹಾಗೂ ಅನುರಾಗಗಳಿಗೆ ಹೆಚ್ಚಿನ ಮನ್ನಣೆ ಇದ್ದುದು. ಪ್ರೇಮ, ಅನುರಾಗ, ಶೃಂಗಾರ ರಸದಿಂದಾಗಿ ಆ ಕಾಲಕ್ಕೆ ಈ ಪದ್ಯಕಾದಂಬರಿ ಬಹಳೇ ಪ್ರಸಿದ್ಧಿ ಪಡೆಯಿತು. ಪರಿಣಾಮವಾಗಿ ಅನೇಕರು ಈ ಶೈಲಿ ಹಾಗೂ ಕಥೆಯನ್ನು ಬಳಸಿಕೊಂಡು ಮತ್ತೆ ಬೇರೆ ಬೇರೆ ಕಾದಂಬರಿಗಳನ್ನು ರಚಿಸಿದರು. ಈ ಕಥೆಗಳಲ್ಲಿ ಬರುವ ಪಾತ್ರಗಳು ಮನೆಮಾತಾಗತೊಡಗಿದವು.

ಅನಂತರ ಹೋಮರನ 'ಇಲಿಯಡ್' ಕಾವ್ಯದಲ್ಲಿ ಬರುವ ಥ್ರಾಯ್ದೇಶದ ಹೆಲೆನ್ನಳ ಕಥೆಯನ್ನಾಧರಿಸಿಕೊಂಡು ಬೆಳಕಿಗೆ ಬಂದ ಇನ್ನೊಂದು ಪದ್ಯಕಾದಂಬರಿ 'ಲ ರೊಮೊನದ ಥ್ರಾಯ್'. ಇದನ್ನು ಬರೆದವ ಬೆನ್ವಾ. ಇವನು ಸಂತ ಮೋರ ಊರಿನವನು. ಇದನ್ನು ರಾಣಿ ಎಲಿಯೊನೋರ ದ ಅಕಿತೇನಳಿಗೆ ಅರ್ಪಿಸಿದ್ದಾನೆ. ಕಾದಂಬರಿಯ ಕಾಲ ಸುಮಾರು ೧೧೬೫-೧೧೭೦. ಈ ಪದ್ಯಕಾದಂಬರಿ ಸುಮಾರು ಮೂವ್ವತ್ತು

ಸಾಪಿರ ನುಡಿಗಳಿಂದ ಕೂಡಿದೆ. ಈ ಕಾದಂಬರಿಗೂ ಹೋಮರನ ಕಾವ್ಯಕ್ಕೂ ಇದ್ದ ಮುಖ್ಯ ಅಂತರವೆಂದರೆ ಶೌರ್ಯ ಪ್ರದರ್ಶಿಸುವ ಯುದ್ಧಗಳ ಬದಲಾಗಿ ಪ್ರೇಮದ ಪ್ರದರ್ಶನ. ಇಲ್ಲಿ ಶೃಂಗಾರರಸ ಮುಖ್ಯ. ನಾಯಕರ ಭಾವನೆಗಳಿಗೆ ಹೆಚ್ಚಿನ ಮಹತ್ವ ಇಲ್ಲಿದೆ. ಶೃಂಗಾರರಸ ಮುಖ್ಯವುಳ್ಳ ಪ್ರಥಮ ಕಾದಂಬರಿ ಎಂದು ಇದನ್ನು ಕರೆದರು ಕೆಲವರು. ಈ ಕಾದಂಬರಿ ಸಹ ಹಿಂದೆ ಹೇಳಿದ 'ಲ ರೋಮಾ ದ ಥೇಬ' ದಂತೆ ಬೇಗ ಪ್ರಸಿದ್ಧಿ ಪಡೆಯಿತು.

ಆಗಿನ್ನೂ ಗ್ರೀಸ್ ದೇಶ ಬಹಳೇ ಮಹತ್ವದ್ದಾಗಿದ್ದಿತು. ಆದರಿಂದಾಗಿ ಗ್ರೀಸ್ ದೇಶದ ಮುಖಂಡರ ಜೀವನ ಚಿತ್ರ ಚಿತ್ರಿಸುವ ಅನೇಕ ಕಾದಂಬರಿಗಳು ಮೇಲೆ ಹೇಳಿದ ಈ ಕಾದಂಬರಿಗಳ ಜಾಡನ್ನೇ ಹಿಡಿದು ಹೊರಬಿದ್ದವು. ಉದಾ: 'ಅಲೆಗ್ಸಾಂ-ಡರನ ಕಥೆ'.

'ಸೆಲ್ಟಿಕ್ಕ' ಕಾದಂಬರಿಯ ಬಗೆಗೆ ಬಹಳೇ ಚರ್ಚೆ ನಡೆದಿದೆ. ಬಹುಶಃ ತಲೆ-ತಲಾಂತರವಾಗಿ ಹೇಳಲಾದ ಕಥೆಗಳಿನ್ನಬೇಕು ಇವು. ಉದಾ: 'ರೆಡ್ ರೈಡಿಂಗ್ ಹುಡ್' 'ಕಾಡಿನಲ್ಲಿ ಪವಡಿಸಿದ ಸುಂದರಿ' ಮುಂತಾದ ಕಥೆಗಳು ಈ 'ಸೆಲ್ಟಿಕ್ಕ' ಕಾದಂಬರಿಯ ಮೂಲವಾಗಿರಬೇಕು.

ಇನ್ನೊಂದು ವಿಶಿಷ್ಟ ಕಾದಂಬರಿಗೆ ಮೂಲ ಕತೆ ದೊರೆತುದು ಸೆಲ್ಟರ ಜಾನ-ಪದ ಕಥೆಯಲ್ಲಿ ಬರುವ ಮೆರ್ಲ ಎಂಬವನ ಪರಾಕ್ರಮಗಳನ್ನು ವರ್ಣಿಸುವ ಕಥೆ, ಹದಿಮೂರನೆಯ ಶತಮಾನದಲ್ಲಿ ಇವುಗಳನ್ನೇ ಗದ್ಯಕಾದಂಬರಿ ಎಂದು ಕರೆದರು. ಗೊತಿಯಮಾಪ್ ಆಕ್ಸಫರ್ಡ್ (ಚರ್ಚಿನಲ್ಲಿ ಮೇಲಿನ ಸ್ಥಳದಲ್ಲಿದ್ದ) ಈ ಸಾಹಿತ್ಯಕ್ಕೆ ತನ್ನದೇ ಆದ ಕಾಣಿಕೆ ಇತ್ತಿದ್ದಾನೆ ಎಂದು ಹೇಳುತ್ತಾರೆ.

ಸುಮಾರು ೧೧೬೦-೧೧೯೦ ರಲ್ಲಿದ್ದ ಮಾರಿ ದ ಫ್ರಾನ್ಸ್ ಎಂಬ ಲೇಖಕಿಯ ಕೃತಿಗಳು ಗಮನಾರ್ಹ. ಇವಳು ಯಾರು ಎಂದು ಯಾರಿಗೂ ಗೊತ್ತಿಲ್ಲ. ಇಂಗ್ಲಂಡಿನ ಅರಸುಮನೆತನ ಪ್ಲಾನ್ಟಾಜಿನೆತ್ತಕ್ಕೆ ಸಂಬಂಧಿಸಿದವಳೊ ಅಥವಾ ಫ್ರಾನ್ಸಿನ ಒಬ್ಬ ನಿವಾಸಿಯೋ ತಿಳಿಯದು. ಅವಳ ಕಥೆಗಳು ಉಪಕಾದಂಬರಿಗಳಾದರೂ ಚೊಕ್ಕ-ವಾಗಿವೆ. ಅರ್ತುರ ಅರಸನ ಕಥೆಗೆ ಸಂಬಂಧಿಸಿ ಬರೆದ ಈ ಪದ್ಯರೂಪದ ಕಥೆಗಳು ಹಾಡಲು ಸರಳವಾಗಿವೆ; ಹೆಚ್ಚು ಉದ್ದವಿಲ್ಲ; ದೇವತೆಗಳ ಕೈವಾಡಕೊಂಚ ಜಾಸ್ತಿ. ದೇವತೆ ಹಾಗೂ ಮಾನವರ ಜೀವನದ ಮಧ್ಯೆ ನಿಲ್ಲುವವು ಈ ಕಥೆಗಳು.

ಈ ಕಾಲಕ್ಕೆ ಅನೇಕ ಕಥೆಗಾರರು ಆಗಿಹೋದರು. ಜಾ ರನಾರ ಸುಮಾರು ೧೨೭೦ ರಲ್ಲಿ ತ್ರಿಸ್ತಾಂನ ಕಥೆ ಆಧರಿಸಿ ಬರೆದ ಎಲೀ ದ ಬೊರೊನ ಕಾದಂಬರಿ 'ಪಾಲಾಮೆದ'. ಈ ಕಾದಂಬರಿ ಇಟಲಿಯಲ್ಲಿ 'ರುಸ್ತಿಸಿಯಾ ದ ಪೀಸ್ಜ'ದ ಜನನಕ್ಕೆ ಕಾರಣವಾಯ್ತು.

ಬೂರ್ಜ್ವಾ ಕಾದಂಬರಿಗಳು ಈಗ ಹೇಳಿದ ಎಲ್ಲ ಕಾದಂಬರಿಯ ಗುಣಗಳಿಗೆ ವಿರುದ್ಧವಾಗಿದ್ದವು. ಎಂದರೆ ಬೂರ್ಜ್ವಾ ಕಾದಂಬರಿಗಳಲ್ಲಿ ಪ್ರೇಮ, ಸೌಜನ್ಯ,

ಪರಾಕ್ರಮಗಳಿಗೆ ಸ್ಥಾನವಿಲ್ಲ. ಅದರ ಬದಲು ಅಣಕ, ನೈಜಕತೆ, ವ್ಯಂಗ್ಯ, ವಿಡಂಬನೆ ಹಾಗೂ ಕೀಳ್ಮಟ್ಟದ ಭಾಷಾಶೈಲಿ ಇವನ್ನು ಕಾಣಬಹುದಿತ್ತು. ಈ ಬೂರ್ಜ್ವಾ ಸಾಹಿತ್ಯ ದಲ್ಲಿ ಜಾನಪದ ಕಥೆಗಳು ಹೆಚ್ಚಾಗಿ ಬರುವವು. ಈ ಕಾದಂಬರಿಗಳ ಮುಖ್ಯ ಲಕ್ಷಣ-ವೆಂದರೆ ಸ್ತ್ರೀಯರ ಬಗೆಗೆ ಇರುವ ಸಾಮಾಜಿಕ ಜಿಗುಪ್ಸೆ. ಸುಮಾರು ಹದಿಮೂರನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ ರೋಮನ್ನರ ಕಾಯಿದೆ ಹಕ್ಕು ಗಳು ಬಂದು ಹೆಂಗಸಿಗೆ ಮನೆಯಲ್ಲಿ ಹಾಗೂ ಸಮಾಜದಲ್ಲಿ ಎರಡನೇ ಸ್ಥಾನ ಕೊಟ್ಟವು. ಇದನ್ನೇ ಪ್ರತಿಬಿಂಬಿಸುವಂತೆ ಸುಪ್ರಸಿದ್ಧ ನಾಟಕಕಾರ ಮೊಲಿಯೇರನ ನಾಟಕಗಳಲ್ಲಿ ಮನೆಯಲ್ಲಿ ತಂದೆ ಮುಖ್ಯ; ಮಕ್ಕಳ ವಿದ್ಯಾಭ್ಯಾಸ ಮದುವೆ ಎಲ್ಲದಕ್ಕೂ ಅವನು ಸ್ವತಂತ್ರನಾಗಿ ವಿಚಾರಿಸಿ ನಿರ್ಣಯಿಸುವನು; ಹೆಂಡತಿಗೆ ಏನೂ ಪಾತ್ರ ಇಲ್ಲ ಇದರಲ್ಲಿ.

'ರಿಷ' ಎಂಬುದು ಮೊದಲ ಬೂರ್ಜ್ವಾ ಕಾದಂಬರಿ ಎಂದು ಹೇಳುವರು (೧೧೫೯-೧೧೭೦). ಇದು ತುಂಬ ಕೀಳ್ತರಗತಿಯದು. ಭಾಷೆಯಲ್ಲಿ ಬಿಗುವಿಲ್ಲ; ಅಲ್ಲದೆ ಲೇಖನಿ ಸ್ವೇಚ್ಛೆಯಿಂದ ಓಡಿದೆ, ಓದಲು ಸ್ವಲ್ಪ ಹೇಸಿಕೆ ಬರುವಂತಹದು. ಇದರ ನಂತರ ಬಂದುದೊಂದು ಪ್ರಾಣಿಗಳ ಕಥೆ. ಅದರಲ್ಲಿಯೂ ನರಿ ತನ್ನ ಠಕ್ಕುತನಕ್ಕೆ ಪ್ರಸಿದ್ಧವಾದುದು. ಈ ಕಾದಂಬರಿಗಳಿಗೆ ಮೂಲ ಆಧಾರ ಸಿಕ್ಕುದು ಪೌರ್ವಾತ್ಯ ದೇಶಗಳ ಸಾಹಿತ್ಯದಲ್ಲಿ, ಎಂದರೆ ಸಿರಿಯಾ, ಪರ್ಶಿಯಾ ಹಾಗೂ ಹಿಂದು ಸ್ಥಾನದ ಕಥೆಗಳಲ್ಲಿ. ಈ ಕಥೆಗಳು ಅನಂತರ ರಶಿಯಾ, ಫಿನ್‌ಲಂಡ್ ಹಾಗೂ ಉಳಿದೆಲ್ಲ ಯುರೋಪಿನ ದೇಶಗಳಿಗೆ ಹೋದವು.

ಸುಮಾರು ಹದಿಮೂರನೇ ಶತಮಾನದ ಮಧ್ಯಕ್ಕೆ ಈ ಪ್ರಾಣಿಸಾಹಿತ್ಯದಲ್ಲಿ ಮನುಷ್ಯರ ರೂಪ ಬರತೊಡಗಿದವು. ಅಂದಿನ ರಾಜಕಾರಣವನ್ನು ಟೀಕಿಸಲು ಈ ಕಥೆಗಳು ಒಳ್ಳೆ ಸಾಧನವಾಗಿಬಿಟ್ಟವು. 'ರನಾರ ಲಬೆಸ್ತೊರ್ನೆ' ಎಂಬುದು ೧೨೬೧-೭೦ ರಲ್ಲಿ ರಚಿತವಾದುದು. ಚರ್ಚು ಪ್ಯಾರಿಸ್ ವಿಶ್ವವಿದ್ಯಾಲಯುವನ್ನು ವಿಂಗಡಿಸಿದ್ದನ್ನು ಟೀಕಿಸಿ ಬರೆದದ್ದು. ೧೫೩೫ ರ ಸುಮಾರಿಗೆ ಹೊರಬಿದ್ದ 'ನರಿಗೆ ಕಿರೀಟ' ಇನ್ನೊಂದು ಕಥೆ ಚರ್ಚಿನವರ ಡಂಭಾಚಾರ ಟೀಕಿಸುವಂಥದು. ಈ ಎಲ್ಲ ಕಥೆ ಕಾದಂಬರಿಗಳು ಪದ್ಯರೂಪದಲ್ಲಿವೆ.

ಈ ಜಾನಪದ ಸಾಹಿತ್ಯವನ್ನವಲಂಬಿಸಿ ಬಂದ ಬೇರೆ ಕಾದಂಬರಿಗಳೆಂದರೆ ನೀತಿ ಕಥೆಗಳು. ಉದಾ: ಜಾ ದ ಬ್ಲಾನ 'ಬಾರಿ' ಕಥೆ. ಒಬ್ಬ ಸರದಾರನಿಗೆ ಋಷಿಯೊಬ್ಬ ಒಂದು ಪಾತ್ರೆಯನ್ನು ಕೊಟ್ಟು ಅದರಲ್ಲಿ ನೀರು ತುಂಬಿಸಲು ಹೇಳವನು. ಸರದಾರ ಎಷ್ಟೇ ಪ್ರಯತ್ನಿಸಿದರೂ ಪಾತ್ರೆ ತುಂಬಲಿಲ್ಲ. ಆದರೆ ಅವನಿಂದ ಬಿದ್ದ ಒಂದು ಕಣ್ಣೀರ ಹನಿಯಿಂದ ಪಾತ್ರೆ ತುಂಬಿ ಹರಿಯಿತು. ಇದು ತಪಸ್ಸು ಶ್ರದ್ಧೆಗೆಂದು ಹೇಳುವ ಕಥೆ.

ಇನ್ನೊಂದು ಸುಪ್ರಸಿದ್ಧ ಕಥೆ ಎಂದರೆ 'ಭಾಗವಾದ ಹೊದಿಕೆ'. ಯುವಕನೊಬ್ಬ

ತನ್ನ ಮುದುಕ ತಂದೆಯನ್ನು ಮನೆಯಿಂದ ಹೊರಗೆ ಹಾಕುವನು. ಮುದುಕ ಚಳಿ-ಯಿಂದ ರಕ್ಷಿಸಿಕೊಳ್ಳಲು ಒಂದು ಹೊದಿಕೆ ಕೇಳುವನು. ಯುವಕ ತನ್ನ ಮಗನಿಗೆ ಶಾಲೊಂದನ್ನು ತಂದು ತಾತನಿಗೆ ಕೊಡಲು ಅಪ್ಪಣೆ ಕೊಡುವನು. ಮಗ ಶಾಲನ್ನು ಅರ್ಧ ಹರಿದು ತಾತನಿಗೆ ಕೊಟ್ಟು, "ಇನ್ನರ್ಧ ಅಪ್ಪಾ ನೀನು ಹೀಗೆ ಹೋಗುವಾಗ ಇರಲಿ, ಎಂದಿಟ್ಟಿರುವೆ" ಎಂದು ಹೇಳುವನು. ಈ ಕಥೆಯನ್ನು ಬರೆದವ ಬೆರ್ನಿಯೆ ಎಂಬವ. ಇಂತಹ ನೀತಿಕಥೆಗಳೂ ಉಂಟು. ಈ ಬೂರ್ಜ್ವಾ ಸಾಹಿತ್ಯದಲ್ಲಿ ಬರುವ ಅನೇಕ ಕಾದಂಬರಿಗಳು ಹಾಸ್ಯಕ್ಕೂ ಮೀಸಲಾಗಿವೆ. ಇನ್ನು ಕೆಲವು ಗಂಡಸರ ಅಸೂಯೆಯನ್ನು ತೋರಿಸುವಂಥವು.

ಆಸ್ರಿ ದ ಆಂಡೆಲಿಯು, ಜಾನಪದ ಸಾಹಿತ್ಯವನ್ನವಲಂಬಿಸಿ ಬರೆದ ಅನೇಕ ಕಾದಂಬರಿಗಳಲ್ಲಿ ಆಣಕ ಶಿಖರವನ್ನೇ ತಲುಪಿದೆ. 'ಅರಿಸ್ತಾತನ ಹಾಡು' ಎಂಬುದರಲ್ಲಿ ತತ್ತ್ವಜ್ಞಾನ ಹೆಣ್ಣಿನ ಕೈಗೊಂಬೆಯಂತೆ ಎಂದಿದ್ದರೆ 'ಕಲೆಗಳ ಯುದ್ಧ' ಎಂಬುದರಲ್ಲಿ ಪ್ಯಾರಿಸ್ ಯುನಿವರ್ಸಿಟಿ ಭಾಗವಾದ ಕಥೆ ಇದೆ. ಇವನು ಬರೆದ ಇನ್ನೊಂದು ಬಗೆಯ ಕಾದಂಬರಿ ಅಥವಾ ಸಾಹಿತ್ಯಪ್ರಕಾರವೆಂದರೆ ನಾಟ್ಯಭಟ – ಸಂಭಾಷಣೆ. ಒಬ್ಬನೇ ಏಕಪಾತ್ರಧಾರಿಯಾಗಿ ಮಾತಾಡುವದು. ಈ ಸಾಹಿತ್ಯದಲ್ಲಿ ಸ್ತ್ರೀಯನ್ನು ಹೇರಳವಾಗಿ ಹೀಗಳೆದಿದ್ದಾರೆ ಲೇಖಕರು. ಅದರಲ್ಲಿ ಆಸ್ರಿ ಆಂಡೆಲಿ ಮುಖ್ಯ. ಸಮಾಜ ದಲ್ಲಿರುವ ಗೋಮುಖ ವ್ಯಾಘ್ರರ ಚಿತ್ರ 'ಚಾತಿ ಮುಪಾರ್ದ' ಎಂಬ ಪುಸ್ತಕದಲ್ಲಿದೆ. ಹುಚ್ಚು ಹೇಗೆ ಹಿಡಿಯುವದು ಎಂಬ ಹುಚ್ಚಿನ ಆರು ಮುಖಗಳು ಚಿತ್ರಿತವಾಗಿವೆ ಕೆಲ ಕಾದಂಬರಿಗಳಲ್ಲಿ. ಸ್ವಭಾವದಿಂದ ಹುಚ್ಚು, ಗರ್ವದಿಂದ ಮೂಢನಾಗಿರುವದು, ದುಃಖದಿಂದ ಅಲಕ್ಷ್ಯತನದಿಂದ ಹೇವದಿಂದ ಇತ್ಯಾದಿ ಹುಚ್ಚುರಾಗುವದು. ಇವು-ಗಳಿಂದ ನೀತಿಪಾಠ ಕಲಿಯುವದೇ ಹೆಚ್ಚು.

ಗಿಯೋಮು ದ ವೀಲನವ್ವ ಎಂಬ ಲೇಖಕನ ಲೇಖನಿ ಹೊತ್ತು ಮಾರುವವರ ಕೂಗನ್ನು ಚಿತ್ರಿಸಿದೆ. ಈಗ ಫ್ರಾನ್ಸಿನಲ್ಲಿ ಹೊತ್ತು ಮಾರುವವರು ಕಣ್ಮರೆಯಾಗಿ-ರುವದರಿಂದ ಈ ಪುಸ್ತಕ ಆಗಿನ ನಿತ್ಯಜೀವನದ ಕೈಗನ್ನಡಿಯಾಗಿದೆ.

ಇನ್ನೊಂದು ಸಂಭಾಷಣೆ. ಇದರಲ್ಲಿ ಮುಖ್ಯ ವಿಷಯ ಹಿಡಿದು ಸಂಭಾಷಿಸು-ವದು. ಇದು ಕವಿತಾರೂಪದಲ್ಲಿರುವ ಸಂಭಾಷಣೆ ಇದರಲ್ಲಿ ಯಾವಾಗಲೂ ನೀತಿಪಾಠ ಬರುವದು ಹೆಚ್ಚು. ಈ ಭಾಗ ಸಾಹಿತ್ಯದಲ್ಲಿ ಕಾದಂಬರಿಯೂ ಆಗಬಹುದು ನಾಟ-ಕದ ಮೂಲವೂ ಆಗಬಹುದು. ಆದರೂ ಇದನ್ನು ಕಾದಂಬರಿಯ ಒಂದು ಶಾಖೆ ಎಂದೇ ಹೇಳುವರು.

ಹದಿನೈದನೇ ಶತಮಾನದಲ್ಲಿ ಕಥೆಗಳು ಕಂಡುಬಂದವು– ಚಿಕ್ಕ ಕಥೆಗಳು. ಇವು ಕಾದಂಬರಿಗಿಂತ ಚಿಕ್ಕವು. ಕೆಲವೊಮ್ಮೆ ಈ ಕಥೆಗಳು ಅನೇಕ ಪುಟಗಳಷ್ಟು ಆಗಿರುತ್ತವೆ. ಇವುಗಳಲ್ಲಿ ಹೆಚ್ಚಾಗಿ ಕಂಡುಬರುವದು ಬೂರ್ಜ್ವಾ ಜನರ ಚಿತ್ರ. ಬೂರ್ಜ್ವಾ ಜನ ಶ್ರೀಮಂತರು, ಆದರೆ ಬುದ್ಧಿ ಇಲ್ಲ, ನಡತೆ ಹೇಳಿಕೊಳ್ಳುವಂತಹದ್ದೂ

ಅಲ್ಲ. ಆದರೂ ಒಂದು ಕಾಲಕ್ಕೆ ಫ್ರಾನ್ಸಿನಲ್ಲಿ ಇವರದೇ ಮೇಲುಗೈ ಆಗಿತ್ತು. ಇವರನ್ನು ಅವಹೇಳನ ಮಾಡಿ ಬರೆದ ಸಾಹಿತ್ಯಕ್ಕೇನೂ ಕಡಿಮೆ ಇಲ್ಲ ಫ್ರಾನ್ಸಿನಲ್ಲಿ.

ಇವು ಕಥೆಯೇ ಇರಬೇಕು ಎಂದೇನಿಲ್ಲ; ಒಂದು ಘಟನೆಯನ್ನೇ ರಸವತ್ತಾಗಿ ವರ್ಣಿಸಲೂ ಸಾಕು. 'ಮದುವೆಯ ಹದಿನೈದು ಸುಖಗಳು' ಎಂಬುದರ ಲೇಖಕ ಯಾರೆಂದು ಗೊತ್ತಿರದಿದ್ದರೂ ಅದರಲ್ಲಿ ಬರುವ ಘಟನೆಗಳು ಹೆಂಗಸರ ವಿರುದ್ಧವಾಗಿವೆ. ಸುಮಾರು ೧೪೪೮ ರಲ್ಲಿ ಬರೆದ ಇನ್ನೊಂದು ಕೃತಿಯಲ್ಲಿ ಒಬ್ಬ ಯುವಕನ ಅದ್ಭುತ ಕೃತಿಗಳಿವೆ. ತನ್ನ ಪ್ರೇಯಸಿಯನ್ನು ಪಡೆಯಲು ಸರದಾರ ಏನೆಲ್ಲ ಪರಾಕ್ರಮ ತೋರಿಸುತ್ತಿರುವಾಗ ಪ್ರೇಯಸಿ ಮತ್ತೊಬ್ಬನೊಡನೆ ವಿರಮಿಸುವಳು. ಅನಂತರ ಪ್ರೇಯಸಿಯ ವಿಟ ಹಾಗೂ ಪ್ರೇಮಿಯ ಮಧ್ಯೆ ನಡೆದ ಚಕಮಕಿ ಈ ಕಥೆಗೆ ಆಧಾರ. ಇದನ್ನು ಬರೆದವನು ಅನ್ತ್ವಾನ ದ ಲಾ ಸಾಲ್ಲ.

'ಗುಲಾಬಿ ಹೂ' ಕಾದಂಬರಿ ಸುಮಾರು ೧೨೭೫ ರಲ್ಲಿ ಬರೆದ ಪದ್ಯಕಾದಂಬರಿ. ಇಪ್ಪತ್ತೆರಡು ಸಾವಿರ ನುಡಿಗಳಿಂದ ಕೂಡಿದೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲ ಭಾಗ ನಾಲ್ಕು ಸಾವಿರ ಪದ್ಯಗಳಲ್ಲಿ ಸುಮಾರು ೧೨೩೭ ರಲ್ಲಿ ಗಿಯೋಮ ದ ಲೊರಿಸ್ ಎಂಬವನಿಂದ ರಚಿತವಾದುದು. ಇನ್ನೊಂದು ಭಾಗ ಸುಮಾರು ೧೨೭೫ ರಲ್ಲಿ ಪೂರ್ತಿಗೊಳಿಸಿದುದು. ೧೮ ಸಾವಿರ ಪದ್ಯಗಳಿರುವ ಎರಡನೇ ಭಾಗದ ಕರ್ತೃ ಜಾ ಕ್ಲೊಪಿನಲ್ ಅಥವಾ ಶೊಪಿನೆಲ್. ಈ ಎರಡೂ ಭಾಗಗಳನ್ನೋದಿದಾಗ ಆ ಆ ಕಾಲಕ್ಕಿದ್ದ ರೀತಿ ಪದ್ಧತಿಗಳು ತಿಳಿದು ಬರುವದು. ಲೊರಿಸ್‌ನ ಕಾವ್ಯದಲ್ಲಿ ಆದರ್ಶ ಪ್ರೇಮ ಜೀವಾಳವಾಗಿದ್ದರೆ ಕ್ಲಾಪಿನೆಲ್‌ನ ಕಾವ್ಯದಲ್ಲಿ ಅದು ಸಂಪೂರ್ಣ ಮಾಯವಾಗಿದ್ದು ಗ್ರಾಮೀಣ ಭಾಷೆ ಹಾಗೂ ಕೆಳತರಗತಿಯ ಶೈಲಿ ಕಂಡುಬರುವದು. ಶಾಪಿನಲ್ ಆದರ್ಶ ಪ್ರೇಮ, ಪರಾಕ್ರಮಗಳಿಗೆ ಚೆನ್ನಾಗಿ ಆರತಿ ಮಾಡಿಬಿಟ್ಟಿದ್ದಾನೆ. ಲೊರಿಸ್ ಕಲ್ಪನೆಯಲ್ಲಿ ಕನಸು ಕಾಣುವನು. ಕನಸಿನಲ್ಲೊಂದು ತೋಟ, ತೋಟದಲ್ಲೊಂದು ಗುಲಾಬಿ ಹೂ. ಅದನ್ನು ನೋಡುತ್ತ ಅದನ್ನೇ ಪ್ರೇಮಿಸುವನು. ಆಗೊಂದು ಬಾಣ ಅವನೆದೆಗೆ ನೆಡುವದು. ಅಂದಿನಿಂದ ಅವನು ಗುಲಾಬಿಯ ಪ್ರೇಮ ಗಳಿಸಲು ಏನೆಲ್ಲ ಮಾಡುವನು. ಈ ಕಥೆ 'ತ್ರಿಸ್ತ' ಹಾಗೂ ಉಳಿದೆಲ್ಲ ಕಥೆಗಳಿಗಿಂತ ಬೇರೆಯಾಗಿದೆ, ಪ್ರೇಮಸಾಮ್ರಾಜ್ಯದಲ್ಲಿ. ಈ ಕಾದಂಬರಿಯ ಮುಖ್ಯ ಲಕ್ಷಣವೆಂದರೆ ಗುಣಗಳು ಮೈದಳೆದು ಬಂದಿವೆ. ಪ್ರೇಮ, ದುಃಖ, ಸೌಜನ್ಯ, ಸುಗುಣ ಇತ್ಯಾದಿ ಎಲ್ಲವೂ ಮೂರ್ತಿಗಳಾಗಿ ಬಂದು ಮಾತನಾಡುತ್ತವೆ. 'ಗುಲಾಬಿ ಹೂ' ಈ ಕಾದಂಬರಿ ಮನುಷ್ಯನನ್ನು ಉನ್ನತ ಸುಖಗಳೆಡೆಗೆಳೆದೊಯ್ದು ಒಂದು ರೀತಿಯ ಅಗಾಧ ಸುಖ ಕೊಡುತ್ತದೆ. ಇದೂ ಒಂದು ರೀತಿಯ ವಿನೋದಕಾರಕ ಕಾದಂಬರಿ.

ಹದಿನಾರನೇ ಶತಮಾನದ ಎರಡನೇ ಭಾಗದಲ್ಲಿ ಹೆಚ್ಚು ಕಾದಂಬರಿಗಳು ಹುಟ್ಟಲಿಲ್ಲ. ಆದರೆ ಒಮ್ಮೆಲೇ ೧೫೫೦ ರಿಂದ ೧೬೧೦ ರಲ್ಲಿ ಸುಮಾರು ನೂರಾರು ಕಾದಂಬರಿಗಳು ಜನಿಸಿದುದರ ಕಾರಣ ಇನ್ನೂ ತಿಳಿದಿಲ್ಲ. ಈ ಸುಮಾರಿಗಾಗಲೇ

ಶೌರ್ಯ, ಸಾಹಸ, ಪರಾಕ್ರಮಗಳು ಕಣ್ಮರೆಯಾಗುತ್ತ ಪ್ರೇಮ, ಸ್ತ್ರೀ ಇವಕ್ಕೆ ಹೆಚ್ಚಿನ ಪ್ರಾಮುಖ್ಯ ಕೊಡಲಾಯಿತು. ಈಗ ಸ್ತ್ರೀಯರಿಗೆ ಸಮಾಜದಲ್ಲಿ ಸ್ವಲ್ಪ ಸ್ಥಾನಮಾನ ಸಿಕ್ಕತೊಡಗಿತು. ಅವಳೂ ಒಬ್ಬ ಮನುಷ್ಯಳು, ಅವಳಿಗೂ ಹೃದಯವಿದೆ ಎಂದು ಕಾಣತೊಡಗಿದರು. ಕಾವ್ಯ ಪ್ರೇಮದಲ್ಲಿ ತನ್ನ ಮೇಲುಗೈ ತೋರಿಸತೊಡಗಿತು. ಸ್ಪೇನಿನ ಮೊಸ್ತೆಮಯೊರ ಎಂಬವನ ಪ್ರಭಾವವಿರಬೇಕು ಎಂದು ಹೇಳುತ್ತಾರೆ.

'ಆಸ್ತ್ರೆ' ಎಂಬುದು ಈ ಶತಮಾನದ ಮೊಟ್ಟ ಮೊದಲ ಕಾದಂಬರಿ. ಬರೆದವನೊಬ್ಬ ಶೂರ ಸೈನಿಕ ಎಂದರೆ ಆಶ್ಚರ್ಯವೇ ಸರಿ. ಓನೋರೆ ದುರ್ಫೆ (೧೫೬೮-೧೬೨೫) ಎಂಬವನು ಹುಟ್ಟಿದ್ದು ಮೊರ್ಸೇಲ್ಸನಲ್ಲಿ. ಐದು ಭಾಗಗಳಾಗಿ ಅರವತ್ತು ಹೊತ್ತಿಗೆಗಳ ಆರು ಸಾವಿರ ಪುಟದ ಬೃಹತ್ಕಾದಂಬರಿ, ಇದರಲ್ಲಿ ಬರುವ ಪಾತ್ರಗಳು ಗ್ರಾಮ್ಯಸ್ಥರು. ಈ ಕಾದಂಬರಿಯು ಗ್ರಾಮ್ಯಜೀವನವನ್ನು ಚೆನ್ನಾಗಿ ಚಿತ್ರಿಸಿದೆ. ಸಭ್ಯಗ್ರಾಮೀಣ ಗೋಪಾಲಕರು ಇಲ್ಲವೆ ಕುರಿಕಾಯುವವರು-ಅವರಲ್ಲಿನ ಪ್ರೇಮ, ಪ್ರಾಣಿಕ ಶುದ್ಧ ಪ್ರೇಮ. ಗೋಪಾಲಕ ಸೆಲಾದೊ ಹಾಗೂ ಗೋಪಿ ಆಸ್ತ್ರೆ ಇವರ ಮಧ್ಯ ಇರುವ ಪ್ರೇಮ, ಅದಕ್ಕೆ ಬರುವ ಅಡತಡೆ, ಕನಸಿನ ಸಾಮ್ರಾಜ್ಯ, ಇವಲ್ಲದೇ ಆಗಿನ ಸಮಾಜ ಚಿತ್ರಿಸುವ ಕೈಗನ್ನಡಿಯಾಗಿದೆ. ಇದು ಇಟಲಿಯ ನೇಪಲ್ಸಿನ ಅರಸು ಹಾಗೂ ಅಲ್ಲಿಯ ಜನಜೀವನ ರೂಢಿ ಪದ್ಧತಿಗಳನ್ನು ಚೆನ್ನಾಗಿ ತೋರಿಸಿಕೊಡುತ್ತದೆ. ಈ ಕಾದಂಬರಿ, ತನ್ನ ಕಾಲಕ್ಕೆ ವೈಭವಶಿಖರಕ್ಕೇರಿತ್ತು. ಇದೇ ರೀತಿಯ ಇನ್ನೊಂದು ಕಾದಂಬರಿ ಎಂದರೆ ಸ್ಪೇನಿನ ಮೊಸ್ತೆಮಯೊರನ 'ದಿಯಾನಾ'. ಅದರ ನಂತರ ಈ ರೀತಿಯ ಕಾದಂಬರಿಗಳು ಕಣ್ಮರೆಯಾದವು.

ಗ್ರಾಮ್ಯಜೀವನ ಚಿತ್ರಿಸುವ ಈ ಕಾದಂಬರಿಗಳು ಬೇಗ ಕೊನೆಗೊಂಡವು. (೧೬೬೦ ರಲ್ಲಿ). ಕಾರಣ? 'ಆಸ್ತ್ರೆ' ತನ್ನದೇ ಕೀರ್ತಿ ಗಳಿಸಿಕೊಂಡಿತ್ತು. ಆದರೂ ಏಕೆ ಮಾಯವಾದವು? ಓದುಗರರಲ್ಲಿಲ್ಲವೆಂದಲ್ಲ. ಲೇಖಕರಿಗೆ ಹೊಸ ಕಲ್ಪನಾಲೋಕ ರಚಿಸಲು ಕಷ್ಟವಾಗತೊಡಗಿದಾಗ ಈ ಸಾಹಿತ್ಯದ ಝರಿ ತನ್ನಷ್ಟಕ್ಕೆ ತಾನೇ ಬತ್ತಿಕೊಂಡಿತು. ಈ ಕಾದಂಬರಿಗಳಲ್ಲಿ ಬರುವ ಗೋಪಾಲಕರು ಗೋಪಾಲಕರಾಗಿರದೇ ಸಭ್ಯಜನಪ್ರೇಮದಲ್ಲಿ ಆಳವಾಗಿ ಇಳಿದವರು, ಪ್ರೇಮವ ಕನಸಿನ ಲೋಕದಲ್ಲಿ ವಿಹರಿಸುವ ಪ್ರಣಯಿಗಳು. ಇಂತಹ Pastorale ಕಾದಂಬರಿಗೆ ಕಥೆ ರಚಿಸುವದೇನೂ ಸರಳವಲ್ಲ.

ಈಗ ಜನರಲ್ಲಿ ಪುಟಸಾರ್ವಭೌಮರಾಗುವ ಹುಚ್ಚು ಕಡಿಮೆಯಾಗತೊಡಗಿತು. ಪರಿಣಾಮವಾಗಿ ಚಿಕ್ಕ ಚೊಕ್ಕಟವಾದ ಕಾದಂಬರಿಗಳು ಹೊರಬೀಳತೊಡಗಿದವು. ೧೬೬೭ ರಲ್ಲಿ ಪ್ರಸಿದ್ಧವಾದ 'ಅಸೇಕ್ಸಾಂದ್ರ' ಹಾಗೂ ೧೬೬೯ ರಲ್ಲಿ ಹೊರಬಿದ್ದ ಕ್ಲಿಯೊಸಿಸ ಎಂಬವು ಐತಿಹಾಸಿಕ ಕಾದಂಬರಿಗಳು. ಈಗ ಕಲ್ಪನೆಯ ಲೋಕದಿಂದ ನೈಜಲೋಕಕ್ಕಿಳಿದು ಬಂದರು ಲೇಖಕರು. ರಾಜಮಹಾರಾಜರ ಚಿತ್ರ ಚಿತ್ರಿಸುವ ಕಾದಂಬರಿಗಳಿವಾದವು. ಐತಿಹಾಸಿಕ ಕಾದಂಬರಿಗಳು ಎಂದು ಹೇಳಿಕೊಳ್ಳುವ ಈ

ಕಾದಂಬರಿಗಳಲ್ಲಿ ಕುಮಾರಿ ದ ಸ್ಕುದ ಎಂಬವಳ ಹೆಸರು ಚಿರಸ್ಮರಣೀಯವಾಗಿದೆ. 'ಇಬ್ರಾಹಿಮ' (೧೬೪೧) 'ಸುಪ್ರಸಿದ್ಧ ಸಿರುಸ್' (೧೬೪೯–೧೬೫೩), 'ಕ್ಲೆಲಿ' (೧೬೫೪) ಅವಳಿಂದ ರಚಿಸಲ್ಪಟ್ಟವು.

ಈ ಕಾದಂಬರಿಗಳು ತಮ್ಮ ಕಾಲದ ಸಮಾಜ ರೀತಿ ನೀತಿ ನಡೆನುಡಿಗಳನ್ನು ಚಿತ್ರಿಸದೇ ಐತಿಹಾಸಿಕ ವ್ಯಕ್ತಿಗಳ ಸಮಕಾಲೀನ ಸಮಾಜವನ್ನು ಕಲ್ಪಿಸಿ ಪ್ರದರ್ಶಿಸ ತೊಡಗಿದವು. ಕಲ್ಪನೆಯೊಡನೆ ಮಾನಸಶಾಸ್ತ್ರವೂ ಕೂಡತೊಡಗಿತು, 'ಹೃದಯ ನಕಾಶೆ' ಒಂದು ರಚಿತವಾಯಿತು. ಒಂದು ನಕಾಶೆ ತಯಾರಿಸಿ ಅದರಲ್ಲಿ ಅಲ್ಲಲ್ಲಿ ಗುಡ್ಡ ಬೆಟ್ಟ ಹಾಗೂ ನದಿಗಳನ್ನು ನಿರ್ಮಿಸಿ ಹೆಸರಿಸುವರು. ಅನಂತರ ಪ್ರೇಮಿಗಳ ಮನಸ್ಥಿತಿಯ ಪ್ರಕಾರ ಅವರನ್ನು ಆ ಆ ಸ್ಥಳಗಳಿಗೆ ಕಳಿಸುವರು. ಈ ನಕ್ಷೆಯ ಸಹಾಯದಿಂದ ಪ್ರಣಯಿಗಳ ಮನಸ್ಥಿತಿ ಹಾಗೂ ವೇಗಗಳು ಸ್ವಚ್ಛವಾಗಿ ತಿಳಿದು ಬರುತ್ತಿದ್ದವು. ಸ್ಕುದೆರಿಯ 'ಕ್ಲೆಲಿ' ಕಾದಂಬರಿಯ ಮುಖ್ಯ ಲಕ್ಷಣ 'ಹೃದಯ ನಾಶೆ' ದ ಉಪಯೋಗ. ಅವಳ ಕಾದಂಬರಿಗಳಿಂದ ಪ್ರೇಮಮಯ ಜೀವನದ ಕಾಯಿದೆ ನೇಮ ನಿಯಮಗಳನ್ನು ಕಲಿಯಬಹುದು. "ವಿಷಯಾಭಿಲಾಷೆಪ್ರೇಮ-ಜೀವನಕ್ಕೆ ಬೇಕೇ ಬೇಕು. ಆದರೆ ಇವುಗಳ ಬಗೆಗೆ ವ್ಯಕ್ತಿಯ ನಡತೆ ಆದರ್ಶವಾಗಿರ ಬೇಕು. ಇವಿಲ್ಲದ ಜೀವ ಮಧ್ಯಮ ತರಗತಿಯದು; ಕೆಳ ಮಟ್ಟದ ನೀತಿಯದು. ಆದರ್ಶ ಜೀವನದ ಜೀವಾಳ ಪ್ರೇಮ," ಎಂಬುದು ಸ್ಕುದೆರಿಯ ತತ್ತ್ವ. ಇವು ದಿದರೋ ಹಾಗೂ ರುಸ್ಸೋನ ತತ್ತ್ವಗಳಿಗೆ ಸಮೀಪಿಸಿವೆ.

ಸುಮಾರು ೧೬೭೦ ರಲ್ಲಿ ರಚಿತವಾದ 'Annales Galantes' (ಪರಾಕ್ರಮದ ದಿನಚರಿ ಎನ್ನಬಹುದು) ಈ ಕಥೆಗಳು ಐತಿಹಾಸಿಕವಾಗಿದ್ದವಷ್ಟೇ ಅಲ್ಲ, ಅವುಗಳಲ್ಲಿ ಪ್ರೇಮಕ್ಕಾಗಿ ತೋರಿಸಿದ ಪರಾಕ್ರಮವು, ಐತಿಹಾಸಿಕ ಸಂಗತಿಗಳನ್ನು ತಾರೀಖಿನ ಪ್ರಕಾರ ವಿಸ್ತರಿಸಲಾಗಿದೆ. ಈ ಕಾದಂಬರಿಯ ನಂತರ ಬಂದ ಅನೇಕ ಕಾದಂಬರಿಗಳು ಭೂತಾಕಾರದ ಪ್ರಶ್ನೆ ಎದುರಿಸಬೇಕಾಯಿತು. ಓದುಗರು ಬರಿಯ ಕಥೆಯನ್ನು ಮಾತ್ರ ಓದದೆ ಲೇಖಕನನ್ನು ಐತಿಹಾಸಿಕ ಸಂಗತಿ ಬಗೆಗೆ ಪ್ರಶ್ನಿಸತೊಡಗಿದರು. ಲೇಖಕ ಕಲ್ಪನೆಯ ಕುದುರೆಯನ್ನು ಬೇಕಾದಂತೆ ಓಡಿಸಲು ಸಾಧ್ಯವಾಗುತ್ತಿರಲಿಲ್ಲ. ಆತ ಏನು ಬರೆದರೂ ಅದಕ್ಕೆ ಆಧಾರ ಕೊಟ್ಟು ತನ್ನ ವಿಚಾರಗಳನ್ನು ಸಮರ್ಥಿಸಿಕೊಳ್ಳಬೇಕಾಗುತಿತ್ತು. ಈ ಕಾದಂಬರಿಗಳಲ್ಲಿ ನೈಜಕತೆಗೆ ಮಹತ್ವ ಕೊಟ್ಟಿದೆ ಎಂದರು. ಆದರೆ ಮುಂದೆ ೧೯ನೇ ಶತಕದಲ್ಲಿ ಬಂದ ಕಾದಂಬರಿಗಳಲ್ಲಿಯ ನೈಜಕತೆಗೂ ೧೭ನೇ ಶತಕದ ನೈಜಕತೆಗೂ ಅಜಗಜಾಂತರ. ೧೭ನೇ ಶತಮಾನದ ನೈಜಕತೆ ೧೯ನೇ ಶತಮಾನದೊಂದಿಗೆ ಹೋಲಿಸಿ ನೋಡಿದಾಗ ಮೊದಲನೆಯದು ಎರಡನೇದರ ಅಣಕದಂತೆ ಕಂಡುಬರುವದು. ಈ ಎಲ್ಲ ಕಾದಂಬರಿಗಳ ಮೂಲ ೧೬೦೩ ರಲ್ಲಿ ಲ್ಯಾಟಿನ್ ಭಾಷೆಯಲ್ಲಿ ರಚಿತವಾದ ಆಂಗ್ಲೆ ಬಾರ್ಕಲೆಯ 'ಸಾತಿರಿಕೊ'. ಅನಂತರ ಇದು ಎಲ್ಲ ಭಾಷೆಗಳಲ್ಲಿ ಭಾಷಾಂತರವಾಯಿತು. ೧೬೨೩–೧೬೩೩ ರಲ್ಲಿ

ಜೆಕಕಿಗೆ ಬಂದ ಶಾರ್ಲ ಸೊರೊಲ್‌ನ ಕಾದಂಬರಿಗಳಲ್ಲಿ ಹಾಸ್ಯದ ಹೊನಲು ಹರಿಯುತ್ತದೆ. ಈ ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳು ಮಧ್ಯಮ ತರಗತಿಯವರು. ಅಲ್ಲದೇ ಸಮಕಾಲೀನ ಸಮಾಜದ ಚಿತ್ರ ಅಥವಾ 'ಫ್ರಾನ್ಸಿಯೋನ ವಿನೋದಪೂರಕ ಕಥೆ' ಎಂಬುದು ಹಾಸ್ಯದಲ್ಲಿ ಮೇಲುಗೈ.

'ಪ್ರೋಲಿಕ್ಸಾಂಡ್ರದ ಗೊಂಬೆರಪ್ಟಲ'ಎಂಬ ಕಾದಂಬರಿಯನ್ನು ಯಾವ ಗುಂಪಿಗೆ ಸೇರಿಸಬೇಕೆಂದು ಇನ್ನೂ ತಲೆ ಕೆರೆದುಕೊಳ್ಳುತ್ತಿದ್ದಾರೆ, ಭಾಷಾಸಾಹಿತ್ಯದ ಇತಿಹಾಸಜ್ಞರು. ಈ ಕಾದಂಬರಿ ಸರ್ವಗುಣಸಂಪನ್ನವಾಗಿದೆ. ಇತಿಹಾಸ, ಹಾಸ್ಯ, ಬುದ್ಧಿಚಾತುರ್ಯ, ಪರಾಕ್ರಮ, ಆದರ್ಶ, ನೈತಿಕತೆ ಅಲ್ಲದೇ ಸೈನಿಕ ಜೀವನದರ್ಪಣವಾಗಿದೆ. ಆದರೆ ಅಲ್ಲಲ್ಲಿ ಬರುವ ಅಸಂಬದ್ಧತೆ ಸ್ವಲ್ಪ ಓದುಗರಿಗೆ ಹಿಡಿಸದಂತಾಗುತ್ತದೆ. ಆದರೂ ನಾಲ್ಕು ಸಾವಿರ ಪುಟದ ಈ ಕಾದಂಬರಿ ನಿಜವಾಗಿಯೂ ಹೊಗಳಿಕೆಗೆ ಅರ್ಹವಾದುದು.

ಐತಿಹಾಸಿಕ ಘಟನೆಗಳು, ಆದರ್ಶ ಜೀವನ, ಧೀರೋದಾತ್ತ ನಾಯಕ ಮುಂತಾದವುಗಳನ್ನು ವಿರೋಧಿಸಿ ಬಂದುದು ಫ್ಯುರ್ತಿಯೇರನ ಬೂರ್ಜ್ವಾ ಕಾದಂಬರಿ 'ಲ ರೋಮನ್ ಬೂರ್ಜ್ವಾ ಪಾರ್ ಫುರೆತಿಯೇರ.' ತನ್ನ ಸಮಕಾಲೀನ ಬೂರ್ಜ್ವಾ ಸಮಾಜ ಎಂದರೆ ಸುಮಾರು ೧೬೬೬ರಲ್ಲಿದ್ದ ಈ ಸಮಾಜ, ಜನರ ನಡೆನುಡಿ, ಪದ್ಧತಿ, ರೀತಿನೀತಿಗಳನ್ನೊಳಗೊಂಡ ಕಾದಂಬರಿ ಇದು.

ಈ ಶತಕದ ಇನ್ನೊಂದು ಮುಖ್ಯ ಕಾದಂಬರಿ 'ಕ್ಲೆವ್ಹದ ರಾಜಕುಮಾರಿ.' ಬರೆದವಳು ಮದಾಮ್ ದ ಲಾಫಾಯತ್. ಎಷ್ಟು ಸುಂದರಳೋ ಅಷ್ಟೇ ಜಾಣೆಯಾಗಿದ್ದಳಂತೆ ಇವಳು. ಹದಿನೇಳನೇ ಶತಕದ ಲೇಖಕರಲ್ಲಿ ಇವಳು ನಾಯಿಕೆ. ಇವಳ ಕಾದಂಬರಿಗಳಲ್ಲಿ ಮಾನಸಶಾಸ್ತ್ರದ ಪರಿಚಯವಾಗುವದು. ಲಾ ರೋಷಫೊಕೊ ಎಂಬ ಶೂರ ಸರದಾರನೊಡನೆ ಇವಳು ಮೈತ್ರಿ ಬೆಳೆಸಿ ಆವನಿಂದಾಗಿ ಅವಳ ಕಥೆಗಳು ಸುಳಿವು ಬೇರೆ ದಾರಿ ಹಿಡಿದು 'ಕ್ಲೆವ್ಹದ ರಾಜಕುಮಾರಿ' ಇಂದಿಗೂ ಚಿರಸ್ಮರಣೀಯವಾಗಿ ನಿಂತಿದೆ. ಅವನ ಮರಣದ ನಂತರ ಅವಳಿಗಾದ ದುಃಖ ಹೇಳತೀರದು. ೧೬೮೮-೮೯ ರಲ್ಲಿ ಅರಸು ೧೪ನೇ ಲುಯಿಯ ಒಡ್ಡೋಲಗ ಎಂಬ ಪುಸ್ತಕ ಬರೆದಳು. ೧೬೯೩ ರಲ್ಲಿ ತೀರಿಕೊಂಡಳು.

'ಕ್ಲೆವ್ಹದ ರಾಜಕುಮಾರಿ' ಕಾದಂಬರಿಯನ್ನು ಇವಳು ತನ್ನ ಹೆಸರು ಹಾಕದೇ ಪ್ರಸಿದ್ಧ ಮಾಡಿದಳು. ಆದರೆ ಕಥೆಯ ಸರಳ ಶೈಲಿಯ ರುಚಿ ಕಂಡಿದ್ದ ಓದುಗರ ಸಮಾಜ ಬೇಗನೆ ಈ ಅನಾಮಿಕ ಕಾದಂಬರಿಯ ಒಡತಿಯನ್ನು ಗುರುತಿಸಿ ಆವಳ ಹೆಸರಿನಲ್ಲಿ ಪ್ರಸಿದ್ಧಿಸಿದರು. ಈ ಕಾದಂಬರಿಯಲ್ಲಿ ಬರುವ ಪಾತ್ರಗಳು ಶ್ರೀ ಹಾಗೂ ಶ್ರೀಮತಿ ಕ್ಲೆವ್ಹ, ನಮೂರದ ಅರಸು, ಇವರ ಮಧ್ಯೆ ಇರುವ ಪ್ರೇಮ, ನಡೆದು ಹೋಗುವ ಘಟನೆಗಳು ನಿಜವಾಗಿಯೂ ಓದುಗರನ್ನು ಬಲೆಯೊಳಗೆ ಸಿಕ್ಕ ಪ್ರಾಣಿ ಒದ್ದಾಡಿದಂತೆ ಒದ್ದಾಡಿಸುವವು. ಗಂಭೀರ ಪರಿಸ್ಥಿತಿ; ಯಾರದು ಸರಿ ಯಾರದು

ತಪ್ಪು ಎಂದು ತೀರ್ಪು ಕೊಡಲು ಬಾರದು.

ಈ ಕಾದಂಬರಿಗೆ ವಿರುದ್ಧವಾಗಿ 'ಹಾರ್ಲಪೆರೊನ ಕಥೆಗಳು' (೧೬೯೭). ಇವು ಚಿಕ್ಕ ಮಕ್ಕಳಿಗಾಗಿಯೇ ಎಂದು ಬರೆದವು. ಕಾಡಿನಲ್ಲಿ ಪವಡಿಸಿದ ಸುಂದರಿ, ಕೆಂಪು ಕುಲಾಯದ ಹುಡಿಗೆ, ಹೆಬ್ಬಟ್ಟಣ್ಣ ಇತ್ಯಾದಿ. ಈ ಕಥೆಗಳ ಶೈಲಿ ಸರಳ ಹಾಗೂ ರಸವತ್ತಾಗಿದ್ದು ಕಥೆ ಲೇಖಕನ ಸಮಕಾಲೀನ ಸಮಾಜದ ಚಿತ್ರವನ್ನು ತೋರಿಸಿ ಕೊಡುತ್ತದೆ.

ಕಲ್ಪನಾಲೋಕ ವಿಸ್ತರಿಸತೊಡಗಿತು ಮತ್ತೆ. ಪರಿಣಾಮವಾಗಿ 'ಸಿರಾಗೋದ ಬರ್ಜೆರಾಕ' ಮುಂತಾದ ಕಥೆಗಳು ಹುಟ್ಟಿಕೊಂಡವು. ಇನ್ನೂ ಕೆಲವರು ಮುಂದೆ ಹೋಗಿ 'ಚಂದ್ರನ ಸಾಮ್ರಾಜ್ಯ ಹಾಗೂ ಸಂಸ್ಥಾನಗಳು', 'ಸೂರ್ಯನ ಸಂಸ್ಥಾನದ ವಿನೋದ ಕಥೆಗಳು', ಇತ್ಯಾದಿ. ೧೬೪೮ರಲ್ಲಿ ಇಂಗ್ಲಿಷ್ ಕಾದಂಬರಿ 'ಚಂದ್ರಲೋಕದಲ್ಲಿ ಮಾನವ' ಎಂಬುದು ಭಾಷಾಂತರಿಸಲ್ಪಟ್ಟಿತು.

ಈ ಶತಕದಲ್ಲಿಯ ಕಾದಂಬರಿಗೆ ಇನ್ನೂ ಒಂದು ನಿರ್ದಿಷ್ಟ ರೂಪ ಬಂದಿರಲಿಲ್ಲ. ಅನೇಕ ಪಾತ್ರಗಳಾಗಮನ, ಅನೇಕ ಘಟನೆಗಳ ಸಂಘರ್ಷಣೆಯಿಂದಾಗಿ ಅನೇಕ ಸಲ ಓದುಗರು ದಾರಿ ತಪ್ಪಿಬಿಡುವರು. ಕಥೆಯ ಎಳೆಯೇ ಸಿಕ್ಕುವದಿಲ್ಲ ಕೆಲವೊಮ್ಮೆ. ಶೈಲಿಯಲ್ಲಿ ಆಕರ್ಷಣೆ ಇದ್ದರೂ ಇನ್ನೂ ಹಿಡಿತ ಸಿಕ್ಕಿರಲಿಲ್ಲ.

ಹದಿನೆಂಟನೇ ಶತಕ ನಿಜವಾಗಿಯೂ ಕಾದಂಬರೀಯುಗ. ಕಾದಂಬರಿ ಎಂದರೆ ಈಗ ನಾವು ನೋಡುವ ಆಕಾರದಲ್ಲಿ ಸಿಗುವ ಕಾದಂಬರಿಗಳು. ಕಥೆ ಸರಳ ಗದ್ಯದಲ್ಲಿ. ಇವುಗಳ ಮೂಲ ಪುರುಷ ಮಾರಿವ್ಹೊ. ಇಲ್ಲಿಯವರೆಗೂ ಬಂದ ಕಾದಂಬರಿಗಳಲ್ಲಿ ಕೆಲವು ಗದ್ಯದಲ್ಲಿದ್ದವು. ಆದರೆ ಆ ಗದ್ಯಶೈಲಿ ಈಗಿನ ಗದ್ಯಕ್ಕಿಂತ ತುಂಬ ಭಿನ್ನವಾಗಿತ್ತು. ಎಂದೇ ಅದನ್ನು ಗದ್ಯರೂಪದ ಪದ್ಯ ಎಂದು ಹೇಳಿದರು. "ಇತಿಹಾಸ ಒಂದು ಕೆಟ್ಟ ಕಾದಂಬರಿ, ಕಾದಂಬರಿ ಒಳ್ಳೇ ಇತಿಹಾಸ", ಎಂದು ದಿದರೊ ನುಡಿದ. ಯಾಕೆಂದರೆ, ಇಲ್ಲಿಯ ವರೆಗೂ ಇತಿಹಾಸವೂ ಕಾದಂಬರಿಯ ಒಂದು ಶಾಖೆ ಎಂದು ತಿಳಿದಿದ್ದರು. ೧೮ನೇ ಶತಕದ ಕಾದಂಬರಿಗೆ ಆದಿ ಇಲ್ಲ ಅಂತ್ಯವಿಲ್ಲ; ವಿಷಯನಿರೂಪಣೆಗೆ ಲಗಾಮಿಲ್ಲ. ಏನನ್ನೂ ಧೈರ್ಯವಾಗಿ ಬರೆಯಬಹುದು. ಕಳೆದ ಶತಕಗಳಂತೆ ಕಥೆಗೆ, ಘಟನೆಗಳಿಗೆ ಆಧಾರ ಕೇಳುವವರಿಲ್ಲ. ಬರುವ ಪಾತ್ರಗಳು ಆದರ್ಶ ವ್ಯಕ್ತಿಗಳೇ ಆಗಿರಬೇಕೆಂದಿಲ್ಲ; ರಸ, ಭಾವಗಳನ್ನು ನಾಜೂಕಾದ ಶೈಲಿಯಲ್ಲಿ ಗಂಭೀರವಾಗಿ ಹೇಳಬಹುದಿತ್ತು. ಪತ್ರರೂಪದಲ್ಲಿ, ಕಥಾರೂಪದಲ್ಲಿ ತನ್ನ ಕಥೆಯನ್ನು ತಾನೇ ಹೇಳುವಂತೆ ಸ್ವಗತ ಕಥೆ ಮುಂತಾದವು ಬೆಳಕು ಕಂಡವು.

ಹದಿನೆಂಟನೇ ಶತಮಾನ ಕಾದಂಬರಿಗಳ ಸ್ವರ್ಣಯುಗ. ಅನೇಕ ಕಾದಂಬರಿ ಹಾಗೂ ಕಾದಂಬರಿಕಾರರು ಬರುವರು. ಮಾರಿವ್ಹೊ (೧೬೮೮-೧೭೬೩) ಕಾದಂಬರಿಕಾರ ಎನ್ನುವುದಕ್ಕಿಂತ ನಾಟಕಕಾರ ಎಂದರೆ ಹೆಚ್ಚು ಒಪ್ಪುವದು, ಇವನದೇ ಆದ ಶೈಲಿ ಇದೆ. ಏನೇ ಹೇಳಬೇಕಿದ್ದರೂ ಅದನ್ನು ಬಹು ಸ್ವಚ್ಛವಾಗಿ

ಖಂಡತುಂಡವಾಗಿ ಅಷ್ಟೇ ನಾಜೂಕಾಗಿ ಹೇಳುವನು. ರಸ, ಭಾವಗಳ ಬಗೆಗೆ ಬಹಳ ಲಕ್ಷ್ಯ ಕೊಟ್ಟಿದ್ದು ನಾಗರಿಕರ ನಿತ್ಯ ಜೀವನದ ಬಳಕೆ, ಆಗುಹೋಗುಗಳೇ ಇವನ ಕಾದಂಬರಿಯ ವಿಷಯಗಳು. 'ಮಾರಿಯಾನ್ನಳ ಕಥೆ' ಹಾಗೂ 'ಹಳ್ಳಿಗನ ಪ್ರಗತಿ' ಇವು ಅವನ ಪ್ರಮುಖ ಕಾದಂಬರಿಗಳು. 'ಮಾರಿಯಾನ್ನಳ ಕಥೆ'ಯಲ್ಲಿ ಮಾರಿಯಾನ್ನಳ ಪಾತ್ರ ಹೃದಯಂಗಮವಾಗಿದೆ. ತುಂಬ ಹಗುರು ಮನಸ್ಸು, ನಡೆನುಡಿಯಲ್ಲಿ ಎಷ್ಟು ನಾಜೂಕವೋ ಅಷ್ಟೇ ಸುಂದರ ಮುಖ. ಪ್ರೇಮ ಅವಳ ಜೀವನದಲ್ಲಿ ಬಹು ಮುಖ್ಯ. ಅಸೂಯೆ, ಕರ್ತವ್ಯ ಹಾಗೂ ಪ್ರೇಮದಲ್ಲಿ ಲಜ್ಜೆ ಮಧ್ಯೆ ಬಂದಾಗ ಅವಳ ನಡತೆ ನೋಡವಂತಹದು. ಮಾರಿವ್ಹೋನ ಕಾದಂಬರಿಯೇ ಆಗಲಿ ಕಥೆಯೇ ಆಗಲಿ ಮಾನವನ ಹೃದಯದ ಗುಟ್ಟುಗಳನ್ನು ಹೊರಗೆಡುವುತ್ತದೆ.

'ಹಳ್ಳಿಗನ ಪ್ರಗತಿ'ಯಲ್ಲಿ ಜೇಕಬ್, ಶಾಂಪೇನ ಊರಿನವ. ಪ್ಯಾರಿಸ್ಸಿಗೆ ಹೋಗಿ ಏನೆಲ್ಲ ಮಾಡಿ ಕೊನೆಗೆ ತಮ್ಮೂರ ಹೊಲಗಳ ಕಂಟ್ರೋಲರ್ ಆಗಿ ಶಾಂಪೇನಿಗೆ ಬರುವನು. ಅನಂತರ ಅಲ್ಲಿಯ ಒಡೆಯನಾಗಿ ಕಾಲ ಕಳೆಯುವನು; ತನ್ನ ಹಳ್ಳಿಗಾಗಿ ದುಡಿಯುವನು. ಅರ್ಧಭಾಗ ಮಾರಿವ್ಹೋ ಬರೆದದ್ದೆಂದೂ ಉಳಿದರ್ಧ ಬೇರೆ ಯಾರೋ ಬರೆದು ಮುಗಿಸಿದ್ದಾನೆಂದೂ ಹೇಳುವರು.

ಅಲರನೆ ಲಸಾಜ ಮಾರಿವ್ಹೋನಂತೆ ನಾಟಕಕಾರನೂ ಹೌದು, ಕಾದಂಬರಿ-ಕಾರನೂ ಹೌದು. ಅವನ ನಾಟಕಗಳಲ್ಲಿ ಮೋಲಿಯೇರನ ಪ್ರಭಾವ ಕಂಡುಬಂದರೂ ಕಾದಂಬರಿಗಳಲ್ಲಿ ಮಾತ್ರ ೧೮ ನೇ ಶತಕದ ವ್ಯಕ್ತಿ. ತನ್ನ ಕಾಲದ ಸಮಾಜವನ್ನು ಬಹು ಚೆನ್ನಾಗಿ ಚಿತ್ರಿಸಿದ್ದಾನೆ, ತನ್ನ ಕೃತಿಗಳಾದ 'ಜಿಲ್ ಬ್ಲಾಸ' ಹಾಗೂ 'ಕುಂಟುವ ದೆವ್ವ'ದಲ್ಲಿ. ಜಿಲ್ ಬ್ಲಾಸ ಎಂಬ ಗರ್ವಿಷ್ಟ ತರುಣ ಕೆಲವೊಂದು ಹಣ ತೆಗೆದುಕೊಂಡು ಮನೆ ಬಿಟ್ಟು ಹೋಗುವನು. ಮಧ್ಯೆ ಅನೇಕ ಕಷ್ಟಗಳನ್ನು ಎದುರಿಸಬೇಕಾಗುವದು. ಕಳ್ಳಕಾಕರು, ಕೆಟ್ಟ ಜನರ ಗುಂಪಿನಲ್ಲಿ ಬಿದ್ದು ಕೀಳ್ಮಟ್ಟದ ಜೀವನಕ್ಕಿಳಿಯುವನು. ಹೇಗೋ ಆಗ ಈ ಗುಂಪಿನಿಂದ ಹೊರಬಿದ್ದು ಡೊನ ಅಲ್ಫನ್ಸೊ ದ ಲಿವ್ಹ್ಯಾನ ಮುಖಾಂತರ ಲೀರಿಯಾದ ಒಡೆಯನಾಗುವನು. ಅನಂತರ ಅನೇಕ ದೊಡ್ಡ ದೊಡ್ಡ ಜನರಿಗೆ ಸೇವೆ ಸಲ್ಲಿಸುತ್ತ ಲಿರ್ಮದ ಅರಸನ ಸೆಕ್ರೆಟರಿ ಆಗುವನು. ಏನೋ ರಾಜ-ಕಾರಣದಿಂದ ಕಾರಾಗೃಹವಾಸ, ಮದುವೆ, ಮಡದಿಯ ಸಾವು, ಮತ್ತೆ ರಾಜಕಾರಣ, ಮತ್ತೆ ಮದುವೆ. ಜೀವನದ ಕೊನೆಗೆ ಸುಖಶಾಂತಿಯುಳ್ಳ ಜೀವನ ಸಾಗಿಸುವನು. ಇದಿಷ್ಟು ಕಥಾಸಾರಾಂಶ ಈ ಕಥೆಯಲ್ಲಿ ಕಂಡುಬರುವುದು. ಅವನ ಕಾಲದ ಸಮಾಜ, ನಡೆನುಡಿಗಳು, ಬರಿಯ ಮೇಲ್ತರಗತಿಯ ಜನರನ್ನು ಮಾತ್ರವಲ್ಲ, ಕೆಳ ತರಗತಿಯವರನ್ನೂ ಸಹ ಬಲ್ಲವನಾಗಿದ್ದ ಲಸಾಜ. ಕಥಾನಾಯಕ ಜಿಲ್ ಬ್ಲಾಸನ ಜೀವನದ ಆಗುಹೋಗುಗಳು ಲಸಾಜನಿಗೆ ಅಂದಿನ ಸಮಾಜದ ದೊಡ್ಡ ದೊಡ್ಡ ಜನ, ಲೇಖಕರು, ನಾಟಕಕಾರರು, ಪಾದ್ರಿಗಳು ಮುಂತಾದ ಎಲ್ಲರ ಚಿತ್ರ ಚಿತ್ರಿಸಲು ಸಾಧ್ಯ ಮಾಡಿಕೊಟ್ಟವೆ. ಜಿಲ್ ಬ್ಲಾಸ ಸ್ಪೇನಿನವ. ಹೀಗಾಗಿ ಅಲ್ಲಲ್ಲಿ ಸ್ಪೇನಿನ ಚಿತ್ರ

ಸಹ ಕಾಣುವದು.

'ಅಬ್ಬೆ ಪ್ರೆವೊನ ಕಾದಂಬರಿ ಗ್ರಿಯು ಕುದುರೆ ಸರದಾರನ ಕಥೆ ಹಾಗೂ ಮಾನೋ ಲೆಸ್ಕೊಳಚರಿತ್ರೆ'. ಮೊನೋ ಲೆಸ್ಕೊಳ ಪ್ರೇಮಕ್ಕಾಗಿ ಗ್ರಿಯುನ ಹೋರಾಟ, ಅವಳನ್ನು ಪಡೆದೆನೆಂಬ ಸಂತೋಷವಲ್ಲಿರುವಾಗ ಅವಳು ಅವನಿಗೆ ಮೋಸ ಮಾಡುವದು ಶ್ರೀಮಂತಿಕೆಗಾಗಿ, ಅವಳಿಗಾಗಿ ಅವನು ಪಟ್ಟ ಕಷ್ಟವನ್ನು ಚಿತ್ರಿಸುತ್ತದೆ. ಅವನು ಜನರ ಜೀವ ತೆಗೆದು ಕಾರಾಗೃಹ ಕೂಡಾ ಕಾಣುವನು. ಮುಂದೊಮ್ಮೆ ಇಂತಹ ತಪ್ಪಿನಲ್ಲಿ ಸಿಕ್ಕು ಅವಳೊಡನೆ ಜನನಿಬಿಡ ಮರುಭೂಮಿಯಲ್ಲಿ ಅಲೆಯಬೇಕಾಗುವದು. ಕಷ್ಟಗಳನ್ನು ತಾಳಲಾರದೇ ಮೊನೋ ಸಾಯುವಳು; ಆದರೆ ಅವಳ ಆತ್ಮ ಪರಿತಾಪಗಳ ಪರಂಪರೆಯಿಂದಾಗಿ ಪುನೀತವಾಗಿರುತ್ತದೆ. ಗ್ರಿಯು ಮಿತ್ರನ ಸಹಾಯದಿಂದ ಮತ್ತೆ ಫ್ರಾನ್ಸಿಗೆ ಮರಳುತ್ತಾನೆ. ಇದರಲ್ಲಿ ಒಳ್ಳೆ ಗುಣ, ನಡೆನುಡಿಗಳ ಬಗೆಗೆ ಅಷ್ಟೇ ಅಲ್ಲ, ಗ್ರಿಯುನ ಪವಿತ್ರ ಪ್ರೇಮ ತನ್ನ ಪ್ರೇಯಸಿಯತ್ತ ಎಂಬುದು ನಿಜವಾಗಿಯೂ ಗಣನೀಯ. ಹದಿನೆಂಟನೇ ಶತಕದ ಇನ್ನೊಂದು ಮಹಾ ವ್ಯಕ್ತಿ ವಾಲ್ತೇರ. ಇವನ ಹೆಸರು ಫ್ರಾನ್ಸ್ವಾ ಮಾರೀ ಅರುಯೆ ಎಂದಿತ್ತು. ಆದರೆ ಅದು ಚೆನ್ನಾಗಿಲ್ಲ ಎಂದು ತನ್ನ ೨೪ ನೇ ವಯಸ್ಸಿನಲ್ಲಿ de Voltaire ಎಂದು ಬದಲಿಸಿಕೊಂಡ. ಅನೇಕ ಸಲ ಬಾಸ್ತೀಯ ಕಾರಾಗೃಹ ಕಂಡುಬಂದ, ತನ್ನ ಖಂಡತುಂಡವಾದದಿಂದಾಗಿ. ಇವನು ದೊಡ್ಡ ತತ್ತ್ವಜ್ಞಾನಿಯೂ ಹೌದು, ಕಾದಂಬರಿಕಾರನೂ ಹೌದು. ಇವನ ಪ್ರತಿಯೊಂದು ಕಾದಂಬರಿಯೂ ಒಂದೊಂದು ತಾತ್ತ್ವಿಕ ವಿಷಯವನ್ನು ಪ್ರತಿಪಾದಿಸುತ್ತವೆ.

'ಝೂದಿಗ' ೧೭೪೭ರಲ್ಲಿ ರಚಿತವಾದದ್ದು. ಝೂದಿಗ ಒಬ್ಬ ಪ್ರಾಮಾಣಿಕ ಪ್ರಾಣಿ; ಜಗತ್ತಿರುವದೇ ಒಳ್ಳೆಯದಕ್ಕಾಗೆಂದು ನಂಬಿರುವ. ಪ್ರೇಯಸಿ ಹಾಗೂ ಹೆಂಡತಿಯಿಂದ ಮೋಸ ಹೊಂದಿ ಜೀವನದಲ್ಲಿ ನಿರಾಶೆಪಟ್ಟು ವಿಜ್ಞಾನದಲ್ಲಿಯಾದರೂ ಸಂತೋಷ ಸುಖ ಸಿಗುತ್ತದೆಯೇ ಎಂದು ನೋಡುವನು. ಅವನ ಜಾಗರೂಕತೆಯೇ ಅವನಿಗೆ ಮುಳುವಾಗುವದು. ಪರಾಭವಗಳ ಪರಂಪರೆಯಲ್ಲಿ ತೊಳಲುತ್ತಿರುವಾಗ ಗಿಳಿಯೊಂದು ಅವನನ್ನು ರಕ್ಷಿಸುವದು. ಇದಲ್ಲವೇ ದೈವದಾಟ? ಮೊವಬ್ದಾರ ಅರಸನಿಗೆ ಮಂತ್ರಿಯಾಗುವನು. ಒಳ್ಳೆಯ ದಿನಗಳು ಬಂದವೆನ್ನುವದರೊಳಗಾಗಿ ಮೊವಬ್ದಾರ ತನ್ನ ಹೆಂಡತಿ ಅಸ್ತಾರ್ತೆ ಹಾಗೂ ಝೂದಿಗನ ಬಗೆಗೆ ಸಂಶಯಗೊಂಡು ಅವನನ್ನು ಬೇಬಿಲೋನಿನಿಂದ ಓಡಿಸುವನು. ಅರಬ ವ್ಯಾಪಾರಸ್ಥನಿಗೆ ಗುಲಾಮನಾಗಿ ಕೆಲಸ ಮಾಡುತ್ತ ಅವನ ಒಡೆಯನ ಗೆಳೆಯನಾಗಿರುವನು. ಸತಿ ಪದ್ಧತಿ ಹೋಗಲಾಡಿಸುವನು. ಏನೋ ಒಂದು ತಪ್ಪಿನಿಂದಾಗಿ ಇವರನ್ನೆಲ್ಲ ಬಿಟ್ಟು ಸೆರನ್ದಿಬಕ್ಕೆ ಹೋಗುವನು. ಅಲ್ಲಿಯ ಅರಸನಿಗೆ ಒಳ್ಳೆಯ ಹಣಕಾಸಿನ ಮಂತ್ರಿಯನ್ನು ನಿಯಮಿಸಿಕೊಡುವನು. ಅಲ್ಲಿಯ ಪಾದ್ರಿಗಳಿಂದ ಬೆದರಿಸಿಕೊಂಡು ಓಡುವನು, ಮತ್ತೆ ಬೇಬಿಲೋನಿಗೆ. ಬೇಬಿಲೋನಿನಲ್ಲಿ ಚಳವಳಿ–ರಾಜನಿಲ್ಲ, ರಾಣಿ ಗುಲಾಮಳಾಗಿರುತ್ತಾಳೆ. ಝೂದಿಗ ಅವ-

ಳನ್ನು ಬಿಡಿಸಿ ಎಲ್ಲವನ್ನೂ ಹತೋಟಿಗೆ ತರುವನು. ಇನ್ನೇನು ಅವನೇ ರಾಜನಾಗ-ಬೇಕೆಂದಾಗ ಏನೋ ಅಡೆತಡೆ ಬರುವದು. ಕೊನೆಗೆ ಹೇಗೆ ಹೇಗೋ ಆಗಿ ರಾಜನಾಗಿ, ಅಸ್ತಾರ್ತೆಯನ್ನು ವರಿಸಿ ಸುಖದಿಂದ ರಾಜ್ಯವಾಳುವನು. ಇದಕ್ಕೆನ್ನಬೇಕು ದೈವದಾಟ ಎಂದು.

'ಕಾಂದಿದ'ದಲ್ಲಿ ಕಾಂದಿದ ತನ್ನ ಪ್ರೇಯಸಿ ಕುನೆಗೊಂದಳ ಬಳಿ ಅವಳದೇ ರಾಜವಾಡೆಯಲ್ಲಿ ಬೆಳೆದರೂ ಅನೇಕ ಕಾರಣಗಳಿಂದಾಗಿ ಅವಳನ್ನು ಮದುವೆಯಾಗಲು ಸಾಧ್ಯವಾಗುವದಿಲ್ಲ. ಕೊನೆಗೊಮ್ಮೆ ಅವನಾಸೆ ಕೈಗೂಡಿದಾಗ ಕುನೆ-ಗೊಂದ ಬಹಳೇ ಮುದುಕಿಯಾಗಿ ತನ್ನ ಯೌವನದ ಸೌಂದರ್ಯ, ಆಕರ್ಷಣೆಯನ್ನೆಲ್ಲ ಕಳೆದುಕೊಂಡಿರುತ್ತಾಳೆ. ಇದೇ ಆಶೆಯ ಅಣಕ.

ವಾಲ್ತೇರನಿಗೆ ಯಾರದೂ ಹೆದರಿಕೆ ಇರಲಿಲ್ಲ. ಬಾಸ್ತಿಯ ಕಾರಾಗ್ರಹವಾಸ, ದೇಶದಿಂದ ಹೊರಗೆ ಹಾಕಿಸಿಕೊಳ್ಳುವದು ಇವಾವುದಕ್ಕೂ ಅವನು ಮಣಿಯಲಿಲ್ಲ. ತನ್ನ ತತ್ತ್ವ ತಾನು ಬಿಡಲಿಲ್ಲ. ಮನುಷ್ಯ ಸ್ವತಂತ್ರ, ದೇವರೊಬ್ಬ ದೊಡ್ಡ ಗಡಿಯಾರದ ತಯಾರಕ ಎಂದು ಹೇಳುವನು ವಾಲ್ತೇರ. ವಾಲ್ತೇರ ಇತಿಹಾಸಕಾರನೂ ಹೌದು. ಆದರೆ ಆ ಇತಿಹಾಸದಲ್ಲಿ ರಾಜ ಮಹಾರಾಜರ ಕಥೆಗಿಂತ ಜನಜೀವನದ ಕಥೆ ಮುಖ್ಯ. ಇವನು ಮಹಾ ದೈವಭಕ್ತ. ಆದರೆ ಚರ್ಚನ್ನು ಟೀಕಿಸಿದ, ಏಸೂ ಕರುಣೆ ಇಲ್ಲದೇ. ತನ್ನದೇ ದೇವರು, ತನ್ನದೇ ಜಾತಿಯನ್ನು ಕಲ್ಪಿಸಿಕೊಂಡಿದ್ದ ವಾಲ್ತೇರ. ಇವನ ಶೈಲಿ ಬಹು ಸುಂದರ. ಅನೇಕ ಸಲ ತನ್ನ ಹೆಸರು ಹಾಕದೇ ಕೆಲ ಲೇಖನ ಪ್ರಸಿದ್ಧಿಸಿದ. ಆದರೆ ಇವನ ಲೇಖನದ ರುಚಿ ಕಂಡ ಸಮಾಜ ಸೊಪ್ಪು ಹಾಕಲಿಲ್ಲ ಇದಕ್ಕೆ. ಬೇಗ ಅವನ್ನು ಗುರುತಿಸಿದರು. ಅನೇಕ ಸಲ ವಾಲ್ತೇರನ ಜೀವನಕ್ಕೆ ಅವು ಮುಳುವಾದುವು.

ದಿದರೋನ ಕಾದಂಬರಿಗಳು ಹೇಳಿಕೊಳ್ಳುವಷ್ಟು ಒಳ್ಳೆಯವಲ್ಲದಿದ್ದರೂ ಅವು ತಮ್ಮದೇ ಆದ ಸ್ಥಳವನ್ನು ಕಾಯ್ದುಕೊಂಡಿವೆ ಸಾಹಿತ್ಯದಲ್ಲಿ. ದಿದರೋ ಬರೆ-ಯುವದರಲ್ಲಿ ಬಹಳ ಹಿಂದೆ ಬಿದ್ದವ. ಶೈಲಿ ಸುಂದರವಲ್ಲ. ವ್ಯಕ್ತಿಚಿತ್ರಣ ಕೊಡಲು ಅವನಿಂದ ಸಾಧ್ಯವಿಲ್ಲ. ಬಹಳೇ ಭಾವಜೀವಿ. ಭಾವೋದ್ವೇಗದಿಂದಾಗಿ ಬರೆವಣಿಗೆ ಕುಂಠಿತವಾಗುತ್ತಿತ್ತು. ಆತನ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಆತನ ಅನೇಕ ಮುಖಗಳು. 'ರಾಮೋ'ನ ಅಳಿಯ ರಾಮೋ ಪ್ರಸಿದ್ಧ ಸಂಗೀತಗಾರ. ಅವನ ಅಳಿಯ ಸರ್ವಗುಣ ಸಂಪನ್ನನಂತೆ. ಅವನ ಚಿತ್ರ ಚಿತ್ರಿಸುವಾಗ ದಿದರೋ ತನ್ನದೇ ಇನ್ನೊಂದು ರೂಪ ವರ್ಣಿಸಿದಂತಾಗಿದೆ. 'ಜಾಕ್-ಲ-ಫತಾಲಿಸ್ತ'-ದಲ್ಲಿ ಕೂಡ ತನ್ನದೇ ಇನ್ನೊಂದು ಮುಖ ಚಿತ್ರಿಸಿದ್ದಾನೆ. ಇವನ ಕಾದಂಬರಿಗಳ ಮುಖ್ಯ ಲಕ್ಷಣ ನೈಜಕತೆ. ಜೀವನದಲ್ಲಿ ಬರುವ ಅನೇಕ ಸಂಗತಿ, ಘಟನೆ, ವಸ್ತುಗಳ ನಿಜ ಚಿತ್ರ. ಉದಾ: 'ರಾಮೋನ ಅಳಿಯ'ದಲ್ಲಿ ಬರುವ ಕಾಫಿ ರೆಸ್ಟೊರಂಟ್, ಚದುರಂಗ ಆಡುವ ಜನ, ಪ್ಯಾರಿಸ್ಸಿನ ಸುಂದರ

ಪ್ಲೇಸ್ ರಾಯೇಲ್‌ನ ಚಿತ್ರ ಇತ್ಯಾದಿ ತನ್ನ ಕಲ್ಪನೆಯ ಪಿಟೀಲಿನ ತಂತಿಗಳನ್ನು ಮೀಟಿ ಎಲ್ಲರನ್ನೂ ಕುಣಿಸಿ ನಗಿಸಿ ಆನಂದತುಂದಿಲರನ್ನಾಗಿಸುತ್ತಿರುವಾಗ ಪಿಟೀಲಿನ ತಂತಿ ಹರಿದು ಎಲ್ಲ ನಿಂತುಬಿಡುವದು. ಇದೇ ದಿದರೋನ ಮುಖ್ಯಲಕ್ಷಣ. ದಿದರೋ ತನ್ನ ಸುತ್ತಲಿರುವ ಜನ ಎಂದರೆ ಬರೀ ನೋಬಲ್ಸ್ ಅಲ್ಲ, ವ್ಯಾಪಾರಸ್ಥರು, ಲೇಖಕರು, ಇನ್ನೂ ಅನೇಕರು ಇವರ ಚಿತ್ರ ಚಿತ್ರಿಸಲು ಪ್ರಯತ್ನಿಸಿದ್ದಾರೆ.

ಜಾ ಜಾಕ್ಕ ರುಸ್ಸೊ ಕೂಡ ವಾಲ್ತೇರನಂತೆ ತತ್ತ್ವಜ್ಞಾನಿ, ನಾಟಕಕಾರ, ಕಾದಂಬರಿಕಾರ, ಸಂಗೀತಗಾರ– ಎಲ್ಲ ಗುಣಗಳುಳ್ಳವನು. ಇವನಿಗೂ ವಾಲ್ತೇರನಿಗೂ ಒಂದೂರಾಗುತ್ತಿರಲಿಲ್ಲ. ಇಬ್ಬರೂ ಸಮಯ ಸಿಕ್ಕಾಗಲೆಲ್ಲ ಒಬ್ಬರನ್ನೊಬ್ಬರು ಟೀಕಿಸಲು ನೋಡುತ್ತಿದ್ದರಂತೆ. ಹುಟ್ಟಿದುದು ಸ್ವಿತ್ಸರ್ಲಂಡಿನ ಜಿನೇವಾದಲ್ಲಿ. ಹುಟ್ಟುವಾಗ ಪ್ರೊಟೆಸ್ಟಂಟ್ ತಾಯಿಯನ್ನು ಕಳೆದುಕೊಂಡು, ತಂದೆಯಿಂದ ದೂರಾಗಿ ಅಲ್ಲಿ ಇಲ್ಲಿ ಅಲೆದಾಡಿ ಕೊನೆಗೆ ಇಟಲಿಯಲ್ಲಿ ಕೆಥೋಲಿಕ್ ದೀಕ್ಷೆ ಪಡೆದನು. ೧೭೩೨–೧೭೪೧ ರ ವರೆಗೆ ಪ್ಯಾರಿಸ್ಸಿನಲ್ಲಿದ್ದು ತನ್ನಷ್ಟಕ್ಕೇ ತಾನೇ ಓದಿ ಪಂಡಿತನಾದ. ಇವನು ನಾಟಕ ‘ ನಾರ್ಸಿಸ್ ’ ಮೊಲಿಯೇರನ ವಿರುದ್ಧವಾಗಿ ಬರೆದಂಥದು. ಇವನು ಬರೆದ ಕಾದಂಬರಿಗಳಲ್ಲಿ ಮುಖ್ಯವಾದದು ‘ ಲಾ ನುವ್ಹೆಲ್ಲ ಎಲ್ವಾಸ್ಜ.’ ಇಬ್ಬರು ಪ್ರೇಮಿಗಳ ಮಧ್ಯೆ ನಡೆದ ಪತ್ರವ್ಯವಹಾರವೇ ಈ ಕಾದಂಬರಿಯಾದುದರಿಂದ ಪೂರ್ತಿ ಪತ್ರರೂಪದಲ್ಲಿದೆ.

ಇದರಲ್ಲಿ ಬರುವ ಮುಖ್ಯ ಪಾತ್ರಗಳು ಜೂಲೀ, ಕ್ಲೇರ ಹಾಗೂ ಸಂತ ಪ್ರ. ಸಂತ ಪ್ರ ಜೂಲೀಯನ್ನು ಪ್ರೀತಿಸುವನು. ಜೂಲೀ ಇಂಗ್ಲಂಡಿನಲ್ಲಿದ್ದಾಗ ಸಂತ ಪ್ರ ಪ್ಯಾರಿಸ್ಸಿಗೆ ಬಂದು ಅವಳಿಗೆ ಅನೇಕ ಪತ್ರ ಬರೆದು ಪ್ರೀತಿ ತಿಳಿಸುವನು. ಅಲ್ಲದೇ ಅವುಗಳಲ್ಲಿ ಪ್ಯಾರಿಸ್ಸಿನ ಜೀವನವನ್ನೂ ವರ್ಣಿಸುವನು. ಜೂಲೀ ತಂದೆಯ ಹೇಳಿಕೆಯ ಪ್ರಕಾರ ಪ್ರೀತಿ ಇಲ್ಲದಿದ್ದರೂ ಇನ್ನೊಬ್ಬನನ್ನು ಮದುವೆಯಾಗುವಳು. ಮುಂದೊಮ್ಮೆ ಜೂಲೀ, ಅವಳ ಗಂಡ, ಮಕ್ಕಳು ಹಾಗೂ ಸಂತ ಪ್ರ ಕೂಡಿದಾಗ ಎಲ್ಲವನ್ನೂ ಚೆನ್ನಾಗಿ ಚರ್ಚಿಸಿ ಜೂಲೀ ಅವಳ ಗಂಡ ಹಾಗೂ ಸಂತ ಪ್ರರ ಮಧ್ಯೆ ಒಳ್ಳೇ ಮೈತ್ರಿ ಬೆಳೆಯುವಂತಾಗುತ್ತದೆ. ಜೂಲೀಯ ಗಂಡ ಪ್ರವಾಸಕ್ಕೆ ಹೋದಾಗ ಸಂತ ಪ್ರನ ಸುಪ್ತ ಪ್ರೇಮ ಉರಿದೆದ್ದರೂ ಹಿಡಿತದಲ್ಲಿಡುವನು. ಜೂಲೀ ಎಲ್ಲವನ್ನೂ ಒಬ್ಬಳೇ ಕೂಲಂಕಷವಾಗಿ ವಿಚಾರಿಸುವಳು. ಮತ್ತೆ ಅವಳ ಗಂಡ ವಾಪಸ್ಸು ಬರಲು ಜೀವನ ಎಂದಿನಂತೆ ಸಾಗುವದು. ಜೂಲೀ ಒಮ್ಮೆ ತನ್ನ ಮಗ ಜಿನೇವಾದ ಕೊಳದಲ್ಲಿ ಬಿದ್ದವನನ್ನು ಉಳಿಸಲು ಹಾರಿದವಳು ಮೇಲೆದ್ದ ನಂತರ ಜ್ವರಪೀಡಿತಳಾಗಿ ಸಾಯುವಳು. ಸಾಯುವ ಮುನ್ನ ಸಂತ ಪ್ರನಿಗೆ ಒಂದು ಪತ್ರ ಬರೆಯುವಳು. ಅವನು ಕ್ಲೇರಳನ್ನು ಮದುವೆಯಾಗಬೇಕು, ತನ್ನ ಮಕ್ಕಳ ಹಾಗೂ ಗಂಡನ ಕಾಳಜಿ ವಹಿಸಬೇಕು ಎಂದು. ಈ ಕಾದಂಬರಿ ಓದಿದರೆ ರುಸ್ಸೋನ ಜೀವನಚರಿತ್ರವನ್ನೇ ಓದಿದಂತಾಗುವದು. ಅವನು ಚಿತ್ರಿಸಿದ ಜೂಲೀ ಅವನ ಪ್ರೇಯಸಿಯರಲ್ಲೊಬ್ಬಳು.

ಸಂತ ಪ್ರಸ ಪತ್ರದಿಂದ ರುಸ್ಸೋನ ಪ್ರೇಮ ಮದಾಮ ದ ಉದತೊಳ ಬಗೆಗೆ ಇರುವದು ಗೊತ್ತಾಗುವದು. ಅವಳೊಡನೆ ಜೀವನ ಪರ್ಯಂತ ಇರಲು ಅವನಿಚ್ಛಿಸಿದ್ದ; ಆದರೆ ಅದು ಸಾಧ್ಯವಾಗಲಿಲ್ಲ ಎಂಬುದನ್ನು ಚಿತ್ರಿಸುವದೇ ಕಾದಂಬರಿಯ ಉದ್ದೇಶ. ಕಾದಂಬರಿ ತುಂಬ ವರ್ಣನೆ ಹಾಗೂ ಮನಸೆಳೆಯುವ ಶೈಲಿಯಿಂದ ಕೂಡಿದೆ. ಅಲ್ಲಲ್ಲಿ ತತ್ತ್ವಜ್ಞಾನ ಸಹ ಕಂಡುಬರುವದು.

ಹತ್ತೊಂಬತ್ತನೆ ಶತಕದಲ್ಲಿ ಸಾಮಾಜಿಕ ಹಾಗೂ ಪತ್ತೆದಾರಿ ಕಾದಂಬರಿಗಳು ಜನಿಸಿದವು. 'ಮದಾಮ ದಿ ಸ್ತಾಲ್‌ನ' ನೆಕೆರನ ತಂಗಿ. ನೆಕೆರ ಹದಿನಾರನೇ ಲುಯಿಯ ಹಣಕಾಸಿನ ಮಂತ್ರಿಯಾಗಿದ್ದ. ಇವಳು ಜರ್ಮನನೊಬ್ಬನನ್ನು ಮದುವೆಯಾಗಿದ್ದಳು. ಇವಳ ಕಾದಂಬರಿ 'ಡೆಲ್ಫಿನ' ಹಾಗೂ 'ಕೊರಿನ್ನ' ಇವಳ ಕಾದಂಬರಿಗಳಲ್ಲಿ ಫ್ರಾನ್ಸ್ ಹಾಗೂ ಜರ್ಮನಿಯಲ್ಲಿಯ ಜೀವನವನ್ನು ಕಾಣಬಹುದು.

ಫ್ರಾನ್ಸಿನ ರನೆ ಶಾತೋಬ್ರಿಯಾಂ ಅದ್ಭುತರಮ್ಯತೆಯ ಮೂಲಪುರುಷ ಎಂದೇ ಹೇಳಬಹುದು. ಶಾತೋಬ್ರಿಯಾಂನ ಮುಖ್ಯ ಕೃತಿ 'ಅತಲ' ಹಾಗೂ 'ರನೆ' ಎಂಬವು. ಇವನ ಕಾದಂಬರಿಗಳು ಭಾವಪ್ರಧಾನ. ಇಲ್ಲಿ ರಸಭಾವಗಳಿಗೆ ಹೆಚ್ಚು ಮನ್ನಣೆಯೇ ವಿನಾ ನ್ಯಾಯಾನ್ಯಾಯಗಳಿಗಲ್ಲ. ಶೈಲಿಯಲ್ಲಿ ಒಂದು ರೀತಿಯ ಸಂಗೀತದ ಝರಿ ಹರಿಯುತ್ತದೆ. ಶಬ್ದ ಜೋಡಣೆ ಬಹು ಕಾವ್ಯಮಯ. ಶೈಲಿ ಗದ್ಯವಾಗಿದ್ದರೂ ಶಬ್ದಸಂಪತ್ತು ಕಾವ್ಯದ ಇನ್ನೊಂದು ರೂಪವೋ ಏನೋ ಈ ಕಾದಂಬರಿಗಳು ಎನ್ನುವಂತಿವೆ. ಇವನ ಮೇರುಕೃತಿ "ಸಮಾಧಿಯಿಂದ ಬಂದ ನೆನಹುಗಳು." ತಾನು ಜೀವಂತವಿದ್ದರೂ ಸತ್ತೆನೆಂದು ತಿಳಿದು ತನ್ನ ಜೀವನ ಚರಿತ್ರೆಯನ್ನು ಚಿತ್ರಿಸಿರುವನು ಈ ಪುಸ್ತಕದಲ್ಲಿ. ಅಂತೇ ಇದನ್ನು 'ಸಮಾಧಿಯಿಂದ ಬಂದ ನೆನಪು' ಎಂದು ಕರೆದಿದ್ದಾನೆ. ಈತನ ಕಾದಂಬರಿಗಳ ಇನ್ನೊಂದು ವಿಶಿಷ್ಟ ಲಕ್ಷಣವೆಂದರೆ ದೂರದೇಶಗಳ ದೂರದ ವಸ್ತುಗಳ ಬಗೆಗಿರುವ ಅಭಿಲಾಷೆ. ಹಿಂದಿನ ಲೇಖಕರಂತೆ ಬರಿ ಫ್ರಾನ್ಸ್ ಇಟಲಿ ಇಲ್ಲವೆ ಗ್ರೀಸಿನ ಬಗೆಗೇ ಬರೆಯದೆ ಅಮೇರಿಕ, ಏಶಿಯಾದ ಬಗೆಗೆ ಬರುವುದು ಅಲ್ಲಿಯ ವರ್ಣನೆ. 'ಅತಲ'ದಲ್ಲಿ ಮಾನವನ ಹೀನ ನಡತೆ, ಸೃಷ್ಟಿಯ ಕೀಳು ಚಿತ್ರ; ಇವಕ್ಕೆಲ್ಲ ರಾಮಬಾಣ ಕ್ರಿಶ್ಚಿಯನ್ ಧರ್ಮ ಎಂದು ಹೇಳಿದರೆ 'ಲಿ ಮಾರ್ತಿರ'ದಲ್ಲಿ ಕ್ರಿಶ್ಚಿಯನ್ ಜಗತ್ತಿನ ಭವ್ಯತೆ, ಅದ್ಭುತವನ್ನು ಚಿತ್ರಿಸಿದ್ದಾನೆ.

ಬೆಞ್ಜಮ ಕೊನ್‌ಸ್ತಾ (೧೭೬೭–೧೮೩೦)ನ ಎರಡು ಅದ್ವಿತೀಯ ಕೃತಿಗಳು 'ಅದಾಲ್ಫ' ಹಾಗೂ 'ಸೆಸಿಲ' ಇವುಗಳ ಮುಖ್ಯ ಲಕ್ಷಣ ಎರಡು ಆತ್ಮಗಳ ನಡುವಿನ ಹೋರಾಟ. 'ಅದಾಲ್ಫ'ದಲ್ಲಿ ಅದಾಲ್ಫ ಹಾಗೂ ಎಲೆನೋರ ನಡುವಿನ ಸಂಬಂಧ ಚಿತ್ರಿತವಾಗಿದ್ದರೆ 'ಸೆಸಿಲ'ದಲ್ಲಿ ನಾಯಿಕೆ ಹಾಗೂ ಕಥೆಯನ್ನು ಹೇಳುವ ಸೂತ್ರಧಾರನ ಮಧ್ಯದ ಸಂಬಂಧ. ಕೊನ್‌ಸ್ತಾ ತನ್ನ ಈ ಕೃತಿಗಳು ತನ್ನ ಸ್ವಂತ ಜೀವನ ಚರಿತ್ರೆಯನ್ನು ಚಿತ್ರಿಸುತ್ತವೆ ಎಂದು ಹೇಳಿದ್ದಾನೆ. ಜೀವನದಲ್ಲಿಯ ಕ್ಷಣಭಂಗುರತೆ,

ಹೊಯ್ದಾಟವನ್ನು ತಿಳಿಯಲೆತ್ನಿಸಿದ್ದಾನೆ. ಇವನ ಕಾದಂಬರಿಗಳಲ್ಲಿ ಮಾನಸಶಾಸ್ತ್ರದ ಪ್ರಭಾವಬಹಳೇ ಕಂಡುಬರುವದು. ಆತನ ಬಾಳ ಬೆಳಕಿನಂತಿದ್ದ ಮದಾಮ್ ದ ಸ್ತಾಲ ಹಾಗೂ ಮದಾಮ್ ದ ಶಾರಿಯೇರರು ಈ ಕಾದಂಬರಿಗಳ ನಾಯಿಕೆಯರು.

ಇನ್ನೊಬ್ಬ ಚಿಕ್ಕ ಲೇಖಕ ವಿನ್ನಿ (೧೭೯೭–೧೮೬೩) ಪರಾಭವಗಳ ಪರಂಪರೆಯಲ್ಲಿ ನೊಂದು ಬೆಂದು ಬರೆದ ಕೆಲ ಕಾದಂಬರಿಗಳನ್ನು ಬಿಟ್ಟರೆ ಬರುವ ಮುಖ್ಯ ಲೇಖಕ ಹ್ಯೂಗೋ ಅಥವಾ ಯೂಗೋ ವಿನ್ನಿಯ ಪ್ರಮುಖ ಕೃತಿ 'ಐದನೇ ಮಾರ್ಚ್' ಎಂಬುದು.

ವ್ಹಿಕ್ತರ್ ಹ್ಯೂಗೋ ಅಥವಾ ಯೂಗೋ ಎಂದ ತಕ್ಷಣ ಆತನ ಸುಪ್ರಸಿದ್ಧ ಕೃತಿ 'ಲೆ ಮಿಸ್ಜರಾಬ್ಲ' ಹಾಗೂ 'ನೋತ್ರದಾಮ್ ದ ಪಾರಿ' ಕಣ್ಣೆದುರು ನಿಲ್ಲುತ್ತವೆ. 'ಲೆ ಮಿಸ್ಜರಾಬ್ಲ' ಹೆಸರೇ ಹೇಳುವಂತೆ ಅಂದಿನ ಬಡತನದ, ಬಡವರ ಜೀವನ ಚಿತ್ರಿಸಿದೆ. ಈ ಕಾದಂಬರಿಯಲ್ಲಿ ನೆಪೋಲಿಯನ್ನನ ಕಾಲದ ಕೆಳ ಮಟ್ಟದ ಜನರ ಜೀವನ ಬಣ್ಣಿಸಿದೆ; ೧೮೪೮ ರ ದಂಗೆಯ ಚಿತ್ರ ಕೊಟ್ಟಿದೆ. ಇದೇ ಕಾದಂಬರಿಗೆ ಸಾಹಿತ್ಯ ಒದಗಿಸಿದ ಚಳವಳಿ ಜನರ ಜೀವನ '೯೩' ಎಂಬ ಕೊನೆಯ ಕಾದಂಬರಿ. ೧೮೬೯ ರಲ್ಲಿ ರಚಿತವಾದ ಇವನ 'ಮನುಷ್ಯ ನಕ್ಕ' ಎಂಬ ಕಾದಂಬರಿ ೧೮ ನೇ ಶತಕದ ಕೊನೆಯಲ್ಲಿಯ ಇಂಗ್ಲಂಡಿನ ಇತಿಹಾಸ ಹೇಳುತ್ತದೆ. 'ಸಮುದ್ರದ ಕೆಲಸಗಾರರು' (Les travailleurs de la mer) ಎಂಬುದು ಮಾತ್ರ ಇತಿಹಾಸದ ಸೋಂಕಿಲ್ಲದ ಕಾದಂಬರಿ. ಇವನ 'ನೋತ್ರದಾಮ್ ದ ಪಾರಿ' ಕಥೆಯ ಬಹುಭಾಗ ಪ್ಯಾರಿಸ್ಸಿನ ಸುಪ್ರಸಿದ್ಧ ಹಾಗೂ ಸುಂದರ ಚರ್ಚು ನೋತ್ರದಾಮ್(ನಮ್ಮ ಅಮ್ಮ)ವಲ್ಲಿ ನಡೆಯುತ್ತದೆ. ನಾಯಕಿ ಎಸ್ಮರಾಲ್ದಾ ಓಡಿ ಹೋಗುವುದು ಜನ ಅವಳನ್ನು ಹಿಡಿಯಲು ಪ್ರಯತ್ನಿಸುವುದು, ಅಷ್ಟಾವಕ್ರನಂತಿರುವ ಕ್ಯಾಸ್ಜಿಮೋದೋ ಅವಳನ್ನು 'ರಕ್ಷಿಸಿ' ನಂತರ ಅವನ ಆಶಾಭಂಗ ಎಲ್ಲ ಸುಂದರವಾಗಿ ಬಣ್ಣಿಸಿದೆ. ವ್ಹಿಕ್ತರ್ ಯೂಗೋ ಇಂದಿನ ಕಾದಂಬರಿಗಳ ಮೂಲಪುರುಷ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯೂಗೋ ಕವಿಗಿಂತ ಕಾದಂಬರಿಕಾರ ಎಂದರೇ ಹೆಚ್ಚು ಒಪ್ಪುತ್ತದೆ.

ಯೂಗೋನ ನಂತರ ಅನೇಕ ಕಾದಂಬರಿಕಾರರು ಬರುವರು. ಅವರು ಅಷ್ಟೇನೂ ಪ್ರಸಿದ್ಧರಾಗಿರದಿದ್ದರೂ ಅಲಕ್ಷ್ಯ ಮಾಡುವಂತೆಯೂ ಇಲ್ಲ. ಜೂಲ–ಮಿಶಲೆ ಈತ ಕಾದಂಬರಿಕಾರ ಎನ್ನುವುದಕ್ಕಿಂತಲೂ ಇತಿಹಾಸಕಾರ ಎಂದರೆ ಹೆಚ್ಚು ಉತ್ತಮ. ಆದರೆ ಇತಿಹಾಸದಲ್ಲಿ ತನ್ನ ಕಲ್ಪನಾಶಕ್ತಿ ತೋರಿಸಿದ್ದಾನೆ. ಶಾರ್ಲ ನೋದಿಯೆ ಎಂಬವನು ಆರ್ಸೆನಾಲ ಗ್ರಂಥಾಲಯದ ಪ್ರಮುಖ ಅಧಿಕಾರಿ. ತನ್ನ ಸುತ್ತ ಅನೇಕ ಸಾಹಿತಿಗಳ ಗುಂಪನ್ನು ಇಟ್ಟುಕೊಂಡಿರುತ್ತಿದ್ದ. ಜಾ ಸ್ಬೊಗಾರ್ ಮುಂತಾದ ಇವನ ಕಾದಂಬರಿಗಳಲ್ಲಿ ನಿರಾಶಾವಾದ ತುಂಬಿತುಳುಕುತ್ತದೆ. ಶಾರ್ಲ ನೋದಿಯೇನ ಗೆಳೆಯ ನೆರವಾಲ. ಸಾಹಿತಿಯಾದ ನೋದಿಯೇನ ಗೆಳೆತನದಲ್ಲಿ ಪೌರ್ವಾತ್ಯ ದೇಶದಲ್ಲಿ ಪ್ರವಾಸ' ಇವನ ಮುಖ್ಯ ಕೃತಿಗಳಲ್ಲಿ ಒಂದು. ಇವನ

ವಿಚಾರಸರಣಿ ಮುಂದೆ ಬೊದಲೇರ ಹಾಗೂ ಮಾಲ್‌ಆರ್ನೆ ಮುಂತಾದ ಅನೇಕ ಸುಪ್ರಸಿದ್ಧ ಕವಿಗಳ ಕೃತಿಗಳಿಗೆ ಬೇರಾಗಿ ನಿಂತಿದೆ.

ಸ್ತಾನ್ದಾಲ ಎಂಬ ಹೆಸರು ಕೇಳಿದ ತಕ್ಷಣ ಅವನ 'ಕೆಂಪು ಹಾಗೂ ಕಪ್ಪು' ಎಂಬ ಕಾದಂಬರಿಯ ಹೆಸರು ನೆನಪಿಗೆ ಬರುತ್ತದೆ. ಇದು ಅವನ ಮೇರುಕೃತಿ. ಸ್ತಾನ್ದಾಲ ತನ್ನ ಸಮಕಾಲೀನ ಸಮಾಜದ ಜನಜೀವನದ ನಿಜವಾದ ಚಿತ್ರ ಚಿತ್ರಿಸುವದನ್ನೇ ಮಹದುದ್ದೇಶವಾಗಿಟ್ಟುಕೊಂಡು ಅನೇಕ ಕಾದಂಬರಿ, ಕಥೆಗಳನ್ನು ಬರೆದ. ಅರ್ಮಾನ್ಸ ಎಂಬ ಆತನ ಕಾದಂಬರಿಯಲ್ಲಿ ಅಂದಿನ ಸಮಾಜದಲ್ಲಿ "ಒಳ್ಳೆಯ ಗುಣಗಳು" ಯಾವವು ಎಂಬುದನ್ನು ಬರೆದಿದ್ದಾನೆ. ಆತನ ಕೆಂಪು ಹಾಗೂ ಕಪ್ಪು ಕಾದಂಬರಿಯಲ್ಲಿ ನೆಪೋಲಿಯನ್ನನ ನಂತರ ಫ್ರಾನ್ಸನ್ನಾಳಿದ ಬುರ್ಬೊ ಆರಸರ ಕಾಲದ ಸಮಾಜದ ಚಿತ್ರ ಕಾಣುತ್ತದೆ. ಕೆಂಪು ಬಣ್ಣ ಸೈನಿಕ ಹಾಗೂ ಸೈನ್ಯವನ್ನು ಸೂಚಿಸಿದರೆ ಕಪ್ಪು ಬಣ್ಣ ಚರ್ಚು ಹಾಗೂ ಪಾದ್ರಿಗಳನ್ನು ಹೇಳುತ್ತದೆ. ಸ್ತಾನ್ದಾಲನೇ ಹೇಳುವಂತೆ, "ಈ ಕಾದಂಬರಿಯಲ್ಲಿ ನಾನು ೧೯ನೇ ಶತಮಾನ ಮೊದಲ ಮೂರು ಭಾಗ(೧೮೩೦)ದ ವರೆಗಿನ ಸಮಾಜ, ಆದರ ಮೇಲೆ ಬೇರೆ ಬೇರೆ ಸರಕಾರಗಳು ಹೇರಿದ ಕಟ್ಟಳೆಗಳಿಂದಾದ ಪರಿಣಾಮ ನಿಮಗೆ ಹೇಳಲು ಬಯಸಿದ್ದೇನೆ." ಇವನ ಇನ್ನೊಂದು ಕಾದಂಬರಿ 'ಶಾರ್ತ್ರಸ್ಜ ದ ಪಾರ್ಮ' ಎಂಬುದು. ಸ್ತಾನ್ದಾಲ ಕೆಲಕಾಲ ಇಟಲಿಯ ಮಿಲನಿನಲ್ಲಿದ್ದ. ಕೆಲವೊಂದು ಕಾಲ ಇಟಲಿಯ ತ್ರಿಯಸ್ತದ ರಾಯಭಾರಿಯಾಗಿ ಕೂಡ ಕೆಲಸ ಮಾಡಿದ. ಈ 'ಶಾರ್ತ್ರಸ್ಜ' ಕಾದಂಬರಿಯಲ್ಲಿ ಇಟಲಿಯ ಜನಜೀವನ ಓದಬಹುದು. ಇವು ಮುಖ್ಯ ಕಾದಂಬರಿಗಳು. ಇದಲ್ಲದೇ 'ಆನ್ರಿ ಬ್ರುಲಾರ್ಡ' ಹಾಗೂ 'ಲಾಮಿಯೆಲ್'ಗಳಲ್ಲಿ ಹಳ್ಳಿಯ ಕಥೆ ಇದೆ. ೧೮೩೦ ರ ಚಳವಳಿಯ ಪರಿಣಾಮ ಒಕ್ಕಲಿಗರ ಮೇಲೆ ಆದದ್ದು ಚಿತ್ರಿಸಿದೆ. ಇವನು ಬರೆದ ಕಥೆ ಕಾದಂಬರಿ ಅಷ್ಟು ಹಿಡಿಸುವಂತಿರದಿದ್ದರೂ ಬರೆಯುವ ಶೈಲಿ ಬಹು ಚೆಂದ. ಹಿಡಿದರೆ ಬಿಡದಂತೆ ಓದಬೇಕೆನ್ನುವ ಲವಲವಿಕೆ ಹುಟ್ಟಿಸುವಂತಹ ಶಬ್ದ ಜೋಡಣೆ, ವಾಕ್ಯ ರಚನೆ. ಪದ್ಯವನ್ನು ಬಹಿಷ್ಕರಿಸಿ ಸುಂದರ ಸರಳ ಗದ್ಯದಲ್ಲಿ ಬರೆದಿರುವ ಇವನ ಕೃತಿಗಳು ಮುಂದೆ ಪದ್ಯ ಹಾಗೂ ಗದ್ಯವೆಂದರೇನು ಎಂಬುದನ್ನು ಸರಿಯಾಗಿ ವಿಂಗಡಿಸಲು ಬಹಳೇ ಸಹಾಯಕಾರಿಯಾದವು. ಇವನು ತನ್ನ ಜೀವನಚರಿತ್ರೆ ಸಹ ತಾನೇ ಬರೆದಿಟ್ಟಿದ್ದಾನೆ. ಇವನು ಅವಸರದಲ್ಲಿ ಬರೆದರೆ ಸುಂದರವಾಗಿರುತ್ತಿತ್ತಂತೆ; ಆದರೆ ಅದೇ ಚೆನ್ನಾಗಿ ಕುಳಿತು ವಿಚಾರ ಮಾಡಿ ಬರೆದರೆ ಆದಕ್ಕೆ ಬರುತ್ತಿದ್ದುದು ಅಪ ಯಶಸ್ಸೆ. ಪ್ರಾಸ್ಪೆರ ಮೆರಿಮೆ ಐತಿಹಾಸಿಕ ಕಾದಂಬರಿಕಾರ. ದೊರೆ ದಶಮ ಶಾರ್ಲನ ಕಾಲದ ಚಿತ್ರ ಚಿತ್ರಿಸುವ ಪ್ರಮುಖ ಕಾದಂಬರಿ ೧೮೨೯ ರಲ್ಲಿ ಬರೆದ. ಇದು ವಿನ್ನಿಯ ಕಾದಂಬರಿಯಂತಿದೆ. ಇವನು ಹೆಚ್ಚು ಪ್ರಸಿದ್ಧವಾದುದು ಚಿಕ್ಕ ಕಥೆಗಳ ಮೂಲಕ. 'ಕೊಲೊಬ್ಬಾ', 'ಕಾರ್ಮೆನ್' ಮುಂತಾದವು. ಒನೊರೆ ದ ಬಾಲ್ಜಾಕ್ ಹತ್ತೊಂಬತ್ತನೇ ಶತಕದ ಕಾದಂಬರಿಗಳ ಚಕ್ರವರ್ತಿ ಇವನೂ ಸಹ ಶಿವರಾಮ ಕಾರಂತರಂತೆ

ಹಿಡಿಯುದ ಟೊಂಗೆ ಇಲ್ಲ. ಶೋತ ದ್ರೋಲಾಲೆಸ್ ಎಂಬ ತಲೆಬರೆಹದಲ್ಲಿ ಅನೇಕ ಕಥೆ ಬರೆದಿದ್ದಾನೆ. ಆದರೆ ಕಾದಂಬರಿಯ ರಾಜ್ಯದಲ್ಲಿ ಇವನ ಹೆಸರು ಶಾಶ್ವತವಾಗಿ ಉಳಿದಿದೆ. ಅವನು ಬರೆದುದು ಸುಮಾರು ತೊಂಬತ್ತು ಕಾದಂಬರಿಗಳು. ಇವನ್ನು ಒಂದೊಂದೇ ಸ್ವತಂತ್ರ ಕಾದಂಬರಿ ಎಂದೆ ಓದಬಹುದು, ಇಲ್ಲವೆ ಒಂದರ ನಂತರ ಬರುವ ಕಾದಂಬರಿ ಇಲ್ಲವೇ ಒಂದೇ ಕಾದಂಬರಿಯ ಅನೇಕ ಭಾಗಗಳಂತೆಯೂ ಓದಬಹುದು. ಸುಮಾರು ೨೦೦೦ ವ್ಯಕ್ತಿಗಳ ಚಿತ್ರಣ ಇಲ್ಲಿದೆ. ದುಡ್ಡಿಗಾಗಿ, ಉನ್ನತ ಸ್ಥಾನಕ್ಕಾಗಿ, ಪ್ರೇಮಕ್ಕಾಗಿ ಬಳಲಿದವರ ಜೀವನವೇ ತೊಂಭತ್ತು ಕಾದಂಬರಿಗಳ ಜನನದ ಕಾರಣ. ಇವನ ಕಾದಂಬರಿಗಳಲ್ಲಿ ನೈಜತೆ ತುಂಬಿ ತುಳುಕುತ್ತಿದೆ. ಬಾಲ್ಝಾಕ್ ಕಾದಂಬರಿಗೆ ಒಂದು ರೂಪ ಕೊಟ್ಟ.ಅವನಿಂದಾಗಿ ಕಾದಂಬರೀ ಸಾಹಿತ್ಯದ ಉಳಿದ ಶಾಖೆಗಳೊಡನೆ ಸರಿಯಾಗಿ ನಿಲ್ಲಲು ಸ್ಥಳ ಮಾಡಿಕೊಂಡಿತು. 'ಲಾ ದುಶೆಸ್ ದು ಲಾಂಜೆ'ದಲ್ಲಿ ಶೂರತನ, ನಿರ್ಮಲ ಪ್ರೇಮಕ್ಕೆ ಬೆಲೆ ಇದ್ದರೆ 'ಲ ಲಿಸ್ ದಾನ್ಸ ಲಾ ವಾಲೆಯು'ಲ್ಲಿ ಬೂರ್ಜ್ವಾ ಸಮಾಜದ ಹೊನ್ನು ಹಾಗೂ ಹೊಲಸು ಕಂಡು ಬರುವದು. 'ಲಾ ಕುಸ್ಸಿನ್ ಬೆತ್ತ', 'ಲ ಕುಸ್ಸ ಪೊಂ', 'ಲ ಪೇರ ಕೋರಿಯೊಗ'ಳಲ್ಲಿ ಮಾನವಜೀವನದ ದುರಂತ ಘಟನೆಗಳ ಮಾಲೆ ಇದೆ. 'ಹಳ್ಳಿಯ ಪಾದ್ರಿ' ಎಂಬುದರಲ್ಲಿ ಅನ್ಯರಿಗಾಗಿ ತನಗೆ ಅನೇಕ ತೊಂದರೆ ಬಂದರೂ ಅವರಿಗೆ ಸಹಾಯ ಮಾಡಲು ಹವಣಿಸುವ, ಅವರಿಗಾಗಿ ಜೀವನವನ್ನೇ ಮುಡಿಪಿಟ್ಟ ಪಾದ್ರಿಯ ಜೀವನ ಕಂಡು ಬರುವದು.

ಬಾಲ್ಝಾಕನ ಶೈಲಿಯ ಬಗೆಗೆ ಹೇಳಬೇಕೆಂದರೆ ೧೮೮೦ ರಲ್ಲಿ ಬ್ರುನೆತಿಯೇರ ಎಂಬವನ ವಾಕ್ಯಗಳಲ್ಲಿ ಹೇಳಬಹುದು, "ಪಾಪದ ಫ್ರೆಂಚ್ ಭಾಷೆಯನ್ನು ಬಾಲ್ಝಾಕ-ನಂತೆ ಮತ್ತಾರೂ ಹಿಂಸಿಸಿಲ್ಲ," ಎಂದು. ಅವನ ಶೈಲಿ ಸುಂದರವಲ್ಲದಿದ್ದರೂ ಏನೋ ಒಂದು ಮಾದಕತೆ ಇದೆ ಅದರಲ್ಲಿ. ಕೆಲವೊಮ್ಮೆ ವ್ಯಾಕರಣದ ತಪ್ಪುಗಳೂ ಕಂಡು ಬರುತ್ತವೆ. ವಾಕ್ಯರಚನೆ, ಶಬ್ದ ಜೋಡಣೆಗಳಲ್ಲಿ ಅಸಂಬದ್ಧತೆ ಲಾಸ್ಯವಾಡುತ್ತಿದ್ದರೂ ಓದುಗರ ಮನಸೆಳೆಯುತ್ತವೆ ಕಾದಂಬರಿಗಳು. "ಕುದುರೆಯ ಓಟದ ಓಘವಿದೆ ಶೈಲಿಯಲ್ಲಿ, ಆದರೆ ತಾಲಲಯಬದ್ಧತೆಯಿಲ್ಲ" ಎಂದು ಥಿಬೊದೆ ಹೇಳಿದ್ದಾನೆ. ಬಾಲ್ಝಾಕನ ಶೈಲಿಯ ಬಗೆಗೆ. ನೆಪೋಲಿಯನ್ನನ ದೊಡ್ಡ ಸೈನ್ಯ ಓಡುತ್ತಿದ್ದಂತೆನಿ-ಸುವದು ಎನ್ನುವದು ಕೆಲವರ ವರ್ಣನೆ. ಸಂಭಾಷಣೆ, ದೃಶ್ಯಗಳ ಜೋಡಣೆ, ಅಭಿಪ್ರಾಯದ ಅನುವಾದ ಇವೆಲ್ಲ ಒಂದು ರೀತಿಯ ಒಂದುತನ, ತನ್ನದೇ ಆದ ವಿಶಿಷ್ಟ ಸ್ಥಳವನ್ನು ಕೊಟ್ಟವೆ ಬಾಲ್ಝಾಕನ ಕಾದಂಬರಿಗೆ. ಇದು ಬಾಲ್ಝಾಕನಿಗೆ ಅಷ್ಟೇ ಸಾಧ್ಯವೇ ವಿನಃ ಅನ್ಯರಿಗಲ್ಲ. ಎಂತೆಯೇ ಅವನ ಶೈಲಿಯಲ್ಲಿ, ಭಾಷೆಯಲ್ಲಿ ಅನೇಕ ಕುಂದುಕೊರತೆಗಳಿದ್ದರೂ ಬಾಲ್ಝಾಕ್ ಕಾದಂಬರಿಯ ರಾಜ್ಯದಲ್ಲಿಂದಿಗೂ ಚಕ್ರವರ್ತಿ ಯಾಗುಳಿದಿದ್ದಾನೆ. ಈತನ ಕೆಲ ಕಾದಂಬರಿಗಳನ್ನಿಲ್ಲಿ ಹೆಸರಿಸಬಹುದು. 'ಲೆ ಶ್ವಾನ್ಸ' 'ಚಿಂತೆಯ ಹೊದಿಕೆ', 'ಯೆಜೆನಿ ಗ್ರಾಂದೆ,' 'ಲಾ ರಿಶೆರ್ಷ ದಲಬ್ಸಲು', 'ತಂದೆ

ಗೊರಿಯೊ,' 'ಹಳ್ಳದಲ್ಲಿ ಲಿಸ್ ಹೂ,' 'ಸೀಸ್ಜ ಬಿರೊತ್ತೊ,' 'ಭಂಗವಾದ ಕನಸುಗಳು,' ಹಳ್ಳಿಯ ಪಾದ್ರಿ,' 'ಸೂಳೆಯರ ಸುಖ-ದುಃಖ'. ಜಾರ್ಜ್ ಸಾಂನ ಕೃತಿಗಳಲ್ಲಿ ಸೋಶಿಯಲಿಸಂ ಕಂಡುಬರುವದು. ಈ ಸೋಶಿಯಲಿಸಂನ್ನಾಧರಿಸಿಕೊಂಡು ಬರೆದ 'ಲಾ ಮಾರ-ಒ-ದಿಯೊಬ್ಬ' 'ಲಾ ಪತಿತ್ ಫಾದೆತ್', ಮುಂತಾದವುಗಳಲ್ಲಿ ಹಳ್ಳಿಯ ಜೀವನದ ಚಿತ್ರಣವಿದೆ. "ನಾನು ಕಂಡದ್ದನ್ನು ಕಂಡಂತೆ ಬಣ್ಣಿಸಬೇಕೆಂಬುದೇ ನನ್ನ ಆಶೆ," ಎಂದು ತಾನೇ ಹೇಳಿಕೊಂಡಿದ್ದಾನೆ. ಅವನ ಗುಣವನ್ನರಿಯದೇ ಅನೇಕರು ಜಾರ್ಜ ಸಾಂನನ್ನು ಟೀಕಿಸಿದ್ದಾರೆ. ಇದು ಎಂದಿಗೂ ಮುಗಿಯದ ಕಥೆ ಎಂದು ಅಲಂ ಹೇಳಿದ್ದಾನೆ.

ಅಲೆಕ್ಸಾಂಡ್ರ ದುಮಾ ವಾಲ್ಟರ್ ಸ್ಕಾಟನಿಂದ ಪ್ರಚೋದಿತವಾಗಿ ಅವನಂತೆ ಅನೇಕ ಐತಿಹಾಸಿಕ ಕಾದಂಬರಿಗಳನ್ನು ಜನಪ್ರಿಯ ಭಾಷೆಯಲ್ಲಿ ಬರೆದ. ಎಂದರೆ ವ್ಹಿಕ್ತರ್ ಯೂಗೋ, ಬಾಲ್ಜಾಕರಂತೆ ಗ್ರಾಂಥಿಕ ಭಾಷೆಯಲ್ಲಿ ಬರೆಯದೇ ಜನರಿಗೆ ತಿಳಿಯುವಂತೆ ಸರಳ ಹಾಗೂ ಗ್ರಾಮೀಣ ಫ್ರೆಂಚಿನಲ್ಲಿ ಬರೆದ. 'ಮೊನ್ತೆ ಕ್ರಿಸ್ತೊದ ಒಡೆಯ', 'ಮೊರ್ಗೊ ರಾಣಿ', 'ಮೂವರು' ಸೈನಿಕರು ಇತ್ಯಾದಿ.

ಫ್ಲೊಬೆರನ ಕಾದಂಬರಿಯಲ್ಲಿ ಸಹಜತೆ ಕಂಡುಬರುವದು. ಸ್ತಾನ್ದಾಲ, ಬಾಲ್ಜಾಕರಂತೆ ಇವನೂ ೧೯ನೇ ಶತಕದ ಸುಪ್ರಸಿದ್ಧ ಕಾದಂಬರಿಕಾರ. ಇವನು ಸಹಜತೆಯ ಒಡೆಯ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಇವನ ಸುಪ್ರಸಿದ್ಧ ಕಾದಂಬರಿ 'ಮದಾಮ್ ಬೊವಾರಿ' ಕಥೆಯನ್ನು ನೋಡಿದರೆ ನಮ್ಮ ಹಿಂದೂ ಸಂಪ್ರದಾಯಕ್ಕೆ ಹೇಸಿಗೆ ಬರುವಂತಹದು. ಮೂರ್ಖ ಗಂಡನೊಡನೆ ಬಾಳಲಾರದೇ ಅನೇಕ ಪ್ರಿಯಕರರ ಬಾಹುಬಂಧನದಲ್ಲಿ ನಲಿದಾಡಿ ಕೊನೆಗೆ ತನ್ನ ಜೀವನಕ್ಕೆ ತಾನೇ ಹೇಸಿ ಅಸು ನೀಗಿದ ಮದಾಮ್ ಬೊವಾರಿಯ ಚಿತ್ರ ಹೃದಯ ನಡುಗಿಸುವಂತಹದು. ಅವಳು ಮಾಡುವದು ತಪ್ಪೆಂದು ಎಲ್ಲರಿಗೂ ಕಂಡುಬಂದರೂ ಫ್ಲೊಬೆರ್ ಅದನ್ನು ಹೇಳುವ ಸರಣಿ ನೋಡಿದರೆ ಬೊವಾರಿಯ ಬಗೆಗೆ ಕನಿಕರ ಹುಟ್ಟುವದೇ ವಿನಃ ಸಿಟ್ಟಲ್ಲ. ಅಂತಹ ಸುಂದರ ಶೈಲಿ ಅವನದು. ಫ್ಲೊಬೆರನ ಕಾದಂಬರಿಗಳಲ್ಲಿ ವ್ಯಕ್ತಿಗಳ ಪರಾಭವಗಳ ಪರಂಪರೆಯೇ ಕಂಡುಬರುವದು.

ಡೊದೆ ಕೆಲವು ಕಾದಂಬರಿಗಳನ್ನು ಬರೆದಿದ್ದಾನೆ. ಅವನ ಕೃತಿಗಳು ಆ ಕಾಲಕ್ಕೆ ಹೆಚ್ಚು ಪ್ರಸಿದ್ಧವಾಗಿದ್ದರೂ ಈಗ ತಮ್ಮ ಸ್ಥಾನ ಕಳೆದುಕೊಳ್ಳುತ್ತಿವೆ. 'ಲಿ ಪೆಟಿಲ್ ಶೂಜ್' ಎಂಬ ಅವನ ಪುಸ್ತಕ ಓದುಗರ ಕಣ್ಣಲ್ಲಿ ನೀರು ಬರಿಸಿದರೆ 'ತಾರ್ಕರಿನ್ ದತರಾಸ್ಕನ್' ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತದೆ. ಇವನ ಕಾದಂಬರಿಗಳನ್ನು ಆಂಗ್ಲ ಲೇಖಕ ಡಿಕನ್ಸನ ಕಾದಂಬರಿಗಳಿಗೆ ಹೋಲಿಸಿದರೆ ತಪ್ಪೇನಿಲ್ಲ.

ಎಮಿಲ ಜೋಲಾ ಬಾಲ್ಜಾಕನಂತೆಯೆ ದೊಡ್ಡ ಕಾದಂಬರಿಕಾರನಾಗಲು ಹವಣಿಸಿದ. ಬಾಲ್ಜಾಕ ೧೯ನೇ ಶತಕದ ಮೊದಲ ಭಾಗದಲ್ಲಿದ್ದರೆ ಜೋಲಾ ಅದೇ ಶತಕದ ಉತ್ತರಾರ್ಧದಲ್ಲಿ ಜೀವಿಸಿದ್ದ. ಇವನು ನೈಜ ಕಾದಂಬರಿಗಳನ್ನು ರಚಿಸಿದವರ ಸಾಲಿನಲ್ಲಿ

ಕೊನೆಯುವನು. ತನ್ನ ಕಾಲದ ಎಂದರೆ ತೃತೀಯ ನೆಪೋಲಿಯನ್ನನ ಕಾಲದ ಫ್ರೆಂಚ್ ಸಮಾಜವನ್ನು ವರ್ಣಿಸಿದ್ದಾನೆ ತನ್ನ ಕಾದಂಬರಿಯಲ್ಲಿ. ‘ರೂಗೋ ಮಕಾರ್’ ಇವನ ಅನೇಕ ಕೃತಿಗಳಲ್ಲೊಂದು ಮುಖ್ಯ ಕೃತಿ, ಒಂದು ಕುಟುಂಬದ ಕಥೆ. ನೆಪೋಲಿಯನ್ನನ ಕಾಲದಲ್ಲಿ ಇವನು ರಾಜಕಾರಣಿಯೂ ಹೌದು. ಆಗ ನಡೆದ ಕೆಲ ಘಟನೆಗಳಲ್ಲಿ ಇವನದು ಮುಖ್ಯ ಪಾತ್ರವಾಗಿತ್ತು. ಇವನ ಶೈಲಿ ಬಹು ಸುಂದರ; ಲಯಬದ್ಧವಾದ ಮಾತುಗಾರಿಕೆ ಇದೆ; ಆದರೆ ಬಾಲ್ಜಾಕನಂತೆ ಶೈಲಿಯಲ್ಲಿ ಓಘವಿಲ್ಲ, ಸೌಂದರ್ಯವಿಲ್ಲ, ಶಕ್ತಿ ಇಲ್ಲ– ಎಲ್ಲ ಒಣ ಒಣ, ಕೊಣ ಕೊಣ.

ಇತ್ತೀಚೆಗೆ ಇನ್ನೂ ಹುಟ್ಟಿ ಕಣ್ತೆರೆಯುತ್ತಿರುವ ಸಾಹಿತಿಗಳನ್ನು ಬಿಟ್ಟರೆ ಮಾರ್ಸೆಲ್ ಪ್ರೂಸ್ತ ಹಾಗೂ ಆನ್ದ್ರೆ ಜಿದ್ ಹೆಸರನ್ನು ಮಾತ್ರ ಈ ಶತಕದಲ್ಲಿ ಹೇಳಬಹುದು, ದೊಡ್ಡ ಕಾದಂಬರಿಕಾರರ ಪಟ್ಟಿಯಲ್ಲಿ. ಪ್ರೂಸ್ತ (೧೮೭೧–೧೯೨೨)ನ ಮೇರುಕೃತಿ ‘ಗತಿಸಿದ ಕಾಲದ ಸಂಶೋಧನೆಯಲ್ಲಿ’ ಎಂಬುದು. ತಾನೂ ಒಬ್ಬ ಶ್ರೀಮಂತ ಕುಟುಂಬದವನೆನ್ನಿಸಿಕೊಳ್ಳಬೇಕೆಂದು ಹವಣಿಸಿ, ಅನೇಕ ಶ್ರೀಮಂತ (Aristocrate) ಜನರ ಸಂಗ ಮಾಡಿ ಅವರೊಡನಾಡಿ ಅನಂತರ ಅವರ ಮತಿಹೀನ ನಡವಳಿಕೆಯಿಂದ ಬೇಸತ್ತು ಜಿಗುಪ್ಸೆಗೊಂಡು ತನ್ನ ಜೀವನ ಚರಿತ್ರೆಯನ್ನೇ ಕಾದಂಬರಿ ರೂಪದಲ್ಲಿ ಬರೆದಿದ್ದಾನೆ. ಈ ಜನರ ಒಡನಾಟಕ್ಕಾಗಿ ಹಾತೊರೆದದ್ದು, ಅವರೊಡನೆ ಕಲೆತು ಅನೇಕ ಸಂತೋಷಕೂಟಗಳಲ್ಲಿ ತನ್ನ ಇರುಳೆಲ್ಲವನ್ನೂ ಕಳೆದದ್ದು ಇವೇ ಈ ಕಾದಂಬರಿಯ ಮೂಲವಸ್ತು. ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳು ಹಾಗೂ ಸ್ಥಳಗಳು ಕೆಲವೊಮ್ಮೆ ನಿಜವಾಗಿಯೂ ಅದೇ ಸಮಯಕ್ಕೆ ಕಾಲ್ಪನಿಕವಾಗಿಯೂ ಇವೆ. ಉದಾ:– ಈ ಕಾದಂಬರಿಯಲ್ಲಿ ಬರುವ ಗೇರ್‌ಮಾನ್ತ ಎಂಬ ಅರಮನೆಯ ವರ್ಣನೆ. ಪ್ಯಾರಿಸ್ಸಿನ ಪೂರ್ವಕ್ಕೆ ಗೇರ್‌ಮಾನ್ತ ಅರಮನೆ ಈಗಲೂ ಇದೆ. ಆದರೆ ಅದು ಪ್ರೂಸ್ತ ವರ್ಣಿಸಿದಂತಿಲ್ಲ. ಈ ಕಾದಂಬರಿಯಲ್ಲಿ ಬರುವ ವ್ಯಕ್ತಿಗಳು ಅವನ ಮಿತ್ರವೃಂದದಲ್ಲಿಯ ಕೆಲವರು. ಇನ್ನು ಕೆಲವೊಮ್ಮೆ ಪ್ರೂಸ್ತ ಹೆಂಗಸಿನ ವರ್ಣನೆಯೊಂದನ್ನು ಕೊಡುವನು. ಆದರೆ ನಿಜವಾಗಿ ನೋಡಿದರೆ ಅದು ಒಬ್ಬ ಗಂಡಸು, ಸುಂದರ ಯುವಕನ ವರ್ಣನೆ ಹಾಗೂ ಅವನ ಬಗೆಗೆ ಪ್ರೂಸ್ತನ ಪ್ರೇಮ. ಪ್ರೂಸ್ತ ‘ಸ್ವಲಿಂಗರತಿಪ್ರೇಮಿ’ ಎಂದು ಹೇಳುತ್ತಾನೆ. ಹೆಂಗಸಿಗಿಂತ ಹೆಚ್ಚು ಯುವಕ ತರುಣರಲ್ಲೇ ಅವನು ಅನುರಕ್ತನಾಗಿರುತ್ತಿದ್ದನಂತೆ. ಎರಡು ಜಾಗತಿಕ ಮಹಾಯುದ್ಧಗಳಿಂದಾಗಿ ಶ್ರೀಮಂತ ಜನರ ಶ್ರೀಮಂತಿಕೆ ಇಳಿಯತೊಡಗಿತ್ತು, ಇಪ್ಪತ್ತನೇ ಶತಮಾನದಲ್ಲಿ. ಆದರೂ ತಮ್ಮ ಅಂತಸ್ತು ಕಾಯ್ದುಕೊಳ್ಳಲು ಈ ಜನ ಹೆಣಗಾಡುತ್ತಿದ್ದರು. ಅವರ ಡಾಂಭಿಕ ಜೀವನದ ಚಿತ್ರವೇ ಈ ಕಾದಂಬರಿಯ ಜೀವಾಳ. ಮುಪ್ಪಿನ ಕಾಲದಲ್ಲಿ ದಿನಗಳೆಯುವುದೇ ಕಠಿಣವಾದಾಗ ತನ್ನ ಹಿಂದಿನ ದಿನಗಳನ್ನು ನೆನೆದು ಬರೆದಿರುವುದೇ ಈ ಮಹಾಗ್ರಂಥ. ಶೈಲಿ ತುಂಬ ಚೆನ್ನಾಗಿದೆ, ಕಾವ್ಯಮಯ. ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳ ಜೀವನದಲ್ಲಿ ವಿಶೇಷ ಘಟನೆಗಳಿಲ್ಲ ಬಾಲ್ಜಾಕನ

ಕಾದಂಬರಿಗಳಂತೆ. ಶೌರ್ಯದ ಸುಳಿವಂತೂ ಎಳ್ಳಷ್ಟೂ ಇಲ್ಲ. ಆದರೂ ಈ ಕಾದಂಬರಿಗಳಲ್ಲಿ ಅದೇನೋ ಒಂದು ಆಕರ್ಷಣೆ, ಒಂದು ರೀತಿಯ ಸಂಗೀತದ ಸುಧೆ ಹರಿಯುತ್ತಿದೆ ಇಲ್ಲಿ. ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳಿಗೆ ಪೋಷಕ ಪಾತ್ರಧಾರಿ ಸೂತ್ರಧಾರಿ, ಲೇಖಕನೇ– ಎಂದರೆ ಪ್ರೂಸ್ತನೇ.

'ಜಾ ಸಾನ್ತೈಯ' ಎಂಬುದು ಇವನ ಇನ್ನೊಂದು ಕಾದಂಬರಿ. ಮೇಲೆ ಹೇಳಿದ 'ಗತಿಸಿದ ಕಾಲದ ಸಂಶೋಧನೆ'ಗೂ ಇದಕ್ಕೂ ಬಹಳೇ ಅಂತರವಿದೆ. 'ಜಾ ಸಾನ್ತೈಯ' ಇವನ ಪ್ರಪ್ರಥಮ ಕಾದಂಬರಿ, ಯುವ್ವನದಲ್ಲಿ ರಚಿತವಾದ ಕೃತಿ. ಇದರಲ್ಲಿ ಸಮಕಾಲೀನ ಸಮಾಜವನ್ನು ಚಿತ್ರಿಸಲು ಹೆಣಗಿ ಸೋತಿದ್ದಾನೆ ಪ್ರೂಸ್ತ. ಯಾಕೆಂದರೆ ಅವನಿಗಿನ್ನೂ ಇದ್ದುದನ್ನು ಇದ್ದಂತೆ ವರ್ಣಿಸುವ ಚಾಲ್ಹಾಕನ ಶಕ್ತಿ ಇರಲಿಲ್ಲ. ಜೀವನದ ಕೊನೆಯ ಹಂತದಲ್ಲಿ ಅಸ್ತಮಾದಿಂದ ನರಳುತ್ತ ಇಡೀ ರಾತ್ರಿ ನಿದ್ದೆ ಇಲ್ಲದೇ ಕಳೆಯುವ ಸಮಯ ಬಂದಾಗ ರೂಪಗೊಂಡ 'ಅ ಲ ರಿಚೆರ' ಪ್ರೂಸ್ತನ ಹೆಸರನ್ನು ಸಾಹಿತ್ಯರಂಗದಲ್ಲಿ ಚಿರಸ್ಮರಣೀಯವಾಗುಳಿಯುವಂತೆ ಮಾಡಿದೆ.

ತ್ರಿವೇಣಿಯವರ ಕಾದಂಬರಿಗಳಲ್ಲಿಯಂತೆ ಆನ್ದ್ರೆ ಜಿದನ ಕಾದಂಬರಿಗಳಲ್ಲಿ ಸಹ ವ್ಯಕ್ತಿಯ ಮಾನಸಿಕ ಚಿತ್ರ, ಹೋರಾಟ ಮುಖ್ಯ ವಸ್ತು. ಸಾಹಿತ್ಯದ ಸೌಂದರ್ಯವನ್ನು ಬೆಳೆಸುವದೇ ಇವನ ಮುಖ್ಯ ಗುರಿಯಾಗಿತ್ತು. ಇವನು ಅನೇಕ ಪುಟ್ಟ ಕಥೆಗಳನ್ನೂ ಬರೆದಿದ್ದಾನೆ; ಆದರೆ ಬೇಗ ಸಾಹಿತ್ಯದ ಈ ದಾರಿ ಬಿಟ್ಟು ಕಾದಂಬರಿಯನ್ನು ಹಿಡಿದ. ಇವನ ಕಾದಂಬರಿ 'ಚಿಕ್ಕ ಬಾಗಿಲು' ಅವ್ಯಕ್ತ ಶಕ್ತಿಯ ವಿಮರ್ಶೆಯಾಗಿದ್ದರೆ 'ಸಂಫನಿ ಪಾಸ್ತೋರಾಲ' ಎಂದರೆ 'ಪಾಸ್ತರನ ಸಂಗೀತ'ದಲ್ಲಿ ತನ್ನನ್ನು ತಾನೇ ಮೋಸ ಮಾಡಿಕೊಳ್ಳುವದು: 'ಇಸಾಬೆಲ್ಲ'ದಲ್ಲಿ ಅದ್ಭುತರಮ್ಯತೆಯ ಕ್ರೂರ ಟೀಕೆ ಕಾಣುತ್ತದೆ 'ಖೊಟ್ಟಿ ನಾಣ್ಯಗಾರ' 'ವೆಟಿಕನ್ನದ ಗವಿ'ಗಳಲ್ಲಿ ವಿನೋದ ಹಾಗೂ ಗಾಂಭೀರ್ಯ ಕೂಡಿವೆ. 'ಖೊಟ್ಟಿ ನಾಣ್ಯ'ದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಸಾಧ್ಯವಿಲ್ಲವಾದರೆ 'ವೆಟಿಕ'ದಲ್ಲಿ ಕಾರಣವಿಲ್ಲದೇ ಕೃತಿಗೈಯ್ಯುವವರ ಕ್ರೂರ ಪರಿಣಾಮ ಹೇಳಿದೆ. 'ವೆಟಿಕ'ದಲ್ಲಿ ಕಾರಣವಿಲ್ಲದೇ ತರುಣನೊಬ್ಬ ಕೊಲೆಗೈಯುವನು. ಅನಂತರ ಅದನ್ನು ದಕ್ಕಿಸಿಕೊಳ್ಳಲು ಅವನು ಪಟ್ಟ ಕಷ್ಟ ಅಷ್ಟಿಷ್ಟಲ್ಲ.

ಇವನ ಕಾದಂಬರಿಗಳಲ್ಲಿ ನೀತಿಪಾಠ ಏನೂ ಇಲ್ಲ. ಓದಿದ ನಂತರ ಕಹಿ ರುಚಿಯೊಂದು ಮನದಲ್ಲುಳಿದು ಮನಸ್ಸು ಬಹುಕಾಲದ ವರೆಗೆ ಜಡವಾಗಿರುತ್ತದೆ. ಆದರೆ ಈ ಕಾದಂಬರಿಗಳು ಓದಲು ಬಹಳ ಹಗುರ. ಫ್ರಾನ್ಸಿನ ಸೃಷ್ಟಿಸೌಂದರ್ಯದ ವರ್ಣನೆ ಕಣ್ಣಿಗೆ ಕಟ್ಟುವಂತೆ ಮೂಡಿಬರುತ್ತದೆಯಲ್ಲ.

ಈ ಶತಕದಲ್ಲಿ ಆಗಿಹೋದ ಸುಪ್ರಸಿದ್ಧ ಕಥೆ ಕಾದಂಬರಿಕಾರ ರೋಮೆ ರೋಲಾಂ ಹಾಗೂ ಇನ್ನೂ ಜೀವಂತವಿರುವ ಆನ್ದ್ರೆ ಮಾಲ್‌ರೊ ಅವರ ಹೆಸರು ಹೇಳದಿದ್ದರೆ ದೊಡ್ಡ ಪಾಪವನ್ನೇ ಮಾಡಿದಂತೆ. ರೋಮೆ ರೋಲಾಂರ ಅಹಿಂಸಾವಾದ

ಗಾಂಧೀಜಿಯವರ ಅಹಿಂಸಾವಾದಕ್ಕೆ ಹೋಲುತ್ತಿತ್ತು. ರಶಿಯನ್ ಕ್ರಾಂತಿ, ಮೊದಲನೆ ಜಾಗತಿಕ ಮಹಾಯುದ್ಧ ಮುಂತಾದವುಗಳಿಂದ ಹೇಸಿ ಶಾಂತಜೀವನದ ಹಾದಿ ಹುಡುಕುತ್ತಿದ್ದರು. ರೋಲಾಂ ಅವರು ಸಂಗೀತಗಾರರನ್ನು ಬಹಳೇ ಮೆಚ್ಚಿಕೊಂಡಿದ್ದರು. ಬಿಥೋವನನ್ನು ದೇವರಂತೆ ಪೂಜಿಸುತ್ತಿದ್ದರು. 'ಜಾ ಕ್ರಿಸ್ತೊಫ' ಎಂಬ ಹತ್ತು ಹೊತ್ತಿಗೆಗಳ ಕಾದಂಬರಿಯನ್ನು ಬರೆದಿದ್ದಾನೆ. ಕಥಾವಸ್ತು ಸಂಗೀತ-ಗಾರನ ಜೀವನದಲ್ಲಿ ಬರುವ ಘಟನೆಗಳು, ಆಶೆ, ಆಕಾಂಕ್ಷೆ, ಪ್ರಯತ್ನ, ಅಸೂಯೆ, ಕೀರ್ತಿ ಇತ್ಯಾದಿ. ಇದನ್ನು ಓದಿದರೆ ಬಿಥೋನ ಜೀವನಚರಿತ್ರೆಯೇನೋ ಎನಿಸು-ವದು. ಕಾರಣವೆಂದರೆ ರೋಲಾಂ ಬೀಥೋವನ ಜೀವನಚರಿತ್ರೆಯನ್ನೆದುರಿಗಿಟ್ಟು-ಕೊಂಡು ಈ ಕಾದಂಬರಿಗಳನ್ನು ಬರೆದಿದ್ದಾರೆ. ಇವರು ೧೯೪೪ರಲ್ಲಿ ಮಡಿದರು.

ಆನ್ದ್ರೆ ಮಾಲ್‌ರೊ ಇನ್ನೂ ಜೀವಂತವಿರುವ ವ್ಯಕ್ತಿ. ಎಲ್ಲಿ ಏನಾದರೂ ಯುದ್ಧ ಇದ್ದರೆ ಮಾಲ್‌ರೊ ಅಲ್ಲಿ ಹೋಗಿ ನಾಯಕ ಎನ್ನಿಸಿಕೊಂಡು ಬರಲೇಬೇಕು. ಮೊನ್ನಿನ ಬಂಗ್ಲಾದೇಶದ ಕಟುಸಮಯದಲ್ಲಿ ಅಲ್ಲಿಗೆ ಹೋಗಬೇಕೆನ್ನುತ್ತಿದ್ದರಾದರೂ ಬಹುಶಃ ಇಳಿವಯಸ್ಸಿನ ಅರಿವು ಮರವಿನಿಂದಾಗಿರಬೇಕು, ಹೋಗಲಿಲ್ಲ. ಸ್ಪೇನ್, ಇಂಡೋನೇಶಿಯಾದಲ್ಲಿ ಯುದ್ಧಗಳಾದಾಗ ತಮ್ಮ ಜೀವನವನ್ನೇ ಗಂಡಾಂತರಕ್ಕಿಟ್ಟ-ವರಂತೆ ಹೋಗಿದ್ದರು, ಅಲ್ಲಿಗೆ. ಡಿಗಾಲ್‌ರೊಡನೆ ಎರಡನೆ ಜಾಗತಿಕ ಮಹಾಯುದ್ಧ-ದಲ್ಲಿ ಫ್ರಾನ್ಸಿನ ಬಿಡುಗಡೆಗಾಗಿ ಹೋರಾಡಿದರು. ಈ ಎಲ್ಲ ಘಟನೆಗಳೇ ಕಾದಂಬರಿ ರೂಪದಲ್ಲಿ ಹೊರಬಿದ್ದಿವೆ. ಫ್ರಾನ್ಸ್ ಕ್ರೂರ ಜರ್ಮನರ ಕೈಯಿಂದ ಬಿಡುಗಡೆಯಾದ ನಂತರ ಮಾಲ್‌ರೊ ಕಾಂಬೋಡಿಯಾದಲ್ಲಿ ರಾಯಭಾರಿಯಾಗಿ ನಿಯಮಿಸಲ್ಪಟ್ಟರು. ಕಾಂಬೋಡಿಯಾದ ಮಂದಿರಗಳಲ್ಲಿದ್ದ ಮೂರ್ತಿಗಳ ಕಳ್ಳ ಸಾಗಾಣಿಕೆಯಲ್ಲಿ ಸಿಕ್ಕಿ ಹಾಕಿ ಕೈಸುಟ್ಟುಕೊಂಡುದನ್ನೇ ಕಾದಂಬರೀ ರೂಪದಲ್ಲಿ ಬರೆದಿದ್ದಾರೆ. ಈ ಕಾದಂ-ಬರಿಯ ಹೆಸರು 'ಲಾ ವ್ವಾ ರೋಮಾಲ' (ರಾಜಮಾರ್ಗ). ಸ್ಪೇನಿನ ಯುದ್ಧ ಕುರಿತು ಬರೆದ ಕಾದಂಬರಿಯೇ 'ಆಶೆ'. ಮಾಲ್‌ರೊ ನಿಜವಾಗಿ ನೋಡಿದರೆ ಅಂತಹ ಹೇಳಿ-ಕೊಳ್ಳುವಂತಹ ಕಾದಂಬರಿಕಾರರಲ್ಲ; ಆದರೆ ಇದ್ದದ್ದನ್ನು ಇದ್ದಂತೆ ಹೇಳುವ ಕಲೆ-ಯನ್ನು ಬಹಳೇ ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ಎಂತೆಯೇ ಈಗಲೂ ಇನ್ನೂ ಮಾಲ್‌ರೊ ಎಂದರೆ ಜನ ಮುಗಿಬೀಳುತ್ತಾರೆ.

ಇನ್ನೂ ಅನೇಕ ಚಿಕ್ಕ ಪುಟ್ಟ ಕಾದಂಬರಿಕಾರರಿದ್ದಾರೆ. ಮದ್ರಾಸಿನ ತಿರುವ-ಣ್ಣಿಯೂರಲ್ಲಿ ನೆಲೆಸಿರುವ ಜ ದಲೋಪರ ಪತ್ನಿ ಕೂಡ ಬರೆಯುತ್ತಿದ್ದಾರೆ. ಅವರ ಕಾದಂಬರಿಗೆ ಕೆಲ ಬಹುಮಾನಗಳೂ ಸಿಕ್ಕಿವೆ.

ಕೊನೆಯದಾಗಿ, ಪತ್ತೆದಾರಿ ಕಾದಂಬರಿ ಹಾಗೂ ಧಾರಾವಾಹಿ ಕಾದಂಬರಿ ಕುರಿತು ಹೇಳಬೇಕು. ಪತ್ತೆದಾರಿ ಕಾದಂಬರಿಗಳಿಗೆ ಸುಂದರ ಕಾದಂಬರಿಸಾಹಿತ್ಯ-ದಲ್ಲಿ ಸ್ಥಾನವಿಲ್ಲ. ಅದನ್ನು ವಿಂಗಡಿಸಿಟ್ಟಿದ್ದಾರೆ. ಕಪ್ಪು ಕಾದಂಬರಿ ಎಂದು ಕಪ್ಪರಿನ ಮೇಲೆ ಕಪ್ಪು ಬಣ್ಣ ಹಾಕಿರುತ್ತಾರೆ. ಇವನ್ನು ರೋಮಾ ಪೋಲಿಸರ್

ಎಂದು ಕರೆಯುವರು. 'ಓಡಿಫಿಕ್ ರೂ' ಮೊಟ್ಟಮೊದಲ ಪತ್ತೆದಾರಿ ಕಾದಂಬರಿ ಎಂದು ಪತ್ತೆದಾರಿ ಕಥೆಗಾರರ ಅಭಿಪ್ರಾಯ; ಆದರೆ ಉಳಿದವರು ಅದನ್ನು ಒಪ್ಪುವದಿಲ್ಲ. ಎಡ್ಗರ ಪೋ, ಕಾನನ್ ಡಾಯಲ್ ಮುಂತಾದ ಇಂಗ್ಲಿಷ್ ಲೇಖಕರಂತೆ ಫ್ರೆಂಚಿನಲ್ಲೂ ಇದ್ದಾರೆ, ಗೆಬೋರೋ, ಮೊರಿಸ್ ಲಬ್ಲಾಂ ಹಾಗೂ ಸಿಮೊನೊನ್. 'ಇನ್ಸ್‌ಪೆಕ್ಟರ್ ಮೇಗ್ರೆ' ಈ ಶಾಖೆಯಲ್ಲಿ ಸುಪ್ರಸಿದ್ಧವಾದುದು. ಇನ್ಸ್‌ಪೆಕ್ಟರ್ ಮೆಗ್ರೆ ಎಂಬ ಶ್ರೇಷ್ಠ ಪತ್ತೆದಾರನ ಕಥೆಗಳನ್ನು ಬರೆದವ ಸಿಮೊನೊನ್. ಡೊಸ್ತಾ-ವಸ್ಕಿಯ 'ಕ್ರೈಮ್ ಆ್ಯಂಡ್ ಪನಿಶ್‌ಮೆಂಟ್' ಸಹ ಒಂದು ರೀತಿಯ ಪತ್ತೇದಾರಿ ಕಾದಂಬರಿ ಎಂದು ಹೇಳಬಹುದು. ಆದರೆ ಅದರಲ್ಲಿ ಕೊಲೆಗಾರನ ಮಾನಸಿಕ ಹೋರಾಟದ ಚಿತ್ರಕ್ಕೆ ಪ್ರಾಧಾನ್ಯವಿದೆಯೇ ವಿನಃ ಪತ್ತೇದಾರನಿಗಲ್ಲ.

ಭಾರತದಲ್ಲಿಯಂತೆ ಫ್ರಾನ್ಸಿನಲ್ಲಿಯೂ ಧಾರಾವಾಹಿ ಕಾದಂಬರಿ ಪ್ರಸಿದ್ಧ-ವಾಗುತ್ತಿವೆ. ಇವನ್ನು ರೋಮಾ ಫುಲೆತನ್ ಎಂದು ಕರೆಯುವರು. ಬಾಲ್ಜಾಕನ ಕಾದಂಬರಿಗಳನ್ನು ಧಾರಾವಾಹಿ ಎಂದು ಕರೆಯುವರು. ಅಲ್ಲಿ ಕಥೆ ಒಂದರಿಂದೊಂದು ಕಾದಂಬರಿಗೆ ಹಬ್ಬಿಕೊಂಡಿದೆ.

ಇತ್ತೀಚಿಗೆ ಕೆಲ ಒಳ್ಳೆ ಕಾದಂಬರಿಗಳನ್ನು ಚಲನಚಿತ್ರಕ್ಕೂ ಇಳಿಸಿದ್ದಾರೆ. 'ವೈನಿಸ್‌ನಲ್ಲಿ ಮೃತ್ಯು' ಎಂಬ ಜರ್ಮನ್ ಕಾದಂಬರಿಯು ಫ್ರೆಂಚ್ ಅನುವಾದದಲ್ಲಿ ವಾತಾವರಣ ಉಸಿರುಗಟ್ಟಿಸುವಂತಹದು. ಸ್ವಲಿಂಗರತಿಯ ದುರಂತ ಚಿತ್ರಣದ ಇನ್ನೊಂದು ಫ್ರೆಂಚ್ ಕಾದಂಬರಿ 'ಪೋಲಿನಾ ೧೮೮೦' ಲೇಖಕ-ಜಾ ಜೂವ್ಹ' ಇದರಲ್ಲಿ ಸಹ ಬಿಗಿ ವಾತಾವರಣ. ನವ ತರುಣಿಯೊಬ್ಬಳು ತಂದೆಯ, ಅಣ್ಣನ ಕಟ್ಟುನಿಟ್ಟಿನ ಜೀವನದಿಂದ ಹೊರಬಿದ್ದು ಸ್ವೇಚ್ಛೆಯಾಗಿ ಜೀವಿಸಲು ಮಠ ಬಾರದೇ ನನ್ ಆಗುವಳು. ಆದರೆ ಅವಳ ಸೌಂದರ್ಯವೇ ಅವಳಿಗೆ ಮುಳುವಾಗುವದು. ಉಳಿದ ಸಂನ್ಯಾಸಿನಿಯರು ಅವಳನ್ನು ಪ್ರೀತಿಸುವರು. ಸಿಟ್ಟಿಗೆದ್ದ ಆಶ್ರಮದ ಮುಖ್ಯಸ್ಥಳು ಅವಳನ್ನು ಹೊರದಬ್ಬುವಳು. ಆಶ್ರಮದಿಂದ ಬೇರೆ ಊರಲ್ಲಿ ಮನೆ ಹಿಡಿದು ಒಬ್ಬಳೇ ಇರುವಾಗ ತನ್ನ ಪ್ರಿಯತಮನನ್ನು ಕರೆಸಿಕೊಳ್ಳುವಳು. ಆದರೆ ಅವನೊಡನೆ ಸ್ವೇಚ್ಛೆಯಲ್ಲಿ ಕೆಲ ದಿನ ಕಳೆಯುವವರಲ್ಲಿ ಏನೋ ಒಂದು ಅತೃಪ್ತಿ ತಲೆದೋರಿ ಅವನನ್ನು ಕೊಂದು ಉಳಿದ ದಿನಗಳನ್ನು ಸೆರೆಮನೆಯಲ್ಲಿ, ಹೀನಸ್ಥಿತಿಯಲ್ಲಿ ಕಳೆಯುವಳು. ಈ ಕಾದಂಬರಿಗಳ ಮುಖ್ಯ ವಿಷಯಕ್ಕೆ ಏನೂ ಧಕ್ಕೆ ಬಾರದಂತೆ ಚಿತ್ರಪಟ ತಯಾರಾಗಿದ್ದರೂ ಇಂದಿನ ಗಲ್ಲಾ ಪೆಟ್ಟಿಗೆ ಬೇಡುವಂತೆ ಅನವಶ್ಯಕವೆನಿಸಿದ್ದರೂ ಅಲ್ಲಲ್ಲಿ ಈಗಿನ ಲೈಂಗಿಕ ದೃಶ್ಯಗಳನ್ನು ಸಹ ಸೇರಿಸಿ ಶೀಲ-ವಂತರಿಗೆ ನೋಡಲು ಸ್ವಲ್ಪ ಜಿಗುಪ್ಸೆ ಬರುವಂತೆ ಮಾಡಿದ್ದಾರೆ. ಆದರೂ 'ಪೋಲಿನಾ ೧೮೮೦' – ಚಿತ್ರ ಬಂದರೆ ನೋಡಬಹುದು. ಇದರಿಂದ ೧೯ ನೇ ಶತಕದ ಒಂದು ಕಾದಂಬರಿಯ ಪರಿಚಯವಾದರೂ ನಮ್ಮ ಜನರಿಗೆ ಆಗುವದು.

ಇದುವರೆಗೆ ಹೇಳಿದ್ದೆಲ್ಲ ಶುದ್ಧ ಫ್ರೆಂಚ್ ಭಾಷೆಯಲ್ಲಿಯ ಸಾಹಿತ್ಯದ ಕುರಿತಾಯಿತು. ಅದಲ್ಲದೆ 'ಅಲ್ಸಾಸ್' ಮತ್ತು 'ಬಾಸ್ಕ್' ಎಂಬೆರಡು ಪ್ರದೇಶಗಳಲ್ಲಿಯ ಫ್ರೆಂಚ್ ತುಸು ಬೇರೆಯೇ ಆಗಿದ್ದು ಅವು ಪ್ರತ್ಯೇಕ ಸಾಹಿತ್ಯವನ್ನೇ ಹೊಂದಿವೆ. ಮಧ್ಯಕ್ಕಿದೆ ಅಲ್ಸಾಸ್. ಬಾಸ್ಕ ಫ್ರಾನ್ಸ್ ಹಾಗೂ ಸ್ಪೇನಿನ ಗಡಿಗಳ ಮಧ್ಯದಲ್ಲಿದೆ. ಹೀಗಾಗಿ ಇಲ್ಲಿಯ ಫ್ರೆಂಚಿನ ಮೇಲೆ ನೆರೆಯ ಭಾಷೆಗಳ ಪ್ರಭಾವ ಗಾಢವಾಗಿ ಅದಕ್ಕೆ ಬೇರೆ ಸ್ವರೂಪವೇ ಪ್ರಾಪ್ತವಾಗಿದೆ. ಅದಕ್ಕೆಂದೇ ಅದನ್ನು ಬೇರೆಯಾಗಿ ಹೇಳುತ್ತಾರೆ. ಅಲ್ಲದೆ ಗ್ವಾಡ್‌ಲೂಪ್, ಮಡಗಾಸ್ಕರ್, ಅಲ್ಜೀರಿಯ ಮುಂತಾದ ಕಡೆಗೆಲ್ಲ ೧೭-೧೯ ನೇ ಶತಕದಲ್ಲಿ ಫ್ರೆಂಚ್ ಸಾಮ್ರಾಜ್ಯ ಹಬ್ಬಿತ್ತು. ಅಲ್ಲಿ ಸಹ ಅನೇಕ ಫ್ರೆಂಚ್ ಲೇಖಕರು ಆಗಿಹೋದರು. ಇವರೆಲ್ಲರ ವಿಷಯ ಹೇಳಬೇಕೆಂದರೆ ಬಹುಶಃ ಈ ಲೇಖನದ ಪರಿಮಿತ ವಿಸ್ತಾರದಲ್ಲಿ ಸಾಧ್ಯವಾಗಲಿಕ್ಕಿಲ್ಲ.

(ಈ ಲೇಖನ ಬರೆಯಲು ನನ್ನ ಪತಿ ಪಿಯರ್ರ ಸಿಲ್ವ ಅವರು ಬಹಳೇ ಸಹಕಾರ ಒದಗಿಸಿದರು. ಅವರಿಗೆ ನನ್ನ ಕೃತಜ್ಞತೆಗಳು.)

ಫ್ರೆಂಚ್ ಶಬ್ದಗಳ ಕನ್ನಡ ರೂಪಾಂತರಗಳನ್ನು ಸಾಧ್ಯವಾದಷ್ಟು ಕೊಟ್ಟಿದ್ದೇನೆ. ಹೆಸರುಗಳನ್ನು ಫ್ರೆಂಚನಲ್ಲಿ ಹೇಗೆ ಉಚ್ಚರಿಸುತ್ತಾರೋ ಹಾಗೆ ಬರೆದಿದ್ದೇನೆ ಫ್ರೆಂಚ್ ಭಾಷೆ ಬಹು ಬೆಡಗಿನ ನಾಜೂಕಿನ ಭಾಷೆ, ಕಿವಿಗೆ ಕರ್ಕಶವೆನಿಸುವ ವ್ಯಂಜನಗಳನ್ನು ಬಿಟ್ಟು ಸಂಗೀತಮಯವಾದ ಸ್ವರಗಳನ್ನು ಮಾತ್ರ ಉಚ್ಚರಿಸುತ್ತಾರೆ. Louis ಎಂದು ಬರೆದು ಲುಯಿ ಎನ್ನುವರು; filles ಎಂದು ಬರೆದು ಫಿಲ್ಸ್ ಎನ್ನದೇ ಫೀಯು ಎನ್ನುವರು. ದಯವಿಟ್ಟು ಓದುಗರಿದನ್ನು ಗಮನಿಸಬೇಕು.

ಇಟಾಲಿಯನ್ ಕಾದಂಬರಿ

ಮೂಲ : **ಪ್ರೊ. ಎಸ್. ಬಿ. ಕುಲಕರ್ಣಿ**
ಅನುವಾದ : **ಎಚ್. ಎಸ್. ಪ್ಯಾಟಿ**

"ರೊಮ್ಯಾಂಝೊ" ಇದು 'ಕಾದಂಬರಿ' ಎಂಬ ಅರ್ಥಕೊಡುವ, ಫ್ರೆಂಚ್ ಭಾಷೆಯ ರೋಮ ಎಂಬ ಪದಕ್ಕೆ ಸರಿಹೋಲುವ ಶಬ್ದ. ಇಟಾಲಿಯನ್ ಕಾದಂಬರಿಗಳು ಒಂದು ಬೃಹದ್ಗ್ರಂಥ ರಚನೆಗೆ ವಸ್ತುವಾಗಬಲ್ಲವು. ಆದರೆ ನಾವಿಲ್ಲಿ ಇಟಾಲಿಯನ್ ಕಾದಂಬರಿಯ ಹುಟ್ಟು, ಒಲವುಗಳು, ಮೂಲಪುರುಷರು ಹಾಗೂ ವಿಷಯದ ಐತಿಹಾಸಿಕ ಪರಾಮರ್ಶೆ ಈ ಅಂಶಗಳನ್ನು ಮಾತ್ರ ಪರಿಶೀಲಿಸೋಣ.

ಹುಟ್ಟು : ಮಹಾಕಾವ್ಯ ಮತ್ತು ಭಾವ ಕಾವ್ಯಗಳ ಬೇರುಗಳಿಗಿಂತ ಕಾದಂಬರಿ ರೂಪದ ಗದ್ಯದ ಬೇರುಗಳು ಭಿನ್ನವಾಗಿರುತ್ತವೆ. ಈ ಗದ್ಯವು ವಿಷಯಕ್ಕೆ ಕಟ್ಟು-ನಿಟ್ಟಾಗಿ ಸೀಮಿತವಾಗಿರುವದು ಮಾತ್ರವಲ್ಲದೆ ಕಲ್ಪನಾಲೋಕದ ಮೂಲ ಅಂಶ-ಗಳನ್ನು ವಿವರಿಸುತ್ತದೆ ಎಂಬ ಕಾರಣಕ್ಕಾಗಿ ಅಷ್ಟೇ ಅಲ್ಲ, ತರ್ಕವನ್ನೂ ಮೀರಿ ವಸ್ತುವಿನ ನೈಜ ಕಾವ್ಯಾತ್ಮಕ ಸೃಷ್ಟಿಗೆ ಅವಕಾಶ ಮಾಡಿಕೊಡುತ್ತದೆ ಎಂಬ ಕಾರಣಕ್ಕಾಗಿ ಅದು ಸ್ವಾಗತಾರ್ಹವಾಗಿದೆ. ಆಧುನಿಕ ಸಾಹಿತ್ಯದಲ್ಲಿ ಕೂಡ ಕಾದಂಬರಿಯ ರೂಪವು ಬದುಕಿಕೊಂಡು ಬಂದಿದೆ.

ಇಟಾಲಿಯನ್ ಕಾದಂಬರಿಯ ವಸ್ತುವು ಮೊದಲು ೧೨ ನೆಯ ಶತಮಾನದ ಮಹಾಕಾವ್ಯ ಮತ್ತು ಲಾವಣಿಗಳ ವಸ್ತುವಾಗಿತ್ತು. ಕಾವ್ಯದಲ್ಲಿ ನೀತಿ ಕಥೆಗಳೂ ಇದೇ ಪಾತ್ರವನ್ನು ನಿರ್ವಹಿಸುತ್ತಿದ್ದವು. ವಸ್ತುವಿನ ಮೂಲವು ಈ ಗದ್ಯದ ವೈಶಿಷ್ಟ್ಯವಾಗಿದ್ದಿಲ್ಲ. ಶತಮಾನಗಳ ಘಟನೆಗಳು, ಸತ್ಯಸಂಗತಿಗಳನ್ನು ಯಥೋಪದಾಪ್ಯಂತ ಬರೆದಿಡಲಾಗಿತ್ತು. ಇಟಾಲಿಯನ್ ಕವಿಗಳು ಮತ್ತು ಲೇಖಕರು ಪ್ರಾಂತಗಳ ಜನಪ್ರಿಯ ಆಡುಭಾಷೆಗಳನ್ನಲ್ಲದೆ ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆಗಳನ್ನು ಸಾಹಿತ್ಯ ರಚನೆಗೆ ಬಳಸುತ್ತಿದ್ದರು. ಫ್ರೆಂಚ್ ಭಾಷೆಯನ್ನು ಮಾತನಾಡುವದು, ಹೆಚ್ಚು ಸಾಮಾನ್ಯವೂ ಆನಂದದಾಯಕವೂ ಆಗಿದ್ದಿತೆಂದು ಬ್ರುನೆಟಿ ಲೊಟ್ಬಿನಿ ಬರೆದಿದ್ದಾನೆ. ಜನಸಾಮಾನ್ಯರಿಗೆ ತಿಳಿವಳಿಕೆಯನ್ನು ಉಂಟು ಮಾಡಲು ಜನ-ರಾಡುವ ಮಾತುಗಳಲ್ಲೇ ಸಂಗೀತ ನಾಟಕಗಳನ್ನು ರಚಿಸಬೇಕಾಗಿತ್ತು.

ಪುಸ್ತಕಗಳನ್ನು ಮತ್ತು ಕಥೆಗಳನ್ನು ಆ ಕಾಲಕ್ಕೆ ಜನಪ್ರಿಯವಾಗಿದ್ದ ಲ್ಯಾಟಿನ್ ಭಾಷೆಯಲ್ಲಿ ಬರೆಯಲಾಗುತ್ತಿತ್ತು. ಫ್ರಾ ಸಾಲಿಂಬೆನ್ ಎಂಬ ಲೇಖಕನು ಲ್ಯಾಟಿನ್ ಭಾಷೆಯಲ್ಲಿ ತನ್ನ "ಕೊನಾಕಾ" ಪುಸ್ತಕವನ್ನು ರಚಿಸಿದನು. ಮಧ್ಯ

ಯುಗದ ಕಥೆಗಳು ಮತ್ತು ಆಖ್ಯಾಯಿಕೆಗಳನ್ನು ಸಮಕಾಲೀನ ಸಂಬಂಧ ಮತ್ತು ಸ್ಥಾನಿಕ ಹಿನ್ನೆಲೆ ಸಂದರ್ಭಗಳನ್ನು ಉಪಯೋಗಿಸಿಕೊಂಡು ಉಪದೇಶಾತ್ಮಕ ರೀತಿಯಲ್ಲಿ ರಚಿಸಲಾಗುತ್ತಿತ್ತು.

ಕಲ್ಪನಾಶಕ್ತಿಯಿಂದ ಪುನಾಸೃಷ್ಟಿಸಿದ ವಾಸ್ತವತೆಯ ಅಥವಾ ಅರೆಸತ್ಯ ಇಲ್ಲವೆ ಕಾಲ್ಪನಿಕ ಘಟನೆಗಳ ವಿವರ ಕಥನವೇ ಕಾದಂಬರಿಯ ತಿರುಳು; ಓದುಗನ ಕುತೂಹಲವನ್ನು ಕೆರಳಿಸುವಂತೆ ಈ ಘಟನೆಗಳನ್ನು ಪರಿಣಾಮಕಾರಿಯಾಗಿ ವಿವರಿಸುವದೇ ಮುಖ್ಯ ಉದ್ದೇಶ. ಕಾದಂಬರಿ ಎಂದರೆ ಅದೊಂದು ವರ್ಣಚಿತ್ರವಿದ್ದಂತೆ. ನಿತ್ಯದ ರೂಢಿಯ ದೃಶ್ಯಗಳನ್ನು ಮೊದಲು ಮಾಡಿಕೊಂಡು ಸಾಮಾಜಿಕ ಸಂದರ್ಭಗಳ ದೃಶ್ಯಗಳವರೆಗೆ ಮಾನವ ಜೀವನದ ವಿವಿಧ ಮುಖಗಳನ್ನು ಕಾದಂಬರಿಯು ಚಿತ್ರಿಸುತ್ತದೆ. ಕಥೆಯ ಮುಖ್ಯ ವಿಷಯವು ಆಕರ್ಷಕವಾಗುವಂತೆ ಹಲವಾರು ಪ್ರಸಂಗಗಳನ್ನು ಸಮರ್ಪಕ ರೀತಿಯಲ್ಲಿ ಜೋಡಿಸಿದ ಅನುಪಮ ಕೃತಿಯೇ ಕಾದಂಬರಿ.

ಕಾದಂಬರಿಯು ಮಧ್ಯಯುಗದಲ್ಲಿ ಹುಟ್ಟಿಕೊಂಡಿತೆಂಬುದನ್ನು ರೊಮ್ಯಾಂಝೊ ಎಂಬ ಪದವು ಸೂಚಿಸುತ್ತದೆ. ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯಗಳಲ್ಲಿ ಆಧುನಿಕ ಲ್ಯಾಟಿನ್ ಭಾಷೆಯಲ್ಲಿ ಕಾದಂಬರಿಗಳನ್ನು ರಚಿಸಿದ ಉದಾಹರಣೆಗಳು ಇವೆ. ಲೊಂಗೆ ಸೊಜಿಸ್ಟಾನ್ ರಚಿಸಿದ "ಡೆಫ್ನೊ" ಮತ್ತು "ಕ್ಲೊ" ಅವರ ಹಕ್ಕುಗಾಡಿನ ಪ್ರಣಯವ್ಯವಹಾರಗಳ ಕಥನವು ಇಂಥ ಒಂದು ಉದಾಹರಣೆ. ಆದರೂ ಕಾದಂಬರಿಗಳಲ್ಲಿ ಸಾಹಸದ ಭೂಮಿಕೆಯು ಹೆಚ್ಚು ಮಹತ್ವ ಪಡೆಯಲಾರಂಭಿಸಿದ್ದು ೧೭ ನೆಯ ಶತಮಾನದ ನಂತರವೇ. ಅದರಲ್ಲೂ ಮುಖ್ಯವಾಗಿ ಫ್ರಾನ್ಸದಲ್ಲಿ ಈ ಬಗೆಯ ಕಾದಂಬರಿಗಳ ರಚನೆ ನಡೆಯಿತು. ಇಟಲಿಯಲ್ಲಿ ೧೭ ನೆಯ ಶತಮಾನದ ಮಧ್ಯದಲ್ಲಿ "ರೌಂಡ ಟೇಬಲ್" ಮತ್ತು "ತಮೋಲಾ ಕೊಟಂಡಾ" ಮೊದಲಾದ ಕೃತಿಗಳು ರಚಿಸಲ್ಪಟ್ಟವು. ಗುಪ್ತನಾಮದಿಂದ ಈ ಕೃತಿಗಳನ್ನು ರಚಿಸಲಾಯಿತು. ಕಾದಂಬರಿಯ ವಿವಿಧ ಶೈಲಿಗಳನ್ನು ಸೂಚಿಸುವ ಮಹತ್ವದ ಕೃತಿಗಳನ್ನು ೧೭ ನೆಯ ಶತಮಾನದಲ್ಲಿ ಇಟಲಿಯ ಕೆಲವೇ ಗ್ರಂಥಕರ್ತರು ರಚಿಸಿದ್ದರು.

ಪ್ರಕೃತಿ ಸಹಜವಾದ ಸಾಧ್ಯತೆಗಳನ್ನು ಯಾರೂ ಮೀರಿ ಹೋಗಬಾರದೆಂಬ ಸದ್ಗುಣವನ್ನು ಉಪದೇಶಾತ್ಮಕ ರೀತಿಯಲ್ಲಿ ವಿವರಿಸಿದ "ಫೆವೋಲ್-ಡಿ-ಎಸೊಪೋಲ್" ಇಂಥ ಕೃತಿಗಳಲ್ಲೊಂದು, ಆಲ್ಬರ್ಟನೊಡ ಬ್ರಾಸಿಯಾ ಅವರ "ಡಿ ಎಮೋರ್ ಎಚ್ ಡೈಲೆಕ್ಟೋನ್ ಡಿ", "ಡಿ ಆರ್ಟ ಲೊಕೆಂಡಿ ಎಚ್ ಟ್ಯಾಸೆಂಡಿ", "ಮೈಬರ ಕನ್ಸೊಲೇಶನ್ಸ ಎಚ್ ಕೊನ್ಸಿಲ್" ಇವು ಇಂಥ ಇನ್ನಿತರ ಕೃತಿಗಳು.

"ಲಿ ಸ್ಟೋನ್ ಡಿ ಪಾವ್‌ಲೊ ಒರೊಸಿ", "ಲಾ ಆರ್ಟ ಡೆಲ್ಲಾಗೆರಾ" ಮೊದಲಾದ ಕೃತಿಗಳನ್ನು ಬೊನೊ ಗ್ಯಾಂಬಿಯೊನಿ ಜನಪ್ರಿಯಗೊಳಿಸಿದ. ಜಾ ಕೊಪ್ಪೊ ಡಿ ಜೆನೆವೊಂಟೆಸ್ ಎಂಬ ಲೇಖಕನ ಗ್ರಂಥಗಳನ್ನು ಭಾಷಾಂತರಿಸಿದ.

ವೈರಾಗ್ಯವನ್ನು ಬೋಧಿಸುವ ಬ್ರಾಂಚಿಯಾನೊ ಅವರ ಕೃತಿಗಳೂ ಪ್ರಕಟವಾದವು. ಸೆರ್ ಬ್ರುನೆಟ್ಟೊ ಎಂಬ ಗ್ರಂಥಕರ್ತನು ಪ್ರಾಚೀನ ಕಾಲದ ಋಷಿ ಪುಂಗವರ ಬಗೆಗಿನ ಸಂಗತಿಗಳನ್ನು "ಫಿಯೋರ ಡಿ ಫಿಲೊಸುಫಿ ಡಿ ಮೊಲ್ಟಿ ಸಾವಿ" ಎಂಬ ಪುಸ್ತಕದಲ್ಲಿ ವಿವರಿಸಿದ್ದಾನೆ.

ಕಾದಂಬರಿಯ ವಿವಿಧ ಶೈಲಿಗಳ ಚಕ್ರಗಳು ಎಂಬ ಗ್ರಂಥಮಾಲೆಯನ್ನು ರಚಿಸಲಾಯಿತು. ಅದರ ವಿವರ ಕೆಳಗಿನಂತಿದೆ:

ಶಾಸ್ತ್ರೀಯ ಚಕ್ರ: "ಇಲ್ ರೊಮ್ಯಾಂಝೊ ಡಿ ಅಲೆಸ್ಸಾಂಡ್ರೊ ಇದು ಸಾಹಸಜೀವಿಯಾದ ಮ್ಯಾಸಿಡೋನ್‌ನ ಜರ್ಮನಿ, ಇಂಗ್ಲಂಡ, ಹಾಲಂಡ, ಸ್ಕಾಂಡಿನೇವಿಯ, ಸ್ಪೇನ್ ಮತ್ತು ಇಟಲಿಗಳಲ್ಲಿಯ ಜೀವನವನ್ನು ವಿವರಿಸುತ್ತದೆ. ಇನೆಕ್, ಸಿಸೇರ್, ಸಿಪಿಯೋನ್ ಮೊದಲಾದವರು ಈ ಬಗೆಯ ಇತರ ಕಥಾ ನಾಯಕರು. ಹಳೆಯ ಕಥೆಗಳಿಂದ ಈ ಪಾತ್ರಗಳನ್ನಾಯ್ದುಕೊಳ್ಳಲಾಗಿದೆ. ಯೋಧನೆಂದು ವರ್ಣಿಸಲ್ಪಟ್ಟ "ಅಪಿಯಿರೊ" ಮಾನವೀಯ ಜ್ಞಾನದ ಪ್ರತಿಯೊಂದು ವಿಷಯವನ್ನೂ ತಿಳಿದುಕೊಳ್ಳುವ ಹಂಬಲವುಳ್ಳವನಾಗಿದ್ದನು.

ಈ ಎಲ್ಲ ಕೃತಿಗಳು ಗದ್ಯರೂಪದಲ್ಲಿದ್ದು, ಮನಾಕರ್ಷಕ ದೇಶಗಳು, ಕನಸುಗಳು ಮತ್ತು ಮಾಯಾಜಾಲಗಳ ವರ್ಣನೆಗಳಿಂದ ಕೂಡಿವೆ.

"ಲಾ ಹಿಸ್ಟಾರಿಯಾ ಡಿಸ್ಟ್ರಕ್ಸನಿಸ್ ಟ್ರೊಯಾ" ಎಂಬ ಲ್ಯಾಟಿನ್ ಭಾಷೆಯ ಕಾದಂಬರಿಯನ್ನು ಗುಯಿಲೊ ಡಿ ಕೊಲೊನ್ ರಚಿಸಿದ. 'ಇಲ್ ಫಿಲೊ ಟ್ಯಾಟೊ' ಎಂಬುವನ್ನು ಬೊಕ್ಕಾಸಿಯೊ ರಚಿಸಿದ. "ಕಲೆಕ್ಶನ್ ಆಫ್ ಸ್ಟೋರೀಜ ಆಫ್ ಟ್ರೊಯಾ" ಎಂಬುದನ್ನು ರಾವೋಲ್ ಲಾ ಫೆರೊ ರಚಿಸಿದ. ಈ ಲೇಖಕ ದಕ್ಷಿಣ ಇಟಲಿಯ ಸಿಸಿಲಿ ನಡುಗಡ್ಡೆಯ ನಿವಾಸಿ ಎಂದು ಗುರುತಿಸಲಾಗಿದೆ. ಟ್ರಾಯ್ ಪಟ್ಟಣದಿಂದ ಹೊರಟ ಬಳಿಕ ಯುಲಿಸಿಸ್ ಅಗೆಮನೋನ್ ಮತ್ತು ಎನೆಕಾ ಈ ಪಾತ್ರಗಳ ಸಾಹಸಗಳನ್ನು ಈತನು ಬರೆದಿದ್ದಾನೆ.

ಇದಲ್ಲದೆ ಈ ಶಾಸ್ತ್ರೀಯ ಚಕ್ರದಲ್ಲಿ "ದಿ ಸ್ಟೋರೀಜ ಆಫ್ ಥೀಬ, ಸೀಸರ ಮತ್ತು ಅಲೆಸ್ಸಾಂಡ್ರೊ ಬಗೆಗಿನ ಸತ್ಯಸಂಗತಿಗಳು" ಎಂಬುದು ಪದ್ಯ ಮತ್ತು ಗದ್ಯಗಳೆರಡಲ್ಲಿಯೂ ರಚಿಸಲ್ಪಟ್ಟಿದೆ.

ಎರಡನೆಯ ಚಕ್ರವು ಸೈಕ್ಲೊ ಕೆರೊಲಿಂಗಿಯೊ (ಕೆರೊಲಿಂಗಿಯನ್ ಸೈಕಲ್) ಎಂದು ವರ್ಣಿಸಲ್ಪಟ್ಟಿದ್ದು, ಗದ್ಯ ಮತ್ತು ಪದ್ಯಗಳೆರಡಲ್ಲಿಯೂ ಇವೆ. (ದಿ. ಸ್ಟೋರೀಜ ಆಫ್ ಏನ್ಶಿಯೆಂಟ್ ಕೆವ್ಯಾಲಿಯರ್ಸ್).

ನಂತರ ಬ್ರಿಟೋನ್ ಚಕ್ರ ಎಂಬುದಿದೆ. ಟ್ರಿಸ್ಟಾನೊ ರಿಕಾರ್ಡಿಯಾನೊ, ತವೋಲಾ ರೋಟಂಡಾ ಮೊದಲಾದವು ಈ ಚಕ್ರದಲ್ಲಿ ಬರುವ ಗ್ರಂಥಗಳು. ಕೊನೆಯದಾಗಿ ಧಾರ್ಮಿಕ ಚಕ್ರ. ಹನ್ನೆರಡು ನೀತಿಕಥೆಗಳು, ಏಳು ಜನ ಸಾಧುಗಳ ಕಥೆ, ದಿ ಟ್ರೇಝುರ ಮೊದಲಾದವು ಈ ಚಕ್ರದಲ್ಲಿ ಬರುತ್ತವೆ.

೧೪ ನೆಯ ಶತಮಾನದಲ್ಲಿ ಇಟಲಿಯಲ್ಲಿ ಗಿಯೊವಾಸೊ ಬೊಕ್ಯಾಸಿಯೊ (೧೩೧೩ ರಿಂದ ೧೩೭೫) ಉಚ್ಚ್ರಾಯಸ್ಥಿತಿಯ ಕಾದಂಬರಿಕಾರನಾಗಿದ್ದ. ಈತನು ಕಥೆಗಳನ್ನು ಚೆನ್ನಾಗಿ ಹೇಳಬಲ್ಲನೆಂದು ಪ್ರಸಿದ್ಧನಾಗಿದ್ದ. ಆತನು ತನ್ನ "ಫಿಲೊ-ಕೊಲಾ" ಕೃತಿಯಲ್ಲಿ ಫ್ಲೋರಿಯಾ ಮತ್ತು ಬಿಯಾನ್ಸಿಫೋರ ಇವರ ಆಖ್ಯಾಯಿಕೆ-ಯನ್ನು, "ಫಿಯಾಮೆಲ್ಟಾ"ದಲ್ಲಿ ಮೇರಿಯಾ ಡಿ ಆ್ಯಕ್ವಿನೊ ಇವರ ಬಗೆಗೆ ತನ್ನ ದುರ್ದೈವಿ ಪ್ರೇಮವ್ಯವಹಾರವನ್ನು ಚಿತ್ರಿಸಿದ್ದಾನೆ.

ಜಾಕೊಪೊ ಸೊನ್ನರ್ಝಾರೊ (೧೪೫೮ ರಿಂದ ೧೫೩೦) ಮತ್ತು ಗುಯಿಲಿಯೊ ಸಿಸೇರ್ ಕ್ರೋಸ್ (೧೫೫೦ ರಿಂದ ೧೬೦೯) ಇವರೂ ಇಟಾಲಿಯನ್ ಕಾದಂ-ಬರಿಯನ್ನು ಬೆಳೆಸಿದವರು.

ಹದಿನಾರು ಮತ್ತು ೧೭ ನೇ ಶತಮಾನಗಳಲ್ಲಿ ಇಂಗ್ಲಂಡ, ಸ್ಪೇನ ಮತ್ತು ಫ್ರಾನ್ಸಗಳಲ್ಲಿ ಕಾದಂಬರಿಯು ಕಾವ್ಯವನ್ನು ಹಿಂದೆಹಾಕಿ ಉಚ್ಚ್ರಾಯಸ್ಥಿತಿಗೇರತೊಡ-ಗಿತು. ಹದಿನೇಳನೆಯ ಶತಮಾನದಲ್ಲಂತೂ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಸಾಹಿತ್ಯವು ಪ್ರಥಮ ಸ್ಥಾನಪಡೆದು ಅಪೂರ್ವ ಯಶಸ್ಸನ್ನು ಸಂಪಾದಿಸಿತು.

ಕಾದಂಬರಿ ಸಾಹಿತ್ಯವನ್ನು ಕೆಳಗೆ ಕಾಣಿಸಿದ ಪ್ರಕಾರಗಳ ಆಧಾರದ ಮೇಲೆ ವರ್ಗೀಕರಿಸಬಹುದು :

(೧) ಐತಿಹಾಸಿಕ ಮತ್ತು ರಾಜಕೀಯ ಪ್ರಕಾರದ ಕಾದಂಬರಿ. ಈ ಪ್ರಕಾರದ ಕಾದಂಬರೀ ಪ್ರಕಾರವೂ ಉತ್ಸಾಹಪೂರಿತ ಕಾಲ್ಪನಿಕತಾವಾದದ ವಾತಾವರಣದಲ್ಲಿ ಆರಂಭವಾಯಿತು. ಅಂಶತಃ ಕಲ್ಪನಾಲೋಕದ ಹಾಗೂ ಇತಿಹಾಸದ ಯಾವದೊಂದು ನಿರ್ದಿಷ್ಟ ಅವಧಿಗೆ ಅಥವಾ ಐತಿಹಾಸಿಕ ವ್ಯಕ್ತಿಗಳಿಗೆ ಸಂಬಂಧಿಸಿದ ಸಂಗತಿಗಳ ವಿವರಣೆಯು ಈ ಪ್ರಕಾರದ ಮುಖ್ಯಾಂಶವಾಗಿದೆ. ಇಂಗ್ಲಂಡಿನಲ್ಲಿ ವಾಲ್ಟರ ಸ್ಕಾಟ್‌ನಂತೆ ಇಟಲಿಯಲ್ಲಿ ಅಲೆಗ್ಝಾಂಡ್ರೊ ಮ್ಯಾರಿಝಾನ್ನಿ ಈ ಪ್ರಕಾರದ ಕಾದಂಬರಿ ರಚಿಸಿದನು. ಗದ್ಯರೂಪದಲ್ಲಿ ನೈಜ ಮಹಾಕಾವ್ಯವನ್ನು ರಶಿಯನ್ ಕಾದಂಬರಿಕಾರ ಲಿಯೊ ಟಾಲ್‌ಸ್ಟಾಯ್‌ನ 'ವಾರ್ ಆ್ಯಂಡ ಪೀಸ'-ದಲ್ಲಿ ಕಾಣಬಹುದು. ಮ್ಯಾಂಝೊನಿಯ "ಪ್ರೊಮೆಸ್ಸಿ ಸ್ಪೋಸಿ" ಇಟಾಲಿಯನ್ ಭಾಷೆಯಲ್ಲಿ ಈ ಬಗೆಯ ಮಹಾಕೃತಿಯಾಗಿದೆ.

೨) ಮನಶ್ಶಾಸ್ತ್ರ ಸಂಬಂಧದ ಕಾದಂಬರಿ : ಮಾನವೀಯ ಭಾವನೆಗಳ ವರ್ಣನೆ ಹಾಗೂ ವಿಶ್ಲೇಷಣೆಯು ಈ ಕಾದಂಬರಿ ಪ್ರಕಾರದ ಮುಖ್ಯಾಂಶ. "ಲಾಸ್ಟ ಲೆಟರ್ಸ ಆಫ್ ಜಾಕೊಪೊ ಆರ್ಟಿಸ್ ಎಂಬ ತನ್ನ ಕೃತಿಯಲ್ಲಿ ಯುಗೊ ಫೊಸೊಲಾ ಎಂಬ ಕಾದಂಬರಿಕಾರನು ಈ ಬಗೆಯ ಕಾದಂಬರಿ ಪ್ರಕಾರವನ್ನು ರಚಿಸಿದ್ದಾನೆ. ಈತನು ಬಾಳಿದ ಅವಧಿ ೧೭೭೮ ರಿಂದ ೧೮೨೭. ಇತ್ತೀಚಿನ ಕಾಲದಲ್ಲಿ ಲುಯಿಗಿ ಪಿರಾಂಡೊಲೊ (೧೮೬೭–೧೯೩೬) ಎಂಬ ಕಾದಂಬರಿಕಾರನು "ಇಲ್ ಫು ಮ್ಯಾಟಿಯಾ ತಾಸ್ಕಲ್" ಎಂಬ ಪ್ರಕಾರದ ಕಾದಂಬರಿ ಬರೆದಿದ್ದಾನೆ.

೩) ಸಾಮಾಜಿಕ ಕಾದಂಬರಿಗಳು :– ಸಮಾಜವನ್ನು ಸಂಕಷ್ಟದಲ್ಲಿ ಸಿಲುಕಿಸುವ ಅನಿಷ್ಟಗಳನ್ನು ಈ ಕಾದಂಬರಿ ಪ್ರಕಾರವು ವಿವರಿಸುತ್ತದೆ. ಸಾಮಾಜಿಕ ಪ್ರಗತಿ ಸಾಧನೆಗೆ ನೆರವಾಗಬೇಕೆಂಬುದೇ ಈ ಬಗೆಯ ಕಾದಂಬರಿಗಳ ಉದ್ದೇಶ. ವಿಕ್ಟರ ಹ್ಯೂಗೋನ ಪ್ರಸಿದ್ಧ "ಲಾ ಮಿಸರೆಬಲ್ಸ" ಮತ್ತು ಮ್ಯಾಂಝೋನಿಯ "ಪ್ರೊಮೆಸ್ಸಿ ಸ್ಪೋಸಿ" ಎಂಬ ಕಾದಂಬರಿಗಳು ಅವರ ಕಾಲದ ಸಾಮಾಜಿಕ ಪರಿಸರಗಳ ದೃಶ್ಯಗಳನ್ನು ಹೊಂದಿವೆ.

೪) ವಾಸ್ತವವಾದದ ಕಾದಂಬರಿಗಳು ಈ ಬಗೆಯ ಕಾದಂಬರಿ ಪ್ರಕಾರದ ಹುಟ್ಟು ೧೯ನೇ ಶತಮಾನದ ವೈಜ್ಞಾನಿಕ ಪ್ರತ್ಯಕ್ಷ – ಪ್ರಮಾಣದಲ್ಲಿದೆ. ಈ ಕಾದಂಬರಿ ಪ್ರಕಾರವು ವಾಸ್ತವತೆಯನ್ನು ಪ್ರತಿಬಿಂಬಿಸುತ್ತದೆ. ಫ್ರೆಂಚ್ ಭಾಷೆಯಲ್ಲಿ ಬಾಲ್ಜಾಕ್ ಈ ಬಗೆಯ ಕಾದಂಬರಿಗಳನ್ನು ರಚಿಸಿದವನು. ಇಟಾಲಿಯನ್ ಸಾಹಿತ್ಯದಲ್ಲಿ ಗಿಯೊವನ್ನಿ ವರ್ಗಾ (೧೮೪೦–೧೯೨೨) ಇಂಥ ಕಾದಂಬರಿ ರಚಿಸಿದವರಲ್ಲಿ ಅಗ್ರಗಣ್ಯ.

೫) ಸ್ಥಾನಿಕ, ಕಾಲಮಾನ, ಪದ್ಧತಿ ಮತ್ತು ಸನ್ನಿವೇಶ ನಿರೂಪಕ ಕಾದಂಬರಿಗಳು : ಯಾವದೊಂದು ನಿರ್ದಿಷ್ಟ ಅವಧಿಗೆ ಸಂಬಂಧಿಸಿದ ಸನ್ನಿವೇಶ, ಪದ್ಧತಿ ಮೊದಲಾದವುಗಳನ್ನು ವರ್ಣಿಸುವ ಸ್ಥಳೀಯ ವಾತಾವರಣದ ಹಿನ್ನೆಲೆಯುಳ್ಳ ಕಾದಂಬರಿಪ್ರಕಾರ. ವರ್ಗಾ ಮತ್ತು ಗ್ರೇಝಿಯಾ ಡೆಲ್ಲೆಡಾ (೧೮೭೧–೧೯೩೬) ಅವರ ಕಾದಂಬರಿಗಳು ಈ ವರ್ಗದಲ್ಲಿ ಬರುತ್ತವೆ.

೬) ವಿಡಂಬನಾತ್ಮಕ ಕಾದಂಬರಿ : ವಿಡಂಬನೆಯಿಂದ ಮೊದಲ್ಗೊಂಡು ವ್ಯಂಗ್ಯನುಡಿ, ಕಟುಹಾಸ್ಯದ ವರೆಗೆ ಎಲ್ಲ ಬಗೆಯ ಹಾಸ್ಯ ಉಪಯೋಗಿಸುವ ಸಾಮರ್ಥ್ಯ ಲೇಖಕನಲ್ಲಿರುವದರಿಂದ ಇಂಥ ಕಾದಂಬರಿಗಳಿಂದ ಓದುಗರ ಮೇಲೆ ಆಶ್ಚರ್ಯಕರ ಪರಿಣಾಮಗಳುಂಟಾಗಬಹುದು. ಸ್ಪೇನದ ಪ್ರಸಿದ್ಧ "ಡಾನ್ ಕ್ವಿಗ್ಜೋಟ" ಗ್ರಂಥ ರಚಿಸಿದ ಸೆರಿವಾಂಟಿಸ್ (೧೫೪೭–೧೬೧೬) ಮತ್ತು "ಗಲಿವರ್ಸ ಟ್ರಾವೆಲ್ಸ" ರಚಿಸಿದ ಜೊನಾದನ್ ಸ್ವಿಫ್ಟ (೧೬೬೭–೧೭೪೫) ಇವರು ಇಂಥ ವಿಡಂಬನ ಸಾಹಿತ್ಯಕಾರರಾಗಿದ್ದು, ಅವರ ಕೃತಿಗಳು ಜಗತ್ಪ್ರಸಿದ್ಧ ಸಾಹಿತ್ಯವಾಗಿದೆ.

೭) ವೈಜ್ಞಾನಿಕ ಕಾದಂಬರಿಗಳು : ಈ ಕಾದಂಬರಿ ಪ್ರಕಾರವು ಹೊಸ ವೈಜ್ಞಾನಿಕ ವಿಚಾರಗಳ ಬಗೆಗೆ ಊಹೆ ಮತ್ತು ಅವುಗಳ ಬಗೆಗೆ ಪ್ರಗತಿ ಇವುಗಳನ್ನು ಆಧರಿಸಿರುತ್ತದೆ. ಈ ವೈಜ್ಞಾನಿಕ ವಿಚಾರಗಳು ಸತ್ಯಸಂಗತಿಗಳಾಗಿ ಪರಿಣಮಿಸಿದರೆ ಮಾನವ ಜೀವನವು ಹೇಗೆ ಭಿನ್ನವಾಗುವದೆಂಬುದನ್ನು ಇಂಥ ಕಾದಂಬರಿಗಳಲ್ಲಿಯ ಘಟನೆಗಳ ಮೂಲಕ ಆಕರ್ಷಕವಾಗಿ ಬಿಂಬಿಸಲಾಗಿರುತ್ತದೆ. ಚಂದ್ರಗ್ರಹಕ್ಕೆ ಮಾನವನ ಪ್ರಯಾಣವು ಕೆಲವು ಫ್ರೆಂಚ್ ಮತ್ತು ಇಂಗ್ಲಿಷ ಕಾದಂಬರಿಗಳ ಕಥಾವಸ್ತುವಾಗಿದ್ದಿತು.

ಸಾಹಸಪ್ರಧಾನ ಕಾದಂಬರಿಗಳು ಮತ್ತು ಪತ್ತೇದಾರಿ ಕಾದಂಬರಿಗಳು ಕೊನೆಯ ಎರಡು ಕಾದಂಬರಿ ಪ್ರಕಾರಗಳು. ಡೆನಿಯಲ್ ಡೆಫೊ (೧೬೬೦-೧೭೩೧)ನ "ರಾಬಿನ್‌ಸನ್ ಕ್ರೂಸೊ" ಪುಸ್ತಕದಂತೆ ಇಟಾಲಿಯನ್ ಸಾಹಿತ್ಯದಲ್ಲಿ ಎಮಿಲಿಯೊ ಸಾಲಗ್ಯಾರಿ (೧೮೬೨-೧೯೧೧) ರಚಿಸಿದ ಕಾದಂಬರಿಗಳು ಕೃತಿಯದೃಷ್ಟಿಯಿಂದ ಮಧ್ಯಮ ದರ್ಜೆಯವೆನಿಸಿದರೂ ಕಥಾನಾಯಕನ ಸಾಹಸವರ್ಣನೆಯ ದೃಷ್ಟಿಯಿಂದ ಜನಪ್ರಿಯವಾಗಿವೆ.

ರಹಸ್ಯಗರ್ಭಿತ ಸಮಸ್ಯೆಗಳಿಗೆ ಲೇಖಕನು ತನ್ನ ಕೌಶಲ್ಯದಿಂದ ಪರಿಹಾರ. ವನ್ನು ಕಂಡು ಹಿಡಿದಿರುವದು ಪತ್ತೇದಾರಿ ಕಾದಂಬರಿಗಳ ಮುಖ್ಯಲಕ್ಷಣ. ಮಾನಸಿಕ ಆಸಕ್ತಿಯನ್ನು ಕೆರಳಿಸುವ ಇಂಥ ಕಾದಂಬರಿಗಳನ್ನು ಫ್ರೆಂಚ ಹಾಗೂ ಇಂಗ್ಲಿಷ ಭಾಷೆಗಳಿಂದ ಭಾಷಾಂತರಿಸಲಾಗಿದೆ.

ಈ ಕಾದಂಬರಿ ಪ್ರಕಾರಗಳಲ್ಲದೆ ಪತ್ರರೂಪದಲ್ಲಿ ಕಥನಕಲೆಯ, ಅರ್ಥಾತ್ ಪಾತ್ರಗಳ ನಡುವೆ ಪತ್ರವ್ಯವಹಾರ ಮೂಲಕ ಕಥೆ ಬೆಳೆಸಿಕೊಂಡು ಹೋಗುವ ಕಾದಂಬರಿಗಳೂ ಇವೆ. ಫಾಸ್ಕೊಲೊ ರಚಿಸಿದ "ಜಾಕೊಪೊ ಒರ್ಟಿಸ್‌ನ ಕೊನೆಯ ಪತ್ರಗಳು" ಇದಕ್ಕೊಂದು ಉದಾಹರಣೆ.

ಇಟಾಲಿಯನ್ ಕಾದಂಬರಿಕಾರರಲ್ಲಿ ಕೆಳಗಿನವರು ಪ್ರಮುಖರಾಗಿದ್ದಾರೆ :

ಗಿಯೊವನ್ನಿ ಬೊಕ್ಯಾಸಿಯೊ, ಆ್ಯಂಡ್ರೀ ಮ್ಯಾಗ್ನಾಬೊಟ್ಟಿ (೧೩೭೦-೧೪೩೧), ಜಾಕೊ ಪೊಸೊನ್ನೆರುಝಾರೊ, ಯುಗೊ ಫಾಸ್ಕೊಲೊ, ಅಲೆಗ್ಝಾಂಡ್ರೊ ಮ್ಯಾಝೊನಿ; ಟೊಮಾಸ್ಸೊ ಗ್ರೋಸಿ (೧೭೯೦-೧೮೫೩), ಮ್ಯಾಸ್ಸಿಮೊ ಡಿ ಆ್ಯಜಾಗ್ಲಿಯೊ (೧೭೯೮-೧೮೬೬), ಫ್ರಾನ್ಸೆಸ್ಕೊ ಡೊಮೆನಿಕೊ ಗುರ್ರ್ಯಾಜಿ (೧೮೦೪-೧೮೭೩), ಲಿಸೇರ್ ಕ್ಯಾಂಟಿನ್ (೧೮೦೪-೧೮೯೫), ಗಿಯೊವನ್ನಿ ರಫಿನಿ (೧೮೦೭-೧೮೮೧), ಇಪ್ಪೊಲಿಟೊ ನೀರೊ (೧೮೩೧-೧೮೬೧), ಆ್ಯಂಟೋನ್ ಗುಲಿಯೊ ಬ್ಯಾರಿಲಿ (೧೮೩೬-೧೯೦೮) ಲುಯಿಗಿ ಕ್ಯಾಪೊಕಾನಾ (೧೮೩೯-೧೯೧೫) ಗಿಯೊವನ್ನಿ ವರ್ಗಾ, ಆ್ಯಂಟೊನಿಯೊ ಪೊಗರುಝಾರೊ ೧೮೪೨-೧೯೧೧) ಸಾಲ್ವತೋರ್ ಫಾಮಿಯಾ (೧೮೪೮-೧೯೧೮) ಎಮಿಲಿಯೊ ಡಿ. ಮಾರ್ಚಿ (೧೮೫೧-೧೯೦೧) ಗಿರೊಲಿಮಾ ರೊದೆಲ್ಲಾ (೧೮೫೧-೧೯೧೦), ಮ್ಯಾಟಿಲ್ಡ್ ಸೆರಾವೊ (೧೮೫೬-೧೯೨೧) ಗ್ಯಾಬ್ರಿಯೆಟ್ ಡಿ. ಅನಂಝಿಯೊ (೧೮೬೫-೧೯೨೪) ಫೆಡರಿಕೊಡಿ ರಾಬರ್ಟೊ (೧೮೬೬-೧೯೨೭), ಲುಯಿಗಿ ಪಿರಾಂಡೆಲೊ ಗ್ರೇಝಿಯಾ ಡೆಲೆಡಾ, ಆ್ಯಂಟೊನಿಯೊ ಬೆಲ್ಟ್ರಾಮೆಲ್ಲಿ (೧೮೭೯-೧೯೩೦).

ಮೇರಿನೊ ಮೊರೆಟ್ಟಿ (ಜ. ೧೮೮೫) ರಿಕಾರ್ಡೊ ಬ್ಯಾಚೆಲ್ಲಿ (ಜ. ೧೮೯೧) ಕೊರ್‍ರ್ಯಾಡೊ ಆಲ್ವಾರೊ (ಜ. ೧೮೯೫) ಅಂಬರ್ಟೊ ಫ್ರಾಂಚಿಂಟಾ ಇವರು ಸಮಕಾಲಿನ ಕಾದಂಬರಿಕಾರರು.

ಇಟಾಲಿಯನ್ ಸಾಹಿತ್ಯದಲ್ಲಿ ಕಾದಂಬರಿಯೊಂದಿಗೆ ಬೆಳೆದುಬಂದ ಇನ್ನೊಂದು ಸಾಹಿತ್ಯ ಪ್ರಕಾರವೆಂದರೆ ಲಾ ನೊವೆಲ್ಲಾ (ನವಲಾಕ್ಯಾಥಾ). ಕುತೂಹಲಪೂರಿತ ಸತ್ಯಸಂಗತಿಯೊಂದನ್ನು ಚಿತ್ತಾಕರ್ಷಕವಾಗಿ ಸ್ವಲ್ಪದರಲ್ಲಿ ವಿವರಿಸುವದೇ ಈ ಸಾಹಿತ್ಯಪ್ರಕಾರ. ಕಥೆಯ ಸಂಗತಿಯು ವಾಸ್ತವವಾದುದೆಂಬಂತಿರುವದಾದರೂ ಅದು ಸಂಪೂರ್ಣ ಕಲ್ಪನಾ ಸೃಷ್ಟಿ. ವಿವಿಧ ವಿಷಯಗಳನ್ನು ಆಕರ್ಷಕ ಶೈಲಿಯಲ್ಲಿ ವಿವರಿಸುವದು ಹಾಗೂ ಯಾವದೊಂದು ಘಟನೆಯ ಬಗೆಗೆ ಶಕ್ಯವಿದ್ದಷ್ಟು ಕಡಿಮೆ ವಿವರಗಳನ್ನು ವಿಶ್ಲೇಷಿಸುವದು ಈ ಲಾ ನೊವೆಲ್ಲಾ ಸಾಹಿತ್ಯಪ್ರಕಾರದ ಲಕ್ಷಣಗಳು. ಸೇಂಟ ಫ್ರಾನ್ಸಿಸ್ಕೊ, ಮ್ಯಾಸುಕಿಯೊ ಸಾಲೆರ್ನಿಟಾನೊ, ಮ್ಯಾಟ್ಟಿಯೊ ಬ್ಯಾಂಡೆಲೊ ಆ್ಯಗ್ನೊಲೊ ಫಿರೆಂಝೋಲಾ ಮೊದಲಾದವರು ಈ "ಲಾನೊವೆಲ್ಲಾ" ಸಾಹಿತ್ಯ ಪ್ರಕಾರದ ಕಾದಂಬರಿಕಾರರು.

ಜರ್ಮನ್ ಕಾದಂಬರಿ

ಲೇಖಕರು : ಪ್ರೊ. ಎಸ್.ಬಿ. ಕುಲಕರ್ಣಿ

ಅನುವಾದ : ಶ್ರೀ ನರೇಗಲ್ಲ ಪ್ರಲ್ಹಾದ

ಉಗಮ ಮತ್ತು ಅಭಿವೃದ್ಧಿ : ಹಿನ್ನೆಲೆ

ಬಹುಮಟ್ಟಿಗೆ ಯಾವತ್ತೂ ಮಧ್ಯಯುಗೀನ ವಾಙ್ಮಯಗಳಲ್ಲಿ ಇರುವಂತೆ ಜರ್ಮನ್ ಭಾಷೆಯ ವಾಙ್ಮಯದಲ್ಲಿಯೂ 'ಮಹಾಕಾವ್ಯ (Epic)' ಎಂಬ ಕಾವ್ಯ ಪ್ರಕಾರವು ಒಬ್ಬ ಮಹಾನಾಯಕನ ಚರಿತ್ರೆಗೆ ಸಂಬಂಧಿಸಿದ ಕಥನಪರ ಕಾವ್ಯವಾಗಿಯೋ ಧಾರ್ಮಿಕ ಪುರಾಣಪುರುಷರಿಗೆ ಸಂಬಂಧಿಸಿದ ಬೃಹತ್‌ಕಾವ್ಯವಾಗಿಯೋ ಮೊಟ್ಟಮೊದಲು ಕಾಣಿಸಿಕೊಂಡುದುಂಟು. ಈ (Epic) ಕಾವ್ಯಗಳಿಗೆ ಜರ್ಮನ್ ಭಾಷೆಯಲ್ಲಿ "Heldenepen (ಹೆಲ್ಡನೆಪೆನ್) ಎಂದೆನ್ನುತ್ತಾರೆ. ಅವುಗಳಲ್ಲಿ ರಾಜನ ಆಸ್ಥಾನದಲ್ಲಿರುವ ಅರಸುಮಕ್ಕಳನ್ನು ಸ್ತುತಿಸುವ ಕಥೆಯೊಂದು ಇರುತ್ತದೆ: ಸ್ತೋತ್ರ ಮತ್ತು ಕಥನ ಇದೇ ಈ ಬಗೆಯ ಕಾವ್ಯಗಳ ಮುಖ್ಯ ಅಂಶಗಳು. ಇಂತಹ ಒಂದು ಕಾವ್ಯಕ್ಕೆ 'Niebelungenlied'— ನೆಬೆಲನ್‌ಜೆನ್‌ಲಿದ್ ಎಂಬ ಹೆಸರಿದೆ. ಈ ಬಗೆಯ ಐತಿಹಾಸಿಕ ಕಾವ್ಯಗಳನ್ನು ಯಾರು ಬರೆದರೋ ತಿಳಿದು ಬಂದಿಲ್ಲ. ಸ್ವಾಭಾವಿಕವಾಗಿ ಅರಸುಮಗನೊಬ್ಬನ ಪ್ರೇಮಕಥೆ ಇಂಥ ಕಾವ್ಯಗಳಲ್ಲಿ ಬರುತ್ತದೆ. ಈ ಪ್ರೇಮಕಥಾ ಕಾವ್ಯವನ್ನು ಜಾನಪದ ಲಾವಣಿ ಧಾಟಿಯಲ್ಲಿ ಹಾಡಿಹೇಳುವ ಗಾಯಕರು ಆಗಿಹೋದರು. ಇಂಥವರಲ್ಲಿ ಅತ್ಯಂತ ಪ್ರಸಿದ್ಧನಾದವನೆಂದರೆ Walter Vonder Wogelweide (ವೊಜಿಲ್‌ವೀದದ ವಾಲ್ಟರ್‌ವ್ಹಾನ್) ಎಂಬಾತನು. ಇಂಥವರು ಹಾಡಿಹೇಳುವ ಜಾನಪದ ಲಾವಣಿ ಸಾಹಿತ್ಯಕ್ಕೆ Minnesang ಸಾಹಿತ್ಯವೆಂದು ಜರ್ಮನ್ನರು ಕರೆಯುತ್ತಾರೆ. ಈ ಲಾವಣಿ ಸಾಹಿತ್ಯವು ಕ್ರಮೇಣ ಗದ್ಯರೂಪವನ್ನು ತಳೆಯಿತು. ಅದಕ್ಕೆ 'der Roman' ಎಂಬ ಹೆಸರು ಬಂತು. ಇಂಗ್ಲಿಷ್ ಭಾಷೆಯಲ್ಲಿಯ Novel (ಕಾದಂಬರಿ) ಸಾಹಿತ್ಯ ಪ್ರಕಾರದ ಮೂಲವು ಈ ಡರ್‌ರೋಮನ್ ಎಂಬ ಜರ್ಮನ್ ಪ್ರಕಾರದಲ್ಲಿ ಇದೆ. '೧೨-೧೪ ನೇ ಶತಕಗಳ ಜರ್ಮನ್ ವಾಙ್ಮಯ' ಎಂಬ ಗ್ರಂಥವನ್ನು ಕರ್ತರ್ಶ್ಚ (Kartsch) ಎಂಬ ಲೇಖಕರು ಬರೆದಿದ್ದಾರೆ. ಅದರಲ್ಲಿ ಮಿನೆಸಂಗ್ ಸಾಹಿತ್ಯವನ್ನು ಕುರಿತು ವಿವರಪೂರ್ಣ ಮಾಹಿತಿಯುಂಟು.

ಯಾವ್ರೊಂದು ಭಾಷೆಯ ಬೆಳವಣಿಗೆಯು ಆಯಾ ಭಾಷೆಯ ರಚನೆಯಲ್ಲಿ ಕಾಲಕಾಲಕ್ಕೆ ಉಂಟಾದ ಬದಲಾವಣೆಗಳನ್ನು ಅವಲಂಬಿಸಿರುತ್ತದೆ. ಇಂಥ ರಚನಾನಿಷ್ಠ ಬದಲಾವಣೆಗಳ ಆಧಾರದ ಮೇಲೆ ಜರ್ಮನ್ ವಾಙ್ಮಯದ ಇತಿಹಾಸವನ್ನು ಮೂರು ಕಾಲಾವಧಿಗಳಲ್ಲಿ ಸಾಮಾನ್ಯವಾಗಿ ವಿಭಾಗಿಸುವುದುಂಟು.

i) **ಪ್ರಾಚೀನ ಜರ್ಮನ್ ವಾಙ್ಮಯ :** (ಕ್ರಿ.ಶ. ೬೦೦–೧೦೫೦) ಈ ಅವಧಿಯಲ್ಲಿ ಅಂದಿನ ಜನತೆ ಒಂದೇ ಸ್ಥಳದಲ್ಲಿ ಪೂರ್ಣವಾಗಿ ನೆಲೆಯೂರಿ ನಿಂತಿರಲಿಲ್ಲ. ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿತ್ತು.

ii) **ಮಧ್ಯ ಯುಗೀನ ಜರ್ಮನ್ ವಾಙ್ಮಯ :** (ಕ್ರಿ.ಶ. ೧೦೫೦–೧೫೦೦)

iii) **ಆಧುನಿಕ ವಾಙ್ಮಯ:** (೧೫೦೦ ರಿಂದ ಈಚೆಗೆ).

ಜರ್ಮನ್ ವಾಙ್ಮಯದ ಕಥೆಯನ್ನು ನಿರೂಪಿಸುವ ಪ್ರಥಮ ಗ್ರಂಥವನ್ನು ಇಸ್ವಿ ಸನ್ ೮೭೦ ರಲ್ಲಿ ಆಟೊಫ್ರಿಡ್ ವಾನ್ ವಿಸೆನ್‌ಬರ್ಗ (Ottofried Von-Weissenburg) ಎಂಬಾತನು ಬರೆದನು. ಈ ಗ್ರಂಥವು ಸ್ವಚ್ಛಂದ ಶೈಲಿಯ ಕಥನಾತ್ಮಕ ಕಾವ್ಯರೂಪದಲ್ಲಿ ಇದೆ. ಆ ಕಾಲಕ್ಕೆ ಲ್ಯಾಟಿನ್ ಭಾಷೆ ಯುರೋಪ ಖಂಡದಲ್ಲಿ ವಿದ್ವತ್ ಪ್ರಪಂಚದ ಸಾಮಾನ್ಯ ಭಾಷೆಯಾಗಿತ್ತು: ಅದಕ್ಕೆ ಗೌರವದ ಸ್ಥಾನವೂ ಇತ್ತು. ಸಾಮಾನ್ಯ ವಿಷಯಗಳ ಮೇಲೆಯೂ ಅಂದು ಅನೇಕರು ವಿದ್ವಾಂಸರು ಲ್ಯಾಟಿನ್ ಭಾಷೆಯಲ್ಲೇ ಬರೆವುದುಂಟು. ಕ್ರೈಸ್ತ ಮತ ಯುರೋಪದ ಜನತೆಯನ್ನೆಲ್ಲಾ ಒಂದೇ ಛತ್ರದ ಕೆಳಗೆ ತಂದಿತ್ತು. ಇದರಿಂದಾಗಿ ಲ್ಯಾಟಿನ್ ಮತ್ತು ಸ್ಥಾನಿಯ ಐರೋಪ್ಯ ದೇಶಭಾಷೆಗಳ ಸಾಹಿತ್ಯಕ್ಕೆ ಕಥಾವಿಷಯಗಳು ಅಂದಿನ ಮತೀಯ ವಿಷಯಗಳೇ ಆಗಿದ್ದವು. Roswith (ರಾಸ್ವಿಥ್) ಎಂಬೊಬ್ಬ ಕ್ರೈಸ್ತ ಸಂನ್ಯಾಸಿನಿ (nun) ಬರೆದ ನಾಟಕಗಳು ಸಹ ಆತ್ಮ-ದೇಹಗಳ ಹಾಕಲಾಟ, ಮೂರ್ತಿಪೂಜೆಯ ವಿರೋಧ ನೀತಿ-ಭಕ್ತಿಗಳ ಕೈವಾರಿಯಾದ ಕ್ರೈಸ್ತ ಮತವೇ ತಾರಕ ಮತ ಎಂಬ ವಿಷಯಗಳನ್ನು ಪ್ರತಿಪಾದಿಸಿದವು. ಜರ್ಮನ್ ವಾಚಕರಿಗೆ ಬೇಗನೆ ಅರ್ಥವಾಗುವಂಥ ಸುಲಭ ಶೈಲಿಯಲ್ಲಿ ಆಕೆ ತನ್ನ ಲ್ಯಾಟಿನ್ ಕೃತಿಗಳನ್ನು ರಚಿಸಿದಳು. ೧೧ ನೇ ಶತಕದಲ್ಲಿ. ೧೦೬೦ರ ಎಡಬಲದಲ್ಲಿ ಬವ್ಹೇರಿಯಾ ಪ್ರಾಂತ್ಯದಲ್ಲಿ Ruodlieb (ರೊಡ್ ಲೀಬ್) ಎಂಬಾತನು ಹೆಸರೇ ಇಲ್ಲದ ಒಂದು ಕಾದಂಬರಿಯನ್ನು ಬರೆದನು: ಅದು ಸುಲಭ ಪದ ರೂಪದಲ್ಲಿತ್ತು. ಅದರಲ್ಲಿ ವೀರನೊಬ್ಬನು ವಿದೇಶಗಳಿಗೆ ಹೋಗಿ ಅನೇಕ ಸಾಹಸಗಳನ್ನು ಅಲ್ಲಿ ಗೈದು ಸ್ವದೇಶಕ್ಕೆ ಮರಳಿದ ಕಥಾವಸ್ತುವಿದೆ; ಅವನ ಅದ್ಭುತ ಸಾಹಸಗಳ ವರ್ಣನೆ ಮತ್ತು ಅನುಭವಗಳ ನಿರೂಪಣೆ ಗಮನಾರ್ಹವಾಗಿದೆ. ಈ ಕೃತಿ ಐರೋಪ್ಯ ವಾಚಕರಿಗಾಗಿ ಲ್ಯಾಟಿನ್ ಭಾಷೆಯಲ್ಲಿ ಬರೆದ ಕಥನಕಾವ್ಯವಾಗಿದ್ದರೂ ಅದು ಅತಿ ಶೀಘ್ರದಲ್ಲಿಯೆ ಯುರೋಪನ್ನೆಲ್ಲಾ ಆವರಿಸಲಿದ್ದ 'ವಿದ್ಯೆಯ ಪುನರುಜ್ಜೀವನ (Renaissance)ದ ಉಷಃಕಾಲವನ್ನು ಸೂಚಿಸುತ್ತಿತ್ತು. ಅದರಲ್ಲಿ

ಕಂಡುಬರುವ ವಾಸ್ತವಿಕ ವಿವರಗಳ ಪ್ರೀತಿ ಮಧ್ಯಯುಗದ ಲಕ್ಷಣವೇ ಆಗಿತ್ತು.. ಈ ಪ್ರಬಂಧದ ಪ್ರಸ್ತುತ ವಿಷಯವು ಜರ್ಮನ್ ಕಾದಂಬರಿಗಳನ್ನು ಕುರಿತು ಇದೆಯೇನೋ ನಿಜ. ಆದರೆ ಆಧುನಿಕ ಕಾಲದಲ್ಲಿ ನಾವು ಹೇಳುತ್ತಿರುವ Novel ಸಾಹಿತ್ಯ ಪ್ರಕಾರವು ಅರಳಿ ಬರಲು ಸಾಕಷ್ಟು ಕಾಲಾವಧಿ ಹಿಡಿಯಿತು ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಅದಕ್ಕೆ ಪೂರ್ವಭಾವಿಯಾಗಿ Epic ಕಾವ್ಯದಲ್ಲಿ ರಂಗಭೂಮಿಯ ಮೇಲೆ ಆಡಿ ತೋರಿಸುವದಕ್ಕಾಗಿ ಸರಳ ರಗಳೆಯ ಶೈಲಿಯಲ್ಲಿ ಬರೆದ ನಾಟಕಗಳಲ್ಲೂ ಬೆಳೆದು ಬಂದ ಕಥಾನಿರೂಪಣ ಕೌಶಲ್ಯವನ್ನೂ ಸಾಮಾಜಿಕ ಸಂನಿವೇಶಗಳ ಚಿತ್ರಣಕೌಶಲ್ಯವನ್ನೂ ನಾವು ಅಭ್ಯಸಿಸಲೇಬೇಕು. ಅಂದಿನ ವರ್ಣನ ಪರ ಇಲ್ಲವೆ ಆಸ್ಥಾನನಿಷ್ಠ ವಾಙ್ಮಯವೂ ಧಾರ್ಮಿಕ ದಸ್ತೈವಜುಗಳೂ ಮಾತ್ರ ಗದ್ಯದಲ್ಲೇ ರಚಿತವಾಗುತ್ತಿದ್ದವು.

ಮಿಸ್ತರ್ ಎಕೆಹಾರ್ತ (Meister Eckehart 1260–1327) ಮತ್ತು ಟೌಲರ್ ಕ್ಯಾಂಪೀಸ್ (Tauler Kampis-1380-1471) ಎಂಬೀರ್ವರು ಕ್ರೈಸ್ತ ಅನುಭಾವಿಗಳಾಗಿದ್ದರು. ಇವರು ಪೀಠಸ್ಥ ಧರ್ಮಗುರುಗಳ ಅನಾಚಾರಗಳಿಗೆ ಬೇಸತ್ತು ತಮ್ಮದೇ ಆದ ರೀತಿಯಲ್ಲಿ ದೇವರನ್ನು ಹುಡುಕಲು ಆಸಕ್ತರಾಗಿದ್ದರು. ಇವರಿಂದಲೇ ಜರ್ಮನ್ ಗದ್ಯ ಶೈಲಿಗಳಿಗೆ ಹೊಸ ತಿರುವು ಬಂತು. ಇಂಥ ಪ್ರಾಮಾಣಿಕ ಸಜ್ಜನರ ಮನಃಪ್ರವೃತ್ತಿಯೇ ತರುವಾಯದ ಅವಧಿಯಲ್ಲಿ ಮಾರ್ಟಿನ್ ಲೂಥರನ ಪ್ರಾಮುಖ್ಯಕ್ಕೆ ಎಡೆಮಾಡಿಕೊಟ್ಟಿತು.

ಈ ಅವಧಿಯಲ್ಲಿ ರಚಿತವಾದ ಧಾರ್ಮಿಕ ನಾಟಕಗಳಿಗೆ ಯೇಸುಸ್ವಾಮಿಯ ಜೀವನದಲ್ಲಿಯ ಘಟನೆಗಳೇ ಮೂಲದ್ರವ್ಯವನ್ನು ಒದಗಿಸಿದವು.

ಇಸ್ವಿ ಸನ್ ೧೦೪೬ರ ಎಡಬಲದಲ್ಲಿ ಪೌರ್ವಾತ್ಯ ದೇಶಗಳಿಗೆ ಸಾಹಸಿಗಳು ಕೈಕೊಂಡ ಪ್ರವಾಸಗಳು ಅಂದಿನ ಸಾಹಿತಿಗಳ ದೃಷ್ಟಿಕೋನವನ್ನು ವಿಸ್ತಾರಗೊಳಿಸಿದವು. ೧೧೭೦-೮೦ರ ಅವಧಿಯಲ್ಲಿದ್ದ ಲಾಂಪ್ರೆಕ್ಟ್ (Lamprecht) ಮತ್ತು ಹರ್ಝೊಗ್ ಅರ್ನ್ಸ್ಟ (Hergog Ermst) ಮೊದಲಾದವರ ಕೃತಿಗಳಲ್ಲಿ ಈ ಮಾತು ಒಡೆದು ಕಾಣುವದು. ಈ ಕಾಲದ Eneit (ಏನಿತ್) ಎಂಬ ಗ್ರಂಥದಲ್ಲಿ ಈನಿಯಸ್ ಮತ್ತು ಕಾರ್ಥೇಜರಾಣಿ ಡಿಡೋ ಇವರ ಪ್ರೇಮದ ದುರಂತ ಕಥೆ ವರ್ಣಿತವಾಗಿದೆ. ಇಂಥ ಗ್ರಂಥಗಳ ಲೇಖಕರು, ಮುಂದೆ ಬಹುಕಾಲದ ನಂತರ ಜರ್ಮನ್ ವಾಙ್ಮಯ ಚರಿತ್ರೆಯಲ್ಲಿ ಘಟಿಸಿದ ಸುವರ್ಣಯುಗಕ್ಕೆ ದಾರಿಮಾಡಿಕೊಟ್ಟರು.

ಮಧ್ಯಯುಗದ ಸುವರ್ಣಯುಗ (೧೧೮೦-೧೨೨೦)ರಲ್ಲಿ ನೆಬೆಲಿನ್‌ಜೆನ್ ಗೀತಗಳಂಥ ವೀರರ, ಸಾಹಸಮಯ ಕಾವ್ಯಗಳು ತಲೆದೋರಿದವು. ಹಾರ್ಟಮನ್ ವೂಲ್‌ಫ್ರಮ್ ಮತ್ತು ಗಾಟ್‌ಫ್ರಿದ್ ಎಂಬವರು ಈ ಕಾಲದ ಶ್ರೇಷ್ಠ ಎಪಿಕ್ (epic) ಕವಿಗಳು. ವೋಜೆಲ್‌ವೀಡದ ವಾಲ್ಟರ್ ಎಂಬಾತನು ಭಾವನಾಪ್ರಧಾನ ಭಾವಗೀತಗಳನ್ನು ಬರೆದನು.

ಈ ಕಾಲದ ಗುಡ್ರುನ್ ಕಥೆಯು ಕಾದಂಬರಿಯಂಥ ಕಥಾವಸ್ತುವನ್ನು ಹೊಂದಿದೆ. ಒಬ್ಬಳೇ ಸ್ತ್ರೀಯನ್ನು ಹರ್ವಿಕ್ ಮತ್ತು ಆವನ ಪ್ರತಿಸ್ಪರ್ಧಿ ಹಾರ್ಟ್‌ಮಟ್ ಎಂಬೀರ್ವರು ಪ್ರೀತಿಸುತ್ತಾರೆ. ಹಾರ್ಟ್‌ಮಟ್ಟನ ಕೈಸೆರೆಯಲ್ಲಿದ್ದ ತನ್ನ ನಲ್ಲೆಯನ್ನು ಪ್ರಥಮ ಪ್ರಣಯಿಯಾದ ಹರ್ವಿಕ್ಕನು ಬಂಧಮುಕ್ತ ಮಾಡುತ್ತಾನೆ. ಇದರಿಂದಾಗಿ ಇಬ್ಬರು ಪ್ರಣಯಿಗಳಲ್ಲಿ ಯುದ್ಧ ನಡೆಯುತ್ತದೆ. ಸ್ತ್ರೀಪ್ರೇಮ, ಆದಕ್ಕಾಗಿ ಆಕೆಯ ಸಹಾನುಭೂತಿಗಳೇ ಈ ಕಥೆಯ ಮುಖ್ಯಾಂಶಗಳು.

ಹಾರ್ಟ್‌ಮನ್ ವ್ಹಾನ್‌ಔವ್ ಎಂಬಾತನು 'Der Arme Heinrich' (ಬಡ ಹೆನ್ರಿಚ್) ಎಂಬ ನೀಳ್ಗತೆ ಬರೆದಿದ್ದಾನೆ. ಪಾಪ, ಗರ್ವನೆಂಬ ದೋಷದಿಂದ ಆತ್ಮನ ವಿಮೋಚನೆ ಎಂಬ ಅಂಶಗಳೇ ಕಥೆಗೆ ಹೂರಣ ಒದಗಿಸಿವೆ. ಹೆನ್ರಿಚ್ ಎಂಬಾತನಿಗೆ ಅಜೀರ್ಣದ ರೋಗವಿರುತ್ತದೆ. ಇಟಾಲಿಯ ಸ್ಯಾಲೆರ್ನೋ ಎಂಬ ವೈದ್ಯನು ಧರ್ಮಿಷ್ಠಳಾದ ಕನ್ಯೆಯೋರ್ವಳ ರಕ್ತವನ್ನು ತರಹೇಳುತ್ತಾನೆ. ಒಬ್ಬ ರೈತನ ದೊಡ್ಡಮನಸ್ಸಿನ ಮಗಳೊಬ್ಬಳು ಹೆನ್ರಿಚ್‌ನಿಗಾಗಿ ಪ್ರಾಣಕೊಡಲು ಒಪ್ಪುತ್ತಾಳೆ; ಆದರೆ ರೋಗಿಯೇ ಇದಕ್ಕೆ ಒಪ್ಪುವುದಿಲ್ಲ. ಆಗ ದೇವರು ಕೃಪೆದೋರಿ ಆತನ ರೋಗವನ್ನು ಗುಣಪಡಿಸುತ್ತಾನೆ. ಆ ಧರ್ಮಿಷ್ಠ ಕನ್ಯೆಯನ್ನು ಹೆನ್ರಿಚ್ ಮದುವೆಯಾಗುತ್ತಾನೆ. ಇಂಥ ವರ್ಣನಾತ್ಮಕ ಕಥೆಗಳೇ ಕಾದಂಬರಿ ಎಂಬ ಸಾಹಿತ್ಯ ಪ್ರಕಾರಕ್ಕೆ ಜನ್ಮವಿತ್ತವು.

ಮುಂದೆ ಜರ್ಮನಿಯು ೩೦ ವರ್ಷಗಳ ಯುದ್ಧದಲ್ಲಿ ತೊಡಗಿ ಜರ್ಜರಿತವಾಯಿತು. ಕಾದಂಬರಿಗಳಾಗಲಿ ನಾಟಕಗಳಾಗಲಿ ಆಗ ಏಳಿಗೆ ಹೊಂದಲಿಲ್ಲ. ಸ್ವಿಟ್ಜರ್‌ಲೆಂಡಿನಲ್ಲಿ ಮಾತ್ರ ಬೈಬಲ್‌ನಿಷ್ಠ ನಾಟಕಗಳು ರಚಿತವಾದವು.

ಹಂಸ್ ಸಾಕ್ಸ್ (Hans Sachs) ಎಂಬ ಲೇಖಕನು ಡೆಕಮರಾನ್ ಎಂಬ ಇಟಾಲಿಯನ್ ಕಥೆಯೊಂದನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಇವನೇ ವಿದ್ಯೆಯ ಪುನರುಜ್ಜೀವನ (Renaissance)ಕ್ಕೆ ಮೊದಲಿಗನಾದನು. ಇವನು ಲ್ಯೂಥರ್ ಪ್ರಣೀತ ಧರ್ಮಕ್ರಾಂತಿಯನ್ನು ಉತ್ಸಾಹದಿಂದ ಸ್ವಾಗತಿಸಿದನು. ಶ್ರೋವೆಟ್ಡೆ (Shrovetde) ನಾಟಕ ಪ್ರಕಾರವನ್ನೂ ಇತನೇ ಕಂಡುಹಿಡಿದನು. ಮೋಲಿಯರ್ ಪರುಗಾರ್ಲ್ ಮತ್ತು ರ್‍ಯಾಬೆಲೆ ಇವರ ಕೃತಿಗಳನ್ನು ಜರ್ಮನ್ ಜನಜೀವನಕ್ಕೆ ಹೊಂದಿಸಿ ರೂಪಾಂತರಿಸುತ್ತ ಹಾಸ್ಯಮಯ ರಮ್ಯಕಥೆಗಳನ್ನು ಒದಗಿಸಿದನು. ಫಿಶ್ಚರ್ಟ್ ಎಂಬಾತನು ಫ್ರೆಂಚ್ ಕಾದಂಬರಿಯೊಂದಕ್ಕೆ ಜರ್ಮನ್ ಒಪ್ಪವನ್ನು ಕೊಟ್ಟು 'Gargantoa Und Pantagruel' ಎಂಬ ಹೆಸರಿಟ್ಟನು. (೧೫೭೦) ಇದು ಚಿಕ್ಕಮಕ್ಕಳ ಮನಸ್ಸಿಗೆ ಹಿಡಿಯುವ ಕಥೆಯಾಗಿದ್ದು ಮೂಲಕ್ಕಿಂತ ಮೂರುಪಟ್ಟು ದೊಡ್ಡದಾಗಿದೆ. ಈ ಕೃತಿ ಮಾನವೀಯ ಸಂಸ್ಕೃತಿಯನ್ನು ಪಂಡಿತ ಪಾಮರರ ಜನಜೀವನವನ್ನೂ ನಿಕಟವಾಗಿ ಚಿತ್ರಿಸಲು ಪ್ರಯತ್ನಿಸಿದೆ. ಶೈಲಿ ಮಾತ್ರ ಕ್ಲಿಷ್ಟವಾಗಿದೆ. ಅತಿಶಯೋಕ್ತಿಯ ಮೂಲಕ ಹಾಸ್ಯವು ಹದಗೆಟ್ಟಿದೆ.

ಅನೇಕ ಹಾಸ್ಯಮಯ ಪದಗಳನ್ನು ಫಿಶ್ಚಾರ್ಟ್ ಹೊಸದಾಗಿ ಕಲ್ಪಿಸಿದ್ದಾನೆ.

ಫೋಲ್‌ಕ್ಸಬುಚ್ (Volksbuch) ಎಂಬೊಂದು ಅಜ್ಞಾತ ಲೇಖಕನ ಕೃತಿಯು ಫ್ರಾಂಕ್‌ಫರ್ಟ್ ಎಂಬಲ್ಲಿ ಜಾನ್ ಸ್ಪೈಜ್ ಎಂಬಾತನಿಂದ ಪುನಃ ಬಳಕೆಯಲ್ಲಿ ಬಂದಿತು. ಈ ಕೃತಿಯ ನಾಯಕ (ಫಾಸ್ಟ್) ಎಂಬವನು ೧೬ನೆಯ ಶತಕದ ವಿಶಿಷ್ಟ ವ್ಯಕ್ತಿಯಾಗಿದ್ದನೆಂದು ಪರಂಪರೆ ಹೇಳುತ್ತದೆ. ಆ ಶತಕದ ಇತರ ಸಕಲ ಸಾಮಾನ್ಯರಂತೆ ಫಾಸ್ಟನೂ ಕೂಡ ಕಿಮಿಯಾ ಮತ್ತು ಇಂದ್ರಜಾಲ ವಿದ್ಯೆಗಳನ್ನು ಅರಿತುಕೊಳ್ಳಲು ಧಡಪಡಿಸುತ್ತ ಅದಕ್ಕಾಗಿ ಅತಿಯಾಗಿ ಚಡಪಡಿಸುವುದುಂಟು. ಅವನು ಭೂತದೊಡನೆ ಒಡಂಬಡಿಕೆ ಮಾಡಿಕೊಳ್ಳುತ್ತಾನೆ. ಆ ಭೂತವು ಇವನೆದುರಿಗೆ ಮಿತಿಯಿಲ್ಲದೆ ಭೋಗದಿಂದ ಕೂಡಿದ ನವಲೋಕವೊಂದನ್ನು ತೆರೆದು ತೋರಿಸುತ್ತದೆ. ಆಗ ನಾಯಕ ಫಾಸ್ಟನು ದಿಗ್ದೇಶಗಳಿಗೆ ಪಯಣಿಸುತ್ತ ಇಟಾಲಿ ಮತ್ತು ಪೂರ್ವದಿಕ್ಕಿನ ಅನೇಕ ವಲಯಗಳನ್ನು ತಲುಪುತ್ತಾನೆ. ಟ್ರಾಯ್ ನಗರದ ಹೆಲೆನ್ ರಾಣಿಯನ್ನೂ ಮರುಳುಗೊಳಿಸಿ ಆಕೆಯೊಡನೆ ಒಂದು ವರ್ಷದವರೆಗೆ ಸಂಸಾರ ಮಾಡುತ್ತಾನೆ. ಪುತ್ರನೊಬ್ಬನು ಜನಿಸುತ್ತಾನೆ. ಇಷ್ಟೊತ್ತಿಗೆ, ಭೂತದೊಡನೆ ಮಾಡಿಕೊಂಡ ೨೪ ವರುಷಗಳ ಒಡಂಬಡಿಕೆಯ ಅವಧಿ ಮುಗಿಯುತ್ತದೆ. ಮರಣದ ನಂತರ ಆತನ ಮೆರವಣಿಗೆ ಹೊರಟು ನರಕವನ್ನು ತಲುಪುತ್ತದೆ.

(ಫಾಸ್ಟನ ಈ ಪರಂಪರಾಗತ ಕಥೆ ಕೊನೆಗೊಳ್ಳುವ ರೀತಿಗೂ ಮುಂದೆ ಗಯಟೆ ಕವಿ ವಿರಚಿಸಿದ ಸುಪ್ರಸಿದ್ಧ 'Faust' ಕೃತಿ ಕೊನೆಗೊಳ್ಳುವ ರೀತಿಗೂ ಬಹಳ ವ್ಯತ್ಯಾಸವುಂಟು. ನಾಯಕನ ಉತ್ಕಟ ಜ್ಞಾನತೃಷ್ಣೆಯನ್ನು ಕಂಡು ದೇವದೂತರು ಮೆಚ್ಚುತ್ತಾರೆ; ಅವನನ್ನು ನೇರವಾಗಿ ಸ್ವರ್ಗಕ್ಕೆ ಕರೆದೊಯ್ಯುತ್ತಾರೆ. ಭೂತವೊ ಏಕಾಕಿಯಾಗಿ ಇದ್ದಲ್ಲೇ ಉಳಿಯುತ್ತದೆ).

೧೬ ನೇ ಶತಕದಲ್ಲಿ ಉದಯಿಸಿದ ಪ್ರೊಟೆಸ್ಟಂಟ್ ಪಂಥದ ಬೋಧೆ ಮಾತ್ರ ತನ್ನ ಸಂಕುಚಿತ ಅಂಶಗಳೊಂದಿಗೇನೇ ಗೆಲವು ಪಡೆಯುತ್ತದೆ; ಹಾಗೂ ೧೫೮೭ರಲ್ಲಿ ರಚಿತವಾದ ಮೇಲ್ಕಂಡ ಪರಂಪರಾಗತ ಕಥೆಯಲ್ಲಿ ಫಾಸ್ಟನನ್ನು ಅವನ ಪಾಪಗಳಿಗಾಗಿ ದಂಡಿಸಲಾಗಿದೆ.

೧೮ನೇ ಶತಕದಲ್ಲಿ ಮೈದೋರಿದ ಮಾನವತಾವಾದ (Humanism) ವು ವಿಶ್ಲೇಷಣಾತ್ಮಕವೂ ವಸ್ತುನಿಷ್ಠವೂ ಆಗಿತ್ತು. ಅದರ ಜೊತೆಗೇನೇ ಅದು ಸಮುದಾಯನಿಷ್ಠವೂ ವಿಶ್ವನಿಷ್ಠವೂ ಆಗಿತ್ತು. ಅದ್ಭುತರಮ್ಯತಾವಾದ (Romanticism) ದ ಚೇತನೆಯು ಸಮನ್ವಯಾತ್ಮಕವೂ ಸ್ವನಿಷ್ಠವೂ ವ್ಯಕ್ತನಿಷ್ಠವೂ ರಾಷ್ಟ್ರಾಭಿಮಾನಯುಕ್ತವೂ ಆಗಿತ್ತು; ಈ ಎಲ್ಲ ಗುಣಗಳಿಂದಾಗಿ ಅದು ವ್ಯಕ್ತಿತ್ವವಾದ (individualism)ದ ವಿಶಿಷ್ಟ ಅಭಿವ್ಯಕ್ತಿಗೆ ದಾರಿಮಾಡಿಕೊಟ್ಟಿತು. ಜರ್ಮನಿಯಲ್ಲಿ ಉದಯಗೊಂಡ ಅದ್ಭುತರಮ್ಯತಾವಾದದ ಫಲವೇ ಕಾದಂಬರಿಯೆಂಬ ಸಾಹಿತ್ಯಪ್ರಕಾರವಾಗಿದೆ. ಗಯಟೆ ಮಹಾಶಯನು ರಚಿಸಿದ 'Werther (ವರ್ಥರ್)

ಎಂಬ ಕೃತಿ ಈ ಪ್ರಕಾರಕ್ಕೆ ಹೇಳಿಮಾಡಿಸಿದ ಉದಾಹರಣೆಯೇ ಸರಿ. ಹೆಡಲ್‌ಬರ್ಗ ಸ್ವೇಬಿಯಾ, ಆಸ್ಟ್ರಿಯಾ ವೇಮರ್ ಮತ್ತು ಇತರ ಕೇಂದ್ರಗಳು ಘನತೆವೆತ್ತ ಲೇಖಕರಿಗೆ ಜನ್ಮವಿತ್ತಿವೆ.

ನಾವೆಲ್ಲೀ (novel–ಚಿಕ್ಕ ಕಾದಂಬರಿ ಅಥವಾ ನೀಳ್ಗತೆ) ಎಂಬ ಸಾಹಿತ್ಯ ಪ್ರಕಾರವನ್ನು ಟೀಕ್ (Tick) ಎಂಬ ಮಹಾಶಯನು ಬೆಳಸಿ ತೋರಿಸಿದನು. ಬಳಿಕ ಫ್ರೀಟಿಗ್ ಮತ್ತು ಸ್ಪಿಲ್‌ಹಜೆನ್ ಎಂಬುವರು ಸಣ್ಣ ಸಣ್ಣ ಕಾದಂಬರಿಗಳನ್ನು ಬರೆದರು. ಇನ್ನೊಂದು ಪ್ರಕಾರವು ಐತಿಹಾಸಿಕ ಪ್ರಾಚೀನ ರಮ್ಯ ಕಥೆಗಳನ್ನು ಆಧರಿಸಿ ಬೆಳೆದು ಬಂತು.

ಆಧುನಿಕ ಕಾಲದಲ್ಲಿ ಕೆಲ್ಲರ್ ಮತ್ತು ಸ್ಟಾರ್ಮ್ ಎಂಬವರು ವಾಸ್ತವ. ವಾದಕ್ಕೆ ಹೆಸರಾಗಿದ್ದಾರೆ. ಕೆಲ್ಲರ್ ಮಹಾಶಯನು ೧೯೦೪ ರಲ್ಲಿ 'Faeth of Luther (ಲ್ಯೂಥರನ ಶ್ರದ್ಧೆ)' ಎಂಬ ಕೃತಿಗಳನ್ನು ರಚಿಸಿದ್ದು ಐತಿಹಾಸಿಕ ಘಟನೆಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂಬುದನ್ನು ಅದು ಕಲಿಸುತ್ತದೆ.

ಒಲವುಗಳು (Trens)

ಲ್ಯೂಥರನು ಪೋಪನ ವಿರುದ್ಧ ಆಂದೋಲನ ನಡೆಸುತ್ತಿರುವಾಗ ಮರ್ನರ್ ಮಹಾಶಯನು ಮಾತ್ರ ವರ್ಜಿನ್ ಮೇರಿ ಮಾತೆಯನ್ನು ಲ್ಯೂಥರನ ಅನುಯಾಯಿಗಳು ಟೀಕಿಸಕೂಡದೆಂದು ಅಭಿಪ್ರಾಯಪಟ್ಟನು. ವೀರರ ಸಾಹಸಪ್ರವೃತ್ತಿಯೇ ಕಣ್ಮರೆಯಾದೀತೆಂದು ಆತ ಎಚ್ಚರಿಕೆಯಿತ್ತನು. ಅಂತೆಯೇ 'Gross Narr' (ಕಡು ಮೂರ್ಖ) ಎಂಬ ಹೆಸರಿನ ಪ್ರಭಾವಶಾಲಿ ವಿಡಂಬನಪ್ರಧಾನ ಕೃತಿಯನ್ನು ಅವನು ರಚಿಸಿದನು. ಆಂದಿನ ಧರ್ಮಕ್ರಾಂತಿಯ ಅಭಿಮಾನಿಗಳು ಮರ್ನರನ ವಿಚಾರಗಳನ್ನು ಬೆಂಬಲಿಸಿದರು; ಏಕೆಂದರೆ ಅವು ಜನತೆಯ ಮೇಲೆ ಬಹು ಪರಿಣಾಮವನ್ನು ಉಂಟು ಮಾಡಿದ್ದವು. ಆದರೆ ಈ ಕೃತಿ ಕಾದಂಬರಿ ರೂಪದಲ್ಲಿ ಇರದೆ ನಾಟಕದ ರೂಪವನ್ನು ತಳೆಯಿತು; ಏಕೆಂದರೆ ನಾಟಕ ಪ್ರಕಾರವು ಅಂದು ಹೆಚ್ಚು ಪರಿಣಾಮ ಬೀರಬಲ್ಲ ಮಾಧ್ಯಮವಾಗಿತ್ತು.

ಈ ತರುವಾಯ, ೧ನೇ ಮೆಕ್ಸಿಮಿಲಾನ್ ಬಾದಶಹನ ಅದ್ಭುತ ರಮ್ಯ ವ್ಯಕ್ತಿತ್ವವನ್ನು ಕುರಿತು ಎರಡು ಗ್ರಂಥಗಳು ರಚಿತವಾದವು. ಈ ಗ್ರಂಥಗಳಲ್ಲಿಯ ಕಥಾಪ್ರಕಾರವು ಬಹುಮಟ್ಟಿಗೆ ಐತಿಹಾಸಿಕ ರಮ್ಯಕಥೆಗಳನ್ನೇ ಹೋಲುತ್ತಿತ್ತು. ಈ ಕೃತಿಗಳು ಆಧುನಿಕ ಪ್ರವೃತ್ತಿಗಳನ್ನು ಪ್ರಥಮವಾಗಿ ಪರಿಚಯ ಮಾಡಿ-ಕೊಟ್ಟವು. ೧೫೧೨ ರಲ್ಲಿ ರಚಿತವಾದ 'Der Weiss Kunig' ಎಂಬ ಗ್ರಂಥವು ಈ ಬಾದಶಹನ ಮತ್ತು ಅವನ ತಂದೆಯ ಚಾರಿತ್ರಿಕ ವೃತ್ತಾಂತವೇ ಆಗಿದೆ. ಈ ಕೃತಿಯ ಅನೇಕ ಹಸ್ತಪ್ರತಿಗಳು ಬಾದಶಹನಿಗಾಗಿ ತಯಾರಿಸಲ್ಪಟ್ಟವು. ೧೫೧೭ ರಲ್ಲಿ ರಚಿತವಾದ 'Teuerdank' ಎಂಬ ದ್ವಿತೀಯ ಗ್ರಂಥವು ಅನ್ಯೋಕ್ತಿರೂಪದಲ್ಲಿದ್ದ

ರಮ್ಯಕಥಾಪ್ರಕಾರವಾಗಿದೆ. ಬಾದಶಹನ ಅರಮನೆಗೆ ಸೇರಿದ ವೀರನೊಬ್ಬನ ಉದಾತ್ತ ಸಾಹಸಗಳನ್ನು ಈ ಕೃತಿಯಲ್ಲಿ ವರ್ಣಿಸಲಾಗಿದೆ. ಆ ವೀರನು ನಾನಾ ಆಮಿಷಗಳಿಗೆ ಮರುಳಾಗದೆ ಸಮಸ್ತ ಗಂಡಾಂತರಗಳೊಳಗಿಂದ ಪಾರಾಗುತ್ತಾನೆ. ಈ ಗ್ರಂಥವು ೧೮ ನೇ ಶತಕದ ಆರಂಭದ ವರೆಗೆ ಅತ್ಯಂತ ಜನಪ್ರಿಯವಾಗಿತ್ತು. ಈ ೨ ನೇ ಕೃತಿ ಕಾದಂಬರಿಯ ರೂಪವನ್ನು ತಳೆದಿದ್ದರೂ ಗದ್ಯದಲ್ಲಿ ಇರದೆ ಆಸ್ಥಾನದ epic ಕಾವ್ಯದ ಮಾದರಿಯನ್ನು ತಳೆದಿದೆ.

ಎಲಿಝಾಬೆಥ್ ವ್ಯಾನ್ ನಾಸ್ಸೂ ಸಾರ್‌ಬ್ರುಕೆನ್ ಎಂಬಾಕೆ ಅನೇಕ ಗದ್ಯ ರಮ್ಯಕಥೆಗಳನ್ನು ರಚಿಸಿದ್ದಾಳೆ; ಏಕೆಂದರೆ ಆಕೆಯ ತಂದೆಯಾದ ಕೊರೇನದ ಡ್ಯೂಕನು ಅವಳಿಗೆ ಫ್ರೆಂಚಪರಂಪರೆಯ ಶಿಕ್ಷಣವನ್ನು ಒದಗಿಸಿದ್ದನು. ಫ್ರಾನ್ಸದಲ್ಲಿ ಇಷ್ಟೊತ್ತಿಗೆ ಎಪಿಕ್ (epic) ಕಾವ್ಯಪ್ರಕಾರ ಹಿಂದೆ ಬಿದ್ದು ಗದ್ಯದಲ್ಲಿರುವ ರಮ್ಯ ಕಥೆಗಳು ಮುಂದೆ ಬರತೊಡಗಿದ್ದವು. 'Her Hug Schapeler' ಎಂಬ ರಮ್ಯ ಕಥಾ ಗ್ರಂಥವು ಫ್ರೆಂಚ್ ಭಾಷೆಯಿಂದ ಜರ್ಮನ್ ಭಾಷೆಗೆ ಅನುವಾದಿತವಾಯಿತು. ಇದರಲ್ಲಿ ಡ್ಯೂಗೋ ಕ್ಯಾಪೆಟ್ ಎಂಬೊಬ್ಬ ವೀರನ ಸಾಹಸಗಳು ವರ್ಣಿತವಾಗಿವೆ.

ಹಳೇ ಕಾಲದ epic ಕಾವ್ಯಗಳನ್ನು ಗದ್ಯ ರೂಪದಲ್ಲಿ ಹೊಸದಾಗಿ ಅನೇಕರು ಬರೆಯತೊಡಗಿದರು. ಅವುಗಳಿಗೆ Volks-busher (ಜನತಾ ಗ್ರಂಥ) ಎಂಬ ಹೆಸರಿದ್ದು ಈ ಗ್ರಂಥಗಳನ್ನು ಇಂದಿಗೂ ವಿಪುಲವಾಗಿ ಜನ ಓದುತ್ತಾರೆ. ಹೀಗೆ ಗದ್ಯವು ಕಥಾನಕರೂಪದಲ್ಲಿ ಮೈದೋರತೊಡಗಿತು. ಇದರಿಂದಾಗಿ ಜರ್ಮನ್ ವಾಙ್ಮಯದಲ್ಲಿ ನಾಟಕಗಳ ಜೊತೆಜೊತೆಗೇನೇ ಹೆಚ್ಚು ಹೆಚ್ಚು ಕಾದಂಬರಿಗಳು ಉದಯಗೊಂಡವು.

ಪೌರ್ವಾತ್ಯ ದೇಶಗಳ ಕಥೆ-ಕಥಾನಕಗಳು ಜರ್ಮನ್ ಭಾಷೆಗೆ ಅನುವಾದಿತ ವಾಗಿ ಮುದ್ರಿತವಾದವು. ಫ್ರಾನ್ಸಿಸ್ಕನ್ ಮುಂಕ್‌ಪಾಲ್ ಮಹಾಶಯನು ಇಂಥ ಕಥಾನಕಗಳ ಹಾಗೂ ಸಾಹಸಮಯ ವೃತ್ತಾಂತಗಳ ಸಂಕಲನವೊಂದನ್ನು 'Schimpt und Ernst' ಎಂಬ ಶೀರ್ಷಿಕೆಯಿತ್ತು ಪ್ರಕಟಿಸಿದನು. ಆತ ಕಥೆ ಹೇಳುವ ಕಲೆಯಲ್ಲಿ ಅತ್ಯಂತ ಕುಶಲನಾಗಿದ್ದು ವಾಚಕರ ಆಸ್ಥೆಯನ್ನು ಕೊನೆವರೆಗೂ ಕೆರಳಿಸುತ್ತಾನೆ.

ಅಲ್ಮದ ಹೆನ್‌ರಿಚ್ ಸ್ಪೇನ್‌ಹಾವೆಲ್ (೧೭೧೨-೮೩) ಮಹಾಶಯನು ಬೋಕಾಶಿಯೋ ಕೃತ Griseldis (1471) ಎಂಬ ಗ್ರಂಥವನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಇಸೋಪನ ನೀತಿಕಥೆಗಳನ್ನು ಲೂಥರನ ಅನುಯಾಯಿಯಾದ ವಾಲ್ಡಿಸ್ ಎಂಬಾತನು ಜರ್ಮನ್ ಭಾಷೆಯಲ್ಲಿ ಪ್ರಕಟಿಸಿದನಲ್ಲದೆ ಅಂದಿನ ಲೇಖ-ಕರಿಗೆ ಮಾರ್ಗದರ್ಶಕನಾದನು.

ಪದ್ಯಕ್ಷೇತ್ರದಲ್ಲಿಯ ಐತಿಹಾಸಿಕ ಲಾವಣಿಗಳೂ ಗದ್ಯಕ್ಷೇತ್ರದಲ್ಲಿಯ ಜಾನಪದ ಕಥೆಗಳೂ ತರುವಾಯದ ಗದ್ಯ ಕಥಾಸಾಹಿತ್ಯಕ್ಕೆ ವಿಪುಲವಾದ ದ್ರವ್ಯವನ್ನು ಒದಗಿ-

ಸಿದವು. ಕಾವ್ಯದಲ್ಲಿ ಗೀತರೂಪಕಗಳನ್ನು ಗ್ರಾಫೀದ ಮತ್ತು ಡಾಮಸೆಸ್ ಎಂಬ-ವರು ಪ್ರಪ್ರಥಮವಾಗಿ ವೃದ್ಧಿಗೊಳಿಸಿದರು.

ಧರ್ಮಕ್ರಾಂತಿಯಿಂದ ಉಂಟಾದ ವಿಪ್ಲವ-ವೇದನೆಗಳ ಅವಧಿಯಲ್ಲಿ ಕಾದಂಬರಿಗಳಿಗಿಂತ ಕಾವ್ಯ ನಾಟಕಗಳನ್ನೇ ಅಂದಿನ ಸಾಹಿತಿಗಳು ಹೆಚ್ಚಾಗಿ ಬರೆದರು. ಗಯಟೆ ವಿರಚಿತ 'The Suffering of Young Werthers' ಎಂಬ ಕೃತಿ ಮಾತ್ರ ಹೆಚ್ಚಾಗಿ ಕಾದಂಬರಿಯನ್ನೇ ಹೋಲುವದು. ಗಯಟೆ ರಚಿಸಿದ 'Wilhelm Meisters Wanderjahre (William's Travels) ಎಂಬ ಕೃತಿಗೂ 'Lehre gahre (Years of Training)' ಕೃತಿಗೂ ಸಾಮ್ಯವೇನೂ ಇಲ್ಲ. ವೈಯಕ್ತಿಕ ಸ್ವಾತಂತ್ರ್ಯವನ್ನು ಸಮಾಜದ ಕಲ್ಯಾಣಕ್ಕಾಗಿ ತ್ಯಾಗ ಮಾಡಬೇಕೆಂಬ ಸಾಮಾಜಿಕ ನೀತಿಯನ್ನು ಗಯಟೆ ಮಹಾಶಯನಿಗೆ ಪ್ರತಿಪಾದಿಸಬೇಕಾಗಿತ್ತು. ಆದರೆ ಔದ್ಯೋಗಿಕ ಅಭಿವೃದ್ಧಿಯ ಮೂಲಕ ವೈಯಕ್ತಿಕ ನೀತಿಯೆಂಬುದು ಹಿಂದೆ ಬೀಳಲೇಬೇಕಾಯಿತು.

ಗಯಟೆ ತನ್ನ ಜೀವನದ ಕೊನೆಯ ಅವಧಿಯಲ್ಲಿ ಐರೋಪ್ಯ ವಾಙ್ಮಯ ಕ್ಷೇತ್ರದಲ್ಲಿ ಮಹೋನ್ನತ ವ್ಯಕ್ತಿಯೆನಿಸಿ ಪ್ರಗತಿಶೀಲ ವಿಚಾರಗಳ ಕೈವಾರಿಯಾಗಿ ನಿಂತನು.

ನೆಪೋಲಿಯನ್ನನ ದಾಳಿಗಳು ರಮ್ಯ ಕಥಾ ಸಾಹಿತಿಗಳನ್ನು ಬಡಿದೆಬ್ಬಿಸಿದವು. ಜರ್ಮನಿಯ ಜ್ವಲಂತ ಪ್ರಶ್ನೆಗಳತ್ತ ಅವರೆಲ್ಲರು ಲಕ್ಷ್ಯವೀಯಬೇಕಾಯಿತು. ರಾಷ್ಟ್ರೀಯ ಜೀವನದಿಂದ ಇದಿರಾಗಿ ಸಿಡಿದು ನಿಂತವರಲ್ಲಿ ನವ ದೇಶಾಭಿಮಾನದ ಆವೇಶವುಂಟಾಯಿತು. 'ಯುವಕ ಜರ್ಮನಿ'ಯು ನೆಪೋಲಿಯನ್ನನನ್ನು ಪ್ರತಿಭಟಿಸುತ್ತ ಬಂದಿದ್ದಿತು. ಈ ಮೊದಲು ರಮ್ಯ ಕಥೆಗಳತ್ತ ಒಲಿದ ಲೇಖಕರು ಅಂಥ ಯಾವ ಹೊಸ ಕೃತಿಗಳನ್ನು ರಚಿಸುವ ಗೊಡವೆಗೆ ಹೋಗಲಿಲ್ಲ; ಅವರೆಲ್ಲರು ವಾಙ್ಮಯ ನಿರ್ಮಿತಿಗಿಂತ ಇತರ ಮಹತ್ವದ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಆಸ್ಥೆ ವಹಿಸಿದರು.

ಯುವಕ ಜರ್ಮನಿ

ಯುವಕ ಜರ್ಮನಿಯು ಇಮ್ಮರ್‌ಮನ್ ಮಹಾಶಯನ ಕೃತಿಗಳನ್ನು ಸ್ನೇಹದ ರೀತಿಯಲ್ಲಿ ಸ್ವಾಗತಿಸಿತು. ಈತನ ಮೊದಲ ಕೃತಿಯೇ 'Die Epigonen (Followers: ಅನುಯಾಯಿಗಳು) ಎಂಬ ಕಾದಂಬರಿ. ಅದರಲ್ಲಿ ಟ್ರಿಮನ್ ಎಂಬ ಉದ್ಧತ ಶ್ರೀಮಂತನೊಬ್ಬನ ದುರಂತ ಚಿತ್ರವನ್ನು ಬಣ್ಣಿಸಲಾಗಿದೆ. ಆತನು ಅನೇಕ ಸ್ತ್ರೀಯರೊಡನೆ ನಡೆಸಿದ ದುರ್ವ್ಯಾಪಾರದ ಸಂಬಂಧಗಳನ್ನು ಈ ಕೃತಿಯಲ್ಲಿ ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ಅತಿ ತೀವ್ರವಾಗಿ ಕಣ್ಮರೆಯಾಗುತ್ತಿರುವ ಯುಗಕ್ಕೆ ಸೇರಿದ ನಾಯಕ 'Eigone'ನ ದುರಂತ ಜೀವನದಿಂದ ಯಥಾರ್ಥ ಚಿತ್ರಣವೇ ಈ ಕೃತಿಯ ವೈಶಿಷ್ಟ್ಯ.

ಗಯಟೆ ವಿರಚಿತ 'Wiehelm Meister' ಕೃತಿಯು ಇಮ್ಮರಮನ್ನನಿಗೆ ಮಾದರಿಯಾಗಿ ಪರಿಣಮಿಸಿತು; ಅದರಲ್ಲಿಯ ನೈತಿಕ ಹಿನ್ನೆಲೆ, ಸಾಮಾಜಿಕ ವರ್ಗಗಳ ಹೋರಾಟ, ಕುಲೀನ ಶ್ರೀಮಂತರ ಪ್ರಭುತ್ವ, ತತ್ತ್ವಜ್ಞಾನದ ಸಮಸ್ಯೆಗಳು ಇವೆಲ್ಲಾ ಇಮ್ಮರಮನ್ನನಿಗೆ ಮಾದರಿಯೆನಿಸಿದವು. ಆತನ ದ್ವಿತೀಯ ಗ್ರಂಥ 'Munchhasene in Geschichte in Atabesken' ಎಂಬುದು romanceಪ್ರಕಾರಕ್ಕೆ ಸೇರಿದ್ದಾಗಿದೆ. ಅವನು ಅದರಲ್ಲಿ ಅನೇಕ ರೀತಿನೀತಿ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತಾನಾದರೂ ತನ್ನ ಕಾದಂಬರಿಗೆ ಯಾವ ವಿಶಿಷ್ಟ ರೂಪವನ್ನೂ ಕೊಟ್ಟಿಲ್ಲ. ಗ್ರಂಥಕರ್ತನು ಕಾರ್ಯಕಾರಣ ಸಂಬಂಧಗಳ ಕಡೆಗೆ ಗಮನವಿತ್ತಿಲ್ಲ. ಚಿತ್ರಮಯ ಕಲ್ಪನಾವಿಲಾಸವು ಅವನ ಸ್ವಭಾವಕ್ಕೆ ಹಿಡಿಸಲಿಲ್ಲ; ಹಾಸ್ಯದ ಪ್ರತಿಭೆಯೂ ಅವನಲ್ಲಿ ಕಂಡುಬರಲಿಲ್ಲ. ಏನೇ ಇರಲಿ ಅವನು ನವಮನ್ವಂತರದ ಲೇಖಕನೇ ಹೊರತು ಹಳೇ ಕಾಲಕ್ಕೆ ಸೇರಿದವನಲ್ಲ. ಅವನ ಇತರ ಕೃತಿಗಳಲ್ಲಿ ರೈತಜೀವನದ ಚಿತ್ರಣವುಂಟು.

ಕಾದಂಬರಿಗಳಲ್ಲಿಯ ಮುಖ್ಯ ಪ್ರಕಾರಗಳು

ಇಲ್ಲಿಯ ವರೆಗೆ ಅನೇಕ ಪ್ರಕಾರಗಳ ಕಾದಂಬರಿಗಳ ಉಲ್ಲೇಖವನ್ನು ಮಾಡಿದ್ದು ಅವುಗಳ ಮುಖ್ಯ ಲಕ್ಷಣಗಳನ್ನು ಇಲ್ಲಿ ಒಂದೆಡೆಗೆ ಕಾಣಿಸುವಾ.

೧. ರಮ್ಯಪ್ರಕಾರದ ಕಾದಂಬರಿಗಳಲ್ಲಿಯ ವಿಲಕ್ಷಣ ಅವಾಸ್ತವತೆ:
ಲೇಖಕರು: ಕ್ಲೈಸ್ಟ್, ಬ್ರೆಂಟಾನೋ, ಆರ್ನಿಮ್, ಗ್ರಿಮ್ಮ್

೨. 'ಯುವಕ ಜರ್ಮನಿ' ಗುಂಪಿನ ರೈತ ಸಮಾಜದ ವಾಸ್ತವ ಜೀವನದ ಚಿತ್ರಣ:
ಲೇಖಕ: ಇಮ್ಮರಮನ್.

೩. ಉಪದೇಶಾತ್ಮಕ ಕಾದಂಬರೀ ಪ್ರಕಾರ:
ಲೇಖಕ: ಸ್ವಿಸ್ ಪಾದ್ರಿಯಾದ ಬಿಟ್‌ಝಿಯಸ್ ರಚಿಸಿದ ಅನೇಕ ಕಾದಂಬರಿಗಳ ಮಾಲೆ.

೪. ಜೀವನ ಚರಿತ್ರೆಯ ಮಾದರಿಯಲ್ಲಿರುವ ಕಾದಂಬರೀ ಪ್ರಕಾರ:
'ಸ್ಪಿನೋಝಾ ಮಹಾಶಯನ ಚರಿತ್ರೆಗೆ ಸಂಬಂಧಿಸಿದ ಕಾದಂಬರಿ
ಲೇಖಕ: ಔರಬಕ್.

೫, 'ಸ್ಪಿನೋಝಾ' ಪರ ಉಪಯುಕ್ತ ಕಾದಂಬರಿ ತತ್ತ್ವಜ್ಞಾನದ ಪ್ರವೃತ್ತಿಗೆ ಪ್ರಾಧಾನ್ಯವಿತ್ತದ್ದರಿಂದ ಇದಕ್ಕೆ ತತ್ತ್ವಜ್ಞಾನಪ್ರಧಾನ ಕಾದಂಬರಿಯೆಂದೂ ಕರೆಯುತ್ತಾರೆ.

೬. ರಾಜಕೀಯ ಕಾದಂಬರಿ: ಔರಬಕ್ ವಿರಚಿತ 'ವಾಲ್ಡ್‌ಫೀಲ್ಡ್' ಕಾದಂಬರಿ (೧೮೭೪)

೭. ನಿಸರ್ಗನಿಷ್ಠ ಕಾದಂಬರಿ : ನಿಸರ್ಗದ ಅನೇಕ ಭಾವಗಳನ್ನು ವ್ಯಕ್ತಪಡಿಸುವ ನಾನಾ ಬಗೆಯ ಸೃಷ್ಟಿಸೌಂದರ್ಯದ ದೃಶ್ಯಗಳ ವರ್ಣನೆಯುಳ್ಳ ಕೃತಿ.
ಲೇಖಕ : ಎಸ್ಟಿಫ್ಟರ್–ಕೃತಿ : 'Joyful stones'

೮. ಮನಃಶಾಸ್ತ್ರೀಯ ಕಾದಂಬರಿ : ಪ್ರತಿಯೊಂದು ಸ್ತ್ರೀ ಅಥವಾ ಪುರುಷ ಪಾತ್ರದ ಮಾನಸಿಕ ವ್ಯಾಪಾರಗಳನ್ನು ವಿವರ ವಿವರವಾಗಿ ಚಿತ್ರಿಸುವ ಕೃತಿ. 'ಸಮಸ್ಯಾತ್ಮಕ ಸ್ವಭಾವಗಳ ಬುಲ್ಲೇಖ–ಸ್ಪಿಲ್‌ಹೆಗೆನ್ ರಚಿತ ಕಾದಂಬರಿ.

೯. ಅಸ್ತಿತ್ವವಾದದ ಪ್ರಭಾವವುಳ್ಳ ಕಾದಂಬರಿ : ಈ ಮಾದರಿಯಲ್ಲಿ ಗ್ರಂಥಕರ್ತನು ತಟಸ್ಥನಾಗಿ ಉಳಿದು ಆಯಾಪಾತ್ರದ ಅಂತರಾತ್ಮವು ತನ್ನ ಅಸ್ತಿತ್ವವನ್ನು ಬಿಚಿತ್ರಪಡಿಸುವುದೇ ಕಾದಂಬರಿಯ ಹಿನ್ನೆಲೆಯಾಗಿ ಪರಿಣಮಿಸುವುದು.

೧೦. ಮಕ್ಕಳ ಕಾದಂಬರಿಗಳು : ಫಿಶ್ಚಾರ್ಟನು ಬರೆದ 'Gargatoa und Pantagruel.

೧೧. ಹಾಸ್ಯಮಯ ಕಾದಂಬರಿಗಳು : ಸ್ಪಿಲ್‌ಮನ್ನ ಮತ್ತು ಯುಲೆನ್ ಸ್ಪಿಗೆಲ್ ಇವರು ರಚಿಸಿದ ಕೃತಿಗಳು.

ಜರ್ಮನ್ ಮತ್ತು ಐರೋಪ್ಯ ವಾಙ್ಮಯಗಳಲ್ಲಿ ಪರಸ್ಪರ ಪ್ರಭಾವ :

ಫ್ರೆಂಚ್, ರಶಿಯನ್ ಮತ್ತು ಸ್ಕ್ಯಾಂಡಿನೇವ್ಹಿಯನ್ ದೇಶಗಳ ವಾಙ್ಮಯ ಸಂಪರ್ಕದಿಂದ ಜರ್ಮನ್ ವಾಙ್ಮಯವು ಬಹಳಷ್ಟು ಪ್ರಭಾವಿತವಾಗಿದೆ. ಈ ಪ್ರಭಾವದ ಫಲವಾಗಿಯೇ ಜರ್ಮನ್ ವಾಙ್ಮಯಕ್ಷೇತ್ರದಲ್ಲಿ ಪುನರುಜ್ಜೀವನವು ನಡೆಯಿತು. ಕಾದಂಬರಿ–ನಾಟಕ–ಕಾವ್ಯಗಳ ಪ್ರಪಂಚದಲ್ಲಿ ಫ್ರೆಂಚ್ ವಾಸ್ತವವಾದದ ತತ್ತ್ವಗಳು ಪರಿಣಾಮ ಬೀರಿದವು, ಕಾದಂಬರಿಗಳು ವಾಸ್ತವಿಕ ವಾತಾವರಣವನ್ನು ನಿರ್ಮಿಸತೊಡಗಿದವು, ಶೈಲಿಯಲ್ಲಿ ಸೊಬಗು-ಸೊಗಸು ಕಾಣಿಸಿಕೊಂಡಿತು–ಇವು ಫ್ರೆಂಚ್ ಮಾದರಿಗಳೇ ಸರಿ. ಸುಡರ್‌ಮನ್ನನ 'Twilight (1887)' ಕಾದಂಬರಿ ಈ ಮಾದರಿಗಳಿಗೆ ಯೋಗ್ಯ ಉದಾಹರಣೆಯಾಗಿದೆ. ಈ ಕೃತಿಯ ಮೇಲೆ ಮೋಪಾಸಾ ಮಹಾಶಯನ ಪ್ರಭಾವವುಂಟಾಗಿದೆ. ಸುಡರ್‌ಮನ್ನನ ಅತ್ಯುತ್ತಮ ಕಾದಂಬರಿ "Es Was (There was–1894) ಎಂಬ ಕೃತಿಯಲ್ಲಿ ನೈತಿಕ ಸಮಸ್ಯೆಗಳ ಚರ್ಚೆಯಿದೆ. ಆದರೆ ಅವನ ಕಥಾವಸ್ತುವಿನ ಶೈಲಿಗಳು ಸಂವೇದನಶೀಲವಾಗಿವೆ. ೧೯ ನೇ ಶತಕದ ಕೊನೆಕೊನೆಗೆ ಫ್ರೆಂಚ್ ಸಹಜತಾವಾದ

(naturalism) ದ ಅಲೆಗಳೂ ಜರ್ಮನಿಗೆ ತಲುಪಿದವು; ಆದರೆ ಅವುಗಳ ಪ್ರಭಾವ ಬಹುಕಾಲ ಉಳಿಯಲಿಲ್ಲ.

ಕ್ರೆಟ್‌ಝರ್‌ರನ 'Master Timpe' ಎಂಬ ಕಾದಂಬರಿಯು ಸಹಜತಾವಾದವನ್ನು ಬೆಂಬತ್ತಿತು. ಅವನ 'Face of Chust' ಕಾದಂಬರಿಯಲ್ಲಿ ಮಾತ್ರ ಅಧಿ-ದೈವಿಕತೆ (Supernaturalism)ಯ ಅಂಶಗಳು ವಿಪುಲವಾಗಿವೆ.

ಗಯಟೆನಂಥ ರಮ್ಯತಾಪ್ರಿಯ (Romantic) ಲೇಖಕನು ತನ್ನ Faust ಕೃತಿಯ ದ್ವಿತೀಯ ವಿಭಾಗದಲ್ಲಿ ಅಭಿಜಾತವಾಙ್ಮಯದ ಸಂಸ್ಕಾರಗಳನ್ನು ವ್ಯಕ್ತಪಡಿಸಿದ್ದಾನೆ. ಸ್ಕೀಲರ್ ಮತ್ತು ಗಯಟೆ ಇವರಿಗೆ ತಮ್ಮವೇ ಆದ ವಿಚಾರ ಪ್ರಣಾಲಿಗಳಿವೆ; ಇವರಿಬ್ಬರೂ ವಿದೇಶಗಳ ಮೇಲೆ ಪ್ರಭಾವ ಬೀರಿದರು. ಸ್ಕ್ಲೆಜೆಲ್ ಸಹೋದರರು ಸಂಸ್ಕೃತದಂಥ ಪೌರ್ವಾತ್ಯ ಭಾಷೆಗಳ ಅಧ್ಯಯನವನ್ನು ಬಳಕೆಯಲ್ಲಿ ತಂದರು. ನಳದಮಯಂತಿ ಮತ್ತು ಶಕುಂತಲಾ ಆಖ್ಯಾನಗಳು ಭಾಷಾಂತರಗೊಂಡು ಜರ್ಮನ್ ಜನತೆಯ ಮೆಚ್ಚುಗೆ ಪಡೆದವು. ಮಾಕ್ಸಮುಲ್ಲರ ಮಹಾಶಯನು ವೇದೋಪನಿಷತ್ತುಗಳ ಅಧ್ಯಯನಕ್ಕೆ ತನ್ನ ಇಡೀ ಆಯುಷ್ಯವನ್ನೇ ಅರ್ಪಿಸಿದನು. ಜೈನ-ಬೌದ್ಧ ದರ್ಶನಗಳು ಜರ್ಮನ್ ಪಂಡಿತರ ಚಿತ್ತಗಳನ್ನು ಸೆಳೆದವು. ಈ ಎಲ್ಲ ಸಂಗತಿಗಳು ಜರ್ಮನ್ ತತ್ತ್ವಜ್ಞಾನಿಗಳ ಜಾಗತಿಕ ದೃಷ್ಟಿಕೋನ (Weltan Schanung–Word–Viewpoint)ದ ಉದಯಕ್ಕೆ ನೆರವಾದವು. ಶೊಪೆನ್‌ಹಾವರ ಮಹಾಶಯನಿಗಂತೂ ಉಪನಿಷತ್ತುಗಳು ನವ-ಚೈತನ್ಯವನ್ನೇ ನೀಡಿ ಪರಮಚಿತ್ತಶಾಂತಿಯನ್ನು ಅವನ ಬಾಳಿಗೆ ಒದಗಿಸಿದವು. ಇದೊಂದು ಸ್ವತಂತ್ರ ವಿಷಯವೇ ಆಗಿರುವದರಿಂದ ವಿವರಗಳಿಗೆ ಇಲ್ಲಿ ಸ್ಥಳವಿಲ್ಲ. ಇಷ್ಟು ಮಾತ್ರ ನಿಜ, ಭಾರತೀಯ ವಿಚಾರಪ್ರಣಾಲಿ ಅನೇಕ ಜರ್ಮನ್ ಕಾದಂಬರಿಕಾರರ ಮತ್ತು ಕಾಂಟ್-ಥಾಮಸ್‌ಮನ್ನರಂಥ ತತ್ತ್ವಜ್ಞಾನಿಗಳ ಮೇಲೆ ಒಳ್ಳೇ ಪ್ರಭಾವ ಬೀರಿತೆಂಬುದನ್ನು ಉಲ್ಲೇಖಿಸಲೇಬೇಕು. ಅನೇಕರ ಕೃತಿಗಳಲ್ಲಿ ಭಾರತೀಯ ವಿಚಾರಗಳೂ ದೃಶ್ಯಗಳೂ ಅಲ್ಲಲ್ಲಿ ಕಾಣಿಸಿಕೊಂಡಿವೆ.

ಸ್ವೀಡನ್ ದೇಶದ ಟೆನ್ನರ್ ಮಹಾಶಯನ ಮೇಲೆ ಗಯಟೆ ಪ್ರಭಾವವಿದೆ. ರಶಿಯದ ಪುಸ್ಕಿನ್ ಮತ್ತು ಲೈರ್‌ಮಂಟ್ ಪ್ರಭೃತಿಗಳ ಮೇಲೆ ಜರ್ಮನ್ ಲೇಖಕರ ರಮ್ಯತಾಪ್ರಿಯತೆ ಪ್ರಭಾವ ಬೀರಿದೆ. ಹರ್ಡರ್ ಮತ್ತು ಸ್ಕೀಲರ್ ಎಂಬೀ ಜರ್ಮನ್ ಪ್ರತಿಭಾವಂತ ಲೇಖಕರಿಂದ ಪೋಲಂಡದ ಬ್ರ್ಯಾಂಡ್‌ಝಿಂಸ್ಕಿ ಮಹಾಶಯನು ಪ್ರಭಾವಿತನಾಗಿದ್ದಾನೆ. ಶೋಪೆನ್‌ಹಾವರನ ನಿರಾಶಾವಾದದ ಛಾಯೆ ಆಲ್‌ಫ್ರೆಡ್ ಡಿ ವಿಗ್ನಿ ಮಹಾಶಯನನ್ನೂ ಆವರಿಸಿದೆ. ಸ್ಕ್ಲೆಜೆಲ್ ಸಹೋದರರ ವರ್ಚಸ್ಸು ವ್ಹಿಕ್ಟರ ಹ್ಯೂಗೋನಲ್ಲಿ ಆಳವಾಗಿ ಇಳಿದಿದೆ. ಲಿಯೊಪರ್ಡಿ ಮತ್ತು ಫ್ರೊಸ್ಕೊಲೊ ಇವರ ಮೇಲೆ 'Werther' ಪ್ರಭಾವವಿದೆ. ಸ್ಪ್ಯಾನಿಶ್ ಲೇಖಕನಾದ ಡಿಯಾಲೋ ಮುಂಡೋ ಎಂಬವನ Faust', ಛಾಯೆ ಇದೆ. ಕೃತಿಯಲ್ಲಿ

ಬ್ರಿಟನ್ ದೇಶಕ್ಕೆ ಶೇಕ್ಸ್‌ಪಿಯರ್ ಹೇಗೋ ಜರ್ಮನಿಗೆ ಕೊಟ್‌ರ್ಶೆಬೂ ಮಹಾಕವಿಯೆನಿಸಿದ್ದಾನೆ. ಅವನು ಜರ್ಮನ್ ಶೇಕ್ಸ್‌ಪಿಯರ್ ಎಂದೇ ಖ್ಯಾತನಾಗಿದ್ದಾನೆ.

ಆಧುನಿಕ ಜಗತ್ತಿನಲ್ಲಿ ವಿಚಾರಗಳು ಅತಿ ತೀವ್ರವಾಗಿ ಪ್ರಯಾಣ ಮಾಡುತ್ತವೆ. ಎಲ್ಲಾ ದೇಶಗಳು ಅತಿ ಸಮೀಪವಾಗಿ ಕಾಣುತ್ತವೆ. ಇದರಿಂದಾಗಿ ಒಂದು ದೇಶದ ವಿಚಾರಪ್ರಣಾಲಿ ವಿದೇಶಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ರಾಷ್ಟ್ರ ರಾಷ್ಟ್ರಗಳಲ್ಲಿ ಪರಸ್ಪರ ತಿಳುವಳಿಕೆ ಹೆಚ್ಚಲು ವಾಙ್ಮಯವು ನೆರವಾಗಬೇಕೆಂದು ಎಲ್ಲರ ಅಪೇಕ್ಷೆಯಿದೆ. ಈ ಮೂಲಕ ಭಿನ್ನ ಭಿನ್ನ ಸಂಸ್ಕೃತಿಗಳ ಜನತೆಯಲ್ಲಿ ವಿಚಾರ ವಿನಿಮಯ ನಡೆದು ಸ್ಥಿರವಾದ ಶಾಂತಿ ಈ ಪೃಥ್ವಿಯ ಮೇಲೆ ನೆಲೆಗೊಳ್ಳುವುದು.

ವಾಙ್ಮಯ ಕ್ಷೇತ್ರದ ಆದ್ಯ ವ್ಯಕ್ತಿಗಳು

ಜರ್ಮನಿಯಲ್ಲಿ ಬೇರೆ ಬೇರೆ ಕಡೆ ಅನೇಕ ಸಾಹಿತ್ಯ ಕೇಂದ್ರಗಳು ಬೆಳೆದು ಬಂದವು. ಪ್ರತಿ ಕೇಂದ್ರದಲ್ಲೂ ಸಮಾನ ವಿಚಾರಶೀಲರ ಒಂದು ಗುಂಪು ಒಡಮೂಡುತ್ತ ವಾಙ್ಮಯಕ್ಷೇತ್ರದಲ್ಲಿ ಆ ಈ ಆಂದೋಲನಗಳು ಆರಂಭವಾದವು: ವಿದ್ಯೆಯ ಪುನರುಜ್ಜೀವನ (Renaissance), ಬುದ್ಧಿವಾದ (Rationalism), ಪರಂಪರಾವಾದ (Traditionalism), ರಮ್ಯತಾವಾದ (Romanticism), ಅಭಿಜಾತತಾವಾದ (Classicm), ವಾಸ್ತವತಾವಾದ (Raelism), ಸಂಕೇತವಾದ (Symbolism)ಮತ್ತು ಕೊನೆಯದಾಗಿ ಅಸ್ತಿತ್ವವಾದ (Existantialism)ಇತ್ಯಾದಿ.

ಕಾದಂಬರಿವಲಯದಲ್ಲಿ ಈ ಎಲ್ಲ ಪಂಥಗಳೂ ತಮ್ಮ ತಮ್ಮ ಪ್ರಭಾವ ಬೀರಿವೆ. ಇಂಥಿಂಥ ಪಂಥಗಳ ಪ್ರಭಾವ ಇಷ್ಟಿಷ್ಟು ಇಲ್ಲಿಯವರೆಗೆ ಎಂದು ಇತ್ಯರ್ಥ ಮಾಡುವದು ಸಾಧ್ಯವಿಲ್ಲ. ಯಾವುದೊಂದು ಪಂಥವೋ ವಿಚಾರಪ್ರಣಾಲಿಯೋ ಅತ್ಯಂತ ಪ್ರಭಾವಶಾಲಿಯಾದಾಗ ಅದಕ್ಕೆ ಪ್ರತಿಕ್ರಿಯೆಯೂ ಕಾಲಕಾಲಕ್ಕೆ ಉಂಟಾಗಿ ಹಳೆಯ ಪಂಥ ಹೊಸ ಹೆಸರಿನೊಂದಿಗೆ ಜೀವಂತವಾದುದೂ ಉಂಟು; ಉದಾ: ನವ–ರಮ್ಯತಾವಾದ (Neo-Romanticism).

ಈಗ ಕಾದಂಬರೀ ಪ್ರಪಂಚದಲ್ಲಿ ಮೊದಲಿಗರಾಗಿ ಕಾರ್ಯ ಮಾಡಿದ ಕೆಲವು ಜನ ಆದ್ಯ ವ್ಯಕ್ತಿಗಳ ಉಲ್ಲೇಖವನ್ನು ಮಾಡುವಾ. ಈ ಸಂದರ್ಭದಲ್ಲಿ ಆ ಸ್ಥಳದಲ್ಲಿ ಹೆಸರುಗಳಿಸಿದ ಕೆಲ ಸಾಹಿತ್ಯ ಕೇಂದ್ರಗಳನ್ನು ಉಲ್ಲೇಖಿಸುವುದು ಉಚಿತವೇ ಸರಿ.

i) **ವಿವಿಧ ಕೇಂದ್ರಗಳು :** ಹೆಡೆಲ್‌ಬರ್ಗ ಕೇಂದ್ರವು ಬ್ರೆಂಟ್ಯಾನೋ ಮತ್ತು ಆರ್ನಿಮರನ್ನು ಮುಂದೆ ತಂದಿತು. ii) **ಬರ್ಲಿನ್** ಕೇಂದ್ರವು ಕ್ಲೈಸ್ಟ್ ಮತ್ತು ಹಾಫ್‌ಮನ್‌ರನ್ನು ಒದಗಿಸಿತು. iii) **ಸ್ವೇಬಿಯಾ** ಕೇಂದ್ರವು ಆನ್‌ಲಂಡ್ ಮತ್ತು ಹಾಫ್ ಮಹಾಶಯರನ್ನು ಬೆಳಕಿಗೆ ತಂದಿತು. iv) **ಆಸ್ಟ್ರಿಯಾ** ಕೇಂದ್ರವು

ಗ್ರಿಲ್‌ಪರ್ಝರ್‌ಗ್ ಮಹಾಶಯನಿಗೆ ಜನ್ಮವಿತ್ತಿತು. v) **ಸಿಲೇಶಿಯಾ** ಕೇಂದ್ರದ ಪ್ರಮುಖ ವ್ಯಕ್ತಿಯೆಂದರೆ ಎಚೆನ್‌ಡಾರ್ಫ್. vi) **ಬರ್ನ** ಕೇಂದ್ರವು ಹ್ಯಾಲೆರ್ ಮಹಾಶಯನಿಗೆ ಆಶ್ರಯವಿತ್ತಿದೆ.

i) **ಕ್ಲೀಸ್ಟ್** : ಈತನು ನಾಟಕ ಕಾವ್ಯಗಳ ಜೊತೆಗೆ ಕಾದಂಬರಿಗಳನ್ನೂ ಬರೆದಿದ್ದಾನೆ. "ಮೈಕೆಲ್ ಕೊಹ್ಲಾಸ್ (Michael Kohlas)" ಎಂಬ ಈತನ ಕಾದಂಬರಿಗೆ ಒಂದು ವಾಸ್ತವ ಐತಿಹಾಸಿಕ ಕಥೆ ಆಧಾರವಾಗಿದೆ. ಈ ಕೃತಿಯ ನಾಯಕನಾದ ಕೊಹ್ಲಾಸನು ತನಗೆ ಪ್ರಾಪ್ತವಾದ ಮರಣ ಶಿಕ್ಷೆಯನ್ನು ಅತ್ಯಂತ ಸಂತೋಷದಿಂದಲೇ ಸ್ವೀಕರಿಸುತ್ತಾನೆ, ಒಬ್ಬ ಹುಟ್ಟಾ-ಗುನ್ಹೇದಾರನಂತೆ ಅಲ್ಲ. ಈ ಕೃತಿಯ ಕಥನ ಶೈಲಿ ಸರಳವೂ ವಾಸ್ತವವೂ ಆದುದರಿಂದ ಇದೊಂದು ಪ್ರಭಾವ ಶಾಲಿ ಅದ್ಭುತ ರಮ್ಯ ಕಾದಂಬರಿಯೆನಿಸಿದೆ.

ii) **ಎಚೆನ್‌ಡಾರ್ಫ್** (೧೭೮೮–೧೮೫೭) ಇವನ ಅತ್ಯಂತ ಪ್ರಸಿದ್ಧ ಕಾದಂಬರಿಯ ಹೆಸರೇ ವಿಚಿತ್ರವಾಗಿದೆ: "ಬಾತಿಗೆ ಬಾರದ ಒಂದು ಬಾಳಿನ ಕಥೆ (Story from the life of a good for nothing) ಇವನ ೨ ನೇ ಕಾದಂಬರಿಯೆಂದರೆ "Ahnung und Gegenwart (Presentiment and Present") ಎಂಬುದು. ಇದು ಅತ್ಯಂತ ಮಹತ್ವಾಕಾಂಕ್ಷೆಯ ಕೃತಿಗ್ರಂಥ; ಇಲ್ಲಿ ಲೇಖಕನ ಸಿದ್ಧಿಯನ್ನು ಅಳೆಯಬಾರದು. ಇವನ ಇನ್ನೊಂದು ಮಹತ್ತ್ವದ ಕೃತಿಯೆಂದರೆ "Franz Sternbalel" ಎಂಬ ಕಾದಂಬರಿ ಇದರಲ್ಲಿ ಎಂದೂ ಮುಗಿಯದ ವೈವಿಧ್ಯವನ್ನು ಚಿತ್ರಿಸುವ ವಿಚಾರಗಳ ಸರವನ್ನೇ ಲೇಖಕ ಬಿಚ್ಚುತ್ತ ಹೋಗುತ್ತಾನೆ. ಇವನಲ್ಲಿ ವಿಪುಲ ವಿಚಾರಗಳ ಸಂತೆಯೇ ನೆರೆಯುವುದುಂಟು. ಆಗ ವಾಕ್ಯ ರಚನೆ ಶಿಥಿಲವಾಗುತ್ತದೆ. ಈತ ನಾಟಕ ಕವಿತೆಗಳನ್ನು ಬರೆದಿದ್ದು ಅವೂ ಉತ್ತುಂಗ ಸ್ವರದಲ್ಲಿವೆ. ಇಂತು ಇವನೊಬ್ಬ ಅಮರ ಲೇಖಕ.

iii) **ಟೀಕ್** : ಇವನು ೧೭೯೮ರಲ್ಲಿ ಪ್ರಕಟಿಸಿದ ಪ್ರಥಮ ಕಾದಂಬರಿಯೆಂದರೆ ಉದ್ದೋಉದ್ದವಾದ ಹೆಸರುಳ್ಳ ಕೃತಿ "Franz Sternbalds Wanderungen-cine altdeutsche Geschichte". ರೋಮನ್ ವಿಚಾರಪ್ರಣಾಲಿಯ ಈ ಕಾದಂಬರಿ ಒಂದು ಆತ್ಮಕಥೆಯಂತೆ ಇದೆ. ಇದರಲ್ಲಿಯ ನಾಯಕನು ತನ್ನ ವಿದ್ಯಾರ್ಥಿ ದೆಸೆಯಲ್ಲಿ ತನ್ನಿಬ್ಬರು ಗೆಳೆಯರೊಡನೆ ನರ್ನಬರ್ಗಕ್ಕೆ ಸುಖವಿಹಾರ ಕೈಕೊಳ್ಳುತ್ತಾನೆ; ಅಲ್ಲಿಂದ ಕಥೆ ಆರಂಭವಾಗುತ್ತದೆ. ಅವರು ಅನೇಕ ದೇಶಗಳಿಗೆ ಸಂಚಾರ ಬೆಳೆಸುತ್ತಾರೆ. ಹೊಸಹೊಸ ಮಿತ್ರವೃಂದವೂ ಪ್ರೇಮದ ಪ್ರಸಂಗಗಳೂ ವಿವಿಧ ಅನುಭವ ಒದಗಿಸುವವು. ಗಯಟೆ ಮತ್ತು ಹೆಯಿನ್ ಪ್ರಭೃತಿಗಳ ಪ್ರಭಾವ ಈ ಲೇಖಕನ ಮೇಲೆ ತುಂಬಾ ಆಗಿದೆ. ಈ ಗ್ರಂಥ ತಾರುಣ್ಯದ ನವೋನವ ಉತ್ಸಾಹ, ಸೃಷ್ಟಿಸೌಂದರ್ಯದ ಉಕ್ಕುವ ಉಲ್ಲಾಸ ಇವುಗಳಿಂದ ಸಮೃದ್ಧವಾಗಿದೆ.

ಟೀಕ್ ಮಹಾಶಯನ ಇನ್ನೊಂದು ಸಿದ್ಧಿಯೆಂದರೆ ಯಕ್ಷಿಣೀ ಕಥಾರಚನೆ (Fairy Tales) ಜರ್ಮನ್ ಭಾಷೆಯಲ್ಲಿ ಇಂಥ ಕಥೆಗಳಿಗೆ 'Marchen–ಮಾರ್ಜೆನ್' ಎನ್ನುತ್ತಾರೆ. ಇಂಥ ೨ ಕಥೆಗಳ ಸಂಕಲನ ಗ್ರಂಥವನ್ನು 'Ritter Blanbar' ಎಂಬ ಹೆಸರಿನಿಂದ ಪ್ರಸಿದ್ಧಿಸಿದ್ದಾನೆ. 'Der blonde Eckehert' ಮತ್ತು 'Due Schone Mangelone' ಎಂಬೆರಡು ಯಕ್ಷಿಣೀ ಕಥೆಗಳು ಮನಮೋಹಕವಾಗಿವೆ. ವಿಡಂಬನವೂ ಹಾಸುಹೊಕ್ಕಾಗಿ ಬಂದಿದೆ. ತನ್ನ ಬುದ್ಧಿಯನ್ನೇ ಅಣಕವಾಡುವ ಪ್ರವೃತ್ತಿ ಇವನಲ್ಲಿ ಜಟಿವಾಗಿ ಬಿಟ್ಟಿತ್ತು. ಇದಕ್ಕೆ Romantic Irony (ಉಲ್ಲಾಸದ ಕೊಂಕುಮಾತು) ಎಂಬ ಹೆಸರಿದೆ. ಇದರಿಂದಾಗಿ ನಾಟಕೀಯ ಸನ್ನಿವೇಶಗಳಿಗೆ ಕಳೆ ಕಟ್ಟುತ್ತದೆ. ತನ್ನ ಕೃತಿಯಲ್ಲಿ ವ್ಯಕ್ತವಾದ ನೀತಿಯ ಮಾತುಗಳನ್ನೂ ಭಾವನೆಗಳನ್ನೂ ಕುರಿತು ಇವನು ಮೊದಲು ಆಳವಾಗಿ ಅಭ್ಯಾಸ ಮಾಡಿಯೇ ಬರೆಯುವುದುಂಟು. ಬೌದ್ಧಿಕ ವಿಡಂಬನೆ ಇವನದೊಂದು ವೈಶಿಷ್ಟ್ಯ. ತನ್ನ ಕಲ್ಪನಾವಿಲಾಸದ ಚೇಷ್ಟೆಯನ್ನು ತಾನೇ ಮಾಡಿ ವಾಚಕರನ್ನು ನಗಿಸುತ್ತಾನೆ. ರಮ್ಯತಾವಾದದ ಗುಂಪಿನ ವಿಶೇಷ ಲಕ್ಷಣವಿದು.

iv) ಗುಟ್ಜ್ ಕೌ (Gntz know- ೧೮೧೧ ರಿಂದ ೧೮೭೮) :- ಇವನ ಕಾದಂಬರಿ 'Doubting Lay : ಚಿಕಿತ್ಸಕ ಸ್ತ್ರೀ' ಎಂಬುದು ಸ್ತ್ರೀ ಸ್ವಾತಂತ್ರ್ಯವನ್ನು ಸೂಕ್ಷ್ಮವಾಗಿ ಪ್ರತಿಪಾದಿಸುತ್ತದೆ. ಈ ಗ್ರಂಥದ ನಾಯಕಿಯು ತನ್ನ ಪತಿಯ ಅನೇಕ ವಿಚಾರಗಳನ್ನು ಒಪ್ಪಿಕೊಳ್ಳುವುದಿಲ್ಲ. ಹೆಜ್ಜೆಹೆಜ್ಜೆಗೆ ಪತಿಯನ್ನು ಪ್ರತಿಭಟಿಸುತ್ತ ಅವನು ತನಗೆ ನಿಷ್ಕಾರಣವಾಗಿ ಕೊಡುವ ವೇದನೆಗಳನ್ನೂ ಅಪಮಾನಗಳನ್ನೂ ತಡೆದು ನಿಲ್ಲಿಸುತ್ತಾಳೆ. ಸ್ತ್ರೀಯರ ಉದಾತ್ತ ಸ್ವಭಾವವನ್ನೂ ಅವರ ಉಚ್ಚಪ್ರತಿಷ್ಠೆಯನ್ನೂ ಎತ್ತಿಹಿಡಿಯುತ್ತಾನೆ.

v) ಎ. ಬಿಟ್‌ಝಿಅಸ್– ಇವನ ಕಾವ್ಯನಾಮ J. Gottelt ಎಂಬುದಾಗಿದೆ (೧೭೯೭–೧೮೫೪). ಇವನು ಕಾದಂಬರಿಗಳ ಒಂದು ಮಾಲೆಯನ್ನೇ ರಚಿಸಿದ್ದಾನೆ. ಈತ ಮೂಲತಃ ಸ್ವಿಟ್ಜರ್ಲಂಡ್‌ದವನು. ಅಲ್ಲಿಯ ಪಾದ್ರಿ ಈತ. ಇವನ ಕಾದಂಬರಿಗಳೆಲ್ಲಾ ಉಪದೇಶಾತ್ಮಕವಾಗಿವೆ, ನೀತಿಪ್ರಧಾನವಾಗಿವೆ. ಆದರೆ ಇವನ ನಿರೀಕ್ಷಣಶಕ್ತಿ ವಸ್ತುನಿಷ್ಠವಾಗಿ, ಇವನ ಶೈಲಿ ಚುರುಕಾಗಿದೆ.

vi) ಬಿ. ಎಬರ್‌ಬಕ್ : ಈ ಗ್ರಂಥಕರ್ತನು ಸ್ವೇಬಿಯಾ ಪ್ರಾಂತದವನು. ಸ್ಪಿನೋಝಾನನ್ನು ಕುರಿತು ೧೮೩೭ ರಲ್ಲಿ ಒಂದು ಕಾದಂಬರಿಯನ್ನು ಬರೆದನು. ಅಲ್ಲದೆ ಗ್ರಾಮೀಣ ಕಥೆಗಳನ್ನೂ ಅವನು ಬರೆದಿದ್ದು ಈ ಕಥಾಸಂಕಲನವು ಆತನಿಗೆ ಕೀರ್ತಿಯನ್ನು ತಂದಿತು. ಪರಂಪರಾನಿಷ್ಠ ಆದರ್ಶವಾದವೂ ವಾಸ್ತವವಾದವೂ ಇವನ ಕೃತಿಯಲ್ಲಿ ಸಂಗಮಗೊಂಡಿವೆ. ಯುದ್ಧ ಮುಗಿದ ನಂತರ ಈತ 'ವಾಲ್ಡ್‌ಫೀಲ್ಡ್' ಎಂಬೊಂದು ರಾಜಕೀಯ ಕಾದಂಬರಿಯನ್ನು ರಚಿಸಿದ. ಇವನ ಕೊನೆಯ ಮೂರು

ಕೃತಿಗಳೆಂದರೆ ‘೩೦ ವರ್ಷಗಳ ಅನಂತರ (‘Aftar 30 years’) ‘ಅರಣ್ಯಪ್ರಭು (Forest Master)’ ಮತ್ತು ‘ಬ್ರಿಗಿಟ್ಟಲ್’ ಎಂಬವು (1879; 1880). ಈ ಎಲ್ಲ ಕೃತಿಗಳಲ್ಲಿ ಈತ ರೈತ ಜೀವನವನ್ನು ಯಥಾರ್ಥವಾಗಿ ಚಿತ್ರಿಸಿದ್ದಾನೆ. ಇವನ ‘Frau Professorin (Lady Professor)’ ಎಂಬ ಕಾದಂಬರಿ ನಾಟಕ ರೂಪದಲ್ಲೂ ಕಾಣಿಸಿಕೊಂಡು ರಂಗಭೂಮಿಯ ಮೇಲೆ ಅಭಿನಯಿಸಲ್ಪಟ್ಟಿತು. ನಾಟಕದ ಹೆಸರು ‘Dort Und Stadt (Village and Town—ಹಳ್ಳಿ ಮತ್ತು ಶಹರ) ಎಂಬುದಾಗಿ ಜನಪ್ರಿಯವಾಗಿದೆ. ಈತನ ಸಹೋದ್ಯೋಗಿಗಳಾದ Herman kurg (1815—80) ಮತ್ತು Melchior Meyor (1810-71) ಎಂಬಿಬ್ಬರು ಚಿಕ್ಕ ಕಾದಂಬರಿ (novellen)ಗಳನ್ನು ಬರೆದಿದ್ದಾರೆ.

vii) ಎ. ಸ್ಟಿಫ್ಟರ್ (1805—68) ಬೊಡೇಮಿಯಾ ಪ್ರಾಂತದ ಅರಣ್ಯ ಪ್ರದೇಶದಲ್ಲಿ ಜನಿಸಿದ ಈ ಲೇಖಕನು ತನ್ನ ‘Gay Stones’—Bunte Steine ಎಂಬ ಕಾದಂಬರಿಯಲ್ಲಿ ವರ್ಣಮಯ ನಿಸರ್ಗಸೌಂದರ್ಯವನ್ನು ಸಮೃದ್ಧವಾಗಿ ಬಣ್ಣಿಸಿದ್ದಾನೆ. ಕೆಲವು ಉಪದೇಶಾತ್ಮಕ ಕಾದಂಬರಿಗಳನ್ನೂ ಈತ ರಚಿಸಿದ್ದಾನೆ.

viii) ಎಫ್. ರೂಟರ್ (1810—74): ಈತನ ಆಯುಷ್ಯವು ಪ್ರಸಿಯಾ ಸರಕಾರದ ದಬ್ಬಾಳಿಕೆಯಿಂದ ಜರ್ಜರಿತವಾಯಿತು. ಆದರೂ ಯಾವ ಕಹಿ ಭಾವನೆಯನ್ನೂ ವಿಷಾದವನ್ನೂ ತಾಳದೆ ಈತ ತನ್ನ ಕೃತಿಗಳನ್ನು ಚಿತ್ತ ಸ್ಥೈರ್ಯದೊಡನೆ ರಚಿಸಿದನು. ಚಿಕ್ಕ ಚಿಕ್ಕ ಪ್ರಸಂಗಗಳನ್ನೂ ಕಥಾನಕಗಳನ್ನೂ ಸಂಗ್ರಹಿಸಿ ಪ್ರಕಟಿಸಿದ್ದಾನೆ. ಶೈಲಿಯಲ್ಲಿ ಇವನಿಗೆ ಮಾದರಿ ಪುರುಷನೆಂದರೆ ಡಿಕೆನ್ಸ ಮಹಾಶಯ. “Ut mine Stomlid” ಎಂಬೊಂದು ಅತಿ ದೀರ್ಘ ಕಾದಂಬರಿಯೊಂದನ್ನು ಈತ ಬರೆದಿದ್ದಾನೆ. ಇವನ ಕೃತಿಗಳಲ್ಲಿ ಅತಿಶಯೋಕ್ತಿ ಮತ್ತು ಭಾವನಾಪ್ರಧಾನತೆ ಎದ್ದು ಕಾಣುತ್ತವೆ; ಇವನು ಹೆಚ್ಚಾಗಿ ವಾಸ್ತವವಾದಿಯೇ. ಇವನ ಭಾಷೆ ಜರ್ಮನಿಯ ಒಂದು ಪ್ರಾದೇಶಿಕ ಭಾಷಾಪ್ರಕಾರವಾದ Platt-deutsch ಎಂಬುದಾಗಿದೆ.

ix) ಓ. ಲುಡ್‌ವಿಗ್ (1813—65): ಇವನು ಕಾದಂಬರಿಕಾರನಲ್ಲದೆ ನಾಟಕಕಾರನೂ ಹೌದು. ಇವನು ಚಿಕ್ಕಕಾದಂಬರೀ (Novellen) ಪ್ರಿಯನು. ಕೆಲವು ದೊಡ್ಡ ಕಾದಂಬರಿಗಳನ್ನೂ ಬರೆದಿದ್ದಾನೆ; ಅವೆಲ್ಲಾ ಗ್ರಾಮೀಣ ಜೀವನಕ್ಕೆ ಸಂಬಂಧಿಸಿದ್ದು ಅವುಗಳಲ್ಲಿ “Between Heaven & Earth” ಎಂಬುದು ಜನಪ್ರಿಯವಾಗಿದ್ದು ಅವನ ಅತ್ಯುತ್ತಮ ಕೃತಿಯೆನಿಸಿದೆ. ಒಬ್ಬಳೇ ಸ್ತ್ರೀಯನ್ನು ಇಬ್ಬರು ಸಹೋದರರು ಪ್ರೀತಿಸುವ ಕಥೆ ಇದರಲ್ಲಿದೆ. ‘ಯುವಕ ಜರ್ಮನಿಯ’ ವಿಚಾರ ಪ್ರಣಾಲಿಯಿಂದ ಇವನು ಪ್ರಭಾವಿತನಾಗಿದ್ದಾನೆ.

x) ಕತೆಗಾರ ಬ್ರೆಂಟಾನೋ: ಇವನು ಫ್ರ್ಯಾಂಕ್‌ಫರ್ಟ ಪ್ರಾಂತದಲ್ಲಿ ನೆಲೆಸಿದ ಒಂದು ಇಟಾಲಿಯನ್ ಕುಟುಂಬದಲ್ಲಿ ಜನಿಸಿದನು. ಹಿಡಲ್‌ಬರ್ಗ

ಕೇಂದ್ರದ ರಮ್ಯತಾ ಪಂಥದ ಲೇಖಕನು. ‘ನಾವೇನೂ ನೆರಳುಗಳಿಗೆ ಮರುಳಾಗುವವರಲ್ಲ, ನಮ್ಮವೇನೂ ದೊರಕದ ಹಂಬಲಗಳಲ್ಲ’ ಎಂಬೊಂದು ಇವನ ಹೇಳಿಕೆ ಪ್ರಸಿದ್ಧವಿದೆ. ಮಧ್ಯಯುಗದಲ್ಲಿಯ ಯುವಕರಂತೆ ಈತ ಎಲ್ಲೆಲ್ಲೋ ಅಲೆಯುತ್ತ ಸ್ಥಿರ ಜೀವನವನ್ನು ಹೊಂದಲಿಲ್ಲ.

ಟೀಕ್ ಮಹಾಶಯನ ವರ್ಚಸ್ಸು ಇವನಮೇಲೆ ಉಂಟಾಗಿದೆ; ‘Gusta Wasa’ ಎಂಬ ವಿಡಂಬನಪ್ರಧಾನ ಕೃತಿ ಇದಕ್ಕೆ ಉದಾಹರಣೆ. Godwi ಮತ್ತು Wer-wildert ಎಂಬ ಸಂಯುಕ್ತಕೃತಿ ಎರಡು ಸಂಪುಟಗಳಲ್ಲಿ ಪ್ರಕಟವಾಯಿತು. ಇದರಲ್ಲಿ ತಾರುಣ್ಯದ ಪ್ರಫುಲ್ಲ ವಿಚಾರಗಳಿಂದ ಕೂಡಿದ ಕಥಾವಸ್ತುವಿದೆ. ಸ್ವಾತಂತ್ರ್ಯದ ಆಂದೋಲನವು ಇವನನ್ನು ಜೇನಾಕ್ಕೆ ಕರೆದೊಯ್ದಿತು. ಕೊನೆಯಲ್ಲಿ ಹಿಡಲಬರ್ಗದಲ್ಲಿ ನೆಲೆಸಿದನು.

xi) ಸ್ಪೀಲ್‌ಹೆಗೆನ್ : ‘Ritter Vom Geiste’ ಎಂಬ ಇವನ ಕೃತಿ ಸ್ವಪ್ನದ ಕಲ್ಪನಾಲೋಕದ ವಿಚಾರಗಳಿಂದ ಕೂಡಿದೆ. ತನ್ನೀ ಕಾದಂಬರಿಗೆ ‘a novel of Tendeg (or dreams) ಎಂದೇ ಕರೆದಿದ್ದಾನೆ. ಅವನ ಇನ್ನೊಂದು ಕಾದಂಬರಿ Problematic natures (ಸಮಸ್ಯಾತ್ಮಕ ಸ್ವಭಾವಗಳು) ಎಂಬುದು ಇವನೊಬ್ಬ ಅರ್ವಾಚೀನ ಲೇಖಕನೆಂಬುದನ್ನು ಸ್ಪಷ್ಟಪಡಿಸುತ್ತದೆ. ‘ಕತ್ತಲೆಯಿಂದ ಬೆಳಕಿಗೆ Through night to Light’ ಎಂಬ ಕೃತಿಯೂ ಇನ್ನೆರಡು ಸಣ್ಣಕತೆಗಳೂ ಇವನನ್ನು ಒಬ್ಬ ಕ್ರಾಂತದರ್ಶಿ ಸಾಹಿತಿಯನ್ನಾಗಿ ಮಾಡಿವೆ. ೧೮೨೯ ರಲ್ಲಿ ಈತ ಜನಿಸಿದ್ದರೂ ಇವನ ವಿಚಾರಗಳೆಲ್ಲಾ ದೂರದ ಭವಿಷ್ಯತ್ತಿಗೆಸಂಬಂಧಿಸಿದ್ದವು.

xii) ರಿಚರ್ಡಾ ಡಚ್ (೧೮೬೪–೧೯೪೭): ಸ್ತ್ರೀ ಲೇಖಿಕೆಯರಲ್ಲಿ ಇವಳು ಅಗ್ರೇಸರಳು. ‘Memories of Ludolf ಲ್ಯುಡಾಲ್ಫನ ಸ್ಮೃತಿಗಳು’ ಎಂಬ ಇವಳ ಕೃತಿ ಗಣ್ಯಕೃತಿಯಾಗಿದೆ. ಇದರಲ್ಲಿಯ ನಾಯಕನು ಕುತ್ತಿನಿಂದ ಪಾರಾಗಿ ಕೊನೆಯಲ್ಲಿ ಪ್ರಶಾಂತ ಮಠ (Convent) ವೊಂದರಲ್ಲಿ ಆಶ್ರಯಪಡೆಯುತ್ತಾನೆ.

xiii) ಜಿ. ಫ್ರೈಟಾಕ್ (೧೮೧೬–೧೮೯೫): ಇವನ ಜನ್ಮ ಸಿಲೆಸಿಯಾ ಪ್ರಾಂತದಲ್ಲಿ ಆಯಿತು. ಬ್ರೆಸ್ಲಾ ಎಂಬ ನಗರದಲ್ಲಿ ಪ್ರಾಧ್ಯಾಪಕನಾಗಿದ್ದು ಇಡೀ ಆಯುಷ್ಯವನ್ನು ಗ್ರಂಥಲೇಖನಕ್ಕೆ ಮುಡುಪಿಟ್ಟನು. ‘Soll Und Heben’ ಎಂಬ ಹೆಸರಿನ ಇವನ ಕಾದಂಬರಿ ಅತ್ಯುತ್ತಮ ಕಾದಂಬರಿಯೆನಿಸಿದೆ. ಇದರಲ್ಲಿಯ ನಾಯಕನು ವಾಣಿಜ್ಯವೃತ್ತಿಯ ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. ಅಂದಿನ ಯುಗಪ್ರವೃತ್ತಿ ಈ ಕಾದಂಬರಿಯಲ್ಲಿ ಚೆನ್ನಾಗಿ ಒಡಮೂಡಿ ಬಂದಿದೆ. ಇವನ ಎರಡು ಐತಿಹಾಸಿಕ ಕಾದಂಬರಿಗಳೆಂದರೆ ‘Die Ahnen (Ancestors)’ ಮತ್ತು ‘Ingo und Ingraben’ ಎಂಬವು; ಇವು ಅನುಕ್ರಮವಾಗಿ ೪ ನೇ ಮತ್ತು ೮ ನೇ ಶತಕದ ರಾಷ್ಟ್ರೀಯ ಜೀವನವನ್ನು ಚಿತ್ರಿಸುತ್ತವೆ. ಇವನ ಐತಿಹಾಸಿಕ ವಾಸ್ತವ-

ಪ್ರಿಯತೆ ಇವನ ಇನ್ನೊಂದು ಕಾದಂಬರಿ 'Aus einer Kleiner Stadt- from a Small Town' ಚಿಕ್ಕ ನಗರದಿಂದ ಎಂಬುದರಲ್ಲಿಯೂ ಅಭಿವ್ಯಕ್ತವಾಗಿದೆ.

ಇಂತು ಇವನು 'ಯುವಕ ಜರ್ಮನಿಯ' ಪ್ರಾತಿನಿಧಿಕ ಲೇಖಕನಾಗಿದ್ದನು. ಈ ಮೊದಲು ಉಲ್ಲೇಖಿತವಾದ ಇವನ Soll Und Haben (Credit and Debit': ಆಯವ್ಯಯ) ಎಂಬ ಕಾದಂಬರಿಯಂತೂ ಯುವಕ ಜರ್ಮನಿಯ ಭಾವಾವೇಗದಿಂದ ಕೂಡಿದೆ. ಇದರ ನಾಯಕನು ತನ್ನಲ್ಲಿ ವಾಣಿಜ್ಯ ವೃತ್ತಿಯ ಸದ್ಗುಣಗಳನ್ನು ಅಳವಡಿಸಿಕೊಂಡು ಮುಂದಕ್ಕೆ ಬರುತ್ತಾನೆ. ತಾನೊಬ್ಬ ವಿನಮ್ರ ವರ್ತಕನಾಗಿದ್ದರೂ ಹ್ಯಾಂಬರ್ಗದ ಸುಪ್ರಸಿದ್ಧ ಶ್ರೀಮಂತ ವರ್ತಕನೊಡನೆ ಬೀಗ-ತನ ಉಂಟಾಗುತ್ತದೆ. ಇಲ್ಲಿ ಹಾಸ್ಯವೂ ಇದೆ; ಕಥಾವಸ್ತುವಿನ ಬೆಳವಣಿಗೆ ಕೌಶಲ್ಯಮಯವಾಗಿದೆ. ಇವನ ಇನ್ನಿತರ ಕೃತಿಗಳಲ್ಲಿ 'The Lost Manuscript: ಕಳೆದುಹೋದ ಹಸ್ತಪ್ರತಿ' ಎಂಬುದು ಗಣ್ಯಕೃತಿಯಾಗಿದೆ. ಅಂತೂ ಇವನೊಬ್ಬ 'ಯುವಕ ಜರ್ಮನಿ' ಗುಂಪಿನ ಖ್ಯಾತ ಲೇಖಕ.

xiv) ಸಾಆರ್ : ಈ ಮಹಾಶಯನು ಆಸ್ಟ್ರಿಯಾ ಪ್ರದೇಶವನು ಇವನು ೧೮೭೭ ಮತ್ತು ೧೮೯೭ ರಲ್ಲಿ ಚಿಕ್ಕ ಕಾದಂಬರಿ (Novelle) ಪ್ರಕಾರದ ೨ ಸಂಪುಟ ಗಳನ್ನು 'Novellen' ಎಂಬ ಶೀರ್ಷಿಕೆಯಿತ್ತು ಪ್ರಕಟಿಸಿದನು. ಈ ಕೃತಿಗಳಲ್ಲಿಯ ವಾತಾವರಣವು ಗಂಭೀರವೂ ನಿರಾಶಾಮಯವೂ ಆಗಿದೆ.

xv) ಇತರ ಲೇಖಕರು: ಆಸ್ಟ್ರಿಯಾ ಪ್ರದೇಶದ ಇನ್ನೊಂದು ದೊಡ್ಡ ಹೆಸ-ರೆಂದರೆ ಶ್ರೀಮತಿ ಮೇರಿ ವ್ಹಾನ್ ಎಬ್ನರ್ ಎಂಬಾಕೆ. ಆಕೆಯ ಪ್ರತಿಭೆ ಕಾದಂಬರಿ ಗಳಲ್ಲಿ ಮುಖ್ಯವಾಗಿ ವ್ಯಕ್ತವಾಗಿದೆಯಾದರೂ ಆಕೆ ನಾಟಕಗಳನ್ನೂ ಬರೆ-ದಿದ್ದಾಳೆ. ಆಕೆಯ ಮೂರು ಕಾದಂಬರಿಗಳು ಉಲ್ಲೇಖಿಸಲಿಕ್ಕೆ ಯೋಗ್ಯವಾಗಿವೆ i) 'ಬೋಝುನಾ' ಎಂಬುದು ಸಮೃದ್ಧ ನಿಸರ್ಗರಮಣೀಯತೆಗೆ ಹೆಸರಾಗಿದೆ. ತನ್ನ ತವರುನಾಡಿನ ಪ್ರಕೃತಿದೇವಿಯ ಚೆಲುವನ್ನು ತುಂಬಾ ವರ್ಣಿಸಿದ್ದಾಳೆ. ii) Das Gemeindeking (Parish Chield) ಮತ್ತು iii) Vnsuhnbor (Unattona-ble) ಈ ಎರಡು ಕೃತಿಗಳು ಅವಳ ದೀರ್ಘತರ ಕಾದಂಬರಿಗಳಾಗಿದ್ದು ಜಾಣ್ಮೆಯ ನಗೆಯ ಸಂನಿವೇಶಗಳು ಅವುಗಳಲ್ಲಿ ವಿಪುಲವಾಗಿವೆ.

'ಯುವಕ ಜರ್ಮನಿ' ಗುಂಪಿನ ಇತರ ಕಾದಂಬರಿಕಾರರು, ಯಾರೆಂದರೆ ಬಾರ್ನ್, ಶುನ್, ಲಾಫ್,, ಸ್ಕಾಟ್ರ್, ಶುಟ್‌ರೂವ್, ಪಾಲ್ ಹೆಸೇ ಮತ್ತು ಥಿಯೋಡರ್ ಸ್ಟಾರ್ಮ್ ಪ್ರಭೃತಿಗಳು ಕೊನೆಯ ಇಬ್ಬರು Novelle – ಚಿಕ್ಕ ಕಾದಂಬರಿ ಪ್ರಕಾರದಲ್ಲಿ ತಜ್ಞರೇ ಸರಿ. ಸೂಕ್ಷ್ಮ ಮಾನಸಿಕ ವ್ಯಾಪಾರಗಳ ವಿವರ ಗಳನ್ನು ಇತ್ತು ಮಾನವೀಯ ಹೃದಯಸ್ಪರ್ಶವನ್ನು ಎದ್ದಾಗಿ ಚಿತ್ರಿಸುವುದರಲ್ಲಿ ಇವರದು ಎತ್ತಿದ ಕೈ.

xvi) ಮೋರಿಕೆ ಮತ್ತು ಇತರ ಲೇಖಕರು (ಸ್ವೆಬಿಯಾವಲಯದ ಕೊಡುಗೆ):

ಮೋರಿಕೆ ಮಹಾಶಯನು ಸ್ವೆಬಿಯಾದ ಅತಿದೊಡ್ಡ ಸಾಹಿತಿ. ಅವನ "Maller Nolten (Painter Nolten) ಎಂಬ ಕೃತಿ ಅಪೂರ್ಣವಾಗಿ ಉಳಿದಿದ್ದರೂ ಅತ್ಯಂತ ಮಹತ್ವಾಕಾಂಕ್ಷೆಯ ಪ್ರತೀಕವಾಗಿದೆ. ೧೮೩೨ ರಲ್ಲಿ ಕಾವ್ಯಮಯ ಆಕರ್ಷಣಪೂರ್ಣ ಈ ಕೃತಿ ಪ್ರಕಟವಾಯಿತು. ಆಧುನಿಕ ಕಾಲದ ಕಾದಂಬರಿಯ ಲಕ್ಷಣಗಳು ಯಾವವೂ ಇದರಲ್ಲಿ ಕಂಡುಬರುವುದಿಲ್ಲ. ಆದರೂ ಇದೊಂದು ವಿಶಿಷ್ಟ ಕೃತಿ. ರಮ್ಯತಾವಾದದ ವಿಚಾರ ಪ್ರಣಾಲಿಯ ಫಲವೇ ಇದು ಎಂದು ತೋರಿದರೂ ಇದಕ್ಕೆ ವಿಶಿಷ್ಟ ಪ್ರಕಾರದ ರೂಪವೇ ಇಲ್ಲ. ಕಥಾವಸ್ತುವೂ ಪೂರ್ಣತೆಯನ್ನು ಪಡೆದಿಲ್ಲ. ಘಟನೆಗಳು ಕಾಲಕ್ರಮದಲ್ಲಿ ಹೆಣೆಯಲ್ಪಟ್ಟಿಲ್ಲ. ಆದರೂ ಕಾಲ್ಪನಿಕ ಪಾತ್ರಗಳ ಅಯ್ಕೆಯಲ್ಲಿ ಕೌಶಲ್ಯ ಕಂಡುಬರುತ್ತದೆ; ಆಯಾ ಪಾತ್ರಗಳು ಅನುಭವ ಗಳಿಂದ ಜೀವಂತವಾಗಿವೆ. ಮಾನವೀಯ ಕೃತಿಗಳ ನೆಲೆಗಳು ಎಲ್ಲಿವೆಯೆಂಬುದನ್ನು ಗ್ರಂಥಕರ್ತ ಸೂಕ್ಷ್ಮವಾಗಿ ನಿರೂಪಿಸುತ್ತಾನೆ. ಗಯಟೆ ವಿರಚಿತ 'Wibheem Meister' ಮತ್ತು ಇತರ ಗ್ರಂಥಗಳು ಮೋರಿಕೆ ಮಹಾಶಯನ ಈ ಕೃತಿಗೆ ಮಾದರಿ ಗ್ರಂಥಗಳಾಗಿವೆ. ವಾಡಿಕೆಯ ಅನ್ಯೋಕ್ತಿಗಳೂ ದೀರ್ಘ ವರ್ಣನೆಗಳೂ ಈ ಕಾದಂಬರಿಯಲ್ಲಿ ಮನರಂಜನೆಯನ್ನು ಉಂಟುಮಾಡುವುದಿಲ್ಲ. ಹೀಗಿದ್ದರೂ, ರಮ್ಯತಾ ಪಂಥದ ಕಥನ ಸಾಹಿತ್ಯದ ಚರಿತ್ರೆಯಲ್ಲಿ ಈ ಕೃತಿ ಒಂದು ಮೈಲಿಗಲ್ಲು ಎನಿಸಿದೆ. ಮುಂದೆ ಗಾಟ್‌ಫ್ರೀಡ್ ಕೆಲ್ಲರನ "Der grune Heinrich" ಕಾದಂಬರಿ ಪ್ರಕಾಶಕ್ಕೆ ಬರುವವರೆಗೂ 'Melter Nolten' ಗ್ರಂಥವೇ ಹಿರಿಮೆಯುಳ್ಳ ಕೃತಿ ಯಾಗಿತ್ತು. ಮುಂದೆ ೧೮೪೯ ರಲ್ಲಿ ಸಣ್ಣಕತೆಗಳು ಕಾಣಿಸಿಕೊಂಡವು: "ನಾವೆಲೆ" ಪ್ರಕಾರವೂ 'ಮಾರ್ಚೆನ್' ಪ್ರಕಾರವೂ ಜರ್ಮನ್ ವಾಙ್ಮಯದ ಕಥನ ಸಾಹಿತ್ಯ ವಲಯದಲ್ಲಿ ವಿಶಿಷ್ಟ ಸಾಹಿತ್ಯ ಪ್ರಕಾರಗಳೆನಿಸಿದವು.

"ನಾವೆಲೆ (ಚಿಕ್ಕ ಕಾದಂಬರಿ)" ಪ್ರಕಾರವು ಲೇಖಕರಿಗೆ ಬಲು ಹಾಳತಾದ ಪ್ರಕಾರವೆನಿಸಿತು. ಕಾಲದ ಅವಧಿ ಮತ್ತು ಕಥಾವಸ್ತುವಿನ ರಚನೆ ಎಂಬೀ ಅಂಶ ಗಳು "ನಾವೆಲೆ"ಯನ್ನು ಜನಪ್ರಿಯಗೊಳಿಸಿದವು.

ಸ್ವೆಬಿಯಾ ವಲಯದಲ್ಲಿ ಮೋರಿಕೆ ಮಹಾಶಯನ ತರುವಾಯ ದೊಡ್ಡ ಲೇಖ ಕರು ಯಾರೆಂದರೆ ಆರ್‌ಲಂಡ್, ಕರ್ನರ್ ಮತ್ತು ಹಾಫ್ ಪ್ರಭೃತಿಗಳೇ ಸರಿ.

xvii) ಕುರ್ಝ್ ಮತ್ತು ಇತರ ಲೇಖಕರು (ಹಿಡಲ್‌ಬರ್ಗ ಕೇಂದ್ರದ ಕೊಡುಗೆ)

i) ಹರ್ಮನ್‌ಕುರ್ಝ್ ಮಹಾಶಯನು ಅತ್ಯುತ್ತಮ ಐತಿಹಾಸಿಕ ರಮ್ಯ ಕಾದಂಬರಿಗಳನ್ನು ಬರೆದಿದ್ದಾನೆ. ಅವುಗಳಲ್ಲಿ 'Sehillers Heimat-jahre' (ಶಿಲ್ಲರನ ಗೃಹಜೀವನ) ಎಂಬೊಂದು ಕೃತಿ ೧೮೪೩ರಲ್ಲಿ ಪ್ರಕಟವಾದುದು ಗಣ್ಯ ಕೃತಿ

ಯಾಗಿದೆ. ಈತನು ಅನೇಕ ಸಣ್ಣಕತೆಗಳನ್ನೂ ಬರೆದಿದ್ದಾನೆ. ii) ಹಿಡಲ್‌ಬರ್ಗ್ ಕೇಂದ್ರದ ಇನ್ನೊಬ್ಬ ಲೇಖಕನೆಂದರೆ ಪ್ರೊ. ಎಫ್. ಟಿ. ವಿಶ್ಚರ್ ಮಹಾಶಯನು. ಆತನು ೧೮೫೫ರಲ್ಲಿ 'Der Sonnen-Wirth' ಎಂಬ ಕೃತಿಯನ್ನು ಪ್ರಕಟಿಸಿದನು. ಇದರಲ್ಲಿ ತರುಣ ಶಿಲ್ಲರನು ವುಂಟೆಕ್‌ಬರ್ಗದಲ್ಲಿ ಇದ್ದಾಗ ಅವನು ಗೈದ ಸಾಹಸಗಳನ್ನು ಬಣ್ಣಿಸಲಾಗಿದೆ. (೧೮೬೮–೭೪ರ ಅವಧಿ). ವಿಶ್ಚರನು 'Auch Einer (One More) ಎಂಬ ಹಾಸ್ಯ-ವಿಡಂಬನೆಗಳಿಂದ ಕೂಡಿದ ಕಾದಂಬರಿಯೊಂದನ್ನು ಬರೆದಿದ್ದಾನೆ. ಈ ಲೇಖಕನು ಸೌಂದರ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಸ್ಟಡ್-ಗರ್ಟ ಎಂಬ ನಗರದಲ್ಲಿ ಬಹುಕಾಲ ನೆಲೆಸಿದ್ದನು. ಮುಂದೆ ಈತ ಧಾರ್ಮಿಕ ಕಾವ್ಯವೊಂದನ್ನು 'Leben yesu'— ಯೇಸುವಿನ ಚರಿತ್ರೆಯ ಬಗ್ಗೆ ಬರೆದನು. ಇವನಿಗೆ ಗಯಟೆ ಮಹಾಶಯನೇ ಆದರ್ಶ ಪುರುಷನಾಗಿದ್ದನು. "ಸತ್ಯಂ ಶಿವಂ ಸುಂದರಂ-Lie in entirity, good ness and beauty" ಎಂಬ ಗಯಟೇ ವಿರಚಿತ ಬೋಧೆಯನ್ನು ಅನುಸರಿಸಿದನು.

ii) ಹಿಡಲ್‌ಬರ್ಗ ಕೇಂದ್ರದ ಇನ್ನೊಂದು ಗಣ್ಯ ಹೆಸರೆಂದರೆ ಈ ಮೊದಲೇ ಉಲ್ಲೇಖಿಸಿದ ಇಮ್ಮರ್‌ಮನ್ ಮಹಾಶಯನದು. ರೈತರ ಜೀವನದ ಕೈವಾರಿಯಾದ ಆತ 'Der oberhof' ಎಂಬ ಕಾದಂಬರಿ ಬರೆದು ಖ್ಯಾತನಾಗಿದ್ದಾನೆ. ಈ ಕೇಂದ್ರದ ಇನ್ನಿಬ್ಬರು ಲೇಖಕರೆಂದರೆ ಆರ್ಮಿನ್ ಮತ್ತು ಬ್ರೆಂಟೋ ಪ್ರಭೃತಿಗಳು. ಇವರು ಇಮ್ಮರ್‌ಮನ್‌ನಿಗಿಂತ ಮೊದಲು ರೈತಜೀವನವನ್ನು ಚಿತ್ರಿಸಿದ ಲೇಖಕರಾಗಿದ್ದಾರೆ. ಆದರೆ ಇಮ್ಮರ್‌ಮನ್ನನ ಕೃತಿಯೇ ಗ್ರಾಮೀಣ ಜೀವನದ ನಿರೂಪಣೆಯಲ್ಲಿ ಅತಿ ಮಹತ್ವದ ಮೈಲಿಗಲ್ಲು. ಏಕೆಂದರೆ ಯುವಕ ಜರ್ಮನಿಯ ಜನತಾ ಆಂದೋಲನವನ್ನು ಸಮರ್ಥಿಸಿದವರಲ್ಲಿ ಆತನು ಪ್ರಮುಖವ್ಯಕ್ತಿಯಾಗಿದ್ದಾನೆ.


iii) ಯಕ್ಷಿಣೀ ಕಥಾಪ್ರಕಾರ- Marchen ಎಂಬುದರಲ್ಲೂ ಹಿಡೆಲ್‌ಬರ್ಗ್ ಕೇಂದ್ರದ ಲೇಖಕರು ಕೃಷಿಗೈದಿದ್ದಾರೆ. ಆಧಿದೈವಿಕ ಶಕ್ತಿಗಳು ದೀನರ ಮತ್ತು ನಾಯಕ-ನಾಯಕಿಯರ ಜೀವನದಲ್ಲಿ ವಿಚಿತ್ರರೀತಿಯಲ್ಲಿ ಮಾರ್ಗದರ್ಶನ ಮಾಡುತ್ತವೆ ಎಂಬ ಅಂಶವನ್ನು ಎತ್ತಿ ತೋರಿಸುವುದೇ ಈ ಕಥಾಪ್ರಕಾರದ ವೈಶಿಷ್ಟ್ಯವಾಗಿದೆ. ಜೇಕಬ್ ಮತ್ತು ವಿಲ್‌ಹೆಲ್ಮ್ ಗ್ರಿಮ್ ಸೋದರರಿಬ್ಬರು ಇಂಥ ಯಕ್ಷಿಣೀ ಕಥೆಗಳ ಸಂಗ್ರಹವನ್ನು ಕೈಕೊಂಡು ಅವನ್ನು ಪ್ರಕಟಿಸಿದರು. ಅವು ಈಗ ಜಗತ್ ಪ್ರಸಿದ್ಧವಾಗಿವೆ.



ಲಕ್ಷಾವಧಿ ಹೃದಯಗಳನ್ನು ಮಿಡಿದ ಕಾದಂಬರಿಕಾರ
ಕೃಷ್ಣಮೂರ್ತಿ ಪುರಾಣಿಕರು



ಕೃಷ್ಣಮೂರ್ತಿಯವರಿಗೆ ಜನ್ಮವಿತ್ತ ಪುಣ್ಯಜೀವಿಗಳು: ತಮ್ಮಣ್ಣಭಟ್ಟರು-ಲಕ್ಷ್ಮಂಬಾಯಿ.



ಅವಿರತ ಸಾಹಿತ್ಯವಾಹಿನಿ



ಪುರಾಣಿಕರ ಬಾಲ್ಯ ಸ್ನೇಹಿತರು



ಪುರಾಣಿಕ ದಂಪತಿಗಳು: ಕೃಷ್ಣಮೂರ್ತಿ–ಗಂಗಾತಾಯಿ



ತರುಣ ಕೃಷ್ಣಮೂರ್ತಿ



ಕಾದಂಬರಿಕಾರ

ಶ್ರೀ ಕೃಷ್ಣಮೂರ್ತಿ ಪುರಾಣಿಕರು

ಜೀವನ ಚಿತ್ರ

ಶ್ರೀ ಕೃಷ್ಣಮೂರ್ತಿ ಪುರಾಣಿಕರು

ಶಂಕರ ಪಾಟೀಲ

"ಪುರಾಣಿಕರು ನೂರಕ್ಕೆ ನೂರರಷ್ಟು ಸದ್ಗೃಹಸ್ಥರು. ಅವರ ದುಂಡ ಮುಖ, ಅವರ ಮಂದಸ್ಮಿತ, ಅವರ ಪ್ರಶಾಂತ ದೃಷ್ಟಿ, ಅವರ ಸ್ನೇಹ ಪೂರ್ಣ ವಾಣಿ, ಅವರ ವಿನಯಪೂರ್ಣ ವರ್ತನೆ, ಎಲ್ಲವೂ ಮರೆಯಲಾರದಂಥವು. ಬರವಣಿಗೆಯಂತೆಯೇ ವ್ಯಕ್ತಿತ್ವವೂ ಅವರಿಗೆ ಸಹಜವಾಗಿ ಸಾಧಿಸಿದೆ. ಉತ್ತರ ಕರ್ನಾಟಕದ ಜನರಿಗೆ ಸ್ವಾಭಾವಿಕವಾದ ಧೀರ ನಿಲುವಿನಲ್ಲಿ ನಿಂತು ಅವರು ನಿರರ್ಗಳವಾಗಿ ಮಾತನಾಡತೊಡಗಿದರೆಂದರೆ ಸಾವಿರಾರು ಜನರ ಸಭೆ ಮಂತ್ರಮುಗ್ಧವಾಗಿ ಅವರನ್ನು ಆಲಿಸುತ್ತದೆ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದಿ, ಗೋಕಾಕದ ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡುತ್ತಿರುವ ಶ್ರೀಕೃಷ್ಣಮೂರ್ತಿ ಪುರಾಣಿಕರು ಇಂದಿನ ಜನಪ್ರಿಯ'ಕಾದಂಬರಿಕಾರರಲ್ಲೊಬ್ಬರು. ಅಲ್ಪಾವಧಿಯಲ್ಲಿಯೇ ಅರವತ್ತು ಎಪ್ಪತ್ತು ಕಾದಂಬರಿಗಳನ್ನು ರಚಿಸಿದ ಕೀರ್ತಿ ಅವರದು. ಮಹಿಳೆಯರು ಹಾಗೂ ಮಕ್ಕಳಂತೂ ಪುರಾಣಿಕರ ಕಾದಂಬರಿಗಳೆಂದರೆ ತುಂಬ ಪ್ರೀತಿ. ಮಧ್ಯಮ ವರ್ಗದ ಸಾಮಾನ್ಯ ಜನರಿಗೆ ಪರಿಚಿತವಾದ ಘಟನೆಗಳನ್ನು ಅವರು ಸರಳವಾದ ಶೈಲಿಯಲ್ಲಿ ಚಿತ್ರಿಸುವುದೇ ಅದಕ್ಕೆ ಕಾರಣ. ಅವರ ಹಲವಾರು ಕಾದಂಬರಿಗಳು ಇತ್ತೀಚೆಗೆ ಚಲನ ಚಿತ್ರ ರೂಪ ತಳೆದಿವೆ."

ಆರು ವರುಷಗಳ ಪೂರ್ವದಲ್ಲಿ (೧೯೬೮ ಅಕ್ಟೋಬರ ೨೭) ಕನ್ನಡದ ಇನ್ನೊಬ್ಬ ಖ್ಯಾತ ಕಾದಂಬರಿಕಾರರೆನಿಸಿದ ಶ್ರೀ ಬಸವರಾಜ ಕಟ್ಟೀಮನಿಯವರು ಕರ್ಮವೀರದಲ್ಲಿ ತಾವು ನಿಯಮಿತವಾಗಿ ಬರೆಯುತ್ತಿದ್ದ 'ಶಾಸಕ ಸಂಪುಟದಿಂದ' ವಿಭಾಗದಲ್ಲಿ ಬರೆದ ಮಾತುಗಳಿವು. ಕೃಷ್ಣಮೂರ್ತಿ ಪುರಾಣಿಕ ಅವರ ಬಗೆಗೆ ಬರೆದ ಈ ಮಾತುಗಳಲ್ಲಿ ಸ್ವಲ್ಪವೂ ಅತಿಶಯೋಕ್ತಿ ಇಲ್ಲ- ಇವು ಎಂದೆಂದಿಗೂ ಸತ್ಯವಾದ ಮಾತುಗಳು–ಅಂದಿಗೂ ಇಂದಿಗೂ, ಅದೇಕೆ ಮುಂದೂ ಕೂಡ. ಅಂಥ ಒಂದು ವಿಶಿಷ್ಟ ಬಗೆಯ ಕಾದಂಬರಿ ಸಾಹಿತ್ಯವನ್ನು, ಕಥಾವಾಹಿನಿಯನ್ನು, ಕಾವ್ಯಗಂಗೆಯನ್ನು, ಗೀತನಾಟಕಗಳನ್ನು ಅವರು ಸೃಷ್ಟಿಸಿದ್ದಾರೆ, ಸೃಷ್ಟಿಸುತ್ತಾರೆ. ನೂರಕ್ಕೂ ಮಿಕ್ಕಿ ಅಪರೂಪವಾದ, ಅಪೂರ್ವವಾಗಿರುವ ಕೃತಿಗಳನ್ನು ಕನ್ನಡಿಗರಿಗವರು ನೀಡಿದ್ದಾರೆ. ಇಂಥ ವಿಶಿಷ್ಟತೆ ಅವರಲ್ಲಿ ಹೇಗೆ ಮೂಡಿಬಂತು? ಇಂಥ ಒಂದು ಸಾಂಸ್ಕೃತಿಕ ಪರಿಸರವನ್ನು ಅವರು ಹೇಗೆ ರೂಪಿಸುತ್ತಿದ್ದಾರೆ. ಭಾರತೀಯ ಸಂಸ್ಕೃತಿ, ಅದನ್ನು ಆಧರಿಸಿ ನಿಂತ ಆದರ್ಶ ಕನಸು ಅವರ ಕೃತಿಗಳಲ್ಲಿ ಹೇಗೆ ಮೂಡಿ ನಿಲ್ಲುತ್ತಿವೆ? ಅವರ ಪಾತ್ರಗಳು ಒಳ್ಳೇ ಸಂಸ್ಕಾರವನ್ನು ಹೇಗೆ ಪಡೆದಿರುತ್ತವೆ? ಪ್ರಾಮುಖ್ಯವಾಗಿ ಸ್ತ್ರೀ

ಪಾತ್ರಗಳು ತೋರುತ್ತಿರುವ ಸಂಸ್ಕಾರದ ಘನತೆಗೆ, ಸಂಸ್ಕೃತಿಯ ಹಿರಿಮೆಗೆ ಕಾರಣವೇನಾಗಿರಬೇಕು ಎಂಬ ಕುತೂಹಲ ಮೂಡುವದು ಸ್ವಾಭಾವಿಕವೆ! ಅದೇಕೆ ಅವರ ನಡೆಯಲ್ಲಿ-ನುಡಿಯಲ್ಲಿ ಭಾರತೀಯ ಸಂಸ್ಕೃತಿಯ ಬಗೆಗೆ ಮೂಡಿ ನಿಂತ ಉದಾತ್ತ ಅಭಿಮಾನ ಕೂಡ ಏಕೆ ಹೇಗೆ ಎಂಬ ಕುತೂಹಲಕ್ಕೆ ಎಡೆಮಾಡಿಕೊಡುತ್ತದೆ.

ಶ್ರೀ ಕೃಷ್ಣಮೂರ್ತಿ ಪುರಾಣಿಕರು ಭಾರತೀಯ ಸಂಸ್ಕೃತಿಯ ಇಂಥ ಒಂದು ಅಭಿಮಾನದ ಮೂರ್ತಿಯಾಗಿ ನಿಂತಿರುವದರ ರಹಸ್ಯವನ್ನು ಅರಿಯಲು ನಾವು ದೂರ ಹೋಗಬೇಕಾಗಿಲ್ಲ. ಅದು ಅವರಲ್ಲಿ ಮೂಡಿನಿಂತುದು, ಬೆಳೆದು ಬಂದುದು, ಅವಗತವಾದುದು, ಸಂಸ್ಕಾರ ಬಲದಿಂದಲೇ. ಅವರ ತಂದೆ ತಾಯಿಗಳಿಂದ ಈ ಬಳುವಳಿಯನ್ನು ಅವರು ಪಡೆದು ಬಂದರು; ಅದನ್ನು ಆತ್ಮಸಾತ್ತಾಗಿ ಮಾಡಿಕೊಂಡರು. ಇವರ ತಂದೆ ಅಜ್ಜ ವಿಜಾಪೂರ ಜಿಲ್ಲೆಯ ಬೀಳಗಿಯವರು. ತಾಯಿ ಕೆರೂರ ಮನೆ-ತನದವಳು. ಆ ಎರಡೂ ಮನೆತನದವರು ತುಂಬ ಸಾತ್ವಿಕರು. ವೈದಿಕ ಮನೆತನದವರು. ಒಳ್ಳೇ ಕರ್ಮಠರು. ಹಾಗೆಂದು ಜೀವನವನ್ನು ಅರಿತವರಲ್ಲವೆಂದಲ್ಲ. ಅದರ ಸುಖದುಃಖಗಳ ಪೂರ್ಣ ಪರಿಚಯವನ್ನು ಈ ಹಿರಿಯರು ಹೊಂದಿದ್ದರು. ಊರವರಿಗೆ ಅವರು ತುಂಬ ಬೇಕಾದವರಾಗಿದ್ದರು. ಅರವತ್ತು ವರುಷಗಳ ಹಿಂದೆ ಇವರ ಅಜ್ಜ ವೈದಿಕ ವೃತ್ತಿಯಿಂದಲೇ, ಉಜ್ವಲವಾಗಿ ಜೀವನ ಸಾಗಿಸಿದರು. ಸುತ್ತ ಮುತ್ತಲಿನ ಜನರಿಗೆ ಅವರ ವಿದ್ವತ್ತಿನ ಪರಿಚಯವಿತ್ತು. ಅವರ ವೈದಿಕ ವಿದ್ಯೆಯ ಪರಿಣತಿ ಜನಜನಿತವಾಗಿತ್ತು. ಅವರು ತಮ್ಮ ಇಬ್ಬರು ಮಕ್ಕಳಿಗೂ ಈ ವಿದ್ಯೆಯನ್ನು ಅರಿದು ಕುಡಿಸಿದ್ದರು. ಹಿರಿಯ ಮಗನಂತೂ ತಂದೆಯೊಂದಿಗೆ ಈ ವಿದ್ಯೆಯಲ್ಲಿ ಪಳಗಿದವನಾಗಿದ್ದನು. ಅವನೂ ತಂದೆಯಂತೆ ವೈದಿಕ ವೃತ್ತಿಯನ್ನು ಅನು-ಸರಿಸಿ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದನು. ಕಿರಿಯ ಮಗನಿಗೆ, ಅದು ತಂದೆಗೆ ಏನು ತಿಳಿಯಿತೊ ಏನೊ! ಅಥವಾ ಅದೊಂದು ದೈವೀ ಸಂಕಲ್ಪವೋ, ವ್ಯವಹಾರಿಕವಾಗಿ ಶಿಕ್ಷಣ ನೀಡಿದರು. ಕನ್ನಡ ಶಾಲೆಗೂ ಕಳಿಸಿದರು. ವೇದಾಂತ ಪಾಠವನ್ನು ಮಾಡಿಸಿದರು. ಈ ಎರಡೂ ಬಗೆಯ ವಿದ್ಯೆಯಲ್ಲಿ ಕಿರಿಯಮಗ ಪಾರಂಗತನಾಗುವಂತೆ ನೋಡಿಕೊಂಡರು. ಬಹುಶಃ ವೈದಿಕ ವೃತ್ತಿಯಿಂದ ಮಾತ್ರ ಜೀವನ ನಿರ್ವಹಣ ಸಾಧ್ಯವಾಗದ ಕಾಲವಿನ್ನು ಬರಲಿದೆಯೇನೊ ಎಂದು ಆ ಹಿರಿಯ ಜೀವಿಯ ಅಂತರಂಗಕ್ಕೆ ಅರಿವಾಗಿದ್ದಿತೊ ಏನೊ! ಕಿರಿಯಮಗನನ್ನು ಲೌಕಿಕ ವಿದ್ಯೆಯನ್ನು ಅಧರಿಸಿ ಜೀವನ ನಡೆಸಲು ಬರುವಂತೆ ಅನುವುಗೊಳಿಸಿದರು. ಅವನು ಮುಲ್ಕಿ ಪರೀಕ್ಷೆಗೆ ಕಟ್ಟಿ ಪಾಸಾಗಿದ್ದನು. ಹೀಗೆಂದು ಅವನು ವೈದಿಕವಿದ್ಯೆಯಿಂದ ದೂರವೇನೂ ಆಗಿರಲಿಲ್ಲ. ಅದರಲ್ಲಿಯೂ ಚೆನ್ನಾಗಿ ಪಳಗಿದ್ದನು. ಆ ವೃತ್ತಿಯಲ್ಲಿಯೂ ಅವನು ಬಲ್ಲವನಾಗಿದ್ದನು. ವೇದಮಂತ್ರಗಳನ್ನು ಸ್ವರಪೂರ್ವಕವಾಗಿ ಸುಸ್ಪಷ್ಟವಾಗಿ ಉದ್ಘೋಷಿಸಬಲ್ಲವನಾಗಿದ್ದನು. ಅವನ ದೇವಪೂಜೆಯ ವೈಖರಿ ನೋಡುವಂತಿತ್ತು. ಅದರಲ್ಲಿ ಮುಖ್ಯವಾಗಿ ಅವನು ಮನಗೊಟ್ಟು ಮಾಡುವದನ್ನು

ನೋಡುವಂತಿತ್ತು. ಆದರೂ ಪರಿಸ್ಥಿತಿಯ ಕರೆಗೆ ಓಗೊಟ್ಟು ಅವನೂ ಶಿಕ್ಷಕವೃತ್ತಿಯನ್ನು ಕೈಕೊಳ್ಳಬೇಕಾಯಿತು. ಈ ಕಾಲಕ್ಕಾಗಲೆ ವೈದಿಕವೃತ್ತಿಯಿಂದಲೇ ಜೀವನ ನಿರ್ವಹಣೆ ಸಾಧ್ಯವಿಲ್ಲವೆಂದು ಅವನ ಅಣ್ಣನು ಕಂಡುಕೊಂಡಿದ್ದನು. ಅವರ ತಂದೆಗೆ ವಯಸ್ಸು ಆಗಿತ್ತು. ಕಿರಿಯನ ವಿವಾಹವೂ ಆಗಿತ್ತು. ಕನ್ಯೆ ಕೆರೂರಿನಿಂದ ಬಂದ-ವಳು. ಅನಿವಾರ್ಯವಾಗಿ ಶಿಕ್ಷಕ ವೃತ್ತಿಗೆ ಬಂದರೂ ಅದನ್ನು ಅಸಡ್ಡೆ ಮಾಡಿದವರಲ್ಲ. ಅದನ್ನು ತುಂಬ ಶ್ರದ್ಧೆಯಿಂದ ಆಸಕ್ತಿಯಿಂದ ನಿರ್ವಹಿಸಿದರು. ವಿದ್ಯಾರ್ಥಿಗಳಿಗೆ ಪಾಠ ಹೇಳುವಲ್ಲಿ ಅವರು ತುಂಬ ಆನಂದವನ್ನು ಪಡೆಯುತ್ತಿದ್ದರು. ಹುರುಪು ಹುಮ್ಮಸ್ಸುಗಳಿಂದ ಅವರಿಗೆ ಓದು ಹೇಳುತ್ತಿದ್ದರು. ಹೀಗಾಗಿ ಶಿಕ್ಷಕ ವೃತ್ತಿ ಕೇವಲ ಉಪಜೀವನ ಕ್ರಮವಲ್ಲ; ಅದು ಸಹಜಶೀಲ ಮನೋಧರ್ಮ; ಪುರಾಣಿಕ ಮಾಸ್ತರರೆಂದೇ ವಿದ್ಯಾರ್ಥಿಪ್ರಿಯರಾಗಿದ್ದರು. ಆ ವೃತ್ತಿಯಲ್ಲಿಯೂ ಅವರು ಹೆಸರು ಪಡೆ-ದರು. ಇವರೇ ಶ್ರೀ ಕೃಷ್ಣಮೂರ್ತಿ ಪುರಾಣಿಕರ ಪೂಜ್ಯ ತಂದೆಯವರಾದ ತಮ್ಮಣ್ಣ ಭಟ್ಟರು. ಇವರಿಗೆ ಪ್ರಾರಂಭದಲ್ಲಿ ಬರುತ್ತಿದ್ದ ಸಂಬಳ ಏಳು ರೂಪಾಯಿಗಳು. ಆ ಗಳಿಕೆಯೆಲ್ಲ ಅಣ್ಣನ ಸಂಸಾರಕ್ಕೆ ವಿನಿಯೋಗವಾಗುತ್ತಿತ್ತು. ಇಂಥ ಉಪಕಾರಿ ರೀತಿಯಲ್ಲಿ ಅವರು ಜೀವನವನ್ನು ಸವೆಸಿದರು. ತಮ್ಮಣ್ಣಭಟ್ಟರ ಗೃಹಲಕ್ಷ್ಮಿಯಾಗಿ ಬಂದ ಲಕ್ಷ್ಮಂಬಾಯಿ-ಪುರಾಣಿಕರ ತಾಯಿ-ಗಂಡನ ನೆರಳಾಗಿ ಜೀವನವನ್ನು ನಡೆಸಿದವರು. ಎಂಥ ಪರಿಸ್ಥಿತಿಯನ್ನೂ ತುಂಬ ವಿನಮ್ರರಾಗಿ ಎದುರಿಸುತ್ತ ಬಂದವರು. ಬಡತನ ಸಿರಿತನ ಎಂಬ ಭೇದಭಾವವನ್ನು ತೊರೆದವರು. ಅತ್ಯಂತ ದೈವಭಕ್ತಿಯವರು. ಬಾಲ್ಯದಲ್ಲಿ ತುಂಬ ಕಷ್ಟ-ನಷ್ಟಗಳನ್ನು ಸಹಿಸುತ್ತ ಬಂದ ಆ ತಾಯಿ ಇನ್ನೊಬ್ಬರ ಕಷ್ಟ–ನಷ್ಟಗಳನ್ನು ಕಂಡು ಮರಗುವರು. ಅವರಿಗೆಲ್ಲ ತಮ್ಮ ಕೈಲಾದ ನೆರವನ್ನು ನೀಡುವರು. ಪತಿಪರಾಯಣೆ; ಅವರಂತೆಯೇ ಒಳ್ಳೇ ಪರೋಪಕಾರಿ ಜೀವಿಗಳು. ಮನೆಯಲ್ಲಿ ತುಂಬ ಧಾರ್ಮಿಕ ಸಾಂಪ್ರದಾಯದ ವಾತಾವರಣ. ತಮ್ಮಣ್ಣಭಟ್ಟರ ಶಿಷ್ಯಕೋಟಿ ಅಪರಂಪಾರವಾದುದು. ಶಿಷ್ಯರನ್ನೂ ಮಕ್ಕಳೋಪಾದಿಯಲ್ಲಿ ವಾತ್ಸ-ಲ್ಯದಿಂದ ಕಾಣುವರು. ಅವರ ಗೃಹಲಕ್ಷ್ಮಿ ಇದಕ್ಕೆ ಹೊರತಾಗಿರಲಿಲ್ಲ. ಪತಿಯಂತೆ ಇವರೂ ಈ ಶಿಷ್ಯರಿಗೆ ತಿಂಡಿತಿನಿಸು ನೀಡಿ ಅವರ ಹೊಟ್ಟೆನೆತ್ತಿ ನೋಡಿಕೊಂಡು ವಾತ್ಸಲ್ಯದ ಹೊನಲನ್ನು ಹರಿಸುವರು. ಅಂಥ ದೃಷ್ಟಾಂತಗಳು ಹಲವಾರು. ಆದಾಯ ಕಡಿಮೆ ಇದ್ದರೂ ಸುಖ-ನೆಮ್ಮದಿಗಳಿಂದ ಈ ದಂಪತಿಗಳು ಬಾಳುವೆ ನಡೆಸುತ್ತಿದ್ದರು.

ಇಂಥ ಪುಣ್ಯವಂತ ತಂದೆತಾಯಿಗಳ ಮೂರನೆಯ ಮಗುವಾಗಿ ಕೃಷ್ಣಮೂರ್ತಿ ಬೀಳಗಿಯಲ್ಲಿ ಜನಿಸಿದರು. ಜನನ ಹತ್ತೊಂಬತ್ತನೂರಾ ಹನ್ನೊಂದನೇ ವರುಷದ ಸಪ್ಟಂಬರ ತಿಂಗಳ ಐದನೆಯ ದಿನಾಂಕ. ಮನೆಯಲ್ಲಿ ಮಂಗಳಕರವಾದ ಪ್ರಶಾಂತವಾದ ಸಾಂಪ್ರದಾಯಿಕ ವಾತಾವರಣ; ಸುತ್ತಲೂ ಧಾರ್ಮಿಕ ಪರಿಸರ. ತಂದೆ-ತಾಯಿ ಇಬ್ಬರೂ ಒಳ್ಳೇ ಸಂಸ್ಕಾರವಂತರು. ಭಾರತೀಯ ಸಂಸ್ಕೃತಿಯ ಕಟ್ಟಾಭಿಮಾನಿಗಳು. ಇಂಥ ವಾತಾವರಣದಲ್ಲಿ ಮಗು ಬೆಳೆಯಿತು. ಅದನ್ನು

ಜೀವನದಲ್ಲಿ ಅರಗಿಸಿಕೊಂಡಿತು. ಅದರ ಪಾವಿತ್ರ್ಯದ ಅರಿವನ್ನು ಅದು ಬಹು ಚೆನ್ನಾಗಿ ಮಾಡಿಕೊಂಡಿತು. ತಂದೆ-ತಾಯಿಗಳ ದಯಾಗುಣ, ಪರೋಪಕಾರಿ ಜೀವನ ಈ ಮಗುವಿನಲ್ಲಿಯೂ ಮೂಡಿ ನಿಲ್ಲುವದಕ್ಕೆ ಆ ಪರಿಸರ ಕಾರಣವಾಯಿತು. ತಾಯಿಯ ದೈವಭಕ್ತಿ ಇವನಲ್ಲಿ ಮೈಗೂಡಿತು. ಧಾರ್ಮಿಕ ಭಾವನೆಯು ಬೆಳೆದು ಬಂದಿತು. ತಾಯಿ ಮಾಡುತ್ತಿದ್ದ ಪೂಜೆ-ಪುನಸ್ಕಾರಗಳು, ವ್ರತೋಪಚಾರಗಳು, ನಡೆಸುತ್ತಿದ್ದ ಧಾರ್ಮಿಕ ಸಮಾರಂಭ-ಉತ್ಸವಗಳು ಈ ತರಳನಲ್ಲಿ ಕುತೂಹಲ ಮೂಡಿಸುತ್ತಿದ್ದವು. ತಾಯಿಯನ್ನು ಕಾಡಿಸಿ. ಬೇಡಿ ಕೇಳುತ್ತಿದ್ದ. ಅವಳಿಂದ ಸಮಾಧಾನವನ್ನು ಪಡೆಯುತ್ತಿದ್ದನು. ತಾಯಿ ನಡೆಸುತ್ತಿದ್ದ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದ ಮುತ್ತೈದೆಯರು ಮಗುವಿನ ಮನಸ್ಸಿನ ಮೇಲೆ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಅಚ್ಚೊತ್ತಿದಂತೆ ಮೂಡಿಸಿದರು. ಜೀವನದಲ್ಲಿ ಅವರು ತೋರುತ್ತಿದ್ದ ಶ್ರದ್ಧೆ, ಆಸಕ್ತಿ, ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿದ್ದ ನಯ-ವಿನಯ ಇವನಲ್ಲಿ ಕುತೂಹಲ ಕೆರಳಿಸಿದಂತೆ ಜೀವನದಲ್ಲಿ ಒಂದು ಆಸಕ್ತಿಯನ್ನು ಹುಟ್ಟಿಸಿದವು. "ನನ್ನ ತಾಯಿ ನಡೆಸುತ್ತಿದ್ದ ಗೌರಿಪೂಜೆ, ಹೂವೀಳ್ಯಗಳು, ದೇವಿಯರ ಪೂಜೆಗಳು, ಅವಳು ಮೈ ತೊಳೆದು ಭಕ್ತಿಯಿಂದ ನಡೆಸುತ್ತಿದ್ದ ಅರ್ಚನೆ. ನೆರೆ ಹೊರೆಯ ಮುತ್ತೈದೆಯರು ಅವಳನ್ನು ಕಾಣುತ್ತಿದ್ದ ಪ್ರೇಮದ ರೀತಿ ನನ್ನಲ್ಲಿ ಕುತೂಹಲದ ಜೊತೆಗೆ ಒಂದು ಬಗೆಯ ವಿಶೇಷ ಭಾವನೆಗಳನ್ನು ಉಕ್ಕೇರಿಸುತ್ತಿದ್ದವು. ಆಗ ಅದು ಏನೆಂದು ನನಗೆ ಪೂರ್ಣವಾಗಿ ಅರ್ಥವಾಗದಿದ್ದರೂ ಅವಳಲ್ಲಿಯ ಈ ಹಿರಿಯ ಸಂಸ್ಕಾರವೇ ನಾವೆಲ್ಲ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಉದಾತ್ತತೆಯ ಪರಿಚಯಮಾಡಿಕೊಟ್ಟಿತೆಂದು ಭಾರತೀಯ ಸ್ತ್ರೀಯ ಹಿರಿಮೆ-ಗರಿಮೆಗಳನ್ನು ನಾವು ಅರಿತುಕೊಳ್ಳುವಂತೆ ಮಾಡಿದವೆಂದು ಎಷ್ಟೋ ದಿನಗಳ ನಂತರ ನನಗೆ ಅರ್ಥವಾಗಲಾರಂಭಿಸಿತು. ನನ್ನಲ್ಲಿ ನಮ್ಮ ಸಂಸ್ಕೃತಿಯ ಬಗೆಗೆ ಗೌರವಾದರಗಳು ಮೂಡಿ ನಿಲ್ಲಲು, ಸ್ತ್ರೀಯರ ಬಗೆಗೆ ಉದಾತ್ತಭಾವನೆ ಮೂಡಿಬರಲು ಕಾರಣವಾದವು ಎಂದು ನನಗೆ ಈಗಲೂ ಅನಿಸುತ್ತಿದೆ" ಎಂದು ಕೃಷ್ಣಮೂರ್ತಿ ಪುರಾಣಿಕರು. ಹೇಳುವ ಮಾತುಗಳಲ್ಲಿ ಅವರು ತಾಯಿಯ ಬಗೆಗೆ, ಸ್ತ್ರೀಯರ ಬಗೆಗೆ ಇರಿಸಿಕೊಂಡ ಅಪಾರ ಗೌರವವು ವ್ಯಕ್ತವಾಗುವದರ ಜೊತೆಗೆ ಅವರಲ್ಲಿ ಕಂಡುಬರುವ ಉಚ್ಚ ಸಂಸ್ಕಾರದ ರಹಸ್ಯವೂ ವ್ಯಕ್ತವಾಗುವದು. ನಿಜವಾಗಿ ಇಂಥ ಒಂದು ಅಪರೂಪ ಧಾರ್ಮಿಕ-ಸಾಂಸ್ಕೃತಿಕ ವಾತಾವರಣ ಪರಿಸರದಲ್ಲಿ ಬೆಳೆದ ಅವರು ಧನ್ಯರು! ಎಳೆತನದ ಆ ದಿನಗಳಲ್ಲಿ ಅವರ ಪುಟ್ಟ ಹೃದಯ, ಮನಸ್ಸುಗಳ ಮೇಲೆ ಅಚ್ಚೊತ್ತಿದ್ದ ಈ ಪರಿಸರ ಅವರಿಂದ ಎಂಥ ಅದ್ಭುತ ಕೆಲಸವನ್ನು ಮಾಡಿಸಿತು! ಮಾಡಿಸುತ್ತಿದೆ. ಮಾತೆಯೇ ಮೊದಲ ಗುರು, ಮನೆಯೇ ನಮ್ಮ ಮೊದಲ ಶಾಲೆ ಎಂಬ ಮಾತಿನಲ್ಲಿ ಎಳ್ಳಷ್ಟು ಹುಸಿಯಿಲ್ಲ ಎಂಬುದಕ್ಕೆ ಇದೊಂದು ನಿದರ್ಶನವಾಗಿರುವುದು. ಕೇವಲ ಈ ಬಗೆಯ ಉತ್ತಮ ಪರಿಸರ ಮಾತ್ರವಲ್ಲ; ಆ ತಾಯಿ ಪುರಾಣದ ಕಥೆಗಳನ್ನು

ಅಲ್ಲಿ ಬರುವ ನೀತಿ ಆದರ್ಶಗಳನ್ನು ತಾವು ತಿಳಿದಂತೆ ಮಕ್ಕಳಿಗೆ ಮನಮುಟ್ಟಿ ಹೇಳುತ್ತಿದ್ದರು. ಹಾಗೆ ನೋಡಿದರೆ ಅವರು ಹೆಚ್ಚು ಓದಿದವರಲ್ಲ. ನಿಜ. ಆದರೆ ಅವರಲ್ಲಿರುವ ತಿಳುವಳಿಕೆ ಅಂಥ ಹೆಚ್ಚಿನದಾಗಿತ್ತು. ಅವರ ಅನುಭವ ಅಂಥ ಹಿರಿದಾಗಿತ್ತು; ಅಗಾಧವಾಗಿತ್ತು. ಅಂತೆಯೇ ಆ ತಾಯಿ, ಮಕ್ಕಳಿಗೆ ಕೇವಲ ತನ್ನ ನಡತೆ ಮಾತ್ರದಿಂದ ಅತ್ಯಂತ ಯೋಗ್ಯವಾದ ಉತ್ತಮವಾದ ಸಂಸ್ಕಾರವನ್ನು ನೀಡಿದಳು; ಹಿರಿದಾದ ಉದಾತ್ತತೆಯನ್ನು ಕಲ್ಪಿಸಿಕೊಟ್ಟಳು. ಜೀವನದಲ್ಲಿ ಆದರ್ಶ ವನ್ನು ಕಲ್ಪಿಸಿಕೊಳ್ಳುವಂತೆ ಮಾಡಿದಳು.

ತಾಯಿಯಂತೆ ಕೃಷ್ಣಮೂರ್ತಿಯವರ ತಂದೆಯವರೂ ಹಿರಿದಾದ ಜೀವ. ಕನ್ನಡ ಶಾಲೆಯ ಶಿಕ್ಷಕರವರು. ಬಡತನದ ಭವಣೆ-ಬೇಗೆ. ಕಡಮೆ ಸಂಬಳ. ಅದರಲ್ಲಿ ತಮ್ಮ ಸಂಸಾರದ ನಿರ್ವಹಣೆಯಾಗಬೇಕು; ಅಣ್ಣನಿಗೆ ನೆರವಾಗಬೇಕು. ಅನೇಕ ದಿನಗಳವರೆಗೆ ಇದನ್ನವರು ಪರಿಪಾಲಿಸಿಕೊಂಡು ಬಂದರು. ಅವರ ಗೃಹಲಕ್ಷ್ಮಿಯ ಹಿರಿಮೆಯೇ ಮತ್ತೆ ಇದಕ್ಕೆ ಕಾರಣ ಎನ್ನದೆ ನಿರ್ವಾಹವೇ ಇಲ್ಲ. ಆದರೆ ಇವರು ಕೇವಲ ಶಾಲೆಯಲ್ಲಿ ಮಾತ್ರ ಕಲಿಸುವ ಶಿಕ್ಷಕರಾಗಿರಲಿಲ್ಲ. ಮನೆಯಲ್ಲಿಯೂ ಅನೇಕ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಅವರಿಂದ ಒಂದು ಬಿಡಿಗಾಸನ್ನು ಪಡೆ-ಯುತ್ತಿರಲಿಲ್ಲ. ಊರವರಿಗೆ ಬೇಕಾದಾಗ ಅವಶ್ಯವಿರುವ ಸಲಹೆ-ಸೂಚನೆ ನೀಡುತ್ತಿದ್ದರು. ಹಿತವಚನಗಳನ್ನು ಹೇಳುತ್ತಿದ್ದರು. ನೆರೆಹೊರೆಯವರಿಗೆ ತಮ್ಮಿಂದ ಸಾಧ್ಯವಿರುವ ಸಹಾಯ ಸಹಕಾರಗಳನ್ನು ಸಲ್ಲಿಸುತ್ತಿದ್ದರು. ಹೀಗೆ ಅವರು ಊರ ಹಿರಿಯ ವ್ಯಕ್ತಿಯೆನಿಸಿದ್ದರು. ತಂದೆಯ ಈ ಸ್ವಭಾವದ ಪರಿಣಾಮ ಈ ಮಗನ ಮೇಲೂ ಆಯಿತು. ಅವರು ತಮ್ಮ ಬಡತನದಿಂದ ಮಕ್ಕಳ ಜೀವನ ಕುಂಠಿತವಾಗ ಬಾರದೆಂದು ಸದಾ ಬಯಸುತ್ತಿದ್ದರು. ಅದರಿಂದಾಗಿ ಅವರಿಗೇನೂ ಕಡಿಮೆಯಾಗ ಬಾರದು ಎಂದವರ ಬಯಕೆ. ತಮ್ಮಂತೆ ಮಕ್ಕಳು ಕೇವಲ ಲೌಕಿಕ ಶಿಕ್ಷಣ ಪಡೆದು ಮುಲ್ಕೀ ಪರೀಕ್ಷೆ ಪಾಸಾಗಿ ನಿಲ್ಲುವುದು ಬೇಡ, ಇನ್ನು ಮುಂದಕ್ಕೆ ಹೋಗಲಿ, ಇಂಗ್ಲಿಷು ಕಲಿಯಲಿ ಎಂದು ಮನಸಾ ಅವರು ಅಪೇಕ್ಷೆಪಟ್ಟಿದ್ದರು. ಅವರ ಈ ಬಯಕೆ ಅಪೇಕ್ಷೆಗಳು ನಿರರ್ಥಕವಾಗಲಿಲ್ಲ. ಮಕ್ಕಳು ಅವರ ನಿರೀಕ್ಷೆಯನ್ನು ವ್ಯರ್ಥ ಗೊಳಿಸಲಿಲ್ಲ. ತಂದೆಯ ಈ ಸ್ವಭಾವದ ಜೊತೆಗೆ ಅವರಲ್ಲಿ ಮನೆ ಮಾಡಿದ್ದ ಕಥನಶಕ್ತಿ ಈ ಮೂರನೆಯ ಮಗುವಿನಲ್ಲಿ ಅದು ಹೇಗೋ ಮೂಡಿಬಂದಿತ್ತು. ತಂದೆ ತಾಯಿಗಂತೂ ನಿಜವಾಗಿ ಅದೊಂದು ಕೌತುಕದ ವಿಷಯವೆಂದರೂ ಸರಿಯೇ!

ಬಾಲ ಕೃಷ್ಣಮೂರ್ತಿ ನಿಜವಾಗಿ ಕೃಷ್ಣಮೂರ್ತಿಯೇ ಆಗಿದ್ದ ಎಂದು ಅವರ ತಮ್ಮ, ಅಣ್ಣನ ಬಾಲ್ಯದ ಕುರಿತು ಹೇಳುವಾಗ ಆ ಮಾತಿನಲ್ಲಿ ಒಂದು ಬಗೆಯ ಅಭಿಮಾನ ಮೂಡಿ ನಿಲ್ಲುತ್ತದೆ. ಈ ತಮ್ಮ ತನ್ನ ಅಣ್ಣನ ಒಡನಾಡಿಯಾಗಿರ ದಿದ್ದರೂ ಆ ಸಮಯದ ಕೃಷ್ಣಮೂರ್ತಿಯ ಆಟಪಾಟಗಳ ಬಣ್ಣನೆ ಮಾಡುತ್ತಾರೆ. ತಂದೆ – ತಾಯಿಯಿಂದ ಅಣ್ಣನ ಬಗೆಗೆ ಬಂದ ಅಕ್ಕರೆಯ, ಅಭಿಮಾನದ ನುಡಿಗಳನ್ನು

ಬಲುಹಿಗ್ಗಿನಿಂದ ತಿಳಿಯಪಡಿಸುತ್ತಾರೆ. ತನ್ನ ಅಣ್ಣ ಬಾಲ್ಯದಲ್ಲಿ ತುಂಬ ತಿರುಗಾಡುತ್ತಿದ್ದನು; ಬೆಳಗಿಯ ಸಿದ್ಧೇಶ್ವರ ಗುಡ್ಡದಲ್ಲಿ ಓಡಾಡುವದೆಂದರೆ ಬಲು ಹಿಗ್ಗು, ಅವರ ಜೊತೆಗೆ ಅವನು ಏಕಾಕಿಯಾಗಿ ತಿರುಗುವ ಹುಚ್ಚನವನಾಗಿದ್ದ. ಈಗಿನಂತೆ ಆಗಲೂ ಏಕಾಕಿಯಾಗಿರುವುದು ಅವನಿಗೆ ಹೆಚ್ಚು ಸೇರುತ್ತಿತ್ತು ಎಂದು ಆ ದಿನಗಳನ್ನು ಕುರಿತು ಹೇಳುತ್ತಾರೆ. ಆ ಕಾಲದಲ್ಲಿ ತಪ್ಪಿದ ವಿದ್ಯಾರ್ಥಿಗಳಿಗೆ ಶಿಕ್ಷಕರು ನಾನಾ ತರದಲ್ಲಿ ಶಿಕ್ಷೆ ವಿಧಿಸುತ್ತಿದ್ದರು. ಮೂಲೆ ದಂಡೆ ಹಾಕುವುದು, ಗೋಡೆಗೆ ಬೆನ್ನು ಹಚ್ಚಿ ಕುರ್ಚಿ ಕೊಡುವುದು, ಬಾರು ಏಳುವವರೆಗೆ ಬೆತ್ತದಿಂದ ಬಡಿಯುವುದು ಸಾಮಾನ್ಯವಾಗಿದ್ದವು. ಅವನ್ನು ನೆನೆದರೆ ಈಗಲೂ ಮೈನವಿರೇಳುವುದು. ಇಂಥ ಒಂದು ಶಿಕ್ಷೆಯನ್ನು ಬಾಲಕೃಷ್ಣ ಒಮ್ಮೆ ಅನುಭವಿಸಬೇಕಾಗಿ ಬಂತು. ತುಂಬ ಕೋಪವೂ ಬಂದಿತು. ತಾನು ಮುಖ್ಯಾಧ್ಯಾಪಕರ ಮಗನಾಗಿದ್ದೂ ಇಂಥ ಶಿಕ್ಷೆ ಅನುಭವಿಸಬೇಕೆ? ಅಳುತ್ತಲೇ ಅವನು ಮನೆಗೆ ಬಂದನು. ತಾಯಿಗೆ ಎಲ್ಲವನ್ನು ತಿಳಿಸಿದ. ಅವಳು ತಂದೆಯ ಮುಂದೆ ಹೇಳಿ ಈ ಕ್ರೂರ ಶಿಕ್ಷಕರನ್ನು ಶಿಕ್ಷಿಸಬೇಕೆಂದು ಅವನ ಅಪೇಕ್ಷೆಯೇನೊ! ಆದರೆ ಆ ತಾಯಿ ಕೃಷ್ಣನಿಗೆ ಈ ಶಿಕ್ಷೆಯ ಅವಶ್ಯಕತೆಯ ದರ್ಶನವನ್ನೇ ಮಾಡಿಸಿದಳು: "ನಿನ್ನ ಹಿತಕ್ಕ ಇಂಥಾ ಶಿಕ್ಷಾ ಕೊಡತಾರ ಬಾಳಾ. ನೀ ಬಡಿಸಿಕೊಂಬೂ ಕೆಲಸ ಯಾಕ ಮಾಡಿದಿ? ನಿನ್ನ ಗುರುಗೋಳು ನಿನ್ನ ಸುಮ್ಮನೆ ಬಡೀಲಿಕ್ಕೆ ಹಾಂಗೇನು ನಿನ್ನ ವೈರಿಯೇನು? ಹಾಂಗ ಮಾಸ್ತರ ಛಾಡಾಯಿಲ್ಲಾ ಮನ್ಯಾಗ ಹೇಳಬಾರದಪ್ಪ" ಎಂದು ಅವಳು ತಿಳಿಹೇಳಿ ಬೆನ್ನಿಗೆ ಅರಿಷಿಣ ಹಚ್ಚಿ ಕಾಯಿಸಿದರು. ಬೆನ್ನಿನ ಈ ಲೇಪನ ಮನಸ್ಸನ್ನು ಭೇದಿಸಿ ಆ ಬಾಲನನ್ನು ಮಿದುಗೊಳಿಸಿತು. ಮಾಸ್ತರರ ಮೇಲೆ ಎಂಥ ವಿಶ್ವಾಸ ಎನಿಸಿತು.

ಈಜುವುದು ಕೂಡ ಕೃಷ್ಣನ ಒಂದು ಹುಚ್ಚಾಗಿತ್ತು. ಬೆಳಗಿಯ ಬಾವಿಗಳು ಅವನಿಗೆ ಸಾಲದಾಗುತ್ತಿದ್ದವು. ಒಂದು ಸಂದರ್ಭದಲ್ಲಿ ಈಸಲು ಹೋದಾಗ ಚಂಡಿಕೆ ತೇಲಾಡುತ್ತಿರುವವನ್ನು ನೋಡಿದ. ಗಾಬರಿಯಾಗಿ ಟಣ್ಣನೆ ಬಾವಿಯಲ್ಲಿ ಜಿಗಿದೇ ಬಿಟ್ಟ! ಚಂಡಿಕೆಗಳನ್ನು ಮುಷ್ಟಿಯಲ್ಲಿ ಹಿಡಿದಾಗ ಭಾರವಾಗಿ ಕಂಡಿತು. ಮೇಲೆ ಜಗ್ಗಿದಾಗ ತಲೆ ಮುಖ ಹೊರಬಂದವು. ಅವನೇ ಅದೇ ಮುಳುಗುಹಾಕಿ ಕಕ್ಕಾಬಿಕ್ಕಿಯಾಗಿದ್ದ ಗೆಳೆಯ ಜೇಡರ ಗಿಡ್ಡಪ್ಪ. ಅವನನ್ನು ಮೇಲಕ್ಕೆ ತಂದು ಬಾಲಕನ ಹೊಟ್ಟೆ ತುಳಿದನು. ನೀರು ಬರಬರನೆ ಹೊರಬಂದವು. ಸುಮಾರು ಒಂದು ಗಂಟೆಯ ಮೇಲೆ ಅವನಿಗೆ ಎಚ್ಚರಿಕೆಯಾಯಿತು. ಎದ್ದು ಕುಳಿತವನೇ ಮೊದಲಿಗೆ ಹೇಳಿದ "ಎಪ್ಪನ ಮುಂದ ಹೇಳಬ್ಯಾಡಲೇ ಕಿಟ್ಯಾ, ಬಡೂತಾನ." ಆಗ ಬಾಲಕೃಷ್ಣನಿಗೆ ಆಶ್ಚರ್ಯ. "ಅದ್ಯಾಕ ಬಡೂತಾನು, ಬದಿಕಿ ಬಂದ ಅಂತ ಪ್ರೀತಿ ಮಾಡತಾನು" ಎಂದು ಸಮಾಧಾನ ಹೇಳಿದನು. ಗೆಳೆಯನು ಮತ್ತೆ ಅಳುತ್ತಲೇ ಹೇಳಿದನು: "ನಿನಗೆ ಸಾಯಲಿಕ್ಕೆ ಯಾರ ಹೇಳಿದ್ರು ಅಂತ ಬಡಿತಾನೋ ಕಿಟ್ಯಾ!" ಎಳೆಯ ಕೃಷ್ಣನ ಹೃದಯ ಹನ್ನನೆ ಹಾರಿತು. ಅಲ್ಲ, ಬದುಕಿ ಬಂದುದಕ್ಕೆ

ರಮಿಸುವದನ್ನು ಬಿಟ್ಟು ಬಡಿಯುತ್ತಾನೆಂದರೆ ಏನೆನ್ನಬೇಕು!! ಗೋಲಿಗುಂಡು ಮತ್ತು ಚಿಣಿಫಣಿ ಬಾಲಕೃಷ್ಣನ ಇನ್ನೆರಡು ಅತ್ಯಂತ ಪ್ರೀತಿಯ ಅಚ್ಚುಮೆಚ್ಚಿನ ಆಟಗಳೆನಿಸಿದ್ದವು. ಅದರಲ್ಲಿಯೂ ಚಿಣಿಫಣಿ ಎಂದರೆ ಅವನು ತುಂಬ ಮೈಮರೆ-ಯುತ್ತಿದ್ದ. ಆ ಆಟದಭರದಲ್ಲಿ ಮೈ-ಕೈ ನೋವಾಗುವುದು. ಪೆಟ್ಟು ಬೀಳುವುದು ಎಲ್ಲವನ್ನು ಅವನು ಸಹಿಸಿಕೊಳ್ಳುತ್ತಿದ್ದನು. ಜೋರಿನಿಂದ ಬಂದ ಚಿಣಿ ಒಂದು ಕಾಲಕ್ಕೆ ಎಡಗಿವಿಗೆ ಬಡಿದು ಬಲವಾದ ಪೆಟ್ಟುಬಿದ್ದಿತ್ತು. ಈಗಲೂ ಎಡಗಿವಿಗೆ ಅದರ ಗುರುತು ಇದೆ. ಆ ಆಟದಲ್ಲಿ ಅಂಥ ತನ್ಮಯತೆ; ಏಕಾಗ್ರತೆ ಅವನದು. ಅದಕ್ಕಾಗಿ ತಂದೆ-ತಾಯಿಗಳಿಂದ ಬೈಸಿಕೊಂಡಿದ್ದರೂ ಅದರ ಪರಿವೆ ಇಲ್ಲ; ಲೆಕ್ಕವಿಲ್ಲ. ಅದೇ ಬಗೆಯಲ್ಲಿ ಗೋಲಿಗುಂಡಿನ ಆಟವೂ ಕೂಡ. ಚೇಷ್ಟೆ ಮಾಡುವುದು, ಛೇಡಿಸುವುದು ಇವೂ ಅವನ ಬಾಲಲೀಲೆಗಳಲ್ಲಿ ಸೇರಿದ್ದವು. ಮನೆತನಕ ಹಲವಾರುಸಲ ದೂರುಗಳು ಬಂದು ತಂದೆ ಕಿವಿ ಹಿಂಡಿ ಕೂಡ ಹೇಳಿದ್ದುಂಟು. ಆಟದಲ್ಲಿ ಮಾತ್ರವಲ್ಲ; ಸುತ್ತು ಮುತ್ತಲು ನೋಡುತ್ತಿದ್ದ ವಸ್ತುಗಳಲ್ಲಿ ಕೂಡ ಅಂಥ ತನ್ಮಯತೆ ಇರುತ್ತಿತ್ತು. ಆನಂತರ ಕೂಡ ಆ ಬಗೆಗೆ ವಿಚಾರಿಸುತ್ತಿದ್ದನು. ಒಂದು ಸಲ ದೊಡ್ಡಹಾಳಕ್ಕೆ ಅಣ್ಣತಮ್ಮಂದಿರು ಹೋಗಿದ್ದಾಗ ಅಲ್ಲಿ ಕೃಷ್ಣಾನದಿಯಲ್ಲಿ ಸ್ನಾನ ಮಾಡಲು ಹೋಗಿದ್ದರು. ಸಾಯಂಕಾಲವೇ ಮರಳಿಬಂದರು. ರಾತ್ರಿ ಊಟಮಾಡಿ ಮಲಗಿ-ದರು. ರಾತ್ರಿ ಒಮ್ಮೆಲೇ ಕೃಷ್ಣನ ಚೀರುವಿಕೆ ಕೇಳಿಸಿತು "ನಾನು ನದಿಯಲ್ಲಿ ಈಸುತ್ತಿದ್ದೇನೆ, ನೀರು ಆಳವಾಗಿದೆ. ನಾನು ಆ ದಂಡೆಯನ್ನು ಮುಟ್ಟಲೇಬೇಕು. ಇಲ್ಲವಾದರೆ ನಾನು ನೀರಲ್ಲಿ ಮುಳುಗುವೆ; ಸತ್ತು ಹೋಗುವೆ." ಇಷ್ಟಕ್ಕೆ ಸುಮ್ಮ-ನಾಗದೆ ಅವನು ಕೈಕಾಲು ಬಡಿಯತೊಡಗಿದನು. ಈಜುವವರಂತೆ ಅವನ ವರ್ತನೆ ಇದ್ದಿತು. ಅಣ್ಣ ತಮ್ಮಂದಿರೂ ಚಿಕ್ಕವರು. ಅವರೂ ಅಳತೊಡಗಿದರು. ತಾಯಿ-ಯಂತೂ ಮಗನಿಗೆ ಭೂತ ಬಡಿಯಿತೇನೊ ಎಂದು ಗಾಬರಿಯಾಗಿದ್ದರು. ಆದರೆ ತಂದೆ ಸಮಾಧಾನಚಿತ್ತದಿಂದ ಭಸ್ಮವನ್ನು ತಂದು ಹಣೆಗೆ ಹಚ್ಚಿದರು. ಮಂತ್ರವನ್ನು ಹೇಳಿದರು. ಸ್ವಲ್ಪ ಹೊತ್ತಿಗೆ ನಂತರ ಕೃಷ್ಣನು ಕಣ್ಣುತೆರೆದು ನೋಡಿದನು. 'ಏನೋ ಕೆಟ್ಟ ಕನಸು' ಎಂದು ಕಣ್ಣು ತಿಕ್ಕಿಕೊಂಡನು. ಹೊರಗಿನ ವಸ್ತುಗಳು ಕೃಷ್ಣನ ಮನದ ಮೇಲೆ ತುಂಬ ಪರಿಣಾಮ ಬೀರುತ್ತಿದ್ದವೆಂಬುದಕ್ಕೆ ಇದು ತುಂಬ ಒಳ್ಳೇ ದೃಷ್ಟಾಂತವಾಗಿದೆ. ಏನನ್ನು ನೋಡಿದರೂ ಆ ಬಗೆಗೆ ಅವನು ಭಾವ-ಪೂರ್ಣವಾಗುತ್ತಿದ್ದನು; ತುಂಬ ವಿಚಾರಿಸುತ್ತಿದ್ದನು. ಹೊಲದಲ್ಲಿ ತಿರುಗಾಡುವ, ಬೆಳೆಯ ಪರಿಚಯ ಮಾಡಿಕೊಳ್ಳುವ ಇನ್ನೊಂದು ಹವ್ಯಾಸ ಈ ಬಾಲನದು. ತಮ್ಮ ಮನೆತನಕ್ಕೆ ಸೇರಿದ ಬಾಡಗಂಡಿ ಹೊಲಕ್ಕೆ ಹೋಗಿ ಬರುತ್ತಿದ್ದ. ಈ ಹವ್ಯಾಸ ಎಷ್ಟೊಂದು ರೂಢಿಗತವಾಗಿತ್ತೆಂದರೆ ಬೆಳೆದು ದೊಡ್ಡವನಾಗಿ ಹೊರಗಿನಿಂದ ಹಳ್ಳಿಗೆ ಬಂದಾಗಲೆಲ್ಲ ಅಲ್ಲಿಗೆ ಮೊದಲು ಹೋಗಿ ಬರುವ ಪರಿಪಾಠಬಿದ್ದಿತ್ತು. ಕರಡಿ ಮಜಲು ಕೇಳುವದೆಂದರೆ ಆಗ ಇನ್ನಿಲ್ಲದ ಹಿಗ್ಗು, ಸಂತಸ. ಅದರಲ್ಲಿಯೂ ಶಿವ-

ಲಿಂಗಪ್ಪ ಹೊಟ್ಟೆ ಅವರ ಕರಡಿಮಜಲಿಂದಲೆ ಈ ಬಾಲಕ ಪ್ರಾಣ ಕಳೆದುಕೊಳ್ಳುವ. ಅವರ ಬೆನ್ನುಹತ್ತಿ ಹೋಗಿ ನಿದ್ದೆ ಬಂದಾಗ ಎಲ್ಲಿಯೋ ಮಲಗಿದ್ದೂ ಉಂಟು. ಮನೆಗೆ ಬಂದು ಅವರ ಹಾವಭಾವಗಳನ್ನು ಮಾಡಿತೋರಿಸಿ ಆನಂದಿಸುತ್ತಿದ್ದನು. ಅಷ್ಟು ಅವು ಅವನ ಮೇಲೆ ಪರಿಣಾಮ ಬೀರುತ್ತಿದ್ದವು. ಆ ಸಾಮೂಹಿಕ ನಾದದಲ್ಲಿ ತೇಲಿಹೋಗುವ ಒಂದು ಆಸೆ ಅವನಿಗೆ. ಒಂದು ಸಲ ಸಿದ್ದೇಶ್ವರ ಜಾತ್ರೆಯ ಸಮಯದಲ್ಲಿ ಅನೇಕ ನಿಷ್ಣಾತ 'ಕರಡಿ ಪಟು'ಗಳು ಬರುವ ಸಂದರ್ಭ. ಇವನು ಹೊರಡಬೇಕು; ತಮ್ಮ ಕಾಣಿಸದೇ ತಂದೆ ಇವನನ್ನು ವಿಚಾರಿಸಿದರು. ಬಹುಶಃ ತಾವು ಜಾತ್ರೆಗೆ ಹೋಗಿದ್ದಿರಬೇಕು; ಅಲ್ಲಿಗೇ ಹೋಗಿರಬೇಕೆಂದು ಇವನು ಓಡಿ ಹೋದ. ಅಲ್ಲಿ ಕಾಣದೇ ಏದುಸಿರು ಬಿಡುತ್ತ ಮನೆಗೆ ಓಡಿ ಬಂದನು. ತಮ್ಮ ಅಳ್ಳಿಟ್ಟು ತಿನ್ನುತ್ತ ಕುಳಿತಿದ್ದನು. ಕರಡಿಮಜಲಿನ ಪ್ರೀತಿಯನ್ನು ಬದಿಗಿರಿಸಿ ತಮ್ಮನ ಬಗೆಗೆ ಕೃಷ್ಣನು ತೋರಿದ ಅಂತಃಕರಣವನ್ನು ನೆನೆದು ತಂದೆಯ ಕಂಣು ತುಂಬಿತು. ಮಗನ ಕರ್ತವ್ಯಪ್ರಜ್ಞೆ ಮೆಚ್ಚಿದ ತಾಯಿ ಅವನ ಬೆನ್ನು ಸವರಿದರು. ಇಂಥ ಉದಾರತನವನ್ನು ಈ ಬಾಲಕ ತೋರಿಸುತ್ತಿದ್ದರೂ ಮಗನ ಮೇಲೆ ತಂದೆ-ತಾಯಿಗೆ ಅಪಾರ ಭರವಸೆ. ಅದಕ್ಕೆ ಕಾರಣವಿಲ್ಲದಿರಲಿಲ್ಲ. ಆ ಎಳೆತನದಲ್ಲಿಯೇ ಅವನು ಚೆನ್ನಾಗಿ ಕಥೆ ಹೇಳುತ್ತಿದ್ದ. ಅವರ ಅಣ್ಣ ಎಸ್. ಟಿ. ಪುರಾಣಿಕರು ತಮ್ಮನ ಈ ಹವ್ಯಾಸವನ್ನು ಬಹು ಚೆನ್ನಾಗಿ ಅರಿತವರು. "ಕಥೆ ಕೇಳುವದು ಮತ್ತು ಹೇಳುವುದು ಅವನಿಗೆ ಬಹಳ ಸೇರುತ್ತಿತ್ತು. ಬೇಸಿಗೆಯ ಬಿಡುವಿನಲ್ಲಾಗಲಿ, ದೀಪಾವಳಿಯ ಬಿಡುವಿನಲ್ಲಾಗಲಿ, ನಾವು ನಮ್ಮೂರಿನಲ್ಲಿ ಕೂಡಿದಾಗ ಕಾದಂಬರಿ-ಗಳನ್ನು ಓದುತ್ತಿದ್ದೆವು. ಒಂದು ದಿನ ಗಳಗನಾಥರ 'ಮಾಧವ ಕರುಣಾವಿಲಾಸ' ಕಾದಂಬರಿಯನ್ನು ಇಡೀ ರಾತ್ರಿ ಓದಿ ಬೆಳಿಗ್ಗೆ ೬ ಗಂಟೆಗೆ ಮಲಗಿದೆವು. ಓದುವ ಕೆಲಸವನ್ನು ಅವನೇ ಮಾಡುತ್ತಿದ್ದನು. ಆ ಕಾಲದಿಂದಲೂ ಅವನು ಭಾವನಾ-ಪರವಶನಾಗಿರುತ್ತಿದ್ದನು. ಮುಂದೆ ಅವನು ಕಾದಂಬರಿಗಳನ್ನು ಬರೆಯುವಾಗ ಕೂಡ ತುಂಬ ಭಾವನಾಪರವಶನಾಗಿರುತ್ತಿದ್ದನು. ಯಾವದೊಂದು ದುಃಖದ ಪಾತ್ರವನ್ನು ರೂಪಿಸುತ್ತಿದ್ದಾಗ ಭಾವನಾಪರವಶನಾಗಿ ಅತ್ತುಬಿಡುತ್ತಿದ್ದನು. ಕೆಳಗೆ ಬಂದಾಗ ಮುಖಮ್ಲಾನವಾಗಿರುತ್ತಿತ್ತು. ತಾಯಿ ಗಾಬರಿಯಾಗಿ ಏನಾಗಿದೆಯೊ ಎಂದು ವಿಚಾರಿಸುತ್ತಿದ್ದರು. ಅದರ ಕಾರಣ ನಮಗೆ ಮಾತ್ರ ಗೊತ್ತಿರುತ್ತಿತ್ತು. "ಅವನಿಗೇನಾಗಿದೆ? ದುಃಖದ ಪಾತ್ರವನ್ನು ಕುರಿತು ಬರೆದಿದ್ದಾನೆ. ಅದಕ್ಕೆ ಹೀಗೆ ಇದ್ದಾನೆ." ಎಂದು ನಾವು ಸಮಾಧಾನ ಹೇಳುತ್ತಿದ್ದೆವು. ತಮ್ಮನ ಈ ಭಾವ ಪರವಶತೆಯನ್ನು ಅಣ್ಣ ಬಣ್ಣಿಸಿರುವುದು ಹೀಗೆ. ಓದಿನಲ್ಲಿಯೂ ತುಂಬ ಗಟ್ಟಿಗ-ನೆನಿಸಿದ್ದನು. ಕಥೆ, ಕಾದಂಬರಿ ಸಿಕ್ಕರಂತೂ ಊಟದ ಪರಿವೆ ಕೂಡ ಇಲ್ಲದೇ ನುಂಗಿ ನೀರು ಕುಡಿದಂತೆ ತೀರ ಅಲ್ಪಾವಧಿಯಲ್ಲಿ ಅವನ್ನು ಓದಿ ಮುಗಿಸುತ್ತಿದ್ದ. ಇಂಥ ಅಗಾಧ ರೀತಿಯಲ್ಲಿ ನಡೆಯುತ್ತಿದ್ದ ಬಾಲನ ಮೇಲೆ ಅಪಾರ ತಂದೆ-ತಾಯಿಗಳು

ವಿಶ್ವಾಸವಿಡಲಿಕ್ಕಿಲ್ಲ. ಆ ಬಾಲನೂ ಕೂಡ ತಂದೆ-ತಾಯಿಗಳು ತನ್ನಲ್ಲಿ ಇರಿಸಿದ ಈ ವಿಶ್ವಾಸಕ್ಕೆ ತಕ್ಕವನಾಗಿ ನಡೆದುಕೊಳ್ಳುತ್ತಿದ್ದನು. ಶಾಲೆಯ ಅಭ್ಯಾಸದಲ್ಲಿ ಎಂದೂ ಹಿಂದೆ ಬಿದ್ದವನಲ್ಲ. ತಾನು ಮುಖ್ಯ ಅಧ್ಯಾಪಕರ ಮಗ ಎಂದು ಇಲ್ಲದ ಸೌಲಭ್ಯ ಪಡೆವ ಗೋಜಿಗೆ ಹೋಗುತ್ತಿರಲಿಲ್ಲ. ಗುರುಗಳಿಗೂ ಕೂಡ ಅವನು ಅಚ್ಚುಮೆಚ್ಚಿನ ಶಿಷ್ಯನೆನಿಸಿದ್ದನು. ಗಳಗನಾಥರ ಕಾದಂಬರಿಗಳನ್ನು ಓದುವದೆಂದರೆ ಈ ಬಾಲನಿಗೆ ಏನೂ ಬೇಕೆನಿಸುತ್ತಿರಲಿಲ್ಲ. ತುಂಬ ತನ್ಮಯತೆಯಿಂದ ಅವನ್ನು ಓದುತ್ತಿದ್ದನು. ಕಥಾವಸ್ತು ಸರಿಯಾಗಿ ಅರ್ಥವಾಗದ ಎಳೆವಯಸ್ಸು ಅದು. ಆದರೆ ಈ ಎಳೆಯನಿಗೆ ಅಲ್ಲಿಯ ವಸ್ತು ಸರಳವಾಗಿ ತಿಳಿಯುತ್ತಿತ್ತು. ಅದೇಕೆ ಅದನ್ನು ತನ್ನ ತಾಯಿಗೆ ಒಳ್ಳೇ ಭಾವಪೂರ್ಣವಾಗಿ ವಿವರಿಸುತ್ತಿದ್ದ ಕೂಡ. ಆ ತಾಯಿ ಮಗನ ಈ ಭಾವಪೂರ್ಣ ವಿವರಣೆ ಕೇಳಿ ಕೌತುಕಪಡುತ್ತಿದ್ದಳು. ಅವರಿಗೆ ತುಂಬ ಅಚ್ಚರಿಯೂ ಎನಿಸುತ್ತಿತ್ತು. ಇಷ್ಟು ಕಿರಿವಯಸ್ಸಿನಲ್ಲಿ ಮಗ ಎಷ್ಟೊಂದು ಚೆನ್ನಾಗಿ ಮಾತನಾಡುತ್ತಾನೆ, ಹೇಳುತ್ತಾನೆ ಎನ್ನಿಸುತ್ತಿತ್ತು. ಉಳಿದ ಮಕ್ಕಳಿಗಿಂತ ಇವನು ಭಿನ್ನನಾಗಿದ್ದಾನೆ ಎಂದು ಆ ತಂದೆ-ತಾಯಿಗಳಿಗೆನ್ನಿಸುತ್ತಿತ್ತು. ಆದರೆ ಅವರು ಅದನ್ನು ಅಡಿತೋರಿಸುತ್ತಿರಲಿಲ್ಲ. ಮನದಲ್ಲಿ ಮುದಗೊಳ್ಳುತ್ತಿದ್ದರು.

ಬಾಲಕೃಷ್ಣನ ಎಳೆಜೀವನದಲ್ಲಿ ಸಂಬಂಧಿಸಿದ ಎರಡು ಘಟನೆಗಳು ಅವನ ಮನಸ್ಸಿನ ಮೇಲೆ ತುಂಬ ಪರಿಣಾಮ ಮಾಡಿದವು. ಒಂದು ಘಟನೆ ಅವನ ಮಿದು ಹೃದಯವನ್ನು ಎತ್ತಿತೋರಿಸುವುದು. ಅವನಿಗೆ ಒಬ್ಬಳೇ ತಂಗಿ. ತಂದೆ-ತಾಯಿಗಳು ಅವಳನ್ನು ಅಸಾಧ್ಯವಾಗಿ ಪ್ರೀತಿಸುತ್ತಿದ್ದರು. ಆಕಸ್ಮಿಕವಾಗಿ ವೈಲಿ ಬೇನೆಯಿಂದ ಅವಳು ಮರಣ ಹೊಂದಿದಳು. ಈ ಮನೆಯಲ್ಲಿ ಸಂಭವಿಸಿದ್ದು ಇದು ಮೊದಲಸಾವು. ಎಳೆಯ ಕೃಷ್ಣನಿಗೆ ಆಗ ಸಾವಿನ ಕಲ್ಪನೆಯೂ ಇರಲಿಲ್ಲ. “ವೈನಿ ಯಾಕ ಅಳತಾಳ? ತಾತ್ಯಾ ಯಾಕ ಅಳತಾನ? (ತಂದೆ-ತಾಯಿಯನ್ನು ಅವರು ಕರೆಯುತ್ತಿದ್ದುದು ಹಾಗೆ) ಮತ್ತೆ ಶಕುಂತ್ಲಾಗ ಏನು ಆಗೇದ. ಹೀಂಗ್ಯಾಕ ಸುಮ್ಮನ ಮಲಗ್ಯಾಳ?” ಅಬಚಿಯನ್ನು ಕೃಷ್ಣನು ಕೇಳಿದ. ಈ ಬಾಲನಿಗೆ ಅವಳು ತಿಳಿಹೇಳಿದಳು: “ಆಕಿ ಬ್ಹಾಳ ದೂರ ಹೋಗ್ಯಾಳಪಾ. ಅದಕ ನಿನ್ನ ವೈನಿ ಅಳತಾಳ”. ಈ ಬಾಲನಿಗೆ ಅರ್ಥವಾಗಲಿಲ್ಲ. ಅದಕ್ಕಾಗಿ ಮತ್ತೆ ಕೇಳಿದನು. “ಮತ್ತೆ ಕಳಿಸಿಕೊಟ್ಟರ್ಯಾಕ? ಅಳೂದ್ಯಾಕ?” ಅವನಿಗೆ ಇದು ಕುತೂಹಲದ ಸಂಗತಿಯಾಗಿ ಪರಿಣಮಿಸಿತ್ತು. ಅಬಚಿ ಅದಕ್ಕೆ ಏನು ಹೇಳುವದೆಂದು ತೋಚದೆ ಕೇವಲ ನಕ್ಕುಬಿಟ್ಟರು. ಕೃಷ್ಣನೇ ಮತ್ತೆ ಕೇಳಿದ; ತಾಯಿಗೆ ಸಮಾಧಾನವನ್ನು ಹೇಳಲು ಮುಂದಾದನು: “ಏ! ವೈನಿ! ನೀ ಅಳಬ್ಯಾಡವಾ. ಹಾಂಗ ಆಕೀಗ ತ್ರಾಸ ಆಗತಿದ್ದರ ನಾನೂ ಬೇಕಾರ ಶಕೂನ ಜೋಡಿ ಹೋಗತೀನಿ. ನೀ ಮಾತ್ರ ಅಳಬ್ಯಾಡವಾ” ತಾಯಿಗೆ ಈ ಮಾತನ್ನು ಕೇಳಿ ದುಃಖವು ಒತ್ತರಿಸಿ ಬಂದಿತು. ಅವಳು ಇನ್ನಷ್ಟು ಜೋರಾಗಿ ಅಳತೊಡಗಿದಳು. ತಾನೇನು ಅಂಥ ಮಾತನ್ನು

ಹೇಳಿದೆ? ತಾಯಿ ಇಷ್ಟೇಕೆ ಜೋರಾಗಿ ಅಳುತ್ತಿದ್ದಾರೆ ಎಂದು ಈ ಎಳೆಯನಿಗೆ ದಿಗಿಲು. ಅಜ್ಜಿ ಹೇಳಿದಳು: "ಅವಳು ಇನ್ನು ತಿರುಗಿ ಬರೂದಿಲ್ಲ. ಬಾಳಾ. ಅವಳು ಸತ್ತು ಹೋದ್ಲಪಾ......." ಎಂದು ನಿಜವಾದ ಸಂಗತಿಯನ್ನು ಹೇಳಿದಾಗ ಹಾಗಾದರೆ ತಂಗಿ ಇನ್ನು ಮರಳಿಬರುವದಿಲ್ಲ ಎಂದು ಕಂಡು ಬಂದಿತು. ತುಂಬ ದುಃಖವಾಯಿತು. ತಾಯಿಯ ಜೊತೆಗೆ ಅವನೂ ರೋದಿಸತೊಡಗಿದ. ಬಹುದಿನಗಳ ಕಾಲ ಈ ರೋದನ ಹೃದಯದಲ್ಲಿ ತಳವೂರಿತ್ತು. ಅದು ಹದವಾಗಿ ಅನಂತರ ಒಂದು ದೀರ್ಘಕವನವಾಗಿ ಮೂಡಿ ನಿಂತಿತ್ತು.

> " ಉದಯದಲ್ಲಿ ಸಂಜೆಯಾಯ್ತೆ ?
> ಬಾಳನರಿಯದವಳು ನಿನ್ನ
> ಬಿದಿಯ ಆಳು ಸೆಳೆದುಕೊಂಡು
> ದೂರವೊಯ್ದ ಹದನವಾವುದೊ ?

ಬಹುಶಃ ಈ ಅನುಭವ ಪುರಾಣಿಕರ ಕಾವ್ಯಕಾವೇರಿಗೆ ಬ್ರಹ್ಮಗಿರಿಯಾಗಿ ಪರಿಣಮಿಸಿತೊ ಏನೊ !

ಉತ್ತಮ ಸಂಸ್ಕಾರದ ಬಲವನ್ನು ನೀಡಿದ ಇನ್ನೊಂದು ಘಟನೆ. ಅಣ್ಣ-ತಮ್ಮಂದಿರ-ತಂದೆ-ಕಕ್ಕ ಪಾಲಾಗುವ ಸಂದರ್ಭ. ತುಂಬ ರಸಕಸಿ. ವಿರಸ ತಲೆದೋರುವ ಹೆದರಿಕೆ ಇವನಿಗೆ. ಎಂಥ ಬಡಿದಾಟ ನಡೆಯಬಹುದೊ ಎಂಬ ಭೀತಿ. ಆದರೆ ಇಲ್ಲಿ ಅಂಥ ಪ್ರಸಂಗವೇ ಉದ್ಭವಿಸಲಿಲ್ಲ. ಈ ಬೇರ್ಪಡಿಕೆಯಲ್ಲಿಯೂ ಪ್ರೀತಿ ಔದಾರ್ಯಗಳು ತೇಲಿ ಬಂದವು. ನಿನಗೆ ಇದು ಇರಲಿ ಎಂದು ಅಣ್ಣ ತಮ್ಮನಿಗೆ ಕೊಟ್ಟರು. ಇದು ನಿನಗೇ ಇರಲಿ ಎಂದು ತಮ್ಮ ಅದನ್ನು ಪುನಃ ಅಣ್ಣನಿಗೆ ನೀಡುತ್ತಿದ್ದ. ಇದು ಎಂಥ ಹೃದಯದ ಸಿರಿವಂತಿಕೆ! ಬಾಲಕನಿಗೆ ನಿಜವಾಗಿಯೂ ಇದು ತುಂಬ ಕುತೂಹಲಕಾರಿಯಾದ ವಿಷಯವೇ ಆಗಿತ್ತು. ತಮ್ಮ ಅಣ್ಣನಿಗೆ ಅವಶ್ಯವಿದ್ದ ಭಾಂಡಿ ಕೊಟ್ಟನಲ್ಲದೇ ವೈದಿಕ ವೃತ್ತಿಯಿಂದ ಉಪಜೀವನ ಸಾಗಿಸುತ್ತಿದ್ದ ಅಣ್ಣನಿಗೆ ಎರಡು ಮೂರು ತಿಂಗಳು ಸಾಲುವಷ್ಟು ಕಾಳುಕಡಿ ಕೊಟ್ಟನು. ಇದು ನಿಜವಾಗಿಯೂ ವಿಲಕ್ಷಣವಾದ ಜೇರೆ ಆಗುವಿಕೆ-ಯಾಗಿತ್ತು ! ಅಂತಃಕರುಣದ ಸವಿಜಲದ ಸಂಪ್ರೋಕ್ಷಣೆ ಓತಪ್ರೋತವಾಗಿ ಹರಿದು ಬಂದಿತ್ತು. ತಮ್ಮನ ಮಗ ಮ್ಯಾಟ್ರಿಕ್ ಪಾಸಾದಾಗ ಅಣ್ಣ ಸಂತೋಷದಿಂದ ಊರ ತುಂಬ ಸಕ್ಕರೆ ಹಂಚಿಬಂದನು. ಇಂಥ ಪ್ರೀತಿಯ ರಸಜೇನನ್ನು ಇವನು ಅನುಭವಿಸಿದನು. ಈಗಲೂ ಆ ಪ್ರಸಂಗವನ್ನು ನೆನೆದಾಗ ಮನಸ್ಸು ತುಂಬಿ ಬರುವದೆಂದು ಕೃಷ್ಣಮೂರ್ತಿ ಪುರಾಣಿಕರು ಹೇಳುತ್ತಾರೆ. "ಇದು ಅಣ್ಣ ತಮ್ಮ ಅವರ ಪ್ರೀತಿಯ ಚಿತ್ರ. ಅವರು ಭಾಗಾದಿಗಳಾಗಲಿಲ್ಲ; ಬಂಧುಗಳಾಗಿಯೇ ದೊಡ್ಡ ಬಾಳನ್ನು ಬೆಳಗಿದರು. ನನ್ನ ಹೃದಯದಲ್ಲಿ ಈ ಬಂಧುಪ್ರೀತಿ ಆಳವಾಗಿ ಬೇರು

ಬಿಟ್ಟಿತು". ಈ ಅಂತಃಕರಣ, ಈ ಪ್ರೀತಿ, ಈ ಔದಾರ್ಯ ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಬಂದವು. ಅವರ ಸಾಹಿತ್ಯಕ್ಕೆ ಇವೆಲ್ಲ ರಸಜಲವಾಗಿ ನಿಂತವು. ಜೀವನವನ್ನು ಉದಾತ್ತವಾಗಿ ಕಾಣುವಂತೆ ಮಾಡಿದವು.

ಮುಲ್ಕಿಪರೀಕ್ಷೆ ಅಭ್ಯಾಸ ಪೂರೈಸಿದ ನಂತರ ತಂದೆ – ತಾಯಿಗಳಿಂದ ಬೀಳ್ಕೊಂಡು ಬಾಗಲಕೋಟೆಗೆ ಬರಬೇಕಾಯಿತು. ಅವರನ್ನು ಮುಂದಕ್ಕೆ ಓದಿಸುವಂಥ ಪರಿಸ್ಥಿತಿ ತಮ್ಮದಲ್ಲ ಎಂದು ಈ ತಂದೆತಾಯಿಗಳಿಗೆ ಒಂದು ರೀತಿ ಮುಜಗರವಾಗುತ್ತಿತ್ತು. ಹಾಗೆಂದು ಮಕ್ಕಳ ಶಿಕ್ಷಣ ಕುಂಠಿತವಾಗಬೇಕೆ? ಕೇವಲ ಲೌಕಿಕ ವಿದ್ಯೆಗೆ ಅದು ಸೀಮಿತವಾಗಿ ನಿಲ್ಲಬೇಕೆ ಎನಿಸುತ್ತಿತ್ತು. ಇಂಥ ಸಂಕಟದ ಪರಿಸ್ಥಿತಿಯಿಂದ ಮಕ್ಕಳೇ ಅವರನ್ನು ಪಾರು ಮಾಡಿದರು. ಈ ಮೂರನೆಯ ಮಗ ಬಾಗಲಕೋಟೆಗೆ ಬಂದು ವಾರದ ಮನೆಗಳನ್ನು ಗೊತ್ತುಮಾಡಿಕೊಂಡು ಶಿಕ್ಷಣವನ್ನು ಮುಂದುವರಿಸಬೇಕೆಂದು ಬಯಸಿದ್ದನು. ಆದರೆ ದೈವವು ಯಾರಿಗೆ ಯಾವ ರೂಪದಲ್ಲಿ ಒದಗಿ ಬರುತ್ತದೆಂದು ಹೇಳುವುದು ಸಾಧ್ಯವಿಲ್ಲವಷ್ಟೇ. ಹಾಗೇ ಈ ಬಾಲನನ್ನು ದೈವ ಅರಸಿಕೊಂಡು ಬಂದಿತು. ವಾರದ ಮನೆಯನ್ನು ಹುಡುಕಿಕೊಂಡು ಬಂದವನಿಗೆ ದೈವ ಓರ್ವ ಸದ್ಗೃಹಸ್ಥರ ಪರಿಚಯವನ್ನೇ ಮಾಡಿಸಿತು. ಅವರು ಇವನನ್ನು ಬೇರೆ ಕಡೆಗೆ ಹೋಗಲು ಬಿಡಲೇ ಇಲ್ಲ. ಅವರೇ ಪರ್ವತಿ ವೆಂಕಟರಾಯರು. ಇದರಿಂದಾಗಿ ಕೃಷ್ಣಮೂರ್ತಿಯವರಿಗೆ ಸುಲಭವಾಗಿ ಓದನ್ನು ಸಾಗಿಸಿಕೊಂಡು ಹೋಗುವುದು ಸಾಧ್ಯವಾಯಿತು. ಒಮ್ಮನಸ್ಸಿನಿಂದ ಅವರ ಅಧ್ಯಯನ ನಡೆಯಿತು. ಆಗ ಇವರು ಬಸವೇಶ್ವರ ಹಾಯಸ್ಕೂಲಿನ ವಿದ್ಯಾರ್ಥಿ. ಶಿಕ್ಷಣ ದಾನದಲ್ಲಿ ಅದು ತುಂಬ ಹೆಸರು ಪಡೆದ ಹಾಯಸ್ಕೂಲ. ಇವರು ಓದುತ್ತಿರುವ ಸಂದರ್ಭದಲ್ಲಿ ಶ್ರೀ ಎಚ್. ಎಫ್. ಕಟ್ಟಿಮನಿಯವರು ಮುಖ್ಯಾಧ್ಯಾಪಕರಾಗಿದ್ದರು. ವಿದ್ಯಾರ್ಥಿಗಳಿಗೆ ಅವರು ಉತ್ತಮವಾದ ಮಾರ್ಗದರ್ಶನವನ್ನು ನೀಡುತ್ತಿದ್ದರು. ಬಾಗಲಕೋಟೆಯ ಈ ದಿನಗಳು ತಮ್ಮ ಜೀವನದಲ್ಲಿಯ ಅಪೂರ್ವವಾದ ದಿನಗಳು ಎಂದು ಕೃಷ್ಣಮೂರ್ತಿಯವರು ಈಗಲೂ ನೆನೆಯುತ್ತಾರೆ. ಅಲ್ಲಿ ಅವರು ಉತ್ತಮ ಶಿಕ್ಷಣ ಪಡೆಯದೇ ಹೋಗಿದ್ದರೆ, ಅಲ್ಲಿಯ ಹಿರಿಯರು ಅದಕ್ಕಾಗಿ ತಮಗೆ ಅನುಕೂಲಗಳನ್ನು ಒದಗಿಸದೇ ಹೋಗಿದ್ದರೆ ತಾವು ಜೀವನದಲ್ಲಿ ಇಷ್ಟೊಂದು ಮುಂದಕ್ಕೆ ಬರುವುದು ಸಾಧ್ಯವಿತ್ತೇ ಎಂದವರು ಪ್ರಶ್ನಿಸಿಕೊಳ್ಳುತ್ತಾರೆ. ಎರಡನೆಯದಾಗಿ ಅವರ ಸಾಹಿತ್ಯಕ ಜೀವನ ಇಲ್ಲಿ ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಪ್ರಾರಂಭವಾಯಿತು. ಸ್ವತಃ ವಿದ್ವಾಂಸರೂ, ಪತ್ರಿಕೋದ್ಯಮಿಗಳೂ ಆಗಿದ್ದ ದಿವಂಗತ ಯಲಗುರ್ದರಾವ ಧಾರವಾಡಕರರು ಇವರನ್ನು ತಮ್ಮಲ್ಲಿಗೆ ಕರೆಸಿಕೊಂಡು ಇವರು ರಚಿಸಿದ ಕವನಗಳನ್ನು ಹೇಳಲು ತಿಳಿಸುತ್ತಿದ್ದರು. ಕೃಷ್ಣಮೂರ್ತಿ ಅವನ್ನು ಭಾವಪೂರ್ಣವಾಗಿ ಹಾಡಿ ತೋರಿಸುತ್ತಿದ್ದರು. ಯಲಗುರ್ದರಾಯರು ಮುಗ್ಧರಾಗಿ ಅವನ್ನು ಕೇಳುತ್ತಿದ್ದರು. ಗಂಟೆಗಟ್ಟಲೆ ಅವರ ಈ ಕಾರ್ಯಕ್ರಮವು ಸಾಗುತ್ತಿತ್ತು. ಈ ಬಗೆಯ ಉತ್ತೇಜನ, ಪ್ರೋತ್ಸಾಹ

ಈ ಬಾಲಕನಿಗೆ ತುಂಬ ಪ್ರಯೋಜನಕಾರಿಯಾಗಿ ಪರಿಣಮಿಸಿತು. ಮುಂದೆ ಹೆಚ್ಚಿನ ಶಿಕ್ಷಣಕ್ಕಾಗಿ ಹೋಗಬೇಕಾಗಿ ಬಂದಾಗ ಅಲ್ಲಿ ಹಿರಿಯ ಪತ್ರಿಕೋದ್ಯಮಿಗಳೂ, ಸಾಹಿತಿಗಳೂ ಆದ ಶ್ರೀ ನಾಯಕ ವೆಂಕಟರಾಯರು ಇವರಿಗೆ ಪ್ರೋತ್ಸಾಹ ನೀಡಿದರು. ಇವರ ಕಾವ್ಯಶಕ್ತಿಗೆ ಈ ಇಬ್ಬರು ಹಿರಿಯರು ಒಳ್ಳೇ ಶ್ರೋತೃಗಳಾಗಿ ದೊರೆತು ನೀರೆರೆದು ಪೋಷಣೆ ನೀಡಿದರು. ಈ ಉತ್ತೇಜನ ಅವರಿಗೆ ಚೇತೋಹಾರಿಯಾಗಿ ಪರಿಣಮಿಸಿತು.

ಬಾಗಲಕೋಟೆಯು ಅವರಿಗೆ ಕಾವ್ಯಶಕ್ತಿಯನ್ನು ನೀಡಿದಂತೆ ಲೇಖನಶಕ್ತಿಯನ್ನು ನೀಡಿದ ಊರೂ ಆಗಿರುವುದು. ಇಲ್ಲಿರುವಾಗಲೇ ಅವರು ಕೆಲ ಕುತೂಹಲಕಾರಿ ವಿಷಯಗಳನ್ನು ಕುರಿತು ಬರೆಯತೊಡಗಿದರು. ಶ್ರೀ ಮಂಗಳವೇಢೆ ಶ್ರೀನಿವಾಸರಾಯರು ಬಾಗಲಕೋಟೆಯಿಂದ ಆಗ ಪ್ರಕಟಿಸುತ್ತಿದ್ದ 'ಕನ್ನಡಿಗ' ಪತ್ರಿಕೆಯಲ್ಲಿ ಇವರು ಹಲವಾರು ಲೇಖನಗಳನ್ನು ಬರೆದರು. ಇವರ ಗದ್ಯ ಬರವಣಿಗೆ ಪ್ರಾರಂಭವಾದುದು ಈ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಟೀಕೆಗೆ ಪ್ರತಿ ಟೀಕೆಯನ್ನು ಬರೆದು. 'ಕರ್ನಾಟಕ ವೈಭವ'ದಲ್ಲಿ ಚಿರಾಪುಂಜಿಯ ಮೇಲೆ ಇಷ್ಟು ಇಂಚು ಮಳೆಯಾಯಿತು ಎಂಬ ಸುದ್ದಿ ಬಂದಿತು. ಬಾಗಲಕೋಟೆಯಿಂದ ಪ್ರಕಟವಾಗುತ್ತಿದ್ದ 'ಕನ್ನಡಿಗ' ಪತ್ರಿಕೆಯಲ್ಲಿ 'ನನಗೆ ತೋಚಿದಂತೆ' ಕಾಲಮ್ಮಿನಲ್ಲಿ, ಚಿರಾಪುಂಜಿಯ ಮೇಲೆ ಮಳೆಯಾಯಿತಂತೆ. ಬುಡಕ್ಕೆ ಆಗಲಿಲ್ಲ. ನಮ್ಮ ಪುಣ್ಯ ಎಂದು ಟೀಕೆ ಮಾಡಿತು. ವಿದ್ಯಾರ್ಥಿ ಪುರಾಣಿಕರಿಗೆ ಈ ಟೀಕೆ ಸರಿ ಬರಲಿಲ್ಲ. ಪುರಾಣಿಕಪುತ್ರ ಹೆಸರಿನಲ್ಲಿ ಅವರೊಂದು ಪ್ರತಿ ಲೇಖನ ಬರೆದು 'ಕರ್ನಾಟಕ ವೈಭವ'ಕ್ಕೆ ಕಳಿಸಿದರು. "ಈ ಊರ ಹಾದಿ ಯಾವ ಯಾವ ಹಳ್ಳಿಗಳ ಮೇಲಿಂದ ಹೋಗುತ್ತದೆ ಎಂದು ಕೇಳಿದರೆ ಅದು ಆ ಹಳ್ಳಿಗಳ ಕುಂಬಿಗಳ ಮೇಲೆ ಹೋದಂತೆ ಎನ್ನಬಹುದೆ? ಅಥವಾ ಊಟಕ್ಕೆ ಎಲೆಯ ಮೇಲೆ ಕೊಡು ಎಂದಾಗ ಎಲೆಯ ಮೇಲೆಯೇ ಕೊಡು ಎಂದಂತಾಯಿತೆ?" ಹೀಗೆ ಆ ಲೇಖನದ ಧಾಟಿ ಇದ್ದಿತು. ಈ ಬಗೆಗೆ ಸುಮಾರು ಆರು ತಿಂಗಳ ಕಾಲ ಚರ್ಚೆ ನಡೆಯಿತು. ಆದರೆ ಯಾರಿಗೂ ಈ ಲೇಖವು ಹಾಯಸ್ಕೂಲಿನ ವಿದ್ಯಾರ್ಥಿಯದು ಎಂದು ತಿಳಿಯದು. ಪುರಾಣಿಕರಿಗೆ ಗದ್ಯದತ್ತ ಒಲವು ಮೂಡಿದ್ದು; ಗದ್ಯಲೇಖನವನ್ನು ಬರೆಯತೊಡಗಿದ್ದು ಹೀಗೆ. ಇಂಥ ಕುತೂಹಲದೊಂದಿಗೆ ಅವರು ಹಲವಾರು ಬಾರಿ ಉಪದ್ವ್ಯಾಪವನ್ನು ಮಾಡಿದ್ದು ಉಂಟು. ತಂದೆ-ತಾಯಿಗಳನ್ನು ಅವರು ಇಂಥ ಪ್ರಶ್ನೆಗಳನ್ನು ಕೇಳಲು ಹೋಗುತ್ತಿರಲಿಲ್ಲ. ಆದರೆ ಒಂದು ಸಲ ಬೀಳಗಿಯ ಹಿರಿಯ ಆಚಾರ್ಯರೊಬ್ಬರಿಗೆ ಕೇಳಿದರು : "ಆಚಾರ್ಯರೇ, ನನಗೊಂದು ಸಮಸ್ಯೆ ನೀವು ಪರಿಹರಿಸಬೇಕು." ಪಾಪ ಅವರು ತುಂಬ ಭಾವಿಕರು; ಶ್ರದ್ಧಾವಂತರು. ಪ್ರಶ್ನೆ ಕೇಳುವ ಬಾಲಕ ಮುಖ್ಯಾಧ್ಯಾಪಕರ ಮತ್ತು ವೈದಿಕವಿದ್ಯೆಯಲ್ಲಿ ಪಾರಂಗತರಾದ ತಮ್ಮಣ್ಣಶಾಸ್ತ್ರಿಗಳ ಮಗ. ಅವನಿಗೇನೋ ಕುತೂಹಲವಿರಬೇಕು. ಏನನ್ನೋ ಓದಿದ್ದಾನೆ; ಅದು ಹೊಳೆದಿಲ್ಲ.

ತಂದೆಯನ್ನು ಕೇಳಲು ನಾಚಿಕೆಯಾಗಿರಬೇಕು. ಇಲ್ಲವೇ ತನಗೆ ತಿಳಿಯದು ಎಂದು ತಂದೆಗೆ ಅಜ್ಞಾನವನ್ನು ಪ್ರದರ್ಶಿಸಲು ಮಗ ಹಿಂದೆ–ಮುಂದೆ ನೋಡುತ್ತಿರಬೇಕು. ಆಗಲಿ, ಏನು ಕೇಳುವನೋ ಕೇಳಲಿ. ತಮ್ಮಿಂದ ಸಾಧ್ಯವಾದ ಪರಿಹಾರ ನೀಡೋಣ ಎಂದುಕೊಂಡರೇನೊ! ತಮ್ಮಣ್ಣಶಾಸ್ತ್ರಿಗಳಿಗೇ ತಾವು ಸಮಾಧಾನವನ್ನು ನೀಡುತ್ತಿದ್ದೇವೇನೊ ಎಂಬ ಸಮಾಧಾನ ಈ ಆಚಾರ್ಯರಿಗೆ "ಸರಿ, ಕೇಳಪ್ಪಾ. ನಿನಗೆ ಏನು ಬೇಕೊ ಅದನ್ನು ಕೇಳು. ನಿನಗೆ ತಿಳಿಯದೇ ಹೋಗಿದ್ದರೆ ನಾನು ವಿವರಿಸುವೆ. ತಮ್ಮಣ್ಣಶಾಸ್ತ್ರಿಗಳ ಮಗು ಅವರನ್ನು ಕೇಳದೇ ನನ್ನನ್ನು ಕೇಳುತ್ತಿ ಎಂದ ಮೇಲೆ ಅದರಲ್ಲಿ ಏನೋ ವಿಶೇಷವಿರಬೇಕು" ಎಂದು ಕೇಳಿದರು. "ಹೌದು ಆಚಾರ್ಯರೇ ವಿಶೇಷವಿದೆಯೆಂತಲೇ ನಿಮ್ಮನ್ನು ಕೇಳುತ್ತಿದ್ದೇನೆ." ಎನ್ನುವ ಈ ತುಂಟ ಬಾಲಕನಲ್ಲಿ ಆಗಲೂ ಗಾಂಭೀರ್ಯವೇ. ಆಚಾರ್ಯರು ಕೇಳು ಎನ್ನುವ ಮುಖಭಾವ ಮಾಡಿದರು. ಈ ಬಾಲಕನು ಕೇಳಿದನು: "ಆಚಾರ್ಯರೇ ದ್ರೌಪದಿಗೆ ಐದು ಜನರು ಗಂಡಂದಿರಷ್ಟೇ. ನಮ್ಮಲ್ಲಿ ಗಂಡ ಸತ್ತಾಗ ಹೆಂಡತಿಯ ತಲೆ ಬೋಳಿಸುವರಷ್ಟೇ. ಈಗ ಹೇಳಿ ದ್ರೌಪದಿಯ ಒಬ್ಬ ಗಂಡ ತೀರಿಕೊಂಡಿದ್ದರೆ ಅವಳು ಅವನಿಗಾಗಿ ಎಷ್ಟು ಕೂದಲುಗಳನ್ನು ತೆಗೆಸಿಕೊಳ್ಳಬೇಕಾಗುತ್ತಿತ್ತು?" ಆಚಾರ್ಯರು ದಿಙ್ಮೂಢರಾದರು. ತಮ್ಮಣ್ಣ ಶಾಸ್ತ್ರಿಗಳ ಮಗ ಇಂಥ ಪ್ರಶ್ನೆಯನ್ನು ಕೇಳಿಯಾನೆಂದು ಅವರು ನಿರೀಕ್ಷಿಸಿರಲಿಲ್ಲ. "ಹೋಗೊ ಹೋಗೊ" ಎಂದವರೇ ಅವರು ಅಲ್ಲಿಂದ ಕಾಲುಕಿತ್ತರು. ಈ ಬಾಲಕ ತುಂಟತನದ ನಗೆನಕ್ಕ "ಇದರಲ್ಲಿ ಉಪದ್ವ್ಯಾಪವೇನೂ ಇರಲಿಲ್ಲ. ನಮ್ಮ ಜನರ ಪದ್ಧತಿಯನ್ನು ಗಮನಿಸಿದಾಗ ನನಗೆ ಸಹಜವಾಗಿ ಈ ವಿಷಯಕವಾಗಿ ಕುತೂಹಲ ತಲೆದೋರಿತು. ಇಂಥ ಪ್ರಶ್ನೆಯನ್ನು ಹೇಗೆ ಬಿಡಿಸುತ್ತಿದ್ದರು? ತಂದೆಯನ್ನು ಕೇಳುವುದು ಸರಿಯೆನಿಸಲಿಲ್ಲ. ತುಂಬ ಧಾರ್ಮಿಕ ಪ್ರವೃತ್ತಿಯವರು ಅವರು. ಅವರಿಗೆ ಈ ಪ್ರಶ್ನೆಯೇ ಅಪದ್ಧವೆನಿಸುವುದು ಸ್ವಾಭಾವಿಕ. ಅವರ ಮನವನ್ನು ನೋಯಿಸುವುದು ನನ್ನ ಮನಸ್ಸಿಗೆ ಬರಲಿಲ್ಲ. ಆದರೆ ಕುತೂಹಲವನ್ನು ತಡೆದಿಟ್ಟುಕೊಳ್ಳಲಾಗಲಿಲ್ಲ. ಕೇಳಿ ಛೀಮಾರಿ ಹಾಕಿಸಿಕೊಂಡೆ. ಇಂಥ ಪ್ರಶ್ನೆಗಳ ಎಷಯಕವಾಗಿ ಮುಂದೆಯೂ ಹಲವಾರು ಸಲ ನನ್ನಲ್ಲಿ ಕುತೂಹಲ ಮೂಡಿ ನಿಂತಿದೆ. ಮಹಾಭಾರತ ಯುದ್ಧ ಸಮಯದಲ್ಲಿ ಕರ್ಣನ ವಯಸ್ಸು ಎಷ್ಟಿದ್ದಿತ್ತು? ಎಷ್ಟಿರಬೇಕು ಎಂಬ ಪ್ರಶ್ನೆ ಕೆಲಕಾಲ ಕಾಡಿತು. ವಚನ ಭಾರತ ಬರೆದ ಪ್ರಸಿದ್ಧ ವಿದ್ವಾಂಸರು ದಿ. ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಈ ಬಗೆಗೆ ಕೇಳಿದರೆ ಪರಿಹಾರವು ದೊರೆಯಬಹುದೆಂದು ಅವರಿಗೆ ಬರೆದೆ. ಅವರೇನೂ ಕೋಪಗೊಳ್ಳಲಿಲ್ಲ. ಅವನ ವಯಸ್ಸು ಖಚಿತವಾಗಿ ತಿಳಿಯದು ಎಂದು ಅವರು ಉತ್ತರಿಸಿದರು. ನನ್ನ ಕುತೂಹಲ ತಣಿಯಲಿಲ್ಲ." ಈ ಘಟನೆ ಸಂಭವಿಸಿದ ಐವತ್ತು ವರುಷಗಳ ನಂತರ ಶ್ರೀ ಕೃಷ್ಣಮೂರ್ತಿ ಪುರಾಣಿಕರು ಈ ವಿಷಯವನ್ನು ನೆನೆದು ಅಂದಿನ ಆ ಗಾಂಭೀರ್ಯದಿಂದಲೇ ಹೇಳುವಾಗ ಬಾಲ ಕೃಷ್ಣಮೂರ್ತಿಯಲ್ಲಿ

ಉಪನ್ಯಾಸಕ್ಕಿಂತ ಕುತೂಹಲವೇ ಇತ್ತೆಂದು ಒಡೆದು ಕಾಣುವುದು. ಬಹುಶಃ ಈ ಬಗೆಯ ಕುತೂಹಲಭಾವದಿಂದಲೇ ಅವರು ಜೀವನವನ್ನು ಒಳಹೊಕ್ಕು ನೋಡಲು ಸಾಧ್ಯವಾಗಿದ್ದರಿಂದ ಜೀವನದ ವಿವಿಧ ಪರಿಗಳ ಪರಿಚಯವನ್ನು ಅವರು ಮಾಡಿ ಕೊಳ್ಳಲು ಸಾಧ್ಯವಾಯಿತು ಎಂದು ತೋರುತ್ತದೆ.

ಬಾಲ್ಯದಲ್ಲಿಯೇ ಅವರು ಸಂಘಟನಾಶಕ್ತಿಯನ್ನು ಒಡೆದು ತೋರಿದ್ದರು. ಬಾಗಲಕೋಟೆಯಲ್ಲಿ ಬಲಭೀಮ ವಾಚನಾಲಯವನ್ನು ಅವರು ಕಟ್ಟಿದರು. ಅವರ ಸ್ನೇಹಿತರನೇಕರು ಅವರಿಗೆ ಈ ಕಾರ್ಯದಲ್ಲಿ ತುಂಬ ನೆರವು ನೀಡುತ್ತಿದ್ದರು. ಹಲವಾರು ದಿನಗಳ ಕಾಲ ಅದು ಒಳ್ಳೇ ಭರದಿಂದಲೇ ನಡೆದುಬಂದಿತು. ಕಾಲ ಕ್ರಮೇಣ ಪ್ರೋತ್ಸಾಹದ ಅಭಾವದಿಂದಾಗಿ ಅದು ನಿಂತು ಹೋಗಬೇಕಾಗಿ ಬಂದಿತು ; ಆ ಮಾತು ಬೇರೆ. ಇನ್ನು ಹಾಯಸ್ಕೂಲದಲ್ಲಿರುವಾಗಲೇ ರಣದುಂದುಭಿ "ದಂಡಿ ಯಾತ್ರೆಯ ಕಂಪಣಿ ಹೋಗಿ" ಎಂಬ ಕವನವನ್ನು ರಚಿಸಿ ದೇಶಪ್ರೇಮವನ್ನು ಅವರು ಮೆರೆದಿದ್ದರು. ಅದನ್ನು ಹಾಡಿಯೂ ಹಾಡುತ್ತಿದ್ದರು. ಆಗ ಅವರನ್ನು ಬಂಧಿಸು-ವರೆಂಬ ಭೀತಿ ಕೂಡ ತಲೆದೋರಿತ್ತು. ತಂದೆ-ತಾಯಿಯವರಂತೂ ಈ ಸಂದರ್ಭದಲ್ಲಿ ತುಂಬ ಕಾತುರರಾಗಿದ್ದರು. ತಮ್ಮ ಮಕ್ಕಳಾರೂ ಸೆರೆಮನೆಗೆ ಹೋಗಿಲ್ಲ : ಇವನೇನು ಮಾಡಿಕೊಳ್ಳುವನೋ ? ನಾಲ್ಕು ಜನರಲ್ಲಿ ತಾವು ಹೇಗೆ ನಡೆಯಬೇಕು ಎಂಬುದೇ ಅವರ ಭೀತಿಗೆ ಕಾರಣ. ಅಂಥದೇನೂ ಸಂಭವಿಸಲಿಲ್ಲ. ಪ್ರತಿಯಾಗಿ ಅನೇಕರು ಈ ಬಾಲ ದೇಶಪ್ರೇಮಿಯನ್ನು ಬಹಳವಾಗಿ ಕೊಂಡಾಡಿದರು. ಅವರ ಈ ಬಗೆಯ ಕಾವ್ಯರಚನೆಗೆ ಅದು ಒಂದು ಒಳ್ಳೇ ಸ್ಫೂರ್ತಿಯಾಗಿ ನಿಂತಿತು. ಹಾಯ-ಸ್ಕೂಲದಲ್ಲಿರುವಾಗ ಇವರ ರಾಷ್ಟ್ರಪ್ರೇಮ ಮೆರೆದ ಘಟನೆಯೊಂದು ಸಂಭವಿಸಿತು. ಶಾಲೆಗೆ ಮನ್ನಣೆ ನೀಡುವ ಸಂದರ್ಭದಲ್ಲಿ ಆಯೋಗವೊಂದು ಪರಿಶೀಲನೆಗೆ ಬರುತ್ತಿತ್ತು. ಅದು ಜಕಮಣಿಯ ಕಾಲ ಬೇರೆ. ಶಾಲೆಯಲ್ಲಿ ಪಂಚಮ ಜಾರ್ಜ ಬಾದಶಹರ ಹಾಗೂ ವಿಕ್ಟೋರಿಯಾ ಮಹಾರಾಣಿಯವರ ಫೋಟೋಗಳನ್ನು ಇರಿಸಲಾಗಿತ್ತು. ಆದರೆ ಆಯೋಗ ಬರುವಾಗ ಆ ಫೋಟೋಗಳು ಮಾಯವಾಗಿದ್ದವು. ಅಲ್ಲಿ ಗಾಂಧಿ, ನೆಹರು, ಸುಭಾಸಬೋಸರ ಚಿತ್ರಗಳನ್ನು ತೂಗು ಹಾಕಲಾಗಿತ್ತು. ಮುಖ್ಯಾಧ್ಯಾಪಕ ಕಟ್ಟಿಮನಿಯವರು ಇದನ್ನು ಗಮನಿಸಿದರು. ಅವರಿಗೆ ತುಂಬ ಕಳವಳವೆನಿಸಿದರೂ ಯಾರು ಹಾಕಿದ್ದಾರೆಂದು ವಿಚಾರಿಸಿ ತಿಳಿದುಕೊಂಡರು. ಹಿರಿಯ ಹುಡ್ಗರಿಯೊಬ್ಬನು ತಾನು ಮಾಡಿದ್ದನ್ನೂ, ಅವನಿಗೆ ನೆರವಾದುದನ್ನೂ, ವಿದ್ಯಾರ್ಥಿ ಪುರಾಣಿಕರೂ ಒಪ್ಪಿಕೊಂಡರು. ಆಯೋಗವು ಬಂದು ಹೋದ ಮರುದಿನ ಬಾದಶಹರ ಫೋಟೊ ಸುಟ್ಟು ಹೋಗಿತ್ತು. ಊರಿನಲ್ಲಿ ಈ ಸುದ್ದಿ ಹಬ್ಬಿತು. ಹಿರಿಯ ಹುಡ್ಗರಿಯನ್ನು, ಇವರನ್ನು ಪೋಲಿಸ್ ಸ್ಟೇಶನ್ನಿಗೆ ಒಯ್ದು ವಿಚಾರಿಸು-ವಷ್ಟರಲ್ಲಿ ಮುಖ್ಯಾಧ್ಯಾಪಕ ಕಟ್ಟಿಮನಿ ಅವರು ಅಲ್ಲಿಗೆ ಧಾವಿಸಿ ಬಂದು ಬಾದಶಹರ ಫೋಟೊ ಸುಟ್ಟಿಲ್ಲವೆಂದೂ ಅದು ಕಚೇರಿಯಲ್ಲಿ ಸುರಕ್ಷಿತವಾಗಿರುವದಾಗಿಯೂ

ತಿಳಿಸಿದ್ದರಿಂದ ಇವರನ್ನು ಬಿಟ್ಟುಬಿಟ್ಟರು.

ಈ ರಾಷ್ಟ್ರೀಯಪ್ರೇಮ ಪುರಾಣಿಕರಲ್ಲಿ ಬಾಲ್ಯದಿಂದಲೇ ಮೂಡಿ ನಿಂತಿತ್ತು. ಇವರ ಚಿಕ್ಕಜ್ಜ ಶೀಘ್ರ ಕವಿಗಳು. ಆಗಿಂದಾಗ ಕವನಗಳನ್ನು ರಚಿಸುತ್ತಿದ್ದರು. "ಅಹಾ ಏನು ಆ ಕಾಂತಾಯ ಲೋಕದೊಳಗೆ?" ಮತ್ತು "ಬಂದಂಥ ಮರ್ಘಟವು ಬಯಲಾಯ್ತು" ಹೀಗೆ ಎರಡು ಪದಗಳನ್ನು ಅವರು ಈ ಬಾಲನಿಗೆ ಕಂಠಪಾಠ ಮಾಡಿಸಿದ್ದರು. ಒಂದು ಟಿಳಕರ ಸಾವಿಗೆ ಸಂಬಂಧಿಸಿದ್ದರೆ ಇನ್ನೊಂದು ಗಾಂಧಿ ಸೂತ್ರ ಹಿಡಿದ ಬಳಿಕ ಆದ ಅನಿಸಿಕೆ. ಬಾಲಕೃಷ್ಣನು ಹಾವಭಾವದಿಂದ ಹಾಡುತ್ತಿದ್ದನು. ಆ ಎಳೆಯರಂಥರಲ್ಲಿದ್ದ ಮಾಧುರ್ಯವನ್ನು ಕೇಳಿ ಜನ ಕೂಡುತ್ತಿದ್ದರು. ಆಗಾಗ ಇವನು ಭಾರತಮಾತಾಕಿ ಜಯ್ ಎಂದು ಕೂಗಿ ಜನರನ್ನು ಕೂಗಿಸಲು ಹಚ್ಚುತ್ತಿದ್ದನು. ಇಂಥ ಸಂದರ್ಭದಲ್ಲಿ ಒಂದು ದಿನ ಪೋಲಿಸರು ಇವನನ್ನು ಪೋಲಿಸ ಕಚೇರಿಗೆ ಕರೆದೊಯ್ದರು. ಖಾಕಿಧಾರಿ ಫೌಜದಾರರು ಕುಡಿ ಮೀಸೆ ತಿರುವುತ್ತ ಕೇಳಿದರು.

"ತಮ್ಮಣ್ಣಭಟ್ಟ ಮಾಸ್ತರ ಮಗಾ ಏನು ನೀನು?"

ಕೃಷ್ಣನಿಗೆ ಅಚ್ಚರಿ. ತಾನು ಅವರ ಮನೆಗೆ ಬಾಲ ಬ್ರಹ್ಮಚಾರಿಯಾಗಿ ಊಟಕ್ಕೆ ಹೋಗಿದ್ದರೂ ಫೌಜದಾರರು ತನ್ನ ಪರಿಚಯವನ್ನು ಮರೆತಿದ್ದಾರಲ್ಲ ಎನಿಸಿತು. ಈ ಹೊತ್ತಿಗೆ ಮಾಸ್ತರರು ಬಂದರು.

"ನಿಮ್ಮ ಮಗನ್ನ ಬಂದೋಬಸ್ತಿನಾಗ ಇಡ್ರಿ ಮಾಸ್ತರ" ಫೌಜದಾರರು ಒಳ್ಳೇ ಆಥ್ಯತೆಯಿಂದ ಹೇಳಿದರು.

"ಕೃಷ್ಣ ಅಂಥಾದ್ದೇನು ಮಾಡ್ಯಾನ?" ಅಚ್ಚರಿಯಿಂದ ಅವರು ಕೇಳಿದರು.

"ಸಭಾದಾಗ ಹಾಡತಾನ; ಚಳವಳಿ ಮಾಡತಾನ"

"ನಮ್ಮ ಹುಡುಗನ ಧನೀನ ಅಷ್ಟು ಛಂದ ಅದ" ಮಾಸ್ತರರು ವಿವರಿಸಿ-ದರು.

"ಅದಕ್ಕ ಅವನ್ನ ರಿಮಾಂಡ ಹೋಮಿಗೆ, ಜೇಲಿಗೆ ಕಳಿಸಬೇಕಾಗತದ".

"ಅಂ ಏನಂದರಿ?"

"ನೀವು ಸರಕಾರಿ ಪಗಾರ ತಿಂತೀರಿ. ನಿಮ್ಮ ಮಗ ರಾಜದ್ರೋಹದ ಕೆಲಸ ಮಾಡಲಿಕ್ಕೆ ಹತ್ಯಾನ".

"ಅದು ರಾಷ್ಟ್ರದ ಕೆಲಸ........"

"ನಿಮಗ ನೌಕರಿ ಕಳಕೋಬೇಕಾಗೇದೇನು?"

"ಸಾಹೇಬರ ನಮ್ಮ ಮನೆತನದಾಗ ನೌಕರಿ ಯಾರೂ ಮಾಡೇ ಇಲ್ಲ. ವೈದಿಕಿ ಜೋಳಗಿ ಬಾಯಿ ಬ್ಯಾಳ ಅಗಲ ಇರತದ. ನನ್ನ ಮಗ ಏನು ಕೆಟ್ಟಕೆಲಸ ಮಾಡೂ ದಿಲ್ಲ. ದೇಶದ ಹಾಡು ಹಾಡತಾನ. ನಾ ಹ್ಯಾಂಗ ಬ್ಯಾಡ ಅನ್ಲಿ." ಇಷ್ಟು ಹೇಳಿ ಮಾಸ್ತರರು ಬರಬರನೆ ಹೊರಟುಹೋದರು.

ಎಳೆಯ ಕೃಷ್ಣನಿಗೆ ತಂದೆಯ ಈ ಮಾತು ಕೇಳಿ ರೋಮಾಂಚನವಾಯಿತು. ಅವರೊಬ್ಬ ಶ್ರೇಷ್ಠ ಪುರುಷರಾಗಿ ಕೃಷ್ಣನಿಗೆ ಕಂಗೊಳಿಸಿದ್ದರೆ ಅದರಲ್ಲಿ ಅಚ್ಚರಿಯೇನು?

ಇವರು ಹಾಯಸ್ಕೂಲದಲ್ಲಿರುವಾಗ ಚಳವಳಿ ಉಗ್ರವಾಗಿತ್ತು. ದಿನಾಲು ಪ್ರಭಾತಫೇರಿ ತೆಗೆಯುತ್ತಿದ್ದರು. "ಸೇಂದಿ, ಸರಾಯಿಯ ಕುಡಿಯುವ ಜನರೇ ಕೇಳಿರಿ ನೀವೆಲ್ಲ" ಎಂಬ ಪದವನ್ನು ಗುಂಪಿನಲ್ಲಿ ಹಾಡುತ್ತ ತಿರುಗುತ್ತಿದ್ದರು. ದುಮುದುಮಿ ಪದಗಳನ್ನು ಬರೆದು ಒಳ್ಳೇ ಹೌಸಿನಿಂದ ಸಭೆಗಳಲ್ಲಿ ಹಾಡುತ್ತಿದ್ದರು. ದಿ. ಹಣಮಂತರಾವ ಕೌಜಲಗಿ ಅವರು ಈ ಪದಗಳನ್ನು, ಇವರನ್ನು ತುಂಬ ಮೆಚ್ಚಿಕೊಂಡಿದ್ದರು. ಚುನಾವಣೆ, ಬಹಿಷ್ಕಾರ ಹಾಕುವುದರಲ್ಲಿ ಭಾಗವಹಿಸಿ ಸೆರೆಮನೆಗೆ ಹೋಗಬೇಕೆಂದು ಇವನು ಹವಣಿಸಿದನು. ಆದರೆ ಹಣಮಂತರಾಯರು ಇವರನ್ನು ಪರಾಙ್ಮುಖಗೊಳಿಸಿ ಅನೇಕ ಪುಸ್ತಕಗಳ ಯಾದಿಕೊಟ್ಟು ಓದಲು ಹೇಳಿದರು. ಹಣಮಂತರಾಯರೊಮ್ಮೆ ಖಾದಿ ಮಾರಾಟಕ್ಕೆ ಹೊರಟಿದ್ದರು. ಅದು ಪೂರ್ಣವಾಗುವವರೆಗೆ ಊಟ ಕೂಡ ಮಾಡುವದಿಲ್ಲವೆಂದು ಪ್ರತಿಜ್ಞೆ ಸ್ವೀಕರಿಸಿದ್ದರು. ಅವರೊಂದಿಗೆ ಕೃಷ್ಣ ಸಂಘ ಎಳೆಯ ವಿದ್ಯಾರ್ಥಿಗಳು ಸಾಗಿದ್ದರು. ಹಣಮಂತರಾಯರು ಆಗಲೂ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಿದ್ದುದು ಈ ಎಳೆಯನಿಗೆ ದಿವ್ಯ ಸಂಜೀವಿನಿಯಾಗಿತ್ತು. ಆದರೆ ಸರಳತೆಗೆ ಸರಳತೆಯ ಪಾಠ ಕಲಿಸುವ ಈ ಜೀವಿ, ಚುನಾವಣೆಯಲ್ಲಿ ಸೋತಾಗ ಎಳೆಯ ಕೃಷ್ಣನಿಗೆ ಅಚ್ಚರಿಯೆನಿಸಿತು. ಆದರೆ ಅವರ ಬಗೆಗೆ ಪುರಾಣಿಕರ ಹೃದಯ ಈಗಲೂ ಕೃತಜ್ಞತೆಯಿಂದ ತುಂಬಿದೆ.

ಪುರಾಣಿಕರು ರಾಜಕೀಯ ರಂಗದಿಂದ ದೂರ ಉಳಿಯಲು ಇನ್ನು ಒಂದು ಪ್ರಸಂಗವು ಮುಖ್ಯ ಕಾರಣವಾಗಿ ಪರಿಣಮಿಸಿತು. ಅದೇಕೆ ಮುಂದೆ ಅವರು ಕಾಂಗ್ರೆಸ್ಸಿನಿಂದಲೂ ದೂರವುಳಿಯಲು ಅದು ಕಾರಣವಾಗಿ ಪರಿಣಮಿಸಿತೇನೊ? ಅದು ಘಟಿಸಿದ್ದು ವಿದ್ಯಾರ್ಥಿದೆಸೆಯಲ್ಲಿಯೇ. ಆಗ ಸೇಂದಿ ಗಿಡಗಳನ್ನು ಕಡಿಯುವ ಕಾರ್ಯಕ್ರಮ ಭರದಿಂದ ಸಾಗಿದ್ದಿತು. ಕೆರೂರ ಬಳಿ ಇರುವ ಮುಗುಟಗೇರಿ ಸೇಂದಿ ಬನವನ್ನು ಕಡಿಯಲು ವಿದ್ಯಾರ್ಥಿಗಳನ್ನು ಸಂಘಟಿಸಲಾಗಿತ್ತು. ಹತ್ತುಜನ ಧುರೀಣರು ಇವರ ನೇತೃತ್ವ ವಹಿಸಿದ್ದರು. ಮಧ್ಯಾಹ್ನದ ವರೆಗೆ ಸೇಂದಿ ಗಿಡಗಳನ್ನು ಕಡಿಯುವುದು ನಂತರ ಹಳ್ಳದ ದಂಡೆಯ ಮೇಲೆ ಕುಳಿತು ಭಿಕ್ಷೆ ಬೇಡಿ ತಂದ ರೊಟ್ಟಿ, ಖಾರ, ಮೊಸರು, ಉಳ್ಳಿಗಡ್ಡಿ ತಿನ್ನುವುದು. ಶ್ರೀಮಂತರ ಮಕ್ಕಳೂ ಕೂಡ ಈ ಕದನ್ನವನ್ನು ಕಚ್ಚಿಕಚ್ಚಿ ತಿನ್ನುತ್ತಿದ್ದರು. ವಿದ್ಯಾರ್ಥಿ ಕೃಷ್ಣನು ಇವರಲ್ಲಿ ಪಾಲ್ಗೊಂಡಿದ್ದನು. ಒಂದು ದಿನ ಸಾಯಂಕಾಲ ತಲೆಶೂಲಿ ಎದ್ದುದರಿಂದ ಕೃಷ್ಣನು ಮುಗುಟಗೇರಿ ಶಿಬಿರದಿಂದ ಕೆರೂರಲ್ಲಿರುವ ಧುರೀಣರ ಶಿಬಿರಕ್ಕೆ ಬಂದನು. ಈ ಧುರೀಣರಲ್ಲಿ ಇಬ್ಬರು ಸ್ತ್ರೀಯರೂ ಇದ್ದರು. ಮಾರುತಿ ಗುಡಿಯಲ್ಲಿ ಈ ಧುರೀಣರ ಬಿಡಾರ. ಕೃಷ್ಣನು ಅಲ್ಲಿಗೆ ಹೋದಾಗ ಈ ಧುರೀಣರು ತುಪ್ಪದ ಶಿರಾ, ಸೂಸಲ ಅವಲಕ್ಕಿ, ನೀರುಳ್ಳಿ ಬುರಬುರಿ ಸೇವಿಸುತ್ತ ಉಪನ್ಯಾಸದ ತಯಾರಿ ನಡೆಸಿದ್ದರು. ಕೃಷ್ಣನಿಗೆ ಈ ದೃಶ್ಯ

ವನ್ನು ನೋಡಲಾಗಲಿಲ್ಲ. ಮನಸ್ಸಿಗೆ ಕಚ್ ಎನಿಸಿತು. ತುಂಬ ಖೇದವೂ ಆಯಿತು. ಸ್ವಯಂಸೇವಕರು ಕದನ್ನವನ್ನು ತಿನ್ನುತ್ತಿರುವಾಗ ಧುರೀಣರು ಸುಗ್ರಾಸ ಭೋಜನ ಮಾಡುತ್ತಿರುವುದು ಅನ್ಯಾಯವೆನ್ನಿಸಿತು. ಅವರು ಇವನನ್ನು ದಂಡಿಸಬೇಕೆಂದು ವಿಚಾರಿಸಿ ಛೀಮಾರಿ ಹಾಕಿದರು. "ಶಿಸ್ತು ಭಂಗ ಮಾಡಿದವರು ನೀವು" ಎಂದು ಕೃಷ್ಣನು ಅವರಿಗೆ ಹೇಳಿದವನೇ ಅಲ್ಲಿಂದ ಬರಬರನೆ ಹೊರಟುಬಿಟ್ಟನು. ನೇರವಾಗಿ ಬಾಗಿಲಕೋಟೆಗೆ ಹೋಗಿ ಡಾ. ಹರ್ಡಿಕರರಿಗೆ ವರದಿಯೊಪ್ಪಿಸಿದನು. ಧುರೀಣರ ಈ ವರ್ತನೆ ಅವನಲ್ಲಿ ತುಂಬ ಬೇಸರವನ್ನು ತಂದಿತು.

ಹಾಯಸ್ಕೂಲದಲ್ಲಿರುವಾಗಲೇ ಅವರು ತುಂಬ ನೆನಪಿಡುವ ಸಂಗತಿಯೊಂದು ಘಟಿಸಿತು. ಆ ಕಾಲಕ್ಕೆ ಚಹದಂಗಡಿಗೆ ಹೋಗುವುದು ಅದರಲ್ಲಿಯೂ ಎಳೆಯರು ಹೋಗುವದಂತೂ ಅಪರಾಧವೇ ಎನಿಸಿತ್ತು. ಆದರೆ ಕೃಷ್ಣನಿಗೆ ಅದೊಂದು ಸಮಸ್ಯೆ ಆಗಿತ್ತು. ಪರಸ್ಥಳದಿಂದ ಬಂದ ಅವನಿಗೆ ಸರಿಯಾಗಿ ಊಟವಾಗದಾಗ ಚಹದಂಗಡಿಗೆ ಹೋಗುವದು ಅನಿವಾರ್ಯವಾಗುತ್ತಿತ್ತು. ಅವನೂ ಅಂಜುತ್ತ ಅಳುಕುತ್ತ ಹೋಗುತ್ತಿದ್ದ. ಒಮ್ಮೆ ಓರ್ವ ಶಿಕ್ಷಕರ ಕೈಯಲ್ಲಿ ಇವನು ಸಿಕ್ಕುಬಿದ್ದಾಗ ವರ್ಗದಲ್ಲಿ ಆ ವಿಷಯವೆತ್ತಿ ತುಂಬ ಅವಮಾನಕರ ರೀತಿಯಲ್ಲಿ ಜರಿದು ಮಾತನಾಡಿದರು. ಎಳೆಯ ಕೃಷ್ಣನ ಮನಸ್ಸಿನ ಮೇಲೆ ತುಂಬ ಪರಿಣಾಮವಾಯಿತು. ಅಂದು ಇಡೀ ದಿನ ಅವನು ಅಳುತ್ತಲೇ ಕಳೆದ. ಇನ್ನೊಂದು ಸಲ ಅವನು ಹಸಿವೆಯನ್ನು ತಡೆಯಲಾರದೇ ಮತ್ತೆ ಚಹದ ಅಂಗಡಿಗೆ ಅಂಜುತ್ತ ಹೋಗಿದ್ದನು. ಅದೇ ಬಿಸಿ ಬಿಸಿ ಶಂಕರಪೋಳಿ ತರಿಸಿ ತಿನ್ನುತ್ತಿದ್ದನು. ಇನ್ನೊಬ್ಬ ಮಾಸ್ತರರು ಬರುವುದು ಕಂಡಿತು. ಅವನ್ನೆಲ್ಲ ಕಿಸೆಯಲ್ಲಿ ತುರುಕಿಕೊಂಡು ಅಲ್ಲಿಂದ ಪಲಾಯನ ಮಾಡಿದ. ಆದರೆ ಅದು ಹೇಗೊ ಇವನನ್ನು ಅವರು ನೋಡಿದ್ದರು. ಕರೆಕಳುಹಿಸಿದರು. ಇವನೂ ಅಳುಕುತ್ತ ಹೊರಟನು. ಅವರು ತುಂಬ ಖಡಕ ಮಾಸ್ತರರು ಎಂದೇ ಹೆಸರಾದ-ವರು. ಆದರೆ ಕೃಷ್ಣನನ್ನು ಒಳ್ಳೇ ರೀತಿಯಿಂದ ಬರಮಾಡಿಕೊಂಡು, "ಗಾಬರಿ-ಯಾಗಬೇಡ ನೀನು ಪರಸ್ಥಳದಿಂದ ಬಂದವನು. ಸರಿಯಾಗಿ ಊಟವಾಗಲಿಕ್ಕಿಲ್ಲ. ಈಗ ಈ ರೂಪಾಯಿ ತಗೊ." ಎಂದು ಬೆನ್ನು ಚಪ್ಪರಿಸಿ ಕಳಿಸಿದರು. ಬದುಕಿದಿಯಾ ಬಡಜೀವವೇ ಎಂದೆನಿಸಿತು ಬಾಲಕೃಷ್ಣನಿಗೆ. ಅಂದಿನ ಆ ಘಟನೆಯನ್ನು ನೆನೆದಾಗ ಕೃಷ್ಣಮೂರ್ತಿ ಪುರಾಣಿಕರಿಗೆ ಈ ಗುರುಗಳ ಅಂತಃಕರುಣದ ಬಗೆಗೆ ಭಾವನೆಗಳು ಉಕ್ಕೇರಿ ಬರುವವು. ಅವರ ಮಾನವೀಯತೆಗೆ ಇವರು ತಲೆಬಾಗಿ ನಿಲ್ಲುವರು.

—೨—

ಹಾಯಸ್ಕೂಲ ಶಿಕ್ಷಣ ಸರಾಗವಾಗಿ ಪೂರೈಸಿತು. ಕರ್ನಾಟಕ ಕಾಲೇಜನ್ನು ಪ್ರವೇಶಿಸಿದರು. ತಮ್ಮ ಮಕ್ಕಳು ಉಚ್ಚ ಶಿಕ್ಷಣ ಪಡೆಯಬೇಕೆಂದು ಇವರ ತಂದೆ ತುಂಬ ಆತುರರಾಗಿದ್ದರು. ಅವರ ತಾಯಿಯೂ ಧೀರತೆಯನ್ನು

ತೋರಿದರು. ಹರಿದ ಚಿಂದಿಯಾದ ಸೀರೆಗಳನ್ನು ತೇಪೆ ಹಚ್ಚಿಯಾದರೂ ಉಟ್ಟುಕೊಂಡರು. ಹೊಸತನ್ನು ಅಪ್ಪಿತಪ್ಪಿ ಕೂಡ ಅಪೇಕ್ಷಿಸುತ್ತಿರಲಿಲ್ಲ. ಈ ಹಿರಿಯ ಮುತ್ತೈದೆ ತಮಗೆ ಬಂದ ದಕ್ಷಿಣೆಯ ದುಡ್ಡನ್ನು ಕೂಡಿಸಿ ಈ ಮಗನ ಶಿಕ್ಷಣಕ್ಕೆ ಒದಗಿಸಲು ಮುಂದಾದರು. ಸ್ವತಃ ಕೃಷ್ಣಮೂರ್ತಿಯವರೂ ಪರಿಶ್ರಮಿಸಬೇಕಾಯಿತು. ಕಾಲೇಜ ವಸತಿಗೃಹಗಳಲ್ಲಿ ಪಾಳಿಯ ಪ್ರಕಾರ ಅವರು ಊಟವನ್ನು ಮಾಡುತ್ತಿದ್ದರು. ಮೊದಲು ಬಡಿಸುವ ಕೆಲಸವನ್ನೂ ಅವರು ನಿರ್ವಹಿಸಬೇಕಾಗು-ತ್ತಿತ್ತು. ಆದರೆ ಇದಾವುದಕ್ಕೂ ಅವರು ಅಂಜಲಿಲ್ಲ; ಅಳುಕಲಿಲ್ಲ. ಶ್ರೀಮಂತ ವಿದ್ಯಾರ್ಥಿಗಳ ಇಲ್ಲದ-ಸಲ್ಲದ ಮಾತುಗಳಿಗೆ ಕಿವಿಗೊಡುತ್ತಿರಲಿಲ್ಲ. ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸುತ್ತಿದ್ದರು. ಅಂಥ ಒಂದು ಎದೆಗಾರಿಕೆಯನ್ನು ಅವರು ಈ ಕಾಲಕ್ಕೆ ತೋರಿದ್ದರಿಂದ ಶಿಕ್ಷಣವು ಸುಲಭವಾಗಿ ಪೂರೈಸಿತಲ್ಲದೆ ಅವರು ಜೀವನದಲ್ಲಿಯ ಮಹತ್ವದ ಘಟ್ಟವನ್ನು ಪೂರೈಸಿದರು. ಅವರು ಕುಶಾಗ್ರಮತಿಯ ವಿದ್ಯಾರ್ಥಿಯೆನಿಸಿದ್ದರು. ಪ್ರಾಧ್ಯಾಪಕರ ಪ್ರೀತಿಯ ಶಿಷ್ಯರೆನಿಸಿದ್ದರು. ಅವರ ಗುರುಗಳಾದ ದಿವಂಗತ ಅ. ತು. ಸಾಸನೂರರು ಇವರನ್ನು ತುಂಬ ಮೆಚ್ಚಿ-ಕೊಂಡಿದ್ದರು. ಅಧ್ಯಯನದ ಜೊತೆಗೆ ಅವರ ಕಾವ್ಯಾಭಿರುಚಿಯೂ ಹರಿದು ಬರು-ತ್ತಿರುವುದು ಈ ಗುರುಗಳಿಗೆ ತುಂಬ ಸಂತೋಷದ ವಿಷಯವಾಗಿತ್ತು. ಇವರು ಅನೇಕ ಬಗೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದುದು ಅದಕ್ಕೆ ಕಾರಣ-ವಾಗಿತ್ತು. ಪ್ರಾಮುಖ್ಯವಾಗಿ ಅನೇಕ ಸಾಹಿತ್ಯಕ ಚಟುವಟಿಕೆಗಳು. ಅನೇಕ ವರುಷಗಳಿಂದ ಪುಣೆಯ ಡೆಕ್ಕನ್ ಕಾಲೇಜಿಗಿದ್ದ 'ಕರ್ನಾಟಕ ಪ್ರಾಯಿಜ್' ಆ ಸಂದರ್ಭದಲ್ಲಿ ಕರ್ನಾಟಕ ಕಾಲೇಜಿಗೆ ವರ್ಗವಾಗಿ ಬಂದಿತ್ತು. ಶ್ರೀ ಕೃಷ್ಣ-ಮೂರ್ತಿ ಪುರಾಣಿಕರು ಈ ಬಹುಮಾನವನ್ನು ಗಿಟ್ಟಿಸಿಕೊಂಡರು. ಕರ್ನಾಟಕಕ್ಕೆ ಬಂದನಂತರ ಅದನ್ನು ದೊರಕಿಸಿದ ಮೊದಲಿಗರೆನಿಸಿದರು. ಈ ಪ್ರಬಂಧದಲ್ಲಿ ಅವರ ಅಧ್ಯಯನಶೀಲತೆ ವ್ಯಕ್ತವಾಗಿತ್ತು. ಅವರ ವಿಮರ್ಶಕ ಶಕ್ತಿಯೂ, ತುಲ-ನಾತ್ಮಕ ವಿವೇಚನ ದೃಷ್ಟಿಗಳೂ ಅಲ್ಲಿ ಕಂಡುಬಂದಿದ್ದವು. ಅವರ ಹೆಸರು ಇತರ ವಿದ್ಯಾರ್ಥಿಗಳಿಗೆಲ್ಲ ಈಗ ಸುಪರಿಚಿತವೆನಿಸಿತು. ಪ್ರಾಧ್ಯಾಪಕರು ಮತ್ತು ಧಾರ-ವಾಡದ ಪ್ರಮುಖ ಸಾಹಿತಿಗಳೂ ಈ ತರುಣ ವಿದ್ಯಾರ್ಥಿ ಸಾಹಿತಿಯ ಈ ಬೆಳವಣಿಗೆ-ಯನ್ನು ಕುತೂಹಲದಿಂದ ನಿರೀಕ್ಷಿಸುವಂತಾಯಿತು. ಈ ಪ್ರಸಂಗದಿಂದ ಅವರ ಪ್ರತಿಭೆ ಸ್ವಾಭಾವಿಕವಾಗಿಯೇ ವ್ಯಕ್ತವಾಯಿತು. ಅದರ ಜೊತೆಗೆ ಅವರು ಇತರರಲ್ಲಿ ಒಂದು ರೀತಿಯಲ್ಲಿ ಭರವಸೆಯನ್ನು ಮೂಡಿಸಿದರು. ವಿದ್ಯಾರ್ಥಿದೆಸೆಯಲ್ಲಿರು-ವಾಗಲೇ ತಮ್ಮದಾದ ಒಂದು ಸ್ಥಾನವನ್ನು ಈ ಮೂಲಕ ಅವರು ಗಳಿಸಿಕೊಂಡರು. ಇಂಥ ಒಂದು ಬಹುಮಾನದಿಂದ ಅವರು ತೃಪ್ತರಾಗಲಿಲ್ಲ; ಸಮಾಧಾನ ಹೊಂದಿ ಕೂಡಲಿಲ್ಲ. ಹಳಗನ್ನಡದ ಅಭ್ಯಾಸವನ್ನು ಮಾಡಿದರು. ಪಂಡಿತ ಮ. ಪ್ರ. ಪೂಜಾರರು ಈ ಅಧ್ಯಯನದಲ್ಲಿ ಇವರಿಗೆ ನೆರವಾದರು. ಈ ತರುಣ ವಿದ್ಯಾರ್ಥಿಗೆ

ಅವಶ್ಯಕವಾದ ರೀತಿಯಲ್ಲಿ ಅವರು ಮಾರ್ಗದರ್ಶನವನ್ನು ಮಾಡಿದರು. ಅವರು ಆದರ ಪ್ರಯೋಜನ ಮಾಡಿಕೊಂಡು ಹಳಗನ್ನಡದಲ್ಲಿ ಪ್ರಬಂಧವನ್ನು ಬರೆದರು. ವರ್ಷ ಪಾರಿತೋಷಕವನ್ನು ಪಡೆದರು. ಅವರ ಸಾಧನೆಗಳು ಹೀಗೆ ಗರಿಯೊಡೆದವು.

ಸಂಯುಕ್ತಕರ್ನಾಟಕದ ೧೯೩೫ ಮಾರ್ಚ ೮ ರ ಸಂಚಿಕೆಯಲ್ಲಿ ಪ್ರಕಟವಾದ ಒಂದು ಸುದ್ದಿ. "ಶ್ರೀ ಪುರಾಣಿಕರಿಗೆ ಬಹುಮಾನ :

ಧಾರವಾಡ : ಕರ್ನಾಟಕ ಕಾಲೇಜಿನ ಕನ್ನಡ ಲೇಖನ ಸ್ಪರ್ಧೆಯ ಪರವಾಗಿ 'ಇಂದಿನ ಕನ್ನಡ ಸಾಹಿತ್ಯದ ಮೇಲೆ ಇಂಗ್ಲಿಷ ಸಾಹಿತ್ಯದ ಪ್ರಭಾವ' ಎಂಬ ವಿಷಯವಾಗಿ ೩೦ ಪುಟಗಳಿಗೆ ಮಿಕ್ಕದಷ್ಟು ಸ್ವತಂತ್ರ ನಿಬಂಧವನ್ನು ಬರೆದವರಿಗೆ ೭೦ ರೂ.ಗಳ ಬಹುಮಾನವನ್ನು ಕೊಡುವದಾಗಿ ಪ್ರಸಿದ್ಧಿಸಿದ್ದರಷ್ಟೇ. ಆ ಮೇರೆಗೆ ಸ್ಪರ್ಧೆಯ ಪರಿಣಾಮ ಈಗ ಹೊರಬಿದ್ದಿದೆ. ಕರ್ನಾಟಕ ಕಾಲೇಜದ ಬಿ. ಎ. ಕ್ಲಾಸಿನಲ್ಲಿರುವ ಬಾಗಲಕೋಟೆಯ ಶ್ರೀ ಕೆ. ಟಿ. ಪುರಾಣಿಕರವರ ಲೇಖನವು ಒಳ್ಳೆಯದೆಂದು ಪರೀಕ್ಷಕರಿಂದ ತೀರ್ಮಾನಿಸಲ್ಪಟ್ಟು ಅವರಿಗೆ ಆ ಬಹುಮಾನವು ದೊರೆತಿದೆ." ಇದು ಎಲ್ಲ ವಿದ್ಯಾರ್ಥಿಗಳ ಕುತೂಹಲವನ್ನು ಕೆರಳಿಸಿತು. ಈ ಬಹುಮಾನ ಪಡೆದ ವಿದ್ಯಾರ್ಥಿಯ ಹೆಸರು ಮನೆಮಾತಾಗಿ ಪರಿಣಮಿಸಿತು.

ಸಂಯುಕ್ತ ಕರ್ನಾಟಕದ ೧೯೩೫ ರ ಡಿಸೆಂಬರ ೨೦ ರ ಸಂಚಿಕೆಯಲ್ಲಿ ಪ್ರಕಟವಾದ ಇನ್ನೊಂದು ಸೋಜಿಗದ ಸುದ್ದಿ ವಿದ್ಯಾರ್ಥಿವೃಂದದಲ್ಲಿ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿತ್ತು. ಆ ಕಾಲದ ವಿದ್ಯಾರ್ಥಿವೃಂದದ ಸಾಮರ್ಥ್ಯದೊಂದಿಗೆ ಶ್ರೀ ಪುರಾಣಿಕರ ಹಿರಿಮೆಯನ್ನು ಅದು ತೋರುವುದು. ಕರ್ನಾಟಕ ರಾಜ್ಯದಲ್ಲಿಯ ಸಮಾಚಾರ ಎಂಬ ತಲೆಬರಹದಲ್ಲಿ ಪ್ರಕಟವಾಗಿತ್ತು ಈ ಸುದ್ದಿ. "ಕರ್ನಾಟಕ ಕಾಲೇಜದಲ್ಲಿ ತಾ|| ೧೩-೧೨-೧೯೩೫ ನೇ ದಿವಸ ೪-೩೦ ಗಂಟೆಗೆ ಸರಿಯಾಗಿ ನಾಟ್ಯಸಂಘದ ಪರವಾಗಿ ಕನ್ನಡ ಪದ್ಯಗಳ ಸ್ಪರ್ಧೆಯನ್ನು ಶ್ರೀ ಪತ್ರಾವಳಿಯವರು ಏರ್ಪಡಿಸಿದ್ದರು. ನ್ಯಾಯಾಧೀಶರಾಗಲು ಕೇಳಿಕೊಂಡಿದ್ದ ಕನ್ನಡ ಸಾಹಿತಿ ಪ್ರಾಧ್ಯಾಪಕರು ಬಂದಿರಲಿಲ್ಲ. ಪ್ರೇಕ್ಷಕರು ಮಳೆಗಾಲದ ನದಿಯಂತೆ ಒಂದೇ ಸವನೆ ಬರತೊಡಗಿದರು. ಶ್ರೀ ಪತ್ರಾವಳಿಯವರು ಶ್ರೀ ಭೂಸನೂರಮಠ ಫೆಲೊ ಅವರು, ಇದೇ ಕಾಲೇಜಿನಲ್ಲಿ ಓದುವ ಶ್ರೀ ಕೃಷ್ಣಮೂರ್ತಿ ಪುರಾಣಿಕರನ್ನು ಅಧ್ಯಕ್ಷರಾಗಿ ಮಾಡಿದರು. ೧೮-೨೦ ವಿದ್ಯಾರ್ಥಿಗಳು ಕವನಗಳನ್ನು ಮುದ್ದಾಗಿ ಹಾಡಿದರು. ಕವನಗಳು ಹೆಚ್ಚಾಗಿ ವಿದ್ಯಾರ್ಥಿಗಳು ರಚಿಸಿದವು. ಪ್ರೇಕ್ಷಕರ ಮನಮೆಚ್ಚುವಂತೆ ದುಃಖ, ಆನಂದ, ಹಾಸ್ಯದಿಂದ, ತುಳುಕುವ ಕವನಗಳು. ಪ್ರೇಕ್ಷಕರು ಗದ್ದಲ ಮಾಡದೇ ಕವನಗಳನ್ನು ಕೇಳಿದರು." ಕೃಷ್ಣಮೂರ್ತಿ ಇನ್ನು ವಿದ್ಯಾರ್ಥಿಯಾಗಿರುವಾಗಲೇ ಸಭೆ-ಸಮಾರಂಭಗಳನ್ನು ಸಮರ್ಥ ರೀತಿಯಲ್ಲಿ ತೂಗಿಸಿಕೊಂಡು ಹೋಗಬಲ್ಲವರಾಗಿದ್ದರು ಎಂಬುದಕ್ಕೆ ಈ ಕಾರ್ಯಕ್ರಮವು ಒಳ್ಳೇ ನಿದರ್ಶನವಾಗಿರುವುದು.

ಬಡತನದ ಬೇಗೆಯನ್ನು ಅವರು ಈ ಕಾಲದಲ್ಲಿ ತುಂಬ ಸಹಿಸಬೇಕಾಯಿತು.

ನಾನಾ ರೀತಿಯಲ್ಲಿ ತಾಪತ್ರಯಗಳನ್ನು ಕಷ್ಟನಷ್ಟಗಳನ್ನು ಅವರು ಎದುರಿಸಿದರು. ನಿಜವಾಗಿ ಅವು ಸುಭಿಕ್ಷದ ದಿನಗಳು. ಆದರೆ ತಂದೆ ಪ್ರಾಥಮಿಕ ಶಾಲಾ ಶಿಕ್ಷಕರು. ಪೂರ್ವಜರಿಂದ ಆಸ್ತಿ ಇಲ್ಲವೆಂದರೂ ಸರಿಯಾದೀತು. ಸಂಬಳದಲ್ಲಿಯೇ ಜೀವನ ನಿರ್ವಹಣೆ ಸಾಗಬೇಕು. ಆದರೆ ಅವರ ಈ ಮಕ್ಕಳು ಧೈರ್ಯಶಾಲಿಗಳು. ಕೃಷ್ಣಮೂರ್ತಿ ತಮ್ಮ ಶಾಂತವಾದ ಸ್ವಭಾವದಿಂದ ಎಲ್ಲವನ್ನು ಸಹಿಸಿಕೊಂಡರು. ಇವರು ಸ್ಮಾರ್ತರು. ಆದರೆ ಬಾಗಲಕೋಟೆಯಲ್ಲಿ ಇವರು ನೆರವು ಪಡೆದು ಓದುತ್ತಿದ್ದ ಮನೆ ವೈಷ್ಣವರದು. ಅಲ್ಲಿಯ ಸಂಪ್ರದಾಯಗಳನ್ನು ಪಾಲಿಸುವುದು ಅನಿವಾರ್ಯ ವಾಗಿದ್ದಿತು. ಇದು ಅವರ ಮನಸ್ಸಿನ ವಿರುದ್ಧವಾದುದು. ಆದರೆ ಪರಿಸ್ಥಿತಿಯ ಒತ್ತಡಕ್ಕೆ ಮಣಿದರು. ಅಲ್ಲಿ ಅವರಂತೆಯೇ ನಡೆದುಕೊಂಡರು. ತಮ್ಮಲ್ಲಿ ನಡೆಯುತ್ತಿದ್ದ ಈ ಮಾನಸಿಕ ಹೋರಾಟದ ಸುಳಿವನ್ನು ಅವರು ಮನೆಯಲ್ಲಿ ಯಾರಿಗೂ ತೋರ ಗೊಡಲಿಲ್ಲ. ಎಲ್ಲವನ್ನು ನುಂಗಿಕೊಂಡು ಸಾಗಿದರು. ತಂದೆ-ತಾಯಿ ಕೊಟ್ಟಷ್ಟ ರಲ್ಲಿಯೇ ಅವರು ಜೀವನ ಸಾಗಿಸುತ್ತಿದ್ದರು. ಹಿರಿಯರ ಸ್ನೇಹಿತರೂ ನಾನಾ ರೀತಿಯಲ್ಲಿ ನೆರವಾಗುತ್ತಿದ್ದರು. ತಾಯಿ ತಮಗಾಗಿ ಹರಕು ಚಿಂದಿಯಾದ ಸೀರೆ ಉಟ್ಟು ಕಳೆದ ದಿನಗಳನ್ನು, ದಕ್ಷಿಣೆಯಾಗಿ ಬಂದ ಪುಡಿಗಾಸುಗಳನ್ನು ತಮಗೆ ವಿನಿಯೋಗಿಸುತ್ತಿದ್ದುದನ್ನು ಕೃಷ್ಣಮೂರ್ತಿ ಬಲ್ಲರು. ಈ ಮಾತುಗಳು ನೆನಪಾದರೂ ಸಾಕು. ಅವರಿಗೆ ಈಗ ದುಃಖ ಒತ್ತರಿಸಿ ಬರುತ್ತದೆ. ಜೀವನದಲ್ಲಿಯ ಈ ಕ್ಷಣ ಗಳನ್ನು ಕುರಿತು ಹೇಳುವಾಗ ಅವರ ಗಂಟಲು ಭಾರವಾಗುತ್ತದೆ; ದುಃಖವು ಒತ್ತರಿಸಿ ಬರುತ್ತದೆ. ತಂದೆ-ತಾಯಿ ತಮಗಾಗಿ ಮಾಡಿದ ಮಹಾತ್ಯಾಗದ ಆ ಚಿತ್ರ ಮತ್ತೆ ಮತ್ತೆ ಅವರ ಕಣ್ಣ ಮುಂದೆ ಬಂದು ನಿಂತಂತಾಗುತ್ತದೆ. ಒಂದು ಬಗೆಯಲ್ಲಿ ಅವರ ಬಗೆಗೆ ಅಭಿಮಾನ ಮೂಡಿಬರುತ್ತದೆ. ಯಾವ ಮಗನಿಗೆ ಅಭಿಮಾನ ವೆನಿಸಲಿಕ್ಕಿಲ್ಲ, ಇಂಥ ತಂದೆ-ತಾಯಿಗಳ ಬಗೆಗೆ! ಕೃಷ್ಣಮೂರ್ತಿಯವರಂತೂ ಮೃದುಸ್ವಭಾವದವರು. ಹೆಂಗರುಳಿನವರು. ತಾಯಿಯ ಈ ದಾರುಣವಾದ ಯಾತನೆಯನ್ನು ನೋಡಿ ಆಗ ಅವರು ಕಣ್ಣೀರಿಟ್ಟಿದ್ದರೆ ಈಗಲೂ ಆ ಮಾತುಗಳನ್ನು ಹೇಳುವಾಗ ಅವರ ಕಣ್ಣಿಂದ ನೀರು ಬಳಬಳನೆ ಸುರಿಯುವವು. ಅಂತೇ ಅವರು "ತಂದೆಯ ವೈದಿಕ ವೃತ್ತಿ, ತಾಯಿಯ ಮಹಾತ್ಯಾಗ ಇವೆರಡೂ ನನ್ನಲ್ಲಿ ಮೇಳವಿ- ಸಿದ್ದವು" ಎಂದು ಕಣ್ತುಂಬಿ ಹೇಳುವಾಗ ಯಾರಿಗೂ ಆ ಮಾತಿನ ಮನವರಿಕೆ ಯಾಗುವುದು. ಬಹುಶಃ ಆಗ ಅವರು ತಮ್ಮನ್ನು 'ಪೌರಾಣಿಕ ಪುತ್ರ' ಎಂಬ ಕಾವ್ಯನಾಮದಿಂದ ಕರೆದುಕೊಳ್ಳುತ್ತಿದ್ದುದು. ಈ ವೈದಿಕ ವೃತ್ತಿಯ ಬಗೆಗೆ ಅವರಲ್ಲಿ ಕಂಡುಬರುತ್ತಿದ್ದ ಮಮತೆಯನ್ನು ಬಹು ಚೆನ್ನಾಗಿ ವ್ಯಕ್ತಪಡಿಸುವದೆಂದು ಹೇಳಬೇಕು. ತುಂಬ ವ್ರತಸ್ಥರಾದ ತಾಯಿಯ ಧಾರ್ಮಿಕ ಮನೋವೃತ್ತಿ ಅವರ ಮೇಲೆ ವಿಶೇಷವಾದ ಪರಿಣಾಮವನ್ನು ಬೀರಿದೆಂದೂ ಕಂಡುಬರುವುದು.

ಕೃಷ್ಣಮೂರ್ತಿಯವರು ಕಾಲೇಜು ಶಿಕ್ಷಣವನ್ನು ಪಡೆಯುತ್ತಿರುವಾಗಲೇ

ಹಿರಿಯರು ಅವರ ವಿವಾಹವನ್ನು ನೆರವೇರಿಸಿದರು. ಅದು ೧೯೩೩ ರಲ್ಲಿ. ಅವರಿಗಿನ್ನೂ ಆಗ ಇಪ್ಪತ್ಮೂರು ವರುಷಗಳಿರಬಹುದು. ಅವರದು ಸಾಂಪ್ರದಾಯಕವಾದ ವಿವಾಹವೇ. ಆದರೆ ಪತ್ನಿ ಅಪರಿಚಿತಳಾಗಿರಲಿಲ್ಲ. ಅಕ್ಕನ (ಅಬಚಿತಾಯಿಯ ಮಕ್ಕಳು) ಮಗಳು. ಇವರ ಮನೆಗೆ ಬಂದು ಹೋಗುವುದು ಇದ್ದೇ ಇರುತ್ತಿತ್ತು. ಅದೇಕೆ ಬಿಡುವಿನ ಸಮಯ ಬಂದಾಗಲೆಲ್ಲ ತಾಯಿ ಕರೆದುಕೊಂಡು ಬರಲು ಹೇಳುತ್ತಿದ್ದರು. ವಿಧೇಯನಾದ ಈ ಮಗ ಭಾವಿ ಪತ್ನಿಯನ್ನು ಮನೆಗೆ ಕರೆತರುತ್ತಿದ್ದನು. ಪತ್ನಿ ಹೆಚ್ಚು ಕಲಿಯಲಿಲ್ಲ ಎಂಬುದನ್ನು ಬಲ್ಲರು. ಆದರೆ ಅವಳು ಸಂಪ್ರದಾಯಶೀಲೆ, ತನ್ನ ತಾಯಿಯ ಪ್ರೀತಿಪಾತ್ರಳು ಎಂಬುದನ್ನು ಬಲ್ಲರು. ತಮ್ಮ ಜೀವನಕ್ಕೆ ಒಳ್ಳೇ ಜೀವನ ಸಂಗಾತಿ ಅವಳಾಗಬಲ್ಲಳು; ತಮ್ಮ ಬಾಳನ್ನು ಬೆಳಗಬಲ್ಲಳು ಎಂಬುದನ್ನು ಅವರು ಅರಿತುಕೊಂಡಿದ್ದರು. ಇದಕ್ಕಿಂತ ಮಿಗಿಲಾಗಿ ಇವರು ಅಕ್ಕನ ಪ್ರೀತಿ ಪಾತ್ರರು. ಅವಳ ಮೇಲೆ ತುಂಬ ಮಮತೆ. ಅವಳ ಅಚ್ಚು ಮೆಚ್ಚಿನ ಅಳಿಯ ದೇವರು ಎಂದೆನಿಸಿದ್ದರು. ಗಂಗಾತಾಯಿ ಇವರ ಕೈಹಿಡಿದು ಈ ಮನೆಯ ಸೊಸೆಯಾಗಿ ಬಂದರು. ಅದರ ಜೊತೆಗೆ ಕೃಷ್ಣಮೂರ್ತಿಯವರಿಗೆ ಭಾಗ್ಯೋದಯವನ್ನು ತಂದರು. ಅವರ ಜೀವನ ಒಂದು ನೆಲೆಗೆ ಬಂದಿತು. ಸುಂದರವಾಗಿ ರೂಪುಗೊಂಡಿತು; ಸುಪುಷ್ಟವಾಗಿ ಬೆಳೆಯಿತು. ಅವರ ಅಕ್ಕನಿಗಂತೂ ಮಗಳ–ಅಳಿಯರ ಈ ಸಂಸಾರವನ್ನು ಕಂಡು ಹಿಡಿಸಲಾರದ ಹಿಗ್ಗು. ಮಗಳು ತುಂಬ ಸುಖಿಯಾಗಿರುವುದನ್ನು ಕಂಡಾಗ ಯಾವ ತಾಯಿಗೆ ಹಿಗ್ಗು ಆಗಲಿಕ್ಕಿಲ್ಲ. ನಿಜ ಕೃಷ್ಣಮೂರ್ತಿಯವರು ಆಗಿನ್ನೂ ಅಷ್ಟು ಪ್ರಸಿದ್ಧರಾಗಿರಲಿಲ್ಲ. ಹೆಸರಾಂತ ಸಾಹಿತಿಯಾಗಿರಲಿಲ್ಲ. ಮುಂದೇನಾಗುವುದು ಗೊತ್ತಿರಲಿಲ್ಲ. ಆದರೂ ತವರಿನ ಕಳ್ಳುಬಳ್ಳಿ ಬೆಳಸಿಕೊಳ್ಳಬೇಕೆಂದು ಆ ಹೆಣ್ಣುಮಗಳು ಬಯಸಿದಳು. ಇವರ ಬಗೆಗೇ ಅವಳಲ್ಲಿ ಅಂಥ ಒಂದು ಆತ್ಮೀಯತೆ ಮೂಡಿ ನಿಂತಿತ್ತು. ಅವರ ಬಯಕೆ ಈಡೇರಿತ್ತು. ಅದೇಕೆ ಈ ಹಿರಿಯ ಅಳಿಯ ಅವರಿಗೆ ಆಧಾರಸ್ತಂಭವಾಗಿ ನಿಂತಿದ್ದ. ಹೆಂಡತಿಯ ತಂಗಿಯರ ಲಗ್ನವನ್ನು ಮಾಡಿಸಿದ್ದ. ತಮ್ಮ ಮನೆತನದ ಹೊಣೆಯೊಂದಿಗೆ ಆ ಮನೆತನದ ಹೊಣೆಯನ್ನು ಆ ಕಿರಿವಯಸ್ಸಿನಲ್ಲೇ ಹೊತ್ತು ನಿಂತಿದ್ದ. ಅಂತೆಯೇ ಈ ಅಳಿಯನ ಬಗೆಗೆ ಆ ಅತ್ತೆಗೆ ತುಂಬ ಅಭಿಮಾನ. ಅತ್ಯಂತ ವಾತ್ಸಲ್ಯ "ಯಾವ ಕಾಲಕ್ಕೆ ಏನೇನೂ ತ್ರಾಸ ಕೊಟ್ಟಿಲ್ಲ" ಎಂದು ಈಗ ಆ ವಿವಾಹವಾಗಿ ನಾಲ್ವತ್ತು ವರುಷಗಳ ನಂತರವೂ ಅವರು ಹೇಳುವಾಗ ಆ ಮಾತಿನಲ್ಲಿ, ಧ್ವನಿಯಲ್ಲಿ ಒಂದು ಅಭಿಮಾನ ತೋರುತ್ತಿದೆ. ಆ ಹಿರಿಯ ಜೀವನದ ಈ ಮಾತಿನಲ್ಲಿ ಒಂದು ಬಗೆಯ ಧನ್ಯತೆ ಅಡಗಿದ್ದು ವ್ಯಕ್ತವಾಗುತ್ತಿತ್ತು. ಕಣ್ಣುಗಳಿಂದ ಆನಂದಭಾಷ್ಪಗಳೂ ಉದುರಿದವು. ಅಳಿಯನ ಹಿರಿಮೆ ಕಂಡಾಗ ಮಗಳ ಭಾಗ್ಯದ ಬಗೆಗೆ ಆ ತಾಯಿಗೆ ಈಗ ಅಪಾರ ಸಂತಸ, ಇನ್ನು ಒಂದು ಬಗೆಯಲ್ಲಿ ಹೆಚ್ಚಿನದಾದ ಹೆಮ್ಮೆ ಮೂಡಿದ್ದು ಸ್ಫುಟವಾಗಿ ವ್ಯಕ್ತವಾಗುತ್ತಿತ್ತು. ಆ ಹಿರಿಯ ಜೀವ ತೃಪ್ತಿ-ನೆಮ್ಮದಿಗಳನ್ನು ವ್ಯಕ್ತಪಡಿಸುವಾಗ ಕೃಷ್ಣಮೂರ್ತಿಯವರ

ಮುಖ ಬೆಳಗುವುದು; ಅಪೂರ್ವ ಭಾವ ಮಿಂಚುವುದು. ಅವಳಿಟ್ಟ ಭರವಸೆಗೆ ಅನುಗುಣವಾಗಿ ತಮ್ಮ ಜೀವನ ರೂಪುಗೊಂಡು ಬಂದಿದೆಯಲ್ಲ; ಆ ಹಿಂದಿನ ಜೀವದಹಾರೈಕೆಯಿಂದ ದೈವದ ಬಲವು ತಮ್ಮದಾಗಿದೆಯಲ್ಲ ಎಂಬ ಭಾವ ಅಲ್ಲಿ ಸ್ಪಷ್ಟವಾಗಿ ಮೂಡಿರುವುದನ್ನು ಗುರುತಿಸಿದೆ. ಜೀವನದಲ್ಲಿಯ ಈ ಧನ್ಯಭಾವವೇ ಅವರ ಬಾಳನ್ನು ಈವರೆಗೂ ಸುಗಮವಾಗಿ, ಸುಭಗವಾಗಿ ಮುನ್ನಡೆಸಿಕೊಂಡುಬಂದಿರುವುದು. ಜೀವನದ ಈ ಸಾಧನೆ ಸಣ್ಣ ಮಾತೇನೂ ಅಲ್ಲ.

— ೩ —

ಪತ್ನಿ ಗಂಗಾತಾಯಿ ಬಹಳ ಸೌಮ್ಯ ಸ್ವಭಾವದವರು. ಪತಿಯ ಒಂದೇ ಒಂದು ಮಾತಿಗೂ ಎದುರಾಡುವವರಲ್ಲ. ಅವರಿಗೆ ಸದಾಕಾಲವೂ ತುಂಬ ಅನುಕೂಲೆಯಾಗಿ ನಡೆದು ಬಂದವರು. ತವರು ಮನೆ ಅಂಥ ಶ್ರೀಮಂತವಲ್ಲದಿದ್ದರೂ ಅಂಥ ಬಡತನವೂ ಆಗಿರಲಿಲ್ಲ. ಉಂಡುಟ್ಟು ಸುಖವಾಗಿ ಬೆಳೆದವರು. ಅವರೂ ಪತಿಗೃಹಕ್ಕೆ ಬಂದಾಗ ಅಲ್ಲಿ ಆ ಹೊಸ ಪರಿಸರಕ್ಕೆ ಒಮ್ಮೆಲೇ ಹೊಂದಿಕೊಂಡರು. ಪತಿಗೆ ಹೆಚ್ಚು ಸಂಬಳ ಬರುವದಿಲ್ಲ ಎಂಬುದು ಗೊತ್ತು. ಆದರೆ ಅವರು ತರುವ ಸಂಬಳದಲ್ಲಿಯೇ ಸಂಸಾರವನ್ನು ನಿರ್ವಹಿಸುತ್ತ ಬಂದರು. ಅದರಲ್ಲಿಯೇ ಸುಖವನ್ನು ಅವರು ಕಾಣುತ್ತ ಬಂದರು. ತಮ್ಮ ಪತಿ ಸಾಹಿತ್ಯಕ ಒಲಿಸಿದವರು ಎಂಬುದು ಗೊತ್ತು. ಅವರಿಗೆ ಬೇಕಾದ ಅನುಕೂಲಗಳನ್ನು ಈ ಸತಿ ಒದಗಿಸುತ್ತ ಬಂದರು. ಸಂಸಾರದ ಚಿಂತೆ ಅವರನ್ನು ಯಾವ ರೀತಿಯಿಂದಲೂ ಕಾಡದಂತೆ ನೋಡಿಕೊಳ್ಳುತ್ತಿದ್ದರು. ಅವರ ಬರವಣಿಗೆಗೆ ಸಾಗಿದಾಗ ಅಲ್ಲಿ ಸದ್ದು-ಗದ್ದಲವಾಗದಂತೆ ಮಕ್ಕಳನ್ನು ಸಂಭಾಳಿಸುತ್ತಿದ್ದರು. ಪತಿಯ ಸ್ವಭಾವ ಮೊದಮೊದಲು ಸ್ವಲ್ಪ ಸಿಟ್ಟಿನದಾಗಿತ್ತು. ಅಲ್ಲದೇ ಅವರು ತುಂಬ ಶಿಸ್ತಿನವರು. ಗೊತ್ತಾದ ಹೊತ್ತಿಗೆ ಗೊತ್ತಾದ ರೀತಿಯಲ್ಲಿ ಕಾರ್ಯಕ್ರಮ ನಡೆಯಬೇಕು. ಊಟ ಉಪಚಾರ ಆಗಬೇಕು. ಅದೆಲ್ಲವನ್ನೂ ಚಾಚೂ ತಪ್ಪದಂತೆ ಗಂಗಕ್ಕ ನಡೆಸಿಕೊಂಡು ಬಂದರು. "ಅವರು ಕೋಪಗೊಳ್ಳುವದು ಅತಿ ಕ್ವಚಿತ್ತಾಗಿ. ಕೋಪ ಬಂದಾಗ ಅದು ಉಗ್ರವಾಗಿರುತ್ತಿತ್ತು. ಆದರೆ ಅಷ್ಟೇ ಶೀಘ್ರವಾಗಿ ಅವರು ಶಾಂತರಾಗುತ್ತಿದ್ದರು. ಈ ಕೋಪವಾದರೂ ನನಗೆ ಒಂದು ರೀತಿ ಮಾರ್ಗದರ್ಶಕವೇ ಎನಿಸುತ್ತಿತ್ತು. ಆದರೂ ಅವರು ಕೋಪಿಸದಂತೆ ನಾನು ನಡೆಯಲು ಯತ್ನಿಸುತ್ತಿದ್ದೆ. ಹೀಗಾಗಿ ಅವರ ಅತಿ ಕೋಪವನ್ನು ನೋಡುವ ಪ್ರಸಂಗವೇ ನನಗೆ ಅಷ್ಟಾಗಿ ಬರುತ್ತಿರಲಿಲ್ಲ. ಇವರು ತುಂಬ ಮೃದುಹೃದಯದವರು. ಹೆಣ್ಣು ಮಕ್ಕಳಿಗಿಂತ ಇವರಲ್ಲಿ ಹೆಂಗರುಳು ಹೆಚ್ಚು. ನನ್ನ ಬಗೆಗಾಗಲಿ, ಮಕ್ಕಳ ಬಗೆಗಾಗಲಿ ತುಂಬ ಪ್ರೇಮದಿಂದ, ಅಕ್ಕರೆಯಿಂದ ನಡೆದುಕೊಂಡು ಬಂದಿದ್ದಾರೆ. ನಾನು ಅತ್ತೆ ಮನೆಗೆ ಬಂದಂತೆಯೇ ಅನಿಸುತ್ತಿರಲಿಲ್ಲ ಎಂದರೆ ಕೇಳುವವರಿಗೆ ಆಶ್ಚರ್ಯವೆನಿಸಬಹುದು. ಆದರೆ ತುಂಬ ಸಂಪ್ರದಾಯಪ್ರಿಯರು.

ಹೆಣ್ಣುಮಕ್ಕಳಲ್ಲಿ ಫ್ಯಾಶನ್ ಇವರಿಗೆ ಸೇರುವದಿಲ್ಲ. ನಮ್ಮ ಮನೆಗೆ ಇವರನ್ನು ಕಾಣಲು-ಮಾತನಾಡಲು ಬರಹೋಗುವವರ ಸಂಖ್ಯೆ ತುಂಬ. ಅವರಿಗೆಲ್ಲ ಸರಿಯಾಗಿ ಉಪಚಾರ ನಡೆಯಬೇಕೆಂದು ಇವರ ಬಯಕೆ. ಬಾಯಿಬಿಟ್ಟು ಇವರು ಏನನ್ನೂ ಹೇಳುತ್ತಿರಲಿಲ್ಲ. ಅವರ ಕಣ್ಣು ಸನ್ನೆಯಿಂದಲೇ ನಾನು ಎಲ್ಲವನ್ನು ನಡೆಸಿಕೊಂಡು ಬರುತ್ತಿದ್ದೆ. ಕಾದಂಬರಿಗಳನ್ನು ಬರೆವಾಗ ತುಂಬ ಭಾವಪರವಶರಾಗುತ್ತಿದ್ದರು. ದುಃಖಾಂತದ ಸಮಯದಲ್ಲಿ ಇವರಿಗೆ ತುಂಬ ಖೇದವಾಗುತ್ತಿತ್ತು. ಒಂದೆರಡು ಸಲವಂತೂ ಗಳಗಳನೆ ಅತ್ತುಬಿಟ್ಟಿದ್ದರು. ನಮಗೆಲ್ಲ ಗಾಬರಿಯಾಗಿ ವಿಚಾರಿಸಿದಾಗ ಪಾತ್ರಗಳ ದುಃಖದ ಕಥೆಯನ್ನು ಹೇಳಿದ್ದರು. ನಮ್ಮ ಸಂಸ್ಕೃತಿ, ಸಂಸ್ಕಾರ ರೀತಿ-ನೀತಿಗಳ ಬಗೆಗೆ ಅವರಿಗೆ ತುಂಬ ಅಭಿಮಾನ. ತಮಗೆ ಯಾವುದಾದರೂ ಸಂಗತಿಯ ಬಗೆಗೆ ಸಂದೇಹ ಬಂದಾಗ ವಿಚಾರಿಸುತ್ತಿದ್ದರು. ಕೆಲ ಸಲ ಪಾತ್ರಗಳ ಸೃಷ್ಟಿಯ ಬಗ್ಗೆ ವಿಚಾರಿಸಿದ್ದೂ ಉಂಟು. ನಾನೇನೂ ಹೆಚ್ಚು ಕಲಿತವಳಲ್ಲ ಎಂಬ ಅಸಡ್ಡೆ-ಯನ್ನು ಅವರೆಂದೂ ತೋರಲಿಲ್ಲ. ನನಗೆ ತಿಳಿದ ಮಾತುಗಳನ್ನು ಹೇಳಿದಾಗ ಹೌದು. ಸರಿ ಎಂದು ಒಪ್ಪಿಕೊಳ್ಳುತ್ತಿದ್ದರು. ಅನೇಕ ಸಲ ನಮ್ಮನ್ನೆಲ್ಲ ಕೂಡಿಸಿಕೊಂಡು ತಮ್ಮ ಕಾದಂಬರಿಯನ್ನು ಓದುತ್ತಿದ್ದರು. ಚರ್ಚೆಯನ್ನು ನಡೆಸುತ್ತಿದ್ದರು. ಏನಾದರೂ ಲೋಪದೋಷ ಎತ್ತಿ ತೋರಿಸಿದಾಗ ತಾವು ಬರೆದದ್ದೇ ಸರಿ ಎಂದು ಪಟ್ಟು ಹಿಡಿಯದೇ ಅದನ್ನು ಒಪ್ಪಿಕೊಂಡು ತಿದ್ದುತ್ತಿದ್ದರು. ಇಂಥ ಹಿರಿಯ ಗುಣ ನಮ್ಮವರದು. ಮೊದಮೊದಲು ಅವರು ಹೋಗುವ ಸಭೆ ಸಮಾರಂಭಗಳಿಗೆ ನಾನು ನಾಚಿಕೆಯಿಂದಾಗಿ ಹೋಗುತ್ತಿರಲಿಲ್ಲ. ಆದರೆ ಅವರು ಮನೆಗೆ ಬಂದು ಅಲ್ಲಿಯ ವೈಭವವನ್ನು ಬಣ್ಣಿಸಿದಾಗ ನಾನೇಕೆ ಇಂಥ ಪ್ರಸಂಗ ಕಳೆದುಕೊಂಡೆ ಎಂದೆನಿಸು-ತ್ತಿತ್ತು. ಈಗ ಮಾತ್ರ ಅವರೊಂದಿಗೆ ಅನೇಕ ಸಭೆ ಸಮಾರಂಭಗಳಿಗೆ ಹೋಗು-ತ್ತಿದ್ದೇನೆ. ಜನ ಅವರನ್ನು ಸತ್ಕರಿಸುವದನ್ನು ಮನ್ನಿಸುವದನ್ನು ಕಂಡು ಸಂತೋಷ ಪಡುತ್ತೇನೆ. ಇದೂ ಒಂದು ನನ್ನ ಪುಣ್ಯ ವಿಶೇಷ ಎಂದೇ ನನ್ನ ಭಾವನೆ. ನನ್ನವರದು ಹೊನ್ನಿನ ಗುಣ. ಯಾವಾಗಲೂ ಒಳ್ಳೆಯದನ್ನು, ಆದರ್ಶವನ್ನು ಅವರು ಬಯಸುವರು; ಆಶಿಸುವರು. ಅದಕ್ಕಾಗಿ ಅವರು ಪರಿಶ್ರಮಿಸುವರು. ಇಂಥವರ ಕೈ ಹಿಡಿದ ಧನ್ಯತೆ ನನ್ನದು." ಎಂದು ಗಂಗಕ್ಕ ತಮ್ಮ ನಾಲ್ವತ್ತು ವರುಷಗಳ ಬದುಕಿನ ಸಿಹಿ-ಕಹಿಗಳನ್ನು, ಸಂಸಾರದ ಕಥೆಯನ್ನು ವಿವರಿಸಿದಾಗ ಅವರಿಗೆ ತಮ್ಮ ಪತಿಯ ಬಗೆಗೆ ತುಂಬ ಉದಾತ್ತವಾದ ಭಾವನೆಗಳೇ ಇರುವುದು ಸ್ಪಷ್ಟವಾಗಿ ಕಂಡುಬರುವುದು. ಪತಿಯ ವಿಷಯವಾಗಿ ಯಾವ ಸತಿಯೂ ಇಲ್ಲದ-ಸಲ್ಲದ ಮಾತು ಹೇಳುವದಿಲ್ಲವೆಂಬುದು ಕಠೋರವಾದ ಸತ್ಯವಾಗಿದೆ. ಆದರೂ ಇಂಥ ದೀರ್ಘವಾದ ಬದುಕಿನಲ್ಲಿ ಅಪ್ಪಿತಪ್ಪಿ ನಡೆದಿರಬಹುದಾದ ಕಹಿ ಪ್ರಸಂಗ, ಕೋಪದ ಪ್ರಸಂಗಗಳನ್ನು ಅಪ್ಪಿ-ತಪ್ಪಿ ಕೂಡ ಗಂಗಕ್ಕನ ಬಾಯಿಂದ ಒಮ್ಮೆಯೂ, ಒಂದೇ ಒಂದು ಸಲವೂ ಬಾರದಿರುವದನ್ನು ಕಂಡಾಗ ಕೃಷ್ಣಮೂರ್ತಿ ಪುರಾಣಿಕರ

ಸಾಂಸಾರಿಕ ಜೀವನದ ನೆಮ್ಮದಿಯ ಚಿತ್ರ ನಮ್ಮ ಕಣ್ಮುಂದೆ ತಾನಾಗಿಯೇ ಸುಳಿದು ಹೋಗುವುದು. ಇಂಥ ಅಪಾರವಾದ ಬರವಣಿಗೆ, ಶಿಕ್ಷಕ ವೃತ್ತಿಗಳ ಮಧ್ಯದಲ್ಲಿ ಕೂಡ ಸತಿಸುತರ ಆಗುಹೋಗುಗಳನ್ನು ಲಕ್ಷಿಸುತ್ತ ಅವಳ ಬಾಳಿಗೂ ಬೆಳಕಾಗಿ ನಿಂತ ಅವರ ಆದರ್ಶಮಯತೆ ಕೇವಲ ಕಾಲ್ಪನಿಕವಲ್ಲ; ಗ್ರಂಥಸ್ಥವಲ್ಲ, ಪರೋಪದೇಶವಲ್ಲ; ವಾಸ್ತವವಾದುದು. ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಬಂದುದು ಎಂಬ ಮಾತು ನಮಗೆ ಸ್ಪಷ್ಟವಾಗುವುದು.

ಶ್ರೀ ಕೃಷ್ಣಮೂರ್ತಿ ಪುರಾಣಿಕರಿಗೆ ನಾಲ್ವರು ಹೆಣ್ಣು ಮಕ್ಕಳು; ಮೂವರು ಗಂಡು ಮಕ್ಕಳು. ಎಲ್ಲರಿಗೂ ಯೋಗ್ಯ ಶಿಕ್ಷಣವನ್ನು ಅವರು ಕೊಡಿಸಿದ್ದಾರೆ; ನೀಡಿದ್ದಾರೆ. ಹಿರಿಯವಳೂ ಪುತ್ರಿ ಕೊನೆಯವಳೂ ಪುತ್ರಿ. ಮೂರು ಗಂಡು ಮಕ್ಕಳು ಉದ್ಯೋಗದಲ್ಲಿದ್ದಾರೆ. ಬ್ಯಾಂಕಿನಲ್ಲಿಯೇ ಅವರು ಉದ್ಯಮಿಗಳು. ಅವರ ಮೂವರ ಮದುವೆಯನ್ನೂ ನೆರವೇರಿಸಿದ್ದಾರೆ. ಇಬ್ಬರು ಹೆಣ್ಣುಮಕ್ಕಳ ವಿವಾಹವನ್ನು ಜರುಗಿಸಿದ್ದಾರೆ. ಇನ್ನಿಬ್ಬರದು ಜರುಗಬೇಕು. ಕೊನೆಯವಳು ಇನ್ನೂ ಶಿಕ್ಷಣ ಪಡೆಯುತ್ತಿದ್ದಾಳೆ. ಅವರ ಇಬ್ಬರೂ ಅಳಿಯಂದಿರು ಒಳ್ಳೇ ಸುಶಿಕ್ಷಿತರು. ಉತ್ತಮವಾದ ಉದ್ಯೋಗಗಳಲ್ಲಿದ್ದಾರೆ. ಹೆಣ್ಣು ಮಕ್ಕಳು ಅವರ ಮಕ್ಕಳು, ಗಂಡು ಮಕ್ಕಳು ಅವರ ಮಕ್ಕಳು, ಆಗಾಗ ಬಂದು ಹೋಗುತ್ತಾರೆ. ಮೊಮ್ಮಕ್ಕಳ ಒಡನಾಟ ಅವರಿಗೆ ಹೆಚ್ಚು ಕಡಿಮೆ ಸದಾಕಾಲ ಇದ್ದೇ ಇರುತ್ತದೆ. ಅವರೂ ಈ ಅಜ್ಜನೊಂದಿಗೆ ಉತ್ಸಾಹದಿಂದ ಕಾಲ ಕಳೆಯುತ್ತಾರೆ. ಅಜ್ಜನೂ ಈ ಮೊಮ್ಮಕ್ಕಳನ್ನು ತುಂಬ ವಾತ್ಸಲ್ಯದಿಂದ ಕಾಣುತ್ತಾನೆ: ಅವರಿಗೆ ಬೇಕು–ಬೇಕಾದುದನ್ನು ತಂದು ಕೊಡುತ್ತಾನೆ. ಅವರ ಜೊತೆಗಿರುವಾಗ ಮಗುವಿಗಿಂತ ಮಗುವಾಗಿ ನಡೆದುಕೊಂಡು ಅವರನ್ನು ತಣಿಸುತ್ತಾನೆ. ಆಗ ಕೃಷ್ಣಮೂರ್ತಿ ಪುರಾಣಿಕರನ್ನು ನೋಡಿದವರಿಗೆ ಇವರಿಗೇನು ಅಂಥ ವಯಸ್ಸೇ ಆಗಿಲ್ಲವೇ ಎಂದೆನ್ನಿಸುವುದು ಕೂಡ. ಮೊಮ್ಮಕ್ಕಳಂತೆಯೇ ಇತರರ ಕಿರಿಯಮಕ್ಕಳು ಬಂದಾಗಲೂ ಅಂಥದೇ ವಾತ್ಸಲ್ಯ, ಪ್ರೀತಿ ಅವರಿಂದ ಹರಿದು ಬರುವುದು. ಅವರು ವಾತ್ಸಲ್ಯದ ತವರೇ ಎಂಬಂತೆ ಆಗೆಲ್ಲ ತೋರುವರು.

ಅವರು ತಮ್ಮ ಮಕ್ಕಳೊಂದಿಗೆ ತುಂಬ ಆತ್ಮೀಯತೆಯಿಂದ, ಅದೇ ಕಾಲಕ್ಕೆ ಮುಕ್ತರೀತಿಯಲ್ಲಿ ನಡೆದುಕೊಳ್ಳುತ್ತಿದ್ದರೆಂಬುದು ಎಲ್ಲ ಮಕ್ಕಳು ಒಕ್ಕೊರಲಿನಿಂದ ಹೇಳುವ ಮಾತಾಗಿರುವುದು. ತಮ್ಮೊಂದಿಗೆ ಅತ್ಯಂತ ಹಾರ್ದಿಕವಾಗಿ ಮನಬಿಚ್ಚಿ ನಡೆದುಕೊಳ್ಳುತ್ತಾರೆಂಬುದು ಅವರ ಅಭಿಪ್ರಾಯವಾಗಿದೆ. ತಾವು ಸ್ವತಃ ಬಡತನದಲ್ಲಿ ಬೆಳೆದು ನಾನಾ ಬಗೆಯಲ್ಲಿ ಬವಣೆ ಅನುಭವಿಸಿದವರು; ಮಕ್ಕಳಿಗೂ ಅಂಥ ಬವಣೆ ಆಗಬಾರದು ಎಂದು ತಾವು ಕೇಳಿದ್ದನ್ನು ಪೂರೈಸುತ್ತಿದ್ದರು; ನೆರವೇರಿಸುತ್ತಿದ್ದವರು ಎಂದು ಹೇಳುವಾಗ ಅವರ ಮಕ್ಕಳಿಗೆ ತುಂಬ ಸಂತೋಷ. ಜೊತೆಗೆ ತಂದೆಯ ಆ ಪ್ರೇಮಮಯತೆ ವಾತ್ಸಲ್ಯಗಳನ್ನು ಮತ್ತೆ ಮತ್ತೆ ಅನುಭವಿಸಿದ

ಆನಂದ. ಮಕ್ಕಳ ಉನ್ನತಿಗಾಗಿ ಅವರು ತುಂಬ ಪರಿಶ್ರಮಿಸುತ್ತ ಬಂದರು. ಎಂಥ ಅನುವು – ಆಪತ್ತುಗಳಲ್ಲಿಯೂ ಅವರು ಮಕ್ಕಳ ಕಲ್ಯಾಣಕ್ಕಾಗಿ ಹಿಂದೆ – ಮುಂದೆ ನೋಡದೆ ಮುಂದಾಗುತ್ತಿದ್ದರು. ಅವರು ಬೆಳೆದು ದೊಡ್ಡವರಾದಂತೆ ಅವರೊಂದಿಗೆ ಸ್ನೇಹಭಾವ ತಾಳುತ್ತ ಬಂದರು. ತಮ್ಮ ಕಾದಂಬರಿಗಳ ಕಥಾವಸ್ತು, ಪಾತ್ರಗಳು, ಬೆಳವಣಿಗೆ, ಅದರಲ್ಲಿ ಮೂಡಿ ಬಂದಿರುವ ಆದರ್ಶ ಈ ಮೊದಲಾಗಿ ನಾನಾ ರೀತಿಯಲ್ಲಿ ಚರ್ಚೆಯನ್ನು ಕೂಡ ಅವರು ನಡೆಸುತ್ತಿದ್ದರು.

"ನಮ್ಮ ವೈಯಕ್ತಿಕತೆಯನ್ನು ಬೆಳೆಸಿಕೊಳ್ಳಲು ನಮ್ಮ ತಂದೆ ಪ್ರೋತ್ಸಾಹ-ವನ್ನು ನೀಡುತ್ತಿದ್ದರೇ ಹೊರತೂ ಯಾವ ಸಂದರ್ಭದಲ್ಲಿಯೂ, ಯಾವ ಕಾಲಕ್ಕೂ ಅವರು ಅದಕ್ಕೆ ಅಡ್ಡ ಬರುತ್ತಿರಲಿಲ್ಲ. ತಂದೆಯ ಕರ್ತವ್ಯವನ್ನು ಅವರು ಸರಿಯಾಗಿ ನಿರ್ವಹಿಸಿಕೊಂಡು ಬಂದರು; ಬರುತ್ತಿದ್ದಾರೆ. ಮಕ್ಕಳೊಂದಿಗೆ ಅವರು ಮನಬಿಚ್ಚಿ ಮಾತನಾಡುತ್ತಿದ್ದರು; ನಡೆದುಕೊಳ್ಳುತ್ತಿದ್ದರು. ನಾನು ಎಂ. ಎ. ದಲ್ಲಿದ್ದಾಗ ಅವರಿಗೆ ಬರೆದ ಪತ್ರದಲ್ಲಿ ನನಗೆ ಅಕ್ಕಲ್‌ದವಡೆಯು ಬರುತ್ತಿರುವ ವಿಷಯವನ್ನು ತಿಳಿಸಿದ್ದೆ. ಅವರು ಉತ್ತರ ಬರೆದಾಗ ಅದರಲ್ಲಿಯ ಒಂದು ಮಾತು ನನಗೆ ಆಗಿನಂತೆ ಈಗ ಕೂಡ ಮೋಜಿನದಾಗಿ ತೋರುವುದು. "ನನಗಿನ್ನೂ ಅಕ್ಕಲ್‌ದವಡೆ ಹಲ್ಲು ಬಂದಿಲ್ಲ" ಎಂದವರು ಬರೆದುದನ್ನು ನೋಡಿದಾಗ ಅವರ ಸ್ಪಷ್ಟತೆಗಾಗಿ ಬೆರಗಾ-ಗಿದ್ದೆ; ಅಲ್ಲದೇ ಈ ವಯಸ್ಸಿನಲ್ಲಿ ಅವರು ತೋರುತ್ತಿದ್ದ ಹಾಸ್ಯ ಪ್ರವೃತ್ತಿಗಾಗಿ ಬಿದ್ದು ಬಿದ್ದು ನಕ್ಕಿದ್ದೆ. ಅವರದು ನಿರ್ಭಿಡೆಯ ಸ್ವಭಾವವೆಂಬುವ ನಮಗೆಲ್ಲರಿಗೂ ಗೊತ್ತು. ನಾವು ಅವರೊಂದಿಗೆ ಮುಚ್ಚುಮರೆ ಮಾಡಿದರೆ ಅವರಿಗೆ ಸೇರುತ್ತಿರಲಿಲ್ಲ. ಅಂಥ ಪ್ರಸಂಗಕ್ಕೆ ಆಸ್ಪದ ಬರದಂತೆ ಅವರು ತುಂಬ ಆತ್ಮೀಯವಾಗಿ ನಮ್ಮನ್ನು ನೋಡಿಕೊಳ್ಳುತ್ತಿದ್ದರು; ವ್ಯವಹರಿಸುತ್ತಿದ್ದರು. ಸಾಹಿತಿಯಾದರೂ ತಂದೆಯ ತನ್ನ ಕರ್ತವ್ಯವನ್ನು ಅವರು ಯಾವಾಗಲೂ ಈಡೇರಿಸುತ್ತಿದ್ದರು. ಇಂಥ ತಂದೆ-ಯನ್ನು ಪಡೆದ ನಾನು ಧನ್ಯ ಎಂಬ ಭಾವ ಸದಾಕಾಲವೂ ನನ್ನಲ್ಲಿದೆ. ಇಷ್ಟೇ ಏಕೆ ಅವರು ನಿಜವಾಗಿ ಅದ್ಭುತ ತಂದೆ ಎಂದೇ ನನಗನ್ನಿಸುತ್ತದೆ" ಎಂದು ಅವರ ಹಿರಿಯ ಮಗ ಶ್ರೀ ಪ್ರಭಾಕರ, ಸಿಂಡಿಕೇಟ ಬ್ಯಾಂಕಿನ ಶಾಖಾ ಮ್ಯಾನೇಜರ, ಹೇಳಿದಾಗ ಅವರ ಮುಖದ ಮೇಲೂ ಧನ್ಯಭಾವ ಕಂಡುಬರುತ್ತಿತ್ತು; ಕಂಗಳಲ್ಲಿ ಅದೊಂದು ಬಗೆಯ ಮಿಂಚು ಮಿನುಗುತ್ತಿತ್ತು.

ಅವರ ಎರಡನೆಯಮಗ ಪರಮೇಶ್ವರ ಸೇನಾಧಿಕಾರಿಯಾಗಿದ್ದವ ಈಗ ಅಲ್ಲಿಂದ ಬಿಡುಗಡೆ ಪಡೆದು ಸಿಂಡಿಕೇಟ ಬ್ಯಾಂಕಿನಲ್ಲಿಯೇ ಅಧಿಕಾರಿಯಾಗಿರುವನು. "ನಮ್ಮ ತಂದೆಗೆ ಮಕ್ಕಳ ಮೇಲೆ ತುಂಬ ವಿಶ್ವಾಸವು. ಅವರ ಬಗೆಗೆ ಇನ್ನೊಬ್ಬರು ಹೇಳಿದ್ದನ್ನು ಕೇಳಿಕೊಳ್ಳುತ್ತಿರುವ ಗೋಜಿಗೇ ಹೋಗುತ್ತಿರಲಿಲ್ಲ. ಅವರು ಹೇಳಿ-ದ್ದನ್ನು ನಂಬುತ್ತಿರಲೂ ಇಲ್ಲ. ಆದರೂ ಮಕ್ಕಳನ್ನು ವಿಚಾರಿಸುತ್ತಿದ್ದರು. ಅದೂ ಔಪಚಾರಿಕ ರೀತಿಯಲ್ಲಿ. ಅವರು ಹಾಗೇನೂ ಇಲ್ಲವೆಂದು ತಿಳಿಸಿದಾಗ ಮತ್ತೆ ಅದನ್ನು

ಕೆಣಕುವ ಗೋಜಿಗೆ ಹೋಗುತ್ತಿರಲಿಲ್ಲ. ಮಕ್ಕಳ ಅಭಿರುಚಿಯನ್ನು ಅರಿತುಕೊಂಡೇ ನಡೆಯುತ್ತಿದ್ದರು. ಅವರಿಗೆ ಬೇಡವಾದುದನ್ನು ಮಾಡಲು ಹೇಳುತ್ತಿರಲಿಲ್ಲ. ಆದರೆ ಸೌಮ್ಯವಾಗಿ ಅವರನ್ನು ತಿದ್ದಲು ಮುಂದಾಗುತ್ತಿದ್ದರು. ಮೊದಮೊದಲು ಅವರು ಸ್ವಲ್ಪ ಸಿಟ್ಟಿಗೇಳುತ್ತಿದ್ದರು. ಬಹುಶಃ ಅವರಿಗೆ ಮಧ್ಯಮ ವಯಸ್ಸು ಆಗುವ-ವರೆಗೂ ನಾನು ಅವರು ಆಗಾಗ ಕೋಪಗೊಳ್ಳುವುದನ್ನು ನೋಡಿದ್ದೇನೆ. ಮುಂದೆ ಮಾತ್ರ ಅವರು ಕೋಪಗೊಂಡುದನ್ನು ನಾನು ನೋಡಿಯೇ ಇಲ್ಲವೆಂದರೂ ಸರಿಯೇ. ಈ ರೀತಿ ಅವರು ಒಮ್ಮೆ ತುಂಬ ಕುಪಿತರಾಗಿ ನನ್ನನ್ನು ಬಲವಾಗಿ ದಂಡಿಸಿದರು. ನಾನಾಗ ೯-೧೦ನೇ ವರ್ಗದಲ್ಲಿರಬೇಕು. ನನ್ನ ಯಾವುದೋ ಅಪರಾಧಕ್ಕಾಗಿ ಅವರು ತುಂಬ ಸಿಟ್ಟಿಗೆದ್ದಿದ್ದರು. ಅಷ್ಟೇ ಏಕೆ ಹಸಿಕಟ್ಟಿಗೆಯಿಂದ ಬಲವಾಗಿ ಬಡಿದರು ಕೂಡ. ಆದರೆ ಕ್ಷಣಮಾತ್ರದಲ್ಲಿ ಅವರ ಕೋಪವೂ ಇಳಿಯಿತು. ನನ್ನನ್ನು ಬಡಿದು-ದಕ್ಕಾಗಿ ತುಂಬ ಪಶ್ಚಾತ್ತಾಪವೂ ಆಯಿತೇನೊ! ಗಳಗಳನೇ ಅತ್ತುಬಿಟ್ಟರು. ನಾನು ಕಾಲೇಜಿನಲ್ಲಿ ಇಂಟರ ಸಾಯನ್ಸ್ ಓದುವಾಗ ಮತ್ತೆ ಯಾವುದೊ ಒಂದು ತಪ್ಪುಮಾಡಿದೆ. ತಂದೆಯವರಿಗೆ ಆ ಬಗೆಗೆ ಕ್ಷಮಿಸಬೇಕೆಂದು ಪತ್ರ ಬರೆದೆ. ಅವರು ಬರೆದ ಮಾರೋಲೆಯಲ್ಲಿ ಪ್ರತಿಯೊಬ್ಬ ಸಂತನೂ ಒಂದು ಕಾಲಕ್ಕೆ ತಪ್ಪು ಮಾಡಿಯೇ ಇರುತ್ತಾನೆ. ಪಾಪಿಯಾದವನಿಗೂ ಭವಿತವ್ಯ ಉಜ್ವಲವಾಗಿರುತ್ತದೆ. ಪಶ್ಚಾತ್ತಾಪದಿಂದ ದಗ್ಧನಾದ ಮಾನವ ತಪ್ಪನ್ನು ಮರೆತು ಮುನ್ನಡೆಯಬೇಕು ಎಂದು ಉಪದೇಶಿಸಿದ್ದರು. ನಾನು ಪದವೀಧರನಾಗಿ ಸೈನ್ಯಕ್ಕೆ ಸೇರುವೆನೆಂದಾಗ ಇತರರಂತೆ ಅವರು ಹಿಂದೇಟು ಹಾಕಲಿಲ್ಲ. ತುಂಬ ದಿಟ್ಟತನದಿಂದ ಸೈನ್ಯ ಸೇರಲು ಉಪದೇಶಿಸಿದರು. ತಾಯಿ ಬಂಧುಬಳಗಕ್ಕೆ ಸಮಾಧಾನವನ್ನು ಹೇಳಿದವರು ಅವರೇ. ಹಾಗಿಲ್ಲವಾದರೆ ಆ ಜೀವನದ ಅನುಭವ ನನಗೆ ತಪ್ಪಿ ಹೋಗುತ್ತಿತ್ತು. ತಂದೆಯಿಂದ ನನಗೆ ಈ ಬಗೆಗೆ ಪ್ರೋತ್ಸಾಹ ದೊರೆತುದು ಇಮ್ಮಡಿ ಬಲವನ್ನು ನೀಡಿತು. ಆಗ ಅವರು ನೀಡಿದ ಉಪದೇಶದ ಮಾತೆಂದರೆ ನಾನು ಯಾವದೇ ಕಾಲಕ್ಕೆ ಅಡ್ಡಹಾದಿ ಹಿಡಿಯಬಾರದೆಂದು ಸೈನ್ಯದಲ್ಲಿ ಸೇರುವವರು ಈ ರೀತಿ ಆಗುತ್ತಾರೆಂಬ ಸಾಮಾನ್ಯ ತಿಳುವಳಿಕೆ. ಅಲ್ಲಿಯ ವಾತಾವರಣವೂ ಹಾಗೆ ಇದೆ. ತಂದೆಯವರ ಉಪದೇಶದ ಮಾತು ನನಗೆ ಹೆಜ್ಜೆ-ಹೆಜ್ಜೆಗೆ ಆಸರೆ ನೀಡುತ್ತಿತ್ತು. ಇಂಥ ಒಂದು ಸಂದರ್ಭದಲ್ಲಿ ನನಗೆ ಮದುವೆಯಾಗುವುದು ಯೋಗ್ಯವೆನಿಸಿತು. ತಂದೆಯವರಿಗೆ ಬರೆದ ಪತ್ರದಲ್ಲಿ ಆ ಮಾತು ತಿಳಿಸಿದೆ. ಅವರು ಕೂಡ ಅದೇ ಯೋಗ್ಯ ಎಂದು ಅಭಿಪ್ರಾಯಪಟ್ಟರು. ಅವರು ನನಗಾಗಿ ಆಯ್ದ ಕನ್ಯೆಯನ್ನು ನಾನು ವರಿಸಿದೆ. ಅವರ ಆಯ್ಕೆ ನನ್ನ ಅಭಿರುಚಿಗೆ ತಕ್ಕುದಾಗಿತ್ತು. ಮಕ್ಕಳ ಅಭಿರುಚಿ, ಅಭಿಲಾಷೆ ಅರಿತುಕೊಂಡು ನಡೆವ, ಅವರೊಂದಿಗೆ ಸ್ನೇಹಿತನಾಗಿ ಮುಕ್ತ-ಮನಸ್ಸಿನಿಂದ ನಡೆವ ತಂದೆ ನನಗೆ ದೊರೆತುದು ಒಂದು ಭಾಗ್ಯವೇ ಎಂದು ನನಗೆನಿ-ಸುವುದು.” ಅವರ ಅಭಿಪ್ರಾಯದಲ್ಲಿ ಪುರಾಣಿಕರು ಮಕ್ಕಳ ಕಲ್ಯಾಣವನ್ನು ಅವರು

ನಿರೀಕ್ಷಿಸದೆಯೇ ಮಾಡುವವರು, ಅವರ ಬೆಳವಣಿಗೆಯಲ್ಲಿ, ಶ್ರದ್ಧೆಯನ್ನು ತೋರುವವರು.

ಆನಂದ ಅವರ ಮೂರನೆಯ ಮಗ. ಪದವೀಧರನಾಗಿ ಈಗ ಸಿಂಡಿಕೇಟ ಬ್ಯಾಂಕಿನಲ್ಲಿ ಉದ್ಯೋಗದಲ್ಲಿದ್ದಾನೆ. ತಂದೆಯ ಸಾಹಿತ್ಯಸೇವೆ ಪ್ರಾರಂಭವಾದಾಗ ಎಲ್ಲ ಮಕ್ಕಳೂ ಕಿರಿಯರು. ಎಲ್ಲರೂ ಆಗ ಅವರ ಬಳಿ ಇದ್ದರು. ಆದರೆ ಅದು ಅಭಿವೃದ್ಧಿ ಹೊಂದುವ ಸಮಯಕ್ಕೆ ಉಳಿದಿಬ್ಬರು ಮಕ್ಕಳು ಉದ್ಯೋಗ ಅರಿಸಿಕೊಂಡು ಹೋಗಿದ್ದರಿಂದ ತಂದೆಯ ಸಾಹಿತ್ಯಸೇವೆಯಲ್ಲಿ ಅವರಿಗೆ ವಿಶೇಷವಾಗಿ ಪಾಲ್ಗೊಳ್ಳಲು ಅಷ್ಟು ಸಾಧ್ಯವಾಗಿರಲಿಲ್ಲ. ಆದರೆ ಆನಂದ ಹುಟ್ಟಿ ಬೆಳೆದುದು ಅವರ ಸಾಹಿತ್ಯಸೇವೆ ತುಂಬ ಬೆಳೆದು ವರ್ಧಿಸುತ್ತಿರುವಾಗ. ಅವರ ಸಾಹಿತ್ಯಕ ಮಿತ್ರರು ಬರಹೋಗುವುದು ತುಂಬ ಹೆಚ್ಚಾದಾಗ ಹೀಗಾಗಿ ತಂದೆಯ ಸಾಹಿತ್ಯದ ಬಗೆಗೆ, ಅವರ ಓದುಗ ಮಿತ್ರರ ಬಗೆಗೆ, ಸಾಹಿತಿಗಳ ಬಗೆಗೆ ಒಳ್ಳೇ ನಿಕಟವಾದ ಸಂಪರ್ಕ ಬಂದಿತು. ಅಲ್ಲದೇ ಕೃಷ್ಣಮೂರ್ತಿಯವರು ಆಗಾಗ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಂಚಾರಕ್ಕೆ ತೊಡಗಬೇಕಾಗುತ್ತಿತ್ತು. ಅಂಥ ಸಂದರ್ಭಗಳಲ್ಲಿ ಈ ಮಗ ಅವರೊಂದಿಗಿರುತ್ತಿದ್ದ. ಅಂತೇ ಅವನಿಗೆ ಪುರಾಣಿಕರ ಓದುಗರ, ಮಿತ್ರರ ಮತ್ತು ಪುರಾಣಿಕರ ಈ ಜೀವನದ ಪರಿಚಯವು ವಿಶೇಷವಾಗಿ ಲಭಿಸಿತು. “ತಂದೆಯವರು ದಿನಾಲು ಸಾಯಂಕಾಲ ತಿರುಗಾಡಲು ಹೋಗುತ್ತಿದ್ದರು. ನನ್ನನ್ನು ಅವರು ತಮ್ಮ ಜೊತೆಗೆ ಕರೆದೊಯ್ಯುತ್ತಿದ್ದರು. ಆಗೆಲ್ಲ ನಾವು ಮಾತನಾಡುತ್ತಿದ್ದುದು ಅವರ ಕಾದಂಬರಿಗಳು, ಅಲ್ಲಿ ಬರುವ ಪಾತ್ರಗಳ ಕುರಿತು. ಅನೇಕ ಸಮಯ ವಿವಿಧ ಸಾಹಿತ್ಯದ ಚರ್ಚೆಯೂ ನಡೆಯುತ್ತಿತ್ತು. ನನ್ನ ಅಣ್ಣಂದಿರಿಗಿಂತ ನನಗೆ ಇಂಥ ಚರ್ಚೆಯ ಲಾಭ ಹೆಚ್ಚು ದೊರೆಯಿತು. ನಾನು ಕಿರಿಯನೆಂಬ ಮಾತನ್ನೇ ತಂದೆಯವರು ಎಂದೂ ಗಮನಿಸಿದಂತೆ ತೋರಲಿಲ್ಲ. ಕೇವಲ ಅವರೇ ಮಾತನಾಡುತ್ತಿದ್ದರೆಂದಲ್ಲ. ನಾನೂ ನನಗೆ ತಿಳಿದ ಮಟ್ಟಿಗೆ ಅವರ ಸಾಹಿತ್ಯದ ಬಗೆಗೆ ನನಗೆ ತಿಳಿದ ಮಾತುಗಳನ್ನು ಹೇಳುತ್ತಿದ್ದೆ. ಅವರು ಅವನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರು. ಅದರಿಂದ ನನಗೂ ಸಂತೋಷವೆನಿಸುತ್ತಿತ್ತು. ನಾನು ಓದುವಾಗ ಇಂಥದೇ ವಿಷಯ ತೆಗೆದುಕೊಳ್ಳಬೇಕೆಂದು ಅವರು ಹೇಳಲಿಲ್ಲ. ಉಡುಪು ತೊಡಪಿನಲ್ಲಿಯೂ ನಮಗೆ ಸ್ವಾತಂತ್ರ್ಯ ನೀಡಿದ್ದರು. ಆದರೆ ಫ್ಯಾಶನ್ ಮಾತ್ರ ಅವರಿಗೆ ಸೇರುತ್ತಿರಲಿಲ್ಲ. ಅವರು ಮಕ್ಕಳ ಬಗೆಗೆ ತುಂಬ ವಾತ್ಸಲ್ಯ ವುಳ್ಳವರು; ಅವರ ಬಗೆಗೆ ತುಂಬ ಮಮತೆ ಮತ್ತು ಪ್ರೀತಿ ಅವರಲ್ಲಿ ಕಾಣುತಿದ್ದವು. ಹೀಗೆಂದು ಅವರು ನಮ್ಮನ್ನು ಬೇಕು ಬೇಕಾದಂತೆ ನಡೆಯಲು ಬಿಡುತ್ತಿದ್ದ ರೆಂದೇನೂ ಅಲ್ಲ. ನಮ್ಮ ಬಗೆಗೆ ಅವರು ಕೆಲವೊಂದು ಅಪೇಕ್ಷೆಗಳನ್ನು ಇಟ್ಟುಕೊಂಡಿರುವುದು ನಮಗೆ ವ್ಯಕ್ತವಾಗುತ್ತಿತ್ತು. ಆ ರೀತಿ ನಾವು ವರ್ತಿಸಬೇಕೆಂದು ಅವರು ಬಯಸುತ್ತಿದ್ದರು. ನಾವು ಅದರಲ್ಲಿ ತಪ್ಪಿದರೆ ಅವರು ಆ ಬಗೆಗೆ ತಿಳಿಸಿ

ಹೇಳುತ್ತಿದ್ದರು. ಆದರೆ ಅಂಥ ಪ್ರಸಂಗಗಳು ಕಡಿಮೆ. ನಾವು ಬಹುಮಟ್ಟಿಗೆ ಅವರ ಅಪೇಕ್ಷೆಯಂತೆ ನಡೆದುಕೊಂಡು ಬಂದಿದ್ದೇವೆ. ತಂದೆಯವರೂ ಆ ಬಗೆಗೆ ತುಂಬ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ತಂದೆಯವರಿಗೆ ಸಂತೋಷವಾಗುವಂತೆ ನಾವು ನಡೆದುಕೊಂಡಿದ್ದೇವಲ್ಲ ಎಂಬ ಸಮಾಧಾನವೂ ನನಗಿದೆ. ನಮ್ಮ ಉನ್ನತಿ ಅಭ್ಯುದಯಗಳ ಬಗೆಗೆ ಸದಾ ಅವರು ಕಳಕಳಿ ತೋರುತ್ತಿದ್ದರು. ಇದೆಲ್ಲಕ್ಕಿಂತ ಮುಖ್ಯವಾಗಿ ಮಕ್ಕಳ ಸಂತೋಷದತ್ತ ಅವರದು ವಿಶೇಷ ಗಮನ. ನಾವು ಸಂತೋಷವಾಗಿರಬೇಕೆಂದು ಅವರು ಯಾವಾಗಲೂ ಬಯಸುವರು. ನಮ್ಮ ಮನೆತನದಲ್ಲಿ ಮೊದಲ ಬಾರಿಗೆ ನಾನು ಪ್ರೇಮವಿವಾಹ ಮಾಡಿಕೊಂಡೆ. ನಾನೊಲಿದ ಕನ್ಯೆಯನ್ನು ಮದುವೆಯಾಗುವದಕ್ಕೆ ಅವರು ಸಂತೋಷದಿಂದ ಒಪ್ಪಿಗೆ ನೀಡಿದರು. ಈ ರೀತಿ ಸಹಾನುಭೂತಿಪರವಾಗಿಯೇ ಅವರು ನಮ್ಮೊಂದಿಗೆ ನಡೆದುಕೊಂಡಿದ್ದಾರೆ." ಆನಂದ ಈ ಮಾತುಗಳನ್ನು ಹೇಳುವಾಗ ತುಂಬ ಭಾವಪೂರ್ಣರಾಗಿದ್ದರು. ಇಂಥ ತಂದೆಯನ್ನು ಪಡೆದ ಭಾಗ್ಯ ತಮ್ಮದು ಎಂಬ ಭಾವ ಅವರ ಮುಖದಲ್ಲಿ ಒಡೆದು ಕಾಣುತ್ತಿತ್ತು. ತಂದೆ ಹಿರಿಯ ಸಾಹಿತಿ; ಆದರೂ ಈ ಸಾಹಿತ್ಯ ಸೇವೆಯಲ್ಲಿ ಅವರು ಮಕ್ಕಳ ಜೀವನವನ್ನು ಅಲಕ್ಷಿಸಲಿಲ್ಲ ಎಂಬುದು ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

ಶ್ರೀ ಕೃಷ್ಣಮೂರ್ತಿ ಪುರಾಣಿಕರ ನಾಲ್ವರೂ ಹೆಣ್ಣುಮಕ್ಕಳು ಕೂಡ ತಂದೆಯ ಬಗೆಗೆ ಒಳ್ಳೇ ಅಭಿಮಾನಿಗಳಾಗಿದ್ದಾರೆ. ಅವರು ಹೆಸರಾಂತ ಸಾಹಿತಿಯಾಗಿದ್ದಾರೆಂಬುದು ಒಂದಾದರೆ ತಮ್ಮ ಶಿಕ್ಷಕ ವೃತ್ತಿ, ಸಾಹಿತ್ಯಸೇವೆ ಎಡೆಬಿಡದೆ ಕಾರ್ಯಕ್ರಮಗಳ ಮಧ್ಯದಲ್ಲಿಯೂ ಅವರು ಮಕ್ಕಳ ಜೀವನ ಹಸನಾಗಿರಬೇಕು; ಅವರಿಗೆ ಒಳ್ಳೆಯದಾಗಬೇಕು; ಮುಂದುವರಿಯಬೇಕು ಎಂದು ಸದಾಕಾಲ ಬಯಸುತ್ತಿದ್ದರೆಂಬುದು ಇನ್ನೊಂದಾಗಿರುವುದು. ತಂದೆಯ ಕರ್ತವ್ಯಪಾಲನೆಯಲ್ಲಿ ಅವರೆಂದೂ ತಪ್ಪಿದವರಲ್ಲ ಎಂಬುದು ಇವರೆಲ್ಲರ ಅಭಿಪ್ರಾಯವಾಗಿರುವುದು. ಸ್ತ್ರೀಯರು ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಸಾರಬೇಕು ಎಂದು ಹೇಳುವ ಪುರಾಣಿಕರು ಅದನ್ನು ಮನೆಯಲ್ಲಿ ಆಚರಣೆಗೆ ತಂದೂ ಇದ್ದಾರೆ. ತಮ್ಮ ಹೆಣ್ಣುಮಕ್ಕಳಿಗೆ ಅವರು ಒಳ್ಳೇ ಶಿಕ್ಷಣವನ್ನು ಕೊಡಿಸಿದ್ದಾರೆ; ಸುಸಂಸ್ಕೃತರನ್ನಾಗಿಸಿದ್ದಾರೆ. ಇಬ್ಬರನ್ನು ಒಳ್ಳೇ ಮನೆತನ ನೋಡಿ ಮದುವೆಮಾಡಿಕೊಟ್ಟಿದ್ದಾರೆ. ಆದರೆ ಯಾವ ಕಾಲಕ್ಕೂ ತಮ್ಮ ಹೆಣ್ಣುಮಕ್ಕಳಿಗೆ ಫ್ಯಾಶನ್ನಿಗೆ ಅವರು ಅವಕಾಶ ಕೊಟ್ಟಿಲ್ಲ. ಅದೇ ಕಾಲಕ್ಕೆ ಅವರ ಬಾಳು ಹಸನಾಗುವದಕ್ಕೆ ಯಾವ ಕೊರತೆಯೂ ಬಾರದಂತೆ ನೋಡಿಕೊಂಡಿದ್ದಾರೆ.

ಸುಲೋಚನಾ ಅವರ ಹಿರಿಯಮಗಳು. ಮದುವೆಯಾಗಿ ಪತಿಗೃಹದಲ್ಲಿದ್ದಾಳೆ. ಈಗ ನಾಲ್ಕು ಮಕ್ಕಳ ತಾಯಿ. ಅವಳ ಮದುವೆಯ ಸಂದರ್ಭ ಪುರಾಣಿಕರ ಸಹನೆಯನ್ನೇ ಪರೀಕ್ಷೆ ಮಾಡಿತು. ಬೀಗರು ಹೊಸಪೇಟೆಯವರು. ಅಲ್ಲಿಯ ಇಲ್ಲಿಯ

ಪದ್ಧತಿಗಳು ಭಿನ್ನವಾದವು. ಅಂಥ ಪ್ರಸಂಗದಲ್ಲೆಲ್ಲ ಪುರಾಣಿಕರು ತುಂಬ ತಾಳ್ಮೆ ವಹಿಸಿ ಯಾವುದೇ ಲೋಪದೋಷಗಳಿಗೆ ಆಸ್ಪದದೊರೆಯದಂತೆ ಬೀಗರನ್ನು ಸಂಬಾಳಿಸಿದರು. ಅಳಿಯ-ಮಗಳೂ ಇಬ್ಬರೂ ಆ ಸಂದರ್ಭದಲ್ಲಿ ಅವರು ನಡೆದುಕೊಂಡ ರೀತಿ ಎಲ್ಲರಿಗೂ ತೃಪ್ತಿ ತಂದಿತೆಂದು ಹೇಳುತ್ತಾರೆ. ಇಂಥಲ್ಲಿಯೂ ಅವರು ಅಸಾಧಾರಣೆಯನ್ನು ತೋರಿದರೆನ್ನುವುದು ಊಹಿಸಲೂ ಸಾಧ್ಯವಿಲ್ಲದ್ದು. “ ನನ್ನ ತಂದೆ ತುಂಬ ಅಂತಃಕರಣದ ಜೀವಿ. ಹೆಣ್ಣುಮಕ್ಕಳ ಮನಸ್ಸನ್ನು ಅವರೆಂದೂ ನೋಯಿಸುತ್ತಿರಲಿಲ್ಲ. ಅವರ ಮನನೋಯಿಸುವುದು ತಪ್ಪು ಎಂಬ ಭಾವನೆ ಅವರಲ್ಲಿತ್ತು. ಇಂಥ ಸಂದರ್ಭ ಬಂದಾಗ ತಾವೇ ಹೊಂದಿಕೊಳ್ಳಲು ಮುಂದಾಗುತ್ತಿದ್ದರೆ ವಿನಾ ಅವರನ್ನು ನೋಯಿಸುತ್ತಿರಲಿಲ್ಲ. ಅವರಲ್ಲಿ ಮಕ್ಕಳ ಬಗೆಗೆ ಹೆಣ್ಣು-ಗಂಡು ಎಂದು ಭೇದಭಾವವಿರಲಿಲ್ಲ. ಉಣಿಸು–ತಿನಿಸಿನಲ್ಲಿ, ಮಾಡಮಟ್ಟುವದರಲ್ಲಿ ಅವರು ನಮ್ಮೆಲ್ಲರನ್ನು ಒಂದೇ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು. ಆದರೆ ಸ್ತ್ರೀಯರಲ್ಲಿ ಭಾರತೀಯತ್ವ ಇರಬೇಕು; ಅವರು ಭಾರತೀಯತೆಯನ್ನು ಮೆರೆಯಬೇಕು ಎನ್ನುತ್ತಿದ್ದರು. ಸ್ತ್ರೀ ಪಾತ್ರಗಳಲ್ಲಿ ಕೂಡ ಅವರು ಈ ಮನೋಭಾವವನ್ನೇ ತೋರ್ಪಡಿಸಿದ್ದಾರೆ. ಅವರಲ್ಲಿ ನಾನು ಸಿಟ್ಟು-ಸಿಡುಕುತನ ನೋಡಿದ್ದು ಕಡಮೆ. ಅಪರೂಪವಾಗಿ ಅವರು ಕೋಪಿಸುತ್ತಿದ್ದರು. ಮಕ್ಕಳ ಬಗೆಗಂತೂ ಅವರಲ್ಲಿ ತುಂಬ ಮಮತೆಯನ್ನೇ ನಾನು ಕಂಡಿದ್ದೇನೆ. ನಾವು ಚಿಕ್ಕವರಿದ್ದಾಗ ಅವರನ್ನು ಏನಾದರೂ ಕೇಳುತ್ತಿದ್ದೆವು. ಕಾಡುತ್ತಿದ್ದೆವು. ಅದಕ್ಕೆಲ್ಲ ಅವರು ಶಾಂತಿಯಿಂದಲೇ ತಿಳಿಸಿ ಹೇಳುತ್ತಿದ್ದರು. ಸ್ವಭಾವತಃ ಅವರು ಸಿಟ್ಟಿನವರಾಗಿರಲಿಲ್ಲವೆಂದೇ ಹೇಳಬೇಕು. ಅದೇಕೆ ಅವರು ತಮ್ಮ ಕಾದಂಬರಿಗಳ ಪಾತ್ರಗಳನ್ನು ಕುರಿತು ನಮ್ಮೊಂದಿಗೆ ಚರ್ಚಿಸುತ್ತಿದ್ದರು. ಅನೇಕ ಸಲ ನಾವು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದೂ ಉಂಟು. ಅಂಥ ಸಂದರ್ಭದಲ್ಲಿ ಕೂಡ ಅವರು ಕೋಪಿಸಿಕೊಂಡದ್ದಿಲ್ಲ. ನಾವು ಸೂಚಿಸಿದ ಅಭಿಪ್ರಾಯ ಮನವರಿಕೆಯಾದಾಗ ಅವರು ಅದನ್ನು ಒಪ್ಪಿಕೊಳ್ಳುತ್ತಿದ್ದರು. ಅದು ಅವರ ಹಿರಿಯ ಗುಣವಾಗಿತ್ತು. ನನಗಂತೂ ತಂದೆಯೆಂಬ ಅಭಿಮಾನವೂ ಸೇರಿ ಅವರಲ್ಲಿ ಒಂದು ಬಗೆಯ ಅಲೌಕಿಕತೆಯನ್ನು ಕಾಣುತ್ತಿದ್ದೆ. ಅವರ ವ್ಯಕ್ತಿತ್ವ ಸಾಮಾನ್ಯಕ್ಕಿಂತ ಭಿನ್ನವಾದುದು ಎಂಬುದನ್ನು ನಾವು ಅರಿತಿದ್ದೆವು. ನಾನು ವಿವಾಹವಾಗಿ ದೂರಹೋಗಬಾರದೆಂದು ತಾಯಿ ಬಯಸುತ್ತಿದ್ದರೆ ಅವಳ ಕಲ್ಯಾಣವೇ ಆಗುತ್ತಿದ್ದರೆ ಅದಕ್ಕೆ ಯಾವುದೇ ತರದ ಅಡ್ಡಿ ಬೇಡವೆಂದು ತಂದೆ ಹೇಳುತ್ತಿದ್ದರು. ಹಲವಾರು ಸಲ ಅವರಿಬ್ಬರೂ ಈ ಬಗೆಗೆ ಮಾತನಾಡಿಕೊಂಡಿದ್ದಾರೆ. ಆದರೆ ತಂದೆಯವರ ಮಾತೇ ಗೆದ್ದಿತು. ಗುಣವಂತ ಪತಿಯನ್ನು ಅವರು ನಮಗಾಗಿ ಆಯ್ಕೆ ಮಾಡಿದರು. ದೂರದ ಹೊಸಪೇಟೆಯೆಂದು, ಭಿನ್ನ-ಭಿನ್ನ ಪದ್ಧತಿಯೆಂದು ಅವರು ಸ್ವಲ್ಪವೂ ಹಿಂದೆ-ಮುಂದೆ ನೋಡಲಿಲ್ಲ. ಇಷ್ಟೇ ಅಲ್ಲ, ಆಕ್ಷೇಪವೆತ್ತಿದವರಿಗೆಲ್ಲ ಸಮಾಧಾನ ಹೇಳಿದವರೂ ಅವರೇ. ಇಂಥ ತಂದೆಯನ್ನು ಪಡೆದುದಕ್ಕೆ ನಾನು ಧನ್ಯ

ಳಿಂದೇ ಭಾವಿಸುವೆ." ಹಿರಿಯಮಗಳ ಈ ಮಾತುಗಳು ಪುರಾಣಿಕರ ಜೀವನದ ಒಳ ನೋಟವನ್ನೇ ನೀಡುತ್ತವೆ; ಅವರ ವ್ಯಕ್ತಿತ್ವ ವಿಶೇಷತೆಯನ್ನು ಎತ್ತಿ ತೋರುತ್ತಿವೆ. ಸ್ವಭಾವತಃ ಅವರು ಸೌಮ್ಯವಾಗಿದ್ದು ಎಲ್ಲರೊಂದಿಗೂ ಹೊಂದಿಕೊಂಡು ಹೋಗುತ್ತಿದ್ದ ಮಾತನ್ನು ನಿದರ್ಶನಕ್ಕೆ ತರುತ್ತವೆ.

ಪುರಾಣಿಕರ ಸಾಹಿತ್ಯಕ ಜೀವನದಲ್ಲಿ ವಿಶೇಷ ನೆರವು ನೀಡಿದವಳು ಅವರ ಎರಡನೆಯ ಮಗಳು ಮನೋರಮಾ: ಈಗ ಅವಳದು ಮದುವೆಯಾಗಿದೆ. ಎರಡು ಮುದ್ದು ಮಕ್ಕಳ ತಾಯಿಯಾಗಿ ಪತಿಗೃಹದಲ್ಲಿದ್ದಾಳೆ. ಪುರಾಣಿಕರಿಗೂ ಈ ಮಗಳ ಮೇಲೆ ಮಮತೆ ತುಂಬ ಎಂದು ಕಾಣುತ್ತದೆ. ತಾವು ಹೋಗುವ ಸಾಹಿತ್ಯಕ ಸಭೆ ಸಮಾರಂಭಗಳಿಗೆ ಅವಳನ್ನು ಕರೆದೊಯ್ಯುತ್ತಿದ್ದರು. ತಂದೆಗೆ ದೊರೆವ ಈ ಗೌರವ ಜೀವನದಲ್ಲಿ ಅವಳೂ ಸಂತೋಷದಿಂದ ಪಾಲ್ಗೊಳ್ಳುತ್ತಿದ್ದಳು. ಜೊತೆಗೆ ತಂದೆಗೆ ಅವರ ಸಾಹಿತ್ಯಕ ಜೀವನದಲ್ಲಿ ವಿಶೇಷ ನೆರವು ನೀಡುವಳು; ಅನುಕೂಲತೆಗಳನ್ನು ಕಲ್ಪಿಸಿಕೊಡುವಳೆಂಬ ಪ್ರತೀತಿ ಕೂಡ ಇತ್ತು. ಅದು ಅಕ್ಷರಶಃ ಸತ್ಯವಾದ ಮಾತೂ ಆಗಿತ್ತು. ಅವರಿಗೆ ಹೊತ್ತು ಹೊತ್ತಿಗೆ ಚಹಮಾಡಿಕೊಡುವುದು ತಿಂಡಿ ತಿನಿಸು, ಒದಗಿಸುವುದು, ಬಂದ ಅತಿಥಿ ಅಭ್ಯಾಗತರ ಉಪಚಾರ ಹೀಗೆ ಅನೇಕ ಕಾರ್ಯಗಳನ್ನು ಪತಿಗೃಹಕ್ಕೆ ತೆರಳುವವರೆಗೂ ಮನೋರಮಾ ನಿರ್ವಹಿಸುತ್ತಿದ್ದಳು. ನನ್ನ ಓರ್ವ ಸ್ನೇಹಿತರು ಪುರಾಣಿಕರನ್ನು ಕಾಣಲು ಹೋದಾಗ ಸಹಜವಾಗಿ ಮನೋರಮಾಳನ್ನು ಪ್ರಶ್ನಿಸಿದರು. "ತಂಗೀ, ಪುರಾಣಿಕರು ಬರೆಯುವ ಕಾದಂಬರಿಗಳು ಹೆಚ್ಚು ಹೆಚ್ಚಾಗಿ ಅಚ್ಚಾಗುತ್ತಿರುವುದನ್ನು ನೋಡಿದರೆ ನಿಜವಾಗಿ ಅಚ್ಚರಿಯಾಗುತ್ತಿದೆ. ಅವರಿಗೆ ಬೇಕು ಬೇಕಾದ ನೆರವನ್ನು ನೀನು ನೀಡುತ್ತಿಯಂತೆ ಹೌದೆ?" ಅದಕ್ಕೆ ಮನೋರಮಾ ನೀಡಿದ ಉತ್ತರ ಕುತೂಹಲಕಾರಿಯಾಗಿದೆ: "ಕನ್ನಡದಲ್ಲಿ ತಂದೆಯವರ ಕಾದಂಬರಿಗಳಿಗೆ ಜನತೆಯ ಪ್ರೀತಿ ಸಿಕ್ಕಿದೆ. ಅದನ್ನು ಉಳಿಸಿ ಬೆಳೆಸಲು ನನ್ನ ಕೈಲಾದ ಸಹಾಯಮಾಡುತ್ತೇನೆ. ಅಪ್ಪನಿಗೆ ಬೇಕಾದ ಹಿಂದಿನ ಕಾದಂಬರಿಗಳ ಯಾವ ಘಟನೆ, ಯಾವ ಪಾತ್ರಗಳನ್ನು ಕೇಳಿದರೂ ನಾನು ಹೇಳಬಲ್ಲೆ. ಒಳ್ಳೆಯ ಕಾದಂಬರಿ ಅವರಿಂದ ಬರುವಂತೆ ಸಾಧ್ಯವಿರುವ ಅನುಕೂಲತೆ ಒದಗಿಸಲು ನನ್ನ ಕೈಲಾದ ಸೇವೆ ಮಾಡುತ್ತೇನೆ" ಪುರಾಣಿಕರ ಸಾಹಿತ್ಯಕ ಜೀವನ ಮನೋರಮಾಳಲ್ಲಿ ಸಾಹಿತ್ಯಕವಾದ ವಾತಾವರಣವನ್ನೇ ನಿರ್ಮಿಸಿದ್ದಿತೇನೊ! ಅವರ ಸಾಹಿತ್ಯದ ಪೂರ್ಣ ಪರಿಚಯವನ್ನು ಅವಳು ಹೊಂದಿದ್ದಳು. ಮನೋರಮಾ ಅವರ ಅಚ್ಚು ಮೆಚ್ಚಿನ ಮಗಳಾಗಿದ್ದಳು ಎಂಬುದಕ್ಕೆ ಇದು ನಿದರ್ಶನವೇನೊ! ತಂದೆಯನ್ನು ಅವಳು ಬಹುಶಃ ಇತರ ಮಕ್ಕಳಿಗಿಂತ ಹೆಚ್ಚು ಅರಿತಿದ್ದಳು; ಅರ್ಥಮಾಡಿಕೊಂಡಿದ್ದಳು ಎನ್ನ ಬಹುದು; ಅಂಥ ಅವಕಾಶಗಳು ಅವಳಿಗೆ ಸಾಕಷ್ಟು ಸಿಕ್ಕಿರುವುದೂ ಅದಕ್ಕೆ ಕಾರಣ ವಾಗಿರಬೇಕು. "ನನ್ನ ತಂದೆ ಭಾರತೀಯ ಸಂಸ್ಕೃತಿಯ ಪ್ರೇಮಿಯರು. ನಾವು ಹೆಣ್ಣು ಮಕ್ಕಳು ಪರಿಶ್ರಮಿಸಿದರೇನೇ ನಮ್ಮ ಈ ಸಂಸ್ಕೃತಿ ಉಳಿದು ಬರುವುದು; ವರ್ಧಿಸು-

ವುದು ಎಂಬ ನಂಬಿಕೆ ಅವರದು. ನಮಗಂತೂ ಅವರು ಭಾರತೀಯ ಸಂಸ್ಕೃತಿಯನ್ನು ಚಾಚೂ ತಪ್ಪದಂತೆ ಅನುಸರಿಸಲು ಹೇಳುತ್ತಿದ್ದರು. ನಾವು ಎಲ್ಲಿಯಾದರೂ ಸ್ವಲ್ಪ ತಪ್ಪಿದರೂ ಅವರಿಗೆ ತುಂಬ ನೋವಾಗುತ್ತಿತ್ತು. ಅದಕ್ಕೆ ಕಾರಣವೂ ಇತ್ತು. ಅವರು ತಮ್ಮ ಸಾಹಿತ್ಯದಲ್ಲಿ ಕಾದಂಬರಿಗಳಲ್ಲಿ ಈ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತಿದ್ದರು. ಅದಕ್ಕೆ ಚ್ಯುತಿ ಬಂದರೆ, ಅದೂ ಅವರ ಮನೆಯಲ್ಲಿ ನಡೆದರೆ ಅವರಿಗೆ ನೋವಾಗದಿರುವುದು ಹೇಗೆ? ಹಾಗೆ ನೋಡಿದರೆ ಅವರು ತಮ್ಮ ಮಕ್ಕಳಿಗೆ ಈ ಸಂಸ್ಕೃತಿಯನ್ನು ಅರೆದು ಕುಡಿಸುತ್ತಿದ್ದಾರೆಂದು ಹೇಳಿದರೂ ತಪ್ಪಾಗಲಾರದು. ಅವರಿಗೆ ಆದರ್ಶ ಜೀವನದ ಬಗೆಗೆ ತುಂಬ ಆಸ್ಥೆ. ಜೀವನದಲ್ಲಿ ಆದರ್ಶವಿಲ್ಲದಿದ್ದರೆ ಇನ್ನೇನು ಸಾಧಿಸಲು ಸಾಧ್ಯ? ಎಂದು ಪದೇ ಪದೇ ಹೇಳುತ್ತಿದ್ದರು. ನಮಗೆಲ್ಲ ಆದರ್ಶಜೀವನದ ಪರಿಯನ್ನು ತಿಳಿಸುತ್ತಿದ್ದರು. ಅನೇಕ ಸಲ ಇದು ಕಲ್ಪನಾತೀತವೆಂದು ಅನಿಸಿದ್ದೂ ಉಂಟು. ಆದರೆ ಆದರ್ಶವೆಂದರೆ ಆದರ್ಶ ಎಂದವರು ನೆರೆನಂಬಿದ್ದರು. ಅವರ ಜೀವನ ಈ ಬಗೆಗೆ ಅವರಲ್ಲಿ ಅಪಾರ ಶ್ರದ್ಧೆಯುಂಟುಮಾಡಿದ್ದಿತು. ಅವರು ಸಂಪ್ರದಾಯಶೀಲರು; ಹಳೆಯ ವಿಚಾರದವರು. ಹೀಗೆಂದ ಮಾತ್ರಕ್ಕೆ ಆಧುನಿಕ ವಿಚಾರಗಳು ಅವರಿಗೆ ಅರಿಕೆಯಾಗಿದ್ದಿಲ್ಲವೆಂದಲ್ಲ, ಅವರಿಗದು ಬೇಕಾಗುತ್ತಿರಲಿಲ್ಲ. ನಮಗೆಲ್ಲ ಜೀವನದ ರೀತಿ ನೀತಿಯನ್ನು ಅರಿಕೆಮಾಡಿಕೊಡುತ್ತಿದ್ದರು. ಹೀಗಾಗಿ ನಾವು ಅವರಿಗೆ ನೋವಾಗದಂತೆ ನಡೆದುಕೊಳ್ಳಲು ಕಲಿತಿದ್ದೆವು; ಯತ್ನಿಸುತ್ತಿದ್ದೆವು. ಹೆಣ್ಣು ಅತ್ತೆಮನೆಯನ್ನು ಸೇರಿದ ನಂತರ ತವರಿನ ಹಿರಿಮೆ ಮೆರೆಯಬೇಕೆಂಬುದು ಅವರ ಹಿರಿಯ ಆಸೆ. ಅಲ್ಲದೇ ಅತ್ತೆಮನೆಯ ದೂರನ್ನು ತವರಿಗೆಂದಿಗೂ ತರಬಾರದು ಎಂದವರು ಬಯಸುತ್ತಿದ್ದರು. ಅವರು ಬರೆದ ಒಂದು ಕಾದಂಬರಿಯ ಅಂತ್ಯದ ಬಗೆಗೆ ನನ್ನ ನಾದಿನಿ ಆಕ್ಷೇಪಿಸಿದಳು. ತಂದೆಯ ಕೃತಿಯೆಂಬ ಅಭಿಮಾನ ನನ್ನಲ್ಲಿ ಸೇರಿತ್ತಾದ್ದರಿಂದ ನಾನದನ್ನು ಪ್ರತಿಭಟಿಸಿದೆ. ಈ ಬಗೆಗೆ ನಮ್ಮಲ್ಲಿ ತೀವ್ರ ವೈಮನಸ್ಸು ತೋರಿತು. ಅದು ತಂದೆಯವರಿಗೆ ತಿಳಿದಾಗ ನನಗೆ ಬೆಂಬಲವಾಗಬಹುದೆಂದು ಬಗೆದದ್ದು ತಪ್ಪಾಯಿತು. 'ಹಾಗೆಲ್ಲ ವೈಮನಸ್ಸು ಕಟ್ಟಿಕೊಳ್ಳಬಾರದು. ಅದು ತರವಲ್ಲ. ಪ್ರತಿಯೊಬ್ಬರಿಗೂ ಅಭಿಪ್ರಾಯ ಸ್ವಾತಂತ್ರ್ಯವಿದೆ. ನೀನು ನನ್ನ ಮೇಲಿನ ಅಭಿಮಾನದಿಂದ ಹೀಗೆಲ್ಲ ಹೇಳಬಾರದು' ಎಂದು ನನಗೇ ಮರಳಿ ಅವರು ಹಿತನುಡಿ ಹೇಳಿದರು. ಅವರ ಈ ಮಾತುಗಳು ನನ್ನ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿದವು. ತಂದೆಯವರ ಮೇಲಿನ ನನ್ನ ಮೊದಲಿನ ಅಭಿಮಾನ ಇಮ್ಮಡಿಗೊಂಡಿತು. ಅವರು ಸಾಹಿತ್ಯದಲ್ಲಿ ಮಾತ್ರ ಜೀವನದ ಮೌಲ್ಯಗಳನ್ನು ಉಪದೇಶಿಸುವದಿಲ್ಲ; ಪಾತ್ರಗಳ ಮಾತುಗಳಲ್ಲಿ ಅವನ್ನು ಸೇರಿಸುವದಿಲ್ಲ. ಪ್ರತ್ಯಕ್ಷ ಜೀವನದಲ್ಲಿ ಅವನ್ನು ತುಂಬ ಶ್ರದ್ಧೆಯಿಂದ ಅನುಷ್ಠಾನಕ್ಕೆ ತರುತ್ತಾರೆಂಬುದು ನನಗೆ ವಿದಿತವಾಯಿತು. ನಾನು ಅಭಿಮಾನದಿಂದ ಆಜೆ ನಿಂತು ಅವರನ್ನು, ಅವರ ಸಾಹಿತ್ಯವನ್ನು ನೋಡುವಂತೆ ಈ ಮೂಲಕ ಅವರು ಅವಕಾಶವನ್ನು ಕಲ್ಪಿಸಿದರು. ಓರ್ವ

ಸಾಹಿತಿ ತಂದೆ ಹೀಗೆ ಮಾಡುವುದು ಅಪರೂಪವೇನೊ ನಿಜ. ಆದರೆ ನನ್ನ ತಂದೆ ಯಾವಾಗಲೂ ಇಂಥ ಅಪರೂಪವನ್ನೇ ಮಾಡುವರು. ಅವರು ತುಂಬ ಕಷ್ಟಸಹಿಷ್ಣುಗಳು; ಪರೋಪಕಾರ ಬುದ್ಧಿಯವರು. ಮಕ್ಕಳಿಗಾಗಿ ಅವರು ಪಡುವ ಪಾಡನ್ನು ನಾನು ಕಂಣಾರೆ ನೋಡಿದ್ದೇನೆ. ಅವರ ಅತಿ ಮಮತೆ; ವಾತ್ಸಲ್ಯಗಳನ್ನು ಅನುಭವಿಸಿದ್ದೇನೆ. ಹೀಗಾಗಿ ನನಗೆ ಯಾವಾಗಲೂ ಅವರ ಬಗೆಗೆ ಅತಿ ಮಮತೆ ಎನಿಸುವುದು.” ಈ ಮಾತುಗಳನ್ನು ಹೇಳುವಾಗ ಮನೋರಮಾ ತುಂಬ ಭಾವೋದ್ರೇಕ ಪೂರಿತರಾಗಿದ್ದರು. ತಾವಿನ್ನು ತಂದೆಯ ಬಳಿ ಇರುವ ಮಗಳು, ಅವರ ಉಪಚಾರ; ಆರೈಕೆಯಲ್ಲಿ ತೊಡಗಿರುವವಳು ಎಂಬ ಭಾವನೆಯಲ್ಲಿ ಮಗ್ನರಾಗಿದ್ದಂತೆ ತೋರುತ್ತಿತ್ತು. ಅವರ ಮಕ್ಕಳು ಬಂದು ಎಚ್ಚರಿಸದೇ ಇದ್ದರೆ ಆ ಭಾವ ಸಮಾಧಿಯಲ್ಲಿ ಎಷ್ಟು ಹೊತ್ತು ಇರುತ್ತಿದ್ದರೊ! ನಿಜವಾಗಿಯೂ ತಂದೆಯ ಬಗೆಗೆ ಈ ಮಗಳಲ್ಲಿ ಇನ್ನೂ ಒಂದು ವಾತ್ಸಲ್ಯ ಮಮತೆ ಬೆಳೆದುಕೊಂಡು ಬಂದಿದೆ. ಅವರಿಗೆ ಆ ‘ಹಳೆಯ ಜಗತ್ತು’ ನೆನಪಾದಾಗ ತುಂಬ ಭಾವುಕರಾಗುವುದು ಸ್ವಾಭಾವಿಕ. ಆದರೆ ಆ ಮಗಳೇ ಹೇಳಿರುವಂತೆ ಪುರಾಣಿಕರು ನಿರ್ಧಾಸ್ತವಾಗಿ ಅವಳಲ್ಲಿ ಕರ್ತವ್ಯಬುದ್ಧಿಯನ್ನು ಜಾಗ್ರತಗೊಳಿಸುತ್ತ ಬಂದಿದ್ದಾರೆ. ಅವಳನ್ನು ಭಾವುಕ ಜಗತ್ತಿನಿಂದ ಮೇಲೇತ್ತುತ್ತ ಬಂದಿದ್ದಾರೆ. ತಂದೆ ಮಕ್ಕಳ ಈ ಅನ್ಯೋನ್ಯ ಸಂಬಂಧ ಆದರ್ಶಯುತವಾಗಿರುವುದು. ಪುರಾಣಿಕರ ಜೀವನದಲ್ಲಿ ಇದು ಅದ್ವಿತೀಯವಾಗಿರುವಂತೆಯೇ ಅವರ ಸಾಹಿತ್ಯ ಜೀವನದಲ್ಲಿ ಇದು ಅಪರೂಪವಾಗಿ ಕಂಗೊಳಿಸುವುದು. ಅವರ ಸಾಹಿತ್ಯದಲ್ಲಿಯೂ ಹಲವಾರು ರೀತಿಯಲ್ಲಿ ಇದು ಮೂಡಿ ನಿಂತಿರುವುದನ್ನು ಕಾಣಬಹುದು.

ಅವರ ಇನ್ನಿಬ್ಬರು ಹೆಣ್ಣುಮಕ್ಕಳು ಗೌರಿ ಮತ್ತು ವಿದ್ಯಾ. ಗೌರಿ ಪಿ.ಯು.ಸಿ. ವರೆಗೆ ಓದಿ ಮುಂದೆ ಓದಲು ಹೋಗಲಿಲ್ಲ. ವಿದ್ಯಾ ಪದವಿ ಶಿಕ್ಷಣ ಪಡೆಯುತ್ತಿದ್ದಾಳೆ. ಈಗ ಇವರಿಬ್ಬರೂ ತಂದೆಗೆ ನೆರವಾಗಿ ನಿಂತವರು. ಅವರಿಗೆ ಬೇಕಾದ ಸೌಕರ್ಯಗಳನ್ನು ಅನುಕೂಲಗಳನ್ನು ಇವರು ಒದಗಿಸುವರು: ಕಲ್ಪಿಸಿಕೊಡುವರು. ವಿದ್ಯಾ ತಂದೆಯ ಜೊತೆಗೆ ಬಿಡುವಿನ ವೇಳೆಯಲ್ಲಿ ಸಮಾರಂಭಗಳಿಗೆ ಹೋಗಿ ಬರುವುದೂ ಉಂಟು. ತಂದೆ ಭಾರತೀಯ ಸಂಸ್ಕೃತಿಪ್ರಿಯರೆಂಬುದೂ, ಫ್ಯಾಶನ್ ವಿರೋಧಿಯೆಂಬುದೂ ಇವರಿಗೆ ಗೊತ್ತು. ಅವರೆಂದೂ ಫ್ಯಾಶನ್ ಮಾಡಲು ಹೋಗುವುದಿಲ್ಲ. ತಂದೆಗೆ ಟಿಕಳಿ ಹಚ್ಚುವುದು ಸೇರುವದಿಲ್ಲವೆಂದು ವಿದ್ಯಾ ಟಿಕಳಿ ಕೂಡ ಹಚ್ಚುವದಿಲ್ಲ. ಗೌರಿಗೆ ತಂದೆಯ ಅಂತಃಕರುಣದ ಪರಿಚಯ ಹೆಚ್ಚು. “ನಾನು ಹುಟ್ಟಿಕೊಂಡು ಒಂಬತ್ತು ತಿಂಗಳು ಘಟಪ್ರಭಾ ಕೆ. ಎಚ್. ಆಯ್. ಆಸ್ಪತ್ರೆಯಲ್ಲಿರುವಾಗ ಒಂದು ದಿನವೂ ಬಿಡದೇ ದಿನಾಲು ಬಂದು ನೋಡಿಕೊಂಡು ಹೋಗುತ್ತಿದ್ದರು, ಉಪಚರಿಸುತ್ತಿದ್ದರು. ಬೇಸರವನ್ನು ಕಳೆಯಲು ನಾನಾ ರೀತಿಯಲ್ಲಿ ರಂಜಿಸಲು ಮುಂದಾಗುತ್ತಿದ್ದರು. ಅನೇಕ ಕಥೆಗಳನ್ನು ಹೇಳುತ್ತಿದ್ದರು. ನಾನು

ನಗುವಂತೆ, ನೋವು ಮರೆಯುವಂತೆ ಅವರು ಮಾಡುತ್ತಿದ್ದರು. ನನ್ನನ್ನು ನೋಡಿದಾಗೆಲ್ಲ ಅವರಿಗೆ ತುಂಬ ಮರುಕುವೆನಿಸುತ್ತಿತ್ತು. ಅವರ ಮುಖದ ಮೇಲೆ ಅದು ಎದ್ದು ಕಾಣುತ್ತಿತ್ತು. ತಂದೆ ನನಗಾಗಿ ಎಷ್ಟೊಂದು ಪರಿತಾಪ ಪಡುತ್ತಿರುವರಲ್ಲ ಎಂದು ನನಗನಿಸುತ್ತಿತ್ತು. ಅವರ ಈ ದಯಾಳು ಸ್ವಭಾವ ನನ್ನನ್ನು ಮೂಕ-ವಿಸ್ಮಿತಳಾಗಿ ಮಾಡುತ್ತಿತ್ತು. ನನ್ನ ನೋವು ಕಂಡು ಅವರಿಗೆ ಸಹಿಸುವದಾಗುತ್ತಿರಲಿಲ್ಲ ಎಂದು ನಾನು ಹೇಳಿದರೆ ಅವರ ಈ ಸ್ವಭಾವದ ಅರ್ಥವಾಗುವುದು" ಗೌರಿಯ ಈ ಮಾತುಗಳಿಂದ ಪುರಾಣಿಕರ ಜೀವನದ ಇನ್ನೊಂದು ಮುಖ, ಅವರಲ್ಲಿ ಕಂಡು ಬರುವ ಅನುಕಂಪ ಸಹಾನುಭೂತಿಗಳ ದರ್ಶನವೇ ನಮಗಾಗುವುದು. "ಮಕ್ಕಳ ಮನೋಭಿಲಾಷೆ ಈಡೇರಿಸುವಲ್ಲಿ ನನ್ನ ತಂದೆಯವರಿಗೆ ತುಂಬ ಅಭಿಮಾನವೆನಿಸು-ತ್ತಿತ್ತು. ಒಂದು ಸಮಾರಂಭಕ್ಕಾಗಿ ನಾವು ಮುಂಬಯಿಗೆ ಹೋಗಿದ್ದೆವು. ಅಲ್ಲಿಯೋ ಅವರಿಗೆ ಎಡೆಬಿಡದ ಕಾರ್ಯಕ್ರಮಗಳು. ನಾನು ಸಿನೇಮಾಪ್ರೇಮಿ ಎಂಬುದು ಅವರಿಗೆ ಗೊತ್ತು. ಅದಕ್ಕಾಗಿ ಇಂಥದರಲ್ಲಿಯೂ ಬಿಡುವು ಮಾಡಿಕೊಂಡು ಅವರು ನನ್ನನ್ನು 'ಮರಾಠಾಮಂದಿರ'ದಲ್ಲಿದ್ದ 'ಪಕೀಜಾ'ಕ್ಕೆ ಕರೆದೊಯ್ದಾಗ ನನಗೆ ಹಿಡಿಸಲಾರದಷ್ಟು ಹಿಗ್ಗು, ಸಂತೋಷಗಳೆನಿಸಿದವು. ನಮ್ಮನ್ನು ಅವರು ಗದರಿಸಿದ್ದೆಂಬುದೇ ಇಲ್ಲ. ಸೂಕ್ಷ್ಮವಾಗಿ ತಿಳಿಹೇಳುತ್ತಿದ್ದರು. ಮಕ್ಕಳ ಮನಕ್ಕೂ ನೋವಾಗಬಾರದೆಂದು ಅವರು ಭಾವಿಸಿಕೊಂಡಿದ್ದರು. ಅದೇ ರೀತಿ ನಡೆದುಕೊಂಡಿದ್ದಾರೆ. ಮನೆಯಲ್ಲಿರುವದೊಂದು, ಹೊರಗೆ ಹೇಳುವದೊಂದು ಅವರಲ್ಲಿರಲಿಲ್ಲ. ಮನೆಯಲ್ಲಿ ಮೊದಲು ಆ ರೀತಿ ನಡೆಯುವಂತೆ ಮಾಡುತ್ತಿದ್ದರು. ಜೀವನವೊಂದು ಬೇರೆ, ಸಾಹಿತ್ಯವೊಂದು ಬೇರೆ ಎಂದವರು ಬಗೆದಿರಲಿಲ್ಲ. ಹೀಗಾಗಿ ಅವರ ಸಾಹಿತ್ಯ ಆದರ್ಶಯುತವಾಗಿ ಕಾಣುತ್ತ ಬಂದಿದೆ ಎಂದು ನನಗನಿಸುತ್ತದೆ. ಇಂಥ ತಂದೆಯ ಬೇಗೆಗೆ ನಮಗೆ ಅಭಿಮಾನವೆನಿಸುವುದು ಸ್ವಾಭಾವಿಕವೇ ಅಲ್ಲವೇ?" ವಿದ್ಯಾ ಹೇಳುವ ಈ ಮಾತುಗಳಲ್ಲಿ ಮಗಳು ತಂದೆಯನ್ನು, ಅವರ ಸಾಹಿತ್ಯದ ಯಶಸ್ವಿತೆಯನ್ನು ಚೆನ್ನಾಗಿ ಅರಿತುಕೊಂಡಿರುವುದು ವ್ಯಕ್ತವಾಗುವುದು. ಪುರಾಣಿಕರಲ್ಲಿ ಒಳಗೊಂದು–ಹೊರಗೊಂದು ಇಲ್ಲ. ಅವರು ಜೀವನದಲ್ಲಿ ನುಡಿದಂತೆ ನಡೆ ಎಂಬ ಮಾತನ್ನು ಸಂಪೂರ್ಣವಾಗಿ ಪರಿಪಾಲಿಸುತ್ತಾರೆಂಬುದು ಸ್ಫುಟವಾಗುವುದು. ಮಕ್ಕಳು ಕಂಡ ತಂದೆಯ ಈ ನೋಟ, ಚಿತ್ರ ತುಂಬ ಹೃದಯ–ಸ್ಪರ್ಶಿಯಾಗಿರುವುದು : ಚಿತ್ತವೇಧಕವಾಗಿರುವುದು. ಅವರ ಸ್ವಭಾವದ ಹಲವಾರು ಗುಣವಿಶೇಷಗಳನ್ನು ಎತ್ತಿ ತೋರಿಸುವುದು. ನಿಜವಾಗಿಯೂ ಇದೊಂದು ಅಪರೂಪದ ಚಿತ್ರಣವೇ ಆಗಿರುವುದು. ಶ್ರೀ ಕೃಷ್ಣಮೂರ್ತಿ ಪುರಾಣಿಕರಲ್ಲಿ ಸಾಹಿತಿಯ ಜೊತೆಗೆ ಅವರಲ್ಲಿರುವ ಮಾನವೀಯತೆ ಕೂಡ ಎದ್ದು ಕಾಣುವುದು. " ನನ್ನ ಸಂಸಾರ ದೊಡ್ಡದಿದೆ. ನಿಜ. ಆದರೆ ಅದು ಕೂಡ ನನ್ನ ಸ್ಫೂರ್ತಿಗೆ ಕಾರಣವಾಗಿ ಪರಿಣಮಿಸಿರುವುದು. ನನ್ನ ಹೆಂಡತಿ ಆಧುನಿಕರು ತಿಳಿದು

ಕೊಂಡಂತೆ ವಿದ್ಯಾಸಕ್ತಿಯಿಲ್ಲ. ಆದರೆ ಒಳ್ಳೆಯ ಸಂಸ್ಕಾರವನ್ನು ಪಡೆದವಳು. ನನ್ನ ಬರೆಹ ಸರಾಗವಾಗಿ ಸಾಗುವಂತೆ ಯಾವಾಗಲೂ ನೆಮ್ಮದಿಯನ್ನು ಕಾಪಾಡಿಕೊಳ್ಳುತ್ತಾಳೆ. ಮೂವರೂ ಗಂಡುಮಕ್ಕಳು ಒಳ್ಳೆಯ ನೌಕರಿಯಲ್ಲಿದ್ದು ಸಂಬಳ ತರುತ್ತಾರೆ. ಇಬ್ಬರು ಹೆಣ್ಣುಮಕ್ಕಳ ಮದುವೆಯಾಗಿದೆ. ಅವರು ಪತಿಗೃಹಗಳಲ್ಲಿ ಸುಖವಾಗಿದ್ದಾರೆ. ಇನ್ನಿಬ್ಬರು ಹೆಣ್ಣುಮಕ್ಕಳು ಒಳ್ಳೇ ಶಿಕ್ಷಣ ಪಡೆದಿದ್ದಾರೆ. ಆರ್ಥಿಕವಾಗಿ ನಾನು ಬಡವ. ಕಾದಂಬರಿರಂಗ ಕೆಲಮಟ್ಟಿಗೆ ನನಗೆ ಪರಿಹಾರವನ್ನು ನೀಡಿದೆಂಬುದು ನಿಜ. ಕಷ್ಟ ಕಾಲದಲ್ಲಿಯೂ ನನ್ನ ಸೌಭಾಗ್ಯವತಿ ಅದನ್ನು ತಾನು ನುಂಗಿಕೊಂಡು ನನ್ನನ್ನು ಚನ್ನಾಗಿಯೇ ಇಟ್ಟಿದ್ದಾಳೆ. ನನ್ನ ಕಥಾಸೃಷ್ಟಿ ಅವಳಿಗೆ ಸೋಜಿಗದ ಸೃಷ್ಟಿ. ಆಗಾಗ ಕಥೆಯ ಮೆರುಗಿಗೆ ತನ್ನ ಅನುಭವವನ್ನು ನಿರೂಪಿಸುತ್ತಾಳೆ. ಮಕ್ಕಳು ನನ್ನ ಸ್ಫೂರ್ತಿಗೆ ಕಾರಣರಾಗಿದ್ದಾರೆ. ಈ ಏಳು ಎಳೆಯ ಜೀವಗಳಲ್ಲಿ ನಾನು ಪ್ರಪಂಚದ ನಾನಾ ಮುಖಗಳನ್ನೇ ಕಂಡಿದ್ದೇನೆ; ಕಾಣುತ್ತಿದ್ದೇನೆ." ಪುರಾಣಿಕರು ತಮ್ಮ ಸಾಂಸಾರಿಕ ಜೀವನದ ಚಿತ್ರವನ್ನು ಕೊಡುವ ಈ ಮಾತುಗಳಲ್ಲಿ ಅವರ ದಾಂಪತ್ಯ ಜೀವನದ ಸಾರ್ಥಕತೆ ಮೂಡಿನಿಂತಿರುವುದನ್ನು ಕಾಣಬಹುದು. ಜೀವನದ ಭವ್ಯಸಾಗರದಲ್ಲಿ ಅವರು ತಮ್ಮ ಈ ತುಂಬಿದ ಸಂಸಾರದ ದೋಣಿಯನ್ನು ಬಿಟ್ಟುಕೊಂಡು ಹೊರಟಿದ್ದಾರೆ. ನಾವೆ ಚಿಕ್ಕದಾಗಿದ್ದರೂ ಅದು ಈ ಸಾಗರದ ಆಳದಲ್ಲಿ ಪ್ರಶಾಂತವಾಗಿ ಸಮರ್ಥಗತಿಯಲ್ಲಿ ಮುನ್ನಡೆದು ಬಂದಿದೆ; ಇನ್ನೂ ಮುನ್ನಡೆಯುತ್ತಿದೆ ಎಂಬ ಮಾತು ಸ್ಪಷ್ಟವಾಗಿ ಗೋಚರವಾಗುವುದು. ಅವರೇ ಹೇಳುವಂತೆ ಇದು ಅವರ ಸಾಹಿತ್ಯ ಸ್ಫೂರ್ತಿಗೆ ನಿತ್ಯ ನಿರಂತರ ನೆಲೆಯಾಗಿ ನಿಂತಿರುವುದು. ಸಂಸಾರದ ಭಾರದಲ್ಲಿ ಏನು ಮಾಡಬೇಕೆಂದು ತೋಚುವದಿಲ್ಲ ಎನ್ನುವವರಿಗೆ ಅವರ ಈ ಮಾತುಗಳು ತಕ್ಕ ಉತ್ತರವಾಗಿವೆ. ಜೀವನವನ್ನು ಅವರು ಅನುಭವರಂಗವೆಂದು ಕಾಣುತ್ತಿರುವುದೇ ಈ ಬಗೆಯ ಅವರ ಮನಸ್ಸ್ಥಿತಿಗೆ ಕಾರಣವಾಗಿ ಪರಿಣಮಿಸಿದೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಜೀವನವೇ ಒಂದು ಕಲೆ ಎಂದು ಹೇಳುವ ಶ್ರೀ ಪುರಾಣಿಕರಿಗೆ ಸಂಸಾರವು ಭಾರವಾಗುವದೆಂದರೇನು ? ಅದು ತುಂಬಿದ ಸಂಸಾರ! ರಸವತ್ತಾಗಿ, ಒಂದುಗೂಡಿ ಜೀವನ ಸಾಗಿಸುವ ಕುಟುಂಬ!! ಹೀಗಿರುವಾಗ ಅದು ಕೂಡ ಅವರಿಗೆ ಸ್ಫೂರ್ತಿಯ ನೆಲೆಯಾಗಿ ನೆಲೆನಿಂತಿರುವಲ್ಲಿ ಅಚ್ಚರಿಯೇನು ?

ಅವರ ಇಬ್ಬರೂ ಅಳಿಯಂದಿರೂ ಮಾವನವರ ಈ ಅಭಿಪ್ರಾಯವನ್ನು ಪುಷ್ಟೀಕರಿಸುವರು. ಮಾವನೊಂದಿಗೆ ಬಂದ ತಮ್ಮ ಹಾರ್ದಿಕವಾದ ಸಂಬಂಧ, ಅವರು ನಡೆದುಕೊಂಡ ರೀತಿ ನೀತಿ ಇವನ್ನು ಕುರಿತು ಅವರು ಹೇಳುವ ಮಾತುಗಳಿಂದ ಪುರಾಣಿಕರ ಹಿರಿಯ ವ್ಯಕ್ತಿತ್ವದ ದರ್ಶನವಾಗುವುದು. ಈ ಅಳಿಯಂದಿರಿಬ್ಬರೂ ಮಾವನನ್ನು ಮನೆಯ ಹಿರಿಯನಂತೆ ಕಂಡಿದ್ದಾರೆ. ತಂದೆ ಬೇರೆ, ಮಾವ ಬೇರೆ ಎಂಬಂತೆ ತಾವು ನಡೆದುಕೊಂಡಿಲ್ಲ; ಪುರಾಣಿಕರು ತಮ್ಮನ್ನು ಕಂಡು ಮಾತ

ನಾಡುವ ಬಗೆ ಇಂಥ ಒಂದು ಭೇದಕ್ಕೆ ಅವಕಾಶವನ್ನೇ ಕೊಟ್ಟಿಲ್ಲವೆಂದು ಅವರೆನ್ನುವುದು ಸ್ವಾಭಾವಿಕವೇ. ಪುರಾಣಿಕರನ್ನು ಅಳಿಯರೊಂದಿಗೆ ಕಂಡ ಯಾರಿಗೂ ಈ ಮಾತು ಹೊಳೆಯುವುದು; ಮನದಲ್ಲಿ ಮೂಡಿ ನಿಲ್ಲುವುದು. ಹಿರಿಯ ಸಾಹಿತಿಯ ಮಕ್ಕಳು ತಾವು ಎಂಬುದನ್ನು ತಮ್ಮ ಹೆಣ್ಣುಮಕ್ಕಳು ಪತಿಗೃಹಗಳಲ್ಲಿ ಮೆರೆಯಬಾರದು; ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಅವರು ಅಲ್ಲಿ ಅತ್ತೆ-ಮಾವ, ಪತಿ, ನಾದಿನಿ, ನಿಗೆಣ್ಣಿಯರೊಂದಿಗೆ ಅನುಕೂಲೆಯರಾಗಿ, ಒಂದಾಗಿ ಬಾಳಬೇಕು ಎಂದು ಬಯಸುತ್ತಾರೆ. ಮಾವನ ಈ ನಿಲುವನ್ನು ಅವರ ಅಳಿಯಂದಿರಿಬ್ಬರೂ ಚೆನ್ನಾಗಿ ಅರಿತಿದ್ದಾರೆ. ಅದೇಕೆ ಅವರ ಪತ್ನಿಯರೂ ಆ ರೀತಿ ನಡೆಯುತ್ತಾರೆಂಬುದನ್ನು ಕಂಡಿದ್ದಾರೆ. ಹೀಗಾಗಿ ಅವರಿಗೂ ಭಾರತೀಯ ಸಂಸ್ಕೃತಿಯ ಹಿರಿಮೆಯ ದರ್ಶನವೂ ಆಗುತ್ತಿದೆ; ಈ ಹಿರಿಯರ ಆಶೀರ್ವಾದದಿಂದ ಅವರ ಸಂಸಾರ ಸುಮುಖವಾಗಿ ಸಾಗುತ್ತಿದೆ. ತಮ್ಮ ಮಾವ ಹೆಸರಾಂತ ಸಾಹಿತಿ; ಕನ್ನಡ ನಾಡಿನಲ್ಲೆಲ್ಲ ಅವರಿಗೆ ಒಳ್ಳೇ ಹೆಸರಿದೆ; ಕೀರ್ತಿ ಬಂದಿದೆ; ಅವರ ಸಾಹಿತ್ಯದ ಪರಿಚಯವಿಲ್ಲದವರೇ ನಮ್ಮಲ್ಲಿ ಇಲ್ಲ ಎಂಬುದೆಲ್ಲವನ್ನು ಅವರು ಬಲ್ಲರು. ಆದರೆ ಈ ಮಾವ ಅಳಿಯಂದಿರಿಗೆ ಒಂದೇ ಒಂದು ಸಲ ತಪ್ಪಿ ಕೂಡ ಈ ಸಾಹಿತಿಯ ಹೆಮ್ಮೆಯನ್ನು ಮೆರೆದು ತೋರಿದವರಲ್ಲ. ಇಲ್ಲವೇ ಅವರ ಮೇಲೆ ಯಾವುದೇ ಬಗೆಯ ಪ್ರಭಾವವನ್ನು ಬೀರಬೇಕೆಂದು ಬಯಸಿದವರೂ ಅಲ್ಲ. ಅವರ ಈ ಸರಳ-ಉದಾತ್ತ ಸ್ವಭಾವವನ್ನು ಈ ಅಳಿಯಂದಿರು ಬಲ್ಲರು. ಅಂತೇ ಅವರೂ ಈ ಮಾವನಿಂದ ತಮ್ಮ ಜೀವನದಲ್ಲಿ ಮಾರ್ಗದರ್ಶನವನ್ನು ಬಯಸುವುದು ಕೂಡ ಸ್ವಾಭಾವಿಕವೇ ಆಗಿದೆ.

ಅವರ ಹಿರಿಯ ಅಳಿಯ ಮಾಗಳ ಸೀತಾರಾಮು ಮಾವನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ; ಅವರ ಬಗೆಗೆ ಚೆನ್ನಾಗಿ ತಿಳಿದುಕೊಂಡಿದ್ದಾರೆಂಬುದು ಅವರ ಮಾತುಗಳಿಂದ ವ್ಯಕ್ತವಾಗುವುದು. "ಶ್ರೀ ಪುರಾಣಿಕರು ತುಂಬ ಸರಳವಾದ ವ್ಯಕ್ತಿ. 'ಮಂಗಲಾಕ್ಷತೆ' ಕಾದಂಬರಿಯನ್ನು ನಾನು ಓದಿದ್ದೆ. ತುಂಬ ಪ್ರಭಾವಿಯಾಗಿತ್ತು. ನಾನು ಅವರ ಅಳಿಯನಾಗುವದಕ್ಕಿಂತ ಮೊದಲು ಇದನ್ನು ಓದಿದ್ದು. ಇಂಥ ಮಹಾನುಭಾವರು ನನ್ನ ಮಾವನಾಗಬಹುದೆಂಬ ನಿರೀಕ್ಷೆ ಇರಲಿಲ್ಲ. ನಿಜವಾಗಿ ಅದು ಯೋಗಾಯೋಗ. ಪುರಾಣಿಕರು ಹಿಂದೊಂದು ಮುಂದೊಂದು ಮಾತನಾಡುವವರಲ್ಲ. ನಿರ್ಭಿಡೆಯ ಸ್ವಭಾವದವರು ಎಂಬುದನ್ನು ನಾನು ಬಹುಬೇಗ ಅರಿತುಕೊಂಡೆ. ಅವರಲ್ಲಿ ಸಂಕುಚಿತ ಭಾವನೆಯೂ ಇಲ್ಲ. ನನ್ನವರು-ತಮ್ಮವರು ಎಂದು ಭೇದಭಾವ ಮಾಡುವದಿಲ್ಲ. ಒಳ-ಹೊರಗೆ ಎಂಬುದೂ ಇಲ್ಲ. ಆದರೆ ಮನೆಯಲ್ಲಿ ಎಲ್ಲರೂ ಸಂತೋಷಚಿತ್ತರಾಗಬೇಕೆಂದು ಬಯಸುವರು. ಎರಡನೆಯವರು ಅನುಕೂಲರಾಗಿರಬೇಕು ಎಂದು ಬಯಸುವದಕ್ಕಿಂತ ತಾವೇ ಅನುಕೂಲರಾಗಿ ನಡೆದುಕೊಳ್ಳುವರು. ಹಿರಿ-ಕಿರಿಯರೆಂಬ ಭೇದವಿಲ್ಲದೇ ಎಲ್ಲರನ್ನು ಸಮನಾಗಿಯೇ ಕಾಣುವರು; ಗೌರವದಿಂದ ನೋಡುವರು. ಅವರದು ತುಂಬ ಹಿರಿಯ ಜೀವ.

ನಾನು ಅವರ ಎಲ್ಲ ಕಾದಂಬರಿಗಳನ್ನು ಓದಿದ್ದೇನೆ. ಕೆಲವು ಉಳಿದವುಗಳಂತೆ ಪರಿಣಾಮಕಾರಿಯಾಗಿಲ್ಲ ಎನಿಸುತ್ತಿದೆ. ಈ ಪ್ರಾಮಾಣಿಕ ಅಭಿಪ್ರಾಯವನ್ನು ಅವರು ಮನ್ನಿಸುವರು; ಅದಕ್ಕೆ ಬೆಲೆ ಕೊಡುವರು. ಆದರೆ ಜನ ಅವರಿಗೆ ಕೊಡಬೇಕಾದಷ್ಟು ಗೌರವ – ಮನ್ನಣೆಗಳನ್ನು ಕೊಟ್ಟಿಲ್ಲ ಎಂದು ನನಗೆನಿಸುತ್ತದೆ. ಹಾಗೆಂದು ಪುರಾಣಿಕರು ಈ ಗೌರವವನ್ನು, ಜನಮನ್ನಣೆಯನ್ನು ಬೆಂಬತ್ತಿ ಹೋದವರಲ್ಲ. ಅದು ಅವಶ್ಯವಿಲ್ಲವೆಂದೂ ತಾನಾಗಿಯೇ ಅದೆಲ್ಲ ಬರುವದೆಂದೂ ಅವರು ಹೇಳುತ್ತಾರೆ. ಅವರದು ತೃಪ್ತಿ–ಸಂತೋಷಗಳ ಜೀವನ. ಜನತೆಯಲ್ಲಿ ಅವರಿಗೆ ನಂಬಿಕೆ–ವಿಶ್ವಾಸಗಳಿವೆ. ಅವರ ಈ ದೃಷ್ಟಿಕೋನವೇ ಸಾಹಿತ್ಯದಲ್ಲಿ ಅವರ ಪ್ರೇರಣಾಶಕ್ತಿಯಾಗಿ ನಿಂತಿದೆ ಎಂದೂ ನನಗೆನ್ನಿಸುವದು. ಹೀಗಿದ್ದರೂ ಅವರು ತುಂಬ ಭಾವುಕ ಜೀವಿ. ಜನಸೇವೆಯೇ ತಮ್ಮ ಕರ್ತವ್ಯ ಎಂದವರು ಭಾವಿಸಿರುವದರಿಂದ ಇನ್ನೂ ಹೆಚ್ಚು–ಹೆಚ್ಚು ಸಾಹಿತ್ಯಸೇವೆ ಅವರಿಂದ ಸಲ್ಲುವದೆಂಬ ಭರವಸೆ ನನಗಿದೆ.” ಸೀತಾರಾಮರು ಹೇಳುವ ಈ ಮಾತುಗಳು ಪುರಾಣಿಕರ ಜೀವನದ ಇನ್ನೊಂದು ಮುಖವನ್ನು ತೋರುವವು; ಅವರ ಸ್ವಭಾವದ ಪರಿಚಯವನ್ನು ಮಾಡಿಕೊಡುವವು. ಅವರಲ್ಲಿ ಕಂಡುಬರುವ ತೃಪ್ತಿಸಂತೋಷಗಳ ರಹಸ್ಯವೇನು ಎಂಬುದು ಕಂಡುಬರುವದು.

ಪುರಾಣಿಕರ ಇನ್ನೊಬ್ಬ ಅಳಿಯ ಸುದರ್ಶನಮೂರ್ತಿ ಕಾದಂಬರಿಗಳ ಮೂಲಕವೇ ಅವರ ಮೊದಲ ಪರಿಚಯವನ್ನು ಪಡೆದವರು; ಅವರ ಹಲವಾರು ಕಾದಂಬರಿಗಳನ್ನು ಮೆಚ್ಚಿಕೊಂಡವರು. ಇಂಥ ಖ್ಯಾತ ಸಾಹಿತಿಗಳ ಅಳಿಯ ತಾನಾದಾಗ ಅವರಿಗೊಂದು ಹೆಮ್ಮೆ ಎನಿಸುವದು ಸ್ವಾಭಾವಿಕ. ಅವರು ಮಾತಿನಲ್ಲಿ ಈ ಹೆಮ್ಮೆ – ಆತುರ ತುಂಬಿ ತುಳುಕಾಡುತ್ತಿವೆ. ಅದಕ್ಕೆ ಕಾರಣ ಮಾವಂದಿರು ಇವರನ್ನು ತುಂಬ ವಾತ್ಸಲ್ಯದಿಂದ ಕಾಣುವದು. “ಶ್ರೀ ಪುರಾಣಿಕರು ತುಂಬ ಅಂತಃಕರುಣದವರು. ನಾನು ಅವರಿಗೆ ಅಳಿಯನಾಗಿದ್ದರೂ ಮಗನಂತೆಯೇ ಮಮತೆಯಿಂದ ಕಾಣುತ್ತಾರೆ; ವಾತ್ಸಲ್ಯದಿಂದ ನೋಡುತ್ತಾರೆ. ನಿರ್ಭಿಡೆಯಿಂದ ಮಾತನಾಡುವರು. ನಾನು ಅವರಿಂದ ಅಪೇಕ್ಷೆ ಅಂಥದನ್ನು ಪಟ್ಟವನಲ್ಲ, ಆದರೆ ನಾನು ಅಪೇಕ್ಷೆಪಡಬೇಕೆಂದೇನೂ ಇಲ್ಲ. ನನ್ನ ಹಲವಾರು ಆವಶ್ಯಕತೆಗಳನ್ನು ಅವರು ಸೂಕ್ಷ್ಮವಾಗಿ ನಿರುಕಿಸಿ ಈಡೇರಿಸಿಕೊಟ್ಟಿದ್ದಾರೆ. ಯಾವಕಾಲಕ್ಕೂ ನಮ್ಮಲ್ಲಿ ಭಿನ್ನಾಭಿಪ್ರಾಯ ಮೂಡಿಬಂದಿಲ್ಲ. ಅಂಥ ಸಂಭವವೂ ಕಡಿಮೆ. ಅವರ ಸರಳ ಮತ್ತು ಶಾಂತವಾದ ಸ್ವಭಾವವೇ ಇದಕ್ಕೆ ಕಾರಣವಾಗಿದೆ. ಅದೇಕೆ ಅವರ ಕಾದಂಬರಿಗಳ ಬಗೆಗೆ ಕೂಡ ನನ್ನೊಂದಿಗೆ ಅವರು ತುಂಬ ಮುಕ್ತಮನಸ್ಸಿನಿಂದ ಚರ್ಚೆಯನ್ನು ನಡೆಸಿದ್ದುಂಟು, ಪಾತ್ರಗಳ ಬಗೆಗೂ ವಿಚಾರವಿನಿಮಯ ಕೂಡ ನಡೆಸಿದ್ದುಂಟು. ಅಭಿಪ್ರಾಯವನ್ನು ಅವರು ಕೇಳಿದ್ದುಂಟು, ಒಂದರ ಬಗೆಗೆ ಮಾತ್ರ ನಾನು ಅವರಿಗೆ ಈ ವರೆಗೂ ತಿಳಿಸಿಲ್ಲ. ‘ಮಾತಿನಮಲ್ಲಿ’ಯಲ್ಲಿ ಬರುವ ಪಾತ್ರ ಅಸ್ವಾಭಾವಿಕವೆಂದು ನನಗೆ ತೋರಿತು. ನಾವು ಪತಿ – ಪತ್ನಿಯರು ಮಾತ್ರ ಈ

ವಿಷಯವಾಗಿ ಚರ್ಚಿಸಿದ್ದುಂಟು. ನನ್ನ ಪತ್ನಿ – ಅವರ ಮಗಳು – ಮೊದಮೊದಲು ತಂದೆಯ ಕಾದಂಬರಿಗಳ ಬಗೆಗೆ ಒಳ್ಳೇ ಅಭಿಮಾನದಿಂದ ಚರ್ಚಿಸುತ್ತಿದ್ದಳು; ಹೇಳುತ್ತಿದ್ದಳು. ಆದರೆ ತಂದೆಯವರ ಉಪದೇಶದ ಫಲವೊ ಏನೊ! ಅವಳು ನಂತರ ಕೇವಲ ಅಭಿಮಾನ ತೋರುತ್ತಿರಲಿಲ್ಲ. ನನ್ನ ಅಭಿಪ್ರಾಯವನ್ನು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತಿದ್ದಳು. ಮಗಳಲ್ಲಿ ಕಂಡುಬರುವ ಸಂಸ್ಕೃತಿಯ ಪ್ರೇಮ, ಪರಂಪರೆಗೆ ತಂದೆ ಆ ಬಗೆಗೆ ತಾಳಿರುವ ಉದಾತ್ತ ಅಭಿಮಾನವೇ ಕಾರಣವಲ್ಲದೇ ಇನ್ನೇನು ಎಂದು ನನಗೆನಿಸುತ್ತದೆ. ಅವರ ಹೃದಯದ ಸಿರಿವಂತಿಕೆಯನ್ನು ಕಂಡು ನಾನು ಅವರ ಉದಾತ್ತತೆಗೆ ಮಾರುಹೋಗಿದ್ದೇನೆ. ಅವರ ಅಳಿಯನಾಗಿರುವುದೇ ಒಂದು ಪುಣ್ಯ ವಿಶೇಷ ಎಂದು ನನಗೆನಿಸುತ್ತದೆ." ಮೂರ್ತಿಯವರು ಒಳ್ಳೇ ಭಾವುಕರಾಗಿ ಈ ಮಾತುಗಳನ್ನು ಹೇಳಿದರು. ಪುರಾಣಿಕರು ವಾತ್ಸಲ್ಯ – ಮಮತೆಗಳ ತವರು ಎಂಬುದಕ್ಕೆ ಈ ಮಾತುಗಳಿಗಿಂತ ಹೆಚ್ಚಿನ ನಿದರ್ಶನ ಬೇಕೆಂದು ನನಗೆನಿಸುವದಿಲ್ಲ.

ಅವರ ಸೊಸೆಯಂದಿರೂ ಕೂಡ ಪುರಾಣಿಕರ ಮಕ್ಕಳೊಂದಿಗೆ ಮದುವೆಯಾಗಿ ಬಂದ ಬಳಿಕ ತಾವೂ ಮನೆಯ ಹೆಣ್ಣುಮಕ್ಕಳಾಗಿ ಬಿಟ್ಟಿರುವದಾಗಿ ಹೇಳುತ್ತಾರೆ. ಮಾವನವರು ತಮ್ಮನ್ನು ಸೊಸೆಯಂದಿರಂತೆ ಕಾಣದೇ ತಮ್ಮ ಮಕ್ಕಳಂತೆ ಆತ್ಮೀಯವಾಗಿ ಕಾಣುತ್ತ ಬಂದಿರುವದನ್ನು ಒಳ್ಳೇ ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಾರೆ. ಅವರ ಎರಡನೆಯ ಮಗನ ಹೆಂಡತಿ ಸೌ|| ಸುಹಾಸಿನಿ ಹೇಳುವ ಮಾತನ್ನು ಕೇಳಬೇಕು. "ನಾನು ಓದುತ್ತಿದ್ದ ಕಾಲೇಜಕ್ಕೆ ಕನ್ನಡ ಸಾಹಿತ್ಯ ಸಂಘದ ಮುಖ್ಯ ಅತಿಥಿಗಳಾಗಿ ಬಂದ ಶ್ರೀ ಕೃಷ್ಣಮೂರ್ತಿ ಪುರಾಣಿಕರ ಮಾತುಗಳನ್ನು ಅದೇ ಮೊದಲ ಬಾರಿಗೆ ನಾನು ಕೇಳಿದ್ದು. ಅವರ ಮಾತುಗಳು ನನ್ನ ಮೇಲೆ ಅಗಾಧ ಪರಿಣಾಮ ಬೀರಿದವು. ನಮ್ಮ ಹಿರಿಯ ಸಂಸ್ಕೃತಿಯ ದರ್ಶನ ಮಾಡಿಸಿದರು. ಮುಂದೆ ಸುದೈವದಿಂದ ನಾನು ಅವರ ಸೊಸೆಯಾಗಿ ಬಂದೆ. ನನಗಾಗ ತುಂಬ ಸಂತೋಷವಾಗಿತ್ತು. ಆದರೂ ಅಂಥವರ ಮನೆಯಲ್ಲಿ ನಾನು ನಡೆದುಕೊಳ್ಳುವುದು ಹೇಗೆ? ಮಾತುಕತೆಯಾಡುವುದು ಹೇಗೆ ಎಂಬ ಒಂದು ದುಗುಡ ಕಾಡುತ್ತಿತ್ತು. ಆದರೆ ಅವರು ಅತ್ಯಂತ ಸರಳ ಮತ್ತು ಸ್ನೇಹಪೂರ್ಣ ಮಾತುಗಳಿಂದ ನನ್ನ ಈ ದುಗುಡವನ್ನು ಕಳೆದುಬಿಟ್ಟರು. ನಾನಾಗ ನಿಜವಾಗಿ ಮೂಕವಿಸ್ಮಿತಳಾಗಿದ್ದೆ. ನಾವೆಲ್ಲ ಮನೆಯಲ್ಲಿ ಒಟ್ಟು ಸೇರಿ ಮಾತನಾಡುವೆವು. ಅತ್ತೆ – ನಾದಿನಿಯರು ಕೂಡ ತುಂಬ ವಾತ್ಸಲ್ಯದಿಂದ ವಿಶ್ವಾಸದಿಂದ ನನ್ನನ್ನು ಕಾಣುತ್ತ ಬಂದಿದ್ದಾರೆ. ನನ್ನ ಮಾವನವರು ತುಂಬ ಸಹನಶೀಲರು. ಅವರು ಎಂಥ ಕಠಿಣ ಪ್ರಸಂಗಗಳನ್ನು ನಗುನಗುತ್ತಲೇ ಎದುರಿಸುತ್ತಾರೆಂಬುದನ್ನು ನಾನು ಕಂಡುಕೊಂಡೆ. ಅಲ್ಲದೇ ಎಲ್ಲವನ್ನು ನುಂಗಿಕೊಂಡು ಹಸನ್ಮುಖರಾಗಿರುತ್ತಾರೆ. ದೂರದಿಂದ ನೋಡಿದವರಿಗೆ ಅವರು ಗಂಭೀರವಾಗಿರುವಂತೆ ಕಾಣುತ್ತಾರೆ. ಆದರೆ ಅವರದು ತುಂಬ ಮೃದುಹೃದಯ,

ಹೂವಿನಂಥ ಮನಸ್ಸು. ಅವರು ಅತಿ ಸ್ನೇಹಪೂರ್ಣ ವ್ಯಕ್ತಿ. ಇಂಥವರ ಸೊಸೆಯಾಗಿ ಬಂದ ನನ್ನ ಭಾಗ್ಯಕ್ಕಾಗಿ ನಾನು ಯಾವಾಗಲೂ ವಂದಿಸುತ್ತೇನೆ." ಮೂರನೆಯ ಮಗ ಆನಂದನ ಹೆಂಡತಿ ಸೌ|| ಮೀರಾ ಈ ಮಾತುಗಳಿಗೆ ದನಿಗೂಡಿಸುವಳು: "ನಾನು ಸಣ್ಣವಳಿರುವಾಗಲೇ ಶ್ರೀ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳನ್ನು ಓದಿ ಮೆಚ್ಚಿಕೊಂಡಿದ್ದೆ. ಆ ಕಾದಂಬರಿಗಳಲ್ಲಿ ಅವರು ಸ್ತ್ರೀಯರ ಬಗೆಗೆ ತೋರುವ ಅನುಕಂಪ, ನಮ್ಮ ಸಂಸ್ಕೃತಿಯಲ್ಲಿ ಅವರ ಹಿರಿದಾದ ಪಾತ್ರಗಳನ್ನು ಚೆನ್ನಾಗಿ ವಿದಿತಗೊಳಿಸಿದ್ದರು. ಹಾಯಸ್ಕೂಲದಲ್ಲಿರುವಾಗ ಅವರದೊಂದು ಕಥೆ ನಮಗೆ ಪಠ್ಯಪುಸ್ತಕದಲ್ಲಿತ್ತು. ಅದು ಸೊಗಸಾಗಿತ್ತು: ಮಾರ್ಗ-ದರ್ಶಕವೂ ಆಗಿತ್ತು. ನಮ್ಮ ತಂದೆಗೆ ಬಾಗಲಕೋಟೆಗೆ ವರ್ಗವಾಗಿ ಬಂದಾಗ ಅಲ್ಲಿಯ ಸರ್ಕಾರಿ ಹಾಯಸ್ಕೂಲಿನ ಮುಖ್ಯಾಧ್ಯಾಪಕರಾದ ಶ್ರೀ ಎಸ್. ಟಿ. ಪುರಾಣಿಕರು ಕೃಷ್ಣಮೂರ್ತಿಯವರ ತಮ್ಮ ಎಂದು ತಿಳಿಯಿತು. ಅವರ ವಿಷಯವಾಗಿ ನಾನು ಗುರುಗಳಿಂದ ಅರಿತುಕೊಂಡೆ. ಮುಂದೆ ನಮ್ಮ ತಂದೆಗೆ ವಿಜಾಪುರಕ್ಕೆ ವರ್ಗವಾದ್ದರಿಂದ ಕೃಷ್ಣಮೂರ್ತಿ ಅವರ ಪ್ರತ್ಯಕ್ಷ ಪರಿಚಯವಾಗಲಿಲ್ಲ. ವಿಜಾಪುರ ಸಾಹಿತ್ಯ ಸಮ್ಮೇಳನಕ್ಕೆ ಅವರು ಬಂದಾಗ ನನ್ನ ಈ ಇಚ್ಛೆ ಈಡೇರಿತಲ್ಲದೇ ಅವರ ಅಮೃತವಾಣಿಯನ್ನು, ಅನುಭವಪೂರ್ಣವಾದ ಮಾತುಗಳನ್ನು ಸವಿಯಲು ಅವಕಾಶವಾಯಿತು. ನನಗಂತೂ ಇದು ತುಂಬ ಸಂತೋಷವನ್ನುಂಟು ಮಾಡಿತು. ಮುಂದೆ ನನ್ನ ಸುದೈವದಿಂದ ನಾನು ಅವರ ಮೂರನೆಯ ಮಗನ ಕೈಹಿಡಿದು ಅವರ ಸೊಸೆಯಾಗಿ ಅವರ ಕುಟುಂಬವರ್ಗದ ಸದಸ್ಯಳಾದೆ. ಈ ಅಲ್ಪ ಕಾಲದಲ್ಲಿಯೂ ಅಲ್ಲಿ ನಾನು ಸೊಸೆ, ಇದು ಅತ್ತೆ ಮನೆ ಎಂಬ ಭಾವನೆ ನನ್ನಲ್ಲಿ ಬರುತ್ತಲೇ ಇಲ್ಲ. ಅಂಥ ಒಂದು ಆತ್ಮೀಯತೆಯನ್ನು ಅತ್ತೆ-ಮಾವ ತೋರುತ್ತಿದ್ದಾರೆ. ನಾನು ಅವರ ಸೊಸೆಯಾಗುವುದು ನಿಶ್ಚಿತವಾದಾಗ ನನಗಂತೂ ಹಿಡಿಸಲಾರದ ಹಿಗ್ಗಾಗಿತ್ತು. ಅದಕ್ಕೆ ಕಾರಣವೆಂದರೆ ಅವರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳಂತೆ ನಾನೂ ಆದರ್ಶವಾದಿಯಾಗಲು ಬಯಸುತ್ತಿದ್ದೆ. ಅದು ಈಡೇರಿದ್ದರಿಂದಲೇ ನನಗಷ್ಟು ಸಂತೋಷವಾದುದು. ಅವರ ಸೊಸೆಯೆನಿಸಿಕೊಂಡು ಆದರ್ಶಳಾಗಿ ನಡೆಸುವುದು ನನಗೊಂದು ಹೆಮ್ಮೆಯ ವಿಷಯವೇ ಆಗಿದೆ." ಶ್ರೀ ಕೃಷ್ಣಮೂರ್ತಿ ಪುರಾಣಿಕರ ಸಾಹಿತ್ಯ ಅವರ ಸೊಸೆಯಂದಿರ ಮೇಲೆ ಹೇಗೆ ಪ್ರಭಾವ ಬೀರಿದೆಂಬುದಕ್ಕೆ ಈ ಮಾತುಗಳು ಒಳ್ಳೇ ನಿದರ್ಶನವಾಗಿವೆ.

— ೪ —

ಶ್ರೀ ಕೃಷ್ಣಮೂರ್ತಿ ಪುರಾಣಿಕರು ಶಿಕ್ಷಣದಾನದಂತಹ ಪವಿತ್ರವಾದ ವೃತ್ತಿಯಲ್ಲಿ ತಮ್ಮ ಜೀವನದ ಅಮೌಲ್ಯವಾದ ಸಮಯವನ್ನು ಸವೆಸಿದರು. ಸುಮಾರು ಮೂವತ್ತಾರು ವರುಷ ಕಾಲ ಅವರು ಶಿಕ್ಷಕರಾಗಿ ಅಪಾರವಾದ ಶಿಷ್ಯ

ಸಂಪತ್ತನ್ನು ಗಳಿಸಿದರು. ಈ ವೃತ್ತಿ ಅವರ ಸ್ವಭಾವಕ್ಕೆ ಅನುಗುಣವಾಗಿತ್ತು. ಅವರು ಅದನ್ನು ಹಚ್ಚಿಕೊಂಡಿದ್ದರೊ, ಅದು ಅವರನ್ನು ಹಚ್ಚಿಕೊಂಡಿದ್ದಿತೊ ಬಿಟ್ಟರೂ ಬಿಡಲಾಗದ ನಂಟು ಅವರಲ್ಲಿ ಅಂಟಿಕೊಂಡು ಬಂದಿದ್ದಿತು. ಅವರು ಶಿಕ್ಷಕರಾಗಿ ಗೋಕಾಕಕ್ಕೆ ೧೯೩೭ ಡಿಸೆಂಬರಕ್ಕೆ ಬಂದರು. ಆಗ ಗೋಕಾಕ ನಗರ-ಸಭೆಯು ಸರಕಾರದ ವಶದಲ್ಲಿತ್ತು. ಅದರ ಅಧ್ಯಕ್ಷರು ಓರ್ವ ಆಂಗ್ಲರು. ಇವರು ಪರೀಕ್ಷೆಯಲ್ಲಿ ಪಡೆದ ಗುಣಗಳನ್ನು ಪರಿಶೀಲಿಸಿ ಕೂಡಲೇ ನೇಮಿಸಿಕೊಂಡರು. ಆರು ತಿಂಗಳ ಸೇವಾಜೀವನದ ನಂತರ ಆ ವೃತ್ತಿಯಲ್ಲಿ ಸ್ಥಿರಗೊಳಿಸಿದರು. ಅವರು ಸ್ಥಿರಗೊಳಿಸುವದೇನು–ತಂದೆ ಈ ಮಕ್ಕಳಿಗಾಗಿ ಶಿಕ್ಷಕಪದವನ್ನು ಸ್ಥಿರಗೊಳಿಸಿ ಬಿಟ್ಟಿದ್ದರು. ತಂದೆಯ ಹಿರಿಯ ಮೇಲ್ಪಂಕ್ತಿ ಇವರೆದುರು ಇದ್ದಿತು. ವಿದ್ಯಾದಾನ ಒಂದು ಪವಿತ್ರವಾದ ಕಾರ್ಯ ಎಂಬುದನ್ನು ತಂದೆ ತಮ್ಮ ಸೇವಾಜೀವನದಿಂದ ಮಕ್ಕಳಿಗೆ ತೋರಿಸಿಕೊಟ್ಟಿದ್ದರು. ಆ ಹಿರಿಯ ಆದರ್ಶವನ್ನು ಇವರು ಹೊತ್ತು ನಿಂತಿದ್ದರು. ಶಿಕ್ಷಣ ಪೂರೈಸಿದೊಡನೆ ಬೇರಾವುದೇ ವಿಚಾರವನ್ನು ಅವರು ಮಾಡಲಿಲ್ಲ. ಶಿಕ್ಷಣರಂಗವನ್ನು ಪ್ರವೇಶಿಸಿದರು. ಸುದೀರ್ಘ ಕಾಲದವರೆಗೆ ಅಖಂಡವಾಗಿ ಈ ಸೇವಾಜೀವನವನ್ನು ಅವರು ನಡೆಯಿಸಿಕೊಂಡು ಬಂದರು. ಪುರಾಣಿಕರು ಕೇವಲ ಪಾಠ ಹೇಳಿ ವಿದ್ಯಾರ್ಥಿಗಳನ್ನು ತೃಪ್ತಿಗೊಳಿಸುತ್ತಿರಲಿಲ್ಲ. ಅವರಲ್ಲಿ ಹುದುಗಿಕೊಂಡಿದ್ದ ಸಾಹಿತಿ ಅವರನ್ನು ಸುಮ್ಮನೆ ಕೂಡಿಸುತ್ತಿರಲಿಲ್ಲ. ಅವರ ಪಾಠ ಹೊಸ ಬಗೆಯದಾಗಿರುತ್ತಿತ್ತು. ಕಥನ ರೀತಿಯಲ್ಲಿ ಅದು ಸಾಗುತ್ತಿತ್ತು. ವಿದ್ಯಾರ್ಥಿಗಳಲ್ಲಿ ಪಾಠದ ಜೊತೆಗೆ ಅವರು ಸಾಹಿತ್ಯದ ಬಗೆಗೆ, ಸಾಹಿತಿಗಳ ಬಗೆಗೆ ಸಹಜ ಕುತೂಹಲವನ್ನು ಅವರು ಕೆರಳಿಸುತ್ತಿದ್ದರು. ಇವರ ಪಾಠವೆಂದರೆ ವಿದ್ಯಾ-ರ್ಥಿಗಳು ಮುಕುರಿಬೀಳುತ್ತಿದ್ದರು. ಹಾವಭಾವಯುಕ್ತವಾಗಿ ಅವರು ಹೇಳುವುದೇ ಒಂದು ಸೊಗಸು, ಕೇಳುವುದು ಇನ್ನೊಂದು ಸೊಗಸು. ವಿದ್ಯಾರ್ಥಿಗಳಿಗೆ ಹಳ ಗನ್ನಡದ ಪಾಠಗಳೂ ಕೂಡ, ಪುರಾಣಿಕರು ಹೇಳವಾಗ ಬೇಸರವನ್ನು ತರಿ-ಸುತ್ತಿರಲಿಲ್ಲ. ಅಲ್ಲಿ ಬರುವ ಭಾವ, ಶಬ್ದವೈಖರಿ, ಅದರ ಸೊಗಸುಗಾರಿಕೆ, ಆ ಕವಿಯ ಹಿರಿಮೆ ಹಿನ್ನೆಲೆ ಹೀಗೆ ವಿದ್ಯಾರ್ಥಿಗಳಿಗೆ ಕವಿ–ಕಾವ್ಯದ ಪೂರ್ಣ ಪರಿಚಯ ವಾಗುವ ರೀತಿಯಲ್ಲಿ ಪಾಠವನ್ನು ಅವರು ಹೇಳುತ್ತಿದ್ದರು. ಅವರ ವಿದ್ಯಾರ್ಥಿ ಯಾಗುವುದೇ ಈ ವಿದ್ಯಾರ್ಥಿಗಳಿಗೆಲ್ಲ ಒಂದು ಹೆಮ್ಮೆಯ ವಿಷಯವಾಗಿತ್ತೆಂದರೆ ತಪ್ಪಾಗದು. ಅಂಥ ಒಂದು ಮೋಡಿಯನ್ನು ಅವರು ಪಾಠಗಳಲ್ಲಿ ಹಾಕಿದ್ದರು.

ಅವರು ಶಾಲೆಯಲ್ಲಿ ಪಾಠ ಹೇಳಿ ಮಾತ್ರ ತೃಪ್ತರಾಗುತ್ತಿರಲಿಲ್ಲ. ವಿದ್ಯಾರ್ಥಿ ಗಳಿಗೆ ತಿಳಿಯದೇ ಹೋದರೆ ಬೇಕಾದ್ದನ್ನು ಬೇಕಾದಾಗ ಕೇಳಲು ಹೇಳಿರುತ್ತಿದ್ದರು. ಶಾಲೆಯ ಅವಧಿ ಮುಗಿದ ನಂತರ ಅನೇಕರು ಅವರ ಮನೆಗೂ ಬರುತ್ತಿದ್ದರು. ಪಾಠದ ನೆಪದಲ್ಲಿ ಅವರ ಮಾತಿನ ಸೊಗಸುಗಾರಿಕೆಯನ್ನು ಸವಿಯುತ್ತಿದ್ದರು. ಮತ್ತೆ ಮತ್ತೆ ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಈ ಪಾಠದ ದಣಿವು ಕೃಷ್ಣ-

ಮೂರ್ತಿಯವರಿಗೆ ಆಗುತ್ತಿರಲೇ ಇಲ್ಲ; ಎಂದೂ ಅವರು ಬೇಸತ್ತುಕೊಂಡವರಲ್ಲ. ವಿದ್ಯಾರ್ಥಿಗಳನ್ನು ಅವರು ದಂಡಿಸುತ್ತಿರಲೂ ಇಲ್ಲ. ಅವರೂ ಎಲ್ಲ ವಿದ್ಯಾರ್ಥಿಗಳು ಅವರನ್ನು ಅರಿತುಕೊಂಡಿದ್ದರು. ಅರ್ಥಮಾಡಿಕೊಂಡಿದ್ದರು. ಈ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗೆ ಮಮತೆ, ಪ್ರೀತಿ ಆದರಗಳು ಕಂಡು ಬರುವಂತೆಯೂ ಮಾಡಿದರು. "ಇದೆಂಥ ಕನ್ನಡದ ಹುಚ್ಚು ನಮ್ಮ ಗುರುಗಳಿಗೆ" ಎಂದು ಹಿರಿಯ ವಿದ್ಯಾರ್ಥಿಗಳು ಹೇಳಿಕೊಂಡುದೂ ಕೂಡ ಉಂಟು. ಕನ್ನಡ ಸಾಹಿತ್ಯದ, ಸಾಹಿತಿಗಳ ಬಗೆಗೆ ಹೇಳುವಾಗ ಇವರು ಮೈಮರೆಯುತ್ತಿದ್ದರು; ತಮ್ಮನ್ನು ತಾವು ಮರೆತು ಆ ಬಗೆಗೆ ಹೇಳುತ್ತಿದ್ದರು. ಹಾಗೆ ನೋಡಿದರೆ ಅವರ ಈ ಶಿಕ್ಷಣ ಕ್ರಮ ಅಲೌಕಿಕವಾಗಿತ್ತು; ಅಪೂರ್ವವೂ ಆಗಿದ್ದಿತು. ಅವರು ತುಂಬ ಜನಪ್ರಿಯರಾದ ಶಿಕ್ಷಕರಾಗಿದ್ದರು. ಅವರ ಈ ಕನ್ನಡ ಪ್ರೇಮದಿಂದಾಗಿಯೇ ಗೋಕಾಕದಲ್ಲಿ ನಾಡಹಬ್ಬ ಮೊದಲಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸಲು ಮುಂದಾದರು. ಇನ್ನೂ ತರುಣ ವಯಸ್ಸು; ತುಂಬ ಹುರುಪು, ಹುಮ್ಮಸ್ಸು, ಉತ್ಸಾಹ; ಧಾರವಾಡದ ಸಾಹಿತ್ಯಕ ಜೀವನದಲ್ಲಿ ಬೆಳೆದುಬಂದ ಸವಿ-ನೆನಪುಗಳು; ಜಯಕರ್ನಾಟಕ ಗೆಳೆಯರ ಗುಂಪಿನ ಹಿರಿಯ ಜೀವಿಗಳ ಸಹಯೋಗದ ಅಪೂರ್ವ ಅನುಭವ ಹೀಗೆ ಅವರನ್ನು ಬೆಂಬಿಡದೇ ಕಾಡುತ್ತಿದ್ದ ಈ ಸ್ಮರಣಾರ್ಹ ಸಂಗತಿಗಳು ಸುಮ್ಮನೆ ಕೂಡಗೊಡಲಿಲ್ಲ. ಜೊತೆಗೆ ಈ ತರುಣ ಶಿಕ್ಷಕರಿಗೆ ಮುಖ್ಯಾಧ್ಯಾಪಕರು ನೀಡಿದ ಉತ್ತೇಜನ–ಬೆಂಬಲ; "ಆ ದಿನಗಳು ನನ್ನ ಜೀವ-ನದ ನಿಜವಾದ ರಸಗಳಿಗೆಗಳು" ಎಂದು ಶ್ರೀ ಪುರಾಣಿಕರು ಆ ದಿನಗಳನ್ನು ನೆನೆದು ಈಗ ಹೇಳುತ್ತಿರುವಲ್ಲಿ ಅತಿಶಯೋಕ್ತಿಯೇನೂ ಕಂಡುಬರುವದಿಲ್ಲ.

ವಿದ್ಯಾರ್ಥಿಗಳಲ್ಲಿ ಪುರಾಣಿಕರು ಈ ಮೂಲಕ ತುಂಬ ಸಾಹಿತ್ಯಪ್ರೇಮವನ್ನು ಕುದುರಿಸಿದರು. ಅವರು ಪಠ್ಯೇತರ ಸಾಹಿತ್ಯಕ ಗ್ರಂಥಗಳನ್ನು ಓದುವಂತೆ ಮಾಡುವಲ್ಲಿ ಅವರು ಸಮರ್ಥರಾದರು. ಅವರ ಕುತೂಹಲ ಇಲ್ಲಿಗೆ ತಣಿಯುತ್ತಿರಲಿಲ್ಲ. ತಾವು ಓದಿಕೊಂಡು ಬಂದ ಗ್ರಂಥಗಳಲ್ಲಿಯ ಹೊಸ ಅಂಶಗಳನ್ನು ಕುರಿತು ಈ ಶಿಕ್ಷಕರಿಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಆಗ ಪುರಾಣಿಕರಿಗೆ ಇನ್ನಷ್ಟು ಹುರುಪು. ಅವರು ತಮ್ಮ ಈ ಶಿಷ್ಯರ ಕುತೂಹಲವನ್ನು ತಣಿಸಲು ಮುಂದಾಗುತ್ತಿದ್ದರು. ಪಠ್ಯವನ್ನು ಆ ದಿನದ ಮಟ್ಟಿಗೆ ಬದಿಗೆ ಸರಿಸುತ್ತಿದ್ದರು. ಶಿಷ್ಯರಿಗೆ ಉತ್ತರರೂಪವಾಗಿ ಹೊಸ ಸಾಹಿತ್ಯದ ಸವಿಯನ್ನು ಉಣಬಡಿಸುತ್ತಿದ್ದರು. ಅನೇಕ ಪ್ರಸಂಗಗಳಲ್ಲಿ ಜಯಕರ್ನಾಟಕ ಮತ್ತು ಪ್ರಬುದ್ಧ ಕರ್ನಾಟಕಗಳಲ್ಲಿ ಬಂದ ಹೊಸ ಕಥೆ, ಲೇಖನಗಳನ್ನು ವರ್ಗದಲ್ಲಿ ವಾಚಿಸಿದ್ದು ಉಂಟು. ಕೈಲಾಸಂ–ಶ್ರೀರಂಗರ ನಾಟಕಗಳನ್ನು ಕೂಡ ಸಂದರ್ಭಾನುಸಾರ ಭಾವಪೂರ್ಣವಾಗಿ ಓದಿ ತೋರಿಸುತ್ತಿದ್ದರು. ಕುವೆಂಪು, ಬೇಂದ್ರೆ ಮೊದಲಾಗಿ ಕವಿಗಳ ಹೊಸಗವನಗಳನ್ನು ರಾಗಬದ್ಧವಾಗಿ, ಅರ್ಥಪೂರ್ಣವಾಗಿ ಹಾಡಿ ತೋರಿಸುತ್ತಿದ್ದರು. ವಿದ್ಯಾರ್ಥಿಗಳಿಂದ ಈ ಬಗೆಗೆ ಅವರು ಪ್ರತಿಕ್ರಿಯೆಯನ್ನು

ಅಪೇಕ್ಷಿಸುತ್ತಿದ್ದರು. ವರ್ಗದಲ್ಲಿ ಅನೇಕ ಸಲ ರಸವತ್ತಾದ ಸೊಗಸಾದ ಚರ್ಚೆಯನ್ನು ಕೂಡ ನಡೆಸುತ್ತಿದ್ದರು. ಈ ವರ್ಗಗಳು ಸ್ಥಾನಿಕ ಸಾಹಿತ್ಯ ಸಮ್ಮೇಳನಗಳಂತೆ ಅನೇಕ ಸಲ ಕಂಡು ಬಂದಿದ್ದರೂ ಅಚ್ಚರಿಪಡಬೇಕಾಗುತ್ತಿರಲಿಲ್ಲ. ಪುರಾಣಿಕರು ನಮ್ಮ ಯುವಜನಾಂಗದಲ್ಲಿ ನವಚೇತನವನ್ನುಂಟು ಮಾಡಿದರು ಎಂದರೂ ತಪ್ಪಾಗಲಾರದು. ಕನ್ನಡದ ಬಗೆಗೆ ಆಸ್ಥೆ-ಪ್ರೇಮಗಳಿರಲಿ, ಇನ್ನೂ ತಿಳಿವಳಿಕೆ ಕೂಡ ಮೂಡಿರಲಾರದ ಕಾಲವದು. ಇದಕ್ಕಾಗಿ ಅವರು ಶಾಲೆಯಲ್ಲಿ ಕನ್ನಡ ಸಂಘವನ್ನು ನಿರ್ಮಿಸಿದರು. ಅದು ಕೂಡ ಒಳ್ಳೇ ಯಶಸ್ವಿರೀತಿಯಿಂದ ಕೆಲಸವನ್ನು ಮಾಡತೊಡಗಿತು. ಇದು ಸ್ವಾಭಾವಿಕವಾಗಿ ಅನೇಕರ ಕುತೂಹಲವನ್ನು ಕೆರಳಿಸಿತಾದರೂ ಕೆಲವರಾದರೂ ಈ ಬಗೆಗೆ ಮೂಗು ಮುರಿಯುವಂತಾಯಿತು. ಅವರಲ್ಲಿಯೇ ಕೆಲವರು ಇದೇನು ಕನ್ನಡ-ಮರಾಠಿ ವಾದ ಎಬ್ಬಿಸಿ ಇವರು ಉಪದ್ವ್ಯಾಪ ಮಾಡುತ್ತಿದ್ದಾರೆ ಎಂದವರೂ ಉಂಟು. ಊರವರೂ ದೂರ ದೂರ ಉಳಿದಿದ್ದರು. ಆದರೆ ಪುರಾಣಿಕರು ಇದಾವುದರತ್ತ ಗಮನ ಹರಿಸಿರಲಿಲ್ಲ; ತಾವಾಯಿತು ತಮ್ಮ ಕೆಲಸವಾಯಿತು. ಹೀಗಾಗಿ ಅವರು ವಿದ್ಯಾರ್ಥಿವೃಂದದಲ್ಲಿ ತುಂಬ ಪ್ರೀತಿಯನ್ನು ಗಳಿಸಿಕೊಂಡ ಶಿಕ್ಷಕರೆನಿಸಿದರು. ಅವರ ಸುತ್ತ ಯಾವಾಗಲೂ ಸಾಹಿತ್ಯಪ್ರೇಮಿಯಲ್ಲದ ವಿದ್ಯಾರ್ಥಿಗಳು ಕೂಡ ಮುಕುರುತ್ತಿರುವುದನ್ನು ಕಾಣಬಹುದಿತ್ತು. ವಿದ್ಯಾರ್ಥಿಗಳ ಚಿಕ್ಕ ಗುಂಪೇನಾದರೂ ತಲೆದೋರಿದರೆ ಅವರ ಮಧ್ಯದಲ್ಲಿ ನಿಶ್ಚಿತವಾಗಿ ಕೃಷ್ಣಮೂರ್ತಿ ಪುರಾಣಿಕರು ಇದ್ದಿರಲೇಬೇಕೆಂಬ ಗ್ರಹಿಕೆ ಕೂಡ ಆಗ ಕಂಡು ಬರುತ್ತಿತ್ತು. ಈಗ ಇರುವುದಿಲ್ಲವೆಂತಲ್ಲ. ಈಗ ವಿದ್ಯಾರ್ಥಿಗಳ ಜೊತೆಗೆ ಪ್ರೌಢರೂ ಸೇರಿಕೊಂಡಿರುತ್ತಾರೆ. ಕಿರಿಯ ಸಾಹಿತಿಗಳೂ ಈಗ ಅಲ್ಲಿರುತ್ತಾರೆ. ಆಗ ಈಗ ಕಂಡುಬರುತ್ತಿರುವ ಅಂತರ ಇಷ್ಟೆ!

ವಿದ್ಯಾರ್ಥಿಗಳಲ್ಲಿ ಅವರು ಸಾಹಿತ್ಯದ ಬಗೆಗೆ ಆಸಕ್ತಿಯನ್ನು ಕುದುರಿಸಿದರು ಮಾತ್ರವಲ್ಲ; ಅನೇಕರಲ್ಲಿ ಬರೆಯುವ ಚಟವನ್ನು ಅವರು ಉಂಟು ಮಾಡಿದರು. ಅವರ ಅನೇಕ ಶಿಷ್ಯರು ಇಂದು ಉತ್ತಮ ಬರಹಗಾರರೂ ಎನಿಸಿದ್ದಾರೆ. ಸಾಕಷ್ಟು ಮಟ್ಟಿಗೆ ಹೆಸರನ್ನು ಪಡೆದಿದ್ದಾರೆ. ಇದಕ್ಕಾಗಿ ಪುರಾಣಿಕರು ಬಳಸಿಕೊಂಡ ಸಾಧನವೆಂದರೆ ಕೈಬರೆಹದ ಮಾಸಪತ್ರಿಕೆ. ಆ ಸಮಯದಲ್ಲಿ ಇದು ಕೂಡ ಒಂದು ಸಾಹಸವೇ ಆಗಿತ್ತು. ಆದರೂ ಪುರಾಣಿಕರು ತಮ್ಮ ಶಿಷ್ಯರಿಂದ ಲೇಖನಗಳನ್ನು ಬರೆಯಿಸಿದರು. ಅವುಗಳನ್ನು ಸ್ವತಃ ನೋಡಿದರು; ತಿದ್ದುಪಡಿ ಮಾಡಿದರು. ಅಲ್ಲಿ ಕಂಡು ಬಂದಿರುವ ಲೋಪದೋಷಗಳನ್ನು ಕುಂದು ಕೊರತೆಗಳನ್ನು ಅವರಿಗೆ ತಿಳಿಸಿ ಹೇಳಿದರು. ಅವರೇ ತಿದ್ದಿಕೊಳ್ಳುವಂತೆ ಮಾಡಿದರು. ಹಲವಾರು ಶಿಷ್ಯರು ಇದರಲ್ಲಿ ಸೂರ್ಪಡಿಯಾದಾಗ ಗುರು ಪುರಾಣಿಕರಿಗೆ ತಮ್ಮ ಪರಿಶ್ರಮ ಸಾರ್ಥಕವೆನಿಸಿತು. ಒಂದು ಸಮಾಧಾನ-ತೃಪ್ತಿ ಅವರಲ್ಲಿ ಅಷ್ಟರ ಮಟ್ಟಿಗೆ ಮೂಡಿನಿಂತವು. ಈ ಪತ್ರಿಕೆಗೆ ಅವರಿಟ್ಟಿರುವ ಹೆಸರು ಕೂಡ ಒಳ್ಳೇ ಮಾರ್ಮಿಕವಾದುದು. 'ಪಂಜು'

ಎಂದಿತ್ತು. ಆ ಬೆಳಕು ಮಾರ್ಗವನ್ನು ತೋರುವಂತೆ ಈ ಪತ್ರಿಕೆ ಸಾಹಿತ್ಯಮಾರ್ಗದಲ್ಲಿ ಮುಂದೆ ಸಾಗುವಂತೆ ಬೆಳಕನ್ನು ನೀಡಲಿ, ವಿದ್ಯಾರ್ಥಿವೃಂದ ಮುನ್ನಡೆಯಲಿ ಎಂಬುದೇ ಅವರ ಹಾರೈಕೆಯಾಗಿತ್ತು.

ಅವರು ತಮ್ಮ ವಿದ್ಯಾರ್ಥಿಗಳ ಬಗೆಗೆ ತುಂಬ ಆಸೆಯಿರಿಸಿಕೊಂಡಿರುತ್ತಿದ್ದರು. ಅವರು ಕೇವಲ ಓದು ಬರಹಗಳಲ್ಲಿ ಮಾತ್ರ ಮುಂದುವರಿದರೆ ಸಾಲದು; ಜೀವನದಲ್ಲಿ ಕೂಡ ಅವರು ಮುಂದುವರಿಯಬೇಕು. ಅವರು ಒಳ್ಳೆ ವಿದ್ಯಾರ್ಥಿಗಳಾಗಿರುವಂತೆ ಒಳ್ಳೆಯ ಜೀವನವನ್ನು ನಡೆಸುವವರೂ ಆಗಬೇಕೆಂದು ಮನಮುಟ್ಟಿ ಬಯಸುತ್ತಿದ್ದರು. "ಒಳ್ಳೆಯತನ, ಸರಳಜೀವನ, ಅಭ್ಯಾಸ ಪ್ರವೃತ್ತಿ, ಗುರು-ಹಿರಿಯರಲ್ಲಿ ಗೌರವ, ನಾಡಿನ ಬಗ್ಗೆ ಜ್ವಲಂತವಾದ ರಾಷ್ಟ್ರಪ್ರೇಮಗಳು ಇವು ನಮ್ಮ ವಿದ್ಯಾರ್ಥಿಗಳಲ್ಲಿ ಮೂಡಿ ಬರಬೇಕು" ಪುರಾಣಿಕರು ಅಂದಿಗೂ–ಇಂದಿಗೂ ನಮ್ಮ ವಿದ್ಯಾರ್ಥಿಗಳಿಂದ ಅಪೇಕ್ಷಿಸುವ ಗುಣಗಳು. ಇದರ ಜೊತೆಗೆ ಅವರು ಭಾರತೀಯ ಸಂಸ್ಕೃತಿಯನ್ನು ಅರಿತುಕೊಂಡು ಅದರ ಕೀರ್ತಿಪತಾಕೆಯನ್ನು ಹಾರಿಸಬೇಕೆಂದೂ ಬಯಸುತ್ತಿದ್ದರು. ಅವರ ಶಿಷ್ಯ ಬಳಗ ವಿಸ್ತಾರವಾಗಿದೆ. ರಾಜ್ಯದ ನಾನಾಮೂಲೆಗಳಲ್ಲಿ ಹರಡಿಕೊಂಡಿದೆ. ಸಣ್ಣ–ಪುಟ್ಟ ಚಾಕರಿಗಳಿಂದ ಮೊದಲ್ಗೊಂಡು ಭಾರಿ ಹುದ್ದೆಗಳಲ್ಲಿ ಅವರ ಶಿಷ್ಯರು ಕೆಲಸ ಮಾಡುತ್ತಿದ್ದಾರೆ. ಆದರೆ ಅವರಾರೂ ತಮ್ಮ ಈ ಗುರುವನ್ನು ಮರೆತಿಲ್ಲ. ನಾನಾ ಸಂದರ್ಭಗಳಲ್ಲಿ ಇವರನ್ನು ಕಂಡಿದ್ದಾರೆ. ಇವರಿಗೆ ತಮ್ಮಿಂದಾಗುವ ಸೇವೆಯನ್ನು ಸಲ್ಲಿಸಿದ್ದಾರೆ. ಒಂದುಸಲ ಇವರಿಗೆ ಊರಿಗೆ ಹೋಗಬೇಕಾದ ಅವಸರದ ಪ್ರಸಂಗ. ಬಸ್‌ಸ್ಟ್ಯಾಂಡಿನಲ್ಲಿ ಭಾರಿ ಕ್ಯೂ. ಇಂಥವರಲ್ಲಿ ಹೇಗೆ ಹೋಗುವದು ಎಂಬ ಚಿಂತೆ ಅವರನ್ನು ಕಾಡತೊಡಗಿತ್ತು. 'ಸರ್' ಎಂಬ ಧ್ವನಿಯನ್ನು ಕೇಳಿದಾಗ ಪುರಾಣಿಕರು ತಲೆ ಎತ್ತಿ ನೋಡಿದರು. ಓರ್ವ ಕಂಡಕ್ಟರ್ ವಿನೀತನಾಗಿ ಇವರ ಮುಂದೆ ನಿಂತಿದ್ದಾನೆ. "ಏನು ಊರಿಗೆ ಹೋಗಬೇಕೆ ಸರ್" ಎಂದು ಅವನೇ ಕೇಳಿದ. ಪುರಾಣಿಕರು ಆ ಕ್ಯೂವನ್ನು ದೃಷ್ಟಿಸಿನೋಡುತ್ತ "ಹೌದು. ಆದರೆ ಹೇಗಪ್ಪ ಈ ಗದ್ದಲದಲ್ಲಿ ಹೋಗುವುದು. ಒಳಗೆ ಹೋಗಲು ಸಾಧ್ಯವಿಲ್ಲದಾಗಿದೆ." ಎಂದರು "ಬನ್ನಿಸರ್ ನಾನು ನಿಮ್ಮ ಶಿಷ್ಯ, ನಿಮಗೆ ಸ್ಥಳ ಮಾಡಿಕೊಡುತ್ತೇನೆ" ಎಂದು ಪುರಾಣಿಕರನ್ನು ಆ ಬಸ್ಸಿನಲ್ಲಿ ಕೂಡಿಸಿ ಕರೆದೊಯ್ದ. ಭಾರಿ ಹುದ್ದೆಯಲ್ಲಿರುವ ಶಿಷ್ಯರಿಗಿಂತ ಈ ಶಿಷ್ಯನ ಈ ಸೇವೆ ಪುರಾಣಿಕರಿಗೆ ತುಂಬ ಮೆಚ್ಚಿಗೆಯದಾಯಿತು. ಈ ಪ್ರಸಂಗವನ್ನು ಅವರು ಯಾವಾಗಲೂ ಅಭಿಮಾನದಿಂದ ನೆನೆಯುತ್ತಾರೆ. ಇಂಥ ಎಷ್ಟೋ ಪ್ರಸಂಗಗಳು ಅವರ ಜೀವನದಲ್ಲಿ ಬಂದು ಹೋಗಿವೆ; ಶಿಷ್ಯರು ಗುರುವಿನ ಬಗೆಗೆ ಅಭಿಮಾನದಿಂದ ನಡೆವುದನ್ನು ನೋಡಿ ಅವರು ಪುಳಕಿತರಾಗಿದ್ದಾರೆ.

ಪುರಾಣಿಕರ ಐವತ್ತನೆಯ ಕಾದಂಬರಿ ಪ್ರಕಟವಾಗುವ ಸಂದರ್ಭದಲ್ಲಿ ಖ್ಯಾತ ಸಾಹಿತಿಗಳಾದ ನಿರಂಜನ ಅವರು 'ಜೀವ ಜಿಲ್ಲೆ'ಯಲ್ಲಿ ಶಿಕ್ಷಕ ಪುರಾಣಿಕರು ಹೇಗೆ ಕಾಣಬಹುದು? ಕಲಿಸಬಹುದು ಎಂಬ ವಿಷಯವಾಗಿ ಕೊಟ್ಟ ಚಿತ್ರ ತುಂಬ

ಸ್ವಾರಸ್ಯಕರವಾಗಿರುವುದು.

"ವೃತ್ತಿಯಲ್ಲಿ ಪುರಾಣಿಕರು ಅಧ್ಯಾಪಕರು: ಒಂದು ಚಿತ್ರವನ್ನು ಹೀಗೆ ಕಲ್ಪಿಸೋಣ. ಶಾಲೆಯ ಗಂಟೆ ಬಾರಿಸಿದೆ. ಪುರಾಣಿಕ ಮಾಸ್ತರರು ಕ್ಲಾಸಿನೊಳಕ್ಕೆ ಕಾಲಿಡುತ್ತಾರೆ. ವಿದ್ಯಾರ್ಥಿಗಳು ಎದ್ದು ನಿಂತು ವಂದಿಸುತ್ತಾರೆ. ಕುಳಿತುಕೊಳ್ಳಿ ಎಂದು ಮಾಸ್ತರು ಕೈ ಸನ್ನೆ ಮಾಡುತ್ತಾರೆ. ಪೀಠಸ್ಥರಾಗಿ ಟೋಪಿಯನ್ನು ಮೇಜಿನ ಮೇಲಿರಿಸಿ ನುಣ್ಣನೆಯ ತಲೆಯ ಮೇಲೆ ಕೈಯಾಡಿಸಿ, ನಿತ್ಯ ಹಸನ್ಮುಖಿಯಾದ ಮಾಸ್ತರು ಆತ್ಮೀಯ ನೋಟದಿಂದ ನಾಳಿನ ಪ್ರಜೆಗಳನ್ನು ನೋಡಿ ಕೇಳುತ್ತಾರೆ.

"ಓದ್ಕೊಂಡು ಬಂದಿದೀರೇನೋ ?

ಒಕ್ಕೊರಲಿನ ಉತ್ತರ

"ಹೂಂ ಸರ್"

ಮಾಸ್ತರು

"ಸಿವಬಸಿ ನೀ ಹೇಳು ರಾತ್ರಿ ಯಾವುದು ಓದ್ದಿಪ್ಪಾ ?"

ಶಿವಬಸವ ಎದ್ದು ಶ್ರೀಮದ್ಗಾಂಭೀರ್ಯದಿಂದ ಉತ್ತರಿಸುತ್ತಾನೆ:

"ನಿಮ್ಮ ಹೊಸ ಕಾದಂಬರಿ ಸಾರ್"

"ನಿನ್ನ ತಲಿ"

ಎನ್ನುತ್ತಾರೆ ಮಾಸ್ತರರು. ಗೊಳ್ಳನೆ ನಗುವ ಹುಡುಗರನ್ನು ತಾವೂ ಸೇರಿಕೊಳ್ಳುತ್ತಾರೆ."

ಪುರಾಣಿಕರನ್ನು ಕುರಿತು ದಂತಕಥೆಯಾಗಲು ಮೇಲಿನದು ಖಂಡಿತ ಅರ್ಹವಾಗಿದೆ. ಸಾಹಿತಿ ಗುರುವಿನ ಬಗೆಗೆ ಶಿಷ್ಯರು ತೋರಿದ್ದಿರಬಹುದಾದ ಅಭಿಮಾನವನ್ನು ಕುರಿತ ಈ ಕಲ್ಪಿತ ಚಿತ್ರದಲ್ಲಿ ಅಂಥ ಅವಾಸ್ತವತೆಯೇನೂ ನನಗೆ ಕಂಡುಬರುವುದಿಲ್ಲ. ಅವರು ಕುದುರಿಸಿದ ಸಾಹಿತ್ಯಪ್ರೇಮ ಹೀಗೆ ವ್ಯಕ್ತವಾಗಿದ್ದರೆ ಅಚ್ಚರಿಯೇನಿಲ್ಲ. ಅಲ್ಲದೆ ಭರದಿಂದ ಸಾಗಿದ ಪುರಾಣಿಕರ ಸಾಹಿತ್ಯ ಸೇವೆಯ ಗತಿಯನ್ನು ನಿದರ್ಶಿಸುವ ಈ ಚಿತ್ರ ನಿಜವಾಗಿ ಸೊಗಸಾದುದು.

ಅವರು ಹೀಗೆ ಅಖಂಡವಾಗಿ ಮೂವತ್ತಾರು ವರುಷ ಸೇವೆ ಸಲ್ಲಿಸಿ ೧೯೭೧ ಸಪ್ಟಂಬರ ಐದರಂದು ನಿವೃತ್ತರಾದರು; ಅವರು ವೃತ್ತಿಜೀವನದಿಂದ ನಿವೃತ್ತರಾಗಿ ವಿರಾಮವೇತನವನ್ನು ಪಡೆದರು. ಅವರು ಶಿಕ್ಷಕರಾಗಿ ಸೇರಿಕೊಂಡಿದ್ದರು; ಶಿಕ್ಷಕರಾಗಿಯೇ ನಿವೃತ್ತರಾದರು. ಇಷ್ಟು ಸೇವಾ ಅವಧಿಯಲ್ಲಿ ಅವರು ಮುಖ್ಯಾಧ್ಯಾಪಕರಾಗಬಹುದಿತ್ತು. ಅಂಥ ಒಂದೆರಡು ಸಂದರ್ಭಗಳು ಇದ್ದವು. ಆದರೆ ಈ ಶಿಕ್ಷಕ ಸಾಹಿತಿಯಾದುದು; ಮತ್ತೆ ಹೆಸರು ಪಡೆದುದು ತಪ್ಪಾಯಿತೇನೊ! ಆ ನೆವ ಮುಂದೆ ಒಂದು ಮುಖ್ಯಾಧ್ಯಾಪಕ ವೃತ್ತಿ ಇವರನ್ನು ತಲುಪಲಿಲ್ಲವೆಂದರೆ ನಿಜವಾಗಿಯೂ ವ್ಯಸನವಾಗುವುದು. ಆದರೆ ಸ್ವತಃ ಪುರಾಣಿಕರಿಗೆ ಈ ಮಾತಿನ ಬಗೆಗೆ ದುಃಖವಿಲ್ಲ; ಅಸಮಾಧಾನವಿಲ್ಲ; ಅತೃಪ್ತಿಯಿಲ್ಲ; ತಪ್ಪಿ ಕೂಡ ಆ ಮಾತನ್ನು ಅವರು ಎತ್ತುವದಿಲ್ಲ.

ಅವರೂ ಮನುಷ್ಯರೇ ಅಲ್ಲವೆ? ಈ ಹುದ್ದೆಗಾಗಿ ಅವರೂ ಅರ್ಜಿಕೊಟ್ಟಿದ್ದರು. ಆಗ ಊರ ಹಿರಿಯರು "ನೀವು ಖ್ಯಾತಿವಂತರು. ಇಂಥ ಸಣ್ಣಬಡತಿಗಾಗಿ ಏಕೆ ಯತ್ನಿಸುವಿರಿ. ಇದರಿಂದ ಹಿಂತೆಗೆಯಬೇಕು" ಎಂದು ಮಾತು ತೆಗೆದುಕೊಂಡಾಗ ಮಾತ್ರ ಅವರಿಗೆ ತುಂಬ ದುಃಖವಾಯಿತು "ಶಿಕ್ಷಕನಿಗೆ ಜೀವನದಲ್ಲಿ ಒಂದು ಆಕಾಂಕ್ಷೆಯೆಂದರೆ ಮುಖ್ಯಾಧ್ಯಾಪಕರಾಗುವುದು. ಅದನ್ನೇ ಕಸಿದುಕೊಂಡರು" ಎಂದವರು ಮನೆಯವರೆದುರು ದುಃಖೋದ್ಗಾರ ತೆಗೆದರು. ಅಂದು ಒಂದು ದಿನ ಮಾತ್ರ ಅವರ ಕಂಗಳಿಂದ ಬಳಬಳನೆ ನೀರು ಇಳಿದು ಬಂದವು; ಅಂದು ತುಂಬ ಶೋಕಾಕುಲರಾಗಿದ್ದರು. ಮುಂದೆ ಮಾತ್ರ ಎಂದೂತಪ್ಪಿ-ಕೂಡ ಮನೆಯವರೆದುರು ಮಾತ್ರವಲ್ಲ, ಯಾವ ಸ್ನೇಹಿತರು ಪರಿಚಿತರೆದುರು ಈ ಮಾತನ್ನು ಎತ್ತಲಿಲ್ಲ. ಈಗಲೂ ಅವರು ಆ ಕಹಿ ಪ್ರಸಂಗವನ್ನು ಎತ್ತಿ ಹೇಳುವದಿಲ್ಲ. ಕೃಷ್ಣನಾಗಿ ಅಲ್ಲ, ನಂಜುಂಡನಾಗಿ ಆ ಕಹಿಯನ್ನು ನುಂಗಿಕೊಂಡು ಬಾಳುವೆ ನಡೆಸಿದರು. ಅಲ್ಲದೇ ಊರ ಹಿರಿಯರಿಗೆ ಕೊಟ್ಟಮಾತಿನಂತೆ ನಡೆದು ಕೊಂಡು ಬಂದರು. ಗೋಕಾಕದ ಕೀರ್ತಿಪತಾಕೆಯನ್ನು ಎತ್ತಿಹಿಡಿದರು. ಆ ಊರ ಅಭಿಮಾನದಿಂದ ನಿವೃತ್ತಿಯ ನಂತರ ಅಲ್ಲೊಂದು ಮನೆಯಮಾಡಿ ನೆಲೆನಿಂತರು. ತಮ್ಮ ಜೀವನಕ್ಕೆ ಆಸರೆಯಾಗಿ ನಿಂತ, ಸಾಹಿತ್ಯಕ್ಕೆ ಪ್ರೋತ್ಸಾಹಕವಾಗಿ ಪರಿಣಮಿಸಿದ ಗೋಕಾಕನ್ನು ನೆಲೆವೀಡನ್ನಾಗಿ ಮಾಡಿಕೊಂಡಿದ್ದಾರೆ: "ಆಶೀರ್ವಾದ"ದಲ್ಲಿ.

— ೫ —

ಪುರಾಣಿಕರ ಸಾಹಿತ್ಯಸೃಷ್ಟಿ ಪ್ರಾರಂಭವಾದುದು ಅವರು ಇನ್ನು ತುಂಬ ಎಳೆಯ ವಯಸ್ಸಿನವರು ಇರುವಾಗ. ಲೇಖನ ಮತ್ತು ಕವನಗಳಿಂದ ಈ ರಂಗವನ್ನು ಅವರು ಪ್ರವೇಶಿಸಿದರು. ಆಗ ಅವರಿನ್ನೂ ಹಾಯಸ್ಕೂಲಿನ ವಿದ್ಯಾರ್ಥಿ. ಹದಿ-ನಾಲ್ಕು-ಹದಿನೈದು ವರುಷಗಳು ಇದ್ದಿರಬೇಕು. 'ಕನ್ನಡಿಗ'ದಲ್ಲಿ ಅವರ ಮೊದಲ ಲೇಖನ ಪ್ರಕಟವಾಯಿತು. ಮಂಗಳವೇಢೆ ಶ್ರೀನಿವಾಸರಾಯರು ಆ ಲೇಖನದ ಬರವಣಿಗೆ ಮತ್ತು ಶೈಲಿಗಳನ್ನು ತುಂಬ ಮೆಚ್ಚಿಕೊಂಡರು. ಹಲವಾರು ಲೇಖನ-ಗಳೂ, ಜೊತೆಗೆ ಕೆಲವು ಕವನಗಳೂ ಈ ಪತ್ರಿಕೆಯಲ್ಲಿ ಬೆಳಕುಕಂಡವು. ಅವರ ಕಾರ್ಯರಂಗ ವಿಸ್ತರಿಸಿದಂತೆ ಕ್ಷೇತ್ರವೂ ವಿಸ್ತರಿಸಿತು. ವಿಜಾಪುರವು ಅವರಿಗೆ ಪರಿಚಿತ-ವಾಯಿತು. 'ಕರ್ನಾಟಕ ವೈಭವ'ದಲ್ಲಿಯೂ ಕೂಡ ಲೇಖನಗಳನ್ನು ಬರೆಯ-ತೊಡಗಿದರು. ಆಗ ಅವರು ಕಾವ್ಯನಾಮದ ಹುಚ್ಚಿನಿಂದ ಪ್ರೇರಿತರಾಗಿಯೋ ತಾವು ಬರೆಯುತ್ತಿರುವುದು ಹಿರಿಯರಿಗೆ ಸ್ನೇಹಿತರಿಗೆ ಗೊತ್ತಾಗಬಾರದೆಂತಲೋ 'ಪುರಾಣಿಕ ಪುತ್ರ' ಎಂಬ ಹೆಸರಿನಿಂದ ಬರೆಯತೊಡಗಿದ್ದರು. ಒಂದು ಸಂದರ್ಭದಲ್ಲಿ ಅವರು ಕರ್ನಾಟಕ ವೈಭವದಲ್ಲಿ ನಡೆದ ಸಾಹಿತ್ಯಕ ವಿವಾದದಲ್ಲಿ ಮೂರು ತಿಂಗಳಕಾಲ ಭಾಗವಹಿಸಿದ್ದರು, ಎಂದಾಗ ಅವರಲ್ಲಿಯ ಸಾಹಿತ್ಯಪ್ರೇಮ, ವಿವಾದದ ಹುಚ್ಚು

ಎಷ್ಟಿತ್ತು, ಎಷ್ಟು ಪ್ರೋಗ್ರೆಸ್ಸಿನಿಂದ ಅವರು ಈ ಬಗೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಎಂಬುದು ವ್ಯಕ್ತವಾಗುವುದು. ಈಗಲೂ ಅವರು ಇನ್ನೂ ಅಷ್ಟು ಭಾವುಕರಾಗಿ ಪರಿಣಮಿಸಿರಲಿಲ್ಲ; ಸ್ಫೂರ್ತಿಯುತವಾಗಿ ಬರೆವುದು ಪ್ರಾರಂಭವಾಗಿರಲಿಲ್ಲ. ಚರ್ಚೆ–ವಿವಾದಗಳನ್ನು ನಡೆಸುವ ಲೇಖನಗಳನ್ನು ಬರೆಯುವುದೇ ಅವರಿಗೆ ತುಂಬ ಪ್ರಿಯವಾದ ವಿಷಯವಾಗಿತ್ತು. ಈ ಲೇಖನಗಳಲ್ಲಿ ಅವರ ಬುದ್ಧಿವಂತಿಕೆ, ಚಾತುರ್ಯಗಳನ್ನು, ಅಧ್ಯಯನಶೀಲತೆಯನ್ನು ಗುರುತಿಸಬಹುದಾಗಿದ್ದರೂ ಪ್ರತಿಭೆಯನ್ನು ಗುರುತಿಸುವುದು ಕಷ್ಟವಾಗಿತ್ತು. ಅದಕ್ಕಿಂತ ಹೆಚ್ಚಾಗಿ ಇಂಥ ಪ್ರತಿಭೆಯನ್ನು ತೋರಿಸುವ ಅವಕಾಶ ಅವರಿಗೆ ಲಭ್ಯವಾಗಿರಲಿಲ್ಲ. ಬಾಲ್ಯದ ಹುಡುಗಾಟಿಕೆಯ ದಿನಗಳವು. ಆದಕ್ಕಿಂತ ಮುಖ್ಯವಾಗಿ ಮೇಲಾಟದ, ಬರವಣಿಗೆಯಲ್ಲಿ ನಾನು ಮುಂದು ಎಂದು ತೋರುವ ಕಾಲವದು. ಈ ಮೇಲಾಟದಲ್ಲಿ ಪುರಾಣಿಕರು ಎಂದೂ ಹಿಂದೆ ಬಿದ್ದವರಲ್ಲ. ಗುರುಗಳೂ, ಇತರ ಹಿರಿಯರು ಅವರೊಬ್ಬ ಬರೆಹಗಾರರಾಗುವುದು ಖಚಿತ ಎಂಬ ಭರವಸೆಯನ್ನು ಹೊಂದಿದ್ದರು.

ಒಂದು ವರುಷಕಾಲ ಈ ಬಗೆಯ ಲೇಖನಗಳನ್ನು ಬರೆವಲ್ಲಿ ಅವರು ತೃಪ್ತರಾಗುಳಿದರು. ಆದರೆ ಹೃದಯಸ್ಥವಾದ ಪ್ರತಿಭೆ ಹೊರಬರಲು, ಪಸರಿಸಲು ತವಕಿಸುತ್ತಿತ್ತು. ಅದಕ್ಕಾಗಿ ಪುರಾಣಿಕರೂ ಬಹುಕಾಲ ಕಾಯಬೇಕಾಗಿ ಬರಲಿಲ್ಲ; ಅವರ ಮಿತ್ರರೂ ಕಾಯಬೇಕಿರಲಿಲ್ಲ. ಬರೆಯಲು ಪ್ರಾರಂಭವಾಗಿ ಒಂದು ವರುಷ ಕಾಲ ಗತಿಸುವಷ್ಟರಲ್ಲಿ ಅಂಥ ಒಂದು ಸಂದರ್ಭ ಒದಗಿ ಬಂದಿತು. ಅದು ನಿಜವಾಗಿ ಒಂದು ಯೋಗಾಯೋಗ. ಬಾಗಲಕೋಟೆಯಲ್ಲಿ ಶಿಕ್ಷಣ ಮುಂದುವರಿಸಲು ಬಂದವರಿಗೆ ಅಲ್ಲಿಯ ಉದಾರಜೀವಿಯೆನಿಸಿದ ಸಿರಿವಂತರೊಬ್ಬರ ಪರಚಯವಾಗಿ, ವಾರದ ಮನೆಗಳ ತೊಂದರೆ ತಪ್ಪಿ, ಅವರ ಮನೆಯಲ್ಲಿ ನಿಂತರು. ಇವರೇ ಪರ್ವತಿ ಅವರು. ಅವರ ಸೊಸೆ ಹದಿನಾರು ವರುಷದ ಬಾಲೆ. ಪುರಾಣಿಕರನ್ನು ತಮ್ಮನ ವಾತ್ಸಲ್ಯದಿಂದ ಕಾಣುತ್ತಿದ್ದಳು. ಇವರಾದರೂ ಅವಳನ್ನು ಅಕ್ಕನಂತೆ ತುಂಬ ಹಚ್ಚಿಕೊಂಡಿದ್ದರು. ಅವಳ ಗಂಡ ತೀರಿಕೊಂಡಾಗ ಪುರಾಣಿಕರಿಗೆ ದಾರುಣವಾದ ವ್ಯಥೆಯೆನಿಸಿತು. ಈ ಎಳೆಯ ಜೀವ ವೈಧವ್ಯವನ್ನು ಅನುಭವಿಸಬೇಕೆ? ಮನೆಯ ಜನರೆಲ್ಲರೂ ಅವಳನ್ನು ಹೀನಾಯವಾಗಿ ಕಾಣಬೇಕೆ? ಇದೆಂಥ ದುರ್ದೈವ ಅವಳದು. ಅವರದು ತುಂಬ ಅಂತಃಕರುಣದ ಸ್ವಭಾವ. ಅವರು ಕರಗಿ ನೀರಾದರು. ಮರುಕದಿಂದ ಅವರು ಏನನ್ನೂ ಮಾತನಾಡಲಾರದಾದರು. ಅವರ ಭಾವುಕತೆ ಅವರನ್ನು ಇನ್ನಷ್ಟು ಮೌನಿಯಾಗುವಂತೆ ಮಾಡಿತು. ಹುದುಗಲಾರದ ದುಃಖವನ್ನು ಎಲ್ಲಿ ಅವರು ಹುಗಿದಿರಿಸಿಕೊಳ್ಳಬೇಕು? ಈ ಎಳೆಯ ಜೀವಕ್ಕೆ ಅದು ಸಾಧ್ಯವಾಗಲಿಲ್ಲ. ಪರಿಣಾಮವಾಗಿ ಸ್ಫೂರ್ತಿಯಸೆಲೆ ಆಗ ಚಿಮ್ಮಿಬಂದಿತು. ದುಃಖದ ಭಾರದಿಂದ ಬೆಂದ ಹೃದಯ ಅವರಲ್ಲಿ ಸ್ಪಂದನವುಂಟುಮಾಡಿತು. ಹೊಸ ಪ್ರಜ್ಞೆಯೊಂದು ಅವರಲ್ಲಿ ಪ್ರಾದುರ್ಭವಿಸಿತು. ಸಮಾಜದಲ್ಲಿ ಈ ಬಗೆಯ ತೊಳಲಾಟ ಕಂಡು ಕಸಿ-

ವಿಸಿಗೊಂಡವರು ಅವರು. ಈ ಪರಿಸರದಲ್ಲಿ ಕವಿವಾಣಿ ಅಲ್ಲಿ ಹೊರಹೊಮ್ಮಿತು. ಸುಪ್ತವಾದ ಪ್ರತಿಭೆ ವಿಕಾಸಗೊಂಡಿತು. ಪುರಾಣಿಕರು ಹೀಗೆ ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಕವಿಯಾಗಿ ಕಾಣಿಸಿಕೊಂಡರು. ಆಗ ಅವರಿಂದ ಬಂದ ಈ ಕವನ ಎಂಥವರ ಅಂತಃಕರಣವನ್ನು ಅಲುಗಾಡಿಸುವಂತೆ, ಎಂಥ ಕಟುಕರ ಕರುಳೂ ಕಿತ್ತುಬರುವಂತೆ ರೂಪುಗೊಂಡಿತ್ತು ಎಂಬುದನ್ನು ಗಮನಿಸಿದಾಗ ಯಾರಿಗೂ ತುಂಬ ಅಚ್ಚರಿಯಾಗುವುದು.

ಅವಳ ಅಳಲನ್ನು ಕಂಡು ಅವರ ದುಃಖ ಉಮ್ಮಳಿಸಿ ಬಂದಾಗ ಮೂಡಿ ಬಂದ ಕವನದ ಕೆಲ ಪಂಕ್ತಿಗಳು ಗಮನಾರ್ಹವಾಗಿವೆ.

"ಸುಡು ಸುಡಲೆ! ಸುಡು ಜೀವ
ಸುಡುಗಾಡು ಸೇರೇಳು
ಹುಡುಕದಿರು ಸಂತಸವ ಬಾಳಿನಲ್ಲಿ
ತಡೆಯಿಹುದು ನಿನಗಿಹುದು ಧರ್ಮದಲ್ಲಿ
ಒಡೆಯನಿರೆ ಮರೆಯಾಗಿ
ಹಡೆದವರು ಹೊರತಾಗಿ
ಕಡೆಗಾಲವೆಂದೆನುತ ಕೇಳುತಿಹರು
ಬಿಡುಗಡೆಯ ನೆನೆಯಂದೆ ಕೇಳುತಿಹರು."

ಈ 'ಬೆಂದೊಡಲ ಬಿಸಿಯುಸಿರು' ಕವನದಲ್ಲಿ ಮೂಡಿನಿಂತ ಈ ಭಾವನೆಗಳು ಮುಂದೆ ಅವರ ಜೀವನದುದ್ದಕ್ಕೂ ಹೊರಹೊಮ್ಮತೊಡಗಿವೆ.

ಇದೇ ಸಂದರ್ಭದಲ್ಲಿ ಅವರು ವಿಧವೆಯನ್ನು ಸಮಾಜವು ನಡೆಸಿಕೊಳ್ಳುತ್ತಿರುವ ರೀತಿಯನ್ನು ಕಂಡು ಸಿಡಿದೆದ್ದು 'ಗೋಳು' ಎಂಬ ಇನ್ನೊಂದು ಕವನವನ್ನು ಬರೆದರು.

"ಹೆಣ್ಣು ಬಾಳಿನ ಕಹಿಯ
ನಂಜೇರಿದವಳು
ಪೆಣ್ಣೊಡಲ ಪರಿತಾಪ
ದಿಂದ ಬೆಂದವಳು"

"ಬಾಳುದಯ ಕಾಣುತಲೆ
ಬದುಕಳಿದು ಹೋಯ್ತು.
ಕಾಲಮದು ದಾಡೆಯಲಿ
ಸೊಗ ಸಿಡಿದು ಬಿತ್ತು."

ಎಂದು ತಾವು ಹೇಳಿ, ವಿಧವೆಯ ಬಾಯಿಯಿಂದ ಅವಳ ಗೋಳಿನ ಕಥೆಯನ್ನು ಹೇಳಿಸುತ್ತಾರೆ.

"ಗೋಳು ಗೋಳಿಲಿ ಗೋಳು
ಗೋಳಿಲ್ಲ ಬಾಳು
ಹೋಳು ಹೋಳಾಯಿತವ
ಸಿಡಿದೆನ್ನ ಬಾಳು."

ಹೀಗೆ ಅಳಲನ್ನು ತೋಡಿಕೊಂಡು ಜನರನ್ನು ಕೇಳುತ್ತಾಳೆ:

"ಆವ ಕವಿ ಬಣ್ಣಿಪನೊ
ಎನ್ನಳಲ ಝುಳವ."

ಈಗ ಅವಳಿಗೆ ತನ್ನ ಹಿಂದಿನ ಜೀವನವೆಲ್ಲ ನೆನಪಾಗುತ್ತದೆ.

"ಅಯ್ಯಯ್ಯೊ! ಅವರೆಲ್ಲಿ?
—ಸುಡುಗಾಡಿನಲ್ಲಿ
ಅವರೊಡನೆ ನಾನೆಷ್ಟು
ಸವಿಗನಸ ಹೆಣೆದೆ.
ಭವಿತವ್ಯವನಿಯದೆಲೆ
ಸಂಭ್ರಮದಿ ಕುಣಿದೆ
....
ಯಾರೊಡನೆ ಇನ್ನು ಮೇ-
ಲಾರೊಡನೆ ನಾನು
ಆ ಸುಖವ ಪಡೆವೆನೆಲೆ
ಬಹುಪಾಪಿ ನಾನು."

ಎಂದು ಮರಗುವಳು. ಅವರ ಕಾವ್ಯಶಕ್ತಿಯನ್ನು, ಪ್ರತಿಭೆಯನ್ನು ಗುರುತಿಸಲು ಈ ಕವನ ಪಂಕ್ತಿಗಳು ಸಾಕು ಎನಿಸುತ್ತದೆ. ಕಿರಿವಯಸ್ಸಿನಲ್ಲಿ ಅವರು ಈ ಪ್ರತಿಭೆಯನ್ನು ಮೆರೆದರು, ಶಕ್ತಿಯನ್ನು ತೋರಿದರು, ಸತ್ವವನ್ನು ಬೀರಿದರು ಎಂಬುದನ್ನು ಇಲ್ಲಿ ನೆನೆಯಲೇಬೇಕು.

ಈ ಎರಡೂ ಕವನಗಳು 'ಜಯಕರ್ನಾಟಕ'ದಲ್ಲಿ 'ಪೌರಾಣಿಕ ಪುತ್ರ' ಹೆಸರಿನಿಂದ ಪ್ರಕಟವಾದವು. ಅಲ್ಲಿ ಪ್ರಕಟವಾದದ್ದನ್ನು ಗಮನಿಸಿದರೆ ಈ ಕಾವ್ಯಶಕ್ತಿಯ ಗುಣದ ಬಗೆಗೆ ಹಿರಿಯರಲ್ಲಿ ಆಗಲೇ ಮೆಚ್ಚಿಗೆ ಕಂಡುಬಂದಿತ್ತೆಂಬುದು ಸ್ಪಷ್ಟವಾಗುವುದು. ಶಿಕ್ಷಕರು, ಅನೇಕ ಹಿರಿಯರು ಈ ಎಳೆಯ ಕವಿಯನ್ನು ಪ್ರೋತ್ಸಾಹಿಸಿದರು. ಇದು ಪುರಾಣಿಕರಿಗೆ ತಮ್ಮಲ್ಲಿ ಹುದುಗಿದ ಈ ಶಕ್ತಿಯನ್ನು ಅರಿತುಕೊಳ್ಳಲು ಮತ್ತು ಅದನ್ನು ಬೆಳಕಿಗೆ ತರಲು ತುಂಬ ಪ್ರಯೋಜನಕಾರಿಯಾಗಿ ಪರಿಣಮಿಸಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಪ್ರಸಂಗವು ಅವರ

ಜೀವನದಲ್ಲಿ ಅತ್ಯಂತ ಮಹತ್ವದ್ದಾಗಿ ಪರಿಣಮಿಸಿತು. ಅದು ಅವರ ಕಾವ್ಯ ಧಾರೆಯನ್ನು ಹೊರತಂದರೆ ಅವರಿಗೊಂದು ಜೀವನದೃಷ್ಟಿಯನ್ನು ಅದು ಕರುಣಿಸಿತು. ಸ್ತ್ರೀಯರ ಜೀವನದ ಬಗೆಗೆ ಅವರಲ್ಲಿ ಒಂದು ಮಾರ್ದವತೆ ಆಗ ಮೂಡಿತು. ಮುಂದೆ ಅವರು ಕಾದಂಬರಿಗಳನ್ನು ಬರೆಯಲಾರಂಭಿಸಿದಾಗ ಸ್ತ್ರೀ ಜೀವನದ ಮಾರ್ದವತೆಯನ್ನು ತಮ್ಮ ಈ ಕಾದಂಬರಿಗಳಲ್ಲಿ ಮೂಡಿಸಲು ಚಿತ್ರಿಸಲು ಅದು ಕಾರಣವಾಗಿ ಪರಿಣಮಿಸಿತು. ಅಂತೇ ಪುರಾಣಿಕರು ಈ ಪ್ರಸಂಗವನ್ನು ಆಗಾಗ ಇನ್ನೂ ನೆನೆಯುವರು; ಭಾವಪೂರ್ಣರಾಗಿ ನಿಲ್ಲುವರು. ಹೀಗೆ ಪ್ರಾರಂಭವಾದ ಅವರ ಕಾವ್ಯವಾಹಿನಿ ಆದೀಗ ತಲೆದೋರಿದ್ದ ರಾಷ್ಟ್ರೀಯ ಹೋರಾಟ ಕಾಲದಲ್ಲಿ ಧಿಮ್ಮಿಕ್ಕೆಂದು ಬಹು ರಭಸದಿಂದ ಪ್ರವಹಿಸಿತು. ಹಲವಾರು ವೀರಗವನಗಳನ್ನು ಅವರು ಆಗಲೇ ಬರೆದರು. ಕನ್ನಡ ಸಾಹಿತ್ಯದ ಸುಪ್ತ್ಯವದಿಂದ ಅವರು ಆಗ ಪ್ರತ್ಯಕ್ಷವಾಗಿ ಹೋರಾಟದಲ್ಲಿ ತೊಡಗಲಿಲ್ಲ; ರಾಜಕಾರಣಿಯಾಗಲಿಲ್ಲ.

ಕಾಲೇಜು ಶಿಕ್ಷಣಕ್ಕಾಗಿ ಅವರು ಧಾರವಾಡಕ್ಕೆ ಬಂದರು. ಅಲ್ಲಿಯ ಅವರ ವಾಸ್ತವ್ಯ ಈ ಸಾಹಿತ್ಯ ಜೀವನಕ್ಕೆ ಪ್ರೋಷಕವಾಗಿ ಪರಿಣಮಿಸಿತು. ಧಾರವಾಡದಲ್ಲಿ ಜಯಕರ್ನಾಟಕದ ಗೆಳೆಯರ ಗುಂಪು ಸಾಧನಕೇರಿಯ ಸಾಹಿತ್ಯದ ವಾತಾವರಣ ಅವರನ್ನು ಹುರಿದುಂಬಿಸಿತು. ಹಿರಿಯ ಕವಿಗಳ ಆದರ್ಶವನ್ನು ಅವರು ಹೊತ್ತು ನಿಂತರು. "ಸಾಹಿತ್ಯದಲ್ಲಿ ಕವಿಗೆ ಹಿರಿದಾದ ಸ್ಥಾನವಿದೆ; ಕಾವ್ಯಕ್ಕೆ ತುಂಬ ಅವಕಾಶವಿದೆ. ಆದ್ದರಿಂದ ನಾನು ಕವನಗಳನ್ನು ಬರೆಯಬೇಕು. ಕವಿಯೆನಿಸಿ ಕೊಳ್ಳಬೇಕು: ಹೆಸರು ಮಾಡಿಕೊಳ್ಳಬೇಕು" ಎಂದು ಪುರಾಣಿಕರಿಗೆ ಆಗ ಅನ್ನಿಸಿದ್ದರಲ್ಲಿ ತಪ್ಪೇನೂ ಇರಲಿಲ್ಲ. ಕವಿ ಮತ್ತು ಕಾವ್ಯಕ್ಕೆ ತುಂಬ ಮನ್ನಣೆ ಆದೀಗ ದೊರೆಯತೊಡಗಿದ್ದರಿಂದ ಅವರಿಗೂ ಹಾಗೆ ಅನ್ನಿಸಿದ್ದು ಸ್ವಾಭಾವಿಕ. ಅದಕ್ಕೆ ತಕ್ಕಂತೆ ತುಂಬ ಭಾವುಕರಾದ ಪುರಾಣಿಕರು ಸ್ವಭಾವತಃ ಕವಿಗಳೇ ಆಗಿಬಿಟ್ಟಿದ್ದರು. ಅದು ಈಗ ಸುವ್ಯಕ್ತವಾಗಬೇಕಿತ್ತು; ಪ್ರಕಟವಾಗಿ ತೋರಬರಬೇಕಾಗಿತ್ತು. ಈಗ ಅದಕ್ಕೆ ಕಾಲ ಕೂಡಿ ಬಂದಿತ್ತು. ಪುರಾಣಿಕರು ಹೀಗೆ ಹಿರಿಯರ ಹರಕೆ ಹೊತ್ತು ಕವಿಗಳಾದರು. ಆಗಲೇ ಅವರು ವರಕವಿ ಬೇಂದ್ರೆಯವರ ನೆಚ್ಚಿನ ಶಿಷ್ಯರಾಗಿದ್ದರೆಂಬ ಮಾತನ್ನು ಇಲ್ಲಿ ನೆನೆದರೆ ಸಾಕು. ಕವಿ ಪುರಾಣಿಕರ ಒಂದು ಮನೋಹರವಾದ ಚಿತ್ರವನ್ನು ಅವರ ಪ್ರೀತಿಯ ಸ್ನೇಹಿತರೂ ಸಹಾಧ್ಯಾಯಿಗಳೂ ಆಗಿರುವ, ಸ್ವತಃ ಹೆಸರಾಂತ ಸಾಹಿತಿಯೆನಿಸಿರುವ ಎನ್ಕೆ ಕೊಡುತ್ತಾರೆ: "ಹೆಣ್ಣಿನ ಕಣ್ಣೋಟಿಗೆ ಕುದಿದ ಕವಿ ಹೃದಯ. ಚದುರಿದ ತಲೆ! ಕವಿಯೆಂದು ಎತ್ತಿ ತೋರಿಸುವ ವೇಷಭೂಷ! ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಕೃಷ್ಣಮೂರ್ತಿ ಪುರಾಣಿಕರ ಆ ಆವೇಶಪೂರ್ಣವಾದ ಕಾವ್ಯಗಾನ ಇನ್ನೂ ಪ್ರತಿಧ್ವನಿಸಿದಂತಾಗುತ್ತದೆ." ಧಾರವಾಡದ ನಗರಸಭೆಯ ಆಟ್ಟದ ಮೇಲೂ ಅದೇ ಆವೇಶದ ಕಾವ್ಯಗಾಯನ:

ಏತಕೆ ಸುಮ್ಮನೆ ಬಿದ್ದಿಹೆ ಜೀವವೇ
ಹರುಷದ ಹಾಡನು ಹಾಡೇಳು........

ಅಂದು ಪ್ರಾರಂಭವಾದ ಅವರ ಈ ಆವೇಶ ಪೂರ್ಣವಾದ ಕಾವ್ಯಗಾಯನ ಎಂದೆಂದಿಗೂ ಆವೇಶಪೂರ್ಣವಾಗಿ ಸಾಗಿಕೊಂಡು ಬಂದಿರುವುದು. ಅಂಥ ಅನೇಕ ಪ್ರಸಂಗಗಳು ನನ್ನ ಮಧುರಸ್ಮೃತಿಯಲ್ಲಿ ಉಳಿದುಕೊಂಡಿವೆ. ಒಂದು ಪ್ರಸಂಗ ವನ್ನಂತೂ ನಾನು ಎಂದಿಗೂ ಮರೆಯಲಾರೆ. ಆಗ ಅವರು ಕವಿಗಿಂತ ಕಾದಂಬರಿ ಕಾರರೆಂದು ತುಂಬ ಹೆಸರಾದ ಕಾಲ. ಕಾರವಾರದಲ್ಲಿ ಸಾಹಿತ್ಯ ಸಮ್ಮೇಲನ, ಕವಿಗೋಷ್ಠಿಯ ಸಂದರ್ಭ. ಭಾರತೀಯರಲ್ಲಿ ಆವೇಶ ತುಂಬುವಂತೆ ಅವರನ್ನು ಪ್ರಚೋದಿಸುವಂತೆ ವೀರರಸಪ್ರಧಾನವಾದ ಗೀತವನ್ನು ಅವರು ಹಾಡುವಾಗ ಅವರಲ್ಲಿಯೇ ಆವೇಶತುಂಬಿಬಂದಿತು. ಸಭೆಗೆ ಸಭೆಯೇ ಆಗ ಆವೇಶಪೂಣವಾಗಿತ್ತು. ಈ ಸಮಾರಂಭಕ್ಕೆ ಬಂದಿದ್ದ ಆಗಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ ನವರು 'ಶ್ರೀ ಕೃಷ್ಣಮೂರ್ತಿ ಪುರಾಣಿಕರ ಈ ಕವಿತೆಯನ್ನು ಕೇಳಿದರೆ ಈ ವೃದ್ಧಾ-ಪ್ಯದಲ್ಲೂ ರಕ್ತ ಬಿಸಿಯಾಗುವುದು' ಎಂದು ಉದ್ಗರಿಸಿದರು. ಇಂಥ ಸ್ಫುರಣ ನೀಡುವ, ಆವೇಶತುಂಬುವ ಕವಿವಾಣಿ ಅದೆಷ್ಟು ಧನ್ಯ! ಕವಿ ಅದೆಂತು ಧನ್ಯ! ನನಗಂತೂ ಆ ದೃಶ್ಯವಿನ್ನೂ ಕಣ್ಮುಂದೆ ಕಟ್ಟಿದಂತಿದೆ. ಅವರ ಹಾವಭಾವ ಮರೆಯ ಬೇಕೆಂದರೂ ಮರೆಯಲಾರದಾಗಿವೆ. ಆ ವೀರವಾಣಿ ಇನ್ನೂ ಕಿವಿಯಲ್ಲಿ ನಿನದಿಸುವಂತೆ ಭಾಸವಾಗುತ್ತಿದೆ.

ಎಳೆಯವಯಸ್ಸಿನಲ್ಲಿಯೇ ಪುರಾಣಿಕರು ತೋರಿದ ಈ ಪ್ರತಿಭೆಯನ್ನು ಆ ಕಾಲದ ಅನೇಕ ಹಿರಿಯರು ಮೆಚ್ಚಿಕೊಂಡರು. ಅವರಲ್ಲಿ ಮುಖ್ಯರಾದವರು ದಿ. ಮುದವೀಡು ಕೃಷ್ಣರಾಯರು ಮತ್ತು ದಿ. ಗರೂಡ ಸದಾಶಿವರಾಯರು. ಈ ಇಬ್ಬರೂ ಹಿರಿಯರು ಆಗ ತುಂಬ ಹೆಸರಾದವರು. ಒಬ್ಬರು ಕವಿ ಪತ್ರಿಕೋದ್ಯಮಿ, ರಾಷ್ಟ್ರಭಕ್ತರಾಗಿ ಮೆರೆದಿದ್ದರೆ ಇನ್ನೊಬ್ಬರು ಸಾಹಿತಿ ಮತ್ತು ನಾಟಕಕಾರರು; ಅಲ್ಲದೇ ರಂಗಭೂಮಿಯನ್ನು ಬೆಳಗಿದವರು. ಇವರಿಬ್ಬರೂ ಪುರಾಣಿಕರ ಕವನ-ಗಳನ್ನು ಓದಿಸಿ ಕೇಳಿ ಬೆನ್ನು ಚಪ್ಪರಿಸಿದರು. ಈ ಹಿರಿಯರ ಹರಕೆ ಅವರಿಗೆ ರಕ್ಷಾಕ ವಚವಾಗಿ ಪರಿಣಮಿಸಿತು. ಕಾಲೇಜ ದಿನಗಳಲ್ಲಿ ಮತ್ತೆ ಮುಂದೆ ಈ ಮಾತನ್ನು ಅವರು ಯಾವಾಗಲೂ ನೆನೆದುಕೊಳ್ಳುತ್ತಿದ್ದರು. ಈಗಲೂ ಪ್ರಸಂಗಬಂದಾಗ ಈ ಮಾತನ್ನು ಒಳ್ಳೇ ಹುರುಪಿನಿಂದಲೇ ಹೇಳುತ್ತಾರೆ. ಅದೇ ರೀತಿ ಅವರು ಬೇಂದ್ರೆ-ಯವರಿಂದಲೂ ಪ್ರಭಾವಿತರಾದರು. ಅವರಿಂದಲೂ ತುಂಬ ಮೆಚ್ಚಿಕೆಯ ಮಾತು-ಗಳನ್ನು ಪಡೆದರು. ಅವರಿಂದ ಮೆಚ್ಚಿಕೆ ಪಡೆದುದು ಪುರಾಣಿಕರಿಗೆ ಇಮ್ಮಡಿ ಬಲ ನೀಡಿದಂತೆನಿಸಿತು.

ಈ ಸಂದರ್ಭದಲ್ಲಿ, ೧೯೩೦ರ ಹೊತ್ತಿಗೆ ಇರಬೇಕು, ಅವರು ಕುವೆಂಪು ಅವರ

ಕಾವ್ಯದಿಂದ ಪ್ರಭಾವಿತರಾದರು. ಕಿಶೋರ ಚಂದ್ರವಾಣಿ ಅವರ ಕಿವಿಗಳಲ್ಲಿ ನಿನದಿಸ ತೊಡಗಿತ್ತು. ಮುಖ್ಯವಾಗಿ ಅವರ ಸರಳರಗಳೆಯ ನಾಟಕ ಜಲಗಾರ ಇವರಿಗೆ ತುಂಬ ಹಿಡಿಸಿತ್ತು. ಅವರ ಮೇಲಿನ ಮೋಹ ಎಷ್ಟಿತ್ತೆಂದರೆ ಪುರಾಣಿಕರು ಅನೇಕ ಸಾರ್ವಜನಿಕ ಸಮಾರಂಭಗಳಲ್ಲಿ 'ಜಲಗಾರ'ವನ್ನು ಭಾವಪೂರ್ಣವಾಗಿ 'ವಾಚನ' ಮಾಡಿದರು. ತಮ್ಮಂತೆ ಇತರರೂ ಅದನ್ನು ಮನಸಾರೆ ಮೆಚ್ಚಿಕೊಳ್ಳುವಂತೆ ಮಾಡಿದರು. ಅದರ ಜೊತೆಗೆ ಅವರನ್ನು ಇನ್ನೂ ಒಂದು ವಿಚಾರ ಕಾಡತೊಡಗಿತು. "ನಾನೂ ಇವರಂತೆ ಈ ಬಗೆಯಲ್ಲಿ ಸರಳರಗಳೆಯ ನಾಟಕ ಏಕೆ ಬರೆಯಬಾರದು?" ಎಂದು ಅವರಿಗೆ ಅನಿಸತೊಡಗಿತು. ಕಾಲೇಜದಲ್ಲಿರುವಾಗಲೇ ಅವರು ಇಂಥದೊಂದು ರಗಳೆಯ ನಾಟಕವನ್ನು ರೂಪಿಸಿದರು. ಹೀಗೆ ೧೯೩೩ರಷ್ಟು ಪೂರ್ವದಲ್ಲಿಯೇ 'ಮಗನ ಗೆಲವು' ಹೊರಬಂದಿತು. ಅದಕ್ಕಿಂತ ಮಿಗಿಲಾಗಿ ಅದು ಆಗ ತುಂಬ ಖ್ಯಾತವಾಗಿದ್ದ ಮಾಸಪತ್ರಿಕೆ 'ಜಯಕರ್ನಾಟಕ'ದಲ್ಲಿ ಪ್ರಕಟವಾಯಿತು ಕೂಡ. ಪುರಾಣಿಕರಂತೆಯೇ ಅವರ ಆತ್ಮೀಯ ಸ್ನೇಹಿತರಿಗೂ ಇದು ತುಂಬ ಸಂತಸವನ್ನು ತಂದಿತು. ಅದೇಕೆ ಪುರಾಣಿಕರ ಗುರುಗಳಾದ ದಿ. ಅ. ತು ಸಾಸನೂರರು ಇದನ್ನು ತುಂಬ ಮೆಚ್ಚಿಕೊಂಡು ಇಡೀ ವರ್ಗದಲ್ಲಿಯೇ ಅದನ್ನು ಬಣ್ಣಿಸಿ ಹೇಳಿದರು. ಪುರಾಣಿಕರ ಸಾಹಿತ್ಯ ಜೀವನದಲ್ಲಿ ಇದೊಂದು ಮೈಲಿಗಲ್ಲಾಗಿ ಪರಿಣಮಿಸಿತು. ವಿದ್ಯಾರ್ಥಿಗಳಲ್ಲಿ ಇವರ ಹೆಸರು ಪರಿಚಿತವಾದಂತೆ ಹಿರಿಯ ಸಾಹಿತಿಗಳಿಗೂ ಈ ಪ್ರತಿಭೆಯ ಪರಿಚಯವಾಯಿತು. ಇದು ಅವರಿಗೆ ಒಂದು ಸ್ಫೂರ್ತಿಯಾಗಿ ಪರಿಣಮಿಸಿತು. ಇದು ಬರೆದ ನಂತರ ಅವರು ಮತ್ತೊಂದು ಸರಳರಗಳೆಯ ನಾಟಕವನ್ನು ಬರೆದರು. ಅದೇ ಅವರಿಗೆ ಕರ್ನಾಟಕದಲ್ಲೆಲ್ಲ ಹೆಸರು ತಂದುಕೊಟ್ಟ 'ಸೈರೇಂಧ್ರಿ'. ಕಾಲೇಜದಲ್ಲಿರುವಾಗಲೇ ಇದನ್ನು ಕೂಡ ರೂಪಿಸಿದ್ದರು. ಆದರೆ ಪ್ರಕಟವಾದುದು ಸ್ವಲ್ಪ ತಡವಾಗಿ, ೧೯೪೦ರಲ್ಲಿ. 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟವಾಯಿತು. ಇದನ್ನು ತುಂಬ ಮೆಚ್ಚಿಕೊಂಡವರು ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳು ಮತ್ತು ಕನ್ನಡದ ಹಿರಿಯ ಕವಿಗಳಲ್ಲೊಬ್ಬರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು. ವೀರರಸದ ಈ ಗೀತನಾಟಕ ತುಂಬ ಸರಳವಾಗಿದ್ದು ಸಾಮಾನ್ಯ ಓದುಗನಿಗೂ ಸರಳವಾಗಿ ಅರ್ಥವಾಗುವಂತಿರುವುದು ಅದರ ಒಂದು ವೈಶಿಷ್ಟ್ಯವಾಗಿರುವುದು. ಪ್ರಾರಂಭದಲ್ಲಿ ಶ್ರೀ ಕೃಷ್ಣಮೂರ್ತಿ ಪುರಾಣಿಕರು ಈ ಕಾವ್ಯವನ್ನು ಸ್ವತಃ ತಾವೇ ಹಾಡಿ ತೋರಿಸಿದ್ದು ಉಂಟು. ಹಾವಭಾವಪೂರ್ಣವಾಗಿ ಅವರು ಹಾಡುವಾಗ ಅದರ ಸೊಗಸು ಇನ್ನೂ ಹೆಚ್ಚುತ್ತಿತ್ತು. ಶ್ರೋತೃಗಳು ಒಳ್ಳೇ ಮಂತ್ರಮುಗ್ಧರಾಗಿ ಅದನ್ನು ಕೇಳುತ್ತಿದ್ದರು. ಅದೇಕೆ ಹಲವಾರು ಉತ್ಸಾಹಿ ನಾಟ್ಯವಿಲಾಸಿಗಳು ಈ ರಗಳೆ ನಾಟಕವನ್ನು ರಂಗಭೂಮಿಯ ಮೇಲೆ ಕೂಡ ಪ್ರಯೋಗಿಸಿದರು. ಅಲ್ಲಿಯೂ ಕೂಡ ಅದು ತುಂಬ ಯಶಸ್ವಿಯಾಯಿತು. ನಾನು ಭಾಗವಹಿಸಿದ್ದ ಒಂದು ನಾಡಹಬ್ಬದಲ್ಲಿ ಈ ಗೀತನಾಟಕವನ್ನು ಹೃದಯಂಗಮವಾಗಿ

ಅಭಿನಯಿಸಿದ್ದನ್ನು ಕಂಡೆ. ಅದು ಪ್ರೇಕ್ಷಕರಿಂದ ತುಂಬ ಮೆಚ್ಚುಗೆಯನ್ನು ಪಡೆಯಿತು. ಈ ಗೀತನಾಟಕ ಸ್ವತಃ ಪುರಾಣಿಕರಿಗೂ ತುಂಬ ತೃಪ್ತಿಯನ್ನು ನೀಡಿದೆಯೆಂದ ಬಳಿಕ ಅದರ ಯಶಸ್ವಿತೆಯ ಬಗೆಗೆ ಹೆಚ್ಚು ಹೇಳುವುದು ಅವಶ್ಯವೇ ಇಲ್ಲ. ಈಗಲೂ ಪುರಾಣಿಕರಿಗೆ, ಇಂಥ ಒಂದು ಪ್ರಯೋಗವನ್ನು ಉತ್ತರ ಕರ್ನಾಟಕದಲ್ಲಿ ತಾವು ಮೊದಲಬಾರಿಗೆ ಕೈಕೊಂಡು ಯಶಗಳಿಸಿದೆವಲ್ಲ ಎಂಬ ಸಮಾಧಾನವಿದೆ. ಅವರಿಗೆ ಕೇವಲ ತೃಪ್ತಿ ಸಮಾಧಾನಗಳಿದ್ದರೆ ಓದುಗರಿಗೆ, ವಿಮರ್ಶಕರಿಗೆ ಅದೊಂದು ಅಭಿಮಾನದ ಸಂಗತಿಯೂ ಆಗಿರುವುದು.

ಕಾಲೇಜದಲ್ಲಿರುವಾಗಲೇ ಅವರು ಸಾಹಿತ್ಯದ ಇನ್ನೊಂದುಪ್ರಕಾರವಾದ ಕಥಾ ಸಾಹಿತ್ಯದಲ್ಲಿಯೂ ಬರವಣಿಗೆ ನಡೆಸಿದ್ದರು. 'ದೇವರ ಹೆಸರಿನಲ್ಲಿ' ಎಂಬ ಒಂದು ಕಥೆಯನ್ನು ಬರೆದು ಆಗ ಪ್ರಸಿದ್ಧ ಕಥಾ ಮಾಸಪತ್ರಿಕೆಯೆನಿಸಿದ್ದ 'ಕಥಾಂಜಲಿ' ಪತ್ರಿಕೆಗೆ ಅವರು ಕಳಿಸಿದ್ದರು. ಅ. ನ. ಕೃಷ್ಣರಾಯರು ಈ ಪತ್ರಿಕೆಯ ಸಂಪಾದ-ಕರು. ಅವರು ಅದನ್ನು ಮೆಚ್ಚಿಕೊಂಡು ಪ್ರಕಟಿಸಿದ್ದರು. ಆದರೆ ಅನೇಕರಿಗೆ ಅದು ಕೃಷ್ಣಮೂರ್ತಿ ಪುರಾಣಿಕರದೆಂದು ಗೊತ್ತಿರಲಿಲ್ಲ. ಅವರಾಗ ಪಿ. ಟಿ. ಕೃಷ್ಣರಾವ್ ಎಂಬ ಹೆಸರಿನಿಂದ ಅದನ್ನು ಕಳಿಸಿದ್ದರು. ಹಿಂದಿನ ಕಾವ್ಯನಾಮವನ್ನು ಇಲ್ಲಿ ಬಳಸಿ ಕೊಂಡಿರಲಿಲ್ಲ. ಅದಕ್ಕೆ ಕಾರಣವೂ ಉಂಟು. ಬೆಂಗಳೂರಿನಿಂದ ಈ ಪತ್ರಿಕೆ ಪ್ರಕಟ ನಾಗುತ್ತಿತ್ತು. ಅದರಲ್ಲಿ ಮೈಸೂರಿನವರಿಗೆ ಹೆಚ್ಚು ಪ್ರಾಶಸ್ತ್ಯ ದೊರೆಯಬಹುದೆಂದು ಶ್ರೀ ಪುರಾಣಿಕರ ತಿಳುವಳಿಕೆ. ತಮ್ಮ ಹೆಸರು ಮೈಸೂರಿನವನಂತೆ ಕಾಣಬೇಕು; ಆಗ ತಮ್ಮ ಕಥೆ ಸುಲಭವಾಗಿ ಪ್ರಕಟವಾಗುವದು ಎಂದು ಇವರು ಬಗೆದರು. ಆ ರೀತಿ ಹೆಸರನ್ನು ಇರಿಸಿಕೊಂಡು ಕಥೆ ಕಳಿಸಿದ್ದರು. ಪಾಪ ಅವರಿಗೇನು ಗೊತ್ತು; ಅ. ನ. ಕೃಷ್ಣರಾಯರು ಇಂಥ ಸಂಕುಚಿತ ಮನೋಭಾವದವರಲ್ಲ; ಇದನ್ನು ಮೀರಿ ನಿಂತ ವರು; ಉತ್ತಮವಾದುದನ್ನು ಅದು ಯಾರದೇ ಇರಲಿ, ಎಲ್ಲಿಯವೇ ಇರಲಿ, ಅವರು ನಿಶ್ಚಿತವಾಗಿ ಪ್ರಕಟಿಸುತ್ತಾರೆಂದು. ಈ ಕಥೆ ಪ್ರಕಟವಾದ ಕೆಲದಿನಗಳ ನಂತರ ಅ.ನ. ಕೃಷ್ಣರಾಯರು ಧಾರವಾಡಕ್ಕೆ ಬಂದರು. ಧಾರವಾಡದಲ್ಲಿ ಅವರು ಶಿವಲಿಂಗಯ್ಯ ನವರ ಅತಿಥಿಗಳಾಗಿ ಉಳಿಯುತ್ತಿದ್ದರು. ಪುರಾಣಿಕರ ಪರಿಚಯ ಶಿವಲಿಂಗಯ್ಯ ನವರಿಗಿದ್ದಿತು. ಅವರು ಪುರಾಣಿಕರನ್ನು ಮನೆಗೆ ಕರೆದು ಅ. ನ. ಕೃಷ್ಣರಾಯರ ಪರಿಚಯ ಮಾಡಿಕೊಟ್ಟರು; ಇವರೊಬ್ಬರು ಉದಯೋನ್ಮುಖ ಕವಿಯೆಂದೂ ಹೇಳಿದರು. ಪುರಾಣಿಕರು ತಮ್ಮ ಕಥೆ ಕಥಾಂಜಲಿಯಲ್ಲಿ ಪ್ರಕಟವಾದ ಸುದ್ದಿಯನ್ನು ತಿಳಿಸಿದಾಗ ಸ್ವತಃ ಅ. ನ. ಕೃಷ್ಣರಾಯರಿಗೇ ಅಚ್ಚರಿಯೆನಿಸಿತು. ಪುರಾಣಿಕರು ಕಥೆಯ ಹೆಸರು ಹೇಳಿದಾಗ ಅವರು ಆ ಬಗೆಗೆ ತುಂಬ ಮೆಚ್ಚಿಕೆಯನ್ನು ವ್ಯಕ್ತಪಡಿಸಿ ಈ ಬಗೆಯ ಹೆಸರೇಕೆ ಎಂದು ವಿಚಾರಿಸಿದರು. ಪುರಾಣಿಕರ ಅನುಮಾನವನ್ನು ಕೇಳಿ, "ಅಂಥದೇನು ಬೇಡ. ಕೃಷ್ಣಮೂರ್ತಿ ಪುರಾಣಿಕ ಎಂಬುದು ಲಕ್ಷಣವಾದ ಹೆಸರು. ಅದನ್ನೇ ಇರಿಸಿಕೊಳ್ಳಿರಿ, ನಿಮಗೆ ಬೇರೇನೂ ಬೇಡ" ಎಂದು ಹಾರೈಕೆ.

ವ್ಯಕ್ತಪಡಿಸಿದರು. ಆ ಅಂದಿನಿಂದ ಕಾವ್ಯನಾಮದ ಅವರ ವ್ಯಾಮೋಹ ತೊರೆದು ಹೊಸಗ ಸಾಹಿತ್ಯಲೋಕದಲ್ಲಿ ಕೃಷ್ಣಮೂರ್ತಿ ಪುರಾಣಿಕ ಎಂದು ಪ್ರಸಿದ್ಧಿಗೊಂಡರು. ಅದು ನಿರಂತರವಾಗಿ ಉಳಿದುಕೊಂಡು ಬಂದಿತು; ಹೆಸರು – ಕೀರ್ತಿಗಳೆರಡೂ ಅದರಿಂದಲೇ ಅವರಿಗೆ ಬಂದವು. ಅವರ ಮೊದಲ ಕವನ ಸಂಕಲನ 'ಬಾಳಕನಸು' ಹೊರಗೆ ಬಂದುದು ೧೯೪೭ ರಲ್ಲಿ ಆಗಾಗಲೇ ಅವರು ಕವಿಯಾಗಿ ನಾಡಿನಲ್ಲೆಲ್ಲ ಹೆಸರು ಮಾಡಿಕೊಂಡಿದ್ದರು. ಈ ಸಂಗ್ರಹ ಹೊರಬಂದಾಗ ಅವರಿನ್ನೂ ತರುಣರು. ಆ ಕಾಲದಲ್ಲಿ ಕವನ ಸಂಗ್ರಹವನ್ನು ಹೊರತರುವುದು ಕೂಡ ಸಣ್ಣ ಮಾತಾಗಿರಲಿಲ್ಲ. ಅದು ಕೂಡ ಒಂದು ಸಾಹಸದ ಮಾತೇ ಆಗಿದ್ದಿತು. ಪುರಾಣಿಕರು ಆ ಸಾಹಸವನ್ನು ಮಾಡಿದ್ದರು. ಅದಕ್ಕಾಗಿ ಅವರು ಪ್ರಶಂಸೆಯನ್ನು ಗಳಿಸಿಕೊಂಡರು. ಸ್ವತಃ ಖ್ಯಾತ ಕವಿಗಳೆನಿಸಿದ್ದ, 'ಜಯಂತಿ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಬೆಟಗೇರಿ ಕೃಷ್ಣಶರ್ಮರು ತಮ್ಮ ಪತ್ರಿಕೆಯಲ್ಲಿ ಈ ಕೃತಿಯನ್ನು ಕುರಿತು ವಿಮರ್ಶಿಸುತ್ತ, "ಕವಿಯೆಂದರೇನೆಂಬುದನ್ನು ತಿಳಿದುಕೊಂಡು, ಅರ್ಥಮಾಡಿಕೊಂಡು ಕವನ ರಚಿಸಿ-ದ್ದಾನೆ ಈ ಕವಿ. ಹೀಗಾಗಿ ಇಲ್ಲಿ ಅರ್ಥಪೂರ್ಣವಾದ ಕವನಗಳನ್ನು ನಾವು ಕಾಣುತ್ತೇವೆ. ಈ ಕವಿಗೆ ಉಜ್ವಲ ಭವಿಷ್ಯ ಕಾದಿದೆ." ಎಂದು ಹಾರೈಸಿದ್ದರು. ಅರ್ಥಪೂರ್ಣವಾದ ಈ ಹಿರಿಯ ಕವಿಯ ಹಾರೈಕೆ ಪರಿಪೂರ್ಣಗೊಂಡು ನಿಂತುದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರ ಮೊದಲ ಸಂಗ್ರಹವೇ ಹಿರಿಯ ವಿಮರ್ಶಕರಿಂದ ಒಳ್ಳೆಯ ಸ್ವಾಗತ ಪಡೆಯಿತು. ಅವರು ಮುಂದೆ ಕಾದಂಬರಿ ರಂಗವನ್ನು ಹೆಚ್ಚಾಗಿ ವ್ಯಾಪಿಸಿದ್ದರೂ ಕಾವ್ಯವನ್ನು ಅವರು ಕಡೆಗಣಿಸಲಿಲ್ಲ. ಅವರು ಬರೆಯುತ್ತಲೇ ಬಂದಿದ್ದಾರೆ. ಮುನ್ನಿನಂತೆ ಆವೇಶಪೂರ್ಣವಾಗಿ ಇನ್ನೂ ಹೆಚ್ಚಿನ ಹುಮ್ಮಸ್ಸಿನಿಂದ ಹಾಡುತ್ತಲೇ ಇದ್ದಾರೆ. ಮತ್ತೆ ಹಲವಾರು ಸಂಗ್ರಹಗಳನ್ನು ಬೆಳಕಿಗೆ ತಂದಿದ್ದಾರೆ. ಬಂಗ್ಲಾದೇಶ ಕುರಿತು ಈಚೆಗಷ್ಟೇ ಅವರು 'ಜಯಭೇರಿ' ಎಂಬ ಸರಳ ರಗಳೆಯ ನಾಟಕವನ್ನು ಬರೆದಿದ್ದಾರೆ. ಜನಮನವನ್ನು ಆ ಮೂಲಕ ಕೆದಕಿದ್ದಾರೆ; ಜನ-ಜಾಗ್ರತಿಯನ್ನು ಮಾಡುತ್ತಲೇ ಇದ್ದಾರೆ.

ಅವರು ಉತ್ತಮ ಕಥೆಗಾರರು ಎಂಬುದನ್ನು ಹಲವಾರು ಕಥಾಸಂಗ್ರಹ-ಗಳ ಮೂಲಕವಾಗಿ ತೋರಿಸಿಕೊಂಡಿದ್ದಾರೆ. "ರಾಮೂನ ಕತೆಗಳು" ಈ ದೃಷ್ಟಿಯಿಂದ ಕಥಾಸಂಗ್ರಹವಲ್ಲ. ಉತ್ತಮ ವಿಡಂಬನಾತ್ಮಕವಾಗಿರುವ ಈ ಬರಹಗಳು. ಜಯಂತಿ ಮತ್ತು ವಸಂತ ಪತ್ರಿಕೆಗಳಲ್ಲಿ ಅವು ನಿಯಮಿತವಾಗಿ ಪ್ರಕಟವಾದವು ಸ್ವತಃ ಶಿಕ್ಷಕರಾದ ಶ್ರೀ ಪುರಾಣಿಕರು ಈ ಲೇಖನಮಾಲೆಯಲ್ಲಿ ಶಿಕ್ಷಕನೊಬ್ಬನ ಜೀವನದ ವಿವಿಧ ಬಗೆಯ ಹೋರಾಟಗಳ ಚಿತ್ರಗಳನ್ನು ಕೊಟ್ಟರು. ಇಂಥ ಲೇಖನಗಳು ಅಪರೂಪವಾಗಿ ಬರುತ್ತಿರುವ ಕಾಲವದು. ಇವು ತುಂಬ ಜನಪ್ರಿಯತೆಯನ್ನು ಗಳಿಸಿದವು. ಅವನ್ನೆಲ್ಲ ಸೇರಿಸಿ ೧೯೫೬ ರಲ್ಲಿ ಒಂದು ಸಂಗ್ರಹ ರೂಪದಲ್ಲಿ ಪ್ರಕಟಿಸಿದರು. ಈ ಸಂಗ್ರಹ ಕುರಿತು ಕರ್ನಾಟಕದ ಕುಲಪುರೋಹಿತ-

ರಾವ ದಿ. ಆಲೂರ ವೆಂಕಟರಾಯರು ಅದು ಪ್ರಕಟವಾದ ಸಂದರ್ಭದಲ್ಲಿ ಬರೆದ ಕಾಗದದಲ್ಲಿ "ನನಗೆ ಕಥೆಗಳನ್ನು ಓದುವದರ ಕಡೆಗೆ ಒಲವಿಲ್ಲದಿದ್ದರೂ, ಕನ್ನಡದ ಅಭಿಮಾನಿಗಳಾದ ನಿಮ್ಮ ಬರವಣಿಗೆಯನ್ನು ನೋಡುವ ಕುತೂಹಲದಿಂದ ನಿಮ್ಮ ಪುಸ್ತಕವನ್ನು (ರಾಮೂನ ಕತೆಗಳು) ಹಾರಿಸಿ ಹಾರಿಸಿ ಓದಿದೆ. ನಿಮ್ಮ ಲೆಕ್ಕಣಿಕೆಯಲ್ಲಿ ತೇಜವೂ, ವಿನೋದದಲ್ಲಿ ವೈಚಿತ್ರ್ಯವೂ ಕಂಡುಬಂದವು. ಇದು ನಗೆಯುಗ. ಶ್ರೀರಂಗರು ಇತ್ತ ಕಡೆಗೆ ಈ ನವಯುಗದ ಪ್ರವರ್ತಕರು. ನಗೆಯುಗದ ಅನೇಕ ಮಾದರಿಗಳನ್ನು ನಾವು ಈಗಿನ ಲೇಖಕರಲ್ಲಿ ಕಾಣಬಹುದು. ಚುಚ್ಚುನಗೆ, ಬಿಚ್ಚು ನಗೆ, ಮುಚ್ಚುನಗೆ ಮುಂತಾದವುಗಳು ಬಳಕೆಯಲ್ಲಿ ಬಂದಿರುವವು. ನಿಮ್ಮದು ಕಟ್ಟಾಡಿಸಿ ನಗಿಸುವ ನಗೆ. ನಗೆಯಲ್ಲಿ ವಿಚಾರ ಪ್ರಚೋದಕತೆ ಇದೆ." ಎಂದು ಈ ಸಂಗ್ರಹವನ್ನು ತುಂಬ ಮೆಚ್ಚಿಕೊಂಡು ಬರೆದಿದ್ದರು. ಜಯಂತಿಯಲ್ಲಿ ಪ್ರಕಟವಾದ ಪುರಾಣಿಕರ 'ಮೀಸಲು ಮೀಮಾಂಸೆ' ಹರಟೆಯನ್ನು ಮೆಚ್ಚಿಕೊಂಡು ಸ್ವತಃ ವಿಡಂಬನಕಾರರಾದ ಶ್ರೀರಂಗರು ಇವರಿಗೆ ಕಾಗದ ಬರೆದಿದ್ದರು: "ಜಯಂತಿಯ ಆಗಸ್ಟ ಸಂಚಿಕೆಯಲ್ಲಿ ಪ್ರಕಟವಾದ ನಿನ್ನ 'ಮೀಸಲು ಮೀಸೆ' ಹರಟೆಗಾಗಿ ನಿನ್ನನ್ನು ಅಭಿನಂದಿಸಲು ಈ ಕಾಗದ ಬರೆಯುತ್ತಿದ್ದೇನೆ. ಇಂಥ ಸುಂದರವಾದ ಗದ್ಯದಲ್ಲಿ, ತಿಳಿಯಾದ ಹಾಸ್ಯದಲ್ಲಿ ಬರೆದ ಯಾವೊಂದು ಪ್ರಬಂಧವನ್ನು (ನನ್ನವನ್ನು ಪರಿಗಣಿಸಿ) ನಾನು ನೋಡಿಲ್ಲ. ಅದು ಪರಿಪೂರ್ಣ ಮತ್ತು ಅದ್ಭುತ ಕಲಾತ್ಮಕವಾದ ಬರೆಹ-ವಾಗಿದೆ. ಇಂಥವನ್ನು ನೀನು ಇನ್ನೂ ಹಲವಾರು ಬರೆಹಗಳನ್ನು ಬರೆಯಬೇಕೆಂದು ನಾನು ಆಶಿಸುವೆ." ಪುರಾಣಿಕರು ಬರೆದ ಹರಟೆ, ಪ್ರಬಂಧಗಳಿಗೆ ಈ ಇಬ್ಬರು ಹಿರಿಯರಿಂದ ದೊರೆತ ಮೆಚ್ಚಿಕೆ ಸಣ್ಣ ಮಾತೇನಲ್ಲ. ಇವರಲ್ಲಿಯ ಇಂಥ ಬರೆಹ ಗಳನ್ನು ಬರೆವ ಅದ್ಭುತ ಗುಣವಿದೆಯೆಂದೇ ಈ ಮೆಚ್ಚಿಕೆ ಅವರಿಗೆ ಸಂದಾಯ-ವಾಗಿದೆ. ಅವರೊಂದಿಗೆ ಸರಸವಾಗಿ ಈಗಲೂ ಹರಟೆಕೊಚ್ಚುವವರಿಗೆ ಪುರಾಣಿಕ ರಲ್ಲಿಯ ಈ ಅದ್ಭುತ ಶಕ್ತಿಯ ಪರಿಚಯ ಸಹಜವಾಗಿ ಆಗುವುದು. ಆದರೆ ಮುಂದೆ ಅವರ ಈ ಶಕ್ತಿ ಕಾದಂಬರಿಗಳಲ್ಲಿ ತಿಳಿಹಾಸ್ಯ ಮೂಡಿಸುವಲ್ಲಿ ವಿನಿಯೋಗವಾಯಿ-ತೇನೋ! ಪ್ರತ್ಯೇಕವಾದ ಇಂಥ ಹರಟೆ-ಪ್ರಬಂಧಗಳನ್ನು ಬಹಳವಾಗಿ ಬರೆದಿಲ್ಲ; ಬರೆಯುತ್ತಿಲ್ಲ. ಇಲ್ಲವಾದರೆ ಈ ಸಾಹಿತ್ಯ ಪ್ರಸಾರಕ್ಕೂ ಅವರು ತುಂಬ ಅದ್ಭುತವಾದ ದೇಣಿಗೆಯನ್ನೇ ನೀಡಬಹುದಾಗಿತ್ತೇನೊ!

ಕಥಾಸಾಹಿತ್ಯದಲ್ಲಿ ಅವರು ಹುಲುಸಾದ ಬೆಳೆಯನ್ನು ನೀಡಿರುವದಿಲ್ಲ. ಈ ವರೆಗೆ ಅವರು ಹತ್ತು ಕಥಾಸಂಗ್ರಹಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಕಾಲೇಜ ದಿನಗಳಿಂದ ಪ್ರಾರಂಭವಾದ ಅವರ ಕಥಾವಾಹಿನಿ ಹರಿಗಡಿದಿಲ್ಲ; ಕೆಲವೇ ಕೆಲವು ಕಥೆಗಳನ್ನು ಅವರು ಬರೆದಿದ್ದಾರೆ. ಆದರೆ ಈ ಕಥೆಗಳಲ್ಲಿ ಅವರು ಒಂದು ಅರ್ಥ ಬಿರಿಸಿರುತ್ತಾರೆ. ನೀತಿ ಇರುತ್ತದೆ. ಉದಾತ್ತವಾದ ಆದರ್ಶವಿರುತ್ತದೆ. ಹೆಚ್ಚಾಗಿ ಜೀವನ ದರ್ಶನವಿರುತ್ತದೆ. ಕಥೆಗಳಲ್ಲಿ ಬರುವ ಆದರ್ಶ ವಾಸ್ತವತೆಯಿಂದ ಸಿಡಿದು

ನಿಂತಿಲ್ಲ; ವಾಸ್ತವತೆಯ ಅಸ್ತಿವಾರದ ಮೇಲೆ ಆದರ್ಶ ಮಿನುಗುತ್ತಿದೆ. ಪುರಾಣಿಕರು ತಮ್ಮ ಜೀವನದಲ್ಲಿ ಬಂದ, ಬಂದಿರುವ ಹಲವಾರು ಅನುಭವಗಳನ್ನು ಕಥೆಗಳ ರೂಪದಲ್ಲಿ ಹೆಣೆದು ತೋರಿರುವರು. ಹೀಗಿದ್ದರೂ ಸರಳ, ಸುಂದರ ಶೈಲಿಯಿಂದ ಕೂಡಿದ ಅವರ ಈ ಕಥೆಗಳಲ್ಲಿ ಕಲಾತ್ಮಕತೆ ಇರುತ್ತದೆ. ಜನಸಾಮಾನ್ಯಕ್ಕೆ ಅವು ಸುಲಭವಾಗಿ ಸರಳವಾಗಿ ಅರ್ಥವಾಗುತ್ತವೆ. ಅವರನ್ನು ರಂಜಿಸುತ್ತವೆ. ಪ್ರಸಿದ್ಧ ಲೇಖಕರೂ, ವಿಮರ್ಶಕರೂ, ಸಾಹಿತಿಗಳೂ ಎನಿಸಿದ ಡಾ. ಹಾ. ಮಾ. ನಾಯಕರು ಎಳೆತನದಲ್ಲಿಯೇ ಇವರ ಒಂದು ಕಥೆಯನ್ನು ಮೆಚ್ಚಿಕೊಂಡು ಪುರಾಣಿಕರಿಗೆ ಪತ್ರ ಬರೆದದ್ದುಂಟು. ಹೀಗೆ ಅವರ ಕಥೆಗಳು ಈ ರೀತಿ ಅನೇಕ ಸಲ ಸ್ನೇಹಕ್ಕೂ ಕಾರಣವಾಗಿ ಪರಿಣಮಿಸಿವೆ. ಅಂಥ ಒಂದು ಆಕರ್ಷಕತೆ ಈ ಕಥೆಗಳಲ್ಲಿ ಅಡಗಿರುವುದು. ಬಹುಶಃ ಸಂಸಾರದ ಚಿತ್ರಗಳು, ಬಾಳಿನಗೋಳಿನ ಕಥೆಗಳು ಇಲ್ಲಿ ಸುಂದರವಾಗಿ ಸಹಜವಾಗಿ ಚಿತ್ರಿತವಾಗಿರುವುದೇ ಇದಕ್ಕೆ ಕಾರಣವಾಗಿದೆ.

— ೬ —

ಪುರಾಣಿಕರು ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ವಿಪುಲವಾಗಿ ಅಲ್ಲವಾದರೂ ಗಣನೀಯ ಪ್ರಮಾಣದಲ್ಲಿ ಆಯಾ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಓದುಗರ ಮೆಚ್ಚುಗೆಯನ್ನು ಪಡೆದಿದ್ದಾರೆ; ಜನಮನ್ನಣೆ ದೊರಕಿಸಿದ್ದಾರೆ. ಸಹೃದಯ ವಿಮರ್ಶಕರ ಪ್ರಸಂಶೆ ಪಡೆದಿದ್ದಾರೆ. ಆದರೆ ಅವರು ಹೆಚ್ಚಾಗಿ ಪರಿಚಿತವಾದುದು, ಜನಪ್ರಿಯರಾದುದು ಕಾದಂಬರಿಕಾರರೆಂದು. ನಿಜ, ಕಾದಂಬರಿ ರಂಗದಲ್ಲೂ ಅವರು ಗಣನೀಯ ಪ್ರಮಾಣದಲ್ಲಿ ಕೃಷಿ ಮಾಡಿದ್ದಾರೆ. ನಿರಂಜನರು ಹೇಳುವಂತೆ, 'ಪುರಾಣಿಕರು ಸಾಹಿತ್ಯಮಂದಿರದಲ್ಲಿ ದೀರ್ಘಕಾಲ ಅರ್ಚಿಸಿದ ಮೇಲೆ ಕಾದಂಬರಿಯ ತಕಲಿಯನ್ನು ಎತ್ತಿಕೊಂಡರಾದರೂ, ಅಲ್ಪಾವಧಿಯಲ್ಲಿಯೆ ಹಲವು ಸಹಸ್ರ ಮೈಲಿಗಳಷ್ಟು ಮೋಹಕದಾರವನ್ನು ಅವರು ಹೆಣೆದಿದ್ದಾರೆ." ತುಂಬ ಸುಂದರವಾದ, ಅಷ್ಟೇ ಸತ್ಯಪೂರ್ಣ ಮಾತಿದಾಗಿದೆ. ಸಾಹಿತ್ಯ ರಚನೆಯಲ್ಲಿ ತೊಡಗಿದ ಹಲವಾರು ವರುಷ ಕಾಲ ಅವರು ಕಾದಂಬರಿಯುಳಿದು ಉಳಿದ ಪ್ರಕಾರಗಳಲ್ಲಿ ರಚನೆ ಮಾಡಿದರು. ಅವರು ಕಾದಂಬರಿ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದ್ದು ೧೯೪೮ರಲ್ಲಿ; ತಮ್ಮ ೪೦ನೇ ವಯಸ್ಸಿನಲ್ಲಿ. ಅವರ ಮೊದಲ ಕಾದಂಬರಿ 'ಮುಗಿಲ ಮಲ್ಲಿಗೆ' ಆಗ ಪ್ರಕಟವಾಯಿತು. ಅದೇ ಅವರ ಮೊದಲ ಕೃತಿಯಾದರೂ ಅದು ತುಂಬ ಜನಪ್ರಿಯವಾಯಿತು. ಪುರಾಣಿಕರು ಕೇವಲ ಕವಿ, ಕಥೆಗಾರ, ಹರಟೆಗಾರರು ಮಾತ್ರವಲ್ಲ, ಉತ್ತಮ ಕಾದಂಬರಿಕಾರರೂ ಆಗಬಲ್ಲರು. ಎಂಬ ಭರವಸೆಯನ್ನು ಈ ಕೃತಿ ಮೂಡಿಸಿತು. ಅನೇಕರು ಇದನ್ನು ಮೆಚ್ಚಿಕೊಂಡು ಅವರಿಗೆ ಕಾಗದಗಳನ್ನು ಬರೆದರು. ಆಗಿನ್ನೂ ತೀರ್ಥಹಳ್ಳಿಯಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದ ಡಾ. ಹಾ. ಮಾ. ನಾಯಕರು ಈ ರೀತಿ ಮೆಚ್ಚಿಕೊಂಡು ಇವ-

ರಿಗೆ ಕಾಗದ ಬರೆವವರಲ್ಲಿ ಒಬ್ಬರು. "ಮುಗಿಲ ಮಲ್ಲಿಗೆ" ನನಗೆ ಬಹಳ ಮೆಚ್ಚಿಗೆಯಾಗಿವೆ. ಮಾಲತಿಗೋವರ್ಧನರ ಕಥೆ ನಮ್ಮ ಬಾಳಿನ ಸತ್ಯಕಥೆ, ದೈನಂದಿನ ಚಿತ್ರ ಓದುಗರ ಮನಸ್ಸನ್ನು ಸೆರೆಹಿಡಿಯುತ್ತಿದೆ ಎಂದು ನನ್ನ ಅನುಭವ. ಕನ್ನಡ ಕಾದಂಬರಿಗಳಲ್ಲಿ 'ಮುಗಿಲ ಮಲ್ಲಿಗೆ'ಗೊಂದು ಭವ್ಯಸ್ಥಾನವಿದೆ." ಅವರ ಈ ಮಾತು ಹುಸಿ ಹೋಗಲಿಲ್ಲ. ಕಾದಂಬರಿರಂಗದಲ್ಲಿ ಕೃಷ್ಣಮೂರ್ತಿ ಪುರಾಣಿಕರು ಈ ಮೂಲಕವಾಗಿ ಭವ್ಯವಾದ ಸ್ಥಾನವನ್ನು ಪಡೆದುಕೊಂಡು ಬಿಟ್ಟರು. ಡಾ. ನಾಯಕ ಅವರು ಹೇಳಿರುವಂತೆಯೇ ಪುರಾಣಿಕರೊಂದಿಗೆ ಅವರ ಸ್ನೇಹ ಮಾತ್ರ ಚಿಗುರೊಡೆಯಲಿಲ್ಲ; ಕಾದಂಬರಿ ಪ್ರೇಮಿಗಳ ಬಳಗ ಅವರದಾಗಿ ಪರಿಣಮಿಸಿತು. ಅವರು ಕಾದಂಬರಿರಂಗ ಪ್ರವೇಶಿಸಿದ್ದು ತೀರ ಆಕಸ್ಮಿಕವಾಗಿ; ಅದೊಂದು ಯೋಗಾಯೋಗ. ಕಡಲತೀರದ ಭಾರ್ಗವರು ಶ್ರೀ ಶಿವರಾಮ ಕಾರಂತರು ಗೋಕಾಕಕ್ಕೆ ನಾಡಹಬ್ಬದ ಕಾರ್ಯಕ್ರಮಕ್ಕೆ ಬಂದಿದ್ದರು. ದಿ. ದ. ಬಾ. ಕುಲಕರ್ಣಿ ಅವರೂ ಕಾರಂತರ ಜೊತೆಗಿದ್ದರು. ಆ ಸಂದರ್ಭದಲ್ಲಿ ಪುರಾಣಿಕರು ತಾವು ರಚಿಸಿದ 'ಅವತಾರ'ವೆನ್ನುವ ಹೊಸ ಕವನವೊಂದನ್ನು ಅವರಿಗೆ ಓದಿ ತೋರಿಸಿದರು. ಕಾರಂತರು ಅದನ್ನು ಮೆಚ್ಚಿಕೊಂಡರು. ಅವರ ಹಾಡುಗಾರಿಕೆಯನ್ನು ಚೆನ್ನಾಗಿ ಹೊಗಳಿದರು ಕೂಡ. ಆದರೆ ಅದೇ ಕಾಲಕ್ಕೆ ಅವರು ಪುರಾಣಿಕರಿಗೆ ಒಂದು ಸೂಚನೆಯನ್ನು ನೀಡಿದರು; ಅದನ್ನು ಉಪದೇಶವೆನ್ನಬಹುದು, ಇಲ್ಲವೇ ಮಾರ್ಗದರ್ಶನವೆಂದೂ ಹೇಳಬಹುದು. "ಪುರಾಣಿಕರೆ ಇಂಥ ಕಾವ್ಯ ನಮ್ಮಲ್ಲಿ ಎಷ್ಟು ಜನರಿಗೆ ಅರ್ಥವಾಗುವುದು ? ಅರ್ಥಮಾಡಿಕೊಳ್ಳಬಲ್ಲರು ? ಅದಕ್ಕಾಗಿ ನೀವು ನಿಮಗೆ ಹೇಳಬೇಕಾದುದನ್ನು ಕಾದಂಬರಿಯ ಮುಖಾಂತರವೇ ಜನರಿಗೆ ತಿಳಿಹೇಳಲು ಮುಂದಾಗಬೇಕು. ಅದು ಜನಸಾಮಾನ್ಯರಿಗೆ ಅರ್ಥವಾಗುವುದು" ಕಾರಂತರ ಮಾತು ಪುರಾಣಿಕರಿಗೆ ಹಿಡಿಸಿತು; ಮನಸ್ಸಿಗೆ ನಾಟಿತು. ಅವರಿಗೆ ಒಮ್ಮೆ ಮನಸ್ಸಿಗೆ ಬಂತೆಂದರೆ ತೀರಿತು. ಅದನ್ನು ನೆರವೇರಿಸಿಯೇ ಬಿಡುವವರು. ಈ ಎಲ್ಲದರ ಪರಿಣಾಮವಾಗಿ 'ಅವತಾರ' ಕವನದ ಸಂದರ್ಭ ಇವರ 'ಮುಗಿಲ ಮಲ್ಲಿಗೆ' ಕಾದಂಬರಿ ಅವತರಿಸುವಂತೆ ಮಾಡಿತು. ಕನ್ನಡ ಸಾರಸ್ವತ ಪ್ರಪಂಚಕ್ಕೊಂದು ಅಪೂರ್ವವಾದ ಸಿರಿಯನ್ನು ತಂದು ಕೊಟ್ಟಿತು. ಕಾದಂಬರಿರಂಗಕ್ಕೆ ಒಂದು ನಿಧಿಯೇ ಈ ಮೂಲಕ ದೊರೆಕೊಂಡಂತಾಯಿತು.

ಅವರು ಉತ್ಸಾಹದಿಂದ ಮೊದಲ ಕಾದಂಬರಿಯನ್ನು ಹೊರತಂದರು; ಜನ ಮೆಚ್ಚುಗೆ ಗಳಿಸಿದರು. ವಿಮರ್ಶಕರಲ್ಲಿ ಭರವಸೆ ಮೂಡಿಸಿದರು. ಕನ್ನಡಕ್ಕೊಬ್ಬ ಒಳ್ಳೇ ಕಾದಂಬರಿಕಾರ ದೊರೆತ ಎಂದುಕೊಂಡು ಜನ ಹರುಷ ತಾಳಿದರು. ಈ ಹುಮ್ಮಸ್ಸಿನಲ್ಲಿ ಪುರಾಣಿಕರು ಕಾದಂಬರಿಕಾರರಾದರು; ಮುಂದಿನ ಕಾದಂಬರಿಗಳನ್ನು ಬರೆಯತೊಡಗಿದರು. ಇವರೇನೊ ಹೊಸ ಹುರುಪಿನಲ್ಲಿ ಕಾದಂಬರಿಗಳನ್ನು ಸೃಷ್ಟಿಸಿದರು. ಅವನ್ನು ಪ್ರಕಟಿಸಲು ಪ್ರಕಾಶಕರೊಂದು ಮುಂದೆ ಬರಬೇಕಲ್ಲ. ಆಗಿನ ಬವಣೆಯನ್ನು ನಾವು ಪುರಾಣಿಕರ ಬಾಯಿಂದಲೇ ಕೇಳಬೇಕು; "ನನ್ನ ಮೊದಲ

ಕೆಲ ಕಾದಂಬರಿಗಳನ್ನು ಒಬ್ಬೊಬ್ಬ ಪ್ರಕಾಶಕರ ಬಳಿಗೂ ಹೋಗಿ ಹೆಣ್ಣು ಹಡೆದ ತಂದೆಯ ಹಾಂಗ ಅಂಡಲೆಯಬೇಕಾಯಿತು. ಒಂದು ಕಾದಂಬರಿಗೆ ನೂರು ಬಿಟ್ಟು ನೂರಾ ಐವತ್ತು ರಾಯಲ್ಟಿ ಸಿಗಬಹುದು ಅಂದರ ಹಿಗ್ಗಿ ಹೀರೇಕಾಯಿ ಆಗುತ್ತಿದ್ದೆ. ಕಥೆ-ಕಾವ್ಯಗಳ ಪ್ರಕಾಶನದ ಮಾತಂತೂ ದೂರೇ ಉಳಿಯಿತು." ಒಂದೆರಡು ಕಾದಂಬರಿಗಳಿಗೆ ಅವರು ಈ ರೀತಿ ಪ್ರಕಾಶಕರನ್ನು ಕಂಡುಹಿಡಿಯುವುದು, ತಮ್ಮ ಕಾದಂಬರಿಗಳನ್ನು ಪ್ರಕಟಿಸುವುದು ಕಷ್ಟಸಾಧ್ಯವಾಗಿರಬೇಕು. ಆಗಿನ ಕಾಲದಲ್ಲಿ ಹೊಸಬರ ಕೃತಿಗಳನ್ನು ಹಾಕಲು ಪ್ರಕಾಶಕರು ತುಂಬ ಹಿಂದೆ ಮುಂದೆ ನೋಡುತ್ತಿದ್ದರು. ಪುರಾಣಿಕರ ಹೆಸರು ನಿಜವಾಗಿ ಅಷ್ಟು ಅಪರಿಚಿತವಿರಲಿಲ್ಲ. ಅದನ್ನು ಹೆಚ್ಚು ಪರಿಚಿತಗೊಳಿಸುವವರು ಬೇಕಾಗಿತ್ತು. ಪುರಾಣಿಕರಿಗೆ ಹೆಸರು ಬದಲಿಸ-ದಿರಲು ಸೂಚಿಸಿದ್ದ ಅ. ನ. ಕೃಷ್ಣರಾಯರು ಇಲ್ಲಿ ಅವರ ನೆರವಿಗೆ ಬಂದರು. ಅವರು ತಾವು ಓರ್ವ ಪ್ರಕಾಶಕನಿಗೆ ಕಾದಂಬರಿ ಬರೆದುಕೊಡಲು ಒಪ್ಪಿದ್ದರು. ಅದು ಸಾಧ್ಯವಾಗಿರಲಿಲ್ಲ. ಆ ಸಂದರ್ಭದಲ್ಲಿ ಅವರು ಕೃಷ್ಣಮೂರ್ತಿ ಪುರಾಣಿಕರ ಹೆಸರನ್ನು ಸೂಚಿಸಿದರು. ಪುರಾಣಿಕರಿಗೂ ಕಾಗದವೊಂದನ್ನು ಬರೆದು ಸಂಗತಿಯನ್ನು ತಿಳಿಸಿದರು. ಪ್ರಕಾಶಕರಿಂದ ನೇರವಾಗಿ ಪುರಾಣಿಕರಿಗೆ ಗೌರವಧನ-ಕಾಗದ ಬಂದಾಗ ಇವರಿಗೆ ಅಚ್ಚರಿ! ಹೀಗೆ ಅವರ 'ಮುತ್ತೈದೆ' ಕಾದಂಬರಿ ಹೆಚ್ಚು ಗೌರವಧನ ಪಡೆದು ಪ್ರಕಾಶಕರಿಂದ ನೇರ ಕರೆ ಹೊತ್ತು ಬಂದ ಮೊದಲ ಕಾದಂಬರಿಯೆನಿಸಿತು. ಅದು ಅವರಿಗೆ ಶುಕ್ರದೆಸೆ ಪ್ರಾರಂಭವಾಗುವ ಕಾಲವೂ ಇದ್ದಿರಬೇಕು. ಅಲ್ಲಿಂದ ಅಖಂಡವಾಗಿ ಅವರ ಕಾದಂಬರಿಗಳ ಪ್ರವಾಹ ಹರಿದುಬಂದಿದೆ; ಹರಿದುಬರುತ್ತಿದೆ. ಈಗ ಅವರು ೭೩ ಕಾದಂಬರಿಗಳನ್ನು ಪ್ರಕಟಿಸಿದ್ದು. ಕಾದಂಬರಿಗಳದೇ ಶತಮಾ-ನೋತ್ಸವವನ್ನು ಆಚರಿಸುವ ಸಮಯ ಕೂಡ ದೂರವಿಲ್ಲ. ಅವರ ಕಾದಂಬರಿಗಳು ಅಸಂಖ್ಯವಾಗಿವೆ. ಒಂದೊಂದನ್ನೇ ಹೆಸರಿಸುವುದು ಸಾಧ್ಯವಾಗದಷ್ಟು ಅಗಾಧವಾಗಿ ಮೂಡಿನಿಂತಿವೆ. ಆದರೆ ಈ ಎಲ್ಲ ಕಾದಂಬರಿಗಳಲ್ಲಿ ಅವರು ನಮ್ಮ ಕೌಟುಂಬಿಕ ಜೀವನವನ್ನೇ ಕಥಾವಸ್ತುವಾಗಿ ಆರಿಸಿಕೊಂಡಿದ್ದಾರೆ. ಇಷ್ಟು ಕಾದಂಬರಿಗಳನ್ನು ಬರೆದ ಪುರಾಣಿಕರಿಗೆ ಕಥಾವಸ್ತು ಎಲ್ಲಿಂದ ದೊರೆಯುತ್ತಿದೆ? ಹೇಗೆ ಪೂರೈಕೆಯಾಗುತ್ತದೆ ಎಂದು ಅಚ್ಚರಿಕೂಡ. ಪುರಾಣಿಕರು ಹೇಳುವ ಮಾತನ್ನೇ ಕೇಳಬೇಕು. "ನನ್ನ ಎದುರು ಬರೆಯುವ ವಸ್ತು ಅಗಾಧವಾಗಿದೆ. ನಾನು ಸಾಯುವವರೆಗೆ ಬರೆದರೂ ಮುಗಿಯದಷ್ಟು ವಸ್ತು ಸಾಮಗ್ರಿಗಳಿವೆ. ನಮ್ಮ ಮಧ್ಯಮ ವರ್ಗದ ಜನ ಜೀವನ, ಅಲ್ಲಿ ಕಂಡುಬರುವ ಅತ್ತೆ-ಸೊಸೆಯ ಪ್ರಶ್ನೆ, ಅಣ್ಣ-ತಮ್ಮಂದಿರ ಪ್ರಶ್ನೆ, ಅತ್ತಿಗೆ-ಮೈದುನರ ಪ್ರಶ್ನೆ, ನೀಗೆಣ್ಣೆಯರ ಪ್ರಶ್ನೆ, ಮಾವ-ಅಳಿಯ ಅಕ್ಕ-ತಂಗಿ ಹೀಗೆ ಇಲ್ಲಿ ಎಷ್ಟು ಬಗೆಯ ಸಂಬಂಧಗಳಿವೆಯೊ ಅಷ್ಟು ಸಮಸ್ಯೆಗಳು ನಮ್ಮ ಜೀವನದಲ್ಲಿವೆ. ನಮ್ಮ ಸುತ್ತಲಿನ ಈ ಸಂಸಾರಿ ಜೀವನವನ್ನು ನಾವು ಕಣ್ಣು ತೆರೆದು ನೋಡಿದಾಗ ಕಾದಂಬರಿ ಸೃಷ್ಟಿಗೆ ಅಗಾಧ ರೀತಿಯಲ್ಲಿ ಮೂಲ

ಸಾಮಗ್ರಿ ದೊರೆಯುತ್ತದೆ. ನಾನಂತೂ ಕಥಾವಸ್ತುವಿನ ಬಗೆಗೆ ಈ ವರೆಗೂ ಒಂದೇ ಒಂದು ಸಲವೂ ಚಿಂತಿಸಿದವನಲ್ಲ; ತಲೆಯ ಮೇಲೆ ಕೈ ಹೊತ್ತು ಕುಳಿತವನಲ್ಲ" ಅವರ ಈ ಮಾತುಗಳನ್ನು ಕೇಳಿದಾಗ ಕಥಾವಸ್ತುವಿಗಾಗಿ ಪರದಾಡುವದೇಕೆ ಎಂದು ಕೇಳಬೇಕೆನ್ನಿಸುತ್ತದೆ. ಪುರಾಣಿಕರಿಗೆ ಅದೊಂದು ಸಮಸ್ಯೆಯೂ ಅಲ್ಲ; ಅಂಥ ಪ್ರಶ್ನೆಯೂ ಇಲ್ಲ. ಹೀಗಾಗಿ ಅವರ ಕಾದಂಬರಿಗಳು ನಮ್ಮ ಜೀವನಕ್ಕೆ ಸಮೀಪವರ್ತಿಯಾಗಿರುತ್ತವೆ; ನಮ್ಮ ಜೀವನವೇ ಅಲ್ಲಿ ಮೂಡಿ ನಿಂತಿರುತ್ತದೆ. ಸಮಾಜದ ಬೃಹತ್ ಸ್ವರೂಪದ, ವಿವಿಧ ಸಂಬಂಧಗಳ, ಪ್ರಶ್ನೆಗಳ ದರ್ಶನ ನಮಗೆ ಅಲ್ಲಿ ದೊರೆಯುತ್ತದೆ.

ಹೀಗಿದ್ದರೂ ಅವರು ಇಡೀ ಕಾದಂಬರಿಯನ್ನು ಪೂರ್ಣವಾಗಿ ಯೋಜಿಸಿರುವದಿಲ್ಲ. ಕಥೆಯ ಹಂದರವನ್ನು ಸ್ಥೂಲವಾಗಿ ಕಟ್ಟಿಕೊಂಡಿರುತ್ತಾರೆ. ಅದು ಸನ್ನಿ-ವೇಶಗಳಿಗೆ ಅನುಗುಣವಾಗಿ ಬೆಳೆದುಕೊಂಡು ಪಾತ್ರ ಪರಿಪೋಷಣೆಯಾಗುತ್ತದೆ. "ನಾನು ಯಾವುದೇ ವಸ್ತುವನ್ನು ಮೊದಲೇ ಕಲ್ಪಿಸಿಕೊಂಡಿರುವದಿಲ್ಲ. ಒಂದು ಸ್ಥೂಲವಾದ ಕಲ್ಪನೆ ಮಾತ್ರ ಇರುತ್ತದೆ. ಬರೆಯುತ್ತ ಹೋದಂತೆ ಸನ್ನಿವೇಶಗಳು, ಅವಕ್ಕೆ ಅನುಗುಣವಾಗಿ ಪಾತ್ರಗಳು ರೂಪುಗೊಳ್ಳುತ್ತ ಹೋಗುತ್ತವೆ, ಜೀವನದ ಸಿಹಿ–ಕಹಿ ಅನುಭವ ನನ್ನ ಹೃದಯವಂತಿಕೆ ಅಲ್ಲಿ ಮೂಡಿನಿಲ್ಲುತ್ತವೆ. ಪಾತ್ರಗಳು ತಂತಾನೆ ಮಾತನಾಡುತ್ತವೆ. ಸನ್ನಿವೇಶಗಳಿಗನುಗುಣವಾಗಿ ವರ್ತಿಸುತ್ತವೆ. ರಾಜಕೀಯ ಸಮಸ್ಯೆಗಳು ಬರುವ ಸಂದರ್ಭದಲ್ಲಿ ಮಾತ್ರ ಹಿನ್ನೆಲೆಯ ತಿಳುವಳಿಕೆ ಇರಬೇಕೆಂದು ಅಭ್ಯಾಸಮಾಡುತ್ತೇನೆ. ಅಷ್ಟೆ... ಹಾಗೆ ನೋಡಿದರೆ ಜೀವನವೇ ಒಂದು ಕಲೆಯಾಗಿದೆ. ಬರೆಹದ ತಪಸ್ಸಿನಿಂದ ನನ್ನಲ್ಲಿ ತನ್ಮಯತೆ ಮೂಡಿಬರುವುದು. ಆ ಮೂಲಕ ಕಾದಂಬರಿ ರೂಪುಗೊಂಡು ನಿಲ್ಲುವುದು. ಇಲ್ಲಿ ನಾನು ಅನುಸರಿಸುವ ದಾರಿಯೆಂದರೆ ಬರವಣಿಗೆ ನನ್ನನ್ನು ಎಳೆದುಕೊಂಡು ಹೋದಂತೆ ನಾನು ಹೋಗುತ್ತೇನೆ ವಿನಾ ನನ್ನಂತೆ ಅದು ಸಾಗುವದಿಲ್ಲ. ಹೀಗಾಗದಿದ್ದರೆ ಪಾತ್ರ ಪರಿಪೋಷಣೆಯು ಭಿನ್ನವಾಗಿ ಆಭಾಸವಾಗುತ್ತಿತ್ತೇನೊ!" ತಮ್ಮ ಬರವಣಿಗೆ ಸಾಗಿ ಬರುತ್ತಿರುವ ರೀತಿಯ ಬಗೆಗೆ ಕೃಷ್ಣಮೂರ್ತಿ ಪುರಾಣಿಕರು ಹೇಳುತ್ತಾರೆ.

ಸಾಮಾನ್ಯವಾಗಿ ಅವರ ಕಾದಂಬರಿಗಳಲ್ಲಿ, ಕಥೆಗಳಲ್ಲಿ ಆದರ್ಶಮಯತೆ ಹೆಚ್ಚಾಗಿರುತ್ತದೆ. ಇದರಿಂದ ಅಲ್ಲಿ ಅವಾಸ್ತವತೆ ಹಣಿಕಿಕ್ಕಲು ಕಾರಣವಾಗುತ್ತದೆಂಬ ಒಂದು ಮಾತೂ ಅವರ ಕೆಲ ಕಾದಂಬರಿಗಳ ಬಗೆಗೆ ಕೇಳಿ ಬರುತ್ತಿದೆ. ಅದಕ್ಕೆ ಅವರು ಕೊಡುವ ವಿವರಣೆಯನ್ನು ಗಮನಿಸಬೇಕು. "ಜೀವನದಲ್ಲಿ ಏನಾದರೂ ಒಂದು ಸಾಧಿಸಬೇಕಾದರೆ ಆದರ್ಶಬೇಕು. ಗೊತ್ತು ಗುರಿ ಬೇಕು. ಹಾಗಿಲ್ಲದೇ ನಾವು ಏನನ್ನು ಸಾಧಿಸಲು ಸಾಧ್ಯ? ಈ ದೃಷ್ಟಿಕೋನ ನನ್ನದಾಗಿದೆ. ಅಲ್ಲದೇ ಇಂದು ನಾವು ಕೃತ್ರಿಮ ಪರಿಸರದ ಮಧ್ಯದಲ್ಲಿ ವಾಸಿಸುತ್ತಿದ್ದೇವೆ. ನಮ್ಮ ಜನ ಜೀವನದ ಸಿರಿವಂತಿಕೆ, ಹೃದಯ ವಂತಿಕೆಗಳ ಪೂರ್ಣ ಪರಿಚಯ ನಮಗೆ ಇಲ್ಲ.

ಆದ್ದರಿಂದ ಆ ಜೀವನದ ಮೌಲ್ಯಗಳನ್ನು, ಹಿರಿಮೆಯನ್ನು ನಾವು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ನಮ್ಮ ಅಗಾಧವಾದ ಸಾಹಿತ್ಯ ಸಂಪತ್ತು ನಮ್ಮ ಭಾರತೀಯ ಸಂಸ್ಕೃತಿಯ ಹಿರಿಮೆಗಳನ್ನು ನಾವು ಅರಿತುಕೊಂಡಾಗ, ಅರ್ಥಮಾಡಿಕೊಂಡಾಗ ನಾನಿಲ್ಲಿ ತೋರುತ್ತಿರುವುದು ಕೇವಲ ಆದರ್ಶವಲ್ಲ: ಅದೂ ಒಂದು ಜೀವನ, ಜೀವನದ ಅವಿಭಾಜ್ಯ ಅಂಗ ಎಂಬ ಅರಿವು ಮೂಡಿತು.” ಅವರು ಹೇಳುವ ಈ ಮಾತುಗಳಲ್ಲಿ ನನಗೆ ಅನಿಸಿದ್ದು: ನಾವು ಇಂದು ಆದರ್ಶವೆಂದು ಕಾಣುತ್ತಿರುವುದು ನಿಜವಾದ ಜೀವನವೇ. ಅದನ್ನು ಅರಿಯಲು ನಮ್ಮ ಕಣ್ಣ ಮೇಲೆ ಬಂದಿರುವ ಕೃತ್ರಿಮತೆಯ ಪರೆ ಅವಕಾಶಮಾಡಿಕೊಡುತ್ತಿಲ್ಲ. ಇಂದು ಬದಲಾದ ಜೀವನ ನೋಡುತ್ತಿರುವವರು ಈ ಮಾತನ್ನು ಒಪ್ಪಲಾರರು. ಈ ಸಂಗತಿ ಅನುಲಕ್ಷಿಸಿದಾಗ ಪುರಾಣಿಕರೂ ಈ ಬದಲಾದ ಮೌಲ್ಯಗಳನ್ನು ಗಮನಿಸುವುದೂ ಅವಶ್ಯವಾಗುವದೇನೊ! ಆದರ್ಶದ ಬೆನ್ನು ಹತ್ತಿ ವಾಸ್ತವತೆಯನ್ನು ಮರೆಯಬಾರದೇನೊ! ಅವರ ಕಾದಂಬರಿ ಸಂಪತ್ತನ್ನು ನೋಡಿದಾಗ ಕೆಲವೇ ಕಾದಂಬರಿಗಳನ್ನು ಕುರಿತು ಈ ಮಾತನ್ನು ಲಕ್ಷಿಸಬೇಕಾಗುವದೆಂದು ನನಗೆನಿಸುತ್ತದೆ. ರಮಾರಮಣ, ಹಿಮಗಿರಿಯ ಗೌರಿ, ಮಾತಿನ ಮಲ್ಲಿ ಇಂಥ ಕೆಲ ಕಾದಂಬರಿಗಳಲ್ಲಿ ಅಷ್ಟೊಂದು ಪರಿಣಾಮಕಾರಿಯಾಗುವುದಿಲ್ಲ ಎಂಬ ಮಾತುಗಳನ್ನು ಅವರ ಅಳಿಯಂದಿರು ಹೇಳಿದಾಗ ಅದನ್ನು ನಾನೂ ಒಪ್ಪಬೇಕೆಂದು ಅನ್ನಿಸಿತು. ಆದರೆ ಮುತ್ತೈದೆ, ಜೀವನದ ಜೋಲಿ, ಧರ್ಮದೇವತೆ, ಮಣ್ಣಿನ ಮಗಳು, ವಸುಂಧರಾ, ಬಯಲುಗಾಳಿ ಹೀಗೆ ಅತ್ಯಧಿಕ ಸಂಖ್ಯೆಯ ಕಾದಂಬರಿಗಳಲ್ಲಿ ಪುರಾಣಿಕರು ತಮ್ಮ ಈ ದೃಷ್ಟಿಕೋನವನ್ನು ಅನುಸರಿಸಿ ಪಾತ್ರಗಳನ್ನು ಸೃಷ್ಟಿಸಿದ್ದಾರೆಂದೇ ಸರಳವಾಗಿ ನಿರೂಪಿಸುವಲ್ಲಿ, ಉತ್ತಮವಾಗಿ ಬರೆಯುವಲ್ಲಿ ಯಶಸ್ವಿಯಾಗಿದ್ದಾರೆಂದು ನನಗೆನ್ನಿಸುವುದು. ಅವರು ಪಾತ್ರಗಳೊಂದಿಗೆ ಎಷ್ಟು ತನ್ಮಯರಾಗಿ ಬರೆಯುತ್ತಿರುತ್ತಾರೆಂದರೆ 'ದೇವಲಹರಿ'ಯಲ್ಲಿ ನಾಯಕಿ ಸುಟ್ಟುಕೊಂಡು ಸತ್ತಾಗ ಇಡೀ ರಾತ್ರಿಯೆಲ್ಲ ಗಳಗಳನೇ ಅತ್ತರೆಂದು ಅವರ ಮಗಳು ಮನೋರಮಾ ತಿಳಿಸಿದಾಗ ನನಗೆ ತುಂಬ ಆಶ್ಚರ್ಯವೆನಿಸಿತು. ಬಹುಶಃ ದುಃಖಾಂತವಾಗಿ ಕಾದಂಬರಿಗಳನ್ನು ಚಿತ್ರಿಸಲು ಪುರಾಣಿಕರ ಮನಸ್ಸು ಒಪ್ಪುತ್ತಿಲ್ಲವೇನೊ! ಆದರೆ ಅದು ಕೈಮೀರಿ ಬಂದಾಗ ತಾವೂ ಆ ಬಗೆಯಲ್ಲಿ ದುಃಖವನ್ನು ಭರಿಸುತ್ತಾರೆ. ಪಾತ್ರಸೃಷ್ಟಿಯಲ್ಲಿ ಇದಕ್ಕಿಂತ ಬೇರೆ ತನ್ಮಯತೆ ಬೇಕೆ? ಅವರು ಇಂಥ ದುಃಖದ ಪ್ರಸಂಗಗಳನ್ನು ಅನೇಕ ಬಾರಿ ಅನುಭವಿಸಿದ್ದಿರಬೇಕು. ಹೀಗೆ ಅವರು ಶೋಕಾಕುಲರಾಗಿ ಕಳೆದ ರಾತ್ರಿಗಳ ಅನುಭವಗಳನ್ನು ಅವರ ಮಕ್ಕಳು ಹೇಳುತ್ತಾರೆ. ಅದೇಕೆ ಪುರಾಣಿಕರೊಂದಿಗೆ ಸುದೀರ್ಘವಾಗಿ ಮಾತನಾಡುವಾಗ, ಈ ಪಾತ್ರಗಳ ಬಗೆಗೆ ಚರ್ಚಿಸುವಾಗ ಅನಂತರವೂ ಹಲವಾರು ಸಲ ಅವರು ಗದ್ಗದರಾದುದನ್ನು, ಕಣ್ಣು ಒರೆಸಿಕೊಂಡು ಮಾತನಾಡಿದುದನ್ನು ನಾನೇ ಕಂಡಿದ್ದೇನೆ; ಅನುಭವಿಸಿದ್ದೇನೆ.

ಅವರು ಶಿಕ್ಷಕರಾಗಿ ಅಖಂಡ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿಯೂ

ದೊಡ್ಡ ಕುಟುಂಬದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಲೂ ಈ ಅಗಾಧ ಗಾತ್ರದಲ್ಲಿ ಅವರು ಕಾದಂಬರಿಗಳನ್ನು ಹೇಗೆ ಸೃಷ್ಟಿಸಿದರು ? ಅವರೇ ಹೇಳುತ್ತಾರೆ: "ನನ್ನದು ನಿಯಮಿತವಾದ ಜೀವನ. ಬೆಳಿಗ್ಗೆ ೩|| ಗಂಟೆಗೆ ಎದ್ದು ಚಹ ಸೇವಿಸಿ ಬರವಣಿಗೆಯಲ್ಲಿ ತೊಡಗಿದರೆ, ಏಳು ಗಂಟೆಯ ವರೆಗೆ ಸಾಹಿತ್ಯಸೇವಾ ಮಂದಿರದ ಕೋಣೆಯಿಂದ ಹೊರಗೆ ಬರುತ್ತಿರಲಿಲ್ಲ. ಅವಶ್ಯವೆನಿಸಿದರೆ ಇನ್ನೂ ಹೆಚ್ಚು ಕಾಲ ತೆಗೆದುಕೊಳ್ಳುತ್ತಿದ್ದೆ. ಈ ಬರವಣಿಗೆ ಮುಗಿದ ನಂತರ ಮತ್ತೊಮ್ಮೆ ಬೇಗ ಚಹ ಸೇವಿಸುವೆ. ನಂತರ ಅಧ್ಯಾಪನ ಕಾರ್ಯದ ಸಿದ್ಧತೆ. ನಂತರ ಸ್ನಾನ ಪೂಜೆ, ಊಟ, ಶಾಲೆ. ಹೀಗೆ ಅಖಂಡವಾಗಿ ಈ ಕಾರ್ಯಕ್ರಮ ಪಾಲಿಸಿಕೊಂಡು ಬಂದಿದ್ದೇನೆ. ಊರಿಗೆ ಹೋದಾಗ, ಬೇರೆನಾದರೂ ಕಾರ್ಯಕ್ರಮ ಆಕಸ್ಮಿಕವಾಗಿ ಬಂದಾಗ ಇದರಲ್ಲಿ ತುಸು ಹೆಚ್ಚು ಕಡಿಮೆ ಮಾಡಿಕೊಳ್ಳುತ್ತಿದ್ದೆ. ನಾನು ೨೫೦ ಪುಟಗಳ ಒಂದು ಕಾದಂಬರಿಯನ್ನು ಸ್ಥೂಲವಾಗಿ ವಿಚಾರಿಸಿ ಬರೆದು ಮುಗಿಸಲು ೩೦ ರಿಂದ ೪೦ ದಿನಗಳು ಸಾಕಾಗುತ್ತಿದ್ದವು. ಹೀಗಾಗಿ ಈ ೨೬ ವರುಷಗಳ ಅವಧಿಯಲ್ಲಿ ೭೩ ಕಾದಂಬರಿಗಳನ್ನು ಬರೆದು ಪೂರೈಸಲು ಸಾಧ್ಯವಾಯಿತು." ಸಾಯಂಕಾಲ ಅವರು ತಪ್ಪದೇ ತಿರುಗಾಡಿ ಬರಲು ಹೋಗುತ್ತಾರೆ. ಮಕ್ಕಳೊಂದಿಗೆ ಹೆಚ್ಚಾಗಿ ಹೋಗಿಬರುತ್ತಿದ್ದರು. ಅವರೀಗ ಬೇರೆ ಬೇರೆ ಊರುಗಳಲ್ಲಿರುವದರಿಂದ ಒಬ್ಬರೇ ಹೋಗಿಬರುತ್ತಾರೆ. ಯಾರಾದರೂ ಸ್ನೇಹಿತರು ಬಂದಿದ್ದರೆ ಅವರನ್ನು ಕರೆದೊಯ್ಯುತ್ತಾರೆ. ಈಗ ಈ ಕಾರ್ಯಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವಾಗುವುದು. ಮಕ್ಕಳೊಂದಿಗೆ ಸ್ನೇಹಿತರೊಂದಿಗೆ ತಮ್ಮ ರೂಪುಗೊಳ್ಳುತ್ತಿರುವ ಕಾದಂಬರಿಗಳ, ಕಥಾವಸ್ತು, ಪಾತ್ರಗಳು, ಹೀಗೆ ಚರ್ಚೆ ನಡೆಸುತ್ತಿದ್ದರು. ಆದರೆ ಯಾವ ಸಂದರ್ಭದಲ್ಲಿಯೂ ಅವರು ರಾತ್ರಿ ಬರೆದುದಿಲ್ಲ. ಬರವಣಿಗೆ ಮಾತ್ರ ಬೆಳಿಗ್ಗೇ ಸಾಗಬೇಕು. ಅದಕ್ಕೆ ಅವರು ಕಾರಣವನ್ನು ಕೊಡುತ್ತಾರೆ. "ಬೆಳಗಿನ ಸಮಯ ಪ್ರಶಾಂತವಾಗಿರುತ್ತದೆ. ಮನಸ್ಸು ಸ್ವಚ್ಛವಾಗಿರುತ್ತದೆ. ಯಾವ ಹೊಲಸು ವಿಚಾರಗಳೂ ಮನದಲ್ಲಿ ಆಗ ಹಣಿಕಿ ಹಾಕುವದಿಲ್ಲ. ತುಂಬ ಹುಮ್ಮಸ್ಸಿನಿಂದ ಬರೆಹ ಸಾಗುತ್ತದೆ." ಹೀಗೆ ಅವರ ಸಾಹಿತ್ಯಸೇವೆಯು ಸಾಗಿಬಂದುದು ಬೆಳಗಿನ ಅತಿ ಪ್ರಶಾಂತವಾದ ವಾತಾವರಣದಲ್ಲಿ. ಬಹುಶಃ ಈ ಕಾರಣಕ್ಕಾಗಿ ಅದು ತುಂಬ ಸರಾಗವಾಗಿ ಸಾಗಿಬಂದಿರಬೇಕು; ಅವ್ಯಾಹತವಾಗಿ ನಡೆದುದು, ನಡೆಯುತ್ತಿರುವುದು ಕೂಡ ಅದೇ ಕಾರಣಕ್ಕಾಗಿ ಇರಬೇಕು.

ಪುರಾಣಿಕರ ಕಾದಂಬರಿಗಳ ಜನಪ್ರಿಯತೆಯ ರಹಸ್ಯವೇನು ? ಅವರ ಅನೇಕ ಕಾದಂಬರಿಗಳು ಮೂರು ಮೂರು ನಾಲ್ಕು ನಾಲ್ಕು ಮುದ್ರಣಗಳನ್ನು ಕೂಡ ಕಂಡಿವೆಯಲ್ಲ. ಅವರ ಕಾದಂಬರಿಗಳು ಹೊರಬರುವದೇ ತಡ. ಓದುಗರು ಅವನ್ನು ಕೇಳಿಕೊಂಡು ತೆಗೆದುಕೊಂಡು ಹೋಗುವರಲ್ಲ. ಪ್ರಸಿದ್ಧ ಸಾಹಿತಿಗಳೂ, ವಿಮರ್ಶಕರೂ ವಿದ್ವಾಂಸರೂ ಆಗಿರುವ ಡಾ. ರಂ. ಶ್ರೀ ಮುಗಳಿಯವರು ಸಾಂಗಲಿ ವಿಲಿಂಗ್ಡನ್ ಕಾಲೇಜ ಕರ್ನಾಟಕ ಸಂಘಕ್ಕೆ ಶ್ರೀ ಪುರಾಣಿಕರನ್ನು ಮುಖ್ಯ ಅತಿಥಿ

ಗಳಾಗಿ ಬರಮಾಡಿಕೊಂಡಾಗ ಅವರ ಪರಿಚಯ ಮಾಡಿಕೊಡುತ್ತ, "ಕೀಳುದರ್ಜೆಯ ಕಾದಂಬರಿಗಳು ಹೆಚ್ಚಿರುವ ಈ ಕಾಲದಲ್ಲಿ ನಾನು ಕಾದಂಬರಿಗಳನ್ನು ಓದಿ ನೋಡಿಯೇ ಮನೆಯವರ ಕೈಯಲ್ಲಿ ಓದಲು ಕೊಡುತ್ತೇನೆ. ಆದರೆ ಶ್ರೀ ಪುರಾಣಿಕರ ಕಾದಂಬರಿಗಳನ್ನು ನೇರವಾಗಿ ಮಗಳ ಕೈಯಲ್ಲಿ ಕೊಡುತ್ತೇನೆ" ಎಂದು ಹೇಳಿದರು. ಈ ಮಾತು ತುಂಬ ಸತ್ಯವಾದುದು. ಇವರ ಕಾದಂಬರಿಗಳು ನಮ್ಮ ಹೆಣ್ಣು-ಮಕ್ಕಳಿಗೆ ನೀತಿಯ ಆದರ್ಶಪಾಠವನ್ನು ಹಾಕಿಕೊಟ್ಟಿವೆ ಎಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಹೆಣ್ಣುಮಕ್ಕಳ ಬಾಳನ್ನು ಹದಗೊಳಿಸುವ ಹೂರಣ ಇವರ ಕಾದಂಬರಿಗಳ ಅಂತಃಸತ್ವ. ಪುರಾಣಿಕರು ಕೂಡ ತಮಗೆ ಬಂದ ಹಲವಾರು ಪತ್ರಗಳನ್ನು ಕುರಿತು ಸಾರರೂಪವಾಗಿ ಹೀಗೆ ಹೇಳುತ್ತಾರೆ: "ಹೆಣ್ಣುಮಕ್ಕಳ ತಂದೆಯವರು ನನಗೆ ವಿಶ್ವಾಸದಿಂದ ಕಾಗದ ಬರೀತಾರೆ; 'ನಿಮ್ಮ ಕಾದಂಬರಿಗಳನ್ನು ಮಾತ್ರ ನಮ್ಮ ಹೆಣ್ಣುಮಕ್ಕಳು ಯಥೇಚ್ಛವಾಗಿ ಓದಬಹುದು' ಅಂತ. ಈ ಒಂದು ವಿಶ್ವಾಸವನ್ನು ನನ್ನ ಕಾದಂಬರಿಗಳು ಗಳಿಸಿಕೊಂಡಿವೆ. ನನ್ನ ಕಾದಂಬರಿ ಪ್ರಪಂಚ ಎಂದರೆ ಮಧ್ಯಮವರ್ಗದ ಮನೆತನ ಅಂತ ಹೇಳ್ತೀನಿ. ನನ್ನ ಮುತ್ತೈದಿಯ ಜಾನಕಿ, ಬಿಸಿಲಿನ ಬೆಳೆಯ ಸಾವಿತ್ರಿ, ಮುತ್ತು ಮಣ್ಣಿನ ಮಗಳ ವಸುಮತಿ ಇವರೆಲ್ಲಾ ನನ್ನ ಪರಿವಾರ ನೋಡ್ರಿ. ಇವರಿಗಾದ ಸಂತೋಷವೇ ನನ್ನ ಸಂತೋಷ. ನಾನು ಒಂದೆಡೆಗೆ ನುಡಿದ ಹಾಗೆ ಓದುಗರ ಒಂದೆರಡು ತಾಸಿನ ಸಂತೋಷಕ್ಕಾಗಿ ಬರೆವಗಾರನ ಹೃದಯ ಕಣ್ಣೀರಿನ ಕುಲುಮೆ ಆತನದು. ಸಾಹಿತಿ ಅಂದರೆ ಅನಂತ ಸಹನೆಯ ಸಾಕಾರಮೂರ್ತಿ ಅಂತ ನಾನು ತಿಳಿದಿದ್ದೇನಿ. ಜೀವನದ ಕಹಿ-ಕಷಾಯ ಎಲ್ಲ ತಾನು ಕುಡಿದು ಅಮೃತವನ್ನು ಜನಕ್ಕೆ ನೀಡುತ್ತಾನೆ." ಪುರಾಣಿಕರ ಕಾದಂಬರಿಗಳಲ್ಲಿ ಅವರ 'ಈ ಹೃದ್ಭಾವನೆ ಪ್ರಾಮಾಣಿಕವಾಗಿ ಮೂಡಿ ಬಂದಿರುವುದು. ಅವರ ಕಾದಂಬರಿಗಳು ಲೋಕಪ್ರಿಯವಾಗಿರುವದಕ್ಕೆ ಇದು ಮುಖ್ಯವಾದ ಕಾರಣವಾಗಿ-ರುವುದು. ಕನ್ನಡದ ಹಿರಿಯ ಕಲಾವಿದೆ ಶ್ರೀಮತಿ ಸಂಧ್ಯಾಬಾಯಿಯವರು ಇವರ ಕೃತಿಗಳ ಬಗೆಗೆ ಹೇಳಿದ ಮಾತುಗಳು ಇಲ್ಲಿ ಅತ್ಯಂತ ಮನನೀಯವಾಗಿರುವವು; "ವಿವೇಕ ಸತ್ಸಹವಾಸ, ಆತ್ಮವಿಚಾರದಿಂದ ಹೆಚ್ಚೆಚ್ಚಿಗೂ ಸವಿಗನಸುಗಳು ಕಂಡು, ಮನದಲ್ಲಿ ಉತ್ತಮ ವಿಚಾರಗಳು ತುಂಬಿ, ಶುದ್ಧವಾದ ಹೃದಯಾಕಾಶದಲ್ಲಿ ಕೆಟ್ಟ ನಡತೆಯ ಕಗ್ಗತ್ತಲೆಯ ಸೋಂಕಿಲ್ಲದೆ, ಪವಿತ್ರ ಭಾವನೆಗಳ ಬೆಳದಿಂಗಳಲ್ಲಿ, ಸತ್ಯದ ಬೀಜವನ್ನು ಬಿತ್ತಿ ವಿವೇಕದ ಮರವಾಗಿ, ಧರ್ಮದ ಫಲವನ್ನು ಹೊರಹೊಮ್ಮುವಂಥ ಉತ್ತಮ ಕೃತಿಗಳನ್ನು ಬರೆದ ತಮಗೆ ಇನ್ನೂ ಹೆಚ್ಚು ಉತ್ತಮಗ್ರಂಥಗಳನ್ನು ಬರೆಯಲು ಸಂಪದದೊಂದಿಗೆ ದೀರ್ಘಾಯುಷ್ಯವನ್ನು ಕೊಡಲೆಂದು ಶ್ರೀ ದೇವರಲ್ಲಿ ಬೇಡುತ್ತೇನೆ" ಕನ್ನಡದ ಇನ್ನೊಂದು ಹಿರಿಯ ಜೀವ ಶ್ರೀ ಡಿ. ವಿ. ಗುಂಡಪ್ಪನವರು "ತಂಪು ನೆಳಲು" ಗ್ರಂಥದ ಕೆಲವು ಪುಟಗಳನ್ನು ಒಬ್ಬ ಸ್ನೇಹಿತನಿಂದ ಓದಿಸಿ ಕೇಳಿ ಆನಂದಪಟ್ಟೆ. ಇಡೀ ಗ್ರಂಥವನ್ನೇ ಓದಿಸಿ ಕೇಳಬೇಕು ಎಂಬ ರುಚಿ ನನ್ನ

ಮನದಲ್ಲಿ ಹುಟ್ಟಿದೆ. ನೀವು ಕರುಣೆಯನ್ನೇ ಧರ್ಮದ ಮೂಲವನ್ನಾಗಿ ಅಂಗೀಕರಿಸಿರುವವರು. ನಿಮ್ಮ ಈ ಕರುಣೆ ನನಗೆ ಅಮೃತಪ್ರಾಯವಾದದ್ದು." ಎಂದು ಹೇಳುವಾಗ ಪುರಾಣಿಕರ ಈ ಕಾದಂಬರಿ ಸಾಹಿತ್ಯದ ಬಗೆಗೆ ಅವರು ತುಂಬ ಮಮತೆಯನ್ನೇ ವ್ಯಕ್ತಪಡಿಸಿದ್ದಾರೆ. ಕನ್ನಡದ ಪ್ರಸಿದ್ಧ ಲೇಖಿಕೆಯರು, ಕಾದಂಬರಿಕಾರ್ತಿಯೆನಿಸಿದ ಶ್ರೀಮತಿ ಎಂ. ಕೆ. ಇಂದಿರಾ ಅವರು ಹೇಳಿರುವಂತೆ "ಸಮಾಜಕ್ಕೆ ಅಪಥ್ಯವಾಗದಂಥ ಔಷಧ ರೂಪವಾದ ಸಾಹಿತ್ಯರಚನೆ" ಪುರಾಣಿಕರದಾಗಿರುವುದು ಪುರಾಣಿಕರ ಕಾದಂಬರಿಗಳಲ್ಲಿಯ ಆದರ್ಶಮಯತೆಯನ್ನು ಎತ್ತಿಹಿಡಿದು ವರಕವಿ ದ. ರಾ. ಬೇಂದ್ರೆಯವರು ಹೇಳಿದ ಈ ಮಾತು, "ಗೃಹಿಣಿಯರಿಗೆ ಪಥ್ಯಕರವಾಗುವ ರೀತಿಯಲ್ಲಿ ನೀನು ಕಾದಂಬರಿಗಳನ್ನು ಬರೆದಿರುವಿ. ಸೀತಾ, ದ್ರೌಪದಿ, ಮೊದಲಾದ ಕ್ಷಾತ್ರ ಪತಿವ್ರತೆಯರು ಪಟ್ಟ ಕಷ್ಟ, ತೋರಿಸಿದ ಎದೆಗಾರಿಕೆ, ಅವು ಇಂದಿನ ಗೃಹಿಣಿಯರಿಗೂ ಬೇಕು ಎನಿಸುತ್ತದೆ. ಜೀವನದ ಹಲವು ಸತ್ತ್ವಪರೀಕ್ಷಕ ಸಂದರ್ಭಗಳು ನಾರೀ ವರ್ಗಕ್ಕೆ ಬರದೇ ಹೋಗುವದಿಲ್ಲ. ಮುಂದಿನ ಭಾರತದಲ್ಲಿ ಅಂಥ ಚಾರಿತ್ರ್ಯದ ವಾಸ್ತವಿಕತೆಯನ್ನು ತೋರಿಸುವಾಗ ವಿವೇಕದಷ್ಟೇ, ಕಲಾವಂತಿಕೆಯ ನಾಟಕೀಯತೆಯನ್ನು ತೋರಿಸುವ ಶಕ್ತಿ ನಿನ್ನಲ್ಲಿದೆ ಎಂದು ನಂಬಿದ್ದೇನೆ. ವಾಸ್ತವದ ವೀರ ವಿಲಾಸವನ್ನು ನೀನು ತೋರಿಸು." ಅವರ ಕಾದಂಬರಿಗಳ ಲೋಕಪ್ರಿಯತೆಯ ಅಂಶವನ್ನು ಮತ್ತೆ ಮತ್ತೆ ಎತ್ತಿ ತೋರಿಸುತ್ತದೆ. ಪುರಾಣಿಕರ ಕಾದಂಬರಿಗಳ ಬಗೆಗೆ ಪ್ರಸಿದ್ಧ ವಿದ್ವಾಂಸರೂ 'ಶರಣ ಸಾಹಿತ್ಯ'ದ ಸಂಪಾದಕರೂ ಆದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೇಳಿರುವ, "ಶ್ರೀ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳು ಸರಸಶೈಲಿ, ಸುಂದರ ಸನ್ನಿವೇಶ, ಉತ್ತಮ ಸಂದೇಶ, ಸಹಜವಾದ ಕಥಾವಸ್ತು, ಗಂಭೀರವಿಚಾರಗಳಿಂದ ಹೆಸರು ಪಡೆದಿರುವವು" ಎಂಬ ಮಾತುಗಳು ಅವರ ಕಾದಂಬರಿ ಸಾಹಿತ್ಯವನ್ನು ನಮ್ಮ ಜನತೆಗೆ ಚೆನ್ನಾಗಿ ಪರಿಚಯ ಮಾಡಿಕೊಡುತ್ತವೆ ಎಂದು ಹೇಳಬಹುದು; ಇಡಿಯಾಗಿ ದಿಗ್ದರ್ಶನದ ರೂಪದಲ್ಲಿರುವದು ವ್ಯಕ್ತವಾಗುವುದು.

ಪುರಾಣಿಕರ ವಿಪುಲ ಸಾಹಿತ್ಯ ಸೃಷ್ಟಿ ಒಂದು ಹೆಗ್ಗಳಿಕೆ, ನಿಜವಾಗಿ ಒಂದು ಸಾಧನೆ ಎಂದು ನಿರಂಜನರು ಹನ್ನೆರಡುವರುಷಗಳ ಹಿಂದೆಯೇ 'ಪುರಾಣಿಕರ ತೀರ್ಥಯಾತ್ರೆ' ಕುರಿತು ಬರೆದಾಗ ಹೇಳಿದ್ದಾರೆ: "ಉತ್ತರ ಕರ್ನಾಟಕದ ಗೋಕಾಕದಲ್ಲಿ ನೆಲೆಸಿರುವ ಮಧ್ಯಮವಯಸ್ಸಿನ ಪುರಾಣಿಕರು ವೃತ್ತಿಯಲ್ಲಿ ಅಧ್ಯಾಪಕರು. ಸಾಹಿತ್ಯ ಕೃಷಿ ಇವರ ಹಾಬಿ. ಆದರೆ ಕಳೆದ ಕೆಲ ವರುಷಗಳಲ್ಲಿ ಈ ಹಾಬಿ ಬೃಹದಾಕಾರವಾಗಿ ಬೆಳೆದಿದೆ. ಅಧ್ಯಾಪಕನೊಳಗೆ ಸಾಹಿತಿಯೊ, ಸಾಹಿತಿಯೊಳಗೆ ಅಧ್ಯಾಪಕನೊ? ಎಂಬುದು ತಿಳಿದು ಬರದಷ್ಟು ಬಲಗೊಂಡಿದೆ. ಬಹುಶಃ ಪುರಾಣಿಕರು ಮೊದಲು ಅನುರಕ್ತರಾದುದು ಸಾಹಿತ್ಯ ಶಾರದೆಯಲ್ಲೇ ಇರಬೇಕು. ವಿದ್ಯಾಗಣಪತಿ ಮಗ್ಗಲು ಸ್ಥಾನವೇ ಸಾಕೆಂದು ಬದಿಗೆ ಸರಿದಿದ್ದಾನೆ. ನೂರಾರು ವಿದ್ಯಾರ್ಥಿಗಳಿಗೆ ಪಾಠ

ಹೇಳಬೇಕಾದಾಗ ಮುಡಿಸುವ ಹಗಲು, ಬಿಡುವಿನ ವೇಳೆಯ ಪಾಲು ಕೇಳುವ ಅಚ್ಚುಕಟ್ಟಾಗಿರುವ ಸಂಸಾರ ಇಟ್ಟಿದ್ದೂ ವಿಪುಲ ಸಾಹಿತ್ಯವನ್ನು ಸೃಷ್ಟಿಸಲು ಪುರಾಣಿಕರು ಸಮರ್ಥರಾಗಿರುವುದು ಅವರ ಹೆಗ್ಗಳಿಕೆ" ಈ ಮಾತುಗಳಲ್ಲಿ ಪುರಾಣಿಕರ ಜೀವನದರ್ಶನವೇ ಅಡಗಿದೆಯೆಂದರೆ ತಪ್ಪಾಗದು. ಅವರ ವಿಪುಲ ಸಾಹಿತ್ಯಸೃಷ್ಟಿ ನಿಜವಾಗಿ ಕನ್ನಡಿಗರಿಗೆ ಒಂದು ಹೆಮ್ಮೆಯ ವಿಷಯವೇ ಆಗಿರುವುದು.

ಪುರಾಣಿಕರು ತಮ್ಮ ಐವತ್ತನೆಯ ಕೃತಿ 'ಪಾವನಗಂಗಾ'ದಲ್ಲಿ ಅವರು ತಮ್ಮ ಅನಿಸಿಕೆಗಳನ್ನು, ಯೋಜನೆಗಳನ್ನು ತೋಡಿಕೊಂಡಿದ್ದಾರೆ. ಅವರ ವಿಚಾರಪರತೆ, ಚಿಂತನಶೀಲತೆ ನಿಜವಾಗಿ ಅಲ್ಲಿ ಎದ್ದು ಕಾಣುವುದು. ತಮ್ಮ ಬಗೆಗೆ ತಾವು ಹೇಳಿಕೊಳ್ಳುವುದು ಸರಿಯೇ ಎಂಬ ವಿವಂಚನೆ ಕೂಡ ಅಲ್ಲಿ ಮೂಡಿನಿಂತಿರುವುದು. "ಕಾವ್ಯವೇ ತಮ್ಮ ಗುರು" ಎಂದು ಹೇಳಿಕೊಂಡಿರುವ ಪುರಾಣಿಕರ ಜೀವನ ದೃಷ್ಟಿ ಈ ಮೂಲಕ ಸ್ಫುಟವಾಗಿ ನಿಂತಿರುವದರಿಂದ, ಅವರನ್ನು ಅರಿತುಕೊಳ್ಳಲು, ಅರ್ಥವಿಸಿಕೊಳ್ಳಲು ಅವರ ಈ ಮಾತುಗಳನ್ನು ಗಮನಿಸುವುದು ಅವಶ್ಯ.

"ನನ್ನ ಜನವೇ ನನ್ನ ಮನ; ನನ್ನ ಹೃದಯ. ಈ ಹೃದಯದಲ್ಲಿ ತುಂಬಿ ನಿಂತ ಜನಮನದ ವಿವಿಧ ವಿಪುಲ ಸಾಮಗ್ರಿ ರಸಬುಗ್ಗೆಯಾಗಿ ಹೊರಹೊಮ್ಮಬೇಕು ಈ ಅನುಗ್ರಹ ಸಮಾಜ ಪುರುಷನದಾಗಬೇಕು.

ನನ್ನದೆನ್ನುವದೆಲ್ಲವೂ ಸಮಾಜದ್ದು; ನನ್ನ ಸ್ಫೂರ್ತಿ ನೀರಿನ ಕಾರಂಜಿಗೆ ಮೂಲ ರಸ ಸಮಾಜ ಜೀವನದು. ಈ ಬೇರು ಆಳವಾಗಿ ಭೂಮಿಯಲ್ಲಿ ಪಸರಿಸಿದಂತೆ ಮುಗಿಲ ತುಂಬ ಹರಡಿಕೊಂಡಿದೆ.

ಈ ಹಂದರವೇ ಸಾಹಿತ್ಯ ತಪಸ್ಸಿಗೆ ನೆರಳು; ಇದೇ ಆಸರ. ಈ ತಂಪಿನಲ್ಲಿ ಸಾಹಿತಿ ಹೃದಯದ ಶಾಂತಿಯನ್ನು ಪಡೆಯುತ್ತಾನೆ. ಈ ಶಾಂತಿಯೇ ಪ್ರೇರಣೆ-ಯಾಗಿ ಒಮ್ಮೊಮ್ಮೆ ಹೃದಯದಲ್ಲಿ ತಳಮಳವನ್ನು ಎಬ್ಬಿಸುತ್ತದೆ.

ಈ ತಳಮಳವೇ ಕೃತಿ ಸೃಷ್ಟಿಗೆ ಪ್ರಚೋದನೆಯನ್ನು ಕೊಡುತ್ತದೆ. ಜೀವನದ ಶಾಂತಿಯಲ್ಲಿ ತಳಮಳ; ತಳಮಳದ ತೃಪ್ತಿಗಾಗಿ ಸಾಹಿತ್ಯ ಸೃಷ್ಟಿ. ಈ ಸೃಷ್ಟಿಯಲ್ಲಿ ಮತ್ತೆ ಶಾಂತಿ. ಲೇಖಕನು ಅನುಭವಿಸುವ ಮಹಾ ಬೇನೆ ಇದು. ಬೇನೆ ಹೆಚ್ಚಾದಷ್ಟು ಕೃತಿ ಸೃಷ್ಟಿಗೆ ಪೂರ್ಣತೆ.

'ನನ್ನವು' ಎಂದರೆ ನನ್ನದಲ್ಲ; ನನ್ನ ಪ್ರೇರಣೆಗೆ ಮೂಲ ಕಾರಣವಾದ ನನ್ನೊಳಗೆ ನೆಲಸಿರುವ ಆ ಭಗವಂತನದು. ನನ್ನದು ಎಂದರೆ ಹೆಮ್ಮೆಯ ಮಾತು. 'ಅವನ'ದು ಎಂದರೆ ಮಾತ್ರ ಯೋಗ್ಯ. ನನ್ನದೆನ್ನುವದೆಲ್ಲ ಅವನದು. ಈ ದೈವೀ ಭಕ್ತಿ, ನಿಷ್ಠೆಗಳೇ ಅವರ ಸೃಜನಶೀಲತೆಯ ನಿತ್ಯ ನಿರಂತರ ಸೆಲೆ.

'ಸಾಹಿತ್ಯ ಸೃಷ್ಟಿ' ಭಗವಂತನ ಪ್ರೇರಣೆಯೇ ಆಗಿರುವದರಿಂದ ಇದು ನಾನು ಬರೆದ ಐವತ್ತನೆಯ ಕೃತಿ ಎಂದು ಹೇಳುವುದು ಒಂದು ನಿಮಿತ್ತಮಾತ್ರವಾಗಿದೆ. ಇದರಲ್ಲಿ ನನ್ನದೆನ್ನುವದೆಲ್ಲವೂ ಅವನದು. ಜನತೆಯಲ್ಲಿ ಜಾಗೃತವಾಗಿರುವ

ಜನಾರ್ದನನದು. ಅವನ ಪ್ರೇರಣೆಯೇ ನನಗೆ ಅನುಗ್ರಹ. ಅವನ ಆಶೀರ್ವಾದವೇ ನನಗೆ ವರಪ್ರಸಾದ. ಮಾಡಿಸುವವನು ಅವನು; ಆಡಿಸುವವನು ಅವನು........... ಇದು ದೇವರ ಸೇವೆಯೆಂದು ನಂಬಿದ್ದೇನೆ."

ಜೂನ್ ೧೯೭೪ರ ವರೆಗೆ ಅವರು ೭೩ ಕಾದಂಬರಿಗಳನ್ನು ಬರೆದಿದ್ದು ಒಟ್ಟು ಪುಟಗಳು ೧೫೮೯೩. ಪ್ರತಿಗಳು ಎರಡುಲಕ್ಷ ಐವತ್ತೆಂಟು ಸಾವಿರ. ಹತ್ತು ಕವನ ಸಂಗ್ರಹಗಳು ಪ್ರಕಟವಾಗಿವೆ. ಪುಟ ಸಂಖ್ಯೆ ೧೬೧೧; ಪ್ರತಿಗಳು ೧೦೮೦೦. ಸರಳರಗಳೆಯ ಸಾಹಿತ್ಯ ೫೯೭೧ ಚರಣಗಳು ಪ್ರತಿಗಳು ೩೯೫೦೦. ಕವನ ಸಂಗ್ರಹಗಳು ೪೪೮೦ ಚರಣಗಳು. ಪ್ರತಿಗಳು ೩೫೦೦. ಮಕ್ಕಳ ಸಾಹಿತ್ಯ ೭. ಪುಟಗಳು ೩೧೦. ಪ್ರತಿಗಳು ೧೯೦೦. ಇನ್ನು ಹಲವಾರು ಲೇಖನಗಳು ಧಾರಾವಾಹಿಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಈ ಎಲ್ಲ ಮಾತುಗಳನ್ನು ಗಮನಿಸಿದ ನಿರಂಜನರು ಹೇಳುವ ಮಾತು: "ಪುರಾಣಿಕರು ನೈರ್ಮಲ್ಯಕ್ಕೂ ಮಡಿವಂತಿಕೆಗೂ ಪ್ರಸಿದ್ಧರು. ಪುರಾಣಿಕರ ಬರವಣಿಗೆ, ಅವರ ವ್ಯಕ್ತಿತ್ವ ವ್ಯವಹಾರಗಳಷ್ಟೇ ಶುಚಿ; ಅಚ್ಚುಕಟ್ಟು" ಇದು ಪುರಾಣಿಕರ ವ್ಯಕ್ತಿತ್ವಕ್ಕೆ ತುಂಬ ಸುಟಿಯಾದ ಮಾತು. ಹೇಳುವದೊಂದು ಮಾಡುವದೊಂದು ಅವರಲ್ಲಿ ಇಲ್ಲವೇ ಇಲ್ಲ. ಎಲ್ಲವೂ ಸರಿಯಾದ ವೇಳೆಗೆ ಸರಿಯಾಗಿ ನಡೆಯಬೇಕು ಎಂದು ಅವರು ತುಂಬ ಅಪೇಕ್ಷಿಸುವರು. ಒಂದು ಸಲ ಅವರು ಪುಣೆಗೆ ಹೋಗಿದ್ದರು. ಅಲ್ಲಿ ಓರ್ವ ಸ್ನೇಹಿತರನ್ನು ಇಂಥ ವೇಳೆಗೆ ಕಾಣುವದಾಗಿ ಹೇಳಿದ್ದರು. ಆದರೆ ಆಗ ಭಾರಿ ಮಳೆ ಬೀಳತೊಡಗಿತ್ತು. "ಮಳೆ ನಿಲ್ಲಲಿ ಆಮೇಲೆ ಹೋಗಬಹುದು" ಎಂದು ಅಳಿಯ–ಮಗಳು ಹೇಳಿದರು. ಆದರೆ ಪುರಾಣಿಕರಿಗೆ ಅದು ಸರಿ ಬೀಳಲಿಲ್ಲ. ಕೊಡೆ ಹಿಡಿದು ಹೊರಟೇಬಿಟ್ಟರು. ಸ್ನೇಹಿತರನ್ನು ಕಂಡು ಬಂದ ನಂತರವೇ ಅವರಿಗೆ ಸಮಾಧಾನವೆನಿಸಿತು. ಅವರ ಪತ್ರವ್ಯವಹಾರ ಕೂಡ ಅಷ್ಟೇ ಚೊಕ್ಕಟವಾದುದು. ಸಾಹಿತಿ ಬರೆದಿರಲಿ, ಸಾಮಾನ್ಯ ಓದುಗ ಬರೆದಿರಲಿ ಆ ಕೂಡಲೇ ಅವರು ಅವನಿಗೆ ಉತ್ತರಿಸುವರು. ಆ ದಿನ ಬರೆಯ ಬೇಕಾದ ಉತ್ತರಗಳನ್ನು ಆ ದಿನವೇ ಬರೆಯಬೇಕು. ಒಂದು ಸಲ ನಾನು ಅವರನ್ನು ಕಂಡು ನಂತರ ವಿಜಾಪುರಕ್ಕೆ ಹೊರಟಿದ್ದೆ. ಅಲ್ಲಿರುವ ಅವರ ಕಿರಿಯ ಮಗ ಆನಂದನನ್ನು ನಾನು ಕಾಣಬೇಕಿತ್ತು. ನಾನು ವಿಜಾಪುರ ತಲುಪುವ ಹೊತ್ತಿಗೆ ಪುರಾಣಿಕರಿಂದ ಅವನಿಗೆ ಆಗಲೇ ಪತ್ರ ಹೋಗಿತ್ತು. ಇಂಥ ಒಂದು ನಿಯಮಿತ ತನವನ್ನು ಅವರು ಜೀವನದಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಮಾಸ್ತರರಲ್ಲಿ ಸಾಮಾನ್ಯವಾಗಿ ಕಂಡುಬರುವ ಮರಗುಳಿತನವಾಗಲಿ, ಹಿರಿಯ ಸಾಹಿತಿಯಲ್ಲಿ ಕಂಡು ಬರುವ ಅಭಿಮಾನದ ಮರಗುಳಿತನವಾಗಲಿ ಪುರಾಣಿಕರಲ್ಲಿ ನಮಗೆ ಕಾಣಸಿಕ್ಕುವ-ದಿಲ್ಲ. ಅವರು ತಮಗೆ ಒಮ್ಮೆ ಭೆಟ್ಟಿಯಾದವರನ್ನು ಕೂಡ ಮರೆತಿಲ್ಲವೆಂಬ ಮಾತು ನನಗೆ ಗೊತ್ತಿದೆ. ಅಂತೇ ಅವರು ಕೇವಲ ಸಾಹಿತಿಯೆಂದು ಮಾತ್ರ ಪರಿಚಿತ-

ರಾಗಿಲ್ಲ; ಇಂಥ ಹಿರಿಯ ಜೀವಿ ಎಂದೂ ಮನ್ನಿತರಾಗಿದ್ದಾರೆ. ಅವರು ತುಂಬ ಸಾಧು ಸ್ವಭಾವದವರು: ವಿನಯಶೀಲರು, ನಿರಭಿಮಾನಿಗಳು, ಹಿರಿ–ಕಿರಿಯರೆಂಬ ಭೇದ ಭಾವವಿಲ್ಲದೆ ತಮ್ಮನ್ನು ಕಾಣಲು ಬಂದವರನ್ನು ಸರಿಯಾಗಿ ಕಾಣುವರು; ಮಾತನಾಡಿಸುವರು, ಯೋಗಕ್ಷೇಮ ವಿಚಾರಿಸುವರು. ಅವರಿಗೆ ತಮ್ಮಿಂದ ಆಗಬೇಕಾದ ಕೆಲಸವಿದ್ದರೆ ಅದನ್ನು ಮಾಡಿಕೊಡುವರು. ಅವರು ಕಿರಿಯ ಸಾಹಿತಿಗಳಾಗಿದ್ದರೆ ಅವಶ್ಯವಿದ್ದ ಮಾರ್ಗದರ್ಶನ ನೀಡುವರು; ಪ್ರಸಂಗವಶಾತ್ ಅವರ ಕೃತಿಗಳ ಪ್ರಕಾಶನವಾಗಬೇಕಿದ್ದರೆ ಆ ಕಾರ್ಯವನ್ನು ನೆರವೇರಿಸಿಕೊಡುವರು. ಈ ದೃಷ್ಟಿಯಿಂದ ಅವರು ಗೋಕಾಕದಲ್ಲಿ ತಾವು ಈಗ ಕಟ್ಟಿಸಿಕೊಂಡಿರುವ ಹೊಸಮನೆಗೆ 'ಆಶೀರ್ವಾದ' ಎಂದು ಹೆಸರು ಇರಿಸಿದ್ದು ನಿಜಕ್ಕೂ ಸಾರ್ಥಕವಾದ ಹೆಸರು ಎಂದು ನನಗನಿಸುವುದು. ಯಾವಾಗಲೂ ಅವರಲ್ಲಿ ಅತಿಥಿಗಳು. ಅವರೊಂದಿಗೆ ಪುರಾಣಿಕರು ರುಚಿಯಾಗಿ ಮಾತನಾಡುವಂತೆ ರುಚಿ–ರುಚಿಯಾದ ತಿಂಡಿ–ತಿನಿಸುಗಳನ್ನು ಗಂಗಕ್ಕ ಬಡಿಸುವರು; ಚಹ–ಕಾಫಿಗಳ ಸಮಾರಾಧನೆ ನಡೆಯುವುದು. ಪುಷ್ಕಳವಾಗಿ ಭೋಜನವಾಗುವುದು. ಗೋಕಾಕಕ್ಕೆ ಬಂದವರು ಅವರನ್ನು ಕಾಣದೆ ಹೋಗುವುದು ವಿರಳ. ಗೋಕಾಕ ಬೇರೆ, ಪುರಾಣಿಕರು ಬೇರೆ ಎಂದಿಲ್ಲ. 'ಪುರಾಣಿಕರ ಗೋಕಾಕ' ಎಂದೆನ್ನುವಷ್ಟು ಅವರು ಕನ್ನಡ ನಾಡಿನಲ್ಲಿ ಈ ಬಗೆಯಲ್ಲಿ ಗೋಕಾಕದ ಆಕರ್ಷಣೆ ಬೆಳೆಸಿದ್ದಾರೆ. ತನ್ಮೂಲಕ ಗೋಕಾಕ ತವರೂರು ಎಂಬ ಅಭಿಮಾನವನ್ನು ಅವರು ಬೆಳೆಸಿಕೊಂಡಿದ್ದಾರೆ. ಪುರಾಣಿಕರು ಕನ್ನಡ ನಾಡಿನ ಹೆಮ್ಮೆಯಾಗಿದ್ದಂತೆ ಗೋಕಾಕದ 'ಭಾರಿ ಹೆಮ್ಮೆ'ಯೆನಿಸಿದ್ದಾರೆ.

೧೯೩೪ ರಿಂದ ಈ ವರೆಗೆ ನಾಲ್ಕು ದಶಕಗಳ ಅವಧಿಯಲ್ಲಿ ಅವರು ಭಾಗವಹಿಸಿದ ಗೋಷ್ಠಿಗಳು ಹಲವಾರು. ಕಾವ್ಯವಾಚನ, ಲೇಖನ ವಾಚನಗಳನ್ನು ಅವರು ನಡೆಸಿದ್ದಾರೆ. ಕಿರಿಯರಿಗೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಹಲವಾರು ವರುಷಗಳವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾಯಿತ ಸದಸ್ಯರೂ ಇದ್ದರು. ಮಹಾಕವಿ ಕುವೆಂಪು ಅವರು ಭಾಗವಹಿಸಿದ ಸಾಹಿತ್ಯ ಸಮ್ಮೇಳನಗಳಲ್ಲಿ ಇವರೂ ಭಾಗವಹಿಸಿದ್ದರು. "ಓ! ಸ್ಥಿರೇಂದ್ರಿಯ ಪುರಾಣಿಕರೇ!" ಎಂದೇ ಇವರನ್ನು ಅವರು ಗುರುತಿಸಿದರು. ೧೯೭೧ ರಲ್ಲಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಷಷ್ಟ್ಯಬ್ದಿ ಆಚರಿಸಿದ ಸಂದರ್ಭದಲ್ಲಿ ಪುರಾಣಿಕರು ಮಹಾಕವಿಗಳನ್ನು ಕಾಣಲು ಹೋಗಿದ್ದವರು ಅವರಿಗೆ ಮಣಿದು ನಿಂತಾಗ ಅವರು ಎತ್ತಿ ಹಿಡಿದು ಅಪ್ಪಿಕೊಂಡಾಗಿನ ಆ ಆನಂದ, ಹರುಷಗಳನ್ನು ಪುರಾಣಿಕರ ಬಾಯಿಂದಲೇ ಕೇಳಬೇಕು. ಅವರಿಗೆ ಕವಿಗಳು 'ರಾಮಾಯಣ ದರ್ಶನ' ಕಾವ್ಯವನ್ನು ಕಾಣಿಕೆಯಾಗಿ ಕೂಡ ನೀಡಿದರು. ಪುರಾಣಿಕರು ಅಲ್ಲಿಂದ ಹೊರಬರುವಾಗ,

ಕನ್ನಡ ದಿಂಡಿಮ ನಾದ ವಿಲಾಸದಿ
ಪುಳುಕಿತವಾಯಿತು ನಮ್ಮ ನೆಲ

ಕನ್ನಡ ಕೋಕಿಲ ಹಾಡಿದ ಹಾಡಿಗೆ
ಪಾವನವಾಯಿತು ನೆಲದಗಲ

ಎಂದು ಮನದಲ್ಲಿ ಮೂಡಿದ ಭಾವನೆಗಳನ್ನು ಕವನರೂಪದಲ್ಲಿ ಗುಣಗುಣಿಸುತ್ತ ಬಂದರಂತೆ!

ಪುರಾಣಿಕರು ಈಗ ನಿವೃತ್ತರಾಗಿದ್ದಾರೆ ಶಿಕ್ಷಕವೃತ್ತಿಯಿಂದ. ಆದರೆ ಸಾಹಿತ್ಯ ಸೇವೆಯಿಂದ, ಸಾಹಿತ್ಯ ಸೃಷ್ಟಿಯಿಂದ ಅವರಿಗೆ ನಿವೃತ್ತಿಯೆಂಬುದು ಇಲ್ಲವೇ ಇಲ್ಲ. ನಿವೃತ್ತಿಯ ನಂತರ ಜೀವನ ಹೇಗೆ ಕಳೆವುದು ಎಂಬ ಚಿಂತೆ ಹಲವರಿಗೆ ಕಾಡುತ್ತಿರುತ್ತದೆ. ಆದರೆ ಪುರಾಣಿಕರಿಗೆ ಆ ಪ್ರಶ್ನೆಯೇ ಇಲ್ಲ. ಆ ನಿವೃತ್ತಿಯಿಂದ ಅವರು 'ಸಾಹಿತ್ಯ ವೃತ್ತಿ'ಗೆ ಬಂದಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದಾರೆ. ಜನತೆಗೆ ಸಂಸ್ಕೃತಿಯ ದರ್ಶನ ಮಾಡಿಸುವಲ್ಲಿ ನಿರತರಾಗಿದ್ದಾರೆ. ಈಚೆಗಷ್ಟೇ ಅವರ ಷಷ್ಟಬ್ದಿಯನ್ನು ನಾಡಿನ ಮೂಲೆ – ಮೂಲೆಯಲ್ಲಿ ತುಂಬ ಸಂಭ್ರಮದಿಂದ ಕನ್ನಡಿಗರು ಆಚರಿಸಿದರು; ಅವರ ಅನುಭವ ಪೂರ್ಣವಾದ ವಾಣಿಯನ್ನು ಆಲಿಸಿದರು; ನುಡಿ – ಜೇನನ್ನು ಸವಿದರು. ಇಷ್ಟೆಲ್ಲ ಕೆಲಸ ಮಾಡಿದ್ದರೂ ಅವರಿಗೆ ತೃಪ್ತಿಯೆಂಬುದಿಲ್ಲ. ಒಳ್ಳೆಯ ಕೆಲಸ ಮಾಡಿದ, ಮಾಡುತ್ತಿರುವ ಸಮಾಧಾನವೇನೊ ಇದೆ. ಅದು ಜನರಿಂದ ಅವರಿಗೆ ಬಂದಿರುವ ಒಳ್ಳೆಯ ಪ್ರತಿಕ್ರಿಯೆಯಿಂದಾಗಿ, ಆದರೆ ಇನ್ನೂ ಹೆಚ್ಚು ಉತ್ತಮ ರೀತಿಯಲ್ಲಿ ಸಾಹಿತ್ಯ ಸೇವೆಯನ್ನು ಮಾಡಬೇಕು; ಇನ್ನೂ ಒಳ್ಳೆಯ ಕೃತಿಗಳನ್ನು ನಾಡಿಗೆ ಕೊಡಬೇಕು ಎಂಬ ಹಿರಿಯಾಸೆಯನ್ನು ಅವರು ಇರಿಸಿಕೊಂಡಿದ್ದಾರೆ; ನಿರಂತರವೂ ಈಗ ಅವರು ಅದಕ್ಕಾಗಿ ಪರಿಶ್ರಮಿಸುತ್ತಿದ್ದಾರೆ.

ಇವರ ಸಾಹಿತ್ಯಸೇವೆಯನ್ನು ಕನ್ನಡದ ಜನಕೋಟಿ ಮಾತ್ರ ಮೆಚ್ಚಿಕೊಂಡಿಲ್ಲ; ಆ ಮೂಲಕ ಮಾಡಿರುವ ಜಾಗೃತಿಯನ್ನು ಅನೇಕ ಜಗದ್ಗುರುಗಳೂ ಮೆಚ್ಚಿಕೊಂಡು ಆಶೀರ್ವದಿಸಿದ್ದಾರೆ. ಈಗ ಐದು ವರುಷಗಳ ಹಿಂದೆ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರುಗಳು ಶ್ರೀ ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಶಿವಮೊಗ್ಗೆಯಲ್ಲಿ ನಾಲ್ವತ್ತು ಸಹಸ್ರ ಶರಣಜನಪದ ಸಮ್ಮುಖದಲ್ಲಿ ತರಳಬಾಳು ಹುಣಿಮೆಯ ಸಂದರ್ಭದಲ್ಲಿ ಶ್ರೀ ಸಿದ್ಧಗಂಗಾಮಠದ ಶ್ರೀ ಶ್ರೀ ಶ್ರೀ ಕುಮಾರ ಸ್ವಾಮಿಗಳ ಹಸ್ತದಿಂದ 'ಕಾದಂಬರಿಶ್ರೀ' ಪ್ರಶಸ್ತಿಯನ್ನು ಶ್ರೀ ಕೃಷ್ಣಮೂರ್ತಿ ಪುರಾಣಿಕರಿಗೆ ದಯಪಾಲಿಸಿದರು ಶ್ರೀಗಂಧದ ಒಂದು ದೊಡ್ಡಗೋಲು ಫಲಕದ ಮೇಲೆ ಒಕ್ಕಣಿಸಿದ 'ಕಾದಂಬರಿಶ್ರೀ' ಪದಕವನ್ನು ದಯಪಾಲಿಸಿ ಶ್ರೀಗಂಧದ ಶ್ರೀಕೃಷ್ಣ ಪ್ರತಿಮೆಯನ್ನು ಕಾಣಿಕೆಯಾಗಿ ಜಗದ್ಗುರುಗಳು ಆಶೀರ್ವದಿಸಿದಾಗ ಪುರಾಣಿಕರು ಪುಳುಕಿತರಾಗಿದ್ದರೆ ಅದರಲ್ಲಿ ಅಚ್ಚರಿಯೇನು? ಶೃಂಗೇರಿ ಪೀಠದ ಜಗದ್ಗುರು ಅಭಿನವ ವಿದ್ಯಾತೀರ್ಥ ಶ್ರೀ ಶ್ರೀ ಶ್ರೀ ಶಂಕರಾಚಾರ್ಯರು ಮೂರು ದಿನಗಳ ಗೋಷ್ಠಿಯಿಂದ ಸಂತೃಪ್ತರಾಗಿ ಶುಭಾಶೀರ್ವಾದ ಮಾಡಿದ್ದಲ್ಲದೇ ಚಿನ್ನದ

ಕಾರಣಾಂಬಾ ಪ್ರೀತಿ ಅನುಗ್ರಹ ಮಾಡಿದರು. ಅಲ್ಲಿಯೇ ‘ಸಹೃದಯ ಗೋಷ್ಠಿ’ಯಲ್ಲಿ ಕನ್ನಡದಲ್ಲಿ ಕಾವ್ಯೋಪಾಸನೆಯನ್ನು ಪುರಾಣಿಕರಿಂದ ಗುರುಗಳು ಕೇಳಿಕೊಂಡು ಅವರಿಂದ ನಾಡಿನ ಸಂಸ್ಕೃತಿಯ ಪ್ರಸಾರ ಭರದಿಂದ ಸಾಗಲಿ ಎಂದು ಆಶೀರ್ವದಿಸಿದರು. ಗುರುಗಳ ಮೇರು ಸದೃಶ್ಯ ಪಾಂಡಿತ್ಯ ಪ್ರತಿಭೆಗೆ ಪುರಾಣಿಕರು ಬಾಗಿದಾಗ ಅವರ ಜೀವನದ ರಸಚಿತ್ರ ತನ್ನಪ್ಪ ಮರುಕಳಿಸಿದಂತೆ ಭಾಸವಾಯಿತು.

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಅವರಿಗೆ ಒಂದೊಮ್ಮೆ ಅವರ ‘ಮಣ್ಣಿನ ಮಗಳು’ ಕಾದಂಬರಿಗೆ ಪ್ರಥಮ ಬಹುಮಾನ ನೀಡಿ ಗೌರವಿಸಿತ್ತಲ್ಲದೆ ಈ ವರುಷವಷ್ಟೇ ರಾಜ್ಯಪ್ರಶಸ್ತಿಯನ್ನು ನೀಡಿ ಅವರು ಸಲ್ಲಿಸಿದ ಸಾಹಿತ್ಯಸೇವೆಯನ್ನು ಮನ್ನಿಸಿದೆ. ನಾಡಿನ ವಿವಿಧ ಸಂಘ–ಸಂಸ್ಥೆಗಳು ಅವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಗೌರವಿಸಿವೆ. ಅದರೆ ಹಿರಿಯರ ಹಾರೈಕೆಯೂ ಅವುಗಳ ಜೊತೆಗಿರುವುದು ಬಂಗಾರಕ್ಕೆ ಕುಂದಣದ ಕಟ್ಟು ಕೂಡಿಸಿದಂತಾಗಿದೆ. ಬಿ. ಆಲೂರ ವೆಂಕಟರಾಯರು "ನೂರು ಗ್ರಂಥಗಳನ್ನು ಬರೆದು ಶತಾಯುಷಿಗಳಾಗಿರಿ" ಎಂದಿದ್ದಾರೆ. ಕನ್ನಡದ ಆಸ್ತಿಯೆನಿಸಿದ ಮಾಸ್ತಿಯವರು "ನಿಮ್ಮ ಕೆಲಸ ಇನ್ನಷ್ಟು ಮತ್ತಷ್ಟು ಹಸನಾಗುವಂತೆ, ಅದರಿಂದ ಜನಕ್ಕೆ ಇನ್ನಷ್ಟು ಮತ್ತಷ್ಟು ಸುಖ ಆಗುವಂತೆ ದೇವರು ನಿಮಗೆ ಅನುಗ್ರಹಿಸಲಿ" ಎಂದು ಆಶೀರ್ವದಿಸಿದ್ದಾರೆ. ರಂ. ಶ್ರೀ. ಯವರು, "ನಾಡನುಡಿಯ ತಮ್ಮ ಸೇವೆಯಿಂದ ಕನ್ನಡ ಜನತೆ ಎಚ್ಚೆತ್ತು ಸುಸಂಸ್ಕೃತ ಸಾರಸ್ವತ ಬಾಳನ್ನು ನಡೆಸಲಿ" ಎಂದು ಹಾರೈಸಿದ್ದಾರೆ. ಈ ಎಲ್ಲ ಹಿರಿಯರ ಹಾರೈಕೆ: ಶುಭಾಶೀರ್ವಾದಗಳನ್ನು ಹೊತ್ತು ಕೃಷ್ಣಮೂರ್ತಿ ಪುರಾಣಿಕರು ಮುನ್ನಡೆದಿದ್ದಾರೆ. ಈಗ ಅವರು ಕೇವಲ ನೂರು ಕಾದಂಬರಿಗಳನ್ನು ಪೂರೈಸಲಿ ಎಂದು ಹಾರೈಸಿದರೆ ಮಾತ್ರ ಸಾಲದು: ಅದಕ್ಕೂ ಹೆಚ್ಚಿನದಾದ ಉನ್ನತವಾದ ಕಾರ್ಯವನ್ನು ಅವರು ಈಡೇರಿಸಲಿ ಎಂದು ನಾವು ಹಾರೈಸಬೇಕಾಗಿದೆ. ಸರಳ ಉಡುಗೆ–ತೊಡುಗೆಯ, ನಿರಾಡಂಬರ ಜೀವನದ ಕೃಷ್ಣಮೂರ್ತಿ ಪುರಾಣಿಕರು ತಮ್ಮ ಜೀವನವನ್ನು ಕೂಡ ಮೇಲ್ಪಂಕ್ತಿಯಾಗಿರಿಸಿಕೊಂಡಿರುವಾಗ ಕನ್ನಡನಾಡು–ನುಡಿಗೆ ಅವರಿಂದ ನಿಶ್ಚಿತವಾಗಿ ಹೆಚ್ಚಿನ ಸೇವೆ ಸಲ್ಲುವದೆಂಬ ಭರವಸೆ ನನಗಿದೆ. ಕನ್ನಡದ ಅಭಿಜಾತ ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರ ವೈಯಕ್ತಿಕ ಜೀವನ, ಸಾಹಿತಿಯ ಸಹೃದಯತೆಗಳ ಸತ್ಯಕಥನವಿದು; ಪುರಾಣ ಕಂತೆಯಲ್ಲ. ಪುರಾಣಿಕರ ಬಾಳು ಕಷ್ಟಮಯ; ಕಷ್ಟವನ್ನು ಕರುಣೆಯಿಂದ ಕಂಡು, ಉಂಡು ಒಳಿತನ್ನೇ ನೀಡಿದ ಶಿಷ್ಟರವರು. ಇದುವೇ ಪುರಾಣಿಕರ ವೈಶಿಷ್ಟ್ಯ—ಕನ್ನಡ ಕಾದಂಬರಿ ಪ್ರಪಂಚದಲ್ಲಿ ಪುರಾಣಿಕರದೇ ಒಂದು ಪಥ. ಪಥಿಕನ ಪಯಣ ಸಾಗಲಿ! ಕನ್ನಡ ರಸಿಕವೃಂದ ಪಾಂಥೇಯವನ್ನು ಸವಿಯಲಿ!

ಪುರಾಣಿಕ ಸಾಹಿತ್ಯವಾಹಿನಿ

(ಗ್ರಂಥಗಳು ಪ್ರಕಟವಾದ ಕ್ರಮದಲ್ಲಿ ಇವೆ)

೧.	ರಾಮೂನ ಕತೆಗಳು	ಕಥಾಸಂಗ್ರಹ	೧೯೪೬
೨.	ಸೈರಂಧ್ರಿ ಮತ್ತು ಮಗನ ಗೆಲವು	ಸರಳರಗಳೆ	೧೯೪೬
೩.	ಬಾಳ ಕನಸು	ಕವನಸಂಗ್ರಹ	೧೯೪೭
೪.	ಮುಗಿಲ ಮಲ್ಲಿಗೆ	ಕಾದಂಬರಿ	೧೯೪೮
೫.	ದೊರೆಸಾನಿ	ಸರಳರಗಳೆ	೧೯೪೯
೬.	ಕೊನೆಯ ದಾರಿ	ಕಾದಂಬರಿ	೧೯೪೯
೭.	ತೆರೆದ ಕಣ್ಣು	”	೧೯೪೯
೮.	ಮಂಜುಳಾ	”	೧೯೫೦
೯.	ಹೊಸ ಬಾಳು	”	೧೯೫೨
೧೦.	ರಾಧೇಯ	ಸರಳ ರಗಳೆ	೧೯೫೨
೧೧.	ಹಬ್ಬಿದ ಬಳ್ಳಿ	ಕಾದಂಬರಿ	೧೯೫೩
೧೨.	ಮುತ್ತೈದೆ	”	೧೯೫೪
೧೩.	ಬೆವರಿನ ಬೆಲೆ	”	೧೯೫೪
೧೪.	ಮನೆ ತುಂಬಿದ ಹೆಣ್ಣು	”	೧೯೫೫
೧೫.	ಮದುವೆಯ ಆಟ	ಮಕ್ಕಳ ಪುಸ್ತಕ	೧೯೫೫
೧೬.	ಅಳಿಯ ದೇವರ ಆಟ	”	೧೯೫೫
೧೭.	ಕಾಳನ ಕೆರೆ	”	೧೯೫೫
೧೮.	ಭಾಗೀರಥಿ	ಕಾದಂಬರಿ	೧೯೫೫
೧೯.	ಕವಲು ದಾರಿ	”	೧೯೫೫
೨೦.	ಜೀವನಾದ	ಕವನಸಂಗ್ರಹ	೧೯೫೬
೨೧.	ಮಣ್ಣಿನ ಮಗಳು	ಕಾದಂಬರಿ	೧೯೫೬
೨೨.	ವೇಷಧಾರಿ	”	೧೯೫೬

೨೩.	ಕುಲವಧು	ಕಾದಂಬರಿ	೧೯೫೬
೨೪.	ಮನಸ್ಸೋತ ಮನದನ್ನೆ	”	೧೯೫೬
೨೫.	ಧರ್ಮದೇವತೆ	”	೧೯೫೬
೨೬.	ಮದುವೆಯ ಹಾಡು	”	೧೯೫೭
೨೭.	ರಂಗ ರೋಹಿಣಿ	”	೧೯೫೭
೨೮.	ಹೇಮಂತನ ಮಗಳು	”	೧೯೫೭
೨೯.	ಬಿಂಕದ ಸಿಂಗಾರಿ	”	೧೯೫೮
೩೦.	ಮಂಗಲಾಕ್ಷತೆ	”	೧೯೫೮
೩೧.	ತುಂಬಿದ ಮನೆ	”	೧೯೫೮
೩೨.	ಬಿರಿದ ಭೂಮಿ		೧೯೫೮
೩೩.	ಬನದ ಹುಣ್ಣಿಮೆ	”	೧೯೫೮
೩೪.	ಹಸಿರು ನೆಲ	”	೧೯೫೯
೩೫.	ಕಹಿಜೇನು	”	೧೯೫೯
೩೬.	ದೇವರ ಕೂಸು	”	೧೯೬೦
೩೭.	ಹೇಮಲತೆ	”	೧೯೬೦
೩೮.	ಹೆಣ್ಣುಜೀವ	”	೧೯೬೦
೩೯.	ಸಾಹಿತ್ಯ ಸಂದರ್ಶನ	ವಿಮರ್ಶೆ	೧೯೬೦
೪೦.	ನಿಂಬಿಯ ನಂಜು	ಕಥಾಸಂಗ್ರಹ	೧೯೬೦
೪೧.	ವತ್ಸಲೆ	”	೧೯೬೦
೪೨.	ಕಲ್ಯಾಣಧಾಮ	ಕಾದಂಬರಿ	೧೯೬೦
೪೩.	ಹಾಲುಕೆನೆ	”	೧೯೬೦
೪೪.	ಕೊನ್ನಾರ ಕಿಂಕಿಣಿ	”	೧೯೬೦
೪೫.	ಅಣ್ಣನ ಹೆಂಡತಿ	”	೧೯೬೦
೪೬.	ಸವಿತಾ ಸತ್ಯವತಿ	”	೧೯೬೧
೪೭.	ಮಂದಾರ ಮಂದಾಕಿನಿ	”	೧೯೬೧
೪೮.	ಕನ್ಯಾಮಣಿ	”	೧೯೬೧

೪೯.	ಗಂಧದ ಬಳ್ಳಿ	ಕಾದಂಬರಿ	೧೯೬೧
೫೦.	ಅವಳ ನಿರ್ಣಯ	ಕಥಾ ಸಂಗ್ರಹ	೧೯೬೧
೫೧.	ಹೊಸ ಹೆಂಡತಿ	ಕಾದಂಬರಿ	೧೯೬೧
೫೨.	ಪಾವನ ಗಂಗಾ	”	೧೯೬೧
೫೩.	ಹೆಣ್ಣು ಸಂತಾನ	”	೧೯೬೨
೫೪.	ದೇವಲಹರಿ	”	೧೯೬೩
೫೫.	ಗಯ್ಯಾಳಿ ಗರತಿ	”	೧೯೬೩
೫೬.	ಚೆಲುವೆ	”	೧೯೬೩
೫೭.	ಕಣ್ಣು ತುಂಬಿದ ಕರುಣೆ	”	೧೯೬೩
೫೮.	ಮಧುರ ವೀಣೆ	”	೧೯೬೪
೫೯.	ನೆಲದ ನೆರಳು	”	೧೯೬೪
೬೦.	ಮಾತಿನ ಮಲ್ಲಿ	”	೧೯೬೪
೬೧.	ಜೀವಜೇನು	ಕಥಾಸಂಗ್ರಹ	೧೯೬೪
೬೨.	ಹಿಮಗಿರಿಯ ಗೌರಿ	ಕಾದಂಬರಿ	೧೯೬೪
೬೩.	ಕಣ್ಣಹಿಂದಿನ ಕಣ್ಣು	”	೧೯೬೪
೬೪.	ರಮಾರಮಣ	”	೧೯೬೪
೬೫.	ಮೌನಗೌರಿ	”	೧೯೬೪
೬೬.	ಮಾವು ಮಲ್ಲಿಗೆ	”	೧೯೬೪
೬೭.	ವಿದ್ಯಾಸುಂದರಿ	”	೧೯೬೫
೬೮.	ಚಂದ್ರಸುಧಾ	”	೧೯೬೫
೬೯.	ಕಾಂಚನ ಕಸ್ತೂರಿ	”	೧೯೬೫
೭೦.	ಸೌಭಾಗ್ಯ ದೃಷ್ಟಿ	ಕಥಾಸಂಗ್ರಹ	೧೯೬೬
೭೧.	ಕಲಿತವಳು	ಕಾದಂಬರಿ	೧೯೬೬
೭೨.	ಜೀವರಸ	ಏಕಾಂಕಗಳು	೧೯೬೬
೭೩.	ವಸುಂಧರಾ	ಕಾದಂಬರಿ	೧೯೬೬
೭೪.	ವಸಂತಪಕ್ಷಿ	”	೧೯೬೭

೭೫.	ವಾಸಂತಿ	ಕಾದಂಬರಿ	೧೯೬೭
೭೬.	ಹೊಸ ಹುಡುಗಿ	ಕಥಾ ಸಂಗ್ರಹ	೧೯೬೭
೭೭.	ಬಯಲು ಗಾಳಿ	ಕಾದಂಬರಿ	೧೯೬೭
೭೮.	ತಂಪು ನೆಳಲು	”	೧೯೬೮
೭೯.	ಹಸಿರುತೋರಣ	”	೧೯೬೯
೮೦.	ಭಾಗ್ಯವಂತೆ	”	೧೯೬೯
೮೧.	ಸೋಮಿಯ ಮಗಳು	ಕಥಾಸಂಗ್ರಹ	೧೯೬೯
೮೨.	ಸ್ಮರಣೆ-ಪ್ರಾರ್ಥನೆ	ಕವನ ಸಂಗ್ರಹ	೧೯೬೯
೮೩.	ಶಾಂತಿ ಸುಧಾ	ಕಾದಂಬರಿ	೧೯೭೦
೮೪.	ಸನಾದಿ ಅಪ್ಪಣ್ಣ	”	೧೯೭೦
೮೫.	ಚಂದ್ರಿಕಾ	ಕಥಾ ಸಂಗ್ರಹ	೧೯೭೦
೮೬.	ದೇವ ಸಂತಾನ	ಕಾದಂಬರಿ	೧೯೭೧
೮೭.	ಹೆಣ್ಣು ಹಾವು	”	೧೯೭೧
೮೮.	ಹಾಲುಂಡ ತವರು	”	೧೯೭೧
೮೯.	ಬೆಳವಡಿ ಮಲ್ಲಮ್ಮ	ಮಕ್ಕಳ ಪುಸ್ತಕ	೧೯೭೧
೯೦.	ತಂಬೂರಿ ಮಿಡಿಯಿತು	ಕಾದಂಬರಿ	೧೯೭೩
೯೧.	ಬೆಳಗಾವಿ	ಮಕ್ಕಳ ಪುಸ್ತಕ	೧೯೭೩
೯೨.	ವೀರರಾಣಿ ಕಿತ್ತೂರ ಚೆನ್ನಮ್ಮ	”	೧೯೭೩
೯೩.	ಜಂಪಕೀರ	ಸರಳರಗಳೆ	೧೯೭೩
೯೪.	ಸ್ವಪ್ನ ಚಿತ್ರ	ಕಾದಂಬರಿ	೧೯೭೩
೯೫.	ಸಾವಂತ್ರಿ	”	೧೯೭೪

ಕಾದಂಬರಿ ದರ್ಶನ........

ಕನ್ನಡದ ಖ್ಯಾತ ಕಾದಂಬರಿಕಾರರು ಶ್ರೀ ಕೃಷ್ಣಮೂರ್ತಿ ಪುರಾಣಿಕರು ಅವರ ಸತ್ಕಾರ ಸಮಾರಂಭದಲ್ಲಿ ಅರ್ಪಿಸಿದ ಅ ನಂದನ ಗ್ರಂಥ.

ಇದು ಕಾದಂಬರಿ ರಂಗದ–ಹರವು ವಿಸ್ತಾರಗಳನ್ನು ಸೂಚಿಸು ಒಂದು ಅಪೂರ್ವ ಸಾಂದರ್ಭಿಕ ಗ್ರಂಥವಾಗಿರುವುದು.

ಕನ್ನಡದಲ್ಲಿ ಕಾದಂಬರಿಗಳು, ಭಾರತೀಯ ಭಾಷೆಗಳಲ್ಲಿ ಕಾದಂ ಬರಿಗಳು ಮತ್ತು ವಿದೇಶಿ ಭಾಷೆಗಳಲ್ಲಿ ಕಾದಂಬರಿಗಳು, ಹೀ ಕಾದಂಬರಿ ಬೆಳೆದುಬಂದ ಪರಿಯನ್ನು ನಿರೂಪಿಸುವ ಗ್ರಂಥವಿದು

ಕನ್ನಡದಲ್ಲಿ ಮಾತ್ರವಲ್ಲ ಅಖಿಲಭಾರತ ಮಟ್ಟದಲ್ಲೂ ಕಾದಂಬ ರಂಗದ ಹೀಗೆ ಪೂರ್ಣ ಪರಿಚಯವನ್ನು ನೀಡುವ ಅಪರೂ ವಾದ ಏಕಮಾತ್ರ ಗ್ರಂಥ ಇದಾಗಿರುವುದು.

ಕನ್ನಡ ಕಾದಂಬರಿ ರಂಗಕ್ಕೆ ತಮ್ಮ ಅನುಭವ ಪೂರ್ಣ ಕಥಾ ನಕಗಳ ಅಪೂರ್ವ ದೇಣಿಗೆಯನ್ನು ನೀಡಿದ ಶ್ರೀ ಕೃಷ್ಣಮೂರ್ತಿ ಪುರಾಣಿಕರವರ ಜೀವನ ಪರಿಚಯ ಈ ಗ್ರಂಥದಲ್ಲಿ ಹೊಸ ಬಗೆಯಲ್ಲಿ ನಿರೂಪಿತವಾಗಿದೆ.

ಕನ್ನಡದ ಮತ್ತು ಭಾರತದ ಖ್ಯಾತಿವೆತ್ತ ಲೇಖಕ ವಿದ್ವಾಂಸರು ಈ ಗ್ರಂಥದಲ್ಲಿ ಲೇಖನಗಳನ್ನು ನೀಡಿ ಅದರ ಸೊಬಗನ್ನು ಹೆಚ್ಚಿಸಿದಾ